ಗುಲ್ಬರ್ಗಾ ಜಿಲ್ಲೆಯ ಘಿಸಾಡಿ ಸಮುದಾಯದ ಸಾಮಾಜಿಕ ಅಧ್ಯಯನ

(ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಮಹಾಪ್ರಬಂಧ)

ಸಂಶೋಧಕರು

ಬಸವರಾಜ ಎಸ್ ಹಿರೇಮಠ

ಮಾರ್ಗದರ್ಶಕರು

ಪ್ರೊ ಕೆ ಎಮ್ ಮೇತ್ರಿ

ಸಮಾಜ ವಿಜ್ಞಾನಗಳ ನಿಕಾಯ

ಬುಡಕಟ್ಟು ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ ೫೮೩ ೨೭೬

೨೦೧೭

ಗುಲ್ಬರ್ಗಾ ಜಿಲ್ಲೆಯ ಘಿಸಾಡಿ ಸಮುದಾಯದ ಸಮಾಜಿಕ ಅಧ್ಯಯನ

(ಪಿಎಚ್ ಡಿ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಮಹಾಪ್ರಬಂಧ)

ಸಂಶೋಧಕರು

ಬಸವರಾಜ ಎಸ್ ಹಿರೇಮಠ

ಮಾರ್ಗದರ್ಶಕರು

ಪ್ರೊ ಕೆ ಎಂ ಮೇತ್ರಿ

ಸಮಾಜ ವಿಜ್ಞಾನಗಳ ನಿಕಾಯ

ಬುಡಕಟ್ಟು ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ ೫೮೩ ೨೭೬

೨೦೦೨

ಪ್ರಮಾಣ ಪತ್ರ

ಗುಲ್ಬರ್ಗಾ ಜಿಲ್ಲೆಯ ಫಿಸಾಡಿ ಸಮುದಾಯದ ಸಾಮಾಜಿಕ ಅಧ್ಯಯನ ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ಪಿಎಚ್ ಡಿ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಪ್ರೊ ಕೆ ಎಂ ಮೇತ್ರಿ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ. ಪ್ರಸ್ತುತ ಮಹಾಪ್ರಬಂಧದ ಯಾವುದೇ ಭಾಗವನ್ನು ಈ ಮೊದಲು ಬೇರೆ ಯಾವುದೇ ಉದ್ದೇಶ ಅಥವಾ ಪದವಿಗಳಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ದಿನಾಂಕ :

ಸ್ಥಳ : ವಿದ್ಯಾರಣ್ಯ

(ಬಸವರಾಜ ಎಸ್ ಹೀರೆಮಠ)
ಪಿಎಚ್ ಡಿ ಸಂಶೋಧನ ವಿದ್ಯಾರ್ಥಿ
ಬುಡಕಟ್ಟು ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ - ೫೮೩ ೨೭೬

ದೃಢೀಕರಣ ಪತ್ರ

ಗುಲ್ಬರ್ಗಾ ಜಿಲ್ಲೆಯ ಫಿಸಾಡಿ ಸಮುದಾಯದ ಸಾಮಾಜಿಕ ಅಧ್ಯಯನ ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ಶ್ರೀ ಬಸವರಾಜ ಎಸ್ ಹೀರೆಮಠ ಇವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿರುತ್ತಾರೆ. ಪಿಎಚ್ ಡಿ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ ಪ್ರಸ್ತುತ ಮಹಾಪ್ರಬಂಧದ ಯಾವುದೇ ಭಾಗವನ್ನು ಈ ಮೊದಲು ಬೇರೆ ಯಾವುದೇ ಉದ್ದೇಶ ಅಥವಾ ಪದವಿಗಳಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ದಿನಾಂಕ : ೧೧.೦೬.೨೦೧೨

ಸ್ಥಳ : ವಿದ್ಯಾರಣ್ಯ

(ಪ್ರೊ ಕೆ ಎಂ ಮೇತ್ರಿ)
ಪ್ರಾಧ್ಯಾಪಕರು ಹಾಗೂ ಮಾರ್ಗದರ್ಶಕರು
ಬುಡಕಟ್ಟು ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ - ೫೮೩ ೨೭೬

ಕೃತಜ್ಞತೆಗಳು

ಕನ್ನಡ ವಿಶ್ವವಿದ್ಯಾಲಯದಲ್ಲಿ ಪಿಎಚ್ ಡಿ ಅಧ್ಯಯನಕ್ಕೆ ಅವಕಾಶ ಮಾಡಿಕೊಟ್ಟ ಹಿಂದಿನ ಕುಲಪತಿಗಳಾದ ಡಾ ಎಚ್ ಜೆ ಲಕ್ಕಪ್ಪಗೌಡ ಅವರಿಗೆ ನನ್ನ ತುಂಬು ಹೃದಯದ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಇಂದಿನ ಕುಲಪತಿಗಳಾದ ಡಾ ಬಿ ಎ ವಿವೇಕ ರೈ ಅವರಿಗೂ ಮತ್ತು ಕುಲಸಚಿವರಾದ ಶ್ರೀ ವಿ ಶಂಕರ್ ಅವರಿಗೂ ಹಾಗೂ ಅಧ್ಯಯನಾಂಗದ ನಿರ್ದೇಶಕರಾದ ಡಾ ಟಿ ಆರ್ ಚಂದ್ರಶೇಖರ ಅವರಿಗೂ, ಪ್ರಸಾರಾಂಗದ ನಿರ್ದೇಶಕರಾದ ಪ್ರೊ ಮಲ್ಲೇಪುರಂ ಜಿ ವೆಂಕಟೇಶ ಅವರಿಗೂ ಹಾಗೂ ನನ್ನ ಅಧ್ಯಯನದ ಆಸಕ್ತಿಯ ಗಿಡಕ್ಕೆ ನೀರೆರೆದು ಅಧ್ಯಯನದುದ್ದಕ್ಕೂ ಮಾರ್ಗದರ್ಶನ ನೀಡಿ ಸಹಕರಿಸಿದ ಡಾ ಕೆ ಎಂ ಮೇತ್ರಿ ಅವರಿಗೂ ಮತ್ತು ಸುಮಾರು ಒಂದು ವರ್ಷಗಳ ಕಾಲ ಮಾರ್ಗದರ್ಶಕರಾಗಿ ಮಾರ್ಗದರ್ಶನ ನೀಡಿದ ಡಾ ಚನ್ನಮಲ್ಲಪ್ಪ ಜುಬೀರ್ ಅವರಿಗೂ ತುಂಬು ಹೃದಯದ ಕೃತಜ್ಞತೆಗಳು ಸಲ್ಲಿಸುತ್ತೇನೆ.

ನನಗೆ ಸೂಕ್ತ ಸಲಹೆಗಳನ್ನು ನೀಡಿ ನನ್ನ ಅಧ್ಯಯನಕ್ಕೆ ಪ್ರೋತ್ಸಾಹಿಸುತ್ತಿದ್ದ ವಿಭಾಗದ ಮುಖ್ಯಸ್ಥರಾದ ಡಾ ಚೆಲುವರಾಜು ಅವರಿಗೂ ಪ್ರಾಧ್ಯಾಪಕರುಗಳಾದ ಡಾ ಹಿ ಚಿ ಬೋರಲಿಂಗಯ್ಯ, ಡಾ ಕೇಶವನ್ ಪ್ರಸಾದ ಅವರಿಗೂ ಮತ್ತು ಹಿರಿಯ ಶ್ರೇಣಿ ಅಧ್ಯಾಪಕರುಗಳಾದ ಡಾ ಗಂಗಾಧರ ದೈವಜ್ಞ, ಡಾ ಎ ಎಸ್ ಪ್ರಭಾಕರ ಅವರಿಗೂ ಹಾಗೂ ಸಂಶೋಧನಾ ಸಹಾಯಕರಾದ ಡಾ ಮಾರುತಿ ವ್ಹಿ ಎಸ್, ವಿಭಾಗದ ಸದಸ್ಯರಾದ ಶ್ರೀಮತಿ ದಿಲ್‌ಶಾದ್ ಬಾನು, ಶ್ರೀ ಜಾಫರ್ ಅಲಿ ಮತ್ತು ಶ್ರೀ ಮಲ್ಲೇಶ್ ಅವರುಗಳಿಗೂ ಅಭಾರಿಯಾಗಿದ್ದೇನೆ.

ಅಧ್ಯಯನದ ಅವಧಿಯಲ್ಲಿ ವಿವಿಧ ರೀತಿಯಲ್ಲಿ ಸಹಕರಿಸಿ ಪ್ರೋತ್ಸಾಹಿಸಿದ ಪ್ರಾಧ್ಯಾಪಕರುಗಳಾದ ಪ್ರೋ ಲಕ್ಷ್ಮಣ್ ತೆಲಗಾವಿ, ಡಾ ಕರೀಗೌಡ ಬೀಚನಹಳ್ಳಿ, ಡಾ. ಹನುಮಣ್ಣನಾಯಕ ದೊರೆ, ಡಾ ಮಂಜುನಾಥ ಬೇವಿನಕಟ್ಟಿ, ಡಾ ಸುಬ್ಬಣ್ಣ ರೈ ಅವರುಗಳಿಗೆ ಪ್ರವಾಚಕರುಗಳಾದ ಡಾ ಸಾಂಬಮೂರ್ತಿ, ಡಾ ಮೊಗಳ್ಳಿ ಗಣೇಶ್, ಡಾ ಶಿವಾನಂದ ವಿರಕ್ತಮಠ, ಡಾ ಶೈಲಜಾ ಹಿರೇಮಠ, ಡಾ ಹರಿಶ್ಚಂದ್ರ ದಿಕ್ಸಂಗೀಕರ್ ಅವರುಗಳಿಗೆ ಹಾಗೂ ಸ್ನೇಹಿತರಾದ ಡಾ ಆರ್ ಬಿ ಕುಮಾರ ಅವರೆಲ್ಲರಿಗೂ ನಾನು ಕೃತಜ್ಞನ್ನಾಗಿರುತ್ತೇನೆ.

ಸದಾ ಜೀವನದುದ್ದಕ್ಕೂ ನನ್ನನ್ನು ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹಿಸಿ ಬೆನ್ನುತಟ್ಟಿರುವ ನನ್ನ ತಾಯಿ ಪೂಜ್ಯನೀಯ ಶ್ರೀ ರತ್ನಮ್ಮ ದಿ. ಶಿವಶರಣಯ್ಯ ಹಿರೇಮಠವರಿಗೆ ಅನಂತ ನಮನಗಳು ಸಲ್ಲಿಸುವೆ.

ತಂದೆಯನ್ನು ಕಳೆದುಕೊಂಡಿರುವ ನನಗೆ ತಂದೆಯ ಸ್ಥಾನವನ್ನು ತುಂಬಿಕೊಟ್ಟು ಮುನ್ನಡೆಸಿದ ನನ್ನಣ್ಣಾ ವೀರಯ್ಯಸ್ವಾಮಿ, ಅತ್ತಿಗೆ ರೇಣುಕಮ್ಮ ಅವರಿಗೆ ಅಭಾರಿಯಾಗಿದ್ದೇನೆ.

ನನ್ನ ಅಧ್ಯಯನಕ್ಕೆ ಆಸಕ್ತಿಯ ಜೀವ ತುಂಬಿದ ನನ್ನ ಹಿರಿಯ ಅಕ್ಕಂದಿರಾದ ಶ್ರೀಮತಿ ಸುಲೋಚನಮ್ಮಾ ತೋಟಯ್ಯ ಸ್ವಾಮಿ, ಶ್ರೀ ಸುಮಂಗಲಾ ದಿ. ಸಿದ್ಧಲಿಂಗಯ್ಯ ಹಾಗೂ ನನ್ನ ಅಧ್ಯಯನಕ್ಕೆ ಹಣದ ಕೊರತೆಯನ್ನು ತುಂಬಿದ ಶ್ರೀಮತಿ ದುಂಡಮ್ಮ ಪಂಚಾಕ್ಷರಯ್ಯ ಅವರಿಗೂ ಚಿರಋಣಿಯಾಗಿರುವೆ. ನನ್ನ ಅಕ್ಕಂದಿರಂತೆಯೇ ಆತ್ಮಿಯತೆಯಿಂದ ಕಂಡ ಶ್ರೀಮತಿ ದ್ರಾಕ್ಷಾಯಿಣಿ ಕೆ ಎಂ ಮೇತ್ರಿ ಅವರಿಗೂ ನಾನು ಅಭಾರಿಯಾಗಿರುವೆ.

ನಾನು ಮನೆಯನ್ನು ಬಿಟ್ಟು ತಿಂಗಳುಗಟ್ಟಲೆ ಅಧ್ಯಯನ ಕ್ಷೇತ್ರಕಾರ್ಯಕ್ಕೆ ಹೋದಾಗ ಮನೆಯ ಜವಾಬ್ದಾರಿಗಳನ್ನು ಅಚ್ಚುಕಟ್ಟಾಗಿ ನಿಭಾಯಿಸಿಕೊಂಡ ನನ್ನ ಪ್ರೀತಿಯ ಮಡದಿ ಶ್ರೀಮತಿ ರಾಜಶ್ರೀಗೂ ಹಾಗೂ ನಾನು ಮನೆಯಲ್ಲಿ ಅಧ್ಯಯನ ನಿರತನಾದಾಗ ನನಗೆ ಆಸರೆಯಾಗಿ ಪೆನ್ನು, ಪುಸ್ತಕ, ಪೇಪರ್‌ಗಳನ್ನು ತಂದು ಕೊಡುತ್ತಿದ್ದ ನನ್ನ ಪ್ರೀತಿಯ ಪುಟ್ಟು ವಿಶಾಲ್‌ನಿಗೂ ನನ್ನ ಪ್ರೀತಿಯ ಬಂಧನದಲ್ಲಿ ಬಂಧಿಸಿಕೊಳ್ಳುವೆ. ನನಗೆ ಪ್ರೀತಿ ಮತ್ತು ಗೌರವನ್ನು ನೀಡುವ ನನ್ನಣ್ಣಾನ ಮಕ್ಕಳಿಗೂ ಹಾಗೂ ಅಕ್ಕಂದಿರ ಮಕ್ಕಳಿಗೂ ನನ್ನ ಸವಿನೆನೆಕೆಗಳು.

ಅಧ್ಯಯನದ ಕ್ಷೇತ್ರಕಾರ್ಯಕ್ಕೆ ಹೋದಾಗಲೆಲ್ಲಾ ತಮ್ಮ ಸಮುದಾಯದ ಮಗನಂತೆ ಕಂಡು ಸ್ವಾಗತಿಸುತ್ತಿದ್ದ ಮತ್ತು ತಮ್ಮ ಸಮುದಾಯದ ಮಾಹಿತಿಗಳನ್ನು ನೀಡುತ್ತಿದ್ದ ಫಿಸಾಡಿ ಸಮುದಾಯದ ಎಲ್ಲ ಮಾಹಿತಿದಾರರಿಗೂ ಹಾಗೂ ಸಮುದಾಯದ ಕುಟುಂಬದವರಿಗೆಲ್ಲಾ ನನ್ನ ಪ್ರೀತಿಯ ನಮಸ್ಕಾರಗಳು ಸಲ್ಲಿಸುತ್ತೇನೆ. ಹಾಗೇ ಫಿಸಾಡಿ ಸಮುದಾಯದ ಅಧ್ಯಕ್ಷರಾದ ಕೃಷ್ಣಾತ್ ಚವ್ಹಾಣ್‌ರಿಗೂ ಹಾಗೂ ಕಾರ್ಯಕಾರಿ ಮಂಡಳಿಗೂ ನಾನು ಚಿರಋಣಿಯಾಗಿರುವೆ.

ನನ್ನ ಅಧ್ಯಯನದ ಅವಧಿಯಲ್ಲಿ ಸಹಕರಿಸಿದ ಗುಲ್ಬರ್ಗಾ ವಿಶ್ವವಿದ್ಯಾಲಯದ ಸಮಾಜಶಾಸ್ತ್ರ ಅಧ್ಯಯನ ವಿಭಾಗದ ಪ್ರೋ ಎಸ್ ಎಲ್ ಹಿರೇಮಠ, ಡಾ ಮೇಟಿ ಶೇಷನ್, ಡಾ ನುಷರತ್ ಫಾತೀಮಾ ಬೇಗಂ, ಡಾ ಜಗನ್ನಾಥ ಸಿಂಧೆ, ಹಾಗೂ ಡಾ ಎಂ ಎಸ್ ದಡವೆ, ಪ್ರೋ ಎಸ್ ಆರ್ ಶಾಸ್ತ್ರೀ, ಕನ್ನಡ ಅಧ್ಯಯನ ವಿಭಾಗದ ಡಾ ಪಿ ಕೆ ಖಂಡೋಬಾ, ಡಾ ಡಿ ಬಿ ನಾಯಕ, ಡಾ. ಟಿ ಎಂ ಭಾಸ್ಕರ್, ಡಾ ಚನ್ನಣ್ಣವಾಲೀಕರ, ವಿ ಸಿ ತದಲಾಪುರ ಹಾಗೂ ಬಿ ಎಸ್ ಗದ್ದುಗೆ ಮಠ ಮುಖ್ಯ ಗ್ರಂಥಪಾಲಕರು ಗುಲ್ಬರ್ಗಾ ವಿಶ್ವವಿದ್ಯಾಲಯ ಇವರಿಗೆ ನನ್ನ ಅನಂತ ಕೃತಜ್ಞತೆಗಳು.

ನನ್ನ ಸಂಶೋಧನೆಗೆ ಪ್ರೋತ್ಸಾಹಿಸಿದ ಸೇಡಂ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರಾದ ಶಿವಕುಮಾರಯ್ಯನವರಿಗೂ, ಸಮಾಜಶಾಸ್ತ್ರದ ಮುಖ್ಯಸ್ಥರಾದ ಡಾ. ಶಾಂತಾ ಅಷ್ಟಿಗೆಯವರಿಗೂ ಮತ್ತು ಎಲ್ಲಾ ಅಧ್ಯಾಪಕರುಗಳ ವೃಂದಕ್ಕೂ, ಗ್ರಂಥಪಾಲಕರಾದ ಬನ್ನಪ್ಪ ಬಿ ಕೆ, ಹಾಗೂ ಸಿಬ್ಬಂದಿ ವರ್ಗಕ್ಕೂ ಮತ್ತು ನನ್ನ ಪ್ರೀತಿಯ ವಿದ್ಯಾರ್ಥಿಗಳಿಗೆ ಅಭಿನಂದನೆಗಳು.

ಪದವಿ ಹಂತದಲ್ಲಿಯೇ ನನ್ನ ಅಧ್ಯಯನದ ಆಸಕ್ತಿ ಅರಿತುಕೊಂಡು ಹಾರೈಸಿ ಪ್ರೋತ್ಸಾಹಿಸಿದ ರಾಯಚೂರಿನ ಎಸ್ ಎಸ್ ಎಂ ಪದವಿ ಮಹಾವಿದ್ಯಾಲಯದ ಪ್ರಾಂಶುಪಾಲರಾದ ಶಿವಬಸಪ್ಪಾ ಮಾಲಿ ಪಾಟೀಲ್‌ರಿಗೂ ಹಾಗೂ ಎಂ ಭೀಮರೆಡ್ಡಿಯವರಿಗೂ ಮತ್ತು ಉಪನ್ಯಾಸಕರುಗಳಾದ, ಪರಮೇಶ್ವರಪ್ಪ, ಮೀನಾಕ್ಷಿ ಖಂಡಿಮಠ, ಸುಧ್ಯಾ ಆಚಾರ್ಯ, ಸಿದ್ದಿಂಗಪ್ಪಾ , ಎಂ ಶೇಖರಪ್ಪ, ಶ್ರೀನಿವಾಸ ರಾಯಚೂರುಕರ್, ವೀರಣ್ಣಗೌಡ ಪಾಟೀಲ್ ಇವರೆಲ್ಲರಿಗೂ ನನ್ನ ಅನಂತ ಕೃತಜ್ಞತೆಗಳು.

ಉನ್ನತ ಅಧ್ಯಯನದಲ್ಲಿ ತೊಡಗಿಸಿಕೊಂಡಿರುವ ನನ್ನನ್ನು ಕಂಡು ಸಂತೋಷಪಡುವ ನನ್ನೂರಿನ ಹಿರಿಯರಾದ ಬೋರಡ್ಡಪ್ಪ ಗೌಡ ಪೊ. ಪಾಟೀಲ್, ಸಿದ್ಧಣ್ಣಗೌಡ ದಳಪತಿ, ಸಾಹೇಬಗೌಡ ಕೊಳ್ಳಿ, ಪರ್ವತರಡ್ಡೆಪ್ಪಾಗೌಡ ಮಾಲಿ ಪಾಟೀಲ್, ಮಾಣಿಕರಾವ್ ಕುಲಕರ್ಣಿ, ಮಹಾದೇವಪ್ಪ ಸಾಹುಗಡೆದ್, ಮಲ್ಲರಡ್ಡಪ್ಪ ಜಟ್ಟೂರ, ಬರಮರೆಡ್ಡಿ ಹೊಸಳ್ಳಿ, ಸಾಹೇಬಗೌಡ ಬೂದಿ, ಬಸವರಾಜಪ್ಪಾ ಪ್ಯಾಟಿ, ಅಮಿನರೆಡ್ಡಿ ಬಿರ್ಹಾಳ್, ಹಂಪಣಗೌಡ ಮಾಲಿ ಪಾಟೀಲ್, ಸಿ ವೈ, ಪಾಟೀಲ್, ಅರ್ಜುನಪ್ಪಾ ಸೋಮಣೋರ್ ಇವರೆಲ್ಲರುಗಳಿಗೂ ನನ್ನ ಕೃತಜ್ಞತೆಗಳು.

ನಮ್ಮೂರಿನ ಮತ ಕ್ಷೇತ್ರದ ಅತ್ಯಂತ ಹಿರಿಯ ಶಾಸಕರಾದ ಶ್ರೀ ಮಲ್ಲಿಕಾರ್ಜುನ ಎಂ ಖರ್ಗೆ, ಕೆ ಪಿ ಸಿ ಸಿ ಅಧ್ಯಕ್ಷರಿಗೂ, ಹಾಗೂ ನನ್ನ ತಾಲೂಕಿನ ಶಾಸಕರಾದ ಡಾ. ವೀರಬಸವಂತರೆಡ್ಡಿ ಮುದ್ನಾಳ ಅವರಿಗೂ ಹಾಗೂ ಮಾಜಿ ಮಂತ್ರಿಗಳಾದ ಡಾ. ಎ ಬಿ ಮಲಕರೆಡ್ಡಿ ಅವರಿಗೂ ಮತ್ತು ಸೇಡಂ ಶಾಸಕರಾದ ಶರಣ ಪ್ರಕಾಶ್ ಪಾಟೀಲ್ ಇವರೆಲ್ಲರಿಗೂ ತುಂಬು ಹೃದಯದ ಅಭಿನಂದನೆಗಳು ಸಲ್ಲಿಸುತ್ತೇನೆ.

ನಾನು ನೆನೆಯಬೇಕಾದ ಮಹಾನೀಯರುಗಳಾದ ಮಲ್ಲಿಕಾರ್ಜುನ ಗೌಡ ಕೌಳೂರ್, ಡಿ ಸಿ ಸಿ ಬ್ಯಾಂಕ್ ಅಧ್ಯಕ್ಷರು, ಸೂಗಣ್ಣಾ ಸಾಹುಕಾರ ಅರಳಿ ಎ ಪಿ ಎಂ ಸಿ ಸದಸ್ಯರು, ಮಹಿಪಾಲ ರೆಡ್ಡಿ ಪೊ. ಪಾಟೀಲ್ ವಕೀಲರು ಹಾಗೂ ಎ ಪಿ ಎಂ ಸಿ ಸದಸ್ಯರು, ಮಲ್ಲಿಕಾರ್ಜುನ ರೆಡ್ಡಿ ಜಟ್ಟೂರು ಗುತ್ತೇದಾರರು ಬೆಂಗಳೂರು, ಗುರುನಾಥ ರೆಡ್ಡಿ ಚನ್ನೂರ, ಮಲ್ಲರೆಡ್ಡಿ ಎಚ್ ಮಲ್ಲಾಬಾದಿ, ಬಸವರಾಜಪ್ಪಗೌಡ ಮಾಲಿಪಾಟೀಲ್ ಮಾದ್ವಾರ, ತೇಜಣಗೌಡ ಬಮ್ಮನಾಳ, ಭೀಮರೆಡ್ಡಿ ರಾಂಪೂರಹಳ್ಳಿ ಎಣ್ಣೆ ಬೀಜ ಬೆಳೆಗಾರರ ಸಂಘದ ಅಧ್ಯಕ್ಷರು, ಶರಣಪ್ಪ ಸಾಹುಗಡೆದ ಹಾಲು ಒಕ್ಕೂಟ ಅಧ್ಯಕ್ಷರು, ಚಂದ್ರಕಾಂತ ಕವಾಲ್ದಾರ್ ಎಸ್ ಡಿ ಎಂ ಸಿ ಅಧ್ಯಕ್ಷರು, ಬಸವರಾಜಪ್ಪ ಶಂಕ್ರಪ್ಪನೋರ್ ಗ್ರಾಮಪಂಚಾಯತಿ ಸದಸ್ಯರು, ದೇವೆಂದ್ರಮ್ಮ ಎಸ್ ಮಾಲಿಪಾಟಿಲ್ ಗ್ರಾ.ಪಂ. ಸದಸ್ಯರು, ವೀರಭದ್ರಪ್ಪ ಯದ್ದಳ್ಳಿ ಮಾಜಿ ತಾಲ್ಲೂಕಾ ಪಂಚಾಯತ್ ಸದಸ್ಯರು, ಶರಣಪ್ಪ ಬಿ ನಾಯಕ್ ವಕೀಲರು, ವಿಶ್ವನಾಥ ಬೈಲಪತ್ತಾರ್, ಬೈಲ್‌ಪತ್ತಾರ ಸಂಘದ ಅಧ್ಯಕ್ಷರು ಇವರೆಲ್ಲರಿಗೂ ಹಾಗೂ ಸಂಪನ್ಮೂಲ ವ್ಯಕ್ತಿಗಳಾದ ಸದಾನಂದ ಕಮ್ಮಾರ, ಖ್ವಾಜಾ ಮೈನುದೀನ್, ಶ್ರೀಕಾಂತ ತಮ್ಮಣೋರ, ಸಂಜೀವ್ ಪುಟ್ಟಗಿ, ನರಸಪ್ಪಾ ಇದ್ಲಿ, ಪೀರಲಿಂಗ ದೇವಕಾರ್, ಸಾಹಾಬಗೌಡ

ಯಡ್ಡಳ್ಳಿ ಮತ್ತು ನಮ್ಮೂರಿನ ಗ್ರಂಥಪಾಲಕರಾದ ಮಲ್ಲಣ್ಣಾ ಬೋಳೇರ್ ಇವರೆಲ್ಲರಿಗೂ ಅಭಿನಂದನೆಗಳು ಸಲ್ಲಿಸುತ್ತೇನೆ.

ಅಧ್ಯಯನಕ್ಕೆ ಪ್ರೋತ್ಸಾಹಿಸಿದ ನನ್ನ ಸ್ನೇಹಿತರಾದ ಸೂಗೂರೇಶ್ವರ ಮಠಪತಿ, ಚನ್ನಯ್ಯಸ್ವಾಮಿ, ಶಿವಲಿಂಗಯ್ಯಸ್ವಾಮಿ, ಚಂದ್ರಶೇಖರ ಕೊಂಕಲ್, ಲಕ್ಷ್ಮಿರೆಡ್ಡಿ, ತಮ್ಮಯ್ಯ ಜಾಕನಹಳ್ಳಿ, ಜಗನ್ನಾಥ ಬೈಲ್‌ಪತ್ತಾರ್, ಚಂದ್ರು ಕಟ್ಟಿಮನಿ, ಬಸವರಾಜ್ ಮಹಾಮನಿ, ಬಸವರೆಡ್ಡಿ ಕಟಗಿ ಶಾಹಾಪುರ್, ಯಶವಂಶತ ಪಾಟೀಲ್, ಸುಬಾಷಚಂದ್ರ ಮದನಾ ಇವರಿಗೂ ಮತ್ತು ನನ್ನ ಬಾಲ್ಯದ ಸ್ನೇಹಿತ ಅಂಬ್ರುತರೆಡ್ಡಿ ಪೊ. ಪಾಟಿಲ್, ಭೀಮರೆಡ್ಡಿ ಬಳ್ಳೊಳ್ಳಿ, ಅಶೋಕರೆಡ್ಡಿ ಜಟ್ಟೂರ್, ಶ್ರೀನಿವಾಸ ಬಡಿಗೇರ್, ಬಸವರಾಜ ಕಾಳೂರ್ ಎಲ್ಲರಿಗೂ ನಾನು ಅಭಾರಿಯಾಗಿದ್ದೇನೆ.

ಪಿಎಚ್.ಡಿ. ಅಧ್ಯಯನದ ಸಹಪಾಟಿಗಳಾದ ಗುರು ಮುಗಳಿ, ಬಿ ಬಾಬು, ಓ ದೇವರಾಜ್, ಜಗದೀಶ್ ಕುಮಾರ, ಬಸವರಾಜ ಎ ಡಿ, ಜ್ಯೋತಿ ಡಿ ಬಿ, ವಿಜಯಲಕ್ಷ್ಮಿ, ವಿಮಲಾ ಬಿಲ್ಲವ್, ಯರ್ರೆಪ್ಪ ಡಿ ಹಾಗೂ ಎಂ.ಫಿಲ್ ಸಂಶೋಧನಾ ಸಂದರ್ಭದ ಸಹಪಾಠಿಗಳಾದ ಕೊಟ್ರೇಶ್, ಕಲ್ಲಪ್ಪ ಎನ್, ಬೊಮ್ಮಯ್ಯ ಬಿ, ಹನುಮೇಶ್ ಎಚ್, ಡಾ ಮೋಹನ್, ಡಾ ಲೋಕರಾಜ ದೊಡ್ಡಮನಿ, ಡಾ ಅಜ್ಜಯ್ಯ ಸಿ, ಹೀಗೆ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಸಹಕರಿಸಿದ ಎಲ್ಲಾ ಮಿತ್ರರಿಗೂ ಅವರ ಪ್ರೋತ್ಸಾಹದ ನೆನಪುಗಳೊಂದಿಗೆ ಕೃತಜ್ಞನಾಗಿರುವೆನು.

ಕನ್ನಡ ವಿಶ್ವವಿದ್ಯಾಲಯದ ಗ್ರಂಥಪಾಲಕರಾದ ಡಾ. ನಾಗವೇಣಿ ಮತ್ತು ಸಿಬ್ಬಂದಿ ವರ್ಗದವರೆಲ್ಲರಿಗೂ ನಾನು ಋಣಿಯಾಗಿರುವೆ. ಪ್ರಕಟಣೆ ಸಹಾಯಕ ನಿರ್ದೇಶಕರಾದ ಸುಜ್ಞಾನಮೂರ್ತಿ ಅವರಿಗೂ ಈ ಮಹಾ ಪ್ರಬಂಧವನ್ನು ಹಾಗೂ ನನ್ನ ಓರೆಕೋರೆ ಬರವಣಿಗೆಯನ್ನು ಪ್ರೀತಿಯಿಂದ ಹಾಗೂ ಆತ್ಮಿಯತೆಯಿಂದ ಅಂದವಾದ ಅಕ್ಷರ ರೂಪದಲ್ಲಿ ಸಂಯೋಜಿಸಿದ ನನ್ನ ಆಪ್ತಮಿತ್ರನಾದ ಶ್ರೀನಿವಾಸ ಕೆ. ಕಲಾಲ್., ಭಾವನಾ ಗ್ರಾಫಿಕ್ಸ್, ಕಮಲಾಪುರ ಹಾಗೂ ಅಂದವಾದ ಛಾಯಾಚಿತ್ರಗಳನ್ನು ತೆಗೆದುಕೊಟ್ಟ ಶಿವಲೀಲಾ ಶಿಲೇಂಕ್ ಮಠ ಮತ್ತು ನರಸಪ್ಪಾ ಬೈಲ್‌ಪತ್ತಾರ್ ಮತ್ತು ಛಾಯಾಚಿತ್ರಗಳನ್ನು ಸಂಯೋಜಿಸಿದ ಗಿರೀಶ್ ದೇವಲಾಪುರ ಇವರಿಗೆಲ್ಲಾ ನನ್ನ ತುಂಬು ಹೃದಯದ ಕೃತಜ್ಞತೆಗಳು.

ಬಸವರಾಜ ಎಸ್ ಹೀರೆಮಠ

ಪರಿವಿಡಿ

ಅನುಬಂಧಗಳು

ಪರಿಶಿಷ್ಟಗಳು


ಪರಿಶಿಷ್ಟಗಳು I : ಭೂಪಟ

ಪರಿಶಿಷ್ಟ II : ಕೋಷ್ಟಕಗಳು

ಪರಿಶಿಷ್ಟ III : ಅಂಕಿಅಂಶಗಳು

ಪರಿಶಿಷ್ಟ IV : ಛಾಯಾಚಿತ್ರಗಳು

ಕರ್ನಾಟಕದಲ್ಲಿ ಘಿಸಾಡಿ ಸಮುದಾಯಗಳ ನೆಲೆಗಳಾಗಿ ಕಂಡುಬರುವ ಜಿಲ್ಲೆಗಳು



ಬೀದರ
ಗುಲಬರ್ಗಾ
ರಾಯಚೂರು
ಕೊಪ್ಪಳ
ಬೆಳಗಾಂ
ವಿಜಾಪುರ
ಬಾಗಲಕೋಟೆ
ಧಾರವಾಡ
ಗದಗ



ಅಧ್ಯಾಯ - ೧

ಅಧ್ಯಯನದ ಮಹತ್ವ ಮತ್ತು ಉದ್ದೇಶ

೧. ಪ್ರವೇಶ

೨. ಇದುವರೆಗಿನ ವೃತ್ತಿ ಸಮುದಾಯಗಳ ಅಧ್ಯಯನಗಳು

೩. ಅಧ್ಯಯನದ ಸ್ವರೂಪ

೪. ಅಧ್ಯಯನದ ಮಹತ್ವ

೫. ಅಧ್ಯಯನದ ವ್ಯಾಪ್ತಿ

೬. ಅಧ್ಯಯನದ ಉದ್ದೇಶಗಳು

೭. ಅಧ್ಯಯನದ ವಿಧಾನಗಳು

೮. ಕ್ಷೇತ್ರಾನುಭವ

ಅಧ್ಯಯನದ ಮಹತ್ವ ಮತ್ತು ಉದ್ದೇಶ

ಪ್ರವೇಶ

ಹಿಮಾಲಯದ ದಕ್ಷಿಣಕ್ಕೆ ಹಬ್ಬಿರುವ ರಮಣೀಯವಾದ ವಿಶಾಲವಾದ ಪರ್ಯಾಯ ದ್ವೀಪವೇ ಭರತಖಂಡ. ಈ ಪ್ರದೇಶಕ್ಕೆ ಹಿಂದುಸ್ತಾನ, ಇಂಡಿಯಾಗಳೆಂಬ ಹೆಸರುಗಳು ಇವೆ. ಭಾರತೀಯರು ಈ ಪ್ರದೇಶಕ್ಕೆ ಹಿಂದುಸ್ತಾನ, ಭರತಖಂಡ ಎಂದು ಕರೆದರೆ, ಬ್ರಿಟೀಷರು 'ಇಂಡಿಯಾ' ಎಂದು ಗುರುತಿಸಿರುವುದು ಇತಿಹಾಸದಿಂದ ತಿಳಿದು ಬರುತ್ತದೆ. ರಾಜಕೀಯ ಕಾರಣಗಳಿಗಾಗಿ ಇದರ ಗಡಿ ರೇಖೆಗಳು ಏನೇ ಇರಲಿ, ಸಾಂಸ್ಕೃತಿಕವಾಗಿ ಪಶ್ಚಿಮದ ಸಿಂಧೂ ನದಿಯ ಬಯಲಿನಿಂದ ಪೂರ್ವದ ಬ್ರಹ್ಮಪುತ್ರದವರೆಗೆ, ಉತ್ತರದ ಹಿಮಾಲಯದಿಂದ ದಕ್ಷಿಣದ ಕನ್ಯಾಕುಮಾರಿಯವರೆಗೆ ಭರತಖಂಡವು ವಿಸ್ತಾರವಾದ ಹರವು ಪಡೆದಿದೆ.

ಭರತಭೂಮಿಯು ಎಷ್ಟು ವಿಶಾಲವೋ ಅಷ್ಟೇ ವೈಶಿಷ್ಟ್ಯಮಯವೂ ವೈವಿಧ್ಯಮಯವೂ ಆಗಿದೆ. ಪ್ರಪಂಚದ ಅತಿ ಎತ್ತರದ ಹಿಮಾಲಯ ಪರ್ವತ ಶ್ರೇಣಿ, ಅಭೇದ್ಯವಾದ ಬೆಟ್ಟ-ಗುಡ್ಡಗಳ ಪ್ರದೇಶ, ವಿಸ್ತಾರವಾದ ಸಮುದ್ರ ತೀರಗಳು, ನದಿ-ಉಪನದಿಗಳು, ಸಮತಟ್ಟಾದ ಪ್ರದೇಶಗಳು, ಅತಿಯಾದ ಉಬ್ಬು-ತಗ್ಗುಗಳಿಂದ ಕೂಡಿದ ಭೂ-ಭಾಗಗಳು, ಉಷ್ಣವಲಯ ಮತ್ತು ಸಮಶೀತೋಷ್ಣ ವಲಯ ಪ್ರದೇಶಗಳು, ಅತಿಯಾದ ಮಳೆ ಬೀಳುವ ಪ್ರದೇಶ, ಕಡಿಮೆ ಮಳೆ ಬೀಳುವ ಬರಗಾಲ ಪ್ರದೇಶಗಳು, ಕುಡಿಯುವ ನೀರಿಗೂ ಹಾಹಾಕಾರ ಅನುಭವಿಸುವ ಪ್ರದೇಶಗಳು, ರಾಜಸ್ಥಾನದ ಮರಳುಗಾಡು ಮತ್ತು ಫಲವತ್ತಾದ ಕೃಷಿ ಭೂಪ್ರದೇಶಗಳು, ಸದಾ ಧಗಧಗಿಸುವ ತಾಪಮಾನ ಒಂದಡೆಗಿರುವಾಗಲೇ ಮೈನಡುಗಿಸುವ ಸೊನ್ನೆಗಿಂತಲೂ ಕಡಿಮೆ ತಾಪಮಾನ ಮತ್ತೊಂದಡೆ ಇರುತ್ತದೆ. ಅಪಾರ ನೈಸರ್ಗಿಕ ವೈಪರೀತ್ಯ ಈ ದೇಶದ ವೈಶಿಷ್ಟ್ಯ, ಈ ವೈದೃಶ್ಯ-ವೈವಿಧ್ಯತೆಗಳ ನಡುವೆ ವಿಶಾಲವಾದ ಅದ್ಭುತವಾದ ನಿಸರ್ಗ ರಮಣೀಯವಾದ ಭೂ-ವಲಯವೇ ಭರತಖಂಡ.

ಈ ನಾಡಿನ ಪ್ರಾದೇಶಿಕ ವೈವಿಧ್ಯದಂತೆ ಇಲ್ಲಿನ ನಿವಾಸಿಗಳ ಬದುಕು ಸಹ ವೈವಿಧ್ಯಮಯವಾಗಿದೆ. ಸಹಸ್ರಾರು ಜಾತಿ, ಹಲವಾರು ಬುಡಕಟ್ಟುಗಳು ಹಾಗೂ ಅಲೆಮಾರಿಗಳು, ಹತ್ತಾರು ಧರ್ಮದ ಜನರು ಒಟ್ಟಿಗೆ ವಾಸಿಸುತ್ತಿದ್ದಾರೆ. ಆಹಾರ, ಪಾನೀಯ, ವೇಷ-ಭೂಷಣ, ಸಾಮಾಜಿಕ

ಬದುಕಿನ ವಿನ್ಯಾಸಗಳು, ಭಾಷೆಯ ದೃಷ್ಟಿಯಿಂದಲೂ ಬಹುಭಾಷಾ ನಾಡಾಗಿದೆ. ಭಾರತದಲ್ಲಿ ಸಂವಿಧಾನವು ಮಾನ್ಯತೆ ನೀಡಿರುವ ಅಧಿಕೃತ ಇಪ್ಪತ್ತೆರಡು ರಾಷ್ಟ್ರೀಯ ಭಾಷೆಗಳ ಜೊತೆಗೆ ಐದುನೂರಕ್ಕೂ ಹೆಚ್ಚು ಆಡುಭಾಷೆಗಳು ಅಂದರೆ, ಲಿಪಿ ಇಲ್ಲದ ನಾನಾ ಜಾತಿ ಮತ್ತು ಬುಡಕಟ್ಟುಗಳ ಭಾಷೆಗಳಿವೆ ಎಂದು ಅಂದಾಜು ಮಾಡಲಾಗಿದೆ. ಹೀಗೆ ಅನೇಕ ವಿಚಾರಗಳಲ್ಲಿ ಭಿನ್ನವೂ-ವಿಶಿಷ್ಟವೂ ಆದ ಜನ ಸಮುದಾಯಗಳ ತಾಣವೇ ಈ ಭರತಭೂಮಿ. ಅಂತೆಯೇ ಔಚಿತ್ಯ ಪೂರ್ಣವಾಗಿಯೋ ಎಂಬಂತೆ ರಾಧಾಕುಮುದ್ ಮುಖರ್ಜಿಯವರು ತಮ್ಮ "The Fundamental unit of India" ಎಂಬ ಕೃತಿಯಲ್ಲಿ "ಭಾರತವು ಹಲವು ರೂಢಿಗಳ, ಆರಾಧನಾ ಪದ್ಧತಿಗಳ, ಧಾರ್ಮಿಕ ಪಂಥಗಳ, ಸಂಸ್ಕೃತಿ, ನಂಬಿಕೆಗಳ, ಭಾಷೆಗಳ, ಜನಾಂಗೀಯ ಪ್ರಕಾರಗಳ ಮತ್ತು ಸಾಮಾಜಿಕ ವ್ಯವಸ್ಥೆಗಳ ವಸ್ತುಸಂಗ್ರಹಾಲಯವಾಗಿದೆ" ಎಂಬುದಾಗಿ ಅಭಿಪ್ರಾಯಪಟ್ಟಿದ್ದಾರೆ (ಭೈರಪ್ಪ ಕೆ.: ೨೦೦೩:೩). ಇಲ್ಲಿ ಇವರ ಈ ಅಭಿಪ್ರಾಯವು ಈ ನಾಡಿಗೆ ಸೂಕ್ತವೆನಿಸುತ್ತದೆ.

ಬೇಟೆ-ಪಶುಪಾಲನೆ-ಕೃಷಿ ಹಂತಗಳು ಮಾನವನ ವಿಕಾಸದ ವಿವಿಧ ಮಜಲುಗಳಾಗಿವೆ. ಭಾರತದಲ್ಲಿ ಮಾನವ ಸಂಸ್ಕೃತಿಯ ಇತಿಹಾಸವು ಹರಪ್ಪ ಮತ್ತು ಮೊಹೆಂಜೊದಾರೊ ಕಾಲಘಟ್ಟದಲ್ಲಿ ಸಮೃದ್ಧವಾಗಿರುವುದು ಇತಿಹಾಸದಿಂದ ತಿಳಿದು ಬರುತ್ತದೆ. ಇದರ ಕಾಲಮಾನ ಸುಮಾರು ಕ್ರಿ.ಪೂ. ೨೫೦೦ ವರ್ಷಗಳಾಗಿರಬೇಕೆಂದು ಮತ್ತು ಈ ಸಂಸ್ಕೃತಿಯು 'ಗಂಗಾಕೊಳ'ದವರೆಗೆ ಹಬ್ಬಿತ್ತೆಂಬುದಾಗಿಯೂ ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ಹೀಗೆ ಮುಂದೆ ಬೆಳೆದ ಹರಪ್ಪ ಮತ್ತು ಮೊಹೆಂಜೊದಾರೊ ನಾಗರಿಕತೆಗಳು ಭಾರತದ ಬೆಳವಣಿಗೆಯ ಖಚಿತವಾದ ಮಾಹಿತಿಗಳನ್ನೊದಗಿಸಿವೆ. ಈ ನಾಗರಿಕತೆಯಲ್ಲಿ ಗಮನಿಸಬೇಕಾದ ಅಂಶಗಳೆಂದರೆ ವ್ಯವಸ್ಥಿತವಾದ ನಗರ ಯೋಜನೆಯಲ್ಲಿ ಕಟ್ಟಲಾದ ವಿಶಾಲವಾದ ಗೃಹಗಳು, ಸಾರ್ವಜನಿಕ ಕಟ್ಟಡಗಳು, ದೊಡ್ಡ ದೊಡ್ಡ ಕಣಜಗಳು, ವಿಶಾಲವಾದ ಸಾರ್ವಜನಿಕ ರಸ್ತೆಗಳು, ಒಳಚರಂಡಿ ವ್ಯವಸ್ಥೆಗಳು, ಇವೆಲ್ಲವೂ ವ್ಯವಸ್ಥಿತವಾದ ಅಧಿಕಾರಕೊಳ್ಳಪಟ್ಟು ಉಚ್ಛ್ರಾಯ ಸ್ಥಿತಿಯಲ್ಲಿ ಬಾಳಿ ಬೆಳಗಿದ ಸಂಸ್ಕೃತಿಯೊಂದರ ಚಿತ್ರಣವನ್ನು ಕೊಡುತ್ತದೆ.

ಬಹುಶಃ ಈ ಸಂದರ್ಭದಲ್ಲಿಯೇ ಆಗಿರಬಹುದು ಇಲ್ಲವೆ, ಇದಕ್ಕಿಂತಲೂ ಮುಂಚೆಯೇ ಆಗಿರಬಹುದು. ಪರಸ್ಪರ ಮಾನವ ಸಮೂಹದಲ್ಲಿನ ವ್ಯಕ್ತಿಗಳು ತಮ್ಮದೇ ಆದಂತಹ ಅನುಭವದ ಜ್ಞಾನ-ಶಿಸ್ತುಗಳನ್ನು ಬೆಳೆಸಿಕೊಳ್ಳಲು ಆರಂಭಿಸಿರಬಹುದು ಎಂಬುದು ಹರಪ್ಪ ಮತ್ತು ಮೊಹೆಂಜೊದಾರೊ ನಗರ ಯೋಜನೆಯಿಂದ ಕಲ್ಪನೆ ಮಾಡಿಕೊಳ್ಳಬಹುದು. ಅಂದರೆ, ಮಣ್ಣಿನಿಂದ ಮಡಿಕೆ ಹಾಗೂ ಇಟ್ಟಿಗೆಗಳು; ಕಟ್ಟಿಗೆಯಿಂದ ಕಿಟಕಿ-ಬಾಗಿಲುಗಳು; ಕಲ್ಲುಗಳಿಂದ ಕಲ್ಲಿನ ಆಯುಧಗಳು; ತಾಮ್ರ, ಹಿತ್ತಾಳೆ, ಕಂಚುಗಳಿಂದ ಆಲಂಕಾರಿಕ ವಸ್ತುಗಳು; ಕಬ್ಬಿಣ ಮತ್ತು ಉಕ್ಕುಗಳಿಂದ ಗಟ್ಟಿಮುಟ್ಟಾದ ಕೃಷಿ ಸಲಕರಣೆಗಳು; ನೂಲಿನಂತಹ ವಸ್ತುಗಳಿಂದ ನೇಯುವಂತಹ ಕೆಲಸಗಳು, ಕೋಟೆ-ಮನೆ-ಮಂದಿರ ಕಟ್ಟಡಗಳ ರಚನೆಕಾರರು, ಚಿತ್ರಕಲಾವಿದರು ಇತ್ಯಾದಿ. ಹೀಗೆ ವಿವಿಧ ರೀತಿಯ

ತನ್ನದೆ ಆದಂತಹ ಜ್ಞಾನಶಿಸ್ತುಗಳನ್ನು ಬೆಳೆಸಿಕೊಳ್ಳುವ ಬುಡಕಟ್ಟು ಸಮುದಾಯಗಳು ಹುಟ್ಟಿಕೊಂಡಿರುವುದು ಐತಿಹಾಸಿಕ ಸತ್ಯವಾಗಿದೆ.

ಭಾರತದಲ್ಲಿ ಒಟ್ಟು ೪೭೨ ಬುಡುಕಟ್ಟು ಸಮುದಾಯಗಳನ್ನು ಗುರುತಿಸಲಾಗಿದ್ದು. ೧೯೮೧ರ ಜನಗಣತಿಯ ಪ್ರಕಾರ ೫ ಕೋಟಿ ೨೦ ಲಕ್ಷ ಆದಿವಾಸಿಗಳಿದ್ದು, ಭಾರತದ ಒಟ್ಟು ಜನಸಂಖ್ಯೆಯಲ್ಲಿ ಶೇ. ೭ ರಷ್ಟಿದ್ದರೆ, ೧೯೯೧ರ ಜನಗಣತಿಯ ಪ್ರಕಾರ ೬೭,೭೫೮,೩೮೦ ಆದಿವಾಸಿಗಳಿದ್ದು ಒಟ್ಟು ಜನಸಂಖ್ಯೆಯ ಶೇ. ೮ ರಷ್ಟು ಮತ್ತು ೨೦೦೧ರ ಜನಗಣತಿಯ ಪ್ರಕಾರ ೮,೪೩,೨೬,೦೦೦ ಶೇ. ೮.೨೦ ರಷ್ಟು ಇರುವರು. ಭಾರತದಲ್ಲಿ ದಟ್ಟವಾಗಿರುವ ಬುಡಕಟ್ಟು ಪ್ರದೇಶಗಳೆಂದರೆ ಮಧ್ಯಪ್ರದೇಶ, ಗುಜರಾತ್, ಬಿಹಾರ, ಒರಿಸ್ಸಾ, ಮಿಜೋರಾಂ, ನಾಗಲ್ಯಾಂಡ್, ಅರುಣಚಲ ಪ್ರದೇಶ, ಮೇಘಾಲಯ, ದಾದ್ರಾ, ನಗರಹವೇಲಿ, ಛತ್ತೀಸಗಢ, ಝುರ್ಖಂಡ್, ತ್ರಿಪುರಾ, ಜಮ್ಮು ಮತ್ತು ಕಾಶ್ಮೀರ, ಆಂಧ್ರಪ್ರದೇಶ ಮತ್ತು ಮಹಾರಾಷ್ಟ್ರ ರಾಜ್ಯಗಳು ಹಾಗೂ ಲಕ್ಷದ್ವೀಪ ಹಾಗೂ ಅಂಡಮಾನ್ ನಿಕೋಬಾರ್ ದ್ವೀಪಗಳು, ಕೇರಳ, ತಮಿಳುನಾಡು, ಕರ್ನಾಟಕ ರಾಜ್ಯಗಳ ಗಡಿ ಪ್ರದೇಶಗಳಲ್ಲಿ ವಿರಳವಾಗಿ ಕಂಡುಬರುತ್ತಾರೆ. ಪ್ರತಿಯೊಂದು ಬುಡಕಟ್ಟುಗಳು ತಮ್ಮದೆ ಆದಂತಹ ವಿಶಿಷ್ಟ ಸಂಸ್ಕೃತಿಗಳನ್ನು ಹೊಂದಿದ್ದು. ಸಂಪ್ರದಾಯ, ಧಾರ್ಮಿಕ ಆಚರಣೆಗಳು, ಸಾಮಾಜಿಕ ಚೌಕಟ್ಟು, ಸಾಹಿತ್ಯಿಕ ಸೃಷ್ಟಿ, ಸಮಸ್ಯೆಗಳು ಇವೆಲ್ಲವುಗಳಲ್ಲಿ ಒಂದು ಮತ್ತೊಂದಕ್ಕಿಂತ ಭಿನ್ನವಾಗಿರುತ್ತವೆ. ಅಲ್ಲದೆ ಒಂದೇ ಬುಡಕಟ್ಟಿನ ಸಮಸ್ಯೆಗಳು ಪ್ರದೇಶದಿಂದ ಪ್ರದೇಶಕ್ಕೆ ಭಿನ್ನ ವಾಗುವಷ್ಟರ ಮಟ್ಟಿಗೆ ಸ್ಥಳೀಯ ಮತ್ತು ಭೌಗೋಳಿಕ ಬದ್ಧತೆಯನ್ನು ಹೊಂದಿರುತ್ತವೆ. ಮುಂದುವರೆದ ಸಮಾಜದ ಸಮುದಾಯದೊಂದಿಗೆ ಹೋಲಿಸಿ ನೋಡಿದಾಗ ಬುಡಕಟ್ಟು ಮತ್ತು ಅಲೆಮಾರಿ ಬುಡಕಟ್ಟುಗಳ ಬೆಳವಣಿಗೆಯು ಸಹಜವಾಗಿಯೇ ಅತ್ಯಂತ ಹಿಂದುಳಿದಿರುವುದು ಕಂಡುಬರುತ್ತದೆ. ಪ್ರಾಚೀನ ಆದಿವಾಸಿಗಳಂತೆ ಅವರ ಶಾರೀರಿಕ ಲಕ್ಷಣಗಳು, ವೇಷ-ಭೂಷಣಗಳು, ಗುಡಿಸಲು-ಗುಡಾರಗಳು, ಹಟ್ಟಿ-ಬೆಟ್ಟಗಳಲ್ಲಿ ನೆಲೆ, ಸಂಪ್ರದಾಯ ಆಚರಣೆಗಳು, ವಿಧಿ-ನಿಷೇಧಗಳು, ಕೌಟುಂಬಿಕ ರಚನೆಗಳಲ್ಲಿ ಹೀಗೆ ಭಿನ್ನವಾದ ಜೀವನ ವಿಧಾನಗಳು ಭಾರತದೇಶದಲ್ಲಿನ ಅನೇಕ ಬುಡಕಟ್ಟುಗಳಲ್ಲಿ ಕಂಡು ಬರುತ್ತವೆ.

ಇಂದಿನ ಆಧುನಿಕ ಕಾಲದಲ್ಲಿ ಭಾರತೀಯ ಬುಡಕಟ್ಟು ಮತ್ತು ಅಲೆಮಾರಿ ಬುಡಕಟ್ಟುಗಳ ಜನರು ಅನೇಕ ರೀತಿಯ ಸಮಸ್ಯೆಗಳನ್ನು ಎದುರಿಸುತ್ತಿದ್ದು, ಇವರು ಸಾರ್ವಜನಿಕ ಬೀಳು ಪ್ರದೇಶ ಮತ್ತು ವಿಶಾಲವಾದ ಬಯಲು ಪ್ರದೇಶಗಳಲ್ಲಿ ನೆಲೆಸಿ ಜೀವನ ನಡೆಸುತ್ತಿದ್ದಾರೆ. ಮುಖ್ಯವಾಗಿ ಇವರಿಗೆ ಆಯಾ ಪ್ರದೇಶದ ಪ್ರಬಲವಾದ ಜನರಿಂದ ಕಿರುಕುಳ ಮತ್ತು ಶೋಷಣೆ, ಅನಕ್ಷರತೆ, ಅಜ್ಞಾನ, ಮೂಢನಂಬಿಕೆ, ಕಂದಾಚಾರಗಳಂತಹ ಹೊಸ ಹೊಸ ಅಡ್ಡಿ ಆತಂಕಗಳಂತಹ ಸಮಸ್ಯೆಗಳನ್ನು ಬುಡಕಟ್ಟು ಮತ್ತು ಅಲೆಮಾರಿ ಬುಡಕಟ್ಟುಗಳು ಎದುರಿಸಬೇಕಾಗಿದೆ.

ಇಂತಹ ಸಮಸ್ಯೆಗಳ ಮಧ್ಯದಲ್ಲಿ ಆಧುನಿಕ ಮಾನವನ ಆಧುನಿಕ ವೇಗದಲ್ಲಿ ಈ ಸಮುದಾಯ

ಗಳು ಬೆಳೆಯಬೇಕಾಗಿದೆ. ಇಂದಿನ ವಿಜ್ಞಾನ - ತಂತ್ರಜ್ಞಾನ - ಪ್ರಜಾಪ್ರಭುತ್ವದ ಪ್ರಕ್ರಿಯೆಯ ಮುಖ್ಯ ಪ್ರವಾಹಕ್ಕೆ ಇವರನ್ನು ತರಬೇಕಾಗಿದೆ. ಶಿಕ್ಷಣ, ಸಮಾನತೆ, ಅಜ್ಞಾನ ನಿವಾರಣೆಗಳ ಮೂಲಕ ಅವರ ಮನಸ್ಸುಗಳನ್ನು ಪರಿವರ್ತಿಸುವುದು ತುಂಬಾ ಮುಖ್ಯವಾಗಿದೆ. ಈ ಹಿನ್ನೆಲೆಯಲ್ಲಿ ಬುಡಕಟ್ಟು ಗಳನ್ನು ಶಾಸ್ತ್ರೀಯವಾಗಿ ವೈಜ್ಞಾನಿಕವಾಗಿ, ಕಳಕಳಿಯಿಂದ ಅಧ್ಯಯನ ಮಾಡಬೇಕಾಗುತ್ತದೆ. ಅಧ್ಯಯನ ಕಾರರ ಅಧ್ಯಯನ ವರದಿಗಳನ್ನು ಸರ್ಕಾರದ ಮಟ್ಟದಲ್ಲಿ ಚರ್ಚೆಗೆ ತಕ್ಷಣವೇ ತೆಗೆದುಕೊಂಡು ಅವುಗಳಿಗೆ ಸೂಕ್ತರೀತಿಯ ಪರಿಹಾರ ಕಾರ್ಯಗಳು ನಡೆದರೆ, ಈ ಬುಡಕಟ್ಟು ಅಧ್ಯಯನಕ್ಕೆ ತನ್ನದೆ ಆದಂತಹ ವಿಶಿಷ್ಟ ನೆಲೆ-ಬೆಲೆ ಸಿಗುತ್ತದೆ.

ಭಾರತ ದೇಶವು ವಿವಿಧ ಬುಡಕಟ್ಟು ಸಮುದಾಯಗಳು ವಾಸಿಸುವ ನಾಡಾಗಿದ್ದು, ಕರ್ನಾಟಕವು ಅದರ ಒಂದು ರಾಜ್ಯವಾಗಿ ಇಲ್ಲಿ ಹತ್ತು ಹಲವು ಭಾಷೆ, ಜಾತಿ, ಧರ್ಮ, ಪಂಥ ಹಾಗೂ ವೃತ್ತಿಗಳಿಗೆ ಸೇರಿದ ಜನ ಸಮುದಾಯಗಳನ್ನು ತನ್ನ ಒಡಲಿನಲ್ಲಿರಿಸಿಕೊಂಡಿದೆ. ಕರ್ನಾಟಕದಲ್ಲಿ ಸಂವಿಧಾನಾತ್ಮಕವಾಗಿ ಇಂದು ೫೦ ಸಮುದಾಯಗಳಿಗೆ ಪರಿಶಿಷ್ಟ ಬಡುಕಟ್ಟುಗಳು ಎಂದು ಪರಿಗಣಿಸಿ ಮಾನ್ಯತೆ ನೀಡಲಾಗಿದೆ. ಆದರೆ ಇನ್ನೂ ಅನೇಕ ಬುಡಕಟ್ಟುಗಳು ನೆಲೆಸಿರುವುದು ಕಂಡುಬರುತ್ತಿದ್ದು ಅವುಗಳನ್ನು ಪರಿಶಿಷ್ಟ ಬುಡಕಟ್ಟು ಪಟ್ಟಿಯಲ್ಲಿ ಸೇರಿಸಲು ಯಾವುದೇ ಪ್ರಯತ್ನಗಳಾಗಿಲ್ಲ. ಅವುಗಳಲ್ಲಿ ಅಡವಿಗೊಲ್ಲರು, ಗೊಂದಲಿಗರು, ಹೆಳವರು, ಸಿಕ್ಕಲಿಗಾರರು, ಕಂಜರಭಾಟರು, ಬೈಲುಪತ್ತಾರರು, ಹೀಗೆ ಹಲವಾರು ಬುಡಕಟ್ಟಿನ ಮತ್ತು ಅಲೆಮಾರಿ ಬುಡಕಟ್ಟಿನ ಜನರು ಕರ್ನಾಟಕದ ವಿವಿಧ ಭೌಗೋಳಿಕ ಪರಿಸರದಲ್ಲಿ ವಾಸವಾಗಿರುವುದು ಕಂಡುಬರುತ್ತದೆ. ಅವುಗಳಲ್ಲಿ 'ಫಿಸಾಡಿ' ಅಲೆಮಾರಿ ಸಮುದಾಯ ಸಹ ಒಂದಾಗಿದೆ.

ಬಹುದಿನಗಳಿಂದ ತೀರಾ ನಿರ್ಲಕ್ಷಿಸಲ್ಪಟ್ಟ ಜನ ಸಮುದಾಯಗಳ ಅಧ್ಯಯನ ಕಾರ್ಯಗಳು ನಡೆಯದೆ ಇದ್ದು ಇಲ್ಲಿಯ ತನಕ ಇನ್ನೂ ಅನೇಕ ಬುಡಕಟ್ಟುಗಳನ್ನು ಗುರುತಿಸಲಾಗಿಲ್ಲ. ಆದರೆ ಇತ್ತೀಚಿನ ಅಂದರೆ ೧೯ನೇ ಶತಮಾನದಿಂದ ಅನೇಕ ಹೊಸ ಹೊಸ ಬುಡಕಟ್ಟುಗಳನ್ನು ಗುರುತಿಸುವ ಕಾರ್ಯ ಆರಂಭವಾಗಿರುವುದನ್ನು ಕಂಡುಕೊಳ್ಳಬಹುದು. ಬಹುಸಂಖ್ಯಾತ ನಿರ್ಲಕ್ಷಿಸಲ್ಪಟ್ಟಂತಹ ಬುಡಕಟ್ಟು ಮತ್ತು ಅಲೆಮಾರಿ ಬುಡಕಟ್ಟು ಸಮುದಾಯಗಳು ತಮ್ಮ ಆದಿಮ ಸಂಸ್ಕೃತಿಗಳನ್ನು ಇನ್ನೂ ಜೀವಂತವಾಗಿಟ್ಟುಕೊಂಡಿರುವುದು ಸಂಶೋಧನೆಯಿಂದ ತಿಳಿದುಬರುತ್ತದೆ. ಇಂದು ನಗರೀಕರಣ, ಕೈಗಾರಿಕೀಕರಣ, ಔದ್ಯೋಗೀಕರಣ, ಪಾಶ್ಚಾತ್ಯೀಕರಣ, ಸಂಸ್ಕೃತೀಕರಣ ಇತ್ಯಾದಿಗಳಿಂದ ನಗರ ಮತ್ತು ಗ್ರಾಮೀಣ, ಬೆಟ್ಟಗಳ ಅಂಚಿನಲ್ಲಿರುವ ಬುಡಕಟ್ಟುಗಳ ಜನರ ಮೇಲೆ ಪ್ರಭಾವ ಬೀರಿ, ಜೀವನದಲ್ಲಿ ಬದಲಾವಣೆಗಳನ್ನು ತಂದಿದ್ದರೂ ಇನ್ನೂ ತಮ್ಮ ತನವನ್ನು ಬಿಟ್ಟು ಬಿಡದೆ, ಹೊಸದನ್ನು ತಿರಸ್ಕರಿಸದೆ ತಮ್ಮ ಸಂಸ್ಕೃತಿಯು 'ಆಮೆ' ವೇಗದಲ್ಲಿ ಬದಲಾವಣೆಯಾಗುತ್ತಿರುವುದು ತಿಳಿಯುತ್ತದೆ. ಪ್ರಸ್ತುತ ಈ ಸಂದರ್ಭದಲ್ಲಿ ಬುಡಕಟ್ಟು ಸಂಸ್ಕೃತಿಯ ಲಕ್ಷಣಗಳನ್ನು ಹೊಂದಿರುವ ಅಲೆಮಾರಿ 'ಫಿಸಾಡಿ' ಸಮುದಾಯದ ಅಧ್ಯಯನವನ್ನು ಇಲ್ಲಿ ಕೈಗೆತ್ತಿಕೊಳ್ಳಲಾಗಿದ.

೨. ವೃತ್ತಿ ಸಮುದಾಯಗಳ ಕುರಿತು ಇದುವರೆಗೂ ನಡೆದಿರುವ ಅಧ್ಯಯನಗಳು

ಕುಶಲಕರ್ಮಿ ಅಥವಾ ವೃತ್ತಿ ಸಮುದಾಯಗಳನ್ನು ಕುರಿತು ಇಲ್ಲಿಯವರೆಗೆ ನಡೆದಿರುವ ಅಧ್ಯಯನಗಳೆಂದರೆ, ಬಹುಶಃ ಇಡೀ ದಕ್ಷಿಣ ಏಷ್ಯಾಕ್ಕೆ ಸಂಬಂಧಿಸಿದಂತೆ ಪ್ರಥಮವಾಗಿ ಮಾಹಿತಿ ನೀಡುವ ಪುಸ್ತಕ ನಾಕ್ಸ್(Knoxe)ಅವರ "ಹಿಸ್ಟಾರಿಕಲ್ ರಿಲೇಷನ್ಸ್ ಆಫ್ ದಿ ಐಲ್ಯಾಂಡ್ ಸಿಲೋನ್" ಎಂದು ಸಂಶೋಧಕ ಕುಮಾರಸ್ವಾಮಿಯವರು ಅಭಿಪ್ರಾಯಪಡುತ್ತಾರೆ. ಈ ಕೃತಿಯ ನಂತರ ಅಬೆದುಬೆಯವರ "ಹಿಂದೂ ಮ್ಯಾನರ್ಸ್, ಕಸ್ಟಮ್ಸ್ ಆ್ಯಂಡ್ ಸೆರಮೊನಿಸ್", ಬುಕನಾನ್ ಅವರ "ಜರ್ನಿ ಫ್ರಮ್ ಮದ್ರಾಸ್ ಥ್ರೋ ದಿ ಕಂಟ್ರೀಸ್ ಆಫ್ ಮೈಸೂರು, ಕೆನರಾ ಅಂಡ್ ಮಲಬಾರ್" "ಇವರ ನಂತರ ಅಕ್ಕಸಾಲಿಗರನ್ನು ಕುರಿತು ವಿಶೇಷವಾಗಿ ಅಧ್ಯಯನ ಮಾಡಿದವರು ಈಶ್ವರನ್, ದಕ್ಷಿಣ ಕರ್ನಾಟಕದ ವಿಶ್ವಕರ್ಮರನ್ನು ಕುರಿತು ವಿಶೇಷವಾಗಿ ಅಧ್ಯಯನ ಮಾಡಿದವರು ಶ್ರೀನಿವಾಸ್ ಅವರು (ಕುಮಾರ .ಆರ್.ಬಿ. : ೨೦೦೪ : ೫). ಮಾನವಶಾಸ್ತ್ರಜ್ಞರಾದ ಜಾನ್ ಬ್ರೋವರ್‌ರವರು "ಮೇಕರ್ಸ್ ಆಫ್ ದಿ ವರ್ಲ್ಡ್" ಎಂಬ ಗ್ರಂಥದಲ್ಲಿ ಕುಶಲಕರ್ಮಿ ಸಮುದಾಯಗಳ ಕುರಿತು ಮಾಹಿತಿ ನೀಡಿರುತ್ತಾರೆ.

ಕಸುಬುಗಳು ಮತ್ತು ಕುಲಕಸುಬುದಾರರನ್ನು ಕುರಿತು ಮೆಣಸಿನಕಾಯಿಯವರ "ಸರ್ವೇ ಆಫ್ ಕ್ರಾಫ್ಟ್ ಇನ್ ನಾರ್ಥನ್ ಕರ್ನಾಟಕ - ೧೯೬೧", ಕಾಳೇ ಅವರ "ದಕ್ಷಿಣ ಕರ್ನಾಟಕ ಕಸುಬುಗಳ ಸಮೀಕ್ಷೆ - ೧೯೬೩", ಲಕ್ಷ್ಮಣ್‌ರವರ "ಅಭಿವೃದ್ಧಿಯ ಸಂದರ್ಭದಲ್ಲಿ ಗೃಹ ಕೈಗಾರಿಕೆಗಳ ಸ್ಥಿತಿಗತಿಗಳ ಅಧ್ಯಯನ - ೧೯೬೬", ಕಮ್ಮಾರಿಕೆ ಮತ್ತು ಬಡಗಿತನಗಳನ್ನೊಳಗೊಂಡ ರಾಜ್‌ಪ್ರಮುಖ್ ಮತ್ತು ಪ್ರಸಾದ್‌ರವರ "ಆಂಧ್ರ ಪ್ರದೇಶದಲ್ಲಿನ ವಿಶ್ವಕರ್ಮದ `ಔದ್ಯೋಗಿಕ ಚಲನೆ"ಯ ಮೇಲಿನ ಲೇಖನ - ೧೯೭೦", ಹಾಗೆಯೇ ಸರ್ಕಾರ್ ಅವರ "ಮೈಸೂರು ನಗರದಲ್ಲಿನ ಔದ್ಯೋಗಿಕ ಚಲನೆ"ಯ ಮೇಲಿನ ಲೇಖನ. ಬ್ಲಾಂಕಿನ್ ಬರ್ಗ್‌ರವರ "ಅಭಿವೃದ್ಧಿಯ ಆರ್ಥಿಕ ವ್ಯವಸ್ಥೆಯ ಸಂದರ್ಭದಲ್ಲಿ ಇತ್ತೀಚಿನ ಅಧ್ಯಯನ - ೧೯೮೫" ಮುಂತಾದ ಕೃತಿಗಳು ಕೆಲವು ನಿರ್ದಿಷ್ಟ ಕಸುಬುಗಳ ತಾಂತ್ರಿಕ ಅಂಶಗಳ ಮೇಲೆ ಬೆಳಕು ಚೆಲುತ್ತವೆ.

ಭಾರತೀಯ ಜಾತಿ ಮತ್ತು ಬುಡಕಟ್ಟುಗಳನ್ನು ಕುರಿತು ಬ್ರಿಟೀಷ್ ವಸಹಾತುಶಾಹಿ ಕಾಲದಲ್ಲಿ ಎಡ್ಗರ್ ಥರ್ಸ್ಟನ್ ಮತ್ತು ಕೆ. ರಂಗಾಚಾರಿಯವರು "Castes and Tribes of Southern India" ಎಂಬ ೭-ಸಂಪುಟಗಳನ್ನು ಹೊರತಂದಿದ್ದಾರೆ. ಇದರ ನಂತರ ೧೯೩೫ರಲ್ಲಿ ಎಲ್.ಕೆ. ಅನಂತಕೃಷ್ಣ ಅಯ್ಯರ್ ಅವರು "The Mysore Tribes and Castes" ಶೀರ್ಷಿಕೆಯ ೪ - ಸಂಪುಟಗಳನ್ನು ಪ್ರಕಟಿಸಿದ್ದಾರೆ. ೧೯೫೧ರಲ್ಲಿ ಮೈಸೂರು ರಾಜ್ಯದ ವಾರ್ತಾ ಇಲಾಖೆ ಪ್ರಕಟಿಸಿದ ಸಂಪುಟದಲ್ಲಿ ಡಿ. ಕೃಷ್ಣ ಅಯ್ಯರ್ ಅವರು "ಕನ್ನಡ ನಾಡಿನ ಆದಿವಾಸಿಗಳು" ಎಂಬ ಸಂಕ್ಷಿಪ್ತ ಲೇಖನವೊಂದನ್ನು ಬರೆದಿದ್ದಾರೆ. ಇದು ಬುಡಕಟ್ಟುಗಳನ್ನು ಕುರಿತಾದ ಪ್ರಥಮ ಸಂಕ್ಷಿಪ್ತ ಕನ್ನಡ

ಲೇಖನ ಎಂದು ಹೇಳಲಾಗುತ್ತದೆ. ಅಲ್ಲದೆ ಪಿಎಚ್.ಡಿ. ಪದವಿಯ ಉದ್ದೇಶವಿಟ್ಟುಕೊಂಡು ಹಲವಾರು ಬುಡಕಟ್ಟುಗಳ ಅಧ್ಯಯನ ನಡೆದಿದೆ. ೧೯೯೩ರಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಉಪಸಂಸ್ಕೃತಿ ಮಾಲೆ ಅಡಿಯಲ್ಲಿ ವಿವಿಧ ವಿದ್ವಾಂಸರ ಮೂಲಕ ಸುಮಾರು ೩೫ ಸಮುದಾಯಗಳ ವಿವರಣೆಯ ಪುಸ್ತಕಗಳನ್ನು ಪ್ರಕಟಿಸುವ ಮೂಲಕ ಬುಡಕಟ್ಟುಗಳ ಕುರಿತಾದ ವಿಸ್ತೃತ ಅಧ್ಯಯನಕ್ಕೆ ವಿಪುಲ ಮಾಹಿತಿಗಳನ್ನು ಒದಗಿಸಲಾಯಿತು.

ಘಿಸಾಡಿ ಸಮುದಾಯ ಹಾಗೂ ಅವರ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಇಲ್ಲಿಯವರೆಗೆ ಪ್ರಕಟವಾಗಿರುವ ಲೇಖನ ಸಾಮಗ್ರಿ ಹಾಗೂ ಗ್ರಂಥಗಳನ್ನು ಅವಲೋಕಿಸಿದಾಗ ಈ ಜನರ ವಿವಿಧ ಮುಖಗಳಿಗೆ ಸಂಬಂಧಿಸಿದಂತೆ ಹೆಚ್ಚಿನ ಅಧ್ಯಯನ ಆಗದೇ ಇರುವುದು ಕಂಡುಬರುತ್ತದೆ. ಕೆ.ಎಸ್. ಸಿಂಗ್ ಅವರು ತಮ್ಮ "Indias Communities" ಎಂಬ ಗ್ರಂಥದಲ್ಲಿ ಸಂಕ್ಷಿಪ್ತ ಮಾಹಿತಿಯನ್ನು ನೀಡಿದ್ದಾರೆ. ಎಮ್.ಎ. ಶೇರಿಂಗ್‌ರವರು "Hindu Tribes and Castes" ಎಂಬ ಗ್ರಂಥದಲ್ಲಿ ಅಲ್ಪ ವಿವರಣೆ ಬರೆದಿದ್ದಾರೆ. ಭಾಷಾ ವಿಜ್ಞಾನಿಗಳಾದ ಜಿ.ಎ. ಗ್ರಿಯರ್ಸನ್‌ರವರು "Linguistic Survey of India"ದಲ್ಲಿ ಇವರ ಭಾಷೆ ಕುರಿತು ವಿವರಣೆ ನೀಡಿದ್ದಾರೆ. ಆರ್.ವಿ. ಆ್ಯಂತೋವನ್ ಅವರು "The Tribes and Castes of Bombay" ಗ್ರಂಥದಲ್ಲಿ ಈ ಸಮುದಾಯ ಕುರಿತು ಸಂಕ್ಷಿಪ್ತ ಮಾಹಿತಿ ನೀಡಿದ್ದಾರೆ. ಇವರೆಲ್ಲರೂ ನೀಡುವ ಅಲ್ಪ ವಿವರಣೆಗಳು ಅಧ್ಯಯನಕಾರರಿಗೆ ಮಾಹಿತಿ ಮಾತ್ರ ಆಗಿವೆ. ಆದ್ದರಿಂದ ಈ ಜನರ ಸಂಸ್ಕೃತಿ ಜೀವನವನ್ನು ಕುರಿತು ಸಮಗ್ರವಾಗಿ ಇನ್ನೂ ಯಾರು ಅಧ್ಯಯನ ಮಾಡದ ನಿರ್ಲಕ್ಷಿಸಲ್ಪಟ್ಟ ಸಮುದಾಯವಾಗಿದೆ ಎಂಬುದು ಸ್ಪಷ್ಟವಾಗುತ್ತದೆ.

೩. ಅಧ್ಯಯನದ ಸ್ವರೂಪ

ಘಿಸಾಡಿ ಸಮುದಾಯವು ಬಹುಕಾಲದಿಂದಲೂ ಒಂದು ಅಲೆಮಾರಿ ಸಮುದಾಯವಾಗಿದೆ. ಈ ಸಮುದಾಯವು ಮೂಲತಃ ರಾಜಸ್ಥಾನದ ಚಿತ್ತೋಡಗಡ್ ಪ್ರದೇಶದಿಂದ ದೇಶದ ವಿವಿಧ ಭಾಗಗಳಲ್ಲಿ ಸಂಚರಿಸುತ್ತಾ, ದೇಶದ ಉದ್ದಗಲಕ್ಕೂ ನೆಲೆಸಿದೆ. ಇವರ ಕುಲಕಸುಬು ಕಮ್ಮಾರಿಕೆಯಾಗಿದ್ದು. ಈ ವೃತ್ತಿಯನ್ನು ನಂಬಿದ ಇವರು ದೇಶದ ವಿವಿಧ ಗ್ರಾಮಗಳಿಗೆ ಸಂಚರಿಸುತ್ತಾ, ಗ್ರಾಮದ ಹೊರ ವಲಯದಲ್ಲಿನ ಗುಡಿ-ಗುಂಡಾರ, ಸರ್ಕಾರಿ ಹಳೆಯ ಕಟ್ಟಡಗಳಂತಹ ಪ್ರದೇಶದ ಆವರಣಗಳಲ್ಲಿ ಗುಡಾರಗಳನ್ನು ಹಾಕಿ ಆ ಗ್ರಾಮದಲ್ಲಿ ಸಿಗುವ ಕೃಷಿ ಉಪಕರಣಗಳ ದುರಿಸ್ತಿ(ರೀಪೇರಿ), ತಯಾರಿಕೆಗಳನ್ನು ಮಾಡಿಕೊಟ್ಟು ಆ ಗ್ರಾಮದ ಜನರು ಕೊಟ್ಟಂತಹ ದವಸ ಧಾನ್ಯಗಳು, ಇಲ್ಲವೇ ನಗದು ರೂಪದ ಹಣವನ್ನು ಪಡೆದುಕೊಂಡು ಜೀವನ ನಿರ್ವಹಿಸುತ್ತಾ ಬಂದಿದ್ದಾರೆ.

ಹೀಗೆ ಬಂದವರು ಗುಲ್ಬರ್ಗಾ ಜಿಲ್ಲೆಯಲ್ಲಿನ ವಿವಿಧ ಪ್ರದೇಶಗಳಲ್ಲಿನ ಅನೇಕ ಗ್ರಾಮಗಳಲ್ಲಿ ಪಟ್ಟಣಗಳಲ್ಲಿ ಹಾಗೂ ನಗರ ಪ್ರದೇಶಗಳಲ್ಲಿ ಬಹುಕಾಲದಿಂದಲೂ ನೆಲೆಸಿ, ಇಂದು ಗುಲ್ಬರ್ಗಾ ಜಿಲ್ಲೆಯ ಖಾಯಂ ನಿವಾಸಿಗಳಾಗಿ ಜೀವನ ನಿರ್ವಹಿಸುತ್ತಿದ್ದಾರೆ. ಈ ಸಮುದಾಯದ ಕೆಲವೇ

ಕುಟುಂಬಗಳು ಮಾತ್ರ ಸ್ವಂತ ಸಣ್ಣಪುಟ್ಟ ಮನೆಗಳು ಮತ್ತು ಕನಿಷ್ಟ ಅಲ್ಪ ಪ್ರಮಾಣದ ಭೂಮಿಯನ್ನು ಹೊಂದಿವೆ.

ಪ್ರಸ್ತುತ ಅಧ್ಯಯನಕ್ಕೆ ಗುಲ್ಬರ್ಗಾ ಜಿಲ್ಲೆಯ ಸಮಗ್ರ ಘಿಸಾಡಿ ಸಮುದಾಯವನ್ನು ಒಳಪಡಿಸಲಾಗಿದೆ. ಈ ಜಿಲ್ಲೆಯಲ್ಲಿ ಈ ಸಮುದಾಯದ ಒಟ್ಟು ೩೩೫ ಕುಟುಂಬಗಳು ನೆಲೆಸಿದ್ದು. ೮೨೧ ಪುರುಷರು, ೮೧೩ ಸ್ತ್ರೀಯರು ಸೇರಿ ಒಟ್ಟು ೧೬೩೪ ಜನರು ಗುಲ್ಬರ್ಗಾ ಜಿಲ್ಲೆಯ ಪರಿಸರದಲ್ಲಿ ನೆಲೆಸಿದ್ದಾರೆ. ಗುಲ್ಬರ್ಗಾ ಜಿಲ್ಲೆಯ ಚಿತ್ತಾಪುರ ತಾಲ್ಲೂಕಿನಲ್ಲಿ ಒಟ್ಟಾರೆ ೯೧ ಕುಟುಂಬಗಳು ನೆಲೆಸಿದ್ದು ಇಡೀ ಜಿಲ್ಲೆಯಲ್ಲಿಯೇ ಚಿತ್ತಾಪುರ ತಾಲ್ಲೂಕಿನ ಪರಿಸರದಲ್ಲಿ ಹೆಚ್ಚಿನ ಕುಟುಂಬಗಳು ನೆಲೆಸಿದಂತಾಗಿದೆ. ಯಾದಗಿರಿ ತಾಲ್ಲೂಕಿನಲ್ಲಿ ೧೫ ಕುಟುಂಬಗಳು ಮಾತ್ರ ನೆಲೆಸಿದ್ದು ಕೊನೆಯ ಸ್ಥಾನದಲ್ಲಿದೆ. ಸುರಪುರ ತಾಲ್ಲೂಕಿನ ಪರಿಸರದಲ್ಲಿ ಒಂದು ಕುಟುಂಬವೂ ನೆಲೆಸದೆ ಇರುವುದು ಕ್ಷೇತ್ರಕಾರ್ಯದಿಂದ ತಿಳಿದುಬಂದಿದೆ. ಬಹುಶಃ ಈ ತಾಲ್ಲೂಕಿನಲ್ಲಿ ಅಲೆಮಾರಿಗಳಾಗಿ ಕೆಲಸ ಮಾಡಿ ಹೋಗುತ್ತಿರಬಹುದು.

ಇಡೀ ಜಿಲ್ಲೆಯಲ್ಲಿ ಘಿಸಾಡಿ ಸಮುದಾಯದ ೯೯ ಕುಟುಂಬಗಳಿಗೆ ಮಾತ್ರ ಸಣ್ಣ ಪುಟ್ಟ ಸ್ವಂತ ಮಾಳಿಗೆ ಮನೆಗಳಿವೆ. ಉಳಿದಂತೆ ೧೧೮ ಕುಟುಂಬಗಳು ಬಾಡಿಗೆ ಮನೆಯಲ್ಲಿದ್ದು ಅವುಗಳಿಗೆ ಸರಿಯಾದ ವಿದ್ಯುತ್ ವ್ಯವಸ್ಥೆ ಸಹ. ಹಾಗೆಯೇ ೪೨ ಕುಟುಂಬಗಳು ಗುಡಾರಗಳಲ್ಲಿ, ೩೪ ಕುಟುಂಬಗಳು ಗುಡಿಸಲಿನಲ್ಲಿ ಹಾಗೂ ೭೭ ಕುಟುಂಬಗಳು ಟಿನ್ ಮನೆಗಳಲ್ಲಿ, ೭ ಕುಟುಂಬಗಳು ಸರ್ಕಾರಿ ಜನತಾ ಆಶ್ರಯ ಮನೆ ಪಡೆದುಕೊಂಡಿರುವುದು ಕ್ಷೇತ್ರಕಾರ್ಯದಿಂದ ತಿಳಿದುಬಂದಿದೆ.

ಘಿಸಾಡಿ ಸಮುದಾಯವು ಗುಲ್ಬರ್ಗಾ ಜಿಲ್ಲೆಯಲ್ಲಿಯಷ್ಟೇ ನೆಲೆಸದೆ ಉತ್ತರ ಕರ್ನಾಟಕ ಭಾಗದ ಬೀದರ, ವಿಜಾಪುರ, ಬೆಳಗಾವಿ, ಧಾರವಾಡ, ಬಾಗಲಕೋಟೆ ಜಿಲ್ಲೆಗಳ ಪರಿಸರದಲ್ಲಿ ಬಹುಕಾಲದಿಂದಲೂ ನೆಲೆಸಿ ಅಲ್ಲಿಯೇ ಖಾಯಂ ನಿವಾಸಿಗಳಾಗಿ ಉಳಿದುಕೊಂಡಿದ್ದಾರೆ. ಆದರೆ, ಇನ್ನುಳಿದ ಜಿಲ್ಲೆಗಳಾದ ರಾಯಚೂರು, ಕೊಪ್ಪಳ, ಗದಗ, ಉತ್ತರ ಕನ್ನಡದ ಉತ್ತರ ಭಾಗದಲ್ಲಿ ಸದಾ ಸಂಚರಿಸುತ್ತಾ ಕಮ್ಮಾರಿಕೆ ಕೆಲಸಗಳನ್ನು ಹುಡುಕಿಕೊಂಡು ಅಲೆದಾಡುತ್ತಿರುವುದಾಗಿ ಕಂಡುಬರುತ್ತಾರೆ.

೪. ಅಧ್ಯಯನದ ಮಹತ್ವ

ಘಿಸಾಡಿ ಸಮುದಾಯವನ್ನು ಕುರಿತು ಪರಿಚಯಾತ್ಮಕ ಮಾಹಿತಿಗಳು ಮಾತ್ರ ಲಭ್ಯವಿವೆ. ಭಾರತದ ಬಹುತೇಕ ಜಾತಿಗಳಂತೆ ಈ ಸಮುದಾಯವು ಕೂಡಾ ನಿರ್ಲಕ್ಷಿಸಲ್ಪಟ್ಟ ಸಮುದಾಯವಾಗಿದೆ. ಇಲ್ಲಿಯವರೆಗೆ ಈ ಸಮುದಾಯವನ್ನು ಕುರಿತು ಯಾವುದೇ ರೀತಿಯ ಅಧ್ಯಯನ ನಡೆದಿದಿಲ್ಲ. ಇದು ಅಲೆಮಾರಿ ಸಮುದಾಯವಾಗಿರುವುದರಿಂದ, ಇದರ ಅಧ್ಯಯನಕ್ಕೆ ಅಧ್ಯಯನಕಾರರು ತೊಡಗಿಲ್ಲಾ ಎಂಬುದು ಸ್ಪಷ್ಟವಾಗಿದೆ. "ಎಲೆಮರಿಯ ಕಾಯಿಯಂತೆ" ಧ್ವನಿ ಇಲ್ಲದೆ ಈ ಸಮುದಾಯ ಗೊತ್ತಿದ್ದರೂ ಗೊತ್ತಿಲದಂತೆ ನಗಣ್ಯವಾಗಿರುವುದರಿಂದ, ಈ ಸಮುದಾಯದ

ಅಧ್ಯಯನದ ಅವಶ್ಯಕತೆ ತುಂಬಾ ಇರುವುದು ಕಂಡುಬಂದಿತು. ಈ ಸಮುದಾಯವು ಮೂಲತಃ ಒಂದು ಅಲೆಮಾರಿ ಬುಡಕಟ್ಟು ಸಮುದಾಯವಾಗಿದ್ದು, ಸಮಾಜಶಾಸ್ತ್ರ ಮತ್ತು ಮಾನವಶಾಸ್ತ್ರದ ದೃಷ್ಟಿಯಿಂದ ಒಂದು ಬುಡಕಟ್ಟು. ಆದರೆ ಸರ್ಕಾರದ ಮತ್ತು ವಿದ್ವಾಂಸರ ನಿರ್ಲಕ್ಷ್ಯದಿಂದ ಈ ಸಮುದಾಯವು 'ಪರಿಶಿಷ್ಟ ಬುಡಕಟ್ಟು' ಎಂದು ಪರಿಗಣಿಸಲ್ಪಟ್ಟಿಲ್ಲ.

ಸರ್ಕಾರ ಮಾಡಿರುವ "ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ" ವರ್ಗೀಕರಣವು ವೈಜ್ಞಾನಿಕವಾಗಿರದೆ ರಾಜಕೀಯವಾಗಿದೆ ಎಂಬುದನ್ನು ಬಹುತೇಕ ವಿದ್ವಾಂಸರು ತಿಳಿಸುತ್ತಾರೆ. ಆದ್ದರಿಂದ ಭಾರತದ ಅನೇಕ ಸಮುದಾಯಗಳಂತೆ ಈ ಸಮುದಾಯವು ಕೂಡಾ 'ಪರಿಶಿಷ್ಟ ಪಂಗಡ' ಎಂದು ಪರಿಗಣಿಸಲ್ಪಟ್ಟಿಲ್ಲ ಎಂಬಂದು ಸಂಶೋಧನೆಯಿಂದ ತಿಳಿದುಬರುತ್ತದೆ. ಹೀಗಾಗಿ, ತೀರಾ ಸಂಕಷ್ಟದಲ್ಲಿ ಜೀವನ ನಡೆಸುತ್ತಿರುವ ಇಂತಹ ಸಮುದಾಯಗಳ ಶೋಧಿತ ಫಲಿತಗಳನ್ನು ನೀಡುವುದು ಅಗತ್ಯವಾಗಿದೆ. ಇಲ್ಲಿಯವರೆಗೆ ನಡೆದಿರುವ ಅಧ್ಯಯನಗಳನ್ನು ಗಮನಿಸಿದಾಗ ಒಟ್ಟಾರೆಯಾಗಿ ಘಿಸಾಡಿ ಸಮುದಾಯ ಕುರಿತು ಸಮಗ್ರ ಅಧ್ಯಯನ ನಡೆಯದೆ ಇರುವುದು ಕಂಡುಬರುತ್ತದೆ. ಈ ಹಿನ್ನೆಲೆಯಲ್ಲಿ ಘಿಸಾಡಿ ಸಮುದಾಯ ಕುರಿತು ಒಂದು ಸಾಮಾಜಿಕ ಅಧ್ಯಯನದ ಅವಶ್ಯಕತೆಯಿರುವುದರಿಂದ ಈ ಸಮುದಾಯದ ಅಧ್ಯಯನವನ್ನು ಆಯ್ಕೆ ಮಾಡಿಕೊಂಡು ಪೂರ್ಣಗೊಳಿಸಲಾಗಿದೆ.

೫. ಅಧ್ಯಯನದ ವ್ಯಾಪ್ತಿ

ಕರ್ನಾಟಕದ ಉತ್ತರ ಭಾಗದಲ್ಲಿರುವ ಗುಲ್ಬರ್ಗಾ ಜಿಲ್ಲೆಯು ಮಹಾರಾಷ್ಟ್ರ ಹಾಗೂ ಆಂಧ್ರಪ್ರದೇಶಗಳ ಗಡಿ ಹೊಂದಿದ್ದು, ಬೀದರ್, ಗುಲ್ಬರ್ಗಾ, ರಾಯಚೂರು ಈಗಿನ ಕೊಪ್ಪಳ ಜಿಲ್ಲೆ ಮತ್ತು ಬಳ್ಳಾರಿ ಜಿಲ್ಲೆಗಳನ್ನೊಳಗೊಂಡ ವಿಭಾಗೀಯ ಕೇಂದ್ರಸ್ಥಾನವಾಗಿದೆ. ಈ ಐದು ಜಿಲ್ಲೆಯೊಳಗೊಂಡ ಪ್ರದೇಶಗಳಿಗೆ "ಹೈದ್ರಾಬಾದ್ ಕರ್ನಾಟಕ" ಎಂದು ಕರೆಯಲಾಗುತ್ತದೆ. ಪ್ರಸ್ತುತ ಘಿಸಾಡಿ ಸಮುದಾಯದ ಸಾಮಾಜಿಕ ಅಧ್ಯಯನವು ಗುಲ್ಬರ್ಗಾ ಜಿಲ್ಲೆ ಒಳಗೊಂಡಂತೆ ಎಲ್ಲಾ ೧೦ ತಾಲ್ಲೂಕು ಕೇಂದ್ರಗಳು ಮತ್ತು ಸಮುದಾಯ ನೆಲೆಸಿರುವ ಗ್ರಾಮೀಣ ಪ್ರದೇಶಗಳನ್ನು ಅಧ್ಯಯನದ ವ್ಯಾಪ್ತಿಗೆ ಒಳಪಡಿಸಲಾಗಿದೆ. ಗುಲ್ಬರ್ಗಾ ಜಿಲ್ಲೆಯನ್ನು ಕುರಿತು ಮುಂದಿನ ಅಧ್ಯಯನದಲ್ಲಿ ಹೆಚ್ಚಿನ ಪರಿಚಯ ನೀಡಲಾಗಿದೆ.

೬. ಅಧ್ಯಯನದ ಉದ್ದೇಶಗಳು

ಘಿಸಾಡಿ ಸಮುದಾಯದ ಅಧ್ಯಯನದ ಉದ್ದೇಶಗಳು ಈ ಕೆಳಗಿನಂತಿವೆ.

೧. ಘಿಸಾಡಿ ಸಮುದಾಯದ ಮೂಲ ಮತ್ತು ಪ್ರಸಾರವನ್ನು ಗುರುತಿಸುವುದು.

೨. ಘಿಸಾಡಿ ಸಮುದಾಯ ಪರ್ಯಾಯ ಪದಗಳನ್ನು ಗುರುತಿಸುವುದು.

೩. ಸಮುದಾಯದ ಸಾಮಾಜಿಕ ಜೀವನ ವಿಧಾನಗಳನ್ನು ಅಧ್ಯಯನ ಮಾಡುವುದು.

೪. ಸಮುದಾಯದ ಆರ್ಥಿಕ ಜೀವನಮಟ್ಟ ಗುರುತಿಸುವುದು.

೫. ಸಮುದಾಯದ ಕೌಟುಂಬಿಕ ರಚನೆ ಮತ್ತು ಸ್ಥಾನಮಾನಗಳನ್ನು ಗುರುತಿಸುವುದು.

೬. ಸಮುದಾಯದ ಸಾಂಸ್ಕೃತಿಕ ನೆಲೆಗಟ್ಟುಗಳನ್ನು ಶೋಧಿಸುವುದು.

೭. ಸಮುದಾಯದ ಭಾಷೆ ಮತ್ತು ಸಾಹಿತ್ಯವನ್ನು ಶೋಧಿಸುವುದು.

೮. ಸಮುದಾಯದಲ್ಲಿನ ಆಧುನಿಕ ಸಂದರ್ಭದಲ್ಲಿನ ಸ್ಥಿತಿ-ಗತಿಗಳನ್ನು ಅಧ್ಯಯನ ಮಾಡುವುದು.

೯. ಇವರ ಶಿಕ್ಷಣ, ಸಂಘಟನೆ ಮತ್ತು ಅಭಿವೃದ್ಧಿಯನ್ನು ಕುರಿತು ಅಧ್ಯಯನ ಮಾಡುವುದು.

೧೦. ಇವರ ಸಮಸ್ಯೆಗಳಿಗೆ ಪರಿಹಾರೋಪಾಯ ಮಾರ್ಗಗಳನ್ನು ನೀಡುವುದು.

ಊಹೆಗಳು

೧. ಘಿಸಾಡಿ ಸಮುದಾಯವು ಮೂಲತಃ "ಅಲೆಮಾರಿ ಬುಡಕಟ್ಟು" ಸಮುದಾಯವಾಗಿದ್ದು, ನೆಲೆ ನಿಲ್ಲುವ ಪ್ರಯತ್ನದಲ್ಲಿರುವುದು.

೨. ಈ ಸಮುದಾಯವು ತನ್ನ ಪರಂಪರಾಗತ ಮೂಲವೃತ್ತಿಯನ್ನು ಮುಂದುವರೆಸಿಕೊಂಡು ಹೋಗುವುದರಲ್ಲಿ ಸಮಸ್ಯೆಗಳನ್ನು ಎದುರಿಸುತ್ತಿರುವುದು.

೩. ಸಮುದಾಯವು ತನ್ನ ಸಂಘಟನೆ ಮತ್ತು ಅಭಿವೃದ್ಧಿಯ ಕನಸಿನ ಹೊಸ್ತಿಲಲ್ಲಿರುವುದು.

೪. ಸಮುದಾಯವು ಕಾಲಮಾನಗಳ ಪ್ರಕಾರ ಬದಲಾವಣೆ ಬಯಸುತ್ತಿರುವುದರ ಜೊತೆಗೆ ತನ್ನ ಮೂಲ ಅಸ್ತಿತ್ವವನ್ನು ಉಳಿಸಿಕೊಳ್ಳಲು ಪ್ರಯತ್ನಿಸುತ್ತಿರುವುದು.

೭. ಅಧ್ಯಯನದ ವಿಧಾನಗಳು

ಈ ಕೆಳಕಂಡ ಸಂಶೋಧನ ವಿಧಾನಗಳನ್ನು ಈ ಅಧ್ಯಯನಕ್ಕಾಗಿ ಅಳವಡಿಸಲಾಗಿದೆ.

೭.೧. ಐತಿಹಾಸಿಕ ವಿಧಾನ

ಗುಲ್ಬರ್ಗಾ ಜಿಲ್ಲೆಯ ಘಿಸಾಡಿ ಸಮುದಾಯದ ಸಾಮಾಜಿಕ ಅಧ್ಯಯನಕ್ಕೆ ಅಗತ್ಯವಾದ ಆಧಾರ ಗ್ರಂಥಗಳು, ಮಾಸ ಪತ್ರಿಕೆಗಳು, ವರದಿಗಳು, ಸರ್ಕಾರಿ ಪ್ರಕಟಣೆಗಳು ಮತ್ತು ಜಿಲ್ಲೆಯ ಅಂಕಿ-ಸಂಖ್ಯೆಗಳು, ಗೆಜೆಟ್‌ಗಳು ಇತ್ಯಾದಿ ಮಾಹಿತಿಗಳನ್ನು ಬಳಸಿಕೊಳ್ಳುವುದರ ಮೂಲಕ ವಿವಿಧ ಸಾಹಿತ್ಯಿಕ ಆಧಾರಗಳನ್ನು ಐತಿಹಾಸಿಕ ವಿಧಾನದಲ್ಲಿ ಬಳಸಿಕೊಳ್ಳಲಾಗಿದೆ.

೭.೨. ತೌಲನಿಕ ವಿಧಾನ

ಗುಲ್ಬರ್ಗಾ ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವ ಘಿಸಾಡಿ ಸಮುದಾಯದ ಆರ್ಥಿಕ, ಸಾಮಾಜಿಕ, ಧಾರ್ಮಿಕ ಹಾಗೂ ರಾಜಕೀಯ ಸ್ಥಿತಿಗತಿಗಳನ್ನು ವಿವಿಧ ಪರಿಸದಲ್ಲಿ ಮಾಹಿತಿ ಸಂಗ್ರಹಿಸುವುದರ

ಮೂಲಕ ಅವುಗಳ ಪ್ರಗತಿಯಲ್ಲಿ ಕಂಡುಬರುವ ವ್ಯತ್ಯಾಸಗಳನ್ನು ಈ ತೌಲನಿಕ ವಿಧಾನದಲ್ಲಿ ಬಳಸಲಾಗಿದೆ. ಅಲ್ಲದೆ ಘಿಸಾಡಿ ಸಮುದಾಯದ ವಿವಿಧ ನೆಲೆಗಟ್ಟುಗಳನ್ನು ಮತ್ತು ಭಿನ್ನವಾದ ಪರಿಸರದಲ್ಲಿ ಅವುಗಳ ಪರಿಸ್ಥಿತಿಯನ್ನು ಈ ಮೇಲಿನ ವಿಧಾನದ ಮೂಲಕ ಕಂಡುಕೊಳ್ಳಲಾಗಿದೆ.

೭.೩. ಸಂಖ್ಯಾಶಾಸ್ತ್ರೀಯ ವಿಧಾನ

ಘಿಸಾಡಿ ಸಮುದಾಯದ ಸಮಗ್ರ ಅಧ್ಯಯನದಲ್ಲಿ ಸಂಖ್ಯಾಶಾಸ್ತ್ರೀಯ ವಿಧಾನವು ಬಹಳ ಪ್ರಮುಖವಾದುದಾಗಿದ್ದು, ಘಿಸಾಡಿ ಸಮುದಾಯದ ಜನಸಂಖ್ಯೆ, ವಿವಿಧ ವೃತ್ತಿಗಳು, ಶೈಕ್ಷಣಿಕ ಪ್ರಮಾಣ, ಮನೆ ಮತ್ತು ಗುಡಾರಗಳ ಸಂಖ್ಯೆ, ಸರ್ಕಾರಿ ಸೌಲಭ್ಯಗಳ ಅಂಕಿ-ಸಂಖ್ಯೆಗಳ ತುಲನೆ ಕಾರ್ಯದಲ್ಲಿ ಈ ಸಂಖ್ಯಾಶಾಸ್ತ್ರ ವಿಧಾನ ಬಳಸಲಾಗಿದೆ.

೭.೪. ಅವಲೋಕನ ವಿಧಾನ

ಘಿಸಾಡಿ ಸಮುದಾಯದ ದೈನಂದಿನ ಚಟುವಟಿಕೆಗಳು, ಹುಟ್ಟಿನಿಂದ ಸಾವಿನವರೆಗಿನ ವಿಧಿ-ಕ್ರಿಯೆಗಳು, ಹಬ್ಬ, ಜಾತ್ರೆ-ಉತ್ಸವಗಳಿಗೆ ಮತ್ತು ಮುಖ್ಯವಾಗಿ ನ್ಯಾಯ ಪರಿಹಾರ ಸಭೆಗಳಲ್ಲಿ ನೇರವಾಗಿ ಭಾಗವಹಿಸುವುದರ ಮೂಲಕ ಮತ್ತು ಕಣ್ಣಿನಿಂದ ಅವಲೋಕಿಸಿ ಅಲ್ಲಿಯ ಸ್ಥಿತಿ-ಗತಿಗಳನ್ನು ಕ್ರೋಡೀಕರಿಸಿ ಅಧ್ಯಯನವನ್ನು ಕೈಗೊಳ್ಳಲಾಗಿದೆ.

೭.೫. ಪ್ರಶ್ನಾವಳಿ ವಿಧಾನ

ಈ ಅಧ್ಯಯನಕ್ಕೆ ದಂತ್ತಾಂಶಗಳನ್ನು ಸಂಗ್ರಹಿಸಲು ಮಾದರಿ ಪ್ರಶ್ನಾವಳಿಯೊಂದನ್ನು ಸಿದ್ಧಪಡಿಸಿಕೊಂಡು ಕ್ಷೇತ್ರಕಾರ್ಯದಲ್ಲಿ ಪರೀಕ್ಷಿಸಿ ಸಮೀಕ್ಷೆ ಕೈಗೊಳ್ಳಲಾಗಿದೆ. ಉದ್ದೇಶಿತ ಅಂಶಗಳ ಸಂಗ್ರಹಣೆಗಾಗಿ ಮಾದರಿ ಪ್ರಶ್ನಾವಳಿಯನ್ನು ಸಿದ್ಧಪಡಿಸಿಕೊಂಡು ವಿಷಯ ಅಧ್ಯಯನವನ್ನು ಕೈಗೊಳ್ಳಲಾಗಿದೆ.

೭.೬. ಸಂದರ್ಶನ ವಿಧಾನ

ಘಿಸಾಡಿ ಸಮುದಾಯದ ಸಾಮಾಜಿಕ ಅಧ್ಯಯನಕ್ಕೆ ಸೂಕ್ತವಾದ ಮಾಹಿತಿಗಳನ್ನು ಕಂಡುಕೊಳ್ಳಲು ಈ ಸಂದರ್ಶನ ವಿಧಾನವನ್ನು ಬಳಸಲಾಗಿದೆ. ಅಂದರೆ, ಮಾಹಿತಿದಾರರಿಗೆ ನೇರವಾಗಿ ಸಂದರ್ಶನ ಮಾಡುವುದರ ಮೂಲಕ ಅವರ ಲಿಂಗ, ವಯಸ್ಸು, ವೃತ್ತಿಗಳ ಆಧಾರದ ಮೇಲೆ ಅನೇಕ ಮಾಹಿತಿಗಳನ್ನು ಸಂಗ್ರಹಿಸಲಾಗಿದೆ. ಹೆಚ್ಚಿನ ವಯೋವೃದ್ಧರು ಅನೇಕ ಹಳೆಯ ವಿಷಯಗಳನ್ನು ಹೇಳಿದರೆ, ಮಧ್ಯ ವಯಸ್ಸಿನವರು ಹಿರಿಯರಿಂದ ತಿಳಿದುಕೊಂಡ ಹಳೆಯ ಮತ್ತು ಆಧುನಿಕ ವಿಷಯಗಳು ತಿಳಿಯಪಡಿಸುತ್ತಿದ್ದರು. ಇದಲ್ಲದೆ ಅನೇಕ ಮಾಹಿತಿಗಳನ್ನು ಸ್ತ್ರೀಯರಿಂದಲೂ ಪಡೆದುಕೊಂಡು ಅಧ್ಯಯನವನ್ನು ಪೂರ್ಣಗೊಳಿಸಲಾಗಿದೆ.

೭.೭. ತಾಂತ್ರಿಕ ವಸ್ತುಗಳ ಬಳಕೆ

ಸಂಶೋಧನಾ ಅಧ್ಯಯನ, ಸಂದರ್ಭದಲ್ಲಿ ವಿವಿಧ ಚಿತ್ರಗಳನ್ನು ಕ್ಯಾಮರಾದ ಮೂಲಕ ಸೆರೆ ಹಿಡಿಯಲಾಗಿದೆ. ಅಲ್ಲದೆ ಮಾಹಿತಿದಾರರು ಹೇಳುವ ಮಾಹಿತಿ ಮತ್ತು ಹಾಡುಗಳನ್ನು ಟೇಪ್‌ರಿಕಾರ್ಡ್ ಬಳಸಿ ಅವರು ಹಾಡಿದ ಧ್ವನಿಗಳನ್ನು ಸಂಗ್ರಹಿಸಲಾಗಿದ್ದು, ಹಲವಾರು ವಿಷಯಗಳನ್ನು ಬರವಣಿಗೆ ರೂಪದಲ್ಲಿ ತರಲಾಗಿದೆ.

೭.೮. ಮಾಹಿತಿದಾರರ ಆಯ್ಕೆ

ಬಹುತೇಕ ಬುಡಕಟ್ಟು ಸಮುದಾಯಗಳಲ್ಲಿನ ಪ್ರತಿಯೊಬ್ಬ ಮಾಹಿತಿದಾರರು ತಮ್ಮ ಸಮುದಾಯದ ರೀತಿ-ನೀತಿಗಳ ಒಳ-ಹೊರಗಿನ ಅರಿವನ್ನು ಬಲ್ಲವರಾಗಿರುತ್ತಾರೆ. ನಾನು ಆಯ್ಕೆ ಮಾಡಿಕೊಂಡ ಘಿಸಾಡಿ ಸಮುದಾಯದ ಪ್ರತಿಯೊಬ್ಬ ಮಾಹಿತಿದಾರರು ತಮ್ಮ ಸಮಾಜದ ಮೂಲ ರೂಪರೇಷೆಗಳನ್ನು ಬಲ್ಲವರಾಗಿದ್ದರು. ಕೆಲವರು ತಮ್ಮ ದೇವರುಗಳು, ಭೂತ-ಪ್ರೇತಗಳ ಬಗ್ಗೆ ವಿಷಯ ತಿಳಿಸುವಲ್ಲಿ ಪರಿಣತರಾಗಿದ್ದರೆ, ಇನ್ನೂ ಕೆಲವರು ಗತಕಾಲದ ಐತಿಹಾಸಿಕ ವಿಚಾರಗಳನ್ನು ಬಲ್ಲವರಾಗಿದ್ದರು. ಹೆಚ್ಚಿನ ಮಾಹಿತಿ ತಿಳಿಯದೆ ಇರುವವರು ಕೂಡಾ ಇದ್ದರು.

೮. ಕ್ಷೇತ್ರಾನುಭವ

ನನಗೆ ಕ್ಷೇತ್ರಾನುಭವ ಆರಂಭವಾಗಿದ್ದು ೨೦೦೨-೦೩ರಲ್ಲಿ ಗುಲ್ಬರ್ಗಾ ಜಿಲ್ಲೆಯ ಬೈಲುಪತ್ತಾರರ ಸಮಾಜಶಾಸ್ತ್ರೀಯ ಅಧ್ಯಯನ ಎಂಬ ಶೀರ್ಷಿಕೆಯಡಿ ಎಂ.ಫಿಲ್ ಸಂಶೋಧನಾ ಅಧ್ಯಯನ ಕೈಗೊಂಡಿದ್ದಾಗಿನಿಂದ. ಆದರೆ ೨೦೦೩-೦೪ನೇ ಸಾಲಿನಿಂದ "ಗುಲ್ಬರ್ಗಾ ಜಿಲ್ಲೆಯ ಘಿಸಾಡಿ ಸಮುದಾಯದ ಸಾಮಾಜಿಕ ಅಧ್ಯಯನ" ಎಂಬ ಶೀರ್ಷಿಕೆಯಡಿ ಘಿಸಾಡಿ ಸಮುದಾಯದ ಅಧ್ಯಯನಕ್ಕೆ ಹಂಪಿ ಕನ್ನಡ ವಿಶ್ವವಿದ್ಯಾಲಯ ಬುಡಕಟ್ಟು ಅಧ್ಯಯನ ವಿಭಾಗವು ಮತ್ತೇ ಪಿಎಚ್.ಡಿ ಅಧ್ಯಯನಕ್ಕೆ ಅನುವು ಮಾಡಿಕೊಟ್ಟಿರುವುದರಿಂದ, ಮತ್ತೊಂದು ಹೊಸ ಸಮುದಾಯದಲ್ಲಿ ಕ್ಷೇತ್ರಕಾರ್ಯದ ಅನುಭವ ಪಡೆಯಲು ಅವಕಾಶ ದೊರೆತಂತಾಗಿದ್ದು, ನನ್ನ ಪಿಎಚ್.ಡಿ. ಅಧ್ಯಯನದ ಆಸಕ್ತಿ ಇನ್ನಷ್ಟು ಹೆಚ್ಚಿಸಿ ಬೆಳೆಯುವ ಗಿಡಕ್ಕೆ ನೀರೆರೆದಂತಾಯಿತು.

ಘಿಸಾಡಿ ಸಮುದಾಯದ ಅನೇಕ ಕುಟುಂಬಗಳು ಗುಲ್ಬರ್ಗಾ ಜಿಲ್ಲೆಯ ಅನೇಕ ಗ್ರಾಮಗಳಲ್ಲಿ ನೆಲೆಸಿವೆ. ಕೆಲವರಂತು ಸದಾ ಅಲೆಮಾರಿಗಳಾಗಿದ್ದಾರೆ. ಬಹುತೇಕ ಕುಟುಂಬಗಳು ನಗರದ ಮತ್ತು ಕೆಲವು ಪಟ್ಟಣಗಳ ಸಾರ್ವಜನಿಕ ರಸ್ತೆಗಳ ಪಕ್ಕದಲ್ಲಿ ಗುಡಾರಗಳನ್ನು ಹಾಕಿಕೊಂಡು ನೆಲೆಸಿವೆ. ಇವರೆಲ್ಲರನ್ನು ಸಂದರ್ಶಿಸುವುದು ಬಹಳ ಕಷ್ಟದ ಕೆಲಸವಾಗಿದ್ದರೂ; ನನಗೆ ಇವರನ್ನು ಸಂದರ್ಶಿಸಲೇಬೇಕು ಎಂಬ ಛಲ ಮತ್ತು ಆಸಕ್ತಿ ಸದಾಕಾಲ ಪುಟ್ಟಿದೇಳಿಸುತ್ತಿತು. ಅನೇಕ ಸಂದರ್ಭಗಳಲ್ಲಿ ಬಸ್‌ಗಳ ತೊಂದರೆಯಾದಾಗ ಟ್ರಾಕ್ಟರ್, ಜೀಪ್, ದೊಡ್ಡ ಆಟೋಗಳಲ್ಲಿ ಪ್ರಯಾಣ ಮಾಡಿ

ಇವರ ನೆಲೆಗಳಿಗೆ ಹೋಗುವ ಪ್ರಸಂಗಗಳು ಬಂದಿವೆ. ಚಿಂಚೋಳಿ ತಾಲ್ಲೂಕಿನ ಕೊಂಚಾವರಂ ಅರಣ್ಯ ಪ್ರದೇಶದಲ್ಲಿ ನೆಲೆಸಿರುವ ಘಿಸಾಡಿ ಸಮುದಾಯಗಳಿಗೆ ಸಂದರ್ಶನ ಕೊಟ್ಟಾಗ, ಅವರು ಬಹಳ ಪ್ರೀತಿ ವಿಶ್ವಾಸದಿಂದ ಅಲ್ಲಿಯ ಅರಣ್ಯ ಪ್ರದೇಶದ ಪರಿಚಯ ಹಾಗೂ ಅಲ್ಲಿ ಇರುವ ನದಿ, ನಾಲೆ, ಕೆರೆ-ಕಟ್ಟೆಗಳಿಗೆ ಕರೆದುಕೊಂಡು ಹೋಗಿ ವಿವರಣೆ ನೀಡಿದ್ದರು. ಅಲ್ಲದೆ ಬೇಟೆಯ ವಿಧಾನಗಳು ಮತ್ತು ಕೆರೆಯಲ್ಲಿ ಮೀನುಗಳನ್ನು ಹಿಡಿಯುವ ಕಲೆಗಳನ್ನು ತೋರಿಸಿದರು.

ಇವರು ಸದಾಕಾಲ ಜೀವನಾವಶ್ಯಕತೆಯ ಬದುಕಿನ ಪರಿಸರಗಳನ್ನು ಹುಡಿಕಿಕೊಂಡು ಅಲೆಮಾರಿಗಳಾಗಿರುವುದರಿಂದ, ಮಾಹಿತಿ ಸಂಗ್ರಹಣೆಯ ಸಂದರ್ಭದಲ್ಲಿ ಇವರನ್ನು ಸುಲಭವಾಗಿ ಸಂಪರ್ಕಿಸಲು ಸಾಧ್ಯವಾಗಲಿಲ್ಲ. ಇದರಿಂದ ತುಂಬಾ ಕಷ್ಟಗಳನ್ನು ಎದುರಿಸಬೇಕಾಯಿತು. ಇವರು ಮೊದಲು ನನಗೆ ವಿಶ್ವಾಸ ಮಾಡುತ್ತಿರಲಿಲ್ಲ. ಕೊನೆಯಲ್ಲಿ ನನ್ನ ಹತ್ತಿರ ಇರುವ ಇವರ ಛಾಯಾಚಿತ್ರಗಳು ಮತ್ತು ಕೇಲವರ ಪರಿಚಯ ಹೇಳಿದಾಗ ವಿಶ್ವಾಸದಿಂದ ವರ್ತಿಸಲು ಪ್ರಾರಂಭಿಸಿದರು.

ಘಿಸಾಡಿ ಸಮುದಾಯದಲ್ಲಿ ತಮ್ಮ ಸಮಾಜದವರಲ್ಲಿ ನಡೆಯುವ ಸಾಮಾಜಿಕ ಧಾರ್ಮಿಕ ಸಮಾರಂಭಗಳಿಗೆ ಆಹ್ವಾನ ಬಂದರೆ ತಪ್ಪದೆ ಅಂತಹ ಸಮಾರಂಭಗಳಲ್ಲಿ ಎಲ್ಲರೂ ಭಾಗವಹಿಸುವರು. ಇವರು ತಮ್ಮ ಸಮುದಾಯದ ವಿಧಿ-ವಿಧಾನಗಳಿಗೆ ಬದ್ಧರಾಗಿ ಸದಾಕಾಲ ಇಂತಹ ಸಭೆ ಸಮಾರಂಭಗಳಿಗೆ ಮಹತ್ವ ನೀಡುವುದರಿಂದ, ನಾನು ಇಂತಹ ಸಂದರ್ಭಗಳನ್ನು ಎದುರು ನೋಡುತ್ತಿದ್ದೆ, ಆ ಸಮಾರಂಭಗಳು ನಡೆಯುವಾಗ ನಾನು ಕ್ಷೇತ್ರದಲ್ಲಿ ಎಲ್ಲೇ ಇದ್ದರೂ ಹಾಜರಾಗುತ್ತಿದ್ದೆ, ಅಲ್ಲದೆ ಇವರು ಕೂಡಾ ನನ್ನನ್ನು ದೂರವಾಣಿಯ ಮುಖಾಂತರ ಕರೆಸಿಕೊಳ್ಳು ತ್ತಿದ್ದರು. ನಾನು ಕೇಳುವ ಎಲ್ಲ ಪ್ರಶ್ನೆಗಳಿಗೆ ಸರಳವಾಗಿ ತಮ್ಮ ವಿಧಿ-ವಿಧಾನಗಳ ವಿವರಣೆ ನೀಡಿ ಸಹಕರಿಸುತ್ತಿದ್ದರು.

ಮೊದಮೊದಲಿಗೆ ಆರಂಭದಲ್ಲಿ ಇವರಿಂದ ನನ್ನ ಅಧ್ಯಯನಕ್ಕೆ ಹೆಚ್ಚು ಸಹಕಾರ ದೊರೆಯ ಲಿಲ್ಲ. ಹೊರಗಿನವನಾದ ನನ್ನನ್ನು ಸಂಶಯದಿಂದಲೇ ಕಾಣುತ್ತಿದ್ದರು. ಇವರ ವಸತಿ ನೆಲೆಗಳಿಗೆ ಹೋದಾಗಲೆಲ್ಲ ಛಾಯಾಚಿತ್ರಗಳನ್ನು ತೆಗೆಯುತ್ತಿದ್ದೆ. ಈ ಚಿತ್ರಗಳನ್ನು ತೋರಿಸಿ ಇವರ ವಿಶ್ವಾಸವನ್ನು ಕ್ರಮೇಣ ಸಂಪಾದಿಸಿಕೊಂಡೆ. ಈ ಛಾಯಾಚಿತ್ರಗಳನ್ನು ನೋಡಿ ಸಂತೋಷಪಟ್ಟು "ನಂದು ಒಂದು ಫೋಟೋ ತೆಗೆಯಿರಿ" ಎಂದು ಹಿಂದೆ ಬಿಳುತ್ತಿದ್ದರು. ಹಾಗೇ "ನಮಗೊಂದು ಕೊಡಿ" ಎಂದು ಕೇಳುತ್ತಿದ್ದರು. ಇವರ ವಿಶ್ವಾಸ ಸಂಪಾದನೆಗಾಗಿ ನಾನು ನೂರಕ್ಕೆ ಒಬ್ಬರಿಗೆ ಒಂದು ಫೋಟೋ ಕೊಡುತ್ತಿದ್ದೆ. ಇದೇ ರೀತಿ ಇವರ ಸಂಭಾಷಣೆಗಳನ್ನು, ಹಾಡುಗಳನ್ನು ಟೇಪ್‌ರೆಕಾರ್ಡ್‌ನಲ್ಲಿ ಧ್ವನಿ ಮುದ್ರಿಸಿಕೊಂಡಾಗ ಮುದ್ರಿತ ಧ್ವನಿಯನ್ನು ಪುನಃ ಪುನಃ ಕೇಳಿ ತಮ್ಮಲ್ಲಿಯೇ ಹಾಸ್ಯ ಮಾಡಿ ನಗುತ್ತಿದ್ದರು. ಇವರ ಅಪೂರ್ವವಾದ ವಿವಿಧ ಛಾಯಾಚಿತ್ರಗಳು ಧ್ವನಿ ಮುದ್ರಿಕೆಗಳು ನನ್ನಲ್ಲಿವೆ.

ನನ್ನ ಅಧ್ಯಯನದ ಕ್ಷೇತ್ರಕಾರ್ಯ ಸಂದರ್ಭದಲ್ಲಿ ಘಿಸಾಡಿ ಸಮುದಾಯದ ಎಲ್ಲ ವಯಸ್ಸಿನ

ಸ್ತ್ರೀ-ಪುರುಷರು ಪ್ರೀತಿ ವಿಶ್ವಾಸದಿಂದ ಮಾಹಿತಿಗಳನ್ನು ಒದಗಿಸುತ್ತಿದ್ದರು. ಹಾಗಾಗಿ ನನ್ನ ಅಧ್ಯಯನಕ್ಕೆ ಸೂಕ್ತವಾದ ಮಾಹಿತಿಗಳನ್ನು ಒದಗಿಸಬಲ್ಲಂಥ ವಿಷಯ ವಿಚಾರಗಳಿಗೆ ತಕ್ಕಂತೆ ಲಿಂಗ, ವಯಸ್ಸುಗಳ ಆಧಾರದ ಮೇಲೆ ವಕ್ತೃಗಳನ್ನು ಆಯ್ಕೆ ಮಾಡಿಕೊಂಡಿರುವೆ. ಈ ಸಂದರ್ಭದಲ್ಲಿ ಮಾಹಿತಿ ಒದಗಿಸುವಲ್ಲಿ ಕಿರಿಯ ಮತ್ತು ವಯಸ್ಕರಿಗಿಂತ ವೃದ್ಧರು ನನಗೆ ತುಂಬಾ ಆತ್ಮೀಯರಾದರು. ಸದಾ ನನ್ನೊಡನೆ ಇದ್ದು ನನಗೆ ಬೇಕಾಗುವ ಮಾಹಿತಿಯನ್ನು ಒದಗಿಸಿಕೊಡುವಲ್ಲಿ ಇವರು ಇತರರಿಗಿಂತ ಹೆಚ್ಚು ಸಹಕರಿಸುತ್ತಿದ್ದರು. ಇವರು ಸದಾ ಕಾಲ ತಮ್ಮ ಗುಡಾರಗಳ ನೆಲೆದಾಣಗಳಲ್ಲೇ ಇರುತ್ತಿದ್ದರಿಂದ ಇವರನ್ನು ಭೇಟಿ ಮಾಡುವುದು ನನಗೆ ಸುಲಭವಾಗಿದರಿಂದ ಹೆಚ್ಚಿನ ಮಾಹಿತಿಯನ್ನು ಇವರಿಂದಲೇ ಪಡೆದಿದ್ದೇನೆ. ಹಾಗೆಂದು ಮಧ್ಯವಯಸ್ಕರನ್ನು, ಚಿಕ್ಕವರನ್ನು ಸಂದರ್ಶನ ಮಾಡಲಿಲ್ಲವೆಂದು ಅರ್ಥವಲ್ಲ. ವೃದ್ಧರಿಗೆ ಹೆಚ್ಚಿನ ಕೆಲಸದ ಭಾರ ಇರಲಿಲ್ಲವಾದ್ದರಿಂದ ಇವರು ತಮ್ಮ ಕಮ್ಮಾರಿಕೆ ಕೆಲಸ ನಡೆದಾಗ ಕುಲುಮೆಯ ತಿದಿ ಊದುವುದರಲ್ಲಿ ಮಾತ್ರ ತೊಡಗಿಕೊಂಡಿರುತ್ತಿದ್ದರು. ಆದರೂ ಕೂಡಾ ವೃದ್ಧರಿಗೆ ಕೆಲಸದ ಭಾರ ಕಡಿಮೆ ಎಂಬುದೇ ಇಲ್ಲಿ ಗಮನಿಸಬೇಕಾದ ಅಂಶ.

ಸೂತಕ, ಮುಟ್ಟು, ಪ್ರಸೂತಿ ಮುಂತಾದ ವಿಷಯಗಳ ಬಗ್ಗೆ ಸ್ತ್ರೀ-ಪುರುಷರು ಸಹಕಾರ ನೀಡಿದ್ದು ಸಂತೋಷದ ಸಂಗತಿ. ಹೆಂಗಸರು ಕೂಡಾ ಕೆಲವೊಮ್ಮೆ ಯಾವುದೇ ಮುಜುಗರ ತೋರದೆ ತಮಗೆ ತಿಳಿದಂತಹ ಮಾಹಿತಿಗಳನ್ನು ನನಗೆ ಒದಗಿಸಿಕೊಟ್ಟಿದ್ದಾರೆ. ಇದೆಲ್ಲ ಆದ ಮೇಲೆ ಒಂದು ಪರಿಸರದ ನೆಲೆಯ ವಕ್ತೃಗಳಿಂದ ಪಡೆದ ಮಾಹಿತಿಗಳನ್ನು ಮತ್ತೊಂದು ಪರಿಸರದ ನೆಲೆಯ ವಕ್ತೃಗಳು ಹೇಳಿದ ಮಾಹಿತಿಯೊಂದಿಗೆ ತಾಳೆ ನೋಡಲಾಯಿತು.

ಘಿಸಾಡಿ ಸಮುದಾಯದ ನೆಲೆಗಳಿಗೆ ಭೇಟಿ ನೀಡಿದಾಗಲೆಲ್ಲ ಇವರೊಡನೆ ಇವರ ನೆಲೆಗಳಲ್ಲಿರುತ್ತಿದ್ದೆ ಇದರಿಂದ ಇವರ ನಿಕಟ ಸ್ನೇಹ ಬೆಳೆಸಿಕೊಳ್ಳಲು ಸಾಧ್ಯವಾಯಿತು. ಹೊಸಬರನ್ನು ಕಂಡರೆ, ಘಿಸಾಡಿಗಳದ್ದು ಸಂಕೋಚ ಪ್ರವೃತ್ತಿ ಮತ್ತು ಮೊದಲಿಗೆ ಅನುಮಾನದ ದೃಷ್ಟಿ. ನಂಬಿಕೆಗೆ ಒಲಿದರೆ ಇವರು ಅತ್ಯಂತ ಸ್ನೇಹಪರರು ಹಾಗೂ ವಿಶ್ವಾಸಪ್ರಿಯರು. ಯಾವುದೇ ಮುಚ್ಚುಮರೆಗಳಿಲ್ಲದೆ ಮಾತನಾಡುವ ಬಿಚ್ಚು ಮನಸ್ಸಿನವರು. ಹೀಗೆ ನಾನು ಘಿಸಾಡಿ ಸಮುದಾಯದವರ ಒಳ-ಹೊರ ಚಲನವಲನಗಳನ್ನು ಗಮನಿಸಿ ಇವರ ಬಗ್ಗೆ ಹೆಚ್ಚಿನ ವಿಷಯ ಸಂಗ್ರಹಿಸಲು ಸಾಧ್ಯವಾಯಿತು. ಪ್ರಸ್ತುತ ಅಧ್ಯಯನವು ಸಮಾಜಶಾಸ್ತ್ರ, ಅರ್ಥಶಾಸ್ತ್ರ, ಮಾನವಶಾಸ್ತ್ರ, ಜಾನಪದ, ಅಭಿವೃದ್ಧಿ ಅಧ್ಯಯನದ ಅಧ್ಯಯನಕಾರರಿಗೆ ಆಕರವಾಗಬಹುದೆಂದು ನಂಬಲಾಗಿದೆ. ಗುಲ್ಬರ್ಗಾ ಜಿಲ್ಲೆಯ ಘಿಸಾಡಿ ಸಮುದಾಯದ ಸಾಮಾಜಿಕ ಅಧ್ಯಯನವು ನನ್ನ ಪ್ರಮಾಣಿಕ ಪ್ರಯತ್ನವಾಗಿದೆ. ನನ್ನ ಗಮನಕ್ಕೆ ಬಾರದೇ ಇರುವ ವಿಷಯಗಳು ಮುಂದಿನ ಅಧ್ಯಯನಕಾರರ ಅಧ್ಯಯನಕ್ಕೆ ಬಿಡಲಾಗಿದೆ.

ಆಧಾರಗಳು

೧. ಭೈರಪ್ಪ ಕೆ., *ಭಾರತೀಯ ಸಮಾಜದ ಅಧ್ಯಯನ,* ಸಿದ್ಧಲಿಂಗೇಶ್ವರ ಪ್ರಕಾಶನ, ಗುಲ್ಬರ್ಗಾ, ೨೦೦೩, ಪು. ೩

೨. ಕುಮಾರ ಆರ್.ಬಿ., *ಮುದ್ದೆಕಂಬಾರರು,* ಸಾರಾ ಎಂಟರಪ್ರೆಸಸ್, ಬೆಂಗಳೂರು, ೨೦೦೪, ಪು. ೫

ಅಧ್ಯಾಯ - ೨

ಗುಲ್ಬರ್ಗಾ ಜಿಲ್ಲೆಯ ಸಂಕ್ಷಿಪ್ತ ಪರಿಚಯ

೧. ಹೆಸರಿನ ಮೂಲ

೨. ವಿಸ್ತೀರ್ಣ ಮತ್ತು ಜನಸಂಖ್ಯೆ

೩. ಇತಿಹಾಸ ಪೂರ್ವಕಾಲದ ಹಿನ್ನೆಲೆ

೪. ಪೌರಾಣಿಕ ಹಿನ್ನೆಲೆ

೫. ಐತಿಹಾಸಿಕ ಹಿನ್ನೆಲೆ

೬. ವಾಯುಗುಣ ಹವಾಮಾನ

೭. ಧರ್ಮಗಳು

೮. ಪ್ರಮುಖ ಧಾರ್ಮಿಕ ಸಂಸ್ಥೆಗಳು

೯. ಪ್ರಮುಖ ಮಠಗಳು

ಗುಲ್ಬರ್ಗಾ ಜಿಲ್ಲೆಯ ಸಂಕ್ಷಿಪ್ತ ಪರಿಚಯ

ಹೆಸರಿನ ಮೂಲ

'ಗುಲ್ಬರ್ಗಾ'ವನ್ನು ಕಲಬುರ್ಗಿ, ಕಲ್ಬುರ್ಗಿ ಮತ್ತು ಗುಲ್ಬರ್ಗ ಎಂಬ ಪರ್ಯಾಯ ಹೆಸರುಗಳಿಂದ ಗುರುತಿಸಲಾಗುತ್ತದೆ. ಇದು ಐತಿಹಾಸಿಕವಾಗಿ ಸುಮಾರು ಕ್ರಿ.ಶ. ೧೨-೧೩ನೇ ಶತಮಾನದ ಚಿನಮುಳ್ಳಿ ಶಿಲಾಶಾಸನದಲ್ಲಿ 'ಕಲಂಬರಿಗೆ' ಎಂದು ಉಲ್ಲೇಖಿತಗೊಂಡಿದ್ದು, ಬೀದರ್ ಜಿಲ್ಲೆಯ ಶಾಸನ ಒಂದರಲ್ಲೂ ಇದೇ ರೂಪ ದಾಖಲಾಗಿದ್ದು, ಇವು ಗುಲ್ಬರ್ಗಾದ ಪ್ರಾಚೀನ ರೂಪಗಳಾಗಿವೆ. ಕ್ರಿ.ಶ. ೧೩೬೭ರ ಬೇಲೂರು (ಹಾಸನ ಜಿಲ್ಲೆ) ಹಾಗೂ ಕ್ರಿ.ಶ. ೧೫೩೭ರ ಶಿರವಾಳದ ಶಿಲಾಶಾಸನಗಳಲ್ಲಿ ಇದು ಕ್ರಮವಾಗಿ 'ಕಲುಬರಗೆ' ಹಾಗೂ 'ಕಲಬುರಿಗೆ' ಎಂದು ದಾಖಲಾಗಿದೆ. ವಿಜಯನಗರಕ್ಕೆ ಬಂದಿದ್ದ ಪರ್ಷಿಯನ್ ರಾಯಭಾರಿ ರಝಾಕನು ಇದನ್ನು 'ಕಲಬುರ್ಗ್' ಎಂದೇ ಹೇಳಿದ್ದಾನೆ.

ಗುಲ್ಬರ್ಗಾ ಎಂಬ ನಾಮಪದದ ನಿಷ್ಪತ್ತಿಗೆ ಸಂಬಂಧಿಸಿದಂತೆ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯವಿದೆ. ಗುಲ್ಬರ್ಗಾ ಎಂಬುದು ಹೆಚ್ಚು ಕಡಿಮೆ 'ಕಲಬುರಗಿ' ಪದದ ಫಾರಸೀಕರಣವಾಗಿದ್ದು, ಫಾರಸಿಯಲ್ಲಿ 'ಗುಲ್' ಎಂದರೆ ಹೂವು 'ಬರ್ಗ' ಎಂದರೆ ಎಲೆ ಎಂಬ ಅರ್ಥವಿದೆ. "ಕಲಬುರಗಿ" ಎಂಬ ಅಚ್ಚ ಕನ್ನಡ ರೂಪವೇ ಮಹಮದೀಯರಿಗೆ ಮೊದಮೊದಲು ಕಲಬುರ್ಗಿ ಎಂದನಿಸಿ, ಮುಂದೆ ಅದೇ ಗುಲ್ಬರ್ಗಾ ಎಂದಾದಂತೆ ತೋರುತ್ತದೆ. ಒಟ್ಟಿನಲ್ಲಿ 'ಕಲಬುರಗಿ' ಎಂಬ ಹೆಸರು ಕ್ರಿ.ಶ. ೧೬ನೇ ಶತಮಾನದವರೆಗೂ ರೂಢಿಯಲ್ಲಿದ್ದು. ಮುಸ್ಲಿಮರ ಆಡಳಿತದ ಪ್ರಭಾವದಿಂದಾಗಿ ನಂತರದಲ್ಲಿ "ಗುಲ್ಬರ್ಗಾ" ಎಂಬ ರೂಪವನ್ನು ಪಡೆದಿದೆಯೆಂದು ಅಭಿಪ್ರಾಯಪಡಲಾಗಿದೆ. ಆದರೂ 'ಕಲ್ಬುರ್ಗಿ' ಎಂಬ ಹೆಸರೂ ಹೆಚ್ಚಿನ ಪ್ರಮಾಣದಲ್ಲಿ ಪ್ರಚಲಿತದಲ್ಲಿದೆ.

೨. ವಿಸ್ತೀರ್ಣ (ವ್ಯಾಪ್ತಿ) ಮತ್ತು ಜನಸಂಖ್ಯೆ

ಗುಲ್ಬರ್ಗಾ ಜಿಲ್ಲೆಯ ಒಟ್ಟು ಭೌಗೋಳಿಕ ಪ್ರದೇಶವು ೨೦೦೧ರ ಜನಗಣತಿಯ ವರದಿಯಂತೆ ೧೬,೨೨೪ ಚ.ಕಿ.ಮೀ. ಇದ್ದು ಇದು ರಾಜ್ಯದ ಶೇ. ೮.೪೬ರಷ್ಟು ಪ್ರದೇಶವನ್ನು ಒಳಗೊಂಡಿದೆ. ಪ್ರಸ್ತುತ ಸಂದರ್ಭದಲ್ಲಿ ಗುಲ್ಬರ್ಗಾ ಜಿಲ್ಲೆಯು ಕರ್ನಾಟಕದಲ್ಲಿಯೇ ಹೆಚ್ಚಿನ ಭೌಗೋಳಿಕ ವ್ಯಾಪ್ತಿ

ಹೊಂದಿದ ಜಿಲ್ಲೆಯಾಗಿದೆ. ಇಂದು ಇಲ್ಲಿ ಸುಮಾರು ೧೩೭೧ ಗ್ರಾಮಗಳು, ೧೭ ಪಟ್ಟಣಗಳು, ೪೮ ಹೋಬಳಿಗಳು ಮತ್ತು ೩೩೭ ಗ್ರಾಮಪಂಚಾಯತ್ತಿಗಳಿದ್ದು, ೧೦ ತಾಲ್ಲೂಕುಗಳಲ್ಲಿ ವಿಭಾಗಿಸಲ್ಪಟ್ಟಿದೆ. ಈ ಜಿಲ್ಲೆಯು ಭೌಗೋಳಿಕವಾಗಿ ಕರ್ನಾಟಕದ ಈಶಾನ್ಯ ಭಾಗದಲ್ಲಿ ಎತ್ತರವಾದ ವ್ಯಾಪಕ ಪ್ರದೇಶದಲ್ಲಿದೆ. ಮಹಾರಾಷ್ಟ್ರ ಹಾಗೂ ಆಂಧ್ರಪ್ರದೇಶ ರಾಜ್ಯಗಳ ಎಲ್ಲೆಗಳಿಂದ ಸುತ್ತುವರೆದಿದ್ದು. ಗುಲ್ಬರ್ಗಾ ಜಿಲ್ಲೆಯ ಉತ್ತರಕ್ಕೆ ಬೀದರ್ ಹಾಗೂ ದಕ್ಷಿಣಕ್ಕೆ ರಾಯಚೂರು ಜಿಲ್ಲೆಗಳಿವೆ. ಪಶ್ಚಿಮದ ಆಳಂದ, ಅಫಜಲ್‌ಪುರ ತಾಲ್ಲೂಕುಗಳಿಗೆ ಮಹಾರಾಷ್ಟ್ರದ ಸೋಲಾಪುರ ಜಿಲ್ಲೆಯ ಉಮರ್ಗಾ, ಸೋಲಾಪುರ, ಅಕ್ಕಲಕೋಟ್ ತಾಲ್ಲೂಕುಗಳ ಭಾಗಗಳು ಹತ್ತಿಕೊಂಡಿವೆ. ಮರಾಠಿಗರ ಹೆಚ್ಚಿನ ಪ್ರಭಾವದ ಭಾಗವಾಗಿದ್ದರೂ ಮರಾಠಿಗರ ಪ್ರಭಾವವೇನು ಕಾಣಿಸುವುದಿಲ್ಲ. ಆದರೆ ಪೂರ್ವದ ಚಿಂಚೋಳಿ, ಸೇಡಂ ಹಾಗೂ ಯಾದಗಿರಿ ತಾಲ್ಲೂಕುಗಳಿಗೆ ಆಂಧ್ರಪ್ರದೇಶದ ತಾಂಡೂರು, ಕೊಡಂಗಲ್, ನಾರಾಯಣಪೇಟೆ ಭಾಗಗಳು ಹತ್ತಿಕೊಂಡಿದ್ದು ಇಲ್ಲಿ ತೆಲುಗಿನ ಗಾಢ ಪ್ರಭಾವ ಎದ್ದು ಕಾಣಿಸುತ್ತದೆ. ಪಶ್ಚಿಮದ ಇನ್ನುಳಿದ ಅರ್ಧಭಾಗದಲ್ಲಿ ಬಿಜಾಪುರ ಜಿಲ್ಲೆಯಿಂದ ಸುತ್ತುವರೆದಿದ್ದು ಇಲ್ಲಿ ಅನ್ಯ ಭಾಷಿಕರ ಪ್ರಭಾವ ಕಂಡುಬರುವುದಿಲ್ಲ. ಪ್ರಸ್ತುತ ಘಿಸಾಡಿ ಸಮುದಾಯವು ಈ ಜಿಲ್ಲೆಯಲ್ಲಿ ಮತ್ತು ಇಲ್ಲಿನ ಗಡಿ ಪ್ರದೇಶದ ಗ್ರಾಮಗಳಲ್ಲಿ ಸಹ ನೆಲೆಸಿದು ತಮ್ಮ ಮಾತೃಭಾಷೆಯ ಜೊತೆಗೆ ಆಯಾ ಪ್ರದೇಶದ ಭಾಷೆ ಬಲ್ಲವರಾಗಿದ್ದಾರೆ. ಅಂದರೆ ಮರಾಠಿ, ಕನ್ನಡ, ತೆಲುಗು ಭಾಷೆಗಳಲ್ಲಿ ನಿರ್ಗಳವಾಗಿ ಮಾತನ್ನಾಡುತ್ತಾರೆ.

ಜನಸಂಖ್ಯೆ : ೨೦೦೧ರ ಜನಗಣತಿಯ ವರದಿಯ ಪ್ರಕಾರ ಜಿಲ್ಲೆಯಲ್ಲಿ ಒಟ್ಟು ೩,೧೩೦,೯೨೨ ಜನರು ನೆಲೆಸಿದ್ದಾರೆ, ಇದರಲ್ಲಿ ೧,೫೯೨,೭೮೯ ಜನ ಪುರುಷರು ಹಾಗೂ ೧,೫೩೮,೧೩೩ ಮಹಿಳೆಯರು ಇರುವರು. ಇದರಲ್ಲಿ ೨,೨೭೮,೩೦೧ ೧,೧೫೨,೩೪೩ ಪುರುಷ, ೧,೧೨೫,೯೫೮ ಸ್ತ್ರೀ ಜನರು ಗ್ರಾಮವಾಸಿಗಳು ಹಾಗೂ ೮,೫೨,೬೨೧ ೪೪೦,೪೪೬ ಪುರುಷ, ೪೧೨,೧೭೫ ಸ್ತ್ರೀ ಜನರು ನಗರವಾಸಿಗಳಾಗಿದ್ದಾರೆ. ಜನಸಾಂದ್ರತೆ ಪ್ರಮಾಣ ಪ್ರತಿ ಚ.ಕಿ.ಮೀ. ಪ್ರದೇಶದಲ್ಲಿ ೧೯೩ ಜನರು ನೆಲೆಸಿದಂತಾಗಿದೆ. ಲಿಂಗಾನುಪಾತವು ಪ್ರತಿ ಸಾವಿರ ಗಂಡಸರಿಗೆ ೯೬೬ರಷ್ಟು ಜನ ಹೆಂಗಸರಿದ್ದಾರೆ. ಇದರಲ್ಲಿ ೩೬೫, ೯೭೪ ಜನ ಪುರುಷರು ಹಾಗೂ ೩೫೧,೬೨೧ ಜನ ಮಹಿಳೆಯರು ಪರಿಶಿಷ್ಟ ಜಾತಿಗೆ ಸೇರಿದವರು ಮತ್ತು ೭೭,೯೨೬ ಜನ ಪುರುಷರು ಹಾಗೂ ೭೬,೨೭೯ ಜನ ಮಹಿಳೆಯರು ಪರಿಶಿಷ್ಟ ಪಂಗಡದ ಗುಂಪಿಗೆ ಸೇರಿದವರಾಗಿದ್ದಾರೆ. ಒಟ್ಟಾರೆ ಈ ಜಿಲ್ಲೆಯ ಜನಸಂಖ್ಯೆಯಲ್ಲಿ ಶೇಕಡಾ ೨೨.೯ರಷ್ಟು ಪರಿಶಿಷ್ಟ ಜಾತಿ ಮತ್ತು ಶೇ. ೪.೯ ರಷ್ಟು ಪರಿಶಿಷ್ಟ ಪಂಗಡದ ಜನಸಂಖ್ಯೆ ಪ್ರಮಾಣ ಕಂಡುಬರುವುದು. ಇಂದು ಈ ಜಿಲ್ಲೆಯ ಸಾಕ್ಷರತೆಯ ಪ್ರಮಾಣವು ಶೇ. ೫೦ ರಷ್ಟು ಇರುವುದು. ಜಿಲ್ಲೆಯನ್ನು ಆಡಳಿತದ ದೃಷ್ಟಿಯಿಂದ ಗುಲ್ಬರ್ಗ, ಸೇಡಂ ಮತ್ತು ಯಾದಗಿರಿ ಎಂದು ಮೂರು ಕಂದಾಯ ಉಪವಿಭಾಗಳನ್ನಾಗಿ ವಿಭಜಿಸಲಾಗಿದೆ. ಮೂರು ಕಂದಾಯ ಉಪವಿಭಾಗಗಳನ್ನಾಗಿ ವಿಭಜಿಸಲಾಗಿದೆ. ಇದರಲ್ಲಿ ಪ್ರಸ್ತುತ ಘಿಸಾಡಿ ಸಮುದಾಯದ ಕ್ಷೇತ್ರಕಾರ್ಯ ಸಂದರ್ಭದಲ್ಲಿ ಕಂಡುಕೊಂಡ ಅಂಕಿಅಂಶಗಳು ಈ ರೀತಿಯಾಗಿವೆ.

ಘಿಸಾಡಿ ಸಮುದಾಯವು ಗುಲ್ಬರ್ಗಾ ಜಿಲ್ಲೆಯ ಒಟ್ಟು ೧೦ ತಾಲೂಕುಗಳ ಪೈಕಿ, ಸುರಪುರು ತಾಲೂಕು ಪ್ರದೇಶವನ್ನು ಹೊರತುಪಡಿಸಿ ಇಂದು ಒಟ್ಟು ೯ ತಾಲೂಕಾ ಪ್ರದೇಶದಲ್ಲಿ ನೆಲೆಸಿದ್ದಾರೆ. ಜಿಲ್ಲೆಯಲ್ಲಿನ ಸುಮಾರು ೯೫ ಪ್ರಮುಖ ಗ್ರಾಮ, ಪಟ್ಟಣ, ನಗರ ಪ್ರದೇಶದಲ್ಲಿ ನೆಲೆಸಿದ್ದಾರೆ. ಇದರಲ್ಲಿ ಒಟ್ಟು ೧೬೩೪ ಜನರು ನೆಲೆಸಿದ್ದು, ೮೨೧ ಜನ ಪುರುಷರು ಹಾಗೂ ೮೧೩ ಜನ ಮಹಿಳೆಯರು ಇರುವರು, ಜನಸಂಖ್ಯೆಯಲ್ಲೆ ಪುರುಷ ಮತ್ತು ಮಹಿಳೆಯರಲ್ಲಿ ಹೆಚ್ಚಿನ ಏರುಪೇರುಗಳು ಕಂಡಬರುವುದಿಲ್ಲ. ಈ ಜಿಲ್ಲೆಯ ಒಟ್ಟು ಜನಸಂಖ್ಯೆಯಲ್ಲಿ ಇವರ ಪಾಲು ಕೇವಲ ಬೆರಳಿಣಿಕೆಯಷ್ಟೇ ಮಾತ್ರ ಇರುವುದು.

೩. ಇತಿಹಾಸ ಪೂರ್ವಕಾಲದ ಹಿನ್ನೆಲೆ

ಗುಲ್ಬರ್ಗಾ ಜಿಲ್ಲೆಯ ಪ್ರದೇಶವು ನೈಸರ್ಗಿಕವಾಗಿ ಸಂಪದ್ಭರಿತವಾಗಿದ್ದು. ಭೀಮಾ ನದಿಯು ವಾಯುವ್ಯ - ಆಗ್ನೆಯ ದಿಕ್ಕಿನಲ್ಲಿ ಜಿಲ್ಲೆಯ ಮಧ್ಯದಲ್ಲಿ ಹರಿಯುತ್ತಿದ್ದು, ಇದರ ಉಪನದಿಗಳು ಜಿಲ್ಲೆಯನ್ನು ಆವರಿಸಿವೆ. ಈ ನದಿಯ ಉತ್ತರ ಭಾಗವು ಫಲವತ್ತಾದ ಕರಿಮಣ್ಣಿನಿಂದ ಕೂಡಿದೆ. ದಕ್ಷಿಣ ಭಾಗದಲ್ಲಿ ವಿವಿಧ ಪ್ರಕಾರಗಳ ಕಲ್ಲು ಮತ್ತು ಮರಳು ಪ್ರದೇಶಗಳಿಂದ ಕೂಡಿದ, ಸಣ್ಣ-ಪುಟ್ಟ ಬೆಟ್ಟಗಳ ಸಾಲುಗಳಿಂದ ತುಂಬಿ ಹೋಗಿವೆ. ಅಲ್ಲಲ್ಲಿ ತಾಮ್ರ, ಕಬ್ಬಿಣ, ಕಂಚು ಮೊದಲಾದ ಖನಿಜ ಸಂಪತ್ತು ಗಣನೀಯ ಪ್ರಮಾಣದಲ್ಲಿವೆ. ಆದ್ದರಿಂದಲೇ ಬಹಳ ಪ್ರಾಚೀನ ಕಾಲದಿಂದಲೇ ಈ ಪ್ರದೇಶವು ಜನರ ಆವಾಸ ಸ್ಥಾನವಾಗಿತ್ತು.

೧೯ನೇ ಶತಮಾನದ ಉತ್ತರಾರ್ಧದ ದಶಕಗಳಲ್ಲಿ 'ರಾಬರ್ಟ್ ಬ್ರೂಸ್‌ಫೂಟ್' ಎಂಬ ಭೂ-ವಿಜ್ಞಾನಿಯು ಸುರಪುರ ತಾಲ್ಲೂಕಿನ ಕೃಷ್ಣಾನದಿಯ ದಂಡೆಯ ಮೇಲೆ ಇರುವ ಎಡೆಹಳ್ಳಿಯಲ್ಲಿ ಆದಿ ಹಳೇಶಿಲಾಯುಗದ ಕಲ್ಲಿನ ಕೊಡಲಿಗಳನ್ನು ಪತ್ತೆ ಮಾಡಿದ್ದು. ಇವುಗಳು ಭೀಮಾ ಸ್ಥಳದ ಕಲ್ಲುಗಳ ಪ್ರಕಾರಗಳಲ್ಲೊಂದಾದ ಶೇರಿ ಕಲ್ಲು ಅಥವಾ ಶಾಹಾಬಾದ್ ಕಲ್ಲಿನಿಂದ ಮಾಡಿದ್ದಾಗಿದೆ. ಎಂದು ಅಭಿಪ್ರಾಯ ಪಟ್ಟಿದ್ದಾರೆ. ಪುರಾತತ್ವಶಾಸ್ತ್ರಜ್ಞರು ಆದಿ ಹಳೆಶಿಲಾಯುಗದ ಮಾನವರಿಗೆ ತನ್ನ ಉಪಕರಣಗಳನ್ನು ಮಾಡಿಕೊಳ್ಳಲು ಈ ಕಲ್ಲು ಅಷ್ಟು ಯೋಗ್ಯವಲ್ಲದ್ದರಿಂದ ಎಡೆಹಳ್ಳಿಯಲ್ಲಿ ದೊರೆತ ಉಪಕರಣಗಳ ಬಗೆಗೆ ಅಷ್ಟಾಗಿ ಗಮನ ಹರಿಸಲಿಲ್ಲ. ಅಲ್ಲದೇ ೧೯೭೦ರ ದಶಕದ ಆದಿ ಭಾಗದಲ್ಲಿ ದಖನ್ ಸ್ನಾತಕೋತ್ತರ ಮತ್ತು ಸಂಶೋಧನಾ ಸಂಸ್ಥೆಯ ಕೆ. ಪೆದ್ದಯ್ಯನವರು ಬ್ರೂಸ್‌ಫೂಟ್‌ರವರ ಶೋಧನೆಯನ್ನು ಗಂಭೀರವಾಗಿ ಗಮನಿಸಿ ಮತ್ತೆ ಈ ಪ್ರದೇಶದಲ್ಲಿ ಪುರಾತತ್ವ ಅನ್ವೇಷಣೆ ಕೈಗೊಂಡರು. ೧೯೬೦ರ ದಶಕದಲ್ಲಿ ಈ ವಿದ್ವಾಂಸರು "ಶೋರಾಪುರ ಸಂಗಮ ಪ್ರದೇಶದ ಪ್ರಾಗ್ ಇತಿಹಾಸ ಮತ್ತು ಪೂರ್ವಭಾವಿ ಇತಿಹಾಸ ಸಂಸ್ಕೃತಿಗಳು ಎಂಬ ವಿಷಯವನ್ನು ಅಧ್ಯಯನಕ್ಕೆ ಆರಿಸಿಕೊಂಡಿದ್ದರು. ಏಕೆಂದರೆ ಹಿಂದೆ ೧೯ನೇ ಶತಮಾನದ ಮಧ್ಯಭಾಗದಲ್ಲಿ ಕರ್ನಲ್ ಮೆಡೋಸ್ ಟೈಲರ್ ಅವರು, ಅನಂತರ ಕಬ್ಬಿಣ ಯುಗದ ಬೃಹತ್ ಶಿಲಾ ಸಂಸ್ಕೃತಿಯ ಅವಶೇಷಗಳೆಂದು ಗುರುತಿಸಲಾದ ಕೆಲವು ಮಹತ್ವದ ಕಲ್ಲು ವೃತ್ತಗಳ ಮತ್ತು ಕಲ್ಮನೆಗಳಿರುವ ನಿವೇಶನಗಳನ್ನು

ಜೇವರ್ಗಿ, ಆಂದೋಲ, ಚಿಕ್ಕನಹಳ್ಳಿ, ರಾಜನಕೋಳೂರು, ಹಗರಟಗಿಯಲ್ಲಿ ಪತ್ತೆ ಮಾಡಿ ಅಧ್ಯಯನ ಮಾಡಿದರು. ಇವು ಇಂಗ್ಲೆಂಡ್ ಮೊದಲಾದ ಪಶ್ಚಿಮ ಯೂರೋಪಿನಲ್ಲಿನ ಗ್ರಾವ್‌ಲೆಕ್ಸ್ ಕಿಸ್ತರೀನ್ಸ್‌ಗಳಂತಿವೆ ಎಂದು ಅಭಿಪ್ರಾಯಪಟ್ಟಿದ್ದರು. ಇಂತಹ ಕಲ್ಮನೆಗಳ (ಕಲ್ಗೋರಿಗಳ) ನೆಲೆಗಳು ದಕ್ಷಿಣ ಭಾರತದಲ್ಲೆಲ್ಲಾ (ವಿದರ್ಭದಲ್ಲಿ) ೨೦೦೦ಕ್ಕೂ ಹೆಚ್ಚು ಶೋಧವಾಗಿವೆ. ಈ ಕಲ್ಮನೆಗಳು ಆಯಾ ಪ್ರದೇಶದಲ್ಲಿ ವಿವಿಧ ಪ್ರಕಾರವಾಗಿವೆ. ಆದರೆ ಗುಲ್ಬರ್ಗಾ ಪ್ರದೇಶಗಳಲ್ಲಿ ನಾಲ್ಕು ಮುಖ್ಯ ಪ್ರಕಾರಗಳು ಕಂಡುಬಂದಿವೆ. ಕಲ್ಲು ವೃತ್ತಗಳು, ವೃತ್ತಾಕಾರದ ಕಲ್ಲುಗುಡ್ಡೆಗಳು, ಕಂಡಿಕೋಣೆ ಗೋರಿಗಳು, ಅಲ್ಲಲ್ಲಿ ಇವೆ. ಮೊದಲ ಎರಡು ಪ್ರಕಾರಗಳು ಜೇವರ್ಗಿ ಆಂದೋಲಗಳಲ್ಲಿವೆ. ಮೂರನೆಯದು ರಾಜನಕೋಳೂರಿನಲ್ಲಿಯೂ ಹಾಗೂ ನಾಲ್ಕನೆಯದು ಹಗರಟಗಿಯಲ್ಲಿಯೂ ಇದೆ. ಈ ಕಲ್ಗೋರಿಗಳು ಅಥವಾ ಕಲ್ಮನೆಗಳಲ್ಲಿ ಮಾನವನ ಅಸ್ಥಿ ಅವಶೇಷಗಳು, ಮಣ್ಣಿನ ಪಾತ್ರೆಗಳು, ಕಬ್ಬಿಣದ ವಸ್ತುಗಳು, ಗುಪ್ತವಾಗಿ ಧನಕನಕಗಳನ್ನು ಪತ್ತೆ ಮಾಡಲಾಗಿದೆ. ಈ ಕಲ್ಮನೆಗಳ ಸುತ್ತಲೂ ಕಲ್ಲುಗಳು ನಿಸರ್ಗದಲ್ಲಿ ಸಿಕ್ಕಂತೆಯೇ ಒರಟಾಗಿದ್ದು ಉಳಿಯ ಕೆತ್ತನೆಯ ಕೆಲಸವು ಕಂಡುಬರುವುದಿಲ್ಲ ಎಂಬುದು ವಿದ್ವಾಂಸರ ಅಭಿಪ್ರಾಯವಾಗಿದೆ.

ಅನಂತರ ಮಳಖೇಡ ಹಾಗೂ ಭೀಮಾನದಿಯ ದಂಡೆ ಪ್ರದೇಶದಲ್ಲಿ ಅ. ಸುಂದರ, ಎಸ್. ನಾಗರಾಜು ಅವರು ಮಧ್ಯ ಹಳೇ ಶಿಲಾಯುಗದ ಕಲ್ಲಿನ ಉಪಕರಣಗಳನ್ನು ಶೋಧಿಸಿದ್ದಾರೆ. ಸುಂದರ ಅವರು ಉಡಚಣ (ಅಫಜಲಪುರ ತಾಲ್ಲೂಕು), ಉಡಸಗಿ (ಸುರಪುರ) ಕ್ರಮವಾಗಿ ಶಿಲಾ ತಾಮ್ರಯುಗದ ಹಂತದಲ್ಲಿಯ ನೂತನ ಶಿಲಾಯುಗದ ಜನವಾಸ್ತವ್ಯ ನೆಲೆಗಳನ್ನು ಗುರುತಿಸಿದರು. ಹಾಗೆಯೇ ಬೂದಿಹಾಳದಲ್ಲಿ ಎರಡು ಬೃಹತ್ ಬೂದಿಗುಡ್ಡಗಳು ಇರುವುದನ್ನು (೧೯೬೪) ವರದಿ ಮಾಡಿದರು. ಈ ಪ್ರದೇಶದ ಉತ್ಖನನಗಳಿಂದ ನೂತನ ಶಿಲಾಯುಗದ ಜೀವನ ಶೈಲಿಯ ಬಗೆಗೆ ಕೆಲವೊಂದು ಸಾಮಾನ್ಯ ಅಂಶಗಳು ತಿಳಿದಿವೆ. ಸಾಮಾನ್ಯವಾಗಿ ನೀರಿನ ಹಳ್ಳಗಳ ದಂಡೆಗಳ ಮೇಲೆ ವಾಸಕ್ಕೆ ವೃತ್ತಾಕಾರದ ಗುಡಿಸಲುಗಳನ್ನು ಕಟ್ಟಿಕೊಳ್ಳುತ್ತಿದ್ದರು. ಕಾಳುಕಡಿಗಳನ್ನು ತಕ್ಕ ಪ್ರಮಾಣದಲ್ಲಿ ಬೆಳೆದುಕೊಳ್ಳುತ್ತಿದ್ದರು. ಬೇಟೆಯಾಡುವುದಕ್ಕೆ ಬೇಕಾಗುವ ಉಪಕರಣಗಳನ್ನು ಹೆಚ್ಚಾಗಿ ಕಲ್ಲಿನಲ್ಲಿಯೇ ಮಾಡಿಕೊಳ್ಳುತ್ತಿದ್ದರು. ಈ ಉಪಕರಣಗಳಲ್ಲಿ ಅತ್ಯಂತ ಪ್ರಮುಖವಾದುದೆಂದರೆ ತ್ರಿಕೋನಾಕೃತಿಯ ಎರಡು ಬದಿಗಳಲ್ಲಿ ಸ್ವಲ್ಪ ಉಬ್ಬಿದ ಚೂಪು ತುದಿಯ ಹರಿತವಾದ ಅರ್ಧಚಂದ್ರಾಕೃತಿ ಇಲ್ಲವೇ ನೇರವಾದ ಬಾಯಿಯುಳ್ಳ ಕಲ್ಲಿನ ಕೊಡಲಿಯು ಇದ್ದು. ಇದರ ಮೈ ಕಲ್ಲಿನ ಬಂಡೆಯ ಮೇಲೆ ಉಜ್ಜಿದ್ದರಿಂದ ಸಮತರವಾಗಿ ನುಣುಪಾಗಿರುವುದು ಅಲ್ಲದೆ ಹೊಳಪು ಕೂಡಾ ಬರುತ್ತಿತ್ತು ಎಂದು ವರದಿ ಮಾಡಿದ್ದಾರೆ.

ಎಸ್. ನಾಗರಾಜು ಅವರು ೧೯೬೪ರಲ್ಲಿ ಸನ್ನತಿಯ ಭಾಗದಲ್ಲಿ ಕ್ಷೇತ್ರಕಾರ್ಯವನ್ನು ಕೈಗೊಂಡು ಒಂದು ವರದಿಯನ್ನು ವೃತ್ತಪತ್ರಿಕೆಯಲ್ಲಿ ಪ್ರಕಟಿಸಿದರು. ಗುಲ್ಬರ್ಗಾದವರೆ ಆದ ಕಪಟರಾಳ ಕೃಷ್ಣರಾಯರ ಶೋಧನೆಗಳಲ್ಲಿ ಕರ್ನಾಟಕ ಆದಿ ಇತಿಹಾಸಕಾಲದ ಇತಿಹಾಸ, ಸಂಸ್ಕೃತಿ ಹಾಗೂ ವಿಶೇಷವಾಗಿ ಕಲೆಯ ದೃಷ್ಟಿಯಿಂದ ಸನ್ನತಿಯಲ್ಲಿಯ ಮಹತ್ವದ ಬೌದ್ಧ ನೆಲೆಯನ್ನು ಬೆಳಕಿಗೆ

ತಂದರು. ಕ್ರಿ.ಶ. ೧-೨ನೇ ಶತಮಾನದ ಪ್ರಾಕೃತ ಶಾಸನಗಳು ಹಾಗೂ ಬೌದ್ಧಶಿಲ್ಪ ಕಲೆಯ ಅವಶೇಷಗಳ ಬಗೆಗೆ ಇವರು ೧೯೫೬ರಲ್ಲಿ ವರದಿ ಮಾಡಿದರು.

ಹಲವಾರು ವರದಿಗಳಲ್ಲದೆ ಸರ್ಕಾರದ ಪ್ರಾಚ್ಯವಸ್ತು ನಿರ್ದೇಶನಾಲಯ, ಕೇಂದ್ರ ಸರ್ಕಾರದ ಪುರಾತತ್ವ ಇಲಾಖೆ, ದಕ್ಷಿಣ ಏಷ್ಯಾ ಅಧ್ಯಯನ ಸಂಸ್ಥೆ ಮತ್ತು ಬ್ರೀಟಿಶ್ ಸಂಸ್ಥೆಗಳಾದ ಹೈದ್ರಾಬಾದ್ ವೃತ್ತದವರು ಹೀಗೆ ಈ ಭಾಗದ ಉತ್ಖನನ ಸಂಶೋಧನೆಗಳನ್ನು ಮಾಡುತ್ತಾ ಪ್ರಾಚೀನ ಪಳಯುಳಿಕೆಯ ಪ್ರದೇಶಗಳನ್ನು ರಕ್ಷಿಸುತ್ತಾ ಬಂದಿದ್ದಾರೆ.

೪. ಪೌರಾಣಿಕ ಹಿನ್ನೆಲೆ

ಈ ಜಿಲ್ಲೆಯಲ್ಲಿ ಪೌರಾಣಿಕ ಹಿನ್ನೆಲೆಯುಳ್ಳ ಅನೇಕ ಸ್ಥಳಗಳಿದ್ದು. ಕೆಲವು ಪವಿತ್ರ ಕ್ಷೇತ್ರ ಗಳೆಂದು ಜನಪ್ರಿಯವಾಗಿವೆ. ಶಾಹಾಪುರ, ಸುರಪುರ ಹಾಗೂ ಜೇವರ್ಗಿ ತಾಲ್ಲೂಕುಗಳ ಗಡಿಯಂತಿರುವ ಕೃಷ್ಣಾ ಭೀಮೆಯರ ನಡುವೆ ವ್ಯಾಪಿಸಿರುವ ಪ್ರದೇಶ ಹಾಗೂ ವಿಜಾಪುರ ಜಿಲ್ಲೆಯ ಮುದ್ದೇಬಿಹಾಳ ಹಾಗೂ ಸಿಂದಗಿ ತಾಲ್ಲೂಕುಗಳವರೆಗಿನ ವ್ಯಾಪ್ತಿಯುಳ್ಳ ಭಾಗಗಳನ್ನು ಸಗರನಾಡು" ಎಂದು ಕರೆಯ ಲಾಗುತ್ತದೆ. ಪೌರಾಣಿಕ ನಂಬಿಕೆಯ ಪ್ರಕಾರ ಪುರಾಣ ಪ್ರಸಿದ್ಧವಾದ ಮಹಾಬಲಶಾಲಿಯೂ ಪರಮ ಧಾರ್ಮಿಕನೂ ಆದ ಸಗರ ಚಕ್ರವರ್ತಿ ಸಗರನಾಡನ್ನು ತನ್ನ ರಾಜಧಾನಿಯನ್ನಾಗಿ ಮಾಡಿದ್ದನೆಂದು ಪ್ರತೀತಿಯಿದೆ. ಪೌರಾಣಿಕ ಕಥೆಯ ಪ್ರಕಾರ ಇಕ್ಷ್ವಾಕು ವಂಶದ ಅಂಬರೀಷನೆಂಬ ರಾಜನು ಪರಮ ಜ್ಞಾನಿಯೂ, ರಾಜಮಹರ್ಷಿಯೂ ಆಗಿದ್ದನು.

ಆತನು ಮನುಪುತ್ರ ನಭಗನ ಪುತ್ರನಾದ ನಾಭಗನ ಮಗನು. ಅಂಬರೀಷನು ಬ್ರಹ್ಮಶಾಪಕ್ಕೆ ಗುರಿಯಾದನು. ಇದೇ ವಂಶದ ಸತ್ಯವ್ರತ(ತ್ರಿಶುಂಕ)ನಿಗೆ ಹರಿಶ್ಚಂದ್ರನೆಂಬ ಪ್ರಖ್ಯಾತ ಮಗ ಹುಟ್ಟಿದ. ಹರಿಶ್ಚಂದ್ರನಿಗೆ ರೋಹಿತನೆಂಬ ಮಗನು ಜನಿಸಿದ. ರೋಹಿತನ ಮಗನೇ ಹರಿತ ಮತ್ತು ಈತನ ಮೊಮ್ಮಗನಾದ ಬಾಹುಕನು ಯುದ್ಧಗಳಲ್ಲಿ ಪರಾಭವಗೊಂಡು ನಿರಾಶನಾಗಿ ತನ್ನ ಮಡದಿಯೊಡನೆ ಅರಣ್ಯವನ್ನು ಸೇರಿದನು. ಆ ಸಮಯದಲ್ಲೇ ವೃದ್ಧಾಪ್ಯದಿಂದ ಬಾಹುಕನು ಮರಣ ಹೊಂದಿದನು. ಆನಂತರ ಅವನ ಪತ್ನಿಯು ಓರ್ವ ಮಹರ್ಷಿಯ ಸಂಬಂಧದಿಂದ ಗರ್ಭವತಿಯಾದಳು. ಆಕೆಯ ಸವತಿಯರು ಅಸೂಯೆಯಿಂದ ಆಕೆಗೆ ತಿಳಿಯದ ಹಾಗೆ ವಿಷ ಉಣಿಸಿ ಭ್ರೂಣವನ್ನು ನಾಶಮಾಡಲು ಪ್ರಯತ್ನಿಸಿದಾಗ್ಯೂ ಗರ್ಭದ ಮೇಲೆ ಈ ವಿಷವು ಯಾವುದೇ ಪ್ರಭಾವ ಬೀರದೇ 'ಗರ'(ವಿಷ)ವನ್ನು ಮೈತಳೆದು ಜನಿಸಿದ ಮಗುವೇ 'ಸಗರ'ನೆಂಬ ಹೆಸರನ್ನು ಗಳಿಸಿದನು. ಈತನೇ ಮುಂದೆ ಯಶಸ್ವಿ ಸಾಮ್ರಾಟನಾಗಿ 'ಸಗರ ಚಕ್ರವರ್ತಿ' ಎನಿಸಿಕೊಂಡು ಸಗರ ನಾಡನ್ನು ಯಶಸ್ವಿಯಾಗಿ ಆಳ್ವಿಕೆ ಮಾಡಿದನೆಂಬ ನಂಬಿಕೆಯಿದೆ.

ಪೌರಾಣಿಕ ಹಿನ್ನೆಲೆಯನ್ನು ಪಡೆದಿರುವ ಮತ್ತೊಂದು ಸ್ಥಳವೆಂದರೆ ಕೃಷ್ಣಾನದಿಯ ತೀರದಲ್ಲಿರುವ ಛಾಯಾಭಗವತಿಯು ಸೂರ್ಯದೇವನಿಗೆ ಸಂಬಂಧಿಸಿದ ಕ್ಷೇತ್ರವಾಗಿದೆ. ಪೌರಾಣಿಕ ನಂಬಿಕೆಯ ಪ್ರಕಾರ ಸೂರ್ಯದೇವನ ನಿರಂತರ ತಾಪಮಯ ಕಿರಣಗಳಿಂದ ಪಸರಿಸಿದ ಉಷ್ಣತೆಯನ್ನು ತಾಳಲಾರದೆ

ಆತನ ಮೊದಲ ಸತಿಯಾದ ಸಂಮಜ್ಞಳು ನಿಧನಳಾದಾಗ, ಅವಳಷ್ಟೇ ಸುಂದರ ರೂಪವುಳ್ಳ ಛಾಯಾದೇವಿಯು ಸೂರ್ಯನನ್ನು ಕೂಡಿದಳು. ಸೂರ್ಯನು ಇವಳನ್ನು ತನ್ನ ನಿಜವಾದ ಸತಿಯೆಂದು ತಿಳಿದಿದ್ದನು. ಆದರೇ ಹಲವು ದಿನಗಳ ತರುವಾಯ ಈ ವಿಷಯದ ಬಗೆಗೆ ಇದ್ದ ಗೋಪ್ಯವಾದ ರಹಸ್ಯವು ಆತನಿಗೆ ಅರಿವಾದಾಗ ಸೂರ್ಯನು ಛಾಯಾದೇವಿಯನ್ನು ತ್ಯಜಿಸಿ ತನ್ನ ಮೊದಲ ಪತ್ನಿಯಾದ ಸಂಮಜ್ಞಳನ್ನು ಪುನಃ ಈ ಸ್ಥಳದಲ್ಲಿ ಕೂಡಿದನೆಂಬ ನಂಬಿಕೆ ಇದೆ.

ಅಮರಸಿಂಹನ ನಾಮಲಿಂಗಾನುಶಾಸನ ಅಥವಾ ಅಮರಕೋಶದಲ್ಲಿ, ಮಂಗಳಾಷ್ಟಕ ಶ್ಲೋಕ, ಮತ್ಸ್ಯ, ಬ್ರಹ್ಮ ಮತ್ತು ವಾಮನ ಪುರಾಣಗಳಲ್ಲಿ ಹಾಗೂ ಮಹಾಭಾರತದಲ್ಲಿ ಭೀಮಾ ನದಿಯ ಉಲ್ಲೇಖ ಬಂದಿದೆ. ಪುರಾಣಗಳಲ್ಲಿ ಪವಿತ್ರ ನದಿಗಳ ಸಾಲಿನಲ್ಲಿ ಎಣಿಸಿದ ಇದನ್ನು 'ಮಹಾನದಿ' ಎಂದು ಉಲ್ಲೇಖಿಸಲಾಗಿದೆ. ಭಾರತದ ದ್ವಾದಶ ಜ್ಯೋತಿರ್ಲಿಂಗಗಳಲ್ಲಿ ಒಂದಾದ ಭೀಮಾಶಂಕರವು ಭೀಮಾ ನದಿಯ ಉಗಮ ಸ್ಥಾನವಾಗಿದೆ. ತ್ರಿಪುರಾಸುರನನ್ನು ಸೋಲಿಸಿ ದಣಿದ ಶಿವನು ವಿಶ್ರಾಂತಿಗಾಗಿ ಸಹ್ಯಾದ್ರಿಗೆ ಬಂದನಂತೆ. ಆಗ ಇಬ್ಬರು ಋಷಿಗಳನ್ನು ಹತ್ಯಗೈದಿದ್ದ ಅಯೋಧ್ಯೆಯ ರಾಜ ಭೀಮಕನು ಪಾಪ ಪರಿಹಾರಕ್ಕಾಗಿ ತಪಸ್ಸಿಗೆಂದು ಇಲ್ಲಿಗೆ ಬಂದಿದ್ದನೆಂಬ ಪ್ರತೀತಿಯಿದೆ. ಈತನ ತಪ್ಪಸಿಗೆ ಮೆಚ್ಚಿದ ಶಿವ ಪ್ರತ್ಯಕ್ಷನಾಗಿ ವರ ನೀಡುವ ಕೃಪೆ ಮಾಡಿದನಂತೆ. ಆಗ ಶಿವನ ಹಣೆ ಬೆವರುತ್ತಿತ್ತಂತೆ. ಇದನ್ನು ಕಂಡ ಭೀಮಕನ ಆ ಹಣೆಯ ಬೆವರೇ ನದಿಯಾಗಿ ಪ್ರವಹಿಸಲಿ ಎಂದು ನುಡಿದನಂತೆ.

ಈ ರೀತಿ ಭೀಮಕನ ಪ್ರಾರ್ಥನೆಯಿಂದ ಮೂಡಿಬಂದ ನದಿಯೇ ಮುಂದೆ 'ಭೀಮರತಿ' ಅಥವಾ 'ಭೀಮಾನದಿ' ಎಂದು ಜನಪ್ರಿಯವಾಯಿತೆಂದು ಐತಿಹ್ಯವಿದೆ. ಸನ್ನತಿಯು ಒಂದು ಪುರಾತನ ಸ್ಥಳವಾಗಿರುವಂತೆ ಪೌರಾಣಿಕ ಹಿನ್ನೆಲೆಯನ್ನೂ ಹೊಂದಿದೆ. ಈ ನಂಬಿಕೆಯ ಪ್ರಕಾರ ರಾಮ ಮತ್ತು ಸೀತೆಯರು ಇಲ್ಲಿ ಮುನಿನಾರಾಯಣ ಹಾಗೂ ಚಂದ್ರವದನ ಅಥವಾ ಚಂದ್ರಲಾಂಬೆಯರಾಗಿ ಅವತರಿಸಿ ಜನ್ಮತಾಳಿದರು. ಆಗ 'ಸೇತು' ಎಂಬ ರಾಜನು ಈ ಸ್ಥಳದಲ್ಲಿ ಸೀತೆಯನ್ನು ಕೆಣಕಿದಾಗ, ಆತನು ಆಕೆಯ ಶಾಪಕ್ಕೆ ಗುರಿಯಾದನು. ಇಲ್ಲಿರುವ ಚಂದ್ರಲಾಂಬೆಯೇ 'ಪದ್ಮಾವತಿ' ಎಂಬ ನಂಬಿಕೆ ಇದೆ. ಇಲ್ಲಿ ಅನೇಕ ಪೌರಾಣಿಕ ಹಿನ್ನೆಲೆಯುಳ್ಳ ಹಲವಾರು ಸ್ಥಳಗಳಿವೆ. ಆದಿಗುರು ಶಂಕರಾಚಾರ್ಯರ್ಯರು ಈ ದೇವಿಯನ್ನು ಕುರಿತು ಶ್ಲೋಕ ರಚಿಸಿರುವರು ಎಂದು ಹೇಳಲಾಗುವುದು.

೫. ಐತಿಹಾಸಿಕ ಹಿನ್ನೆಲೆ

ಕರ್ನಾಟಕದ ಉತ್ತರ ಭಾಗದ ಪ್ರದೇಶಗಳು ಮಗಧ ರಾಜ್ಯದ ಅಧೀನವಾಗಿದ್ದವೆಂದು ಕೆಲವು ಶಿಲಾಶಾಸನಗಳಿಂದ ತಿಳಿದುಬರುತ್ತದೆ. ಮಗಧದ ನಂತರ ಉತ್ತರಾಧಿಕಾರಿಗಳಾದ ಮೌರ್ಯರು ಕರ್ನಾಟಕದ ಕೆಲವು ಪ್ರದೇಶಗಳ ಮೇಲೆ ಪ್ರಭುತ್ವ ಹೊಂದಿದ್ದರು. ಆ ಅವಧಿಯಲ್ಲಿ ಗುಲ್ಬರ್ಗಾ ಜಿಲ್ಲಾ ಪ್ರದೇಶವು ಅವರ ಆಳ್ವಿಕೆಯಲ್ಲಿ ಇದ್ದಿರಬೇಕು. ಜಿಲ್ಲೆಯಲ್ಲಿ ಕಂಡುಬಂದಿರುವ ಬೆಳ್ಳಿಯ ಒತ್ತುಮುದ್ರೆಯ ನಾಣ್ಯಗಳಿಂದ ಇದನ್ನು ಊಹಿಸಬಹುದಾಗಿದೆ. ಆದರೆ ತಾತ್ಕಾಲಿಕ ಶಾಸನಗಳಾಗಲಿ

ವಾಸ್ತು ಅವಶೇಷಗಳಾಗಲಿ ದೊರಕಿಲ್ಲ. ಮೌರ್ಯರ ಉತ್ತರಾಧಿಕಾರಿಗಳಾದ ಶಾತವಾಹನರು ಜಿಲ್ಲೆಯಲ್ಲಿ ಆಳ್ವಿಕೆ ನಡೆಸಿದ್ದರೆನ್ನುವುದಕ್ಕೆ ಸನ್ನತಿಯಲ್ಲಿ ದೊರೆತಿರುವ ಶಾಸನ ಆಧಾರವಾಗಿದೆ. ಸನ್ನತಿಯು ಮೊದಲಿಗೆ ಸುಪ್ರಸಿದ್ಧವಾದ ಬೌದ್ಧ ಕೇಂದ್ರವಾಗಿತ್ತು ಎಂದು ತಿಳಿದುಬರುತ್ತದೆ.

ಮೌರ್ಯರ ಉತ್ತರಾಧಿಕಾರಿಗಳಾದ ಶಾತವಾಹನರು ಮೌರ್ಯರ ಆಡಳಿತ ವ್ಯವಸ್ಥೆಯನ್ನೇ ಹಲ ಕೆಲವು ಮಾರ್ಪಾಡುಗಳೊಂದಿಗೆ ಮುಂದುವರೆಸಿದರು. ಆಡಳಿತ ವಿಭಾಗಗಳು ಮತ್ತು ಅಧಿಕಾರಿಗಳ ಹುದ್ದೆಗಳ ಹೆಸರುಗಳು ಮೌರ್ಯರ ಸಂಪ್ರದಾಯದಂತೆ ಮುಂದುವರೆದವು. ಕೌಟಿಲ್ಯನ ಅರ್ಥಶಾಸ್ತ್ರವು ಆಗಿನ ಆಡಳಿತಗಾರರಿಗೆ ಮಾರ್ಗದರ್ಶಿಯಾಗಿತ್ತು. ಗ್ರಾಮವು ಅತ್ಯಂತ ಚಿಕ್ಕ ಆಡಳಿತ ಘಟಕವಾಗಿದ್ದು ಅದನ್ನು ನೋಡಿಕೊಳ್ಳಲು 'ಗ್ರಾಮಿಕ' ಎಂಬ ಅಧಿಕಾರಿಯನ್ನು ನೇಮಿಸಲಾಗುತ್ತಿತ್ತು. ಪ್ರಮುಖ ಪಟ್ಟಣಗಳಲ್ಲಿ ನಿಗಮಸಭೆ(ಪುರಸಭೆ)ಗಳಿರುತ್ತಿದ್ದವು. ಅಮಾತ್ಯ, ಮಹಾಮಾತ್ಯ, ಭೆಂಡಗಾರಿಕ, ದ್ರವ್ಯಾಧಿಕಾರಿ, ಲೇಖಕ, ಪಾರುಪತ್ಯಗಾರ, ಅಕ್ಕಸಾಲಿಗ, ನಾಣ್ಯ ಮುದ್ರಿಕ, ಗ್ರಂಥಪಾಲಕ, ದ್ವಾರ ಪಾಲಕ, ರಾಯಭಾರಿ ಮುಂತಾದವು ವಿವಿಧ ಮಟ್ಟದ ಅಧಿಕಾರಿಗಳ ಹುದ್ದೆಗಳಾಗಿದ್ದವು.

ಕ್ರಿ.ಶ. ಒಂಬತ್ತನೆಯ ಶತಮಾದಲ್ಲಿ ಗುಲ್ಬರ್ಗಾ ಜಿಲ್ಲೆಯು ಕರ್ನಾಟಕ ಇತಿಹಾಸದಲ್ಲಿ ಪ್ರಮುಖ ಪಾತ್ರವಹಿಸಿತ್ತು. ಸೇಡಂ ತಾಲ್ಲೂಕಿನಲ್ಲಿರುವ ಮಳಖೇಡವು ರಾಷ್ಟ್ರಕೂಟ ಅರಸರ ರಾಜಧಾನಿಯಾಗಿತ್ತು. ರಾಷ್ಟ್ರಕೂಟರ ನಂತರ ಕಲ್ಯಾಣಿ ಚಾಲುಕ್ಯರು ಈಗಿನ ಬೀದರ್ ಜಿಲ್ಲೆಯಲ್ಲಿರುವ ಬಸವಕಲ್ಯಾಣವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಈ ಪ್ರದೇಶವನ್ನು ೨೦೦ ವರ್ಷಗಳಿಗೂ ಹೆಚ್ಚು ಕಾಲ ಆಳ್ವಿಕೆ ನಡೆಸಿದರು. ಚಾಲುಕ್ಯರ ನಂತರ ಕಲಚೂರಿಗಳು ಸ್ವಲ್ಪ ಕಾಲ ಕಲ್ಯಾಣವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಈ ಪ್ರದೇಶದ ಆಳ್ವಿಕೆ ನಡೆಸಿದರು. ೧೨ನೆಯ ಶತಮಾನದ ಉತ್ತರಾರ್ಧದಲ್ಲಿ ದೇವಗಿರಿಯ ಯಾದವರು, ದ್ವಾರಸಮುದ್ರದ ಹೊಯ್ಸಳರು, ಚಾಲುಕ್ಯರು ಕಲಚೂರಿಗಳ ಮೇಲೆ ಮೇಲುಗೈ ಸಾಧಿಸಿದರು. ಅದೇ ಸಮಯದಲ್ಲಿ ವಾರಂಗಲ್ಲಿನ (ವರಂಗಲ್ಲು) ಕಾಕತೀಯ ಅರಸರು ಪ್ರಾಮುಖ್ಯತೆ ಗಳಿಸಿದ್ದರು. ಈಗಿನ ಗುಲ್ಬರ್ಗಾ ಮತ್ತು ರಾಯಚೂರು ಜಿಲ್ಲೆಗಳು ವಾರಂಗಲ್ಲಿನ ಅರಸರ ಅಧೀನದ ಪ್ರದೇಶಗಳಾಗಿದ್ದವು. ಆಗ ಆಡಳಿತದ ಅನುಕೂಲಕ್ಕೆ ವಿಂಗಡಿಸಿದ್ದ ಆಡಳಿತ ಘಟಕದ ವಿಭಾಗಗಳು ಗುಲ್ಬರ್ಗಾ ಜಿಲ್ಲೆಗೂ ಅನ್ವಯಿಸುತ್ತಿದ್ದವು.

ರಾಷ್ಟ್ರಕೂಟರು ಸಾಮ್ರಾಜ್ಯವನ್ನು ಆಡಳಿತದ ಅನುಕೂಲಕೋಸ್ಕರ ಅನೇಕ ರಾಷ್ಟ್ರಗಳನ್ನಾಗಿ ವಿಂಗಡಿಸಿದ್ದರು. ರಾಷ್ಟ್ರದ ಮುಖ್ಯ ಅಧಿಕಾರಿ ರಾಷ್ಟ್ರಪತಿ. ಒಂದೊಂದು ರಾಷ್ಟ್ರದಲ್ಲೂ ಈಗಿನ ಕಂದಾಯ ವಿಭಾಗಗಳಂತಹ ನಾಲ್ಕೈದು 'ವಿಷಯ'ಗಳಿದ್ದು ಇವುಗಳ ಆಡಳಿತ ವಿಷಯಪತಿಗೆ ಒಳಪಟ್ಟಿತ್ತು. ರಾಷ್ಟ್ರಪತಿಯು ತನ್ನ ಆಡಳಿತದ ಕಕ್ಷೆಗೊಳಪಟ್ಟ ಪ್ರದೇಶದ ಶಾಂತಿಪಾಲನೆ ಹಾಗೂ ರಕ್ಷಣೆಯ ಜವಾಬ್ದಾರಿ ಹೊಂದಿದ್ದನು. ಕಲ್ಯಾಣ ಚಾಲುಕ್ಯರು ಆಡಳಿತದ ಸೌಕರ್ಯಕ್ಕಾಗಿ ತಮ್ಮ ಸಾಮ್ರಾಜ್ಯವನ್ನು ಆ ಮೊದಲಿದ್ದಂತೆಯೇ ಬೇರೆ ಬೇರೆ ಪ್ರಾಂತ್ಯಗಳನ್ನಾಗಿ ವಿಂಗಡಿಸಿಕೊಂಡಿದ್ದರು.

ಆದರೆ ಆ ಪ್ರಾಂತ್ಯಗಳು ಮುಂದೆ ಇನ್ನೂ ಹೆಚ್ಚುವುದರೊಂದಿಗೆ ಆನುವಂಶಿಕವಾಗಿ ಆಳುತ್ತಿದ್ದ ಸಾಮಂತರ ಅಧಿಕಾರದಲ್ಲಿ ಮುಂದುವರೆಯುತ್ತಿದ್ದರು. ಆದರೂ ಅವರ ಮೇಲಿನ ಉಸ್ತುವಾರಿಗಾಗಿ ಅರಸನು ಅಧಿಕಾರಿಗಳನ್ನು ತನ್ನ ಪ್ರತಿನಿಧಿಗಳಾಗಿ ಅಂತಹ ಪ್ರಾಂತ್ಯಗಳಿಗೆ ನೇಮಿಸುತ್ತಿದ್ದನು. ಅಧಿಕಾರಿಗಳನ್ನು ಒಂದು ಪ್ರಾಂತ್ಯದಿಂದ ಇನ್ನೊಂದು ಪ್ರಾಂತ್ಯಕ್ಕೆ ವರ್ಗಾಯಿಸಲಾಗುತ್ತಿತ್ತು. ಯುವರಾಜ ಹಾಗೂ ಅರಸನ ಇತರ ಸಂಬಂಧಿಕರೂ ಸಹ ಪ್ರಾಂತ್ಯಾಧಿಕಾರಿಗಳಾಗಿ ನೇಮಕ ಹೊಂದುತ್ತಿದ್ದರು.

ದೇವಗಿರಿಯ ಯಾದವರು ಚಾಲುಕ್ಯರಂತೆ ತಮ್ಮ ಆಡಳಿತವನ್ನು ಮುಂದುವರೆಸಿದರು. ಇವರ ಆಡಳಿತ ಕ್ರಮದಲ್ಲಿ ಇವರ ಸಮಕಾಲೀನ ಸ್ಥಿತಿಗತಿಗಳಿಗನುಗುಣವಾಗಿ ರಾಜನು ರಾಜ್ಯದ ಮುಖ್ಯನೂ ನಿರಂಕುಶನೂ ಆಗಿದ್ದ. ಸಾಮ್ರಾಜ್ಯವನ್ನು ವಿಷಯ ಅಥವಾ ಪ್ರಾಂತ್ಯಗಳಾಗಿ ವಿಂಗಡಿಸಲಾಗಿತ್ತು. 'ದೇಶ'ವೆಂಬ ಆಡಳಿತ ವಿಭಾಗವಿತ್ತೆಂಬ ಅಭಿಪ್ರಾಯವಿದೆ. ವಿಷಯವನ್ನು ನಾಡು ಮತ್ತು ಕಂಪಣ ಗಳಾಗಿ ವಿಭಜಿಸಲಾಗಿತ್ತು. ನಾಡುಗಳಲ್ಲಿ ನಾಡು ಮತ್ತು ಮಹಾನಾಡುಗಳೆಂಬ ವರ್ಗಗಳಿದ್ದವು.

ಮಹಮದ್-ಬಿನ್-ತುಘಲಕ್ ದೆಹಲಿಯ ಸುಲ್ತಾನನಾಗಿದ್ದಾಗ ದಕ್ಷಿಣಕ್ಕೆ ದಂಡಯಾತ್ರೆ ಮಾಡಿ ವಾರಂಗಲ್ಲಿನಲ್ಲಿ ಆಳಿದ ಕಾಕತೀಯರನ್ನು ಸೋಲಿಸಿ ಅವರ ರಾಜ್ಯವನ್ನು ಕಸಿದುಕೊಂಡಾಗ ಗುಲ್ಬರ್ಗಾ ಸುಲ್ತಾನರ ಅಧೀನಕ್ಕೆ ಒಳಪಟ್ಟಿತು. ಕಲ್ಯಾಣಿ ಚಾಲುಕ್ಯರ ಕಾಲದಲ್ಲಿ ಆಳಂದವು "ಆಳಂದ್ ಸಾಸಿರ" ಪ್ರಾಂತ್ಯದ ಮುಖ್ಯ ರಾಜಧಾನಿಯಾಗಿತ್ತು ಎಂದು ತಿಳಿದುಬರುವುದು.

ಕ್ರಿ.ಶ. ೧೩೯೪ರಿಂದ ೧೩೪೭ರವರೆಗೆ ಗುಲ್ಬರ್ಗಾ ಜಿಲ್ಲೆಯು ದೆಹಲಿ ಸಾಮ್ರಾಜ್ಯದ ಭಾಗ ವಾಗಿಯೇ ಮುಂದುವರೆಯಿತು. ದೆಹಲಿ ಸಾಮ್ರಾಜ್ಯವನ್ನು ಅನೇಕ ಪ್ರಾಂತ್ಯಗಳನ್ನಾಗಿ ಮತ್ತು ಉಪರಾಜ್ಯಗಳನ್ನಾಗಿ ವಿಭಾಗಿಸಲಾಗಿತು. ಪ್ರಾಂತೀಯ ಆಡಳಿತದ ಅನುಕೂಲತೆಗೋಸ್ಕರ ಪ್ರಾಂತ್ಯಗಳನ್ನು ವಿಭಾಗಿಸಿ 'ಶಿಕ್'ಗಳೆಂದು ಅವುಗಳ ಆಡಳಿತಗಾರರನ್ನು 'ಶಿಕ್‌ದಾರ'ರೆಂದು ಕರೆಯಲಾಗುತ್ತಿತ್ತು. ಶಿಕ್‌ದಾರರ ಆಡಳಿತದಲ್ಲಿ ಕೇಂದ್ರ ಸರ್ಕಾರದ ನಿರ್ಧಾರಗಳೇ ಅಂತಿಮವಾಗಿರುತ್ತಿದ್ದವು. ಈ ಶಿಕ್‌ದಾರ್‌ನ ಅಧೀನದಲ್ಲಿ ಅನೇಕ ಅಧಿಕಾರಿಗಳು ಕೆಲಸ ನಿರ್ವಹಿಸಿಕೊಂಡು ಹೊಗುತ್ತಿದ್ದರು.

ಅಲ್ಲಾವುದ್ದೀನ್ ಹಸನ್‌ಗಂಗು ಬಹುಮನ್ ಷಾಹ ೧೩೪೭ರಲ್ಲಿ ಬಹಮನಿ ರಾಜ್ಯವನ್ನು ಸ್ಥಾಪಿಸಿದಾಗ ಗುಲ್ಬರ್ಗಾ ಅವರ ರಾಜಧಾನಿಯಾಯಿತು. ಇದು ೧೪೨೪ರವರೆಗೂ ರಾಜಧಾನಿಯಾಗಿ ಮೆರೆಯಿತು. ಬಹಮನಿ ರಾಜ್ಯ ಒಡೆದು ಐದು ಭಾಗಗಳಾಗಿ ವಿಂಗಡಣೆಗೊಂಡಾಗ ಇದು ಸ್ವಲ್ಪ ಕಾಲ ಬೀದರ್‌ನ ಬರೀದ್ ಷಾಹಿ ಸುಲ್ತಾನರ ಅಧೀನದಲ್ಲೂ ಮತ್ತೆ ಸ್ವಲ್ಪ ಕಾಲ ಬಿಜಾಪುರದ ಆದಿಲ್‌ಶಾಹಿ ಸುಲ್ತಾನರ ಅಧೀನದಲ್ಲೂ ಇತ್ತು.

ಬಹಮನಿ ಅರಸರ ಕಾಲದಲ್ಲಿ ಅವರ ರಾಜ್ಯವನ್ನು ನಾಲ್ಕು ಭಾಗಗಳನ್ನಾಗಿ ವಿಭಾಗಿಸಲಾಗಿತ್ತು ಮತ್ತು ಅವುಗಳನ್ನು 'ತರಾಫ್'ಗಳೆಂದು ಕರೆಯಲಾಗುತ್ತಿತ್ತು. ವಿಭಾಗದ ಮುಖ್ಯ ಅಧಿಕಾರಿಯನ್ನು ತರಾಫ್‌ದಾರರೆಂದು ಕರೆದು ಅವರಿಗೆ ತೆರಿಗೆ ವಸೂಲಿ, ಸೈನ್ಯದ ಅಭಿವೃದ್ಧಿ ಮತ್ತು ಬೆಳವಣಿಗೆ

ನಾಗರಿಕ ಮತ್ತು ಸೈನ್ಯದ ಸೇವೆಯ ನೇಮಕಾತಿ ಮುಂತಾದ ಕೆಲಸಗಳನ್ನು ಅವರ ಪ್ರಾಂತ್ಯದಲ್ಲಿ ನಿರ್ವಹಿಸಲು ವಹಿಸಲಾಗಿತ್ತು. ಅವರನ್ನು ಒಂದು ವಿಭಾಗದಿಂದ ಮತ್ತೊಂದು ವಿಭಾಗಕ್ಕೆ ವರ್ಗಾಯಿಸಬಹುದಾಗಿತ್ತು. ಅನಂತರ ತರಾಫ್‌ಗಳನ್ನು 'ಸರ್ಕಾರ್' ಮತ್ತು 'ಪರಗಣೆ'ಗಳೆಂದು ವಿಭಾಗಿಸಲಾಗಿತು. ಗ್ರಾಮವು ಆಡಳಿತದ ಕೊನೆಯ ಹಂತವಾಗಿತ್ತು. ಹಲವು ಗ್ರಾಮಗಳನ್ನು ಸೇರಿಸಿ 'ಪರಗಣ'ಗಳೆಂದು ಕರೆಯುತ್ತಿದ್ದರು.

ಮೊಗಲ್ ಸಾಮ್ರಾಜ್ಯದ ಚಕ್ರವರ್ತಿಯಾದ ಔರಂಗಜೇಬನು ದಕ್ಷಿಣ ಭಾರತಕ್ಕೆ ದಂಡೆಯಾತ್ರೆ ಕೈಗೊಂಡಾಗ ಗುಲ್ಬರ್ಗಾ ಅವನ ಕೈವಶವಾಯಿತು. ಔರಂಗಜೇಬನ ಮರಣಾನಂತರ ಮೊಗಲ್ ಸಾಮ್ರಾಜ್ಯದಲ್ಲಿ ಅಂತಃಕಲಹಗಳು ಸಂಭವಿಸಿದಾಗ ಅಲ್ಲಿಯ ರಾಜಕೀಯದಲ್ಲಿ ಬೇಸತ್ತ ಸುಬೇದಾರ್ ಅಸಫ್ ಝಾ ದಕ್ಷಿಣದ ಪ್ರಾಂತ್ಯಾಧಿಪತಿಯಾಗಿ ಬಂದು ಇಲ್ಲಿ ಸ್ವತಂತ್ರನಾದ. ಇದು ಹೈದರಾಬಾದಿನ ನಿಜಾಂ ವಂಶಕ್ಕೆ ನಾಂದಿಯಾಯಿತು. ಆ ಸಮಯದಲ್ಲಿ ಸುರಪುರ, ಶಾಹಪುರ, ಜೇವರ್ಗಿ ತಾಲ್ಲೂಕುಗಳ ಭಾಗ ಸುರಪುರದ ನಾಯಕರ ಆಡಳಿತದಲ್ಲಿ ಸ್ವತಂತ್ರವಾದ ಸಂಸ್ಥಾನವಾಯಿತು. ಗುಲ್ಬರ್ಗಾದ ಇನ್ನಿತರ ಭಾಗಗಳು ನಿಜಾಂ ರಾಜ್ಯಕ್ಕೆ ಸೇರಿದವು. ೧೭೦೭ ರಿಂದ ೧೮೫೭ರವರೆಗೆ ಸ್ವತಂತ್ರವಾಗಿ ಸುರಪುರದಲ್ಲಿ ಆಳಿದ ಬೇಡರ ಮನೆತನದ ರಾಜಾ ವೆಂಕಟಪ್ಪ ನಾಯಕ ೧೮೫೭ರ ಕ್ರಾಂತಿಯಲ್ಲಿ ಭಾಗವಹಿಸಿದ್ದನು. ಬ್ರಿಟೀಷರು ಅವನನ್ನು ದಮನ ಮಾಡಿ ಅವನಿಂದ ಕಸಿದುಕೊಂಡ ಆ ರಾಜ್ಯವನ್ನು ನಿಜಾಮನಿಗೆ ವಹಿಸಿಕೊಟ್ಟರು. ಸುರಪುರವು ಆಂಗ್ಲರಿಂದ ನಿಜಾಮರ ವಶಕ್ಕೆ ಹೋದ ನಂತರ 'ಶೋರಾಪುರ' ಎಂದು ಕರೆಯಲಾಗುತ್ತಿತ್ತು.

ನಿಜಾಂ ಸಂಸ್ಥಾನದ ಮುಖ್ಯಮಂತ್ರಿಯಾಗಿದ್ದ ಸಾಲಾರ್ ಜಂಗ್ ಕೈಗೊಂಡ ಆಡಳಿತ ಸುಧಾರಣೆಗಳಲ್ಲಿ ಜಿಲ್ಲಾ ಬಂದಿ ಮುಖ್ಯವಾದುದಾಗಿತ್ತು. ಅದರಂತೆ ಸಂಸ್ಥಾನದಲ್ಲಿ ಹಲವಾರು ಜಿಲ್ಲೆಗಳು ಅಸ್ತಿತ್ವಕ್ಕೆ ಬಂದವು. ಆ ಸಂದರ್ಬದಲ್ಲಿ ಗುಲ್ಬರ್ಗಾ ಸುರಪುರ ಜಿಲ್ಲೆಯ ಒಂದು ಭಾಗವಾಯಿತು. ಸುರಪುರ ಜಿಲ್ಲೆಯು ಪ್ರಾರಂಭದಲ್ಲಿ ಐದು ತಾಲ್ಲೂಕುಗಳನ್ನು ಒಳಗೊಂಡಿತ್ತು. ಒಂದು ದಶಕದ ನಂತರ ಹಲವಾರು ಪರಗಣಗಳು ವಿಲೀನವಾಗಿ ಆಡಳಿತದ ಅನುಕೂಲಕ್ಕಾಗಿ ೧೮೭೩ರಲ್ಲಿ ಸುರಪುರ ಜಿಲ್ಲೆಯನ್ನು ಸುರಪುರ ಮತ್ತು ಗುಲ್ಬರ್ಗಾ ಜಿಲ್ಲೆಗಳೆಂದು ವಿಭಾಗಿಸಲಾಯಿತು.

ಭಾರತಕ್ಕೆ ೧೯೪೭ರಲ್ಲಿ ಸ್ವಾತಂತ್ರ್ಯ ಬಂದರೂ ೧೩.೦೯.೧೯೪೮ರ ತನಕ ಗುಲ್ಬರ್ಗಾ ಜಿಲ್ಲೆಯು ಹೈದ್ರಾಬಾದ್ ನಿಜಾಮನ ಆಡಳಿತಕ್ಕೆ ಒಳಪಟ್ಟಿತ್ತು. ನಂತರ ದಿನಾಂಕ ೧೮.೦೯.೧೯೪೮ರಲ್ಲಿ ಹೊರಬಂದು ಭಾರತದ ಒಕ್ಕೂಟದ 'ಬಿ' ರಾಜ್ಯದಲ್ಲಿ ವಿಲೀನವಾಯಿತು. ಆಗ ಅಸಫ್‌ಜಾಹಿ ರಾಜತ್ವ ಕೊನೆಗೊಂಡಿತು.

೧೯೫೬ರಲ್ಲಿ ರಾಜ್ಯ ಪುನರ್ ನಿರ್ಮಾಣ ಸಮಯದಲ್ಲಿ ಗುಲ್ಬರ್ಗಾ ಜಿಲ್ಲೆಯಲ್ಲಿ ೧೨ ತಾಲ್ಲೂಕುಗಳು ಮತ್ತು ಮೂರು ಆಡಳಿತ ಉಪವಿಭಾಗಗಳಿದ್ದವು. ತಾಲ್ಲೂಕುಗಳಾದ ಗುಲ್ಬರ್ಗಾ,

ಚಿಂಚೋಳಿ, ಸೇಡಂ, ಕೋಡಂಗಲ್, ಶಹಾಪುರ, ಸುರಪುರ, ಅಂದೋಲಾ, ಆಳಂದ, ಚಿತ್ತಾಪುರ, ಅಫಜಲ್‌ಪುರ, ತಾಂಡೂರ್ ಮತ್ತು ಯಾದಗಿರಿ. ಉಪವಿಭಾಗಗಳು ಗುಲ್ಬರ್ಗಾ, ತಾಂಡೂರ್ ಮತ್ತು ಯಾದಗಿರಿ. ಈ ೧೨ ತಾಲ್ಲೂಕುಗಳ ಪೈಕಿ ಕೋಡಂಗಲ್ ಮತ್ತು ತಾಂಡೂರು ತಾಲ್ಲೂಕುಗಳನ್ನು ಆಂಧ್ರ ಪ್ರದೇಶದಲ್ಲಿ ಉಳಿಸಿಕೊಂಡು ನವೆಂಬರ್ ಒಂದು ೧೯೫೬ರಂದು ಉಳಿದ ೧೦ ತಾಲ್ಲೂಕುಗಳನ್ನು ಒಳಗೊಂಡ ಗುಲ್ಬರ್ಗಾ ಜಿಲ್ಲೆಯನ್ನು ವಿಶಾಲ ಮೈಸೂರು ರಾಜ್ಯಕ್ಕೆ ವರ್ಗಾಯಿಸಲಾಯಿತು.

೨.೬. ವಾಯುಗುಣ (ಹವಾಮಾನ)

ಗುಲ್ಬರ್ಗಾ ಜಿಲ್ಲೆಯ ವಾಯುಗುಣ ಶುಷ್ಕ ಮತ್ತು ಆರೋಗ್ಯಕರವಾಗಿದೆ. ಇಲ್ಲಿಯ ಹವಾಗುಣ ಸ್ಥೂಲವಾಗಿ (ಡೆಕ್ಕನ್) ದಕ್ಷಿಣ ಪ್ರಸ್ಥಭೂಮಿಯ ಮಾದರಿಯಲ್ಲೇ ಇದೆ. ಫೆಬ್ರವರಿಯಿಂದ ಜೂನ್ ಆರಂಭದವರೆಗೆ ಬೇಸಿಗೆ ಕಾಲ. ಅಲ್ಲಿಂದ ಮುಂದೆ ಸೆಪ್ಟೆಂಬರ್ ಅಂತ್ಯದವರೆಗೆ ಮಳೆಗಾಲ, ಅನಂತರ ಮಳೆಗಾಲ ತೀವ್ರವಾಗಿ ಹಿನ್ನಡೆಯುತ್ತದೆ. ಡಿಸೆಂಬರ್‌ನಿಂದ ಫೆಬ್ರವರಿಯವರೆಗೆ ಚಳಿಗಾಲವಿರುತ್ತದೆ. ಗುಲ್ಬರ್ಗಾ ಜಿಲ್ಲೆಯ ಹವಾಮಾನದ ವಾತವರಣವು ಘಿಸಾಡಿ ಸಮುದಾಯಕ್ಕೆ ಹೊಂದಿಕೆಯಾಗಿರುವುದು. ಏಕೆಂದರೆ ಸದಾ ಅತಿ ಮಳೆ ಬೀಳುವ ಪ್ರದೇಶವಾಗಿದ್ದರೆ, ಇವರ ಕಮ್ಮಾರಿಕೆಯ ಕುಲುಮೆ ಕೆಲಸಗಳು ನಿಂತು ಹೋಗುತ್ತವೆ. ಆದುದರಿಂದ ಈ ಜಿಲ್ಲೆಯ ಪರಿಸರವು ಘಿಸಾಡಿ ಸಮುದಾಯಕ್ಕೆ ಹೊಂದಿಕೆಯಾಗಿರುವುದು ಸಮುದಾಯ ನೆಲೆಸಲು ಕಾರಣವಾಗಿದೆ. ಈ ಜಿಲ್ಲೆಯ ಮಳೆ, ಉಷ್ಣತೆ, ಗಾಳಿ ಕೆಳಗಿನಂತೆ ವಿವರಿಸಲಾಗಿದೆ.

ಮಳೆ : ಜಿಲ್ಲೆಯಲ್ಲಿರುವ ನಾಲ್ಕು ವಿವಿಧ ಮಳೆ ಮಾಪನ ಕೇಂದ್ರಗಳಲ್ಲಿ ಹಿಂದಿನ ೪೧-೯೬ ವರ್ಷಗಳ ಅಂಕಿ-ಅಂಶಗಳು ದೊರಕುತ್ತವೆ. ಜಿಲ್ಲೆಯಲ್ಲಿ ವಾರ್ಷಿಕ ಸರಾಸರಿ ಮಳೆ ೭೧೨.೬ ಮಿ.ಮೀ. (೧೯೦೧-೧೯೫೦). ಈ ವಾರ್ಷಿಕ ಸರಾಸರಿ ಮಳೆಯ ಪ್ರಮಾಣವು ೧೯೦೧ ರಿಂದ ೧೯೭೦ರ ಅವಧಿಯಲ್ಲಿ ೭೭೬.೫ ಮಿ.ಮಿ.ಗೆ ಏರಿದೆ. ರಾಜ್ಯದಲ್ಲಿ ಮಧ್ಯಮ ಪ್ರಮಾಣದಿಂದ ಕಡಿಮೆ ಪ್ರಮಾಣದಲ್ಲಿ ಮಳೆ ಬೀಳುವ ಪ್ರದೇಶದಲ್ಲಿ ಈ ಜಿಲ್ಲೆಯು ಇರುವುದರಿಂದ ಸಾಮಾನ್ಯವಾಗಿ ಬರಗಾಲ ಮತ್ತು ಕ್ಷಾಮ ಪರಿಸ್ಥಿತಿಗಳು ಆಗಾಗ್ಗೆ ಸಂಭವಿಸುತ್ತಿರುತ್ತವೆ. ಮಳೆಯ ಪ್ರಮಾಣವು ಜಿಲ್ಲೆಯಲ್ಲಿ ನೈಋತ್ಯದಿಂದ ಈಶಾನ್ಯ ದಿಕ್ಕಿನೆಡೆಗೆ ಹೆಚ್ಚುತ್ತಾ ಹೋಗುತ್ತದೆ. ಕೆಲವೊಮ್ಮೆ ಏಪ್ರಿಲ್ ಮತ್ತು ಮೇ ತಿಂಗಳುಗಳಲ್ಲಿ ಬಿರುಗಾಳಿಯಿಂದ ಕೂಡಿದ ಮುಂಗಾರು ಪೂರ್ವ ಮಳೆಯಾಗುವುದುಂಟು. ನೈಋತ್ಯ ಮುಂಗಾರು ಮಳೆ ಮಾರುತದಿಂದ ಜಿಲ್ಲೆಯ ಒಟ್ಟು ಮಳೆಯ ಶೇ. ೮೦ಕ್ಕಿಂತ ಹೆಚ್ಚು ಮಳೆಯಾಗುತ್ತದೆ. ಸಾಮಾನ್ಯವಾಗಿ ಜೂನ್ ಮೊದಲ ವಾರ ನೈರುತ್ಯ ಮುಂಗಾರು ಮಳೆ ಪ್ರಾರಂಭವಾಗಿ ಸೆಪ್ಟೆಂಬರ್ ಕೊನೆಯವರೆಗೂ ಮುಂದುವರೆಯುತ್ತದೆ. ಸೆಪ್ಟೆಂಬರ್ ತಿಂಗಳಿನಲ್ಲಿ ಜಿಲ್ಲೆಯಲ್ಲಿ ಅತೀ ಹೆಚ್ಚು ಮಳೆಯಾಗುತ್ತದೆ.

ಉಷ್ಣತೆ : ಗುಲ್ಬರ್ಗಾದಲ್ಲಿ ಹವಾಮಾನ ವೀಕ್ಷಣಾಲಯದಲ್ಲಿನ ಉಷ್ಣತೆಯ ಅಂಕಿ ಅಂಶಗಳ

ಪ್ರಕಾರ ಜಿಲ್ಲೆಯಲ್ಲಿ ಡಿಸೆಂಬರ್ ತಿಂಗಳಿನಲ್ಲಿ ಅತಿ ಹೆಚ್ಚು ಚಳಿ ಇರುತ್ತದೆ. ಆಗ ಸರಾಸರಿ ದೈನಂದಿನ ಅತೀ ಹೆಚ್ಚು ಉಷ್ಣತೆ ೨೯.೦೫° ಡಿಗ್ರಿ ಸೆಲ್ಸಿಯರ್ ಮತ್ತು ಅತಿ ಕಡಿಮೆ ಉಷ್ಣತೆ ೧೫.೫° ಆಗಿರುತ್ತದೆ. ಫೆಬ್ರವರಿ ಮಧ್ಯಭಾಗದಿಂದ ಉಷ್ಣತೆ ಏರುತ್ತಾ ಹೋಗಿ ಮೇ ತಿಂಗಳಿನಲ್ಲಿ ಅತೀ ಹೆಚ್ಚು ಉಷ್ಣತೆ ಇರುತ್ತದೆ. ಆಗ ದೈನಂದಿನ ಅತೀ ಹೆಚ್ಚು ಉಷ್ಣತೆ ೪೦.೨° ಮತ್ತು ಅತೀ ಕಡಿಮೆ ಉಷ್ಣತೆ ೨೬.೩° ಇರುತ್ತದೆ. ಹಗಲಿನ ಉಷ್ಣತೆಯು ಬೇಸಿಗೆ ಕಾಲದಲ್ಲಿ ಕೆಲವೊಮ್ಮೆ ೪೫° ಡಿಗ್ರಿ ಸೆಲ್ಸಿಯಸ್‌ವರೆಗೂ ತಲುಪುವುದುಂಟು. ಜೂನ್ ತಿಂಗಳಿನ ಮೊದಲ ವಾರದಲ್ಲಿ ನೈಋತ್ಯ ಮಾನ್ಸೂನ್‌ನಿಂದ ಮಳೆ ಪ್ರಾರಂಭದೊಂದಿಗೆ ಉಷ್ಣತೆಯು ಕಡಿಮೆಯಾಗುತ್ತಾ ಹೋಗುತ್ತದೆ. ಸೆಪ್ಟೆಂಬರ್ ತಿಂಗಳಿನಲ್ಲಿ ನೈರುತ್ಯ ಮಾನ್ಸೂನ್ ಅಂತ್ಯದೊಡನೆ ಹಗಲಿನ ಉಷ್ಣತೆಯು ಹೆಚ್ಚಿದ್ದು ರಾತ್ರಿ ವೇಳೆಯ ಉಷ್ಣತೆಯು ಕ್ರಮೇಣ ಕಡಿಮೆಯಾಗುತ್ತಾ ಹೋಗುತ್ತದೆ. ಅಕ್ಟೋಬರ್ ತಿಂಗಳಿನ ನಂತರ ಉಷ್ಣತೆಯು ಕಡಿಮೆಯಾಗುತ್ತಾ ಹೋಗುತ್ತದೆ. ಡಿಸೆಂಬರ್ ತಿಂಗಳಲ್ಲಿ ಹಗಲು ಮತ್ತು ರಾತ್ರಿ ವೇಳೆಯ ಉಷ್ಣತೆಯೂ ಕ್ರಮೇಣ ಕಡಿಮೆಯಾಗುತ್ತಾ ಹೋಗಿ ಅತೀ ಹೆಚ್ಚು ಚಳಿಯ ತಿಂಗಳೆನಿಸಿದೆ.

ಗಾಳಿ : ಜಿಲ್ಲೆಯಲ್ಲಿ ಗಾಳಿಯು ಅಲ್ಪ ಪ್ರಮಾಣದಿಂದ ಮಧ್ಯಮ ಪ್ರಮಾಣದಲ್ಲಿ ಬೀಸುತ್ತಿದ್ದು ಬೇಸಿಗೆಯ ಉತ್ತರಾರ್ಧ ಭಾಗದಲ್ಲಿ ಮತ್ತು ಮಾನ್ಸೂನ್ ಅವಧಿಯಲ್ಲಿ ಇದರ ಬೀಸುವಿಕೆಯ ತೀವ್ರತೆ ಹೆಚ್ಚುತ್ತದೆ. ಇದು ಮಾನ್ಸೂನ್ ಅವಧಿಯಲ್ಲಿ ನೈಋತ್ಯ ಮತ್ತು ವಾಯುವ್ಯ ದಿಕ್ಕಿನ ಮಧ್ಯದಿಂದ ಬೀಸುತ್ತದೆ. ಮಾನ್ಸೂನ್ ನಂತರದ ಅವಧಿಯಲ್ಲಿ ಈಶಾನ್ಯ ಮತ್ತು ಪೂರ್ವ ದಿಕ್ಕಿನ ಮಧ್ಯದಿಂದ ಬೀಸುತ್ತದೆ. ಚಳಿಗಾಲದಲ್ಲಿ ಈಶಾನ್ಯ ಮತ್ತು ಆಗ್ನೇಯ ಎರಡೂ ದಿಕ್ಕುಗಳಿಂದ ಬೀಸುತ್ತದೆ. ಬೇಸಿಗೆ ಕಾಲದಲ್ಲಿ ಗಾಳಿ ಬೀಸುವ ದಿಕ್ಕು ಬದಲಾಗುತ್ತಿದ್ದು ಮೇ ತಿಂಗಳಲ್ಲಿನಲ್ಲಿ ಸಾಮಾನ್ಯವಾಗಿ ಉತ್ತರ ಮತ್ತು ಪಶ್ಚಿಮ ದಿಕ್ಕುಗಳ ನಡುವಿನಿಂದ ಬೀಸುತ್ತದೆ. ಜಿಲ್ಲೆಯಲ್ಲಿ ಚಂಡಮಾರುತದ ಹಾವಳಿ ಅತಿ ವಿರಳವಾಗಿರುತ್ತದೆ.

೨.೭. ಧರ್ಮಗಳು

ಗುಲ್ಬರ್ಗಾ ಜಿಲ್ಲೆಯಲ್ಲಿ ಸಾಮಾನ್ಯವಾಗಿ ಹಿಂದೂ, ಇಸ್ಲಾಂ, ಜೈನ ಹಾಗೂ ಕ್ರೈಸ್ತ ಧರ್ಮಗಳು ಪ್ರಮುಖವಾಗಿ ಕಂಡುಬರುತ್ತವೆ. ಫಿಸಾಡಿ ಸಮುದಾಯವು ಒಂದು ತೀರಾ ಹಿಂದುಳಿದ ಅಲೆಮಾರಿ ಬುಡಕಟ್ಟು ಸಮುದಾಯವಾಗಿದು, ಇವರು ತಮ್ಮ ಹಿಂದೂ ಧರ್ಮದ ಆಚರಣೆಗಳ ಜೊತೆಗೆ, ಇವರ ಮೇಲೆ ಇಸ್ಲಾಂ ದೈವಗಳ ಪ್ರಭಾವಾಗಿರುವುದು ಕಂಡುಬರುತ್ತದೆ. ಏಕೆಂದರೆ ಇವರು ಬಹುತೇಕ ಇಸ್ಲಾಂ ದೈವಗಳಲ್ಲಿನ ಉರುಸು, ಜಾತ್ರೆ, ಉತ್ಸವ ಆಚರಣೆಗಳಲ್ಲಿ ಪಾಲ್ಗೊಳುವುದರೊಂದಿಗೆ ಅನೇಕ ಇಸ್ಲಾಂ ದೈವಳಿಗೆ ಹರಕೆ ಹೊತ್ತುಕೊಂಡು ಹರಕೆ ತೀರಿಸಿ ಬರುತ್ತಾರೆ. ಸಾಮಾನ್ಯವಾಗಿ ಇವರು ಈ ದೇವರುಗಳಲ್ಲಿ ಮಕ್ಕಳಿಗೆ ಜವಳ ತೆಗೆಸುವ ಹರಕೆ, ಕುರಿಬಲಿ ಕೊಡುವ ಹರಕೆಗಳು

ಹೊತ್ತುಕೊಂಡು ಹರಕೆ ತೀರಿಸಿ ಬರುತ್ತಾರೆ. ಆದರೆ ಈ ಜಿಲ್ಲೆಯಲ್ಲಿರುವ ಕ್ರಿಶ್ಚಿಯನ್ ಧರ್ಮದ ಪ್ರಭಾವ ಇವರ ಮೇಲೆ ಅಷ್ಟೇನು ಆಗಿರುವುದು ಕಂಡುಬರುವುದಿಲ್ಲ. ಈ ಜಿಲ್ಲೆಯ ವಿವಿಧ ಧರ್ಮಗಳು ಕುರಿತು ಈ ಕೆಳಗಿನಂತೆ ಸಂಕ್ಷಿಪ್ತವಾಗಿ ವಿವರಿಸಲಾಗಿದೆ.

ಹಿಂದೂ ಧರ್ಮ : ಹಿಂದೂಗಳಲ್ಲಿ ಅನೇಕ ಜಾತಿ, ಉಪಜಾತಿ, ಪಂಥಗಳು ಕಂಡುಬಂದರೂ ಅವರ ಸಾಮಾಜಿಕ ಮೌಲ್ಯಗಳು, ನಂಬಿಕೆಗಳು ಮತ್ತು ಪವಿತ್ರ ಗ್ರಂಥಗಳು ಒಂದೇ ಆಗಿದ್ದು, ಇವು ಅವರ ಐಕ್ಯತಾಶಕ್ತಿಗಳಾಗಿವೆ ಎನ್ನಬಹುದು. ವೇದಗಳು, ಉಪನಿಷತ್ತುಗಳು, ಪುರಾಣಗಳು ಹಾಗೂ ರಾಮಾಯಣ, ಮಹಾಭಾರತ ಮತ್ತು ಭಗವದ್ಗೀತೆ ಹಿಂದೂಗಳ ಪವಿತ್ರ ಗ್ರಂಥಗಳಾಗಿವೆ. ಬ್ರಹ್ಮ ವಿಷ್ಣು ಮಹೇಶ್ವರರನ್ನು ಅವರ ಅವತಾರಗಳನ್ನೂ ಪರಿವಾರ ದೇವದೇವತೆಗಳನ್ನು ಹಿಂದೂಗಳು ಪೂಜಿಸುತ್ತಾರೆ. ಹಿಂದೂ ದೇವಾಲಯಗಳಲ್ಲಿ ಸಾಂಪ್ರದಾಯಿಕವಾಗಿ ಪೂಜೆ ಮಾಡುವಾಗ ಅರ್ಚಕರು ಸಂಸ್ಕೃತ ಶ್ಲೋಕಗಳನ್ನು ವೇದ ಮಂತ್ರಗಳನ್ನು ಪಠಿಸುತ್ತಾರೆ. ಹಿಂದೂಗಳ ಚಿಂತನೆಯಲ್ಲಿ ಬಸವಣ್ಣನವರ ಶಕ್ತಿ ವಿಶಿಷ್ಟಾದ್ವೈತ, ಶಂಕರಾಚಾರ್ಯರ ಅದ್ವೈತ, ರಾಮಾನುಜರ ವಿಶಿಷ್ಟಾದ್ವೈತ, ಮಧ್ವಾಚಾರ್ಯರ ದ್ವೈತ ಸಿದ್ಧಾಂತಗಳು ಮುಖ್ಯವಾದವುಗಳು. ಬಸವಣ್ಣನವರ ಅನುಯಾಯಿಗಳು ಜಿಲ್ಲೆಯಲ್ಲಿ ಅಪಾರ ಸಂಖ್ಯೆಯಲ್ಲಿದ್ದು ಅವರ ಸಂಪ್ರದಾಯದ ಅನೇಕ ಮಠಗಳಿವೆ. ಜಿಲ್ಲೆಯ ಕೆಲವಡೆಗಳಲ್ಲಿ ಶಂಕರಸೇವಾ ಸಮಿತಿಗಳು, ಉತ್ತರಾಧಿಮಠದ ಪರಂಪರೆಯಲ್ಲಿ ಬರುವ ಯತಿಗಳ ಬೃಂದಾವನಗಳು ಹಾಗೂ ರಾಘವೇಂದ್ರ ಸ್ವಾಮಿಗಳ ಮಠಗಳು ಇವೆ. ಮೈಲಾಪುರದ ಮಲ್ಲಯ್ಯ, ದತ್ತಾತ್ರೆಯ ಹಾಗೂ ಪಾಂಡುರಂಗನ ಭಕ್ತರು ಮತ್ತು ನಾಥಪಂಥದ ಅನುಯಾಯಿಗಳು ಜಿಲ್ಲೆಯಲ್ಲಿದ್ದಾರೆ. ಜೇವರ್ಗಿ ತಾಲ್ಲೂಕಿನ ಗಂವ್ಹಾರ್ ಮತ್ತು ಕೋಳಕೂರ, ಅಫಜಲ್‌ಪುರ ಹಾಗೂ ಇದೆ. ತಾಲ್ಲೂಕಿನ ಮಾಶಾಳ, ಸುರಪುರ ಹಾಗೂ ಇದೇ ತಾಲ್ಲೂಕಿನ ರಂಗಂಪೇಟ್ ಮೊದಲಾದ ಸ್ಥಳಗಳು ನಾಥಪಂಥದ ಚಟುವಟಿಕಾ ಕೇಂದ್ರಗಳಾಗಿವೆ.

ಜೈನ ಧರ್ಮ : ಜೈನಧರ್ಮದಲ್ಲಿ ದಿಗಂಬರ ಹಾಗೂ ಶ್ವೇತಾಂಬರಗಳೆಂಬ ಪಂಗಡಗಳಿದ್ದು ಜಿಲ್ಲೆಯಲ್ಲಿ ದಿಗಂಬರ ಪಂಗಡದವರೇ ಹೆಚ್ಚಾಗಿರುವುದು ತಿಳಿದುಬರುತ್ತದೆ. ಕ್ರಿ.ಶ. ೧ನೇ ಶತಮಾನದಲ್ಲಿ ಪಾದಲಿಪ್ತಚಾರ್ಯರು ದಕ್ಷಿಣ ಭಾರತಕ್ಕೆ ಬಂದಾಗ, ಮಳಖೇಡದ ಸುತ್ತಮುತ್ತ ಶ್ವೇತಾಂಬರರಿದ್ದರೆಂದು ತಿಳಿದುಬರುತ್ತದೆ. ಜಿಲ್ಲೆಯ ಶಾಹಾಪುರ ತಾಲ್ಲೂಕಿನ ಗೋಗಿ ಗ್ರಾಮದ ಸಮೀಪ ಚಾರಣಗಿರಿ ಬೆಟ್ಟದ ಬಂಡೆಯಲ್ಲಿ ಪಾರ್ಶ್ವನಾಥ ತೀರ್ಥಂಕರ ಪ್ರತಿಮೆಯನ್ನು ಕಡೆದಿರುವುದು ಕಂಡುಬಂದಿದೆ. ಇದು ಸುಮಾರು ಕ್ರಿ.ಶ. ೫ ಅಥವಾ ೬ನೇ ಶತಮಾನದ್ದಾಗಿರಬಹುದೆಂದು ಗೋಗಿಯ ಡಿ.ಎನ್.ಅಕ್ಕಿಯವರು ಅಭಿಪ್ರಾಯಪಡುತ್ತಾರೆ. ಹಾಗೂ ಇಂತಹದೇ ಪ್ರತಿಮೆಯನ್ನು ಯಾದಗಿರಿಯ ಸಮೀಪದ ಬೆಟ್ಟದಲ್ಲಿ ಕಂಡುಬರುವುದಾಗಿ ಅವರು ಹೇಳುತ್ತಾರೆ. ಜೈನಧರ್ಮದ ಇನ್ನೊಂದು ಶಾಖೆಯಾದ ಯಾಪನೀಯ ಪಂಗಡವು ಸೇಡಂ ತಾಲ್ಲೂಕಿನ ಆಡಕಿಯಲ್ಲಿ ಇದ್ದವೆಂದು ತಿಳಿದುಬರುತ್ತದೆ. ಜಿಲ್ಲೆಯಲ್ಲಿ ಆಳಿದ ರಾಷ್ಟ್ರಕೂಟರು ಜೈನಧರ್ಮಕ್ಕೆ ಪ್ರೋತ್ಸಾಹ ನೀಡಿದರು.

ನೃಪತುಂಗನು ಜೈನನಾಗಿದ್ದನೆಂದು ತಿಳಿಯಲಾಗಿದೆ. ಮಳಖೇಡದಲ್ಲಿ ೧೪ ಬಸದಿಗಳಿದ್ದವೆಂದು ಅವುಗಳಲ್ಲಿ ಅನೇಕ ಧರ್ಮ ಗ್ರಂಥಗಳಿದ್ದವೆಂದೂ ಪಿ.ಬಿ. ದೇಸಾಯಿಯವರು ಅಭಿಪ್ರಾಯಪಡುತ್ತಾರೆ. ರಾಷ್ಟ್ರಕೂಟರು ಹಾಗೂ ಕಲ್ಯಾಣ ಚಾಲುಕ್ಯರ ಆಸ್ಥಾನದಲ್ಲಿದ್ದ ಜೈನ ಕವಿಗಳಾದ ಸೋಮದೇವಸೂರಿ, ವೀರಸೇನ ಮೊದಲಾದವರು ಸಂಸ್ಕೃತದಲ್ಲಿಯೂ; ಪಂಪ, ಪೊನ್ನ, ರನ್ನ, ನಾಗಚಂದ್ರ ಮೊದಲಾದವರು ಕನ್ನಡದಲ್ಲಿಯೂ ಜೈನ ಮತೀಯ ಗ್ರಂಥಗಳನ್ನು ರಚಿಸಿದ್ದಾರೆ.

ಜಿಲ್ಲೆಯ ಆಡಕಿಯಲ್ಲಿ ಪಾರ್ಶ್ವನಾಥ, ವರ್ಧಮಾನ, ಶಾಂತಿನಾಥರ ವಿಗ್ರಹಗಳು, ಆಳಂದಲ್ಲಿ ಪಾರ್ಶ್ವನಾಥ, ಶಂಬ, ಜಿನೇಶ್ವರರ ಮೂರ್ತಿಗಳು, ಭಂಕೂರಿನಲ್ಲಿ ಬಸ್ತಿ ಗುಡಿಯಿದ್ದು ಅದರಲ್ಲಿ ಆದಿನಾಥ ಮೊದಲಾದ ಅನೇಕ ಜೈನ ಪುಣ್ಯ ಪುರುಷರ ಮೂರ್ತಿಗಳೂ ಇವೆ. ಚಿಂಚೋಳಿಯಲ್ಲಿ ಜೈನ ವಸ್ತುವಿನ ಅವಶೇಷಗಳಲ್ಲದೆ ನಿಸದಿಕಲ್ಲು ದೊರೆತಿದೆ. ಹಾಗರಗಿ, ಹರಸೂರು, ಹುಣಸಗಿ, ಹಡಗಲಿ, ಇಂಗಳಗಿ, ಸೇಡಂ, ನಾಗಾಯಿ ಮುಂತಾದ ಸ್ಥಳದಲ್ಲಿ ಜೈನ ಬಸದಿಗಳು, ಜೈನ ಶಿಲ್ಪಾವಶೇಷಗಳು ಕಂಡುಬರುತ್ತವೆ.

ಬೌದ್ಧ ಧರ್ಮ : ಜಿಲ್ಲೆಯಲ್ಲಿ ಕ್ರಿಸ್ತಪೂರ್ವದ ಕಾಲದಲ್ಲೇ ಬೌದ್ಧಮತದ ಪ್ರಭಾವವಿತ್ತೆಂದು ಹೇಳಬಹುದು. ಪ್ರಾಚ್ಯವಸ್ತು ಇಲಾಖೆಯವರು ಕೈಗೊಂಡಿರುವ ಉತ್ಖನನದ ಫಲವಾಗಿ ಮಳಖೇಡ, ಸೇಡಂ ಮತ್ತು ಸನ್ನತಿಗಳು ಪ್ರಮುಖ ಬೌದ್ಧ ಕೇಂದ್ರಗಳಾಗಿದ್ದವೆಂದು ತಿಳಿದು ಬಂದಿದೆ. ಸನ್ನತಿಯಲ್ಲಿ ದೊರೆಕಿರುವ ಅಶೋಕನ ಬ್ರಾಹ್ಮಿ ಲಿಪಿಯ ಶಾಸನಗಳು ಹಾಗೂ ಇತರ ಬೌದ್ಧ ಅವಶೇಷಗಳೂ ಬೌದ್ಧ ಧರ್ಮದ ಅಸ್ತಿತ್ವಕ್ಕೆ ದಾಖಲೆಗಳಾಗಿವೆ. ಮುಂದೆ ಕ್ರಿ.ಶ. ಆರಂಭ ಕಾಲದಿಂದಲೇ ಶಾತವಾಹನರ ಕಾಲದ ಶಿಲ್ಪಗಳು, ಸ್ತೂಪಗಳಂತಹ ರಚನೆಗಳು ಭೀಮಾನದಿಯ ದಡದಲ್ಲಿ ಕಂಡುಬರುತ್ತದೆ. ಗುಲ್ಬರ್ಗಾ ತಾಲ್ಲೂಕಿನ ಹಾಗರಗುಂಡಗಿ, ಅಂಬಿಗಳಲ್ಲೂ, ಚಿತ್ತಾಪುರ ತಾಲ್ಲೂಕಿನ ಕನಗನಹಳ್ಳಿ ಮತ್ತು ಕೊಲ್ಲೂರುಗಳಲ್ಲಿ ಸ್ತೂಪಗಳಂತಹ ರಚನೆ, ಇಟ್ಟಿಗೆ ಕಟ್ಟಡಗಳ ಅವಶೇಷ ಹಾಗೂ ನುಣುಪು ಕಲ್ಲಿನ ಭಿನ್ನವಾದ ಶಿಲ್ಪಗಳು ದೊರೆತಿದ್ದು ಇವು ಕ್ರಿ.ಶ. ಆರಂಭಕಾಲದ್ದಾಗಿವೆ. ಸನ್ನತಿಯಿಂದ ಕನಗನ ಹಳ್ಳಿಯವರೆಗೆ ಸುಮಾರು ಮೂರು ಕಿ.ಮೀ. ಪ್ರದೇಶದಲ್ಲಿ ಸ್ತೂಪಗಳು, ಆರ್ಯಕ ಸ್ತಂಭಗಳು, ಶಿಲಾಕ್ವಲರ್‌ಗಳು, ವಜ್ರಾಸನ, ಬುದ್ಧಪದ ಚಿಹ್ನೆ, ಭೋದಿವೃಕ್ಷ, ಕುಬ್ಜಯಕ್ಷರು ಮೊದಲಾದ ಬೌದ್ಧಾವಶೇಷಗಳು ಹಾಗೂ ಹಲವಾರು ಶಾಸನಗಳು ದೊರೆತಿವೆ. ಇವೆಲ್ಲವು ಕ್ರಿ.ಶ. ಒಂದರಿಂದ ಮೂರನೇ ಶತಮಾನದ ಅವಧಿವೆಂದು ತಿಳಿದು ಬರುತ್ತದೆ.

ಜಿಲ್ಲೆಯಲ್ಲಿ ಒಂದೊಂದೇ ಪಂಕ್ತಿ ಇರುವ ಹಲವಾರು ಶಾಸನಗಳು ದೊರೆತಿದ್ದು, ಇವು ಬೌದ್ಧ ಸ್ತೂಪ ವಿಹಾರ, ಸಂಕ್ಷರಾಮಗಳಿಗೆ ದತ್ತಿದಾನ ನೀಡಿದ ಪ್ರಮುಖ ಹೆಸರಿರಬಹುದೆಂದು ಹನುಮಾಕ್ಷಿ ಗೋಗಿ ಅವರು ಅಭಿಪ್ರಾಯಪಟ್ಟಿರುತ್ತಾರೆ. ಅಣಬಿ, ಅವರಾದಿ, ಜೇವರ್ಗಿ, ಬೆಳ್ವಾಡಗಿ ಹಾಗೂ ವಜ್ಜಲಗಳಲ್ಲಿ ಶಾತವಾಹನರ ಕಾಲದ ಪ್ರಾಕೃತ ಭಾಷೆಯ ಶಾಸನಗಳು ದೊರೆಯುತ್ತವೆ.

ಇವಲ್ಲದೆ ಲಿಪಿ ಇರುವ ಅಥವಾ ಇಲ್ಲದ ಹಲವಾರು ಸ್ಥಂಭಗಳು ಈ ಪ್ರದೇಶದಲ್ಲಿ ದೊರೆತಿವೆ. ವೀರಗಲ್ಲನ್ನು ಹೋಲುವಂತೆ ಹಲವಾರು ಹಂತಗಳಲ್ಲಿ ಉಬ್ಬು ಶಿಲ್ಪಗಳನ್ನು ಕಲ್ಲಿನಕಂಬ ಅಥವಾ ಹಲಗೆಯ ಮೇಲೆ ರೂಪಿಸಿದ್ದು ಸಾಮಾನ್ಯವಾಗಿ ವಿಶ್ರಮಿಸಿಕೊಳ್ಳುತ್ತಿರುವ ವೃಷಭ ಹಾಗೂ ಬಂಡಿಗಳು ಕೆಳಹಂತದಲ್ಲಿದ್ದು, ಮೇಲುಹಂತದಲ್ಲಿ ಓರ್ವ ದಂಪತಿಗಳ ಶಿಲ್ಪವಿರುತ್ತದೆ. ಇವು ನಿಧನ ಹೊಂದಿದ ಪ್ರಸಿದ್ಧರ ನೆನಪಿಗಾಗಿ ಹಾಕಿಸಿದ ಸ್ಮಾರಕ ಸ್ಥಂಭಗಳಾಗಿರಬಹುದು. ಈ ಎಲ್ಲಾ ಅಂಶಗಳು ಬೌದ್ಧಮತದಿಂದ ಬಂದಿರಬಹುದು ಎಂದು ಶಂಕಿಸಲಾಗಿದೆ.

ಇಸ್ಲಾಂ ಧರ್ಮ : ಹದಿಮೂರನೆ ಶತಮಾನದಲ್ಲಿ ದೆಹಲಿ ಸುಲ್ತಾನರು ಗುಲ್ಬರ್ಗಾ ಜಿಲ್ಲಾ ಪ್ರದೇಶವನ್ನು ವಶಪಡಿಸಿಕೊಳ್ಳುವ ಯತ್ನದಿಂದಾಗಿ ಜಿಲ್ಲೆಯಲ್ಲಿ ಮಹಮ್ಮದೀಯ ಸಂಸ್ಕೃತಿ ಮತ್ತು ಭಾಷೆಗಳು ಬೆಳೆದು ಬಂದವು. ನಂತರ ೧೩೪೭ರಲ್ಲಿ ಹಸನಗಂಗು ಗುಲ್ಬರ್ಗಾವನ್ನು ಕೇಂದ್ರವಾಗಿಸಿ ಕೊಂಡು ಬಹಮನಿ ಸಾಮ್ರಾಜ್ಯವನ್ನು ಸ್ಥಾಪಿಸಿದನು. ಮುಂದೆ ಸಾಮ್ರಾಜ್ಯದ ಕೇಂದ್ರ ಸ್ಥಾನವು ಬೀದರ್‌ಗೆ ವರ್ಗವಾದರೂ ಈ ಪ್ರದೇಶ ಅವರ ವಶದಲ್ಲಿಯೇ ಇದ್ದು. ನಂತರದಲ್ಲಿ ಹೈದ್ರಾಬಾದ್ ನಿಜಾಮರ ವಶಕ್ಕೆ ಸೇರಿತು. ೧೩ನೇ ಶತಮಾನದ ಅಂತ್ಯದಲ್ಲಿ ಗುಲ್ಬರ್ಗಾಕ್ಕೆ ಬಂದು ನೆಲೆಸಿದ ಖ್ವಾಜಾಬಂದೇ ನವಾಜ್ ಒಂದು ರೀತಿಯಲ್ಲಿ ವೈಚಾರಿಕ ಕ್ರಾಂತಿಯನ್ನೇ ಮಾಡಿದರು. ಇವರು ಹಲವಾರು ಗ್ರಂಥಗಳನ್ನು ರಚಿಸಿದುದೇ ಅಲ್ಲದೆ, ಇವರು ನಡೆಸುತ್ತಿದ್ದ ಪ್ರಾರ್ಥನಾ ಸಭೆಗಳು ಹಾಗೂ ಪ್ರವಚನಗಳು ಜನಪ್ರಿಯವಾಗಿದ್ದವು. ಮುಸ್ಲಿಮರ ಅನೇಕ ಸಮಾಧಿಮಂದಿರಗಳು ಹಿಂದೂ-ಮುಸ್ಲಿಂ ಇಬ್ಬರಿಗೂ ಪವಿತ್ರ ಸ್ಥಳಗಳಂತಿದ್ದು ಹಲವಾರು ಧಾರ್ಮಿಕ ಕಾರ್ಯಗಳಲ್ಲಿ ಎರಡೂ ಕೋಮಿನವರು ಭಾಗವಹಿಸುವುದು ಕಂಡುಬರುತ್ತದೆ.

ಚೌಕಾಕಾರದ, ಬೃಹತ್ತಾದ ನಾಲ್ಕು ಮೂಲೆಗಳಿಗೂ ಮಿನಾರಗಳಿರುವ ಕೆಲವಡೆ ಚಿತ್ತಾರಗಳಿಂದ ಕೂಡಿರುವ ಮುಸ್ಲಿಂ ಶೈಲಿಯದೇ ಆದ ಮಂದಿರಗಳು ತಿಂಥಿಣಿ, ಭೈರಾಮಡಗಿ, ಶಾಹಾಪುರ, ಸುರಪುರ, ವಡಗೇರಾ, ಅಳಂದ, ಮಾದನಹಿಪ್ಪರಗಿ ಮುಂತಾದ ಕಡೆಗಳಲ್ಲಿ ಇಡೀ ಜಿಲ್ಲೆಯಾದ್ಯಂತ ಕಂಡು ಬರುತ್ತವೆ.

ನಮಾಜ್, ಬಡವರಿಗೆ ಭಿಕ್ಷೆ ನೀಡುವುದು, ರಂಜಾನ್ ತಿಂಗಳಲ್ಲಿ ಉಪವಾಸ ಮಾಡುವುದು ಹಾಗೂ ಮೆಕ್ಕಾ ಪಟ್ಟಣಕ್ಕೆ (ಹಜ್‌ಯಾತ್ರೆ) ಹೋಗಿಬರುವುದು ಮುಸ್ಲಿಮರ ಧಾರ್ಮಿಕ ಕರ್ತವ್ಯ ವಾಗಿದೆ. ಅವರ ಪೂಜಾ ವಿಧಾನದಲ್ಲಿ ದಿನಕ್ಕೆ ಐದು ಬಾರಿ ನಮಾಜ್ ಪ್ರಾರ್ಥನೆ ಮಾಡುವುದು ಕಂಡುಬರುತ್ತದೆ. ಮುಸಲ್ಮಾನರು ಒಬ್ಬ ದೇವನಲ್ಲಿ ಅವನ ದೂತರಲ್ಲಿ, ಪವಿತ್ರವಾದ ಕುರಾನಿನಲ್ಲಿ ಅಲ್ಲಿನ ಪ್ರವಾದಿಗಳಲ್ಲಿ ಅವನ ನ್ಯಾಯದಲ್ಲಿ ಸ್ವರ್ಗ-ನರಕಗಳಲ್ಲಿ ಹಾಗೂ ದೈವಿಕ ವಿಧಿಗಳಲ್ಲಿ ನಂಬಿಕೆಯಿಟ್ಟಿದ್ದಾರೆ.

ಕ್ರೈಸ್ತ ಧರ್ಮ : ಜಿಲ್ಲೆಯಲ್ಲಿ ಕ್ರೈಸ್ತರಲ್ಲಿ ಕ್ಯಾಥೊಲಿಕ್ ಹಾಗೂ ಪ್ರಾಟಸ್ಟೆಂಟ್ ಎಂಬ

ಎರಡು ಪಂಗಡಗಳು ಇವೆ. ೧೮೮೮ರಲ್ಲಿ ರೆವರೆಂಡ್ ಜೆ.ಎಚ್. ಗಾರ್ಡನ್ ಅವರಿಂದ ಅಂದಿನ ಸುರಪುರ ಸಂಸ್ಥಾನದ ಬುಚ್ಚಣ್ಣನೆಂಬುವನು ಕ್ರೈಸ್ತ ದೀಕ್ಷೆಯನ್ನು ಪಡೆದನೆಂದು ತಿಳಿದುಬರುತ್ತದೆ. ಕ್ರೈಸ್ತ ಮಿಷನರಿಯಾಗಿ ಗುಲ್ಬರ್ಗಾಕ್ಕೆ ಬಂದ ರೆವರೆಂಡ್ ಎರ್ನ್ಸ್ ಬರ್ಜರ್ ಅವರು ೧೮೯೧ರಲ್ಲಿ ಗುಲ್ಬರ್ಗಾದಲ್ಲಿ ವಿಜಯ ವಿದ್ಯಾಲಯವನ್ನು ಆರಂಭಿಸಿದರು. ರೆವರೆಂಡ್ ಎರ್ನ್ಸ್ ಬರ್ಜರ್ ಅವರಿಂದ ದೀಕ್ಷೆ ಪಡೆದ ನಾನಪ್ಪ ದೇಸಾಯಿ ಅವರು ಸುರಪುರ, ಶಾಹಾಪುರ ಹಾಗೂ ಅದರ ಸುತ್ತಮುತ್ತಲಿನ ಹಳ್ಳಿಗಳಲ್ಲಿ ಕೈಗೊಂಡ ಕ್ರೈಸ್ತ ಧರ್ಮದ ಚಟುವಟಿಕೆಗಳಾಗಿ ಮೆಥೋಡಿಸ್ಟ್ ಮಿಶನ್ನಿನವರು ಅವರಿಗೆ ೧೮೯೩ರಲ್ಲಿ 'ವೈದಿಕ ದೀಕ್ಷೆ' ಕೊಟ್ಟರೆಂದು ಅಂದಿನಿಂದ ಅವರು 'ರೆವರೆಂಡ್ ನಾನಪ್ಪ ದೇಸಾಯಿ' ಎನಿಸಿಕೊಂಡರೆಂಬ ಅಭಿಪ್ರಾಯವಿದೆ.

ಇವರು ಸಾಮಾಜಿಕ, ಶೈಕ್ಷಣಿಕ ಹಾಗೂ ಕನ್ನಡ ಸಾಹಿತ್ಯ ಕ್ಷೇತ್ರಗಳಲ್ಲಿ ಬಹುಮುಖ್ಯ ಕಾರ್ಯ ಚಟುವಟಿಕೆಗಳನ್ನು ಕೈಗೊಂಡರು. ವಿದೇಶಿಯ ಮಹಿಳಾ ಮಿಶನರಿ ಮಿಸ್ ಮೇರೋ ಎಂಬುವರು ಇವರನ್ನು ಕುರಿತು 'ಲೈಟ್-ಇನ್ ಇಂಡಿಯಾ' ಎಂಬ ಚಿಕ್ಕ ಹೊತ್ತಿಗೆಯನ್ನು ಬರೆದಿರುವರು. ಗೋವಾದ ಪೋರ್ಚುಗೀಸರು ಚಿತ್ತಾಪುರದಲ್ಲಿ ಚರ್ಚೊಂದನ್ನು ನಿರ್ಮಿಸಿದ್ದು ೧೯೦೫ರಲ್ಲಿ ಇದನ್ನು ಪುನರ್ ನಿರ್ಮಾಣ ಮಾಡಿದ್ದರೆಂದು ಇಂಪೀರಿಯಲ್ ಗ್ಯಾಸೆಟಿಯರ್‌ನಿಂದ ತಿಳಿದು ಬರುತ್ತದೆ. ಜಿಲ್ಲೆಯಲ್ಲಿ ಅನೇಕ ಕ್ಯಾಥೊಲಿಕ್ ಮತ್ತು ಪ್ರಾಟೆಸ್ಟಂಟ್ ಚರ್ಚ್‌ಗಳೂ ಮತ್ತು ಕ್ರೈಸ್ತಮಿಶನರಿಯಿಂದ ಆರಂಭಿಸಲ್ಪಟ್ಟ ಶಿಕ್ಷಣ ಸಂಸ್ಥೆಗಳೂ ಮತ್ತು ಆಸ್ಪತ್ರೆಗಳು ಇವೆ. ಗುಲ್ಬರ್ಗಾದಲ್ಲಿರುವ ಮದರ್ ಆಫ್ ಡಿವೈನ್ ಗ್ರೇಸ್ ಚರ್ಚ್, ಮೆಥಾಡಿಸ್ಟ್ ಚರ್ಚ್ ಮತ್ತು ಬಾಪ್ಟಿಸ್ಟ್ ಮಿಶನ್ ಚರ್ಚ್, ವಾಡಿಯಲ್ಲಿರುವ ಸೇಂಟ್ ಅನ್ಸ್‌ಚರ್ಚ್, ಚಿತ್ತಾಪುರದಲ್ಲಿರುವ ಚರ್ಚ್ ಆಫ್ ಕ್ವೀನ್ ಆಫ್ ಹೆವನ್, ಶಾಹಾಬಾದನಲ್ಲಿರುವ ಸೇಂಟ್ ಥಾಮಸ್ ಚರ್ಚ್ ಮತ್ತು ಮೆಥಾಡಿಸ್ಟ್ ಚರ್ಚ್, ಸೇಡಂನಲ್ಲಿರುವ ಕ್ಯಾಥೊಲಿಕ್ ಚರ್ಚ್, ಸುರಪುರದಲ್ಲಿರುವ ಕ್ಯಾಥೋಲಿಕ್ ಚರ್ಚ್ ಮತ್ತು ಮೆಥಾಡಿಸ್ಟ್ ಚರ್ಚ್ ಹಾಗೂ ಯಾದಗಿರಿಯಲ್ಲಿ ಬಹು ಪ್ರಮುಖವಾದ ಹೋಲಸ್ಟನ್ ಆಸ್ಪತ್ರೆ ಇರುತ್ತದೆ.

೮. ಪ್ರಮುಖವಾದ ಧಾರ್ಮಿಕ ಸಂಸ್ಥೆಗಳು

ಈ ನೆಲೆಯಲ್ಲಿನ ಪ್ರಮುಖವಾದ ಧಾರ್ಮಿಕ ಸಂಸ್ಥೆಗಳಲ್ಲಿ ನಡೆಯುವ ಜಾತ್ರೆ ಉತ್ಸವಗಳು, ಇಡೀ ಜಿಲ್ಲೆಯಲ್ಲಿನ ವಿವಿಧ ಪ್ರದೇಶದ ಜನರು ಬಂದು ಪಾಲ್ಗೊಳ್ಳುವಂತೆ ಮಾಡುತ್ತವೆ. ಪ್ರಮುಖವಾಗಿ ಇಲ್ಲಿ ರೈತಾಪಿ ವರ್ಗ ಮತ್ತು ಜಾತ್ರೆಯಲ್ಲಿನ ವ್ಯಾಪಾರಿ ವರ್ಗಕ್ಕೆ ಸಂಬಂಧಿಸವನ್ನು ಬೆಸೆಯುತ್ತವೆ. ಸಾಮಾನ್ಯವಾಗಿ ಈ ಜಿಲ್ಲೆಯಲ್ಲಿ ಕಂಡುಬರುವ ಪ್ರಮುಖ ಧಾರ್ಮಿಕ ಸಂಸ್ಥೆಗಳ ಜಾತ್ರೆಗಳೆಂದರೆ, ಗುಲ್ಬರ್ಗಾ ಶ್ರೀ ಶರಣ ಬಸವೇಶ್ವರ ಜಾತ್ರೆ, ಖ್ವಾಜಾಬಂದೇ ನವಾಜ್ ಉರುಸ್, ಗಾಣಗಾಪುರದ ದತ್ತಾತ್ರೇಯ ಜಾತ್ರೆ, ಶಾಹಾಪುರದ ಡಿಗ್ಗಿಯ ಸಂಗಮನಾಥನ ಜಾತ್ರೆ ಹಾಗೂ

ಚರಬಸವೇಶ್ವರ ಜಾತ್ರೆ, ನಾರಾಯಣಪುರದ ಛಾಯಾ ಭಗವತಿ ಜಾತ್ರೆ, ಯಾದಗಿರಿಯ ಸಂಗಮ ಕ್ಷೇತ್ರದ ಜಾತ್ರೆ, ಮೈಲಾಪುರ ಮಲ್ಲಯ್ಯನ ಜಾತ್ರೆ, ಹತ್ತಿಕುಣಿ ಬಂದಗಿ ಸಾಹೇಬ ಜಾತ್ರೆ, ಚನ್ನವೀರ ಬಸವೇಶ್ವರ ಜಾತ್ರೆ, ಕಾಳಗಿಯ ಕಾಳೇಶ್ವರ ಮತ್ತು ನರಸಿಂಹ ದೇವಾಲಯಗಳ ಜಾತ್ರೆ, ಗೋಗಿಯ ದೊಡ್ಡಿ ಮಸೀದಿ ಮತ್ತು ಗೋರಿಗಳಲ್ಲಿನ ಉರುಸ್, ಸಗಗರದಲ್ಲಿನ ಶೇಕ್ ಸೂಫಿ ಸರಮಸ್ತ ಸಾಹೇಬರ ಉರುಸ್ ಮುಂತಾದವುಗಳು ನಡೆಯುತ್ತಿದ್ದು. ಘಿಸಾಡಿ ಸಮುದಾಯವು ತಾವು ತಯಾರಿಸಿದ ಕೃಷಿ ಪರಿಕರಗಳಾದ ಕುಂಟೆ, ಫಲಗ, ನೇಗಿಲು ಮೊಣಚು, ಕೂರಿಗೆ ಮೊಳೆಗಳು, ಕುಡಗೋಲು, ಹಾರೆ, ಕುರುಪಿ, ಕೊಡಲಿ, ಗುದ್ದಲಿ, ಸಲಿಕೆಗಳಂತಹ ಮುಂತಾದ ಪರಿಕರಗಳನ್ನು ಜಾತ್ರೆಗಳಲ್ಲಿ ಇಟ್ಟು ಮಾರಾಟ ಮಾಡುವರು. ಇಂತಹ ಸಂದರ್ಭಗಳು ಘಿಸಾಡಿ ಸಮುದಾಯಕ್ಕೆ ಒಳ್ಳೆಯ ವ್ಯಾಪಾರವಾಗುವುದರ ಜೊತೆಗೆ ವಿವಿಧ ಪ್ರದೇಶದಲ್ಲಿ ನೆಲೆಸಿದ ಘಿಸಾಡಿ ಸಮುದಾಯಗಳು ಪರಸ್ಪರ ಬೇಟಿಯಾಗಿ ಕುಶಲೋಪರಿ ವಿಚಾರಗಳನ್ನು ವಿನಿಮಯ ಮಾಡಿಕೊಂಡಂತ್ತಾಗುತ್ತದೆ. ಕೆಲವೊಂದು ಸಲ ಮದುವೆ, ಕನ್ಯ, ಬಂಧುತ್ವಗಳನ್ನು ಕುರಿತು ಕುಲಬಾಂಧವರು ಚರ್ಚೆ ಮಾಡುವ ವೇದಿಕೆಯಾಗಿಯು ಈ ಜಾತ್ರೆಗಳು ಘಿಸಾಡಿ ಸಮುದಾಯಕ್ಕೆ ಅನುಕೂಲವಾಗಿವೆ. ಆದ್ದುದರಿಂದ ಇಲ್ಲಿನ ಪ್ರಮುಖವಾದ ಧಾರ್ಮಿಕ ಸಂಸ್ಥೆಗಳ ಸಂಕ್ಷಿಪ್ತ ಪರಿಚಯವನ್ನು ಈ ಕೆಳಗಿನಂತೆ ವಿವರಿಸಲಾಗಿದೆ.

ಧಾರ್ಮಿಕ ಸಂಸ್ಥೆಗಳು ಸಾಮಾಜಿಕ ಜೀವನಕ್ಕೆ ಪ್ರಭಾವಪೂರಕವಾಗಿವೆ. ಹಲವು ಧಾರ್ಮಿಕ ಸಂಸ್ಥೆಗಳು ಧಾರ್ಮಿಕ ಚಟುವಟಿಕೆಗಳಿಗೆ ಮಾತ್ರ ಸೀಮಿತವಾಗಿರದೆ ಸಾಂಸ್ಕೃತಿಕ ಹಾಗೂ ಶೈಕ್ಷಣಿಕ ಚಟುವಟಿಕೆಗಳನ್ನು ಹಮ್ಮಿಕೊಂಡಿದ್ದು, ಇವುಗಳ ಆಶ್ರಯದಲ್ಲಿ ಅನ್ನದಾಸೋಹ, ಪುರಾಣ, ಪ್ರವಚನ, ಉತ್ಸವ ಇವೇ ಮೊದಲಾದ ಕಾರ್ಯಕ್ರಮಗಳು ನಡೆಯುತ್ತವೆ.

ಶ್ರೀ ಶರಣಬಸವೇಶ್ವರ ಮಹಾದಾಸೋಹ ಪೀಠ : ಗುಲ್ಬರ್ಗಾ ನಗರದಲ್ಲಿರುವ ಶರಣಬಸವೇಶ್ವರ ಮಹಾದಾಸೋಹ ಪೀಠವು ವೀರಶೈವ ಸಂಪ್ರದಾಯಕ್ಕೆ ಸೇರಿದ್ದು ಅದೊಂದು ಸ್ವತಂತ್ರ ಸಂಸ್ಥೆಯಾಗಿದೆ. ಶರಣಬಸವೇಶ್ವರರು ಕ್ರಿ.ಶ. ೧೮೨೨ರಲ್ಲಿ ಲಿಂಗೈಕ್ಯರಾದ ನಂತರ ಇಲ್ಲಿಯವರೆಗೆ ಏಳು ಜನ ಪೀಠಾಧಿಪತಿಗಳು ಆಗಿ ಹೋಗಿದ್ದು ಪೂಜ್ಯ ಶರಣ ಬಸವಪ್ಪ ಅಪ್ಪ ಅವರು ಇಂದಿನ ಪೀಠಾಧಿಪತಿಗಳಾಗಿರುತ್ತಾರೆ. ಈ ಸಂಸ್ಥೆಯು ಮಹಾದಾಸೋಹ ಪರಂಪರೆಯಾದ ತ್ರಿಕಾಲ ಪೂಜೆಯನ್ನು ನಡೆಸಿಕೊಂಡು ಬಂದಿರುವುದೇ ಅಲ್ಲದೆ ಹಲವಾರು ಧಾರ್ಮಿಕ, ಸಾಮಾಜಿಕ, ಸಾಂಸ್ಕೃತಿಕ, ಶೈಕ್ಷಣಿಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಇದು ೧೯೧೮ರಲ್ಲಿ ಶರಣ ಬಸವೇಶ್ವರ ಕನ್ನಡ ವಾಚನಾಲಯವನ್ನು ಮತ್ತು ೧೯೩೪ರಲ್ಲಿ ಹೆಣ್ಣು ಮಕ್ಕಳ ಕನ್ನಡ ಶಾಲೆಯನ್ನು ಪ್ರಾರಂಭಿಸಿತು. ಇಂದು ಶ್ರೀ ಶರಣಬಸವೇಶ್ವರ ವಿದ್ಯಾವರ್ಧಕ ಸಂಘವು ವಿಶಾಲವಾಗಿ ಬೆಳೆದಿದ್ದು ಇದರ ಆಶ್ರಯದಲ್ಲಿ ಪ್ರಾಥಮಿಕ ಹಂತದಿಂದ ಪದವಿ ತರಗತಿಯವರೆಗೆ ಅನೇಕ ಶಾಲಾ ಕಾಲೇಜು, ಗ್ರಂಥಾಲಯ, ಮುದ್ರಣಾಲಯ ಮುಂತಾದ ಕಾರ್ಯವನ್ನು ನಿರ್ವಹಿಸುತ್ತಿರುವುದೇ ಅಲ್ಲದೆ,

ಚಿತ್ರಕಲೆಯಲ್ಲಿ ಸ್ನಾತಕೋತ್ತರ ಪದವಿ ತರಗತಿಯನ್ನು ಮತ್ತು ಸ್ನಾತಕೋತ್ತರದಲ್ಲಿ ತಾಂತ್ರಿಕ ಶಿಕ್ಷಣ, ಐ.ಎ.ಎಸ್ ಪರೀಕ್ಷೆಗೆ ತರಬೇತಿ ನೀಡುವ ಕೇಂದ್ರವನ್ನು ಪ್ರಾರಂಭಿಸಿದೆ. ಇದರ ಎಲ್ಲ ವಿದ್ಯಾಸಂಸ್ಥೆಗಳಿಗೆ ಸೋಮವಾರವು ವಾರದ ರಜೆಯಾಗಿರುವುದು ಒಂದು ವಿಶೇಷವಾಗಿದೆ. ಸ್ವತಃ ಶ್ರೀ ಶರಣ ಬಸವೇಶ್ವರರು ಹಚ್ಚಿದ ದೀಪವನ್ನು ಇಲ್ಲಿಯವರೆಗೆ ಕಾಯ್ದುಕೊಂಡು ಬಂದಿರುವುದು ವಿಶೇಷವಾಗಿದೆ. ಈ ದೀಪದ ಬತ್ತಿಗಳನ್ನು ಮಾತ್ರ ಬದಲಿಸಲಾಗುತ್ತದೆ. ಇಲ್ಲಿ ನಿತ್ಯ ಶರಣರ ದರ್ಶನಕ್ಕೆ ಬಂದ ಭಕ್ತರಿಗೆ ಊಟದ ದಾಸೋಹವನ್ನು ನೇರವೇರಿಸಲಾಗುತ್ತದೆ.

ಶ್ರೀ ಸದ್ಗುರು ತ್ರಿವಿಕ್ರಮಾನಂದ ಆಶ್ರಮ : ಜೇವರ್ಗಿ ತಾಲ್ಲೂಕಿನ ಗಂವ್ಹಾರದಲ್ಲಿರುವ ಈ ಆಶ್ರಮವು ನಾಥ ಸಂಪ್ರದಾಯಕ್ಕೆ ಸೇರಿದ್ದು ಅದ್ವೈತ ಸಿದ್ಧಾಂತ ಪ್ರಚಾರವು ಇದರ ಪ್ರಮುಖ ಉದ್ದೇಶವಾಗಿದೆ. ಅನ್ನದಾಸೋಹ ಹಾಗೂ ಶೈಕ್ಷಣಿಕ ಕಾರ್ಯಕ್ರಮಗಳನ್ನು ಇದು ಕೈಗೊಂಡಿದ್ದು, ಇದರ ಆಶ್ರಯದಲ್ಲಿ ಒಂದು ಪ್ರೌಢಶಾಲೆಯು ಕಾರ್ಯ ನಿರ್ವಹಿಸುತ್ತಿದೆ. ಪ್ರತಿ ವರ್ಷ ತ್ರಿವಿಕ್ರಮಾನಂದರ ಹಾಗೂ ಸದ್ಗುರು ಶಂಕರಾನಂದರ ಪುಣ್ಯಾರಾಧನೆಗಳು ಇಲ್ಲಿ ನಡೆಯುವುದಲ್ಲದೇ ನವರಾತ್ರಿ ಹಾಗೂ ಶಿವರಾತ್ರಿ ಸಮಯದಲ್ಲಿ ವಿಶೇಷ ಕಾರ್ಯಕ್ರಮಗಳು, ಪ್ರವಚನಗಳು ನಡೆಯುತ್ತವೆ.

ಆರ್ಯ ಸಮಾಜ : ಗುಲ್ಬರ್ಗಾದಲ್ಲಿ ಆರ್ಯ ಸಮಾಜವು ೧೯೨೫ರಲ್ಲಿ ವಕೀಲರಾಗಿದ್ದ ದತ್ತಾತ್ರೇಯ ಪ್ರಸಾದ್ ಅವರ ಪ್ರಯತ್ನದಿಂದ ಸ್ವಾಮಿ ದಯಾನಂದ ಸರಸ್ವತಿಯವರ ತತ್ವ ಪ್ರಚಾರವನ್ನು ಕೈಗೊಳ್ಳುವ ಮುಖ್ಯ ಉದ್ದೇಶದಿಂದ ಆರಂಭವಾಯಿತು. ಈ ಸಂಸ್ಥೆಯು ನಿಜಾಮರ ಕಾಲದಲ್ಲಿ ಸಾಮಾಜಿಕ ಹಾಗೂ ಧಾರ್ಮಿಕ ಹಕ್ಕಿಗಾಗಿ ಶ್ರಮಿಸಿದ್ದು ಇದಕ್ಕಾಗಿ ೧೯೩೮-೩೯ರಲ್ಲಿ ಸತ್ಯಾಗ್ರಹವನ್ನು ಕೈಗೊಂಡಿತು. ಈ ಸಮಯದಲ್ಲಿ ಭಾರತದ ಇತರ ಭಾಗಗಳಿಂದಲೂ ಆರ್ಯ ಸಮಾಜದ ಪ್ರತಿನಿಧಿಗಳು ಬಂದಿದ್ದು ಸತ್ಯಾಗ್ರಹದಲ್ಲಿ ಭಾಗವಹಿಸಿದರು. ಇದರ ಆಶ್ರಯದಲ್ಲಿ ಪ್ರತಿ ಭಾನುವಾರದಂದು ಸತ್ಸಂಗದ ಕಾರ್ಯಕ್ರಮವನ್ನು ಕೈಗೊಂಡಿದ್ದು, ಈ ಸಂದರ್ಭದಲ್ಲಿ ಹೋಮ ಹವನಾದಿಗಳನ್ನು ಏರ್ಪಡಿಸುವುದಲ್ಲದೆ ಅಲ್ಲದೆ, ಆಗಾಗ ಹೊರಗಿನಿಂದ ವಿದ್ವಾಂಸರನ್ನು ಆಹ್ವಾನಿಸಿ ವಿಶೇಷ ಉಪನ್ಯಾಸಗಳನ್ನು ನಡೆಸಲಾಗುತ್ತದೆ. ಅಂತರಜಾತಿಯ ವಿವಾಹವನ್ನು ಇದು ನೆರವೇರಿಸುತ್ತದೆ. ಈ ಸಮಾಜವು ಅನೇಕ ಶೈಕ್ಷಣಿಕ ಕಾರ್ಯಕ್ರಮಗಳನ್ನು ಕೈಗೊಂಡಿದ್ದು ಇದರ ಆಶ್ರಯದಲ್ಲಿ ಶಿಕ್ಷಣ ಸಂಸ್ಥೆ ಯೋಗ ತರಗತಿ ಹಾಗೂ ಶಿಕ್ಷಣ ಶಿಬಿರಗಳು ನಡೆಯುತ್ತಿವೆ.

ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾಲಯ : ಮಾನವನಲ್ಲಿ ನೈತಿಕ ಮೌಲ್ಯಗಳನ್ನು ಮತ್ತು ಆಧ್ಯಾತ್ಮಿಕ ಜ್ಞಾನವನ್ನು ವೃದ್ಧಿಸಿಕೊಳ್ಳಲು ಪೂರಕವಾಗುವಂತಹ ಶಿಕ್ಷಣವನ್ನು ನೀಡುವುದು ಇದರ ಮುಖ್ಯ ಉದ್ದೇಶವಾಗಿದೆ. ಇದರ ಪ್ರಧಾನ ಕೇಂದ್ರವು ರಾಜಸ್ಥಾನದ ಮೌಂಟ್ ಅಬುವಿನಲ್ಲಿದೆ. ಗುಲ್ಬರ್ಗಾ ಜಿಲ್ಲೆಯಲ್ಲಿ ಇದರ ಶಾಖೆಯು ೧೯೬೪ರಲ್ಲಿ ಆರಂಭವಾಗಿದ್ದು, ಈಗ ಇದು ಒಂದು ವಲಯಕಚೇರಿಯಾಗಿದ್ದು, ಇದರ ವ್ಯಾಪ್ತಿಯಲ್ಲಿ ಶಾಹಾಪುರ, ಸುರಪುರ, ಜೇವರ್ಗಿ,

ಯಾದಗಿರಿ, ಅಫಜಲ್‌ಪುರ ಹಾಗೂ ಶಾಹಾಬಾದ್‌ಗಳಲ್ಲಿ ರಾಜಯೋಗ ಕೇಂದ್ರಗಳು ಕಾರ್ಯ ನಿರ್ವಹಿಸುತ್ತಿವೆ. ಇದರ ಬೆಳ್ಳಿ ಹಬ್ಬವನ್ನು ೧೯೯೯ರಲ್ಲಿ ಆಚರಿಸಲಾಯಿತು.

ಶ್ರೀ ಮಾತೇ ಮಾಣಿಕೇಶ್ವರಿ, ಯಾನಾಗುಂದಿ : ಶ್ರೀ ಮಾತೇ ಮಾಣಿಕೇಶ್ವರಿ ಟ್ರಸ್ಟ್ ಮತ್ತು ಮಂದಿರವು ಜಿಲ್ಲೆಯ ಯಾದಗಿರಿ ತಾಲ್ಲೂಕಿನ ಗುರುಮಿಠಕಲ್ ಪಟ್ಟಣದಿಂದ ೧೨ ಕಿ.ಮೀ.ದೂರದ ಪ್ರಶಾಂತವಾದ ಮತ್ತು ಆಹ್ಲಾದಕರವಾದ ವಾತಾವರಣದಿಂದ ಕೂಡಿರುವ ಯಾನಾಗುಂದಿ ಬೆಟ್ಟದಲ್ಲಿರುತ್ತದೆ. ಇಲ್ಲಿ ಮಾತೇ ಮಾಣಿಕೇಶ್ವರಿ ಅಮ್ಮನವರು ವಾಸವಾಗಿರುವ ಪ್ರಮುಖ ಧಾರ್ಮಿಕ ಕೇಂದ್ರವಾಗಿದೆ. ಇಲ್ಲಿ ಸದಾಕಾಲ ಮುಂಜಾನೆ ಮತ್ತು ಸಾಯಂಕಾಲ ಪ್ರಾರ್ಥನೆ ನಡೆಯುತ್ತದೆ. ಅಮಾವಾಸ್ಯೆ ಮತ್ತು ಇನ್ನಿತರ ವಿಶೇಷ ಸಂದರ್ಭಗಳಲ್ಲಿ ಪುರಾಣ, ಪ್ರವಚನ, ಕೀರ್ತನೆ, ಭಜನೆ, ಪ್ರಾರ್ಥನೆಗಳು, ವಾದ್ಯಗಳ ಸಡಗರದೊಂದಿಗೆ ನಡೆಯುತ್ತದೆ. ಇಲ್ಲಿಯ ಧಾರ್ಮಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನೋಡಲು ವಿಶೇಷವೆನಿಸುತ್ತವೆ. ಪ್ರತಿವರ್ಷ ಶಿವರಾತ್ರಿ ದಿನ ಶಿವನಿಗೆ ರುದ್ರಪೂಜೆ, ಭಜನೆಗಳು ನಡೆಯುವುದರೊಂದಿಗೆ ಆ ದಿನ ಅಮ್ಮನವರು ಬಂದಂತಹ ಎಲ್ಲ ಭಕ್ತರಿಗೆ ದರುಶನ ನೀಡಿ ಭಕ್ತರ ಮನಸ್ಸನ್ನು ಆನಂದಗೊಳಿಸುವರು ಮತ್ತು ಸಕಲ ಭಕ್ತರಿಗೆ ಆರ್ಶಿವಾದಗಳನ್ನು ನೀಡಿ ಪುನಃ ತಮ್ಮ ಗವಿಗೆ ಹೋಗುತ್ತಾರೆ. ಈ ಶಿವರಾತ್ರಿಯ ದಿನದ ಸಂದರ್ಭದಲ್ಲಿ ಆಂಧ್ರಪ್ರದೇಶ, ಮಹಾರಾಷ್ಟ್ರ ಮತ್ತು ಕರ್ನಾಟಕದ ಮೂಲೆ ಮೂಲೆಗಳಿಂದ ಭಕ್ತರು ಅಮ್ಮನವರ ದರ್ಶನಕ್ಕೆ ಬಂದಿರುತ್ತಾರೆ. ಇಲ್ಲಿ ಸದಾಕಾಲ ನಿತ್ಯ ಅನ್ನದಾಸೋಹ ನಡೆಯುತ್ತದೆ ಹಾಗೂ ಬಡ ಮಕ್ಕಳ ವಸತಿ ಶಾಲೆ ಇರುತ್ತದೆ. ಇಲ್ಲಿ ಪ್ರಾಥಮಿಕ ಶಿಕ್ಷಣದಿಂದ ಪ್ರೌಢಶಿಕ್ಷಣ ದವರೆಗೆ ಶಿಕ್ಷಣ ಸಂಸ್ಥೆಯನ್ನು ತೆರೆಯಲಾಗಿದೆ. ಅಲ್ಲದೆ ಪದವಿ ಮತ್ತು ಪದವಿಪೂರ್ವ ಶಿಕ್ಷಣದ ಪರವಾನಿಗೆ ಕೂಡಾ ಪಡೆದುಕೊಳ್ಳಲಾಗಿದೆ ಎಂಬುದು ತಿಳಿದುಬರುತ್ತದೆ.

೯. ಪ್ರಮುಖ ಮಠಗಳು

ಘಿಸಾಡಿ ಸಮುದಾಯವು ಒಂದು ಅಲೆಮಾರಿ ಸಮುದಾಯದವಾಗಿರುವುದರಿಂದ ಈ ಜಿಲ್ಲೆಯಲ್ಲಿ ರುವ ಅನೇಕ ಮಠಮಾನ್ಯಗಳ ಆವರಣಗಳಲ್ಲಿ ಬೀಡಾರಗಳನ್ನು ಹೂಡುವರು, ಈ ಮಠಮಾನ್ಯಗಳು ವಿಶಾಲವಾದ ಆವರಣಗಳಲ್ಲಿ ಆಲದ ಮರ, ಹುಣಸೇಮರ, ಬೇವಿನ ಮರಗಳು ಇರುತ್ತಿದ್ದು ಆ ಮರಗಳ ನೆರಳಿನಡಿಯಲ್ಲಿ ತಂಪುಗಾಳಿ ಬೀಸುತ್ತಿರುತ್ತದೆ.ಮತ್ತು ಇವರ ವೃತ್ತಿಯು ಕಮ್ಮಾರಿಕೆಯಾಗಿರು ವುದರಿಂದ ಕೆಲಸ ನಡೆಯುವಾಗ ಬೆಂಕಿಯ ಮುಂದೆ ಕುಳಿತುಕೊಳ್ಳಬೇಕಾಗುತ್ತದೆ. ಆದ್ದುದರಿಂದ ಇಂತಹ ಸ್ಥಳಗಳನ್ನು ಕೆಲವು ದಿನಗಳವರೆಗೆ ತಮ್ಮ ಕೆಲಸದ ಕೇಂದ್ರಸ್ಥಾನವನ್ನಾಗಿಸಿಕೊಂಡು, ಅಲ್ಲಿಯ ಕೆಲಸವನ್ನು ನಿರ್ವಹಿಸಿಕೊಂಡು ಹೋಗುವರು. ಅಲ್ಲದೇ ಮಠಮಾನ್ಯಗಳಿಗೆ ದಿನಂಪ್ರತಿ ಭಕ್ತ ಸಮೂಹಗಳು ಬಂದುಹೋಗುವುದರಿಂದ ಇವರು ಬೀಡಾರ ಹೂಡಿರುವುದು ಅಲ್ಲಿಯ ಜನ ಸಮೂಹಕ್ಕೆ ತಿಳಿದು ಬರುತ್ತದೆ.

ಕೆಲವೊಂದು ಸಲ ಮಠಮಾನ್ಯಗಳಲ್ಲಿ ಧಾರ್ಮಿಕ ಗೋಷ್ಠಿಗಳು, ಸಭೆ, ಸಮಾರಂಭಗಳು, ಉತ್ಸವ, ಜಾತ್ರೆಗಳು ನಡೆಯುವುದರಿಂದ ಇಂತಹ ಸಂದರ್ಭಗಳಲ್ಲಿ ಇವರು ತಾವು ತಯಾರಿಸಿದ ಕಬ್ಬಿಣದ ಕೃಷಿಸಂಬಂಧಿ, ಗೃಹಸಂಬಂಧಿ, ದೈವತ್ವ ಸಂಬಂಧಿ ಹೀಗೆ ಮುಂತಾದ ಪರಿಕರಗಳನ್ನು ಮಾರಾಟ ಮಾಡುವರು. ಹಾಗೆಯೇ ಅಲ್ಲಿ ನಡೆಯುವ ಧಾರ್ಮಿಕ ಕಾರ್ಯಕ್ರಮಗಳನ್ನು ನೋಡುವುದು ದೈವತ್ವಕ್ಕೆ ಸಂಬಂಧಿಸಿದಂತೆ ಧ್ಯಾನ ಮನಸ್ಸುಗಳನ್ನು ತಿಳಿಗೊಳಿಸಿಕೊಳ್ಳುವರು. ಆದ್ದುದರಿಂದ ಈ ಜಿಲ್ಲೆಯಲ್ಲಿರುವ ಪ್ರಮುಖ ಮಠಮಾನ್ಯಗಳ ಸಂಕ್ಷಿಪ್ತ ಪರಿಚಯವನ್ನು ಇಲ್ಲಿ ನೀಡಲಾಗಿದೆ.

ಶ್ರೀ ಚಿತ್ತಾವಲಿಪೇಟೆ ನಾಗವಿ ಹಿರೇಮಠ : ಈ ಮಠವು ಚಿತ್ತಾಪುರದ ಚಿತ್ತಾವಲಿಪೇಟೆ ಎಂಬ ಓಣಿಯಲ್ಲಿರುವ ಬಹುಪ್ರಾಚೀನ ಮಠವಾಗಿದೆ. ಈ ಮಠಕ್ಕೆ ನಾಗವಿ ಹಿರೇಮಠ ಎಂದು ಕರೆಯಲಾಗುತ್ತದೆ. ನಾಗಾವಿ ಇತಿಹಾಸವು ಸುಮಾರು ೪ ಮತ್ತು ೫ನೇ ಶತಮಾನದ ಇತಿಹಾಸ ವಾಗಿರುವುದರಿಂದ ಈ ಮಠವು ಬಹುಪುರಾತನ ಕಾಲದಿಂದ ಬೆಳೆದುಬಂದ ವೀರಶೈವ ಗುರು ಪರಂಪರೆಯ ಮಠವಾಗಿದೆ. ಈ ಮಠದ ಭಕ್ತರು ಕರ್ನಾಟಕದ ಬಹುತೇಕ ಜಿಲ್ಲೆಗಳಲ್ಲಿ ನೆಲೆಸಿದ್ದಾರೆ.

ಪ್ರಸ್ತುತ ಸಂದರ್ಭದಲ್ಲಿ ಈ ಮಠದ ಗುರುಗಳಾದ ಶ್ರೀ ಸೋಮೇಶ್ವರ ಶಿವಾಚಾರ್ಯರು ಒಳ್ಳೆಯ ಪಂಚಾಂಗ, ವೇದ, ಪಾಂಡಿತ್ಯವನ್ನು ಹೊಂದಿದ್ದು, ಸಾಂಸಾರಿಕ ಜೀವನಕ್ಕೆ ಕಾಲಿಟ್ಟ ಬಳಿಕ ಮಠವನ್ನು ತೊರೆದು ಸ್ವತಂತ್ರವಾದ ಜೀವನ ನಡೆಸುತ್ತಾರೆ. ಇವರ ನಂತರ ಈ ಸಂದರ್ಬದಲ್ಲಿ ಸದ್ಯ ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯರು ಮಠದ ಸಾನಿಧ್ಯ ವಹಿಸಿಕೊಂಡು ಮಠದ ಮತ್ತು ಭಕ್ತರ ಉದ್ಧಾರಕ್ಕಾಗಿ ಹಗಲಿರುಳೆನ್ನದೆ ಶ್ರಮಿಸುತ್ತಿದ್ದಾರೆ. ಸದಾ ಭಕ್ತರ ಸಮೂಹದಲ್ಲಿದ್ದು ಅಪಾರ ಭಕ್ತರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ. ವಿವಿಧ ಧಾರ್ಮಿಕ ಗೋಷ್ಠಿಗಳಲ್ಲಿ ಆಹ್ವಾನ ಪಡೆದುಕೊಂಡು, ತಮ್ಮ ಧಾರ್ಮಿಕ ಪ್ರವಚನ ಚಾತುರ್ಯದಿಂದ ಭಕ್ತರ ಮನಸ್ಸು ಭಕ್ತಿ ಮಾರ್ಗದ ಕಡೆಗೆ ಹರಿದು ಬರುವ ಹಾಗೆ ಮಾಡುತ್ತಿರುವ ಕೀರ್ತಿ ಇವರಿಗೆ ಸಲ್ಲುತ್ತದೆ.

ಶ್ರೀ ದಿಗ್ಗಾಂವ್ ಹಿರೇಮಠ : ಚಿತ್ತಾಪುರ ತಾಲ್ಲೂಕು ಪ್ರದೇಶವು ಬಹು ಪ್ರಾಚೀನ ಇತಿಹಾಸ ಹೊಂದಿದ ತಾಲ್ಲೂಕು ಪ್ರದೇಶವಾಗಿದೆ. ಹೀಗಾಗಿ ಇಲ್ಲಿ ಬಹು ಹಳೆಯ ಧಾರ್ಮಿಕ ಕೇಂದ್ರಗಳು, ಪಳೆಯುಳಿಕೆಗಳು, ಮಂದಿರಗಳು, ಮಠಗಳು ಕಂಡುಬರುತ್ತವೆ. ಶ್ರೀ ದಿಗ್ಗಾಂವ ಹಿರೇಮಠವು ಕೂಡಾ ಚಿತ್ತಾಪುರ ತಾಲ್ಲೂಕು ಕೇಂದ್ರದಿಂದ ಕೇವಲ ೧೦ ಕಿ.ಮೀ. ಹತ್ತಿರದಲ್ಲಿರುವ ದಿಗ್ಗಾಂವ್ ಗ್ರಾಮದಲ್ಲಿರುವ ಪ್ರಾಚೀನ ಮಠವಾಗಿದೆ. ಪ್ರಸ್ತುತ ಸಂದರ್ಭದಲ್ಲಿ ಈ ಮಠದ ಸಾನಿಧ್ಯ ವಹಿಸಿ ಕೊಂಡ ಶ್ರೀ ಸಿದ್ಧವೀರ ಶಿವಾಚಾರ್ಯರು ಅಪಾರವಾದ ಜ್ಞಾನಮೂರ್ತಿಗಳಾಗಿದ್ದಾರೆ. ಇವರು ಸುಮಾರು ೫ ದಿನಗಳವರೆಗೆ ಅನ್ನ ನೀರು ತೊರೆದು ಶಿವನ ತಪಸ್ಸಿನಲ್ಲಿ, ಧ್ಯಾನದಲ್ಲಿ ತೊಡಗಿಸಿಕೊಂಡು, "ತಪೋಭೂಷಣ" ಎಂಬ ಕೀರ್ತಿಯನ್ನು ಪಡೆದುಕೊಂಡಿದ್ದಾರೆ. ಇವರು ಸದಾಕಾಲ ಧಾರ್ಮಿಕ ಚಿಂತನೆ ಮತ್ತು ಭಕ್ತರಿಗೆ ಭಕ್ತಿ ಮಾರ್ಗದರ್ಶನ ತೋರುತ್ತಿರುತ್ತಾರೆ. ದಿಗ್ಗಾಂವ ಗ್ರಾಮದ ಮಠದ ಆವರಣದಲ್ಲಿ ಪ್ರಾಥಮಿಕ ಶಾಲೆ ಆರಂಭಿಸಿ ಶಿಕ್ಷಣ ದಾಸೋಹವನ್ನು ನೀಡುತ್ತಿದ್ದಾರೆ.

ಶ್ರೀ ಗುರುಬಸವ ಬೃಹನ್ಮಠ : ಗುಲ್ಬರ್ಗಾದ ಮುಕ್ತಂಪುರದಲ್ಲಿರುವ ವೀರಶೈವ ಸಂಪ್ರದಾಯದ ಗುರುಬಸವ ಬೃಹನ್ಮಠವು ಒಂದು ಪ್ರಾಚೀನ ಮಠವಾಗಿದೆ. ಗುರುಬಸವೇಶ್ವರರು ಇದರ ಮೂಲ ಪುರುಷರಾಗಿದ್ದು ೧೯ನೇ ಪೀಠಾಧಿಪತಿಗಳಾದ ಚನ್ನಮಲ್ಲ ದೇವರು ಸದ್ಯದ ಪೀಠಾಧಿಪತಿಗಳಾಗಿರುತ್ತಾರೆ. ಈ ಮಠವು ಒಂದು ಸ್ವತಂತ್ರ ಮಠವಾಗಿದೆ. ಇದರ ಆಶ್ರಯದಲ್ಲಿ ಅನಾಥಾಲಯ ಹಾಗೂ ಹಲವಾರು ಶಿಕ್ಷಣ ಸಂಸ್ಥೆಗಳು ಕಾರ್ಯ ನಿರ್ವಹಿಸುತ್ತಿವೆ. ಇಲ್ಲಿ ಪ್ರತಿನಿತ್ಯ ದಾಸೋಹ, ಯೋಗ ಶಿಬಿರಗಳು, ಶ್ರಾವಣ ಮಾಸದಲ್ಲಿ ಪುರಾಣ ಪ್ರವಚನ ಕಾರ್ಯಕ್ರಮಗಳು ಜರುಗುತ್ತವೆ. ಇದು ಜಿಲ್ಲೆಯಲ್ಲಿ ೧೬ ಶಾಖಾ ಮಠಗಳನ್ನು ಹೊಂದಿರುವುದಲ್ಲದೆ ಬೀದರ ಹಾಗೂ ಮಹಾರಾಷ್ಟ್ರದ ಸೊಲ್ಲಾಪುರ ಜಿಲ್ಲೆಯಲ್ಲಿ ಶಾಖಾಮಠಗಳನ್ನು ಹೊಂದಿದೆ.

ಗದ್ದುಗೆ ಮಠ : ಗುಲ್ಬರ್ಗಾದ ಮುಕ್ತಂಪುರದಲ್ಲಿರುವ ಗದ್ದುಗೆ ಮಠವು ವೀರಶೈವ ಸಂಪ್ರದಾಯಕ್ಕೆ ಸೇರಿದ್ದು ಸುಮಾರು ೧೬ನೇ ಶತಮಾನಕ್ಕೂ ಪೂರ್ವದ್ದು ಎಂಬ ಅಭಿಪ್ರಾಯವಿದೆ. ರೇವಣಸಿದ್ಧ ಶಿವಯೋಗಿಗಳು ಇದರ ಸ್ಥಾಪಕರಾಗಿದ್ದು, ಇಂದಿನ ಪೀಠಾಧೀಶರಾಗಿರುವ ನಿರಂಜನ ರೇವಣಸಿದ್ಧಸ್ವಾಮಿಗಳು ೧೪ನೇ ಪೀಠಾದೀಶರಾಗಿರುತ್ತಾರೆ. ಭಕ್ತರ ಸಹಕಾರದಿಂದ ನಡೆಯುತ್ತಿರುವ ಈ ಮಠವು ಒಂದು ವಿರಕ್ತ ಮತ್ತು ಸ್ವತಂತ್ರ ಮಠವಾಗಿದ್ದು ಜಿಲ್ಲೆಯಲ್ಲಿ ೫ ಶಾಖಾ ಮಠಗಳನ್ನು ಹೊಂದಿದೆ. ಮಠದ ಆಶ್ರಯದಲ್ಲಿ ಒಂದು ಉಚಿತ ಪ್ರಸಾದ ನಿಲಯವು, ಸದ್ಭಾವ ಗೋಷ್ಠಿಯು ನಡೆಯುತ್ತಿದ್ದು ಆಧ್ಯಾತ್ಮಿಕ ವಿಚಾರದಲ್ಲಿ ಹಲವಾರು ಪುಸ್ತಕಗಳನ್ನು ಪ್ರಕಟಿಸಿದೆ.

ಶ್ರೀ ವಿಶ್ವಾರಾಧ್ಯ ಸಿದ್ಧ ಸಂಸ್ಥಾನ ಮಠ : ಯಾದಗಿರಿ ತಾಲ್ಲೂಕಿನ ಅಬ್ಬೆ ತುಮಕೂರಿನಲ್ಲಿರುವ ವಿಶ್ವಾರಾಧ್ಯ ಸಿದ್ಧ ಸಂಸ್ಥಾನ ಮಠವು ೧೯೪೫ರಲ್ಲಿ ವಿಶ್ವಾರಾಧ್ಯರಿಂದ ಸ್ಥಾಪಿಸಲ್ಪಟ್ಟಿದೆ. ಶ್ರೀ ಗಂಗಾಧರ ಶಿವಾಚಾರ್ಯ ಮಹಾಸ್ವಾಮಿಗಳು ಸದ್ಯದ ಪೀಠಾಧಿಕಾರಿಯಾಗಿರುತ್ತಾರೆ. ಪ್ರತಿ ತಿಂಗಳು ಶಿವಾನುಭವ ಗೋಷ್ಠಿಯನ್ನು ಶಿವರಾತ್ರಿ ಸಂದರ್ಭದಲ್ಲಿ ವಿಶ್ವಾರಾಧ್ಯರ ರಥೋತ್ಸವವನ್ನು ಹಾಗೂ ಶ್ರಾವಣ ಮಾಸದಲ್ಲಿ ಪುರಾಣ ಪ್ರವಚನಗಳನ್ನು ಮಠದ ಆಶ್ರಯದಲ್ಲಿ ಏರ್ಪಡಿಸುವುದೇ ಅಲ್ಲದೆ ಕಲ್ಯಾಣ ಮಂಟಪ, ಶಿವಾನುಭವ ಮಂಟಪ ಹಾಗೂ ವಿಶ್ವಗಂಗಾ ವಿದ್ಯಾ ಸಂಸ್ಥೆ ಮತ್ತು ಇತ್ತೀಚೆಗೆ ಡಿ.ಎಡ್ ಕಾಲೇಜುಗಳನ್ನು ಕೂಡಾ ಪ್ರಾರಂಭಿಸಲಾಗಿದೆ. ಜಿಲ್ಲೆಯಲ್ಲಿ ಅಲ್ಲದೆ ಇತರ ಕಡೆಗಳಲ್ಲೂ ಇದರ ಶಾಖಾ ಮಠಗಳಿವೆ.

ವಿರಕ್ತಮಠ : ಆಳಂದ ತಾಲ್ಲೂಕಿನ ಕಲ್ಲಕೌಲಗಿಯಲ್ಲಿರುವ ವಿರಕ್ತಮಠವು ಒಂದು ಪ್ರಾಚೀನ ಮಠವಾಗಿದೆ. ಈ ಮಠವು ವೀರಶೈವ ಸಂಪ್ರದಾಯಕ್ಕೆ ಸೇರಿದ್ದು ಗೌರಿ ಶಂಕರ ಮಹಾಸ್ವಾಮಿಗಳು ಈಗಿನ ಮಠಾಧೀಶರಾಗಿರುತ್ತಾರೆ. ಮಠವು ವಿದ್ಯಾರ್ಥಿಗಳಿಗಾಗಿ ಉಚಿತ ವಸತಿ ಸೌಲಭ್ಯವನ್ನೊದಗಿಸಿದೆ. ಅಮಾವಾಸ್ಯೆ ದಿನದಂದು ಇಲ್ಲಿ ವಿಶೇಷ ಪೂಜಾ ಕಾರ್ಯಕ್ರಮಗಳು ನಡೆಯುತ್ತವೆ.

ಶ್ರೀ ಮಹಾಂತೇಶ್ವರ ಸಂಸ್ಥಾನ ವಿರಕ್ತಮಠ : ಅಫಜಲ್‌ಪುರ ತಾಲ್ಲೂಕಿನ ಭೈರಾಮಡಗಿ

ಯಲ್ಲಿರುವ ಮಹಾಂತೇಶ್ವರ ಸಂಸ್ಥಾನವು ಒಂದು ಸಂಪ್ರದಾಯಕ್ಕೆ ಸೇರಿದೆ. ಈ ಮಠವು ಮಹಾಂತೇಶ್ವರರಿಂದ ಸ್ಥಾಪಿಸಿರಬಹುದು ಎನ್ನಲಾಗುತ್ತದೆ. ಗವಿ ಮಹಾಂತಸ್ವಾಮಿಗಳು ಸದ್ಯದ ಪೀಠಾಧಿಕಾರಿಗಳಾಗಿದ್ದಾರೆ. ಪ್ರತಿನಿತ್ಯ ದಾಸೋಹ ಕಾರ್ಯಕ್ರಮ, ಶ್ರಾವಣಮಾಸದಲ್ಲಿ ವಿಶೇಷ ಪೂಜೆ, ಭಜನೆ, ಪ್ರತಿ ಅಮಾವಾಸ್ಯೆ ಹಾಗೂ ಹುಣ್ಣಿಮೆಯಲ್ಲಿ ಲಿಂಗಾರ್ಚನೆ ಮತ್ತು ಮಹಾರುದ್ರಾಭಿಷೇಕ ಇನ್ನಿತರ ಕಾರ್ಯಕ್ರಮಗಳು ಮಠದ ಆಶ್ರಯದಲ್ಲಿ ನಡೆಯುತ್ತವೆ.

ಶ್ರೀ ಶಾಂತೇಶ್ವರ ಹಿರೇಮಠ : ಆಳಂದ ತಾಲ್ಲೂಕಿನ ಮಾದನ ಹಿಪ್ಪರಗಿಯಲ್ಲಿರುವ ಶಾಂತೇಶ್ವರ ಹಿರೇಮಠದ ಕತೃ ಗುರು ಶ್ರೀ ಶಾಂತೇಶ್ವರರಾಗಿದ್ದು ಇದು ಪಂಚಾಚಾರ್ಯ ಪರಂಪರೆ ಸಂಪ್ರದಾಯಕ್ಕೆ ಸೇರಿರುತ್ತದೆ. ಈ ಮಠವು ಸಂಸ್ಕೃತ ಶಿಕ್ಷಣ ಬಡಮಕ್ಕಳಿಗೆ ಉಚಿತ ಪ್ರಸಾದ ಇವೇ ಮೊದಲಾದ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಮಠದ ಆಶ್ರಯದಲ್ಲಿ ಗುರುಪರಂಪರೆಗನುಗುಣವಾಗಿ ವರ್ಷಕ್ಕೊಮ್ಮೆ ನಡೆಯುವ ಪುಣ್ಯತಿಥಿ ಸಂದರ್ಭದಲ್ಲಿ ವಿಶೇಷ ಉಪನ್ಯಾಸಗಳನ್ನು ಏರ್ಪಡಿಸಲಾಗುತ್ತದೆ.

ಶ್ರೀ ಚೌಡಾಪುರ ಹಿರೇಮಠ : ಗುಲ್ಬರ್ಗಾದ ಬ್ರಹ್ಮಪುರಿಯಲ್ಲಿರುವ ಈ ಮಠವು ಒಂದು ಪ್ರಾಚೀನ ಮಠವಾಗಿದ್ದು. ರೇವಣಸಿದ್ಧ ಸ್ವಾಮಿಗಳು ಈ ಮಠದ ಮೂಲ ಕರ್ತೃಗಳಾಗಿರುತ್ತಾರೆ. ಈ ಮಠದ ಪರಂಪರೆಯಲ್ಲಿ ಬಂದ ಶಾಂತವೀರ ಶಿವಾಚಾರ್ಯರು, ಮಠದ ಸರ್ವತೋಮುಖ ಏಳಿಗೆಗಾಗಿ ಶ್ರಮಿಸಿರುವುದಲ್ಲದೆ ಸ್ವತಃ ಹಲವಾರು ಕೃತಿಗಳನ್ನು ರಚನೆ ಮಾಡಿದ್ದಾರೆ. ಇಂದಿನ ಪೀಠಾಧೀಶರಾಗಿರುವ ರೇವಣಸಿದ್ಧ ಸ್ವಾಮಿಗಳು ಮಠದಿಂದ ಹಲವಾರು ಶೈಕ್ಷಣಿಕ ಕಾರ್ಯಕ್ರಮವನ್ನು ಸಹ ಕೈಗೊಂಡಿರುವರು.

ವಿರಕ್ತಮಠ ಬಲಶೆಟಿಹಾಳ : ಸುರಪುರ ತಾಲ್ಲೂಕಿನ ಬಲಶೆಟ್ಟಿಹಾಳದ ಈ ಮಠವು ಒಂದು ಪ್ರಾಚೀನ ಮಠವೆಂದು ತಿಳಿದುಬರುತ್ತದೆ. ಶ್ರೀ ಗುರುಪಾದಯ್ಯ ಸ್ವಾಮಿಯವರು ಸದ್ಯದ ಮಠಾಧೀಶರಾಗಿರುತ್ತಾರೆ. ಪ್ರತಿನಿತ್ಯ ದಾಸೋಹ, ನಾಡಹಬ್ಬದ ಅಂಗವಾಗಿ 'ಬನ್ನಿ' ಮುಡಿಯುವುದು. ಶ್ರಾವಣ ಮಾಸದಲ್ಲಿ ಪುರಾಣ, ಶ್ರಾವಣ ಹಾಗೂ ಶಿವರಾತ್ರಿಯ ಸಮಯದಲ್ಲಿ ಶಿವಭಜನೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದು.

ದೋರನಹಳ್ಳಿ ಹಿರೇಮಠ : ಇದು ಶಹಾಪುರ ತಾಲ್ಲೂಕಿನ ದೋರನಹಳ್ಳಿಯ ಒಂದು ಪ್ರಾಚೀನ ಮಠವೆಂದು ತಿಳಿದುಬರುತ್ತದೆ. ಶಾಹಾಪುರ ತಾಲ್ಲೂಕಿನ ಕನ್ಯಾಕೋಳೂರು, ಶಿರವಾಳ, ಇಟಗಿ, ಕುರುಕುಂದಾ ಹಾಗೂ ಚಟ್ನಳ್ಳಿ ಗ್ರಾಮಗಳಲ್ಲಿ ಇದರ ಶಾಖಾ ಮಠಗಳಿವೆ. ಮಠವು ದಾಸೋಹ, ಪುರಾಣ ಪ್ರವಚನಗಳು ಇವೇ ಮುಂತಾದ ಸಾಮಾಜಿಕ ಹಾಗೂ ಧಾರ್ಮಿಕ ಕಾರ್ಯಗಳನ್ನು ಹಮ್ಮಿಕೊಂಡಿದೆ. ಪ್ರತಿ ಶಿವರಾತ್ರಿ ಅಮಾವಾಸ್ಯೆಯಂದು ಮಠದ ಮೂಲ ಪುರುಷರಾದ ಮಹಾಂತ ಶಿವಯೋಗಿಗಳು ರಥೋತ್ಸವನ್ನು ಇಲ್ಲಿ ಏರ್ಪಡಿಸಲಾಗುವುದು.

ಶ್ರೀ ಸಿದ್ಧಲಿಂಗೇಶ್ವರ ಸಂಸ್ಥಾನಮಠ : ಚಿತ್ತಾಪುರ ತಾಲ್ಲೂಕಿನ ರಾವೂರಿನಲ್ಲಿರುವ ಈ ಮಠವು ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳ ಪರಂಪರೆಗೆ ಸೇರಿದ್ದು ಧಾರ್ಮಿಕ ಹಾಗೂ ಶೈಕ್ಷಣಿಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಈ ಮಠದ ಆಶ್ರಯದಲ್ಲಿ ಅನೇಕ ಶಾಲಾ ಕಾಲೇಜುಗಳು, ಸಂಗೀತ ಶಾಲೆ, ಸಂಸ್ಕೃತ ಪಾಠಶಾಲೆ ಹಾಗೂ ಪ್ರಸಾದ ನಿಲಯಗಳು ಕಾರ್ಯ ನಿರ್ವಹಿಸು ತ್ತಿರುವುದಲ್ಲದೇ ಶ್ರಾವಣ ಮಾಸದಲ್ಲಿ ಶಿವಾನುಭವ ದಸರಾಹಬ್ಬದ ಉತ್ಸವ, ಚಿಂತನ ಕೂಟಗಳು, ಗ್ರಂಥಗಳ ಪ್ರಕಟಣೆ ಇವೇ ಮುಂತಾದ ಕಾರ್ಯಕ್ರಮಗಳೂ ನಡೆಯುತ್ತಿವೆ. ಇದು ಚಿತ್ತಾಪುರ ತಾಲ್ಲೂಕಿನಲ್ಲಿ ಆರು ಶಾಖಾ ಮಠಗಳನ್ನು ಮತ್ತು ಜೇವರ್ಗಿ ತಾಲ್ಲೂಕಿನಲ್ಲಿ ಒಂದು ಶಾಖಾಮಠ ವನ್ನು ಹೊಂದಿದೆ.

ಶ್ರೀ ಮಹಾಂತೇಶ್ವರ ಮಠ : ಅಫಜಲ್‌ಪುರ ತಾಲ್ಲೂಕಿನ ಚಿನ್ಮಯಗಿರಿ (ಚಿಣಮಗೇರಿ) ಚೌಡಾಪುರ ಗ್ರಾಮಗಳ ನಡುವೆ ಒಂದು ಗುಡ್ಡದ ಮೇಲಿರುವ ಈ ಮಠವು ಬಹಳ ಪ್ರಾಚೀನ ವಾದುದೆಂದು ತಿಳಿದುಬರುತ್ತದೆ. ಸಿದ್ಧರಾಮ ಶಿವಾಚಾರ್ಯರು ಸದ್ಯದ ಪೀಠಾಧಿಕಾರಿಗಳಾಗಿದ್ದು ಮಠದ ಆಶ್ರಯದಲ್ಲಿ ಹಲವಾರು ಶಿಕ್ಷಣ ಸಂಸ್ಥೆಗಳು ಕಾರ್ಯ ನಿರ್ವಹಿಸುತ್ತಿವೆ.

ಶ್ರೀ ಕೋರಿ ಸಿದ್ಧೇಶ್ವರ ಸಂಸ್ಥಾನ ಮಠ : ಚಿತ್ತಾಪುರ ತಾಲ್ಲೂಕಿನ ನಾಲಾವಾರದಲ್ಲಿರುವ ಈ ಮಠವು ಒಂದು ಪ್ರಾಚೀನ ಮಠವಾಗಿದ್ದು ಕೋರಿ ಸಿದ್ಧೇಶ್ವರರಿಂದ ಸ್ಥಾಪನೆಯಾಗಿದೆ ಎಂದು ತಿಳಿದುಬರುತ್ತದೆ. ಮಠವು ತನ್ನ ಹಲವಾರು ಕಾರ್ಯಸಾಧನೆಗಳಿಂದ ಭಕ್ತಾದಿಗಳ ಆಕರ್ಷಣೆಗೆ ಪಾತ್ರವಾಗಿದೆ. ಶ್ರೀ ತೋಟೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳು ಇಂದಿನ ಪೀಠಾಧಿಪತಿ ಗಳಾಗಿದ್ದಾರೆ. ಸಿದ್ಧೇಶ್ವರ ಕೋರಿಯನ್ನು(ಕಂಬಳಿ) ಹಾಸಿ, ತಮ್ಮ ಪವಾಡ ಶಕ್ತಿಯಿಂದ ನದಿಯನ್ನು ದಾಟಿದ್ದರಿಂದ 'ಕೋರಿ ಸಿದ್ಧೇಶ್ವರ' ಎಂಬ ಹೆಸರನ್ನು ಪಡೆದರೆಂಬ ಪ್ರತೀತಿ ಇದೆ.

ಶ್ರೀ ಷಣ್ಮುಖ ಶಿವಯೋಗಿಗಳ ಮಠ : ಜೈವರ್ಗಿಯಲ್ಲಿರುವ ಈ ಮಠವು ವಿರಕ್ತ ಪರಂಪರೆಯ ಮಠವಾಗಿದ್ದು, ಇದನ್ನು ಅಖಂಡೇಶ್ವರ ಮಠ ಎಂತಲೂ ಕರೆಯುತ್ತಾರೆ. ಇದು ಸುಮಾರು ೩೦೦ ವರ್ಷಗಳ ಹಿಂದೆ ಸ್ಥಾಪಿತವಾಗಿದ್ದಿರಬಹುದೆಂದು ಹಾಗೂ ಅಖಂಡೇಶ್ವರರು (೧೬೩೧-೧೬೫೪) ಮೂಲತಃ ಶಿವಮೊಗ್ಗ ಜಿಲ್ಲೆ ತೀರ್ಥಹಳ್ಳಿ ತಾಲ್ಲೂಕಿನ ಅರಗ ಗ್ರಾಮಕ್ಕೆ ಸೇರಿದವರೆಂದು ತಿಳಿದು ಬರುತ್ತದೆ. ಅಖಂಡೇಶ್ವರರಿಂದ ಜಂಗಮ ದೀಕ್ಷೆ ಪಡೆದ ಷಣ್ಮುಖ ಸ್ವಾಮಿಗಳು ಮಠದ ಸರ್ವತೋಮುಖ ಬೆಳವಣಿಗೆಗಾಗಿ ಶ್ರಮಿಸಿದರು.

ಶ್ರೀ ಶಾಂತಲಿಂಗ ಮಹಾಸ್ವಾಮಿಗಳು ಪ್ರಸ್ತುತ ಈ ಮಠದ ಸದ್ಯದ ಪೀಠಾಧಿಕಾರಿಗಳಾಗಿದು, ಇದರ ಆಶ್ರಯದಲ್ಲಿ ಮುರುಘರಾಜೇಂದ್ರ ಪ್ರಸಾದ ನಿಲಯ ಹಾಗೂ ಹಲವಾರು ಶಿಕ್ಷಣ ಸಂಸ್ಥೆಗಳು ಕಾರ್ಯ ನಿರ್ವಹಿಸುತ್ತಿವೆ. ಈ ಮಠದ ಒಂಬತ್ತು ಶಾಖೆಗಳು ಕೌಲಗಿ, ಚಿಕ್ಕಕೌಲಗಿ, ಮುದನೂರು, ಮುಂದೇವಾಲ, ಹಿಪ್ಪರಗಿ, ನೆಲೋಗಿ, ಕೊಳಕೂರು, ಸುರಪುರ ಹಾಗೂ ತಾಂಬಳ(ಮಹಾರಾಷ್ಟ್ರ)

ದಲ್ಲಿವೆ. ಪ್ರತಿವರ್ಷ ವೈಶಾಖ ಬಹುಳ ಪಂಚಮಿಯ ದಿನ ಷಣ್ಮುಖ ಶಿವಯೋಗಿಗಳ ರಥೋತ್ಸವವು ಜರುಗುತ್ತದೆ.

ಕೃಷ್ಣಾ ಮತ್ತು ಭೀಮಾ ನದಿಗಳು ಈ ಜಿಲ್ಲೆಯ ಮುಖ್ಯ ನದಿಗಳು ಇತ್ತೀಚಿನ ಕೃಷ್ಣಾ, ಭೀಮಾ, ಬ್ಯಾರೇಜಗಳು, ಚಿಂದ್ರಪಳ್ಳಿ ಡ್ಯಾಂ, ಅಮರಜ ಬೆಣ್ಣೆ ತೊರೆ, ಮುಲ್ಲಾಮಾರಿ, ಮುಧೋಳ, ಕಾಗಿಣಾ, ಹತ್ತಿಕುಣಿ ಡ್ಯಾಂಗಳು, ಇಂದನಕಲ್, ಕುಂಬಾರವಾಡಿ, ಆಲಹಳ್ಳಿ, ಮುಗಳನಾಗಾಲು, ನಾಯ್ಕಲ್ ಕೆರೆಗಳು ಇದ್ದು ಈ ಜಿಲ್ಲೆಯಲ್ಲಿನ ಪ್ರಮುಖವಾದ ವರದಾನವಾಗಿವೆ. ಆದ್ದುದರಿಂದ ಘಿಸಾಡಿ ಸಮುದಾಯ ಮಾಡುವ ಕಮ್ಮಾರಿಕೆ ಕೆಲಸಕ್ಕೆ ಅಪಾರವಾದ ಬೇಡಿಕೆ ಇದ್ದು ಈ ಜಿಲ್ಲೆಯಲ್ಲಿ ಘಿಸಾಡಿ ಸಮುದಾಯವು ನೆಲೆಸಲು ಕಾರಣವಾಗಿವೆ.

ಆಧಾರಗಳು

೧. ಪಾಟೀಲ್ ಎಂ.ಬಿ (ಸಂ), ***ಗುಲ್ಬರ್ಗಾ ಜಿಲ್ಲಾ ಗ್ಯಾಸೆಟಿಯರ್,*** ಗೀತಾಂಜಲಿ ಪ್ರಿಂಟರ್ಸ್, ಬೆಂಗಳೂರು, ೧೯೯೭

2. ***Gulbarga District,*** Karnataka - Series-30, 2005, Directorate of Census Operations, Koramagala, Bangalore- P.5

ಅಧ್ಯಾಯ - ೩

ಸಮುದಾಯದ ಮೂಲ ಮತ್ತು ಪ್ರಸಾರ

೧. ಮೂಲ ವಿವರಣೆ

೨. ವಿದ್ವಾಂಸರ ಹಾಗೂ ಮಾಹಿತಿದಾರರ ಅಭಿಪ್ರಾಯಗಳು

೩. ಸಮುದಾಯದ ವಿವಿಧ ಪದ-ನಿಷ್ಪತ್ತಿ ಮತ್ತು ಅರ್ಥ

೪. ಭಾರತದ ಭೌಗೋಳಿಕ ಘಿಸಾಡಿ ಸಮುದಾಯದ ನೆಲೆಗಳು

೫. ಪ್ರಸಾರ ಮತ್ತು ಜನಸಂಖ್ಯೆ

ಸಮುದಾಯದ ಮೂಲ ಮತ್ತು ಪ್ರಸಾರ

'ಮೂಲ'ಎಂದರೆ ಪ್ರಪಂಚದಲ್ಲಿನ ಪ್ರತಿಯೊಂದು ಜೀವ ಇಲ್ಲವೇ ನಿರ್ಜೀವ ಅಥವಾ ಚೇತನ ಇಲ್ಲವೇ ಅಚೇತನವಾದುದರ ವಸ್ತುವಿನ ಆಳವನ್ನು ತಿಳಿದುಕೊಳ್ಳುವುದಾಗಿದೆ. 'ಮೂಲ' ಎಂಬುದರ ಪರಿಕಲ್ಪನೆಯಲ್ಲಿ ಬುಡ; ಹುಟ್ಟು; ನೆಲೆ; ಆದಿ; ಬೇರು; ಮೊದಲಿನ ಎಂಬ ಕಲ್ಪನೆಗಳು ಸ್ಪಷ್ಟವಾಗುತ್ತವೆ. ನಾವು ಒಂದು ವಿಷಯದ ಮೂಲವನ್ನು ಹುಡುಕುವಾಗ ಅದರ ವಿವಿಧ ಆಯಾಮ ಗಳನ್ನು ನೋಡುತ್ತೇವೆ. ಹಾಗೇ ಪ್ರಪಂಚದಲ್ಲಿನ ಒಂದು ಸಮುದಾಯದ ಇಲ್ಲವೇ ಒಂದು ಜನ ವರ್ಗದ ಮೂಲವನ್ನು ಹುಡುಕುವಾಗ ಆ ಸಮುದಾಯದ ಇಲ್ಲವೇ ಜನವರ್ಗದ ಅಂತರಾಳದಲ್ಲಿ ಹುದುಗಿದ ವಿವಿಧ ವಿಷಯಗಳ ಆಕರಗಳಿಂದ ಆ ಸಮುದಾಯದ, ಇಲ್ಲವೇ ಜನವರ್ಗದ ಮೂಲ ಸ್ವರೂಪಗಳನ್ನು ಕಂಡುಕೊಳ್ಳುತ್ತೇವೆ.

ಪ್ರಪಂಚದಲ್ಲಿ ಯಾವುದೇ ಸಮುದಾಯವನ್ನು ನಾವು ಸಂಶೋಧನಾತ್ಮಕವಾಗಿ ಅದರ ಆಳಕ್ಕೆ ಇಳಿದು ನೋಡಿದಾಗ, ಸಮುದಾಯವು ತನ್ನ ಮೂಲ ನೆಲೆಗಳನ್ನು ಗುರುತಿಸಿಕೊಳ್ಳುವುದಕ್ಕಾಗಿ ತನ್ನ ಅಂತರಾಳದಲ್ಲಿ ಅನೇಕ ರೀತಿಯ ಜನಪದ ಆಕರಗಳನ್ನು ಹೊಂದಿರುತ್ತದೆ. ಇಂತಹ ಜನಪದ ಆಕರಗಳಲ್ಲಿ ಜನಪದ ಕಥೆಗಳು ತೀರಾ ನಿರ್ಲಕ್ಷಿಸಲ್ಪಟ್ಟ ಸಮುದಾಯಗಳು ತನಗರಿವಿಲ್ಲದಂತೆ ತನ್ನ ಮುಂದಿನ ಪೀಳಿಗೆಗಳಿಗೆ ಮುಂದುವರೆಸಿಕೊಂಡು ಹೋಗುತ್ತಿರುತ್ತವೆ. ಅಲ್ಲದೆ ಸಮುದಾಯದ ಮೂಲ ಮತ್ತು ಪ್ರಸಾರಗಳನ್ನು ಗುರುತಿಸಿಕೊಳ್ಳುವಂತಹ ಜನಪದ ಹಾಡುಗಳು, ಆಚರಣೆಗಳು, ರೂಢಿ ಸಂಪ್ರದಾಯಗಳು, ಸಾಂಸ್ಕೃತಿಕ ಮತ್ತು ಧಾರ್ಮಿಕ ಕೇಂದ್ರಗಳು ಕೂಡಾ ಸಮುದಾಯದ ಇತಿಹಾಸವನ್ನು ಕಟ್ಟಿಕೊಡುವ ಸಂಕೇತಗಳಾಗಿ ಕಾರ್ಯ ನಿರ್ವಹಿಸುತ್ತವೆ.

ನಿತ್ಯ ಪರಿವರ್ತನಶೀಲ ಸಮಾಜದಲ್ಲಿ ಯಾವುದೇ ಒಂದು ಸಮುದಾಯದ ಸಾಂಸ್ಕೃತಿಕ ಆಚರಣೆಗಳಲ್ಲಿ ಆಯಾ ಪರಿಸರಗಳು ಮತ್ತು ಅಲ್ಲಿಯ ಜನ ಸಮುದಾಯಗಳ ಪ್ರಭಾವದಿಂದ ಏರುಪೇರುಗಳಾಗಬಹುದು. ಆದರೆ ಇಂತಹ ಸಂದರ್ಭದಲ್ಲಿ ಸಂಶೋಧಕರಿಗೆ ಸಮುದಾಯದ ಮೂಲವನ್ನು ಗುರುತಿಸಿಕೊಳ್ಳುವಲ್ಲಿ ತೊಂದರೆಗಳಾಗಬಹುದು. ಆಗ ಬಹುಬೇಗನೆ ಸರಳವಾಗಿ ಒಂದು ಸಮುದಾಯದ ಮೂಲವನ್ನು ಗುರುತಿಸುವಲ್ಲಿ ಆ ಸಮುದಾಯದ ಮೂಲಭಾಷೆ, ಕುಲ-ಬಳಿ(ಬೆಡಗು-

ಗೋತ್ರ)ಗಳು, ಕುಲಚಿಹ್ನೆಗಳು, ಅಲೆಮಾರಿತನದ (ವಲಸೆ) ಕಾರಣಗಳನ್ನು ಕೂಲಂಕಶವಾಗಿ ಶೋಧಿಸಿದಾಗ ಆ ಸಮುದಾಯದ ಮೂಲವನ್ನು ಕಂಡುಕೊಳ್ಳಬಹುದು. ಪ್ರಸ್ತುತ ಘಿಸಾಡಿ ಸಮುದಾಯದ ಮೂಲವನ್ನು ಕಂಡುಕೊಳ್ಳಲು ಇಂತಹ ತಂತ್ರಗಳನ್ನು ಬಳಸಿಕೊಳ್ಳಲಾಗಿದೆ.

೧. ವಿದ್ವಾಂಸರ ಅಭಿಪ್ರಾಯಗಳು

ಸಮುದಾಯದ ಮೂಲ ಸ್ಥಾನ : ಘಿಸಾಡಿ ಸಮುದಾಯದ ಮೂಲದ ಬಗೆಗೆ ವಿದ್ವಾಂಸರಲ್ಲಿ ಅನೇಕ ಭಿನ್ನಾಭಿಪ್ರಾಯಗಳಿವೆ.

1. "Ghisadi, Gadi or Gadaulia lohar, the bail Kammara trace their orgin from Chittorgarh region in Rajasthan they are presently distributed in the Bijapur, Dharwad and Gulbarga districts of Karnataka" *(Singh, K.S:1998:189).*

2. "The Ghisadi's visit parts of the Kholepore territory, Meeruj and various places in the Deccan. they speak of themselves as Rajpoots and their trade is that black smiths" *(Sherring, M A: 1974:339).*

3. "The Ghisadi are a tribe of blacksmiths who wander like our tinkers, over Southern India... their tradition is that they originally came from Gujarat and this is borne out by their language *(Grierson,G.A: 1968:453).*

4. "Ghishadi, Baiti Kamara (Baiti in telugu meaning out side) a wandering caste of Iron worker's polishers, tinkers and knife grinders the name Ghisadi seems to be derived from the Urdu word ghaisna' meaning 'to rub' their origin is obscure the Ghisadis themselves say that they were originally marathas... others claim Gujerath to be their original habitat" *(Syed Siraj-Ul-Hassan:1989:201).*

5. Ghisadi's or timkers also called Bailne Kambars or out side Iron smithes... "Their home tongue which is a corrupt Gujarathi suggests that they were formerly settled in Gujarat" they now wander from place to place during the fiar weather. *(Enthoven, R E:1990:3).*

೬. "ಬೈಲುಗಂಬಾರರು (ಘಿಸಾಡಿಗಳು) ಇವರು ಗುಜರಾತದಿಂದ ಸುಮಾರು ೧೨೫ ವರ್ಷಗಳ ಹಿಂದೆ ಬಂದವರೆಂದು ತೋರುತ್ತದೆ. ಮನೆಯಲ್ಲಿ ಕೆಲವರು ಮರಾಠಿ ಮಿಶ್ರ ಗುಜರಾತಿ ಭಾಷೆಯನ್ನಾಡುವರು ಕೆಲವರು ಮರಾಠಿ ಭಾಷೆಯನ್ನಾಡುವರು. ಇವರ ಅಡ್ಡ ಹೆಸರುಗಳು

ಚವ್ಹಾಣ್, ಝುಂಡ್, ಖತ್ರೆ, ಪಡಿವಲ್‌ಕರ್, ಪವಾರ, ಸಾಳುಂಕೆ, ಸುರ್ವೇಸಿ ಇತ್ಯಾದಿ" *(ವೆಂಕಟರಂಗೋಕಟ್ಟೀ: ೧೯೮೪: ೧೪೫).*

ಈ ಮೇಲಿನ ವಿವಿಧ ವಿದ್ವಾಂಸರ ಅಭಿಪ್ರಾಯಗಳನ್ನು ಅವಲೋಕಿಸಿದಾಗ ಮತ್ತು ಘಿಸಾಡಿ ಸಮುದಾಯದ ವಿವಿಧ ಕುಲ, ಬೆಡಗು(ಗೋತ್ರ)ಗಳು ಮತ್ತು ವಂಶಾವಳಿಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ ಇವರ ಕುಲ ಬೆಡಗುಗಳು ರಜಪೂತ ವಂಶದ ಸಮುದಾಯಗಳಿಗೆ ಸೇರಿವೆ ಎಂಬುದು ಖಚಿತವಾಗುತ್ತದೆ. ಆದ್ದರಿಂದ ಇವರು ರಜಪೂತ ಅಥವಾ ರಾಜಸ್ಥಾನದ ಮೂಲಿಗರು ಎಂಬುದು ಸ್ಪಷ್ಟವಾಗುತ್ತದೆ. ಅಲ್ಲದೆ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಘಿಸಾಡಿ ಸಮುದಾಯದ ಅನೇಕ ವಕ್ತೃಗಳಿಗೆ ನೀವು ಎಲ್ಲಿಂದ ಬಂದಿರುವಿರಿ ಎಂದು ಪ್ರಶ್ನೆ ಮಾಡಿದರೆ ನಾವು ರಾಜಸ್ಥಾನದ 'ಚಿತ್ತೋಡ್‌ಗಡ್' ಪ್ರದೇಶದಿಂದ ಬಂದು ವಿವಿಧ ಪ್ರದೇಶಗಳಲ್ಲಿ ನೆಲೆಸಿದ್ದೇವೆ ಎಂದು ಹೇಳುತ್ತಾರೆ. ಆದ್ದರಿಂದ ಘಿಸಾಡಿ ಸಮುದಾಯದವರು ನಿರ್ವಿವಾದವಾಗಿ ರಜಪೂತ ವಂಶದವರೆಂದು ನಿರ್ಧರಿಸಬಹುದು. ಘಿಸಾಡಿ ಸಮುದಾಯದ ಆಚಾರ-ವಿಚಾರಗಳು, ಕುಲ-ಪರಂಪರೆಗಳು, ಸಂಸ್ಕಾರಗಳು, ವಂಶಾವಳಿಗಳು, ಹಬ್ಬ-ಹರಿದಿನಗಳಲ್ಲಿ, ರಾಜಸ್ಥಾನದ ರಜಪೂತರು, ಗುರ್ಜರು, ಲಂಬಾಣಿಗರು, ಹರಣಿಶಿಕಾರಿಗಳು(ಪಾರ್ಧಿ) ಸಮುದಾಯಗಳಿಗೆ ಹೆಚ್ಚು ಕಡಿಮೆ ಭಿನ್ನತೆ ಮತ್ತು ಸಾಮ್ಯತೆಗಳಿರುವುದು ಕಂಡುಬರುತ್ತದೆ.

ಆದರೆ ಭಾಷಾ ದೃಷ್ಟಿಯಿಂದ ಕೆಲವು ವಿದ್ವಾಂಸರ ಅಭಿಪ್ರಾಯದಂತೆ ಈ ಸಮುದಾಯವು ಗುಜರಾತಿ ಭಾಷೆಗೆ ಸಮೀಪವಿರುವುದರಿಂದ ಈ ಸಮುದಾಯವು ಗುಜರಾತ ಮೂಲಕ್ಕೆ ಸೇರಿರಬಹುದು ಎಂದು ಅಭಿಪ್ರಾಯಪಡುತ್ತಾರೆ. ಒಟ್ಟಿನಲ್ಲಿ ಈ ಸಮುದಾಯವು ರಾಜಸ್ಥಾನ ಮತ್ತು ಗುಜರಾತಿನ ಗಡಿ ಭಾಗದಲ್ಲಿ ಹುಟ್ಟಿ-ಬೆಳೆದು ದೇಶದ ವಿವಿಧ ಪ್ರದೇಶಗಳಲ್ಲಿ ಪಸರಿಸಿಕೊಂಡಿದೆ ಎಂದು ನಿರ್ಧರಿಸಬಹುದು.

೨. ಮಾಹಿತಿದಾರರ ಅಭಿಪ್ರಾಯಗಳು

ಅ. ಮೂಲ ಕುರಿತು ಘಿಸಾಡಿ ಸಮುದಾಯದ ಅಭಿಪ್ರಾಯ

೧. ಮೂಲತಃ ರಾಜಸ್ಥಾನದ "ಚಿತ್ತೋಡಗಡ್" ಹಾಗೂ "ಮೇವಾಡ್" ಪ್ರದೇಶದವರಾದ ನಾವು ಮೇವಾಡ್ ಪ್ರಾಂತ್ಯದ ರಜಪೂತ್ ರಾಜವಂಶದ ಆಡಳಿತಕ್ಕೆ ಒಳಪಟ್ಟಿದ್ದೆವು. ಆಗಿನ ಕಾಲದಲ್ಲಿ ಅಂದರೆ ಕ್ರಿ.ಶ. ೧೧೦೦ರಲ್ಲಿ ರಜಪೂತ ರಾಜವಂಶಸ್ಥರಿಂದ ನಮಗೆ ಸಂಪೂರ್ಣ ರಾಜಾಶ್ರಯವಿದ್ದು, ನಾವು ರಜಪೂತ್ ರಾಜ್ಯ ವಂಶಕ್ಕೆ ಸೇರಿದವರಾಗಿದ್ದೆವು ಮತ್ತು ಮುಖ್ಯವಾಗಿ ರಾಣಾ ಪ್ರತಾಪಸಿಂಹನು ನಮ್ಮ ರಾಜನಾಗಿದ್ದು, ನಮಗೆ ಸಂಪೂರ್ಣವಾಗಿ ಬೆಂಬಲ ನೀಡುವುದರೊಂದಿಗೆ ರಾಜಾಶ್ರಯವನ್ನು ನೀಡಿದನು. ನಾವು ಕೂಡಾ ರಾಜ ಬೆಂಬಲಿಗರಾಗಿದ್ದು, ರಾಣಾಪ್ರತಾಪ ಸಿಂಹನ ಸೈನಕ್ಕೆ ಯುದ್ಧ ಸಾಮಗ್ರಿಗಳನ್ನು ಮಾಡಿಕೊಡುವುದರೊಂದಿಗೆ, ಅಲ್ಲಿಯ ಸ್ಥಳೀಯ ರೈತರ ಕೃಷಿ ಸಲಕರಣೆಗಳನ್ನು

ರಿಪೇರಿ ಮತ್ತು ತಯಾರಿ ಮಾಡಿ ಜೀವನ ನಡೆಸುತ್ತಿದ್ದೆವು. ಆದ್ದರಿಂದ ರಾಣಾಪ್ರತಾಪಸಿಂಹನು ನಮಗೆ ಯಾವುದೇ ರೀತಿಯ ತೊಂದರೆಯಾಗದಂತೆ ನೋಡಿಕೊಳ್ಳುತ್ತಿದ್ದನು.

ಮುಂದೆ ೧೫೭೬ರಲ್ಲಿ ಮೊಘಲರ ಅರಸನಾದ ಅಕ್ಬರನಿಗೂ ಮತ್ತು ರಾಣಾಪ್ರತಾಪ ಸಿಂಹನಿಗೂ ಅನೇಕ ಸಲ ಯುದ್ಧ ನಡೆದು ದಾಳಿ ಪ್ರತಿದಾಳಿಗಳಾಗಿ ಕೊನೆಗೆ ರಾಣಾಪ್ರತಾಪ ಸಿಂಹನು ಸೋಲನ್ನು ಅನುಭವಿಸಿ ಅಡವಿಯನ್ನು ಸೇರಿದನು. ಆಗ ರಾಜನೊಂದಿಗೆ ನಾವು ಕೂಡಾ ಅಡವಿ ಸೇರಿದೆವು. ಕೆಲವು ದಿನಗಳ ನಂತರ ರಾಣಾಪ್ರತಾಪಸಿಂಹನು ಮರಣ ಹೊಂದಿದ ನಂತರ ನಮಗೆ ಸಂಪೂರ್ಣ ರಾಜಾಶ್ರಯ ತಪ್ಪಿ ಅಲೆಮಾರಿ ಜೀವನ ನಡೆಸಲು ಆರಂಭಿಸಿದ್ದೆವು. ಅಲೆಮಾರಿ ಜೀವನ ನಡೆಸುತ್ತಾ ಮುಂದೆ ಮಾಹಾರಾಷ್ಟ್ರದ ಶಿವಾಜಿ ಮಹಾರಾಜನ ಸೈನ್ಯದ ಆಡಳಿತದಲ್ಲಿ ಯುದ್ಧ ಸಾಮಗ್ರಿಗಳನ್ನು ತಯಾರು ಮಾಡುವುದು ಮತ್ತು ಆ ಪ್ರದೇಶದ ರೈತರ ಕೃಷಿ-ಸಲಕರಣೆಗಳನ್ನು ರಿಪೇರಿ, ತಯಾರಿ ಮಾಡಿ ಜೀವನ ನಡೆಸಲು ಆರಂಭಿಸಿದ್ದೆವು. ಹೀಗೆ ಕಾಲಘಟ್ಟಗಳು ಉರುಳಿದಂತೆ ಬ್ರಿಟಿಷರ ರೈಲ್ವೇ ಯೋಜನೆಗಳಿಂದ ದೇಶದ ವಿವಿಧ ಪ್ರದೇಶಗಳಲ್ಲಿ ಸಂಚಾರಿಗಳಾಗಿ ಜೀವನ ನಡೆಸಿಕೊಂಡು ಬಂದವರಾಗಿದ್ದೆವೆ ಎಂದು ಬಿಜಾಪುರದ ಅಂಬಾದಾಸ್ ಜಿ ಸಾಳುಂಕೆ ಹೇಳುತ್ತಾರೆ.

ಮೂಲತಃ ರಾಜಸ್ಥಾನದ ಚಿತ್ತೋಡಘಡ್, ಮೇವಾಡ್, ಉದಯಪುರ, ಜೋದಪುರ್ ಪ್ರದೇಶಗಳಲ್ಲಿ ರಜಪೂತ ವಂಶಕ್ಕೆ ಸೇರಿದ ಅನೇಕ ಚಿಕ್ಕ-ಪುಟ್ಟ ಸಾಮ್ರಾಜ್ಯಗಳಿದ್ದು ಅವುಗಳನ್ನು ರಜಪೂತ ವಂಶಕ್ಕೆ ಸೇರಿದ ರಾಜರು ಆಳುತ್ತಿದ್ದರು. ಈ ಚಿಕ್ಕ-ಪುಟ್ಟ ರಾಜರಲ್ಲಿ ರಾಣಾಪ್ರತಾಪಸಿಂಗ್ ಮತ್ತು ರಾಜಾ ಮಾನಸಿಂಗ ಬಹಳ ಪ್ರಖ್ಯಾತಿಯನ್ನು ಪಡೆದಿದ್ದರು. ಆಗ ಮೊಘಲರ ಅರಸನಾದ ಅಕ್ಬರನು ಇವರ ಮೇಲೆ ದಾಳಿ ಮಾಡಲು ದಂಡೆತ್ತಿ ಬಂದನು, ಆಗ ರಾಜಾ ಮಾನಸಿಂಗನು ಅಕ್ಬರನಿಗೆ ಕಪ್ಪ-ಕಾಣಿಕೆಗಳನ್ನು ನೀಡಿ ತನ್ನ ತಂಗಿಯಾದ ಜೋದಾಬಾಯಿಯನ್ನು ಅಕ್ಬರನಿಗೆ ಕೊಟ್ಟು ಮದುವೆ ಮಾಡಿ, ಅಕ್ಬರನಿಂದ 'ಉದಯಪುರ' ಪ್ರಾಂತ್ಯದ ಪ್ರದೇಶವನ್ನು ಉಂಬಳಿಯಾಗಿ ಆಡಳಿತ ಮಾಡಲು ಪಡೆಯುತ್ತಾನೆ.

ಇದನ್ನು ರಾಣಾಪ್ರತಾಪಸಿಂಹನ್ನು ಘೋರವಾಗಿ ಖಂಡಿಸುತ್ತಾನೆ. ಈ ಸಂದರ್ಭದಲ್ಲಿ ಸುಮಾರು ೫೬ ಚಿಕ್ಕ-ಪುಟ್ಟ ರಾಜ್ಯ ಸಂಸ್ಥಾನಗಳು ಎರಡು ಭಾಗಗಳಾಗುತ್ತವೆ. ಮೊಘಲರ ಪರವಾಗಿ ಒಂದು ಗುಂಪಾದರೆ, ಇನ್ನೊಂದು ಗುಂಪು ಮೊಘಲರ ವಿರೋಧಿಯಾಗಿ ರಾಣಾಪ್ರತಾಪಸಿಂಹನಿಗೆ ಬೆಂಬಲಿಸುತ್ತವೆ. ರಾಣಾಪ್ರತಾಪಸಿಂಹನ ಪರವಾದ ಘಿಸಾಡಿ ಸಮುದಾಯದವರು ರಾಣಾಪ್ರತಾಪಸಿಂಹನಿಗೆ ಯುದ್ಧ ಸಲಕರಣೆಗಳನ್ನು ಮಾಡಿಕೊಡುತ್ತಾ ಹಾಗೂ ಅಲ್ಲಿಯ ರೈತರ ಕೃಷಿ ಉಪಕರಣಗಳನ್ನು ತಯಾರಿ ಮಾಡಿಕೊಡುವವರಾಗಿದ್ದು ರಾಣಾಪ್ರತಾಪಸಿಂಹನ ಬೆಂಬಲದೊಂದಿಗೆ ಆ ಪ್ರದೇಶದಲ್ಲಿ ಉತ್ತಮ ಜೀವನ ನಿರ್ವಹಿಸುತ್ತಿದ್ದರು.

ಮುಂದೆ ೧೫೭೬ರಲ್ಲಿ ಮೊಘಲರ ಅರಸನಾದ ಅಕ್ಬರನಿಗೂ ಮತ್ತು ಧೀರ ರಾಣಾಪ್ರತಾಪ

ಸಿಂಹನಿಗೂ ಅನೇಕ ಸಲ ಯುದ್ಧ ನಡೆದು ದಾಳಿ ಪ್ರತಿ ದಾಳಿಗಳಾಗಿ ಕೊನೆಗೆ 'ಹಲದಿಘಾಟಿ' ಯುದ್ಧದಲ್ಲಿ ಅಕ್ಬರನಿಂದ, ಮೇವಾಡದ ರಾಣಾಪ್ರತಾಪಸಿಂಹನು ಸೋಲನ್ನು ಅನುಭವಿಸಿ ಅಡವಿಯನ್ನು ಸೇರುತ್ತಾನೆ. ಆಗ ರಾಣಾಪ್ರತಾಪಸಿಂಹನ ರಾಜಾಶ್ರಯ ತಪ್ಪಿ ಘಿಸಾಡಿ ಸಮುದಾಯವು ಅಲೆಮಾರಿಗಳಾಗಿ ಶಿವಾಜಿ ಮಹಾರಾಜನ ಕಡೆಗೆ ಹೋಗುತ್ತಾರೆ. ಶಿವಾಜಿ ಮಹಾರಾಜನ ಆಶ್ರಯ ಪಡೆದುಕೊಂಡು ಕೆಲವು ವರ್ಷಗಳ ನಂತರ ಶಿವಾಜಿ ಮಹಾರಾಜನ ಆಶ್ರಯ ತಪ್ಪಿ ಮುಂದೆ ಬ್ರಿಟಿಷ್‌ರ ರೈಲ್ವೇ ಯೋಜನೆಗಳ ಮೂಲಕ ದೇಶದ ಅನೇಕ ಭಾಗಗಳಲ್ಲಿ ಸಂಚರಿಸಿ, ಇಂದು ವಿವಿಧ ಕಡೆ ಹರಡಿಕೊಂಡಿದ್ದಾರೆ. ಘಿಸಾಡಿ ಸಮುದಾಯದವರ ಪ್ರಕಾರ ರಾಣಾಪ್ರತಾಪಸಿಂಹನಿಗೆ ಬೆಂಬಲಿಗರಾದವರು 'ರಾಜಾ ಪುತ್ರರು' ಎಂದು, ಮೊಘಲರಿಗೆ ಕಪ್ಪ-ಕಾಣಿಕೆ ಕೊಟ್ಟವರು. 'ರಜ ಪೂತರು' ಎಂದು ಹೇಳುತ್ತಾರೆ. ಅಲ್ಲದೆ ನಾವು ರಾಜಾ+ಪುತ್ರ(ರಾಜಪುತ್ರರು) ಎಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ.

ಯಾವುದೇ ಒಂದು ಸಮುದಾಯವು ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ವಲಸೆ ಬರುವುದಕ್ಕೆ ತನ್ನದೆಯಾದಂತಹ ಅನೇಕ ಕಷ್ಟ-ಸುಖಗಳನ್ನು ಆ ಸಮುದಾಯ ಹೊಂದಿರುತ್ತದೆ. ಪ್ರಸ್ತುತ ಘಿಸಾಡಿ ಸಮುದಾಯವು ಈ ಸಂಕೋಲೆಯಲ್ಲಿ ಸಿಕ್ಕಿಹಾಕಿಕೊಂಡಿದ್ದು, ಅಲೆಮಾರಿತನಕ್ಕೆ ಕಾರಣವಾಗಿದೆ.

೩. ಸಮುದಾಯದ ವಿವಿಧ ಪದ ನಿಷ್ಪತ್ತಿ ಮತ್ತು ಅರ್ಥ

ಪ್ರಪಂಚದ ದಿನ ನಿತ್ಯದ ವ್ಯಾವಹಾರಿಕ ಬದುಕಿನಲ್ಲಿ ಹೆಸರೇ ಮೂಲಕಾರಣವಾಗಿರುತ್ತದೆ. ಅಲ್ಲದೆ ಆ ಹೆಸರಿನಲ್ಲಿ ತನ್ನದೆ ಆದಂತಹ ಸತ್ಯಾಂಶಗಳನ್ನೊಳಗೊಂಡ ಅರ್ಥದ ಚರಿತ್ರೆಯನ್ನು ಕೂಡಾ ಕ್ರೋಢೀಕರಿಸಿಕೊಂಡಿರುತ್ತದೆ. ಪ್ರಪಂಚದಲ್ಲಿಯ ನೈಸರ್ಗಿಕ ವಸ್ತುಗಳಿಂದ ಹಿಡಿದು ಅದು ಪ್ರಾಣಿ ಪಕ್ಷಿಗಳಿಂದ ವ್ಯಕ್ತಿ ಮತ್ತು ಸಾಮುದಾಯಿಕ ಬದುಕಿನ ಆಚೆಯವರೆಗೂ ಆವರಿಸಿಕೊಂಡಿರುತ್ತದೆ.

ಒಂದು ಪದ ಅಥವಾ ಹೆಸರು ಒಬ್ಬ ವ್ಯಕ್ತಿಗೆ ಅನ್ವಯಿಸಿಕೊಂಡಾಗ ಆ ವ್ಯಕ್ತಿಯ ತಂದೆ-ತಾಯಿ, ಜಾತಿ ಧರ್ಮ, ಮತ, ಪಂಥ, ಉಪಜಾತಿಗಳ ಸಮಗ್ರ ಮಾಹಿತಿ ಕೊಡುತ್ತದೆ. ಇದನ್ನು ಒಂದು ಸಮುದಾಯಕ್ಕೆ ಅನ್ವಯಿಸಿಕೊಂಡಾಗ ಆ ಸಮುದಾಯದ ಭಾಷೆ, ಕುಲ, ಸಂಸ್ಕೃತಿ, ವೃತ್ತಿ, ಧರ್ಮ, ಸಂಪ್ರದಾಯ, ರೀತಿ ನೀತಿಗಳನ್ನು ವಿವಿಧ ಆಯಾಮಗಳಿಂದ ಕಲೆಹಾಕಿ ಆ ಸಮುದಾಯದ ಚಿತ್ರವನ್ನು ಬಿಂಬಿಸುತ್ತದೆ. ಅಲ್ಲದೆ ಒಂದು ಸಮುದಾಯಕ್ಕೆ ಆಯಾ ಪರಿಸರದಲ್ಲಿ ವಾಸಿಸುವ ಜನರು ವಿವಿಧ ಹೆಸರುಗಳಿಂದ ಗುರುತಿಸುವುದನ್ನು ಕೂಡಾ ಕಂಡುಕೊಳ್ಳಬಹುದು. ಹಾಗೇ ಸಮುದಾಯವು ಕೂಡ ಅವರು ಗುರುತಿಸುವಂತಹ ಕ್ರಿಯೆಗಳಿಗೆ ಒಪ್ಪಿಕೊಡಿರುವುದು ಸತ್ಯವಾಗಿದೆ ಎಂಬುದು ಸ್ಪಷ್ಟವಾಗುತ್ತದೆ.

ಪ್ರಸ್ತುತ ಘಿಸಾಡಿ ಸಮುದಾಯವು ಕೂಡಾ ಆಯಾ ಪ್ರದೇಶದ ಪರಿಸರದಲ್ಲಿ ವಿವಿಧ ಹೆಸರುಗಳಿಂದ ಗುರುತಿಸಲ್ಪಟ್ಟಿರುವುದು ಕಂಡುಬರುತ್ತದೆ.

ಪ್ರಾದೇಶಿಕವಾಗಿ ವಿವಿಧ ಪ್ರದೇಶದಲ್ಲಿ ಘಿಸಾಡಿ ಸಮುದಾಯವನ್ನ ಹೀಗೆ ಗುರುತಿಸಲಾಗುತ್ತದೆ.

೧. 'ಘಿಸಾಡಿ' ಸಮುದಾಯ (ಸಮಾಜ)

೨. 'ಘಿಸಾಡಿ ಕಮ್ಮಾರರು' (ಕಂಬಾರರು)

೩. ಬೈಲು ಕಮ್ಮಾರರು (ಬೈಲ್‌ಗಂಬಾರರು)

೪. ಗೌಡಾಲಿಯಾ ಲೋಹಾರ್ (ಗಾಡಿ ಲೋಹಾರ)

೫. ರಜಪೂತ ಕಮ್ಮಾರ್

೬. ಅಲೆಮಾರಿ ಕಮ್ಮಾರರು

೭. ಬೈಟೀ ಕಮ್ಮಾರ್

೧. 'ಘಿಸಾಡಿ' ಸಮುದಾಯ (ಸಮಾಜ) : ಘಿಸಾಡಿ ಎಂಬ ಪದವು ಜಾತಿ ಅಥವಾ ಒಟ್ಟು ಸಮುದಾಯದ ಹೆಸರನ್ನು ಪ್ರತಿನಿಧಿಸಿದರೆ, ಸಮುದಾಯ ಮತ್ತು ಸಮಾಜ ಎಂಬುದು ಈ ಜನವರ್ಗದ ಒಟ್ಟು ಚೌಕಟ್ಟನ್ನು ಸಂಕೇತಿಸುತ್ತದೆ.

ಘಿಸಾಡಿ ಎಂಬ ಪದದ ಅರ್ಥ ವಿವರಣೆ : ಘಿಸಾಡಿ ಎಂಬ ಪದ ಬಳಕೆಯ ಅರ್ಥವನ್ನು ಕಂಡುಕೊಳ್ಳಲು ವಿವಿಧ ಭಾಷೆಗಳ ಶಬ್ದ ಕೋಶಗಳನ್ನು ಅವಲೋಕಿಸಿದರೂ ಸ್ಪಷ್ಟವಾದ ಅರ್ಥವೇ ಸಿಗುತ್ತಿಲ್ಲ. ಆದರೆ ಮರಾಠಿ ಭಾಷಾ-ಶಬ್ದಕೋಶಗಳಲ್ಲಿ ಮಾತ್ರ ಘಿಸಾಡಿ ಶಬ್ದದ ಪದ ಬಳಕೆ ಯಲ್ಲಿದ್ದು ಅದರ ಅರ್ಥ ವಿವರಣೆ ಅಲ್ಪಸ್ವಲ್ಪ ಸಿಕ್ಕಿದ್ದು, ಆ ಮಾಹಿತಿಗಳ ಕೆಲ ವಿವರಣೆಗಳನ್ನು ಈ ಕೆಳಗಿನಂತೆ ಸಾಹಿತ್ಯಿಕ ಆಧಾರದ ತರ್ಜುಮೆ ಮಾಡಲಾಗಿದೆ.

೧. 'ಘಿಸಾಡಿ' ಎಂದರೆ ಗಟ್ಟಿಮುಟ್ಟಾದ ಕಬ್ಬಿಣದ ಕೆಲಸ ಮಾಡುವ ಒಂದು ಕೆಳಜಾತಿ; ಈ ಸಮುದಾಯವು ಒಂದು ಊರಿನಲ್ಲಿ ನೆಲೆ ನಿಂತುಕೊಳ್ಳುವುದಿಲ್ಲ. ಈ ಜಾತಿ ಮನುಷ್ಯನಿಗೆ ಲೋಹಾರಿ ಎಂದು ಕೂಡಾ ಕರೆಯುತ್ತಾರೆ ಎಂದು ಸ್ಪಷ್ಟೀಕರಿಸಿದ್ದಾರೆ (ಯಶವಂತ ರಾಮಕೃಷ್ಣ ದಾತೆ, ಚಿತ್ತಾಮಣಿ ಗಣೇಶ ಕರ್ವೆ:೧೯೮೮:೧೦೮೯).

೨. ಘಿಸಾಡಿ ಎಂದರೆ "ಪು॥ ಪುಲ್ಲಿಂಗ ಪರಿಕಲ್ಪನೆಯ ವಿಶೇಷವಾಗಿದ್ದು A Particulor Caste ಅಂದರೆ, ಈ ಶಬ್ದ ಐತಿಹಾಸಿಕವಾಗಿ ದ್ರಾವಿಡ ಶಬ್ದ ಇರಬಹುದು ಎಂದು ಶಂಕಿಸಲಾಗಿದೆ ಎಂದು ಹೇಳುತ್ತಾರೆ (ಕುಲಕರ್ಣಿ,ಕೃ.ಪಾ:೧೯೯೩:೨೭೮).

೩. 'ಘಿಸಾಡಿ' ಎಂದರೆ "ಘಿಸಾಡಿಯು ಕಬ್ಬಿಣದ ಕೆಲಸ ಮಾಡುವಾಗ ಕೆಂಪಗೆ ಕಾಯಿಸಿದ ಕಬ್ಬಿಣ, ತಣ್ಣಗೆ ಆಗುವುದಕ್ಕಿಂತ ಮೊದಲೇ ಘನ್‌ದಿಂದ "ಘಿಸ್, ಘಿಸ್" ಎಂಬ ಶಬ್ದದೊಂದಿಗೆ ಲಗುವಾಗಿ, ವೇಗದಿಂದ, ಸತತವಾಗಿ ಬಡಿಯುತ್ತಿರುತ್ತಾನೆ. ಈ 'ಘಿಸ್-ಘಿಸ್' ಎಂಬ ಶಬ್ದ ಮತ್ತು ಅತಿಯಾದ ವೇಗವೇ ಘಿಸಾಡಿ ಶಬ್ದದ ಪರಿಕಲ್ಪನೆ" ಎಂಬ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ (ಯಶವಂತ ರಾಮಕೃಷ್ಣ ದಾತೆ, ಚಿತ್ತಾಮಣಿ ಗಣೇಶ ಕರ್ವೆ:೧೯೮೮:೪೪೭).

೪. 'ಘಿಸಾಡಿ' ಎಂಬುದು ಒಂದು ಜಾತಿಯ ಜನಾಂಗವಾಗಿದ್ದು 'ಘರ್ಷಣೆ' ಎಂಬ ಧಾತುವಿನಿಂದ ಈ ಶಬ್ದ ಉತ್ಪತ್ತಿಯಾಗಿದೆ. ಈ ಜನರು ಮಹಾರಾಷ್ಟ್ರ ಮತ್ತು ಕರ್ನಾಟಕ ಪ್ರದೇಶದಲ್ಲಿ ಇರುತ್ತಾರೆ ಎಂದಿದ್ದಾರೆ (ಮಹಾದೇವಶಾಸ್ತ್ರೀ ಜೋಶಿ:೧೯೮೮:೨೬೮).

ಘಿಸಾಡಿ ಸಮುದಾಯದವರಿಗೆ ಸ್ವತಃ ಸಂದರ್ಶಿಸಿ ನೀವು ಯಾವ ಜಾತಿಯವರು ಎಂದು ಕೇಳಿದರೆ ನಾವು ಘಿಸಾಡಿ ಜಾತಿಯವರು, ಘಿಸಾಡಿ ಸಮಾಜದವರಾಗಿದ್ದು, ನಾವು ನಮ್ಮ ಕುಲ ಕಸುಬು 'ಕಮ್ಮಾರಿಕೆ' ಕೆಲಸವಾಗಿದೆ ಎಂದು ಹೇಳುತ್ತಾರೆ. ಅಲ್ಲದೆ ಊರಿನಿಂದ ಊರಿಗೆ ಅಲೆದಾಡುತ್ತ ಕಮ್ಮಾರಿಕೆ ಕೆಲಸ ಮಾಡುತ್ತೇವೆ ಎನ್ನುತ್ತಾರೆ.

೨. "ಘಿಸಾಡಿ ಕಮ್ಮಾರರು (ಕಂಬಾರರು): 'ಘಿಸಾಡಿ ಕಮ್ಮಾರರು' ಎಂಬ ಪದವು ಎರಡು ಶಬ್ದಗಳನ್ನೊಳಗೊಂಡ ಸಂಯುಕ್ತ ಪದವಾಗಿದೆ. ಘಿಸಾಡಿ+ಕಮ್ಮಾರರು = ಘಿಸಾಡಿ ಕಮ್ಮಾರರು. 'ಘಿಸಾಡಿ' ಎಂಬ ಪದವು ಸಮುದಾಯದ ಇಡೀ ಸಮೂಹವನ್ನು ಗುರುತಿಸುವ ಪದವಾಗಿದೆ. ಅಥವಾ ಆ ಸಮುದಾಯದ ಜಾತಿ ಸೂಚಕ ಪದವಾಗಿದೆ.

'ಕಮ್ಮಾರ' ಎಂಬುದು ಅವರು ನಿರ್ವಹಿಸುವ ಕಬ್ಬಿಣದ ಕೆಲಸವನ್ನು ಸಂಕೇತಿಸುವ ಪದ ವಾಗಿದ್ದು. ಈ ಮೇಲಿನ ಎರಡು ಶಬ್ದಗಳ ಸಂಯುಕ್ತವನ್ನು ಘಿಸಾಡಿ+ಕಮ್ಮಾರರು = ಘಿಸಾಡಿ ಕಮ್ಮಾರರು ಎಂದು ಗುರುತಿಸಲಾಗುತ್ತದೆ.

'ಕಮ್ಮಾರ' ಎಂಬ ಪದವು ಕಬ್ಬಿಣದ 'ಕರ್ಪೋನ್' ಎಂಬ ಪದದ ಮೂಲದಿಂದ ಬಂದಿರ ಬಹುದು ಎಂಬುದು ವಿದ್ವಾಂಸರ ಅಭಿಪ್ರಾಯವಾಗಿದೆ. ಬಹುಶಃ ಇಲ್ಲಿ 'ಕ' ಅಕ್ಷರವು ಕಬ್ಬಿಣವನ್ನು ಸಂಕೇತಿಸಿದರೆ 'ಮಾರ' ಎಂಬುದು ತಯಾರಿಸುವವನ್ನು ಎನ್ನುವುದನ್ನು ಸೂಚಿಸುತ್ತಿರಬೇಕು ಎನಿಸುತ್ತದೆ.

೩. ಬೈಲು ಕಮ್ಮಾರರು (ಬೈಲ್ ಗಂಬಾರರು) : "ಬೈಲು ಕಮ್ಮಾರರು" ಎಂಬ ಪದವು ಎರಡು ಶಬ್ದಗಳನೊಳ್ಳಗೊಂಡ ಸಂಯುಕ್ತ ಪದವಾಗಿದೆ. ಬೈಲು+ಕಮ್ಮಾರರು = ಬೈಲುಕಮ್ಮಾರರು, (ಗಂಬಾರರು). 'ಬೈಲು' ಎಂಬುದು ಬಯಲು ಪ್ರದೇಶ, ಮೈದಾನ, ವಿಶಾಲ ಪ್ರದೇಶ ಎಂಬ ಅರ್ಥವನ್ನು ಸೂಚಿಸುತ್ತದೆ.

'ಕಮ್ಮಾರರು' ಎಂದರೆ ಕಬ್ಬಿಣದ ಕೆಲವನ್ನು ನಿರ್ವಹಿಸುವವರು ಎಂಬ ಅರ್ಥ ಸೂಚಿಸುತ್ತದೆ. ಕಬ್ಬಿಣಕ್ಕೆ ಸಂಬಂಧಿಸಿದ ವೃತ್ತಿಗಾರರಿಗೆ "Black Smith's" ಎಂದು ಗುರುತಿಸಲಾಗುತ್ತದೆ.

ಒಟ್ಟಿನಲ್ಲಿ ಬೈಲುಕಮ್ಮಾರರು (ಗಂಬಾರರು) ಎಂಬುದು ಪ್ರಕೃತಿಯ ಮಡಿಲಿನಲ್ಲಿ ವಾಸಿಸುವ ರಾಗಿದ್ದು ಒಂದು ಊರಿನ ಹೊರವಲಯದ ವಿಶಾಲವಾದ ಪ್ರದೇಶಗಳಲ್ಲಿ ಗುಡಾರದ ಬಿಡಾರಗಳನ್ನು ಹಾಕಿ ಅಲ್ಲಿ ಲಭ್ಯವಿರುವಂತಹ ಕಬ್ಬಿಣದ ರೀಪೇರಿ ಮತ್ತು ತಯಾರಿ ಕೆಲಸಗಳನ್ನು ಮಾಡುವ ಜನರ ಚಿಕ್ಕ ಗುಂಪು ಎಂದು ಗುರುತಿಸಬಹುದು.

೪. **ಗೌಡಾಲಿಯಾ ಲೋಹಾರ (ಗಾಡಿ ಲೋಹಾರ)** : ಎತ್ತಿನ ಬಂಡಿ ಅಥವಾ ಎಮ್ಮೆ-ಕೋಣಗಳ ಬಂಡಿ-ಗಾಡಿ ಇಲ್ಲವೇ, ಕುದುರೆಯ ಟಾಂಗಾ, ಕತ್ತೆಗಳ ಮೇಲೆ ತಮ್ಮ ಸಾಮಾನು-ಸರಕುಗಳನ್ನು ಹೇರಿಕೊಂಡು ಇವರು ವಿವಿಧ ಪ್ರದೇಶ ಮತ್ತು ಊರುಗಳಿಗೆ ಕೆಲಸಗಳನ್ನು ಹುಡುಕಿಕೊಂಡು ತಿರುಗಾಡುವುದರಿಂದ ಗೌಡಾಲಿಯಾ ಲೋಹಾರ ಅಥವಾ ಗಾಡಿವಾಲ್ ಲೋಹಾರ ಎಂದು ಜನರು ಇವರನ್ನು ಗುರುತಿಸುತ್ತಿರಬೇಕು. ಇದರ ವಿಶ್ಲೇಷಣೆಯನ್ನು ಸಮಾಜಶಾಸ್ತ್ರಜ್ಞರಾದ ಪಿ.ಕೆ. ಶರ್ಮಾ ಅವರು ಈ ರೀತಿಯಲ್ಲಿ ವಿಶ್ಲೇಷಿಸಿದ್ದಾರೆ. In Hindi Gadulia or Gadoli means a cart but it may also mean a bullock cart, and Lohar means a black smith *thous* the name Gadulia Lohar means "bullock cart black smith" (Sharma, P K:1958:29) ಎಂದು ಉಲ್ಲೇಖಿಸಿದ್ದಾರೆ. ಈ ಉಲ್ಲೇಖವು ಇಲ್ಲಿ ಸರಿ ಎನ್ನಿಸುತ್ತದೆ.

ಇಲ್ಲಿ 'ಗಾಡಿ' ಎಂದರೆ 'ಬಂಡಿ' ಮತ್ತು 'ಲೋಹಾರ' ಎಂದರೆ 'ಕಬ್ಬಿಣದ ಕೆಲಸ' ಮಾಡುವವನ್ನು ಎಂಬ ಅರ್ಥ ಸೂಚಿಸುತ್ತದೆ. ಗಾಡಿ ಮತ್ತು ಲೋಹಾರ ಎಂಬ ಎರಡು ಶಬ್ದಗಳು ಉರ್ದು ಮತ್ತು ಹಿಂದಿ ಭಾಷಾ ವರ್ಗಕ್ಕೆ ಸೇರಿದ ಪದಗಳಾಗಿವೆ ಎಂಬುದು ಸ್ಪಷ್ಟವಾಗುತ್ತದೆ.

೫. **ರಜಪೂತ ಕಮ್ಮಾರರು** : ರಾಜಸ್ಥಾನದ ಚಿತ್ತೋರಿಗಡ ಪ್ರದೇಶದಿಂದ ದೇಶದ ವಿವಿಧ ಭಾಗಗಳಲ್ಲಿ ನೆಲೆಸಿರುವುದರಿಂದ ಅಥವಾ ರಾಜಸ್ಥಾನದ ಮೂಲಿಗರಾಗಿರುವುದರಿಂದ ಇವರಿಗೆ ಕೆಲವೊಂದು ಪ್ರದೇಶದಲ್ಲಿ ರಜಪುತ ಕಮ್ಮಾರರು ಎಂದು ಕೂಡಾ ಕರೆಯುತ್ತಾರೆ. ಅಲ್ಲದೆ ಇವರು ಕೆಲವೊಂದು ಸಲ ನಾವು 'ರಾಜಪೂತ್ ಕಮ್ಮಾರರು' ಎಂದು ಹೇಳುತ್ತಾರೆ.

೬. **ಅಲೆಮಾರಿ ಕಮ್ಮಾರರು** : ಅಲೆಮಾರಿ + ಕಮ್ಮಾರರು = 'ಅಲೆಮಾರಿ ಕಮ್ಮಾರರು' ಇದು ಸಂಯುಕ್ತ ಪದವಾಗಿದ್ದು. ಅಲೆಮಾರಿ ಎಂಬುದು ಇವರ ಅಲೆಮಾರಿತನವನ್ನು ಸೂಚಿಸುತ್ತದೆ. ಕಮ್ಮಾರರು ಎಂಬುದು ಇವರ ವೃತ್ತಿಯನ್ನು ಸೂಚಿಸುವ ಪದವಾಗಿದೆ.

೭. **ಬೈಟೀ ಕಮ್ಮಾರರು** : ಕರ್ನಾಟಕದ ಆಂಧ್ರಪ್ರದೇಶದ ಗಡಿ ಭಾಗದ ಪ್ರದೇಶದಲ್ಲಿ ತೆಲುಗು ಭಾಷೆಯಲ್ಲಿ ಬೈಟಿ ಕಮ್ಮಾರರು ಎಂದು ಕರೆಯುತ್ತಾರೆ. 'ಬೈಟಿ' ಎಂದರೆ ಬಯಲು ಪ್ರದೇಶ ಎಂಬ ಅರ್ಥ ಸೂಚಿಸುತ್ತದೆ. 'ಕಮ್ಮಾರರು' ಎಂಬುದು ಅವರು ನಿರ್ವಹಿಸುವ ಕೆಲಸವನ್ನು ಸೂಚಿಸುತ್ತದೆ. ಜೊತೆಗೆ ಅಲ್ಲಿಯ ಸ್ಥಳೀಯ ಜನರು ಘಿಸಾಡಿಗಳು ಅಥವಾ ಘಿಸಾಡಿ ಕಮ್ಮಾರರು ಎಂದು ಕರೆಯುತ್ತಾರೆ.

೪. ಭಾರತದ ಭೌಗೋಳಿಕ ಪರಿಸರದಲ್ಲಿ ಘಿಸಾಡಿ ಸಮುದಾಯದ ನೆಲೆಗಳು

'ಘಿಸಾಡಿ' ಸಮುದಾಯವು ಮೂಲತಃ ರಾಜಸ್ಥಾನದ ಚಿತ್ತೋರಿಗಡ ಪ್ರದೇಶದವರಾಗಿದ್ದು, ಕಾರಣಾಂತರಗಳಿಂದ ಇವರು ಭಾರತ ದೇಶದಾದ್ಯಂತ ವಲಸೆ ಹೋಗಿರುವುದು ಕಂಡುಬರುತ್ತದೆ.

ಪ್ರಪಂಚದಲ್ಲಿನ ಯಾವುದೇ ಅಲೆಮಾರಿಗಳಾಗಲಿ ಅವರಿಗೆ ದೇಶದ ಗಡಿ ಮತ್ತು ರಾಜ್ಯದ ಗಡಿಗಳು ಎಂಬ ಕಲ್ಪನೆಯ ಅರಿವು ಮುಖ್ಯವಾಗಿರುವುದಿಲ್ಲ. ಅವರ ಬದುಕಿನ ನಿರ್ವಹಣೆಯೇ ಮುಖ್ಯವಾಗಿರುತ್ತದೆ. ಹೀಗಾಗಿ ಅವರು ದೇಶದ ಗಡಿ ಪ್ರದೇಶ ಮತ್ತು ರಾಜ್ಯದ ಗಡಿ ಪ್ರದೇಶ ಎಂಬ ಕಲ್ಪನೆಯನ್ನು ಕಟ್ಟಿಕೊಂಡಿರುವುದಿಲ್ಲ. ದೈನಂದಿನ ಬದುಕಿನ ಜೀವನ ನಿರ್ವಹಣೆಯ ಪರಿಸರಗಳನ್ನು ಹುಡುಕಿಕೊಂಡು ಹೋಗುವುದನ್ನೇ ಸದಾಕಾಲ ಯೋಚಿಸುವವರಾಗಿರುತ್ತಾರೆ. ಆದ್ದರಿಂದ ದೇಶದಲ್ಲಿ ಇವರ ಪ್ರಸರಣ ಮತ್ತು ನೆಲೆಗಳು ಈ ರೀತಿಯಾಗಿವೆ ಎಂದು ಸಮಾಜಶಾಸ್ತ್ರಜ್ಞರಾದ ಪಿ.ಕೆ. ಮಿಶ್ರಾ ಅವರು ಘಿಸಾಡಿ ಅಥವಾ ಗೌಡಾಲಿಯಾ ಲೋಹಾರ ನೆಲೆಸಿರುವ ವಿವಿಧ ಪ್ರದೇಶಗಳನ್ನು ಗುರುತಿಸಿ, ಈ ಕೆಳಗಿನಂತೆ ಉಲ್ಲೇಖಿಸಿದ್ದಾರೆ. The Gadulia Lohar are mainly found in Rajasthan, Gujarat, Madhya Pradesh, Punjab, Western Maharashtra and Westren Uttar Pradesh. In some of these places they are known by other names also in Westren Rajasthan. Most of them have settled down,.... and according to the 1941 census their population was 6,970 the Rajasthan year book and who's who 1961 states their population as 16,648 (Misra, P K:1977:02) ಆದ್ದರಿಂಧ ಘಿಸಾಡಿ ಸಮುದಾಯವು ಭಾರತ ದೇಶದ ದಖ್ಖಿನ ಪ್ರಸ್ಥಭೂಮಿಯ ಇಡೀ ನೆಲದಲ್ಲಿ ಅಲೆಮಾರಿಗಳಾಗಿ ನೆಲೆಸಿದ್ದಾರೆ ಎಂಬುದು ಸ್ಪಷ್ಟವಾಗುತ್ತದೆ.

೧. ಮಹಾರಾಷ್ಟ್ರ ಪ್ರದೇಶದಲ್ಲಿ ಘಿಸಾಡಿ ಸಮುದಾಯದ ನೆಲೆಗಳು

ಘಿಸಾಡಿ ಸಮುದಾಯದ ಬಹುತೇಕ ಜನರು ರಾಜಸ್ಥಾನದಿಂದ ತಮ್ಮ ನೆರೆಯ ರಾಜ್ಯವಾದ ಗುಜರಾತ ಪ್ರದೇಶದ ಮುಖಾಂತರ ಮಹಾರಾಷ್ಟ್ರಕ್ಕೆ ವಲಸೆ ಬಂದು ಅಲ್ಲಿಯೇ ನೆಲೆಸಿದ್ದಾರೆ ಎಂಬುದಕ್ಕೆ ಅಂಕಿ-ಅಂಶಗಳ ದಾಖಲೆಗಳು ಸ್ಪಷ್ಟ ಮಾಹಿತಿಯನ್ನು ನೀಡುತ್ತವೆ.

BERAR :	Amraoti	200	Families	
	Akola	004	"	
	Buldana	200	"	**404**
BOMBAY :	Poona	1000	Families	
	Satara	165	"	
	Belgaum	100	"	**1265**
	Total Families			**1669**

Source: 1. Bombay Gazetteer - Vol. XVIII Poona Pt I (1885)
IB - Vol. XIX (1885) Satara, P. 83
IB - Vol. XXI (1884) Belgaum Pp. 135-36

2. Aurangabad Gazetteer - P. 272

ಘಿಸಾಡಿ ಕುಟುಂಬಗಳು ಮಹಾರಾಷ್ಟ್ರದ ಅಮರಾವತಿ, ಅಕ್ಕೊಲ್, ಬುಲ್‌ದನ್, ಪುನಾ, ಸತಾರಾ, ಬಾಂಬೆ, ಸೋಲಾಪುರ, ಲಾತೋರ್, ಮುಂತಾದ ಪ್ರದೇಶಗಳಲ್ಲಿ ಹೆಚ್ಚಾಗಿ ವಾಸಿಸುವುದು ಕಂಡುಬರುತ್ತದೆ. ಘಿಸಾಡಿ ಸಮುದಾಯದ ಕೆಲವು ಕುಟುಂಬಗಳು ಮಹಾರಾಷ್ಟ್ರ ರಾಜ್ಯದ ಪ್ರದೇಶಗಳಲ್ಲಿ ತಮ್ಮ ಕುಲ ಕಸುಬಿನ ಮೂಲಕ ಸ್ವಲ್ಪ ಹೆಚ್ಚಿನ ಪ್ರಮಾಣದಲ್ಲಿ ಸ್ಥಿತಿವಂತರಾಗಿದ್ದಾರೆ. ಕೆಲವರು ಸಣ್ಣ ಪ್ರಮಾಣದ ರಾಜಕೀಯ ಅಧಿಕಾರದಲ್ಲಿ, ವ್ಯಾವಹಾರಿಕ ವಲಯಗಳಲ್ಲಿ, ಸರ್ಕಾರಿ ಹುದ್ದೆಗಳಲ್ಲಿ, ಶಾಲಾ-ಕಾಲೇಜುಗಳಲ್ಲಿ ಅಭ್ಯಾಸ ಮಾಡುವವರು ಕಂಡುಬರುತ್ತಾರೆಂದು, ಕರ್ನಾಟಕಕ್ಕೆ ವಲಸೆ ಬಂದ ಇವರ ರಕ್ತ ಸಂಬಂಧಿಗಳು ಹೇಳುತ್ತಾರೆ.

ಕರ್ನಾಟಕದಲ್ಲಿ ವಾಸಿಸುವ ಘಿಸಾಡಿ ಸಮುದಾಯದ ಕುಟುಂಬಗಳಿಗೆ ಹೋಲಿಕೆ ಮಾಡಿದಾಗ, ಮಹಾರಾಷ್ಟ್ರದಲ್ಲಿ ಸ್ವಲ್ಪ ಪ್ರಬಲ ಬುಡಕಟ್ಟು ಸಮುದಾಯವಾಗಿದೆ ಎಂಬುದು ಸ್ಪಷ್ಟವಾಗುತ್ತದೆ. ಅಲ್ಲದೆ ಮಹಾರಾಷ್ಟ್ರದ ಸೊಲ್ಲಾಪುರ, ಲಾತೂರ್, ಬಾಂಬೆಗಳಿಂದ, ಕರ್ನಾಟಕದ ವಿಜಾಪುರ, ಬೆಳಗಾಂ, ಗುಲ್ಬರ್ಗಾ, ಬೀದರ್ ಜಿಲ್ಲೆಗಳಲ್ಲಿ ಕೊಡುಕೊಳ್ಳುವ ಮದುವೆ (ರಕ್ತ) ಸಂಬಂಧಿಗಳಿರುವುದು ಹೆಚ್ಚಾಗಿ ಕಂಡುಬರುತ್ತದೆ.

೨. ಆಂಧ್ರಪ್ರದೇಶದಲ್ಲಿ ಘಿಸಾಡಿ ಸಮುದಾಯದ ನೆಲೆಗಳು

ಆಂಧ್ರಪ್ರದೇಶದಲ್ಲಿ ಘಿಸಾಡಿ ಸಮುದಾಯದ ಕುಟುಂಬಗಳು ಹೆಚ್ಚಾಗಿ ಹೈದ್ರಾಬಾದ್, ರಂಗಾರೆಡ್ಡಿ, ಮಹೆಬೂಬ್‌ನಗರ, ಮೇದಕ್ ಜಿಲ್ಲೆಗಳ ಪ್ರದೇಶಗಳಲ್ಲಿ ಹೆಚ್ಚಾಗಿ ಮತ್ತು ಇನ್ನುಳಿದ ಪ್ರದೇಶಗಳಲ್ಲಿ ತೀರಾ ಕಡಿಮೆ ಪ್ರಮಾಣದಲ್ಲಿ ನೆಲೆಸಿರುವುದು ಕಂಡುಬರುತ್ತದೆ. ಕರ್ನಾಟಕದ ಗುಲ್ಬರ್ಗಾ, ಬೀದರ ಜಿಲ್ಲೆಗಳಿಂದ ಆಂಧ್ರ ಪ್ರದೇಶದ ಮೇಲಿನ ಜಿಲ್ಲೆಗಳಿಗೆ ರಕ್ತಸಂಬಂಧ ಮತ್ತು ಕೊಡುಕೊಳ್ಳುವ ಸಂಬಂಧಗಳಿರುವುದು ಸ್ವತಃ ಸಮುದಾಯದವರೆ ಹೇಳುತ್ತಾರೆ. ಅಲ್ಲದೆ ಇವರ ಧಾರ್ಮಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಅಲ್ಲಿಂದ ಇಲ್ಲಿಗೆ ಬಂದು ಹೋಗುತ್ತಾರೆ.

ಘಿಸಾಡಿ ಸಮುದಾಯವು ಆಂಧ್ರ ಪ್ರದೇಶದಲ್ಲಿ ಕೂಡಾ ತೀರಾ ಹಿಂದುಳಿದ ಸಮುದಾಯ ವಾಗಿದ್ದು, ಗುಡಾರಗಳಲ್ಲಿಯೇ ವಾಸಿಸುವವರಾಗಿದ್ದಾರೆ. ಅಲ್ಲದೇ ಸಾಮಾಜಿಕ ಸ್ಥಾನಮಾನಗಳಲ್ಲಿ ಕೊರತೆಗಳನ್ನು ಅನುಭವಿಸುವವರಾಗಿದ್ದಾರೆ. ಅಲ್ಲಿಯ ಸರ್ಕಾರವು ಇವರ ಅಭಿವೃದ್ಧಿ ಬಗ್ಗೆ ಯಾವುದೇ ರೀತಿಯ ಯೋಜನೆ ಕಾರ್ಯಗಳಿಗೆ ಕಾಳಜಿ ತೋರಿಸುತ್ತಿಲ್ಲ ಎಂಬ ಅಳಲು ಅಲ್ಲಿಯ ಘಿಸಾಡಿ ಸಮುದಾಯದ ಜನರದ್ದಾಗಿದೆ.

೩. ಕರ್ನಾಟಕದಲ್ಲಿ ಘಿಸಾಡಿ ಸಮುದಾಯದ ನೆಲೆಗಳು

ಕರ್ನಾಟಕದಲ್ಲಿ ಘಿಸಾಡಿ ಸಮುದಾಯವು ಹೆಚ್ಚಾಗಿ ಉತ್ತರ ಕರ್ನಾಟಕದ ಪ್ರದೇಶಗಳಲ್ಲಿ ನೆಲೆಸಿರುವುದು ಕಂಡುಬರುತ್ತದೆ. ಇವರು ಸಾಮಾನ್ಯವಾಗಿ ಬೆಳಗಾಂ, ವಿಜಾಪುರ, ಗುಲ್ಬರ್ಗಾ, ಬೀದರ್, ಬಾಗಲಕೋಟೆ ಜಿಲ್ಲೆಗಳಲ್ಲಿ ಹೆಚ್ಚಾಗಿ ನೆಲೆಸಿದ್ದಾರೆ. ಆದರೆ ರಾಯಚೂರು, ಕೊಪ್ಪಳ, ಬಳ್ಳಾರಿ,


ಧಾರವಾಡ ಪ್ರದೇಶಗಳಲ್ಲಿ ಕಡಿಮೆ ಪ್ರಮಾಣದಲ್ಲಿ ನೆಲೆಸಿದ್ದು, ಆಗಾಗ ಅಲೆಮಾರಿಗಳಾಗಿ ಬಂದು ಹೋಗುತ್ತಿರುತ್ತಾರೆ.

ಇವರು ಅಲ್ಲಲ್ಲಿ ಸಂಚರಿಸುವವರಾಗಿದ್ದು, ಇಂದು ಅನೇಕ ಗ್ರಾಮ ಮತ್ತು ನಗರಗಳಲ್ಲಿ ಸ್ವತಃ ಮನೆ ಮತ್ತು ಗುಡಾರಗಳನ್ನು ಹಾಕಿಕೊಂಡು ಬಹುದಿನಗಳಿಂದ ನೆಲೆಸಿದ್ದಾರೆ. ಹೆಚ್ಚಾಗಿ ಇವರ ನೆಲೆಯ ತಾಣಗಳೆಂದರೆ ಸಾರ್ವಜನಿಕ ರಸ್ತೆ ಮತ್ತು ಕೊಳಚೆ ಪ್ರದೇಶಗಳು.

೪. ಗುಲ್ಬರ್ಗಾ ಜಿಲ್ಲೆಯಲ್ಲಿ ಘಿಸಾಡಿ ಸಮುದಾಯದ ನೆಲೆಗಳು

ಕರ್ನಾಟಕದ ಉತ್ತರ ಭಾಗದಲ್ಲಿರುವ ಗುಲ್ಬರ್ಗಾ ಜಿಲ್ಲೆ ಕರ್ನಾಟಕದಲ್ಲಿಯೇ ಇಂದು ಅತ್ಯಂತ ಹೆಚ್ಚಿನ ಭೌಗೋಳಿಕ ವ್ಯಾಪ್ತಿಯನ್ನು ಹೊಂದಿರುವ ಜಿಲ್ಲೆಯಾಗಿದೆ. ಇಲ್ಲಿ ಬಹುಸಂಖ್ಯಾತರು ಕೃಷಿಯನ್ನು ಅವಲಂಬಿಸಿರುವುದರಿಂದ ಮತ್ತು ಗ್ರಾಮೀಣ ಹಿನ್ನೆಲೆಯ ಪರಿಸರವುಳ್ಳವರಾಗಿರುವುದರಿಂದ ಇಲ್ಲಿ ಘಿಸಾಡಿ ಸಮುದಾಯಗಳಂತಹ ಕುಶಲಕರ್ಮಿಗಳ ಬದುಕಿಗೆ ಹೆಚ್ಚಿನ ಅವಕಾಶಗಳಿವೆ. ಇವರು ನಿರ್ವಹಿಸುವ ಕಮ್ಮಾರಿಕೆ ಕೆಲಸಕ್ಕೆ ಹೆಚ್ಚಿನ ಬೇಡಿಕೆ ಈ ಜಿಲ್ಲೆಯಲ್ಲಿರುವುದರಿಂದ ಇಂದು ಅನೇಕ ಘಿಸಾಡಿ ಕುಟುಂಬಗಳು ಗುಲ್ಬರ್ಗಾ ಜಿಲ್ಲೆಯ ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಬಹುದಿನ ಗಳಿಂದ ನೆಲೆಸಿದ್ದಾರೆ. ಇವರ ನೆಲೆಯ ತಾಣಗಳು ಈ ರೀತಿಯಾಗಿವೆ.

ಗುಲ್ಬರ್ಗಾ ಜಿಲ್ಲೆಯ ಘಿಸಾಡಿ ಸಮುದಾಯದ ತಾಲೂಕುವಾರು ಸಮೀಕ್ಷೆ ನೆಲೆಗಳು



ಸಂಕೇತಗಳು • ಸಮುದಾಯದ ನೆಲೆಗಳು

* ಕುಟುಂಬಗಳು



ಗುಲ್ಬರ್ಗಾ ಜಿಲ್ಲೆಯ ಛಿಸಾಡಿ ಸಮುದಾಯದ ನೆಲೆಗಳು

ಅ. ಅಫಜಲ್‌ಪುರ ತಾಲ್ಲೂಕು

೧. ಅಫಜಲ್‌ಪುರ ೨. ಅತನೂರು ೩. ಚೌಡಪೂರ
೪. ದೇವಲ ಗಾಣಗಾಪುರ ೫. ಹಿರೇಗೊಬ್ಬೂರು ೬. ಸ್ಟೇಷನ್ ಗಾಣಗಾಪುರ

ಆ. ಆಳಂದ ತಾಲ್ಲೂಕು

೧. ಆಳಂದ ೨. ಜವಳಗಿ (ಬಿ) ೩. ಜಿಡಗಾ
೪. ಕಡಗಂಚಿ ೫. ನಿಂಬರ್ಗಿ ೬. ತಡಕಲ್ ೭. ತೀರ್ಥ

ಇ. ಚಿತ್ತಾಪುರ ತಾಲ್ಲೂಕು

೧. ಬಂಕೂಭರ ೨. ಬಳ್ಳೊಡ್ಡಿ ೩. ಭಾಗೋಡಿ
೪. ಚಿತ್ತಾಪೂರ ೫. ದಂಡೋತಿ ೬. ದಿಗ್ಗಾಂವ್
೭. ಇಂಗಳಗಿ ೮. ಗಂಡಗುರ್ತಿ ೯. ಜೆ.ಜೆ. ತಾಂಡ
೧೦. ಹಲಕಟ್ಟೆ ೧೧. ಕಾಳಗಿ ೧೨. ಕೊಲ್ಲೂರ
೧೩. ಕೊಡದೂರ ೧೪. ಮಲಕೂಡ ೧೫. ಮಾಲಗತ್ತಿ
೧೬. ಮಲಘಾಣಾ ೧೭. ಸನ್ನತ್ತಿ ೧೮. ಸಾಲಹಳ್ಳಿ
೧೯. ಶಾಹಾಬಾದ ೨೦. ತರ್ಕಸ್‌ಪೇಟೆ ೨೧. ಟೆಂಗಳಿ
೨೨. ವಾಡಿ ೨೩. ಯರಗಲ್

ಈ. ಚಿಂಚೋಳಿ ತಾಲ್ಲೂಕು

೧. ಬೂರಗಪಲ್ಲಿ ೨. ಬೆನಕನಹಳ್ಳಿ ೩. ಬೈರಂಪಳ್ಳಿ
೪. ಚಂದ್ರಂಪಳ್ಳಿ ೫. ಚಿಂಚೋಳಿ ೬. ಚಿಕ್ಕಲಿಂಗದಳ್ಳಿ
೭. ಕರ್ಚಖೇಡ ೮. ಕಿಷ್ಟಾಪುರ ೯. ಕುಂಚಾವರಂ
೧೦. ಜಿಲ್‌ವರ ಸೇ ೧೧. ಕಲ್ಲೂರ ೧೨. ಕೆರೋಳಿ
೧೩. ಕೋಡ್ಲಿಕ್ರಾಸ್ ೧೪. ಕೊಡಂಪಳ್ಳಿ ೧೫. ಕೊಳ್ಳುರು
೧೬. ಹಾಲಕೂಡ ೧೭. ಹೂವಿನಬಾವಿ ೧೮. ಜಟ್ಟೂರ
೧೯. ಮೀರಿಯಾಣ ೨೦. ನಾವದಗಿ ೨೧. ನಿಡಗುಂದಾ
೨೨. ಪೊತೇಪುರ ೨೩. ರುಸ್ತುಂಪುರ ೨೪. ಸಿರೋಳಿ
೨೫. ಸೋಮಲಿಂಗದಳ್ಳಿ ೨೬. ಶ್ಯಾದಿಪೂರ

ಉ. ಗುಲ್ಬರ್ಗಾ ತಾಲ್ಲೂಕು

೧. ಗುಲ್ಬರ್ಗಾ ನಗರ ೨. ಕಪನೂರ ೩. ಖಣದಾಳ

೪. ಹಾಗರಗುಂಡಿಗಿ		೫. ಹೊನ್ನಕಿರಣಗಿ		೬. ಔರಾದ್ (ಬಿ)

೭. ಮರತಾಬಾದ್

ಊ. ಜೇವರ್ಗಿ ತಾಲ್ಲೂಕು

೧. ಆಂದೋಲಾ		೨. ಬಿರಾಳ (ಬಿ)		೩. ಇಜೇರಿ

೪. ಗಾಂವ್ಹಾರ		೫. ಜೇವರ್ಗಿ		೬. ನರಬೋಳಿ

ಎ. ಶಹಾಪುರ ತಾಲ್ಲೂಕು

೧. ಶಿರವಾಳ		೨. ಶಹಾಪುರ

ಏ. ಸೇಡಂ ತಾಲ್ಲೂಕು

೧. ಸೇಡಂ		೨. ಭೂತಪೂರ		೩. ಚಿಟ್ಟಗಂಪಳ್ಳಿ

೪. ಹನಮನಹಳ್ಳಿ		೫. ಹಂದರಕಿ		೬. ಉಡಾ (ಬಿ)

೭. ಹೇಡ್ಗಿ		೮. ಕಲಕಂಬಾ		೯. ಕುಕ್ಕುಂದಾ

೧೦. ಕೊತ್ತಾಪಲ್ಲಿ		೧೧. ಕೋಡ್ಲಾ		೧೨. ಮಳಖೇಡ

೧೩. ಮೀನಹಾಬಾಳ		೧೪. ಮೂಗನೂರ		೧೫. ಮುಧೋಳ ೧೬. ರಂಜೋಳ

ಐ. ಯಾದಗಿರಿ ತಾಲ್ಲೂಕು

೧. ಮೈಲಾಪುರ		೨. ಯಾದಗಿರಿ

ಒ. ಸುರಪುರ ತಾಲ್ಲೂಕಿನಲ್ಲಿ ಪ್ರಸ್ತುತ ಸಂದರ್ಭದಲ್ಲಿ ಘಿಸಾಡಿ ಸಮುದಾಯದ ಕುಟುಂಬಗಳು ನೆಲೆಸಿರುವುದಿಲ್ಲ.

೫. ಪ್ರಸಾರ ಮತ್ತು ಜನಸಂಖ್ಯೆ

ಗುಲ್ಬರ್ಗಾ ಜಿಲ್ಲೆಯ ತಾಲ್ಲೂಕು ಕೇಂದ್ರಗಳು ಮತ್ತು ಗ್ರಾಮೀಣ ಪರಿಸರಗಳಲ್ಲಿ ನೆಲೆಸಿರುವ ಒಟ್ಟಾರೆ ಘಿಸಾಡಿ ಕುಟುಂಬಗಳು ೩೩೫ ಇದ್ದು, ಚಿತ್ತಾಪುರ ತಾಲ್ಲೂಕಿನ ಪರಿಸರದಲ್ಲಿ ಒಟ್ಟು ೯೧ ಕುಟುಂಬಗಳ ಗರಿಷ್ಠ ಸಂಖ್ಯೆಯ ನೆಲೆಗಳಿವೆ. ಆದರೆ ಯಾದಗಿರಿ ತಾಲ್ಲೂಕಿನಲ್ಲಿ ಅತಿ ಕನಿಷ್ಠ ಪ್ರಮಾಣದಲ್ಲಿ ೧೫ ಕುಟುಂಬಗಳಿದ್ದು, ಸುರುಪೂರ ತಾಲ್ಲೂಕಿನ ಪರಿಸರದಲ್ಲಿ ಯಾವುದೇ ಕುಟುಂಬಗಳು ನೆಲೆಸಿರುವುದಿಲ್ಲ. ದ್ವಿತೀಯ ಸ್ಥಾನದಲ್ಲಿ ಗುಲ್ಬರ್ಗಾ ತಾಲೂಕು ಇದೆ. ಇಲ್ಲಿ ೬೦ ಕುಟುಂಬಗಳು ನೆಲೆಸಿವೆ. ತೃತೀಯ ಸ್ಥಾನದಲ್ಲಿ ಚಿಂಚೋಳಿ ತಾಲ್ಲೂಕಿನ ಪರಿಸರ ಒಳಗೊಂಡಿದ್ದು ಒಟ್ಟು ೪೮ ಕುಟುಂಬಗಳಿವೆ. ಈ ಚಿಂಚೋಳಿ ತಾಲ್ಲೂಕಿನ ಪರಿಸರದ ಘಟ್ಟ ಪ್ರದೇಶಗಳಲ್ಲಿ ಘಿಸಾಡಿ ಕುಟುಂಬಗಳು ನೆಲೆಸಿವೆ. ಇನ್ನು ನಾಲ್ಕನೆಯ ಸ್ಥಾನದಲ್ಲಿ ಸೇಡಂ ತಾಲ್ಲೂಕು ಇದ್ದು ಇಲ್ಲಿ ೩೭ ಕುಟುಂಬಗಳು ನೆಲೆಸಿವೆ. ಐದನೆಯದಾಗಿ ೨೮ ಕುಟುಂಬಗಳು ಅಫಜಲ್‌ಪುರ ತಾಲ್ಲೂಕು

ಪ್ರದೇಶದಲ್ಲಿ ನೆಲೆಸಿವೆ. ಆರನೆಯದಾಗಿ ಜೇವರ್ಗಿ ತಾಲ್ಲೂಕು ಪ್ರದೇಶವಿದ್ದು ಇಲ್ಲಿ ೨೧ ಕುಟುಂಬಗಳು, ಏಳನೆಯ ಸ್ಥಾನದಲ್ಲಿ ಶಹಾಪುರ ತಾಲ್ಲೂಕಿನ ಕೇಂದ್ರ ಪ್ರದೇಶದಲ್ಲಿ ಒಟ್ಟು ೧೯ ಕುಟುಂಬಗಳು ನೆಲೆಸಿವೆ. ಆಳಂದ ತಾಲ್ಲೂಕಿನಲ್ಲಿ ಒಟ್ಟು ೧೬ ಕುಟುಂಬಗಳಿದ್ದು ಎಂಟನೆ ಸ್ಥಾನದಲ್ಲಿದೆ. ಇವುಗಳನ್ನು ಕ್ಷೇತ್ರಕಾರ್ಯದ ಸಮೀಕ್ಷೆಯ ಅಂಕಿ-ಅಂಶಗಳ ಪ್ರಕಾರ ಪಡೆದುಕೊಂಡಿದೆ.

ಕೋಷ್ಟಕ ೧. ಗುಲ್ಬರ್ಗಾ ಜಿಲ್ಲೆಯ ಘಿಸಾಡಿ ಸಮುದಾಯದ
ತಾಲ್ಲೂಕುವಾರು ಲಿಂಗವಾರು ಜನಸಂಖ್ಯೆ

ಸಂಖ್ಯೆ	ತಾಲೂಕುಗಳು	ಕುಟುಂಬ	ಗಂಡು	ಹೆಣ್ಣು	ಒಟ್ಟು
೧	ಅಫಜಲ್‌ಪುರ	೨೮	೭೧	೫೯	೧೩೦
೨	ಆಳಂದ	೧೬	೩೬	೪೨	೭೮
೩	ಚಿತ್ತಾಪುರ	೯೧	೨೩೨	೨೨೧	೪೫೩
೪	ಚಿಂಚೋಳಿ	೪೮	೧೨೦	೧೨೦	೨೪೦
೫	ಗುಲ್ಬರ್ಗಾ	೬೦	೧೪೯	೧೪೧	೨೯೦
೬	ಜೇವರ್ಗಿ	೨೧	೫೧	೬೨	೧೧೩
೭	ಶಹಾಪುರ	೧೯	೪೩	೫೨	೯೫
೮	ಸೇಡಂ	೩೭	೮೭	೮೮	೧೭೫
೯	ಯಾದಗಿರಿ	೧೫	೩೨	೨೮	೬೦
	ಒಟ್ಟು	೩೩೫	೮೨೧	೮೧೩	೧೬೩೪

ಮೇಲ್ಕಾಣಿಸಿದ ಕೋಷ್ಟಕದಲ್ಲಿ ಗುಲ್ಬರ್ಗಾ ಜಿಲ್ಲೆಯ ತಾಲ್ಲೂಕುವಾರು ಲಿಂಗವಾರು ಜನಸಂಖ್ಯೆಯನ್ನು ಗಮನಿಸಿದಾಗ ಚಿತ್ತಾಪುರ ತಾಲ್ಲೂಕು ಪ್ರದೇಶದ ವ್ಯಾಪ್ತಿಯು ಗುಲ್ಬರ್ಗಾ ಜಿಲ್ಲೆಯಲ್ಲಿ ಹೆಚ್ಚಿನ ವ್ಯಾಪ್ತಿ ವಿಶಾಲತೆ ಹೊಂದಿದ ತಾಲ್ಲೂಕು ಪ್ರದೇಶವಾಗಿದ್ದು ಇಲ್ಲಿಯ ಪರಿಸರದಲ್ಲಿ ಘಿಸಾಡಿ ಜನಸಾಂದ್ರತೆಯು ಪ್ರಥಮ ಸ್ಥಾನದಲ್ಲಿರುವುದು ಅಧ್ಯಯನದ ಅಂಕಿ-ಅಂಶಗಳಿಂದ ತಿಳಿದುಬರುತ್ತದೆ. ದ್ವಿತೀಯ ಸ್ಥಾನವಾಗಿ ಗುಲ್ಬರ್ಗಾ ತಾಲೂಕು ಹಾಗೂ ತೃತೀಯ ಸ್ಥಾನದಲ್ಲಿ ಚಿಂಚೋಳಿ ತಾಲ್ಲೂಕು, ನಾಲ್ಕನೆಯ ಸ್ಥಾನವಾಗಿ ಸೇಡಂ, ಅಫಜಲ್‌ಪುರ ಮತ್ತು ಜೇವರ್ಗಿ, ಜೇವರ್ಗಿಯಲ್ಲಿ ಪುರುಷರಿಗಿಂತ ಸ್ತ್ರೀಯರ ಸಂಖ್ಯೆ ಮೆಲುಗೈ ಸಾಧಿಸಿರುವುದು ಕಾಣಸಿಗುತ್ತದೆ. ಇನ್ನುಳಿದಂತೆ ಕನಿಷ್ಟ ಜನಸಂಖ್ಯೆಯನ್ನು ಹೊಂದಿರುವುದು ಶಹಾಪುರ, ಆಳಂದ, ಯಾದಗಿರಿಯಲ್ಲಿ ಸಮೀಕ್ಷೆಯ ಅಂಕಿ-ಅಂಶಗಳಿಂದ ತಿಳಿದು ಬರುತ್ತದೆ. ಕೊನೆಯದಾಗಿ ಸುರಪುರ ತಾಲ್ಲೂಕಿನಲ್ಲಿ ಯಾರೂ ನೆಲೆಸಿಲ್ಲದಿರುವುದು ಕ್ಷೇತ್ರಕಾರ್ಯದ ಸಮೀಕ್ಷೆಯ ಪಟ್ಟಿಯಲ್ಲಿ ಇಲ್ಲದಿರುವುದಾಗಿ ಕಾಣಸಿಗುತ್ತದೆ. ಒಟ್ಟಾರೆ ಇಡೀ ಗುಲ್ಬರ್ಗಾ ಜಿಲ್ಲೆಯ ಗ್ರಾಮೀಣ ಮತ್ತು ನಗರ ಪ್ರದೇಶಗಳನ್ನೊಳಗೊಂಡಂತೆ ಒಟ್ಟು ೧೬೩೪ ಘಿಸಾಡಿ ಜನರು ವಾಸಿಸುವರಾಗಿದ್ದು ಇವರಲ್ಲಿ ಪುರುಷರು ೮೨೧ ಮತ್ತು ೮೧೩ ಸ್ತ್ರೀಯರು ನೆಲೆಸಿರುವುದು ಸಮೀಕ್ಷೆಯ ಮೂಲಕ ಕಲೆ ಹಾಕಲಾಗಿದೆ.

ಆಧಾರಗಳು

೧. ಕುಲಕರ್ಣಿ ಕೃ.ಪಾ., ಮರಾಠಿ ಉತ್ಪತ್ತಿ ಕೋಶ, ಆವೃತ್ತಿ ೩, ಸುಬೇದಾ ಸರಸ್ವತಿ ಪ್ರಕಾಶನ, ೧೯೯೩

೨. ಮಹಾದೇವಶಾಸ್ತ್ರಿ ಜೋಶಿ (ಲೇ)., ಭಾರತೀಯ ಸಂಸ್ಕೃತಿ ಕೋಶ, Vol-3, ೧೯೮೮,

೩. ಯಶವಂಶ್ ರಾಮ್ ಕೃಷ್ಣದಾತೆ, ಚಿತ್ತಾಮಣಿ ಗಣೇಶ ಕರ್ವೆ., (ಸಂ) ಮಹಾರಾಷ್ಟ್ರ ಶಬ್ದ ಕೋಶ ಗ-ರ ವಿಭಾಗ-೩, ಆವೃತ್ತಿ-೯, ವರದಾ ಪ್ರಕಾಶನ, ಪುಣೆ, ೧೯೮೮

೪. ಯಶವಂಶ್ ರಾಮ್ ಕೃಷ್ಣದಾತೆ, ಚಿತ್ತಾಮಣಿ ಗಣೇಶ ಕರ್ವೆ., (ಸಂ) ಮಹಾರಾಷ್ಟ್ರ ವ್ಯಾಖ್ಯಾ ಸಂಪ್ರದಾಯ ಕೋಶ, ಆವೃತ್ತಿ-೯, ವರದಾ ಪ್ರಕಾಶನ, ಪುಣೆ, ೧೯೮೮

೫. ವೆಂಕಟರಂಗೋಕಟ್ಟಿ (ಅನು) ಗ್ಯಾಝುಟೀಯರ್, ಮುಂಬಯಿ ಇಲಾಖೆಗೆ ಸೇರಿದ ಕರ್ನಾಟಕ ಭಾಗದ್ದು, ಪ್ರಕಾಶನ ಏಶಿಯನ್ ಎಜುಕೇಶನಲ್ ಸರ್ವೀಸಸ್, ಹೊಸದೆಹಲಿ, ೧೯೮೪

6. Enthoven R.E., ***"The Tribes and Castes of Bombay"***, Vol-II, Asian Educational Services, New Delhi, 1990

7. Grierson G.A., "Linguistic Survey of India" Vol-IX, Part-II, 1968

8. Misra P.K., "The Nomaidc Gadulia Lohar of Eastern" Published Anthropological Survey of India, 1977

9. Sharma P.K., Rajasthan Ke Gadoliye Lohar in the Journal of Social Research Vol-1, Jaipur, 1958

10. Sherring M.A., "Hindu Tribes and Castes", Cosmo publications, New Delhi, 1974

11. Singh K.S., ***Indias Communities*** A-G, Vol-IV, Oxford University press Delhi, 1998

12. Syed Siraj-Ul-Hassan., "The Castes and Tribes of H.E.H the Nizam's Dominions", Asian Educational services, New Delhi, 1989

ಅಧ್ಯಾಯ - ೪

ಸಾಮಾಜಿಕ ಹಾಗೂ ಆರ್ಥಿಕ ಜೀವನ

೧. ಕುಟುಂಬ ರಚನೆ

೨. ಬಳಿಗಳು

೩. ಆಹಾರ ಪದ್ಧತಿ

೪. ಉಡುಗೆ-ತೊಡುಗೆ

೫. ವೈದ್ಯ ಪದ್ಧತಿ

೬. ವಸತಿ ವ್ಯವಸ್ಥೆ

ಬಿ. ಕುಲ (ಜಾತಿ) - ಪಂಚಾಯ್ತಿ

೭. ಕುಲ - ಪಂಚಾಯ್ತಿ ರಚನೆ

೮. ಮುಖ್ಯಸ್ಥಾನ ಕಾರ್ಯಗಳು

೯. ಅಪರಾಧ ವಿಧಾನಗಳು ಮತ್ತು ನ್ಯಾಯ ನಿರ್ಣಯಗಳು

೧೦. ಕುಲ ಬಹಿಷ್ಕಾರ ಸಂದರ್ಭಗಳು

೧೧. ಕುಲ ಶುದ್ಧೀಕರಣ

ಕ. ಆರ್ಥಿಕ ಜೀವನ

೧೨. ಬೇಟೆ

೧೩. ಪಶುಪಾಲನೆ

೧೪. ಕೃಷಿ

೧೫. ಸಂಪ್ರದಾಯಿಕ ವೃತ್ತಿ.

೧೬. ವೃತ್ತಿ ಸಂಬಂಧಿ ಸಲಕರಣೆಗಳ ಮಾಹಿತಿ

೧೭. ಅವಲಂಬಿತ ವೃತ್ತಿಗಳು

ಸಾಮಾಜಿಕ ಹಾಗೂ ಆರ್ಥಿಕ ಜೀವನ

ಮಾನವ ಸಮಾಜ ಜೀವಿ, ಅವನು ಸಮಾಜವಿಲ್ಲದೆ ಒಂಟಿಯಾಗಿ ಜೀವಿಸಲು ಇಚ್ಛಿಸುವುದಿಲ್ಲ. ಒಂದು ವೇಳೆ ಸಮಾಜದ ಸಂಪರ್ಕರಹಿತವಾದ ಜೀವನ ಮಾಡುವ ಸ್ಥಿತಿ ಬಂದರೆ, ಅವನು ನೀರಿನಲ್ಲಿ ವಾಸಿಸುವ ಜಲಚರ ಪ್ರಾಣಿಗಳನ್ನು ಹೊರತೆಗೆದಾಗ ಅವುಗಳಿಗೆ ಆಗುವ ತೊಂದರೆಗಳಿಗಿಂತ ಹೆಚ್ಚಿನ ತೊಂದರೆಯನ್ನು ಅನುಭವಿಸುತ್ತಾನೆ. ಆದ್ದರಿಂದ ಮಾನವರು ಯಾವಾಗಲು ಸಾಮುದಾಯಿಕವಾಗಿ ಅಥವಾ ಸಾಂಘಿಕವಾಗಿ ಸಮಾಜದಲ್ಲಿ ಜೀವಿಸುತ್ತಾರೆ. ಪ್ರತಿಯೊಬ್ಬ ಮಾನವನು ತನ್ನ ಅಪಾರವಾದ ಬೇಡಿಕೆಗಳನ್ನು ಸಮಾಜದ ಚೌಕಟ್ಟಿನಲ್ಲಿಯೇ ಪೂರೈಸಿಕೊಳ್ಳಲು ಸಾಧ್ಯವಾಗುತ್ತದೆ. ಮಾನವನಿಗೆ ಆಲೋಚನೆ ಮಾಡುವ ಶಕ್ತಿಯಿದೆ. ತಿಳಿದುಕೊಳ್ಳುವ ಮತ್ತು ತಿಳುವಳಿಕೆ ಹೇಳುವ ಶಕ್ತಿಯಿದೆ. ಮಾತನಾಡುವ ಮತ್ತು ಭಾವನೆಗಳನ್ನು ವ್ಯಕ್ತಪಡಿಸುವ ಶಕ್ತಿಯಿದೆ. ಅಲ್ಲದೆ ಅನೇಕ ಸಂದರ್ಭಗಳಲ್ಲಿ ಸಂತೋಷಪಡುವ ಮತ್ತು ದುಃಖಪಡುವ ಶಕ್ತಿಗಳನ್ನು ರೂಢಿಸಿಕೊಂಡಿದ್ದಾನೆ. ಇಂತಹ ಆಲೋಚನಾಶಕ್ತಿ ಪ್ರಾಣಿಗಳಿಗಿಂತ ಮಾನವನಲ್ಲಿ ಹೆಚ್ಚಾಗಿರುವುದರಿಂದ ಮಾನವನು ಸಮಾಜದಲ್ಲಿ ಶ್ರೇಷ್ಠ ಜೀವಿ ಎನಿಸಿಕೊಳ್ಳಲು ಸಾಧ್ಯವಾಗಿದೆ. ಸಮಾಜ ಪದದ ಉಗಮವನ್ನು ಚಿಂತಕರು ಹೀಗೆ ವ್ಯಾಖ್ಯಾನಿಸಿದ್ದಾರೆ.

"'ಸಮಾಜ' ಎಂಬ ಪದವು ಸೊಸೈಟಿ (Society) ಎಂಬ ಇಂಗ್ಲಿಷ್ ಪದದ ಅನುವಾದವಾಗಿದೆ. 'ಸೊಸೈಟಿ' ಎಂಬ ಪದವು 'ಸೋಷಿಯಸ್'(Socious) ಎಂಬ ಲ್ಯಾಟಿನ್ ಭಾಷೆಯ ಪದದಿಂದ ಆವಿರ್ಭವಿಸಿದೆ. 'ಸೋಶಿಯಸ್' ಎಂದರೆ ಒಡನಾಡಿತನ (Companionship) ಅಥವಾ ಗೆಳೆತನ (Friendship). ಒಡನಾಡಿಗಳಿಂದ ಕೂಡಿರುವುದೇ ಸಮಾಜ" (ಮನೋಹರ ಕುಮಾರ ಸಿ.ಬಿ: ೨೦೦೪:೩೫೧).

'ವ್ಯಕ್ತಿ' ಮತ್ತು 'ಸಮಾಜ'ಗಳ ನಡುವಿನ ಒಡನಾಟದ ಬದುಕು ಸಮಾಜದಲ್ಲಿ ಬಹಳ ಮುಖ್ಯ ಪಾತ್ರವನ್ನು ವಹಿಸುತ್ತದೆ. ಈ ಸಾಮಾಜಿಕ ವ್ಯವಸ್ಥೆಯು ವ್ಯಕ್ತಿ ವ್ಯಕ್ತಿಗಳ ನಡುವೆ ಸಾಮಾಜಿಕ ಕ್ರಿಯೆ ಅಂತರ್‌ಕ್ರಿಯೆಗಳ ಕ್ರಮಗಳಿಂದ ಸಮಾಜವು ರಚನೆಯಾಗಿರುತ್ತದೆ. ಹೀಗಾಗಿ ಮಾನವನು ತನ್ನದೇ ಆದಂತಹ ಸಾಮುದಾಯಿಕ ಭಾವನೆಗಳಿಗೆ ಸ್ಪಂದಿಸುವ ಜನಸಮೂಹಗಳ ಚೌಕಟ್ಟಿನಲ್ಲಿ

ಸುಖ ಸಂತೋಷದಿಂದ ಜೀವನ ಮಾಡಲು 'ಸಾಮಾಜಿಕ' ವ್ಯವಸ್ಥೆಯನ್ನು ರಚನೆ ಮಾಡಿಕೊಂಡಿದ್ದಾನೆ. ಅಂತೆಯೇ ಸಾಮಾಜಿಕ ರಚನೆ ಮತ್ತು ಅಂತರ್‌ಕ್ರಿಯೆಗಳನ್ನು ಕುರಿತು ಪ್ರಖ್ಯಾತ ಸಮಾಜಶಾಸ್ತ್ರ ವಿದ್ವಾಂಸರಾದ ಗಿಡ್ಡಿಂಗ್ಸ್ ಅವರು "ಜೊತೆಗೂಡಿ ಇರಬಹುದಾದ ವ್ಯಕ್ತಿಗಳನ್ನು ಒಟ್ಟುಗೂಡಿಸಿ ಆದ ಒಂದು ಒಕ್ಕೂಟ, ಸಂಘಟನೆ ಹಾಗೂ ಔಪಚಾರಿಕ ಭಾಂದವ್ಯಗಳ ಒಟ್ಟು ಮೊತ್ತವೇ ಸಮಾಜವಾಗಿದೆ" ಎಂದಿದ್ದಾರೆ. ಅಲ್ಲದೆ ಜಾನ್. ಎಫ್. ಕ್ರೋಬರ್‌ರವರು "ಇತರ ಮಾನವ ಘಟಕಗಳಿಂದ ಹೆಚ್ಚು ಕಡಿಮೆ ಬಿನ್ನವೆಂದು ಪರಿಗಣಿಸಬಹುದಾದ ಸಂಘಟಿತರಾಗುವಷ್ಟು ದೀರ್ಘ ಅವಧಿ ಜೊತೆಗೂಡಿ ವಾಸಿಸಿರುವ ಜನ ಸಮೂಹವನ್ನು ಸಮಾಜ ಎನ್ನುತ್ತೇವೆ" (ಪ್ರೊ. ರಾಮಚಂದ್ರ ಜೋಷಿ:೨೦೦೪:೩೮) ಎಂದಿದ್ದಾರೆ. ಈ ವಿದ್ವಾಂಸರ ಅಭಿಪ್ರಾಯವು ಸಾಮಾಜಿಕ ರಚನೆ, ಸ್ವರೂಪ, ಸಾಮಾಜಿಕ ಅಂತರ್‌ಕ್ರಿಯೆಗಳ ಬಗ್ಗೆ ಸಾಕಷ್ಟು ಮಾಹಿತಿ ನೀಡುತ್ತವೆ. ಸಮಾಜವು ವಿಶ್ವವ್ಯಾಪಿಯಾದದ್ದು, ಅದಕ್ಕೆ ನಿಖರವಾದ ಮೇರೆಗಳಿಲ್ಲ ಎಲ್ಲಿ ಜೀವವಿದೆಯೋ, ಎಲ್ಲಿ ಪರಸ್ಪರ ತಿಳುವಳಿಕೆಯಿದೆಯೋ ಅಲ್ಲಿ ಸಮಾಜವಿರುತ್ತದೆ. ಜಡ ವಸ್ತುಗಳಿಗೆ ಮಾತ್ರ ಸಮಾಜವಿರುವುದಿಲ್ಲ. ಸಾಮಾಜಿಕ ವ್ಯವಸ್ಥೆಯಲ್ಲಿ ಜಡವಸ್ತುಗಳ ಉಪಯೋಗಗಳನ್ನು ಮಾತ್ರ ಬಳಸಿಕೊಳ್ಳಲಾಗುತ್ತದೆ.

ಹೀಗಾಗಿ ಮಾನವನು ಸಮಾಜದ ಹೊರಗೆ ಜೀವಿಸಲು ಸಾಧ್ಯವಿಲ್ಲ. ಅವನು ಸಮಾಜದ ಹೊರಗೆ ಇರಬೇಕಾದರೆ ಅವನು ದೇವನಾಗಿರಬೇಕು. ಇಲ್ಲವೇ ದೆವ್ವವಾಗಿರಬೇಕು. ಹುಟ್ಟಿದ ಮಗುವಿನ ಮಾನಸಿಕ ಮತ್ತು ದೈಹಿಕ ಬೆಳವಣಿಗೆಗಳು ಸಮಾಜದಲ್ಲಿಯೇ ಆಗುತ್ತದೆ. ಅದರ ನಡೆ-ನುಡಿ, ಆಚಾರ-ವಿಚಾರಗಳು, ಸುಸಂಸ್ಕೃತ ಜೀವನ, ಸಾಮಾಜೀಕರಣ ಸಮಾಜದಲ್ಲಿಯೇ ಸಾಧ್ಯವಾಗುತ್ತದೆ. ಮಗುವು ಮಾನವ ಸಮಾಜದಲ್ಲಿ ಬೆಳೆದಾಗ ಮಾನವೀಯ ಗುಣಗಳನ್ನು ಹೊಂದಿ ನಿಜಮಾನವನಾಗಿ ಬೆಳೆಯಲು ಸಾಧ್ಯವಾಗುತ್ತದೆ.

ಘಿಸಾಡಿ ಜನ ಸಮುದಾಯವು ಕೂಡಾ ತಮ್ಮದೆಯಾದಂತಹ ಸಾಮುದಾಯಿಕ, ಸಾಮಾಜಿಕ ಜೀವನ ಸಾಗಿಸುತ್ತಿದ್ದಾರೆ. ಇವರು ಅಲೆಮಾರಿ ಜೀವನ ನಡೆಸುವುದರೊಂದಿಗೆ ತಮ್ಮ ಸಂಸ್ಕೃತಿ, ಆಚಾರ-ವಿಚಾರಗಳು, ನಡೆ-ನುಡಿಗಳು, ನೈತಿಕ-ನಿಯಮಗಳು, ಸಂಪ್ರದಾಯಗಳು ಯಾವಾಗಲು ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ಅಲೆದಾಡುತ್ತಿರುತ್ತವೆ. ಅಂದರೆ, ಅಲೆಮಾರಿಗಳ ಸಂಸ್ಕೃತಿ ಅಲೆದಾಡುತ್ತಿರುತ್ತದೆ. ಅವರು ಮಾಡುವ ಸಂಪ್ರದಾಯ ರೀತಿ-ನೀತಿಗಳಲ್ಲಿ ಹೆಚ್ಚಿನ ಪ್ರಮಾಣದ ಏಕತೆ ಮತ್ತು ಆಯಾ ಪರಿಸರದ ಪ್ರಭಾವದಿಂದ ಕಡಿಮೆ ಪ್ರಮಾಣದ ಭಿನ್ನತೆಗಳು ಕಂಡುಬರುತ್ತವೆ. ಘಿಸಾಡಿ ಸಮುದಾಯವು ಆರ್ಥಿಕವಾಗಿ ತೀರಾ ಹಿಂದುಳಿದಿರುವುದರಿಂದ ಅನೇಕ ಜನರು ಗುಡಾರ ನಿವಾಸಿಗಳಾಗಿದ್ದಾರೆ. ಇವರು ಸಮಾಜದ ಇನ್ನಿತರ (ಉಳ್ಳವರ) ಜನರ ಕಣ್ಣಿನಲ್ಲಿ ಬಹಳ ಕೀಳು ಎನಿಸಿಕೊಂಡಿದ್ದಾರೆ. ಅಲ್ಲದೆ ಸಾಮಾಜಿಕ ಸ್ಥಾನಮಾನಗಳ ಕೊರತೆಗಳು ಕೂಡಾ ಕಂಡುಬರುತ್ತವೆ. ಇವರು ತಾವು ವಾಸಿಸುವ ಪರಿಸರ, ಕುಟುಂಬ, ಸಮುದಾಯ, ಸಮಾಜಗಳೊಂದಿಗೆ ಬಹಳ ಪ್ರೀತಿ ವಿಶ್ವಾಸದಿಂದ ನಡೆದುಕೊಳ್ಳುತ್ತಾರೆ. ಕಳ್ಳತನ, ಸುಳ್ಳುತನ, ಬಡಿವಾರಿಕೆ, ಪುಂಡಗಾರಿಕೆಗಳಿಂದ

ಯಾವಾಗಲು ಬಹಳ ದೂರವಿರುತ್ತಾರೆ. ವ್ಯಭಿಚಾರಕ್ಕೆ ಇವರಲ್ಲಿ ಎಳ್ಳಷ್ಟು ಅವಕಾಶವಿರುವುದಿಲ್ಲ. ಒಂದು ವೇಳೆ ಸ್ತ್ರೀಯಾಗಲಿ ಅಥವಾ ಪುರುಷನಾಗಲಿ ತಪ್ಪು ಮಾಡಿದಾಗ ತಮ್ಮ ಸಮುದಾಯದ ನಾಯಕನು ಕೊಡುವ ತೀರ್ಪಿಗೆ ತಲೆಬಾಗಲೇಬೇಕು. ಇಲ್ಲದಿದ್ದರೆ ಸಮಾಜದಿಂದ ಬಹಿಷ್ಕರಿಸಲಾಗುತ್ತದೆ. ಇವರಲ್ಲಿ ಕುಡಿದ ಅಮಲಿನಲ್ಲಿ ತಮ್ಮ ತಮ್ಮಲ್ಲಿಯೇ ಜಗಳವಾಡುವುದು ಸಾಮಾನ್ಯ. ಇಂತಹ ಸಾಮಾನ್ಯ ಜಗಳಗಳಿಗೆ ಸಮುದಾಯದ 'ಹಿರಿಯರಿಗೆ' ದಂಡ ಕಟ್ಟುತ್ತಲೇ ಇರುತ್ತಾರೆ. ಇವರ ದೈನಂದಿನ ಆದಾಯದ ಹೆಚ್ಚಿನ ಭಾಗ ಕುಡಿಯುವುದಕ್ಕೆ ವೆಚ್ಚ ಮಾಡುತ್ತಿರುವುದರಿಂದ ಇವರಿಗೆ ತಿಳುವಳಿಕೆ ಹೇಳಬೇಕಾಗಿದ್ದು ತುಂಬಾ ಅಗತ್ಯವಾಗಿದೆ. ಆದರೂ ಇತ್ತೀಚಿನ ದಿನಗಳಲ್ಲಿ ಇದನ್ನು ತಡೆಗಟ್ಟುವಲ್ಲಿ ಫಿಸಾಡಿ ಯುವಕರು ಪ್ರಯತ್ನ ಪಡುತ್ತಿರುವುದು ಕಂಡುಬರುತ್ತದೆ. 'ದಿನನಿತ್ಯ ಆಹಾರದ ಭಾಗವಾಗಿ ಕುಡಿಯುವುದು ಬೇಡ, ಆದರೆ ವಿಶೇಷ ಸಂದರ್ಭ, ಸಮಯಗಳಲ್ಲಿ ಮಾತ್ರ ಕುಡಿಯುವ ಅಭ್ಯಾಸವನ್ನು ಇಟ್ಟುಕೊಳ್ಳಿ' ಎಂಬ ಅಭಿಪ್ರಾಯ ಈ ಸಮುದಾಯದ ಯುವಜನಾಂಗದ ನಿಲುವಾಗಿದೆ.

೧. ಕುಟುಂಬ ರಚನೆ

ಸ್ತ್ರೀ-ಪುರುಷರ ಲೈಂಗಿಕ ಬಯಕೆಯನ್ನು ನಿಯಂತ್ರಿಸಲು ಮತ್ತು ಸಮಾಜದ ಚೌಕಟ್ಟಿನಲ್ಲಿ ಅದನ್ನು ಈಡೇರಿಸಿಕೊಳ್ಳಲು ಅನುಮತಿ ಕೊಡುವ ಸಾಂಸ್ಕೃತಿಕ ಹಿನ್ನೆಲೆಗಳಿಂದ ಕೂಡಿರುವ ಒಪ್ಪಂದವೇ ವಿವಾಹ ಎಂದು ಹೇಳಬಹುದು. ವಿವಾಹದ ನಂತರ ಜನ್ಮ ತಾಳುವುದೇ ಕುಟುಂಬ. ವಿವಾಹ ವ್ಯವಸ್ಥೆ ಇಲ್ಲದಿದ್ದರೆ ಕುಟುಂಬಕ್ಕೆ ಸ್ಪಷ್ಟವಾದ ಅರ್ಥವಿರುವುದಿಲ್ಲ. ಅಲ್ಲದೆ ಕುಟುಂಬದ ಮೂಲರೂಪ ವಿವಾಹ ಎನ್ನಬಹುದು. "ವಿವಾಹ ಮತ್ತು ಕುಟುಂಬ" ರಚನೆ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ವಿವಾಹ ಮತ್ತು ಕುಟುಂಬ ಒಂದಕ್ಕೊಂದು ಹೊಂದಿಕೊಂಡಿರುವುದರೊಂದಿಗೆ, ಸಮಾಜದ ನಿರಂತರ ಚಲನೆಗೆ ಕಾರಣವಾಗಿರುತ್ತವೆ. ಮಗುವಿನ ಸಮಾಜೀಕರಣ ಕಾರ್ಯದಿಂದ ಹಿಡಿದು ವ್ಯಕ್ತಿಯ ವ್ಯಕ್ತಿತ್ವ ವಿಕಾಸವಾಗುವುದು ಕುಟುಂಬದಿಂದಲೇ ಎಂಬುದು ಸರ್ವವಿದಿತವಾದದ್ದು. ಅಂತೆಯೇ ಕುಟುಂಬವು ಸರ್ವವ್ಯಾಪಿಯಾಗಿದ್ದು ಅದರ ಕಾರ್ಯವ್ಯಾಪ್ತಿ ಬಹು ವಿಶಾಲವಾಗಿದೆ. ಅದು ವ್ಯಕ್ತಿಯ ಹುಟ್ಟಿನಿಂದ ಹಿಡಿದು ಸಾಯುವವರೆಗಿನ ಸಮಗ್ರ ಜೀವನಕ್ಕೆ ಸಂಬಂಧಿಸಿದ್ದಾಗಿದೆ. ಪ್ರತಿಯೊಂದು ಕುಟುಂಬ ಮತ್ತು ಸಮುದಾಯಗಳು ತಮ್ಮದೆ ಆದಂತಹ ಸಾಮಾಜಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳನ್ನು ಹೊಂದಿದ್ದು ಅದು ಸಮಾಜದಿಂದ ಸಮಾಜಕ್ಕೆ ಭಿನ್ನವಾಗಿರುತ್ತದೆ.

ಸಮಾಜಶಾಸ್ತ್ರಜ್ಞರು ಕುಟುಂಬವನ್ನು 'ವಿಭಕ್ತ ಕುಟುಂಬ' ಮತ್ತು 'ಅವಿಭಕ್ತ ಕುಟುಂಬ' ಎಂದು ಎರಡು ಪ್ರಕಾರಗಳಾಗಿ ವಿಂಗಡಿಸಿದ್ದಾರೆ. ವಿಭಕ್ತ ಕುಟುಂಬದಲ್ಲಿ ಕೇವಲ ಗಂಡ-ಹೆಂಡತಿ, ಅವಿವಾಹಿತ ಮಕ್ಕಳು ಇದ್ದರೆ. ಅವಿಭಕ್ತ ಕುಟುಂಬದಲ್ಲಿ ವ್ಯಕ್ತಿಯ ತಂದೆ-ತಾಯಿ, ಸಹೋದರರು, ಅವರ ಪತ್ನಿಯರು, ಅವರ ಮಕ್ಕಳು, ತನ್ನ ಮಕ್ಕಳು, ಅಜ್ಜ-ಅಜ್ಜಿ ಸೇರಿದಂತೆ ಕನಿಷ್ಟ ಎರಡು

ಅಥವಾ ಮೂರು ತಲೆಮಾರಿನವರು ಒಟ್ಟಾಗಿ ವಾಸಿಸುವವರಾಗಿರುತ್ತಾರೆ. ಘಿಸಾಡಿ ಜನ ಸಮುದಾಯಗಳಲ್ಲಿ ಹೆಚ್ಚಾಗಿ ಅವಿಭಕ್ತ ಕುಟುಂಬಗಳೇ ಕಂಡುಬರುತ್ತಿದ್ದು, ಇವರು ಸಂಯುಕ್ತವಾಗಿ ಜೀವನ ಮಾಡುವುದು ಕಂಡುಬರುತ್ತದೆ. ಪಿತೃಪ್ರಧಾನ ವ್ಯವಸ್ಥೆಯನ್ನು ಹೊಂದಿರುವ ಇವರ ಕುಟುಂಬಗಳ ಜವಾಬ್ದಾರಿ ಮತ್ತು ಆಗುಹೋಗುಗಳನ್ನು ಯಜಮಾನನೇ ನೋಡಿಕೊಳ್ಳುತ್ತಾನೆ. ಕುಟುಂಬದಲ್ಲಿನ ಪ್ರತಿಯೊಬ್ಬ ಸದಸ್ಯರು ತಮ್ಮ ತಮ್ಮ ಕೆಲಸಗಳನ್ನು ಜವಾಬ್ದಾರಿಯುತವಾಗಿ ನಿರ್ವಹಿಸಿಕೊಂಡು ಹೋಗುವುದರೊಂದಿಗೆ, ಪ್ರತಿಯೊಬ್ಬ ಸದಸ್ಯನು ತಮ್ಮ ಕಮ್ಮಾರಿಕೆ ಕೆಲಸಗಳಿಂದ ಬಂದ ಹಣವನ್ನು ಮತ್ತು ಇನ್ನಿತರ ಪ್ರತಿ ದಿನದ ಗಳಿಕೆಯನ್ನು ಕುಟುಂಬದ ಹಿರಿಯನ ಕೈಗೆ ಕೊಡುತ್ತಾರೆ. ಆ ಹಿರಿಯನ ಮೂಲಕ ಕುಟುಂಬದ ಖರ್ಚು-ವೆಚ್ಚಗಳು, ಹಬ್ಬ-ಹರಿದಿನಗಳು, ಜಾತ್ರೆ, ಉತ್ಸವಗಳು, ಹೊಸ ಬಟ್ಟೆ-ಬರೆಗಳು, ಮನೆಯಲ್ಲಿನ ಧಾರ್ಮಿಕ, ಸಾಂಸ್ಕೃತಿಕ ಚಟುವಟಿಕೆಗಳು ಪೂರೈಸಲ್ಪಡುತ್ತವೆ. ತಂದೆಯ ತರುವಾಯ ಮನೆಯ ಹಿರಿಯ ಮಗನೆ ಹಿರಿತನ ಮಾಡುತ್ತಾನೆ. ಒಂದು ವೇಳೆ ತಂದೆ ತೀರಿಕೊಂಡು ಗಂಡು ಮಕ್ಕಳು ಚಿಕ್ಕವರಾಗಿದ್ದರೆ, ಇಲ್ಲವೇ ಗಂಡು ಮಕ್ಕಳು ಇರದಿದ್ದರೆ ಈ ಜವಾಬ್ದಾರಿಗಳನ್ನೆಲ್ಲಾ ಯಜಮಾನನ ಹೆಂಡತಿಯೇ ನೋಡಿಕೊಳ್ಳುವುದುಂಟು. ಆದರೆ ಘಿಸಾಡಿ ಜನ ಸಮುದಾಯಗಳಲ್ಲಿಯೂ ಇತ್ತೀಚಿನ ದಿನಗಳಲ್ಲಿ ಅನೇಕ ವಿಭಕ್ತ ಕುಟುಂಬಗಳು ರಚನೆಯಾಗಿರುವುದು ಕಂಡುಬರುತ್ತದೆ. ಏಕೆಂದರೆ ಇತ್ತೀಚಿನ ದಿನಗಳಲ್ಲಿ ವೈಜ್ಞಾನಿಕತೆ ಮತ್ತು ತಂತ್ರಜ್ಞಾನದಲ್ಲಿಯ ಅಭಿವೃದ್ಧಿಯಿಂದಾಗಿ ಕೈಗಾರಿಕಾ ಕ್ರಾಂತಿ ಮತ್ತು ನಗರೀಕರಣಗಳು ಹೆಚ್ಚಾಗುತ್ತಿರುವುದರಿಂದ ಅನೇಕ ಚಿಕ್ಕ ಗೃಹಕೈಗಾರಿಕೆಗಳು ಮೂಲೆ ಗುಂಪಾಗುತ್ತಿವೆ. ಘಿಸಾಡಿ ಸಮುದಾಯವು ಒಂದು ವೃತ್ತಿ ಸಮುದಾಯವಾಗಿರುವುದರಿಂದ ಆದಾಯದಲ್ಲಿ ವರಮಾನ ಕಡಿಮೆಯಾಗಿ ಕೌಟುಂಬಿಕ ಸಮಸ್ಯೆಗಳು ತಲೆದೋರುತ್ತಿವೆ. ಪರಸ್ಪರ ತಿಳುವಳಿಕೆಯ ಕೊರತೆ ಉದ್ಭವಿಸುತ್ತಿದ್ದು, ಮನೆಯಲ್ಲಿ ಚಿಕ್ಕಪುಟ್ಟ ಕಲಹಗಳು ಆಗುತ್ತಿರುತ್ತವೆ. ಆದ್ದರಿಂದ ಇವರು ಸಹಜವಾಗಿಯೇ ವಿಭಕ್ತ ಕುಟುಂಬದ ಕಡೆಗೆ ವಾಲುತ್ತಿರುವುದು ಕಂಡುಬರುತ್ತಿದೆ. ಅಲ್ಲದೆ ವಿವಾಹವಾಗಿ ಕುಟುಂಬ ರಚನೆಯಾದ ಕೂಡಲೇ ತಮ್ಮ ಹೆಂಡತಿ ಮಕ್ಕಳೊಂದಿಗೆ ಕೆಲಸಗಳನ್ನು ಹುಡುಕಿಕೊಂಡು ಸ್ವತಂತ್ರವಾಗಿ ಬದುಕಲು ಬಯಸುತ್ತಿದ್ದಾರೆ. ಇಂದು ತಮ್ಮ ದುಡಿಮೆಯಿಂದ ಬಂದ ಆದಾಯದಲ್ಲಿ ಜೀವನ ಮಾಡಲು ಇಚ್ಛಿಸುತ್ತಿರುವುದು ಕಂಡುಬರುತ್ತದೆ. ಘಿಸಾಡಿ ಜನಾಂಗಗಳಲ್ಲಿ ನೂರಕ್ಕೆ ಒಬ್ಬರಿಗೆ ಆಸ್ತಿ ಇರುವುದು ಕಂಡುಬರುತ್ತಿದ್ದು, ಆ ಆಸ್ತಿಯಲ್ಲಿ ಕುಟುಂಬದ ಎಲ್ಲ ಗಂಡು ಮಕ್ಕಳಿಗೆ ಸಮಪಾಲು ಹಂಚುವುದು ರೂಢಿಯಲ್ಲಿದೆ. ವೃತ್ತಿಗೆ ಸಂಬಂಧಿಸಿದ ಸಲಕರಣೆಗಳು ಗಂಡು ಮಕ್ಕಳಿಗೆ ಸೇರುತ್ತವೆ. ಹೆಣ್ಣು ಮಕ್ಕಳಿಗೆ ಮದುವೆ ಮಾಡಿ ಕಳಿಸುವ ಮತ್ತು ಸೊಸೆಯನ್ನು ಕರೆತರುವ ಪದ್ಧತಿ ಇವರಲ್ಲಿದೆ.

೨. ಬಳಿಗಳು

ಸುಸಂಸ್ಕೃತರೆನಿಸಿಕೊಂಡವರು ತಮ್ಮ ಕುಲದ ವಿವಿಧ ಬಳಿಗಳಿಗೆ ಅಥವಾ ಬೆಡಗುಗಳಿಗೆ 'ಗೋತ್ರ'ಗಳೆಂದು ಕರೆದರೆ, ಬುಡಕಟ್ಟು ಜನರ ಬಳಿ ಅಥವಾ ಬೆಡಗುಗಳೆಂದು ಕರೆಯುವುದು

ವಾಡಿಕೆಯಲ್ಲಿದೆ. ಇನ್ನೂ ಕೆಲವು ಬುಡಕಟ್ಟುಗಳು ಬಳಿಯನ್ನು 'ಬಳ್ಳಿ' ಎಂದು ಕರೆಯುವುದು ಕಂಡುಬರುತ್ತದೆ. ಸಾಮಾನ್ಯವಾಗಿ ಬುಡಕಟ್ಟು ಜನರು ಪಶು, ಪಕ್ಷಿ, ಪ್ರಾಣಿ, ಗಿಡ, ಬಳ್ಳಿ, ಸೂರ್ಯ, ಚಂದ್ರಗಳಲ್ಲದೆ ಪ್ರಕೃತಿಯಲ್ಲಿನ ವಿವಿಧ ವಸ್ತುಗಳು ಮತ್ತು ಪುರಾತನ ಕಾಲದ ರಾಜಮಹಾರಾಜರ ವಂಶ(ಸಂತತಿ)ದಿಂದ ಗುರುತಿಸಿಕೊಳ್ಳುವುದು ಕಂಡುಕೊಳ್ಳಬಹುದು. ಪ್ರಸ್ತುತ ಘಿಸಾಡಿ ಜನ ಸಮುದಾಯವು ಕೂಡಾ ತಮ್ಮ ಬೆಡಗುಗಳನ್ನು ರಾಜಸ್ಥಾನದ ಮೇವಾಡ ಪ್ರದೇಶದಲ್ಲಿ ರಾಜ್ಯಭಾರ ಮಾಡಿದ ಸಾಮಂತ ಅರಸು ಕುಲಗಳಾದ ಸಾಳುಂಕೆಯರು, ಚವ್ಹಾಣ್‌ರು, ಪವಾರರಗಳ ವಂಶದ ಸಂತತಿಯಿಂದ ಗುರುತಿಸಿಕೊಳ್ಳುತ್ತಾರೆ. ಇನ್ನೊಂದು ಸುರ್ವೇಸಿ ಅಥವಾ ಸೂರ್ಯವಂಶ ಎಂಬ ಬೆಡಗಿನವರು ಇದ್ದು. ಇವರು ಮೇವಾಡದ ಸಿಸೋದಿಯ ಸೂರ್ಯ ವಂಶದವರು ಅಥವಾ ಸುರ್ವೇಸಿಗಳು ಎಂದು ಹೇಳುತ್ತಾರೆ. 'ಪಡವಲ್‌ಕರ್' ಎಂಬ ಬೆಡಗು ತನ್ನದೆಯಾದ ಸ್ವತಂತ್ರ ಅರ್ಥ ಹೊಂದಿರುತ್ತದೆ. ಕೆಲವು ವಕ್ಕಗಳು 'ದುಬೇಜ' ಎಂಬ ಬೆಡಗು ಇದ್ದು, ಆ ಬೆಡಗಿನವರಿಗೆ ತಮ್ಮ ಕುಲದ ಪುರೋಹಿತ ಸ್ಥಾನಮಾನಗಳನ್ನು ನೀಡಲಾಗಿತ್ತು. ಆದರೆ ಆ ಬೆಡಗಿನವರು ಕಂಡುಬರುತ್ತಿಲ್ಲ ಎಂದು ಹೇಳುತ್ತಾರೆ. ಘಿಸಾಡಿಗಳು ಕಾಲ ಬದಲಾದಂತೆ 'ಬ್ರಾಹ್ಮಣರ' ಪೌರೋಹಿತ್ಯ ವನ್ನು ವಹಿಸಿಕೊಂಡಿರುವುದರಿಂದ ಈ ಬೆಡಗು ಇನ್ನುಳಿದ ಬೆಡಗಿನಲ್ಲಿ ವಿಲೀನವಾಗಿರಬಹುದು ಎಂಬುದು ಸ್ಪಷ್ಟವಾಗುತ್ತದೆ. ಇವರು ತಮ್ಮ ಬೆಡಗುಗಳನ್ನು ಕೇವಲ ಬಾಯಿಮಾತಿನಿಂದ ರಕ್ಷಿಸಿಕೊಂಡು ಬರುತ್ತಿದ್ದಾರೆಯೇ ಹೊರತು, ಅವುಗಳನ್ನು 'ಕುಲಸ್ಮೃತಿ' ಅಡಿಯಲ್ಲಿ ಬರೆದು ದಾಖಲೆಗಳಲ್ಲಿ ಇಟ್ಟಿರುವುದಿಲ್ಲ. ಇವರು ತಮ್ಮ ತಮ್ಮಲ್ಲಿಯೇ ನಮ್ಮ ಬೆಡಗು ಹೆಚ್ಚಿನದು ಎಂದು ಹೇಳಿಕೊಳ್ಳುವುದು ಕಂಡುಬರುತ್ತದೆ. ಇವರ ಒಂದೊಂದು ಬೆಡಗಿನ ಹುಟ್ಟಿಗೆ ಹಲವಾರು ಕಥೆಗಳನ್ನು ಹೇಳುತ್ತಾರೆ. ಆ ಕಥೆಗಳನ್ನು ಸಂಗ್ರಹಿಸಿ ಪ್ರಚಲಿತಕ್ಕೆ ತರುವುದಕ್ಕಿಂತ ಹಾಗೆ ಬಿಡುವುದೇ ಒಳ್ಳೆಯದು. ಕೆಲವೊಂದು ಸಲ ಈ ಕಥೆಗಳು ತಮ್ಮ ಬೆಡಗಿನ ಹಿತ ಕಾಪಾಡಿಕೊಂಡು ಮತ್ತೊಂದು ಬೆಡಗಿನ ಕೌಶ್ಯಲತೆ ಕಡಿಮೆಗೊಳಿಸುತ್ತಿರುತ್ತವೆ. ಹೀಗಾಗಿ ಅವು ಊಹೆಗಳ ಆಧಾರಿತ ಕಥೆಗಳಿಂದ ರಚನೆ ಮಾಡಿಕೊಂಡವೇ ಹೊರತು ಅವುಗಳಲ್ಲಿ ಸ್ಪಷ್ಟ ದಾಖಲೆಗಳು ಇರುವುದಿಲ್ಲ.

ಘಿಸಾಡಿ ಸಮುದಾಯದ ವಿವಿಧ ಬಳಿಗಳು ಈ ಕೆಳಗಿನಂತಿವೆ.

೧. ಸುರ್ವೇಸಿ : ತರವಾಚೆ, ಢಾಲಾಣ್ಯ (ಅಣ್ಣ-ತಮ್ಮಂದಿರು)

೨. ಸೋಳುಂಕೆ : ರಣಮತೆ, ಡೊಂಗರ್‌ತೇರ್, ಚಠ್ಯಾಣ್ಯ, ಮಕ್ಕಳೇರ್, ನಾಗಾಣ್ಯ, ತೋಲಾಣ್ಯ, ತರಗಾಣ್ಯ, ಬಿಲಾಂತ್, (ಅಣ್ಣ-ತಮ್ಮಂದಿರು)

೩. ಚವ್ಹಾಣ : ಟೋಕ್ರೆ, ಕೋಸಿ (ಅಣ್ಣ-ತಮ್ಮಂದಿರು)

೪. ಪವಾರ : ಗುಜರ್‍ಯಾ, ಉನ್ಯಾನೋರ್, ಪಾಯ್‌ನೋರ್, ಗುಮಾರೇರ್, ಲೇಮಣೆರ್, ಟೋಪಾಣ್ಯ, ಖಂಡಾಣ್ಯ, ಪಟಾಡ್ಯ (ಅಣ್ಣ-ತಮ್ಮಂದಿರು)

೫. ಪಡವಲ್‌ಕರ್ : ಮುಜಾನ್ಯ, ಸಮಾನ್ಯ, (ಅಣ್ಣ-ತಮ್ಮಂದಿರು)

೬. ದುಬೇಜಿ :

೧. **ಸುರ್ವೇಸಿ :** ಸುರ್ವೇಸಿ ಅಥವಾ ಸೂರ್ಯವಂಶ ಎಂಬ ಬೆಡಗು ಭಾರತದ ಅನೇಕ ಜಾತಿ ಮತ್ತು ಬುಡಕಟ್ಟುಗಳಲ್ಲಿ ಕಂಡುಬರುತ್ತದೆ. ಪ್ರಸ್ತುತ ಫಿಸಾಡಿ ಸಮುದಾಯದಲ್ಲಿಯೂ ಈ ಬೆಡಗು ಪ್ರಚಲಿತದಲ್ಲಿರುವುದು. 'ಸುರ್ವೇಸಿ' ಎಂದರೆ, ಸೂರ್ಯ ವಂಶದಿಂದ ಹುಟ್ಟಿದವರು ಎಂದು ಹೇಳುತ್ತಾರೆ. ಅಂದರೆ, ಇವರು ಅತ್ಯಂತ ಪುರಾತನ ಕಾಲದಲ್ಲಿ ಪ್ರಕೃತಿ ಶಕ್ತಿಗಳನ್ನು ಆರಾಧಿಸುವಂತಹ ಹಿನ್ನೆಲೆಯ ಸಂಕೇತವಾಗಿ ಸೂರ್ಯದೇವರನ್ನು ಆರಾಧಿಸಿರ ಬಹುದು. ಹೀಗಾಗಿ ಇವರು ಸುರ್ವೇಸಿ ಎಂದು ಕರೆಯುವುದು ವಾಡಿಕೆಯಲ್ಲಿದೆ. ಅಲ್ಲದೆ ಮೇವಾಡದ ಸಿಸೋದಿಯ ವಂಶದವರು ತಾವು ಸೂರ್ಯವಂಶದವರು ಎಂದು ಹೇಳುತ್ತಾರೆ. ಇವರು ತಮ್ಮ ಮನೆಯ ಅಡ್ಡ ಹೆಸರುಗಳಿಗೆ ಕೂಡಾ ಸುರ್ವೇಸಿ ಎಂದು ಗುರುತಿಸಿಕೊಳ್ಳುತ್ತಾರೆ.

೨. **ಚವ್ಹಾಣ :** ಈ ಬೆಡಗಿನವರು ಒಂದು ಕಾಲದಲ್ಲಿ ಚವ್ಹಾಣ್ ಸಂತತಿಗೆ ಸೇರಿದವರಾಗಿರ ಬಹುದು. ಹಿಂದೆ ಪೃಥ್ವಿರಾಜ ಚವ್ಹಾಣನು 'ಚವ್ಹಾಣ್' ಸಂತತಿಗೆ ಸೇರಿದ ಪ್ರಸಿದ್ಧ ಅರಸನಾಗಿದ್ದನು. ಈತನು ಮೂಲತಃ ಅಜ್ಮೀರ್‌ದವನು. ದೆಹಲಿಯನ್ನು ರಾಜದಾನಿಯನ್ನಾಗಿ ಮಾಡಿಕೊಂಡು ಆಳಿದನು. ೧೧೯೧ರಲ್ಲಿ ನಡೆದ ಪ್ರಥಮ ತರೈ ಸಂಗ್ರಾಮದಲ್ಲಿ ಮೊಘಲರ ಮಹಮದ್ ಘೋರಿಯನ್ನು ಸೋಲಿಸಿದನು. ಕ್ರಿ.ಶ. ೧೧೯೨ರಲ್ಲಿ ಮತ್ತೆ ಆಕ್ರಮಿಸಿದನು. ಪೃಥ್ವಿರಾಜನು ಇದನ್ನು ವಿರೋಧಿಸಿದ್ದ ರಿಂದ ತರೈ ಸಂಗ್ರಾಮಕ್ಕೆ ನಡೆದ ಎರಡನೆಯ ತರೈ ಯುದ್ಧದಲ್ಲಿ ಮಹಮದ್ ಘೋರಿಯಿಂದ ಪರಾಭವಗೊಂಡನು. ಆಗ ಪೃಥ್ವೀರಾಜನನ್ನು ಸೆರೆಹಿಡಿದು ಕೊಲ್ಲಲಾಯಿತು. ದೆಹಲಿ ಮಹಮದ್ ಘೋರಿಯ ವಶವಾಯಿತು. ಅಲ್ಲದೆ ಆಗಿನ ಸಂದರ್ಭದಲ್ಲಿ ರಜಪೂತರಲ್ಲಿ ಒಗ್ಗಟ್ಟಿಲ್ಲದಿರುವುದರಿಂದ ಚವ್ಹಾಣ್ ಸಂತತಿ ದಿಕ್ಕು ಪಾಲಾದರು ಎಂದು ಇತಿಹಾಸ ಹೇಳುತ್ತದೆ. ಈ ಸಂದರ್ಭದಲ್ಲಿಯೇ ಚವ್ಹಾಣರು ಅಲೆಮಾರಿಗಳಾಗಿರಬಹುದು. ಚವ್ಹಾಣರ್ ಬೆಡಗಿನವರಿಗೆ "ಚವ್ಹಾಣ್" ಎಂಬ ಮನೆತನದ ಅಡ್ಡ ಹೆಸರಿನಿಂದ ಕರೆಯಲಾಗುತ್ತದೆ.

೩. **ಸೋಳುಂಕೆ :** ಸೋಳಂಕೆಗಳು ರಾಜಸ್ತಾನದ ಗಡಿ ಭಾಗದ ಈಗಿನ ಗುಜರಾತಿನ 'ಕಾಥಿಯಾ ವಾಡ್' ಪ್ರಾಂತ್ಯದಲ್ಲಿ ಆಳಿದರು. ಈ ವಂಶದ ದೊರೆಗಳಲ್ಲಿ ರಾಜಾಭೀಮದೇವ ಪ್ರಸಿದ್ಧನ್ನಾಗಿದ್ದನು. ಇವನ ಕಾಲ ೧೦೨೨ರಿಂದ ೧೦೬೪ ಎಂದು ಇತಿಹಾಸ ಹೇಳುತ್ತದೆ. ಇವನು ಘಜ್ನಿ ಮಹ್ಮದ್ ನೊಂದಿಗೆ ಹೋರಾಡಿದನು. ಈ ಕಾಲದಲ್ಲಿಯೇ ಘಜ್ನಿ ಮಹ್ಮದ್‌ನಿಂದ ಪ್ರಭಾಸ ತೀರ್ಥದಲ್ಲಿನ ಸೋಮನಾಥ ದೇವಾಲಯ ನಾಶವಾಯಿತು. ಬಹುಶಃ ಈ ಸಂದರ್ಭದಲ್ಲಿಯೇ ಸೋಳಂಕಿಗಳು ವಿವಿಧ ಪ್ರದೇಶದಲ್ಲಿ ಚದುರಿಕೊಂಡಿರಬಹುದು. ಈ ಸೋಳಂಕೆ ಬೆಡಗಿನವರು ಇದೇ ಸಂತತಿಗೆ ಸೇರಿರಬಹುದು.

೪. **ಪವಾರ :** ಈ ಪವಾರ ಸಂತತಿ ಅಬು ಪರ್ವತ ಪ್ರದೇಶದಿಂದ ಬಂದವರೆಂದು ಹೇಳಲಾಗುತ್ತದೆ. ಪವಾರ ವಂಶದಲ್ಲಿ ಪ್ರಸಿದ್ಧಿಯಾದವನು 'ಉಪೇಂದ್ರ' ಎಂದು ಹೇಳಲಾಗುತ್ತದೆ. ಇವನು ಆರಂಭದಲ್ಲಿ ಮಳಖೇಡ್‌ದ ರಾಷ್ಟ್ರಕೂಟ ಅರಸರ ಮಾಂಡಲಿಕನಾಗಿದ್ದು, ಮುಂದೆ ಮಾಳ್ವದ ಧಾರಾವನ್ನು ರಾಜಧಾನಿಯಾಗಿ ಮಾಡಿಕೊಂಡು ರಾಜ್ಯಭಾರ ಮಾಡಿರುವುದು ಇತಿಹಾಸದಿಂದ ತಿಳಿದು ಬರುತ್ತದೆ. ಒಟ್ಟಿನಲ್ಲಿ ರಜಪೂತ ವಂಶದ ಸಂತತಿಯಲ್ಲಿ ಈ ಪವಾರರು ಕೂಡಾ ಒಬ್ಬರಾಗಿದ್ದರು. ಈ ಪವಾರ ಎಂಬ ಬೆಡಗು ಇವರ ಮೂಲವಾಗಿರಬಹುದು ಎಂದು ಊಹಿಸಿಕೊಳ್ಳಬಹುದು. ಹಾಗೆಯೇ ಇವರು ಸಹ ತಮ್ಮ ಮನೆತನದ ಅಡ್ಡ ಹೆಸರುಗಳಿಗೆ ಪವಾರ ಎಂದು ಹೇಳುತ್ತಾರೆ.

೫. **ಪಡವಲ್‌ಕರ್ :** ಘಿಸಾಡಿಗಳಲ್ಲಿ ಪಡವಲ್‌ಕರ್ ಎಂಬ ಬೆಡಗು ಕೂಡಾ ಚಾಲ್ತಿಯಲ್ಲಿದ್ದು ಈ ಬೆಡಗು ಯಾವ ಸಂತತಿಗೆ ಸೇರಿದೆ ಎಂಬುದನ್ನು ಗುರುತಿಸಲಾಗುತ್ತಿಲ್ಲ. ಒಟ್ಟಿನಲ್ಲಿ ಇದು ರಜಪೂತ ವಂಶ ಆಧಾರದಿಂದ ಬಂದಿದೆಯೆಂದು ಗುರುತಿಸಬಹುದು. ಈ ಬೆಡಗಿನವರಿಗೆ 'ಪಡವಲ್‌ಕರ್' ಎಂಬ ಮನೆಯ ಅಡ್ಡ ಹೆಸರುಗಳಿಂದ ಗುರುತಿಸಲಾಗುತ್ತದೆ. ಗಹಡವಾಲರ (ರಾಠೋಡ) ಎಂಬ ಸಂತತಿಯೇ ಪಡವಲ್‌ಕರ್ ಎಂದು ಕಾಲಾಂತರದಲ್ಲಿ ಬದಲಾಗಿರಬಹುದು ಎಂಬುದು ಸಂಶೋಧನೆಯ ಊಹೆಯಾಗಿದೆ. ಈ ಗಹಡವಾಲರ (ರಾಠೋಡರು) ಸಂತತಿಯ ಸ್ಥಾಪಕ ಅರಸು ಚಂದ್ರದೇವ ಎಂದು ಇತಿಹಾಸದಲ್ಲಿ ಉಲ್ಲೇಖಿಸಲಾಗಿದೆ. ಇವನ ಕಾಲ ೧೧೦೪ರಿಂದ ೧೧೫೪ ಎಂದು ದಾಖಲಿಸಲಾಗಿದೆ.

೬. **ದುಬೇಜೀ :** ಬಿಜಾಪುರದ ಅಂಭಾದಾಸ್ ಜಿ. ಸಾಳುಂಕೆ ಮತ್ತು ರಾಜರಾಮ್ ಬಿ. ಸಾಳುಂಕೆ ಇವರುಗಳಲ್ಲದೆ ಇನ್ನು ಅನೇಕ ವಕ್ತೃಗಳು ಈ 'ದುಬೇಜಿ' ಎಂಬ ಪಂಗಡದ ಬೆಡಗು ಚಾಲ್ತಿಯಲ್ಲಿದ್ದು, ಅದು ಈಗ ಕಂಡುಬರುತ್ತಿಲ್ಲ ಎಂದು ಹೇಳುತ್ತಾರೆ. ಈ ದುಬೇಜಿ ಬೆಡಗಿನವರಿಗೆ ಘಿಸಾಡಿ ಜನಸಮುದಾಯದಲ್ಲಿ ಪೌರೋಹಿತ ಸ್ಥಾನಮಾನಗಳನ್ನು ಕೊಡಲಾಗಿತ್ತು. ಆದರೆ ಕಾಲ ಬದಲಾದಂತೆ ಬ್ರಾಹ್ಮಣರ ಪೌರೋಹಿತ್ಯಕ್ಕೆ ಒತ್ತುಕೊಟ್ಟಾಗ ಈ ಬೆಡಗು ಸಂಪೂರ್ಣವಾಗಿ ಮಾಯವಾಗಿ ಇದು ಇನ್ನಿತರ ಬೆಡಗುಗಳಲ್ಲಿ ವಿಲೀನವಾಗಿರಬಹುದು ಎಂದು ಹೇಳುತ್ತಾರೆ.

ಮೇಲೆ ತಿಳಿಸಿರುವ ಪ್ರತಿಯೊಂದು ಮುಖ್ಯ ಬೆಡಗುಗಳ ಮುಂದೆ ಆವರಣದಲ್ಲಿ ಇನ್ನಿತರ ಹೆಸರುಗಳನ್ನು ಸೂಚಿಸಲಾಗಿದೆ. ಆ ಮುಂದೆ ಆವರಣದಲ್ಲಿ ಸೂಚಿಸಿರುವ ಎಲ್ಲ ಹೆಸರಿನವರು ಅಣ್ಣ ತಮ್ಮಂದಿರು ಎಂದು ಹೇಳುತ್ತಾರೆ. ಮುಖ್ಯವಾದ ಹೆಸರಿಗೆ ತಂದೆಯ ಸ್ಥಾನಗಳನ್ನು ಕೊಡಲಾಗಿದೆ. ಘಿಸಾಡಿಗಳಲ್ಲಿ ಕಂಡುಬರುವ ಕೆಲವು ಬೆಡಗುಗಳು ರಾಜಸ್ಥಾನ ಮತ್ತು ಗುಜರಾತಿನ ಮೂಲದ ಅನೇಕ ಜಾತಿ ಬುಡಕಟ್ಟುಗಳಲ್ಲಿ ಕಂಡುಬರುತ್ತವೆ. ಉದಾಹರಣೆ: ಪಾರ್ದಿ, ಲಂಬಾಣಿ ಇನ್ನಿತರೆ.

ಸೈಯದ್-ಸಿರಾಜ್-ಉಲ್ಲಾ ಹಸನ್‌ರವರು ಆಂಧ್ರ ಪ್ರದೇಶದಲ್ಲಿ ನೆಲೆಸಿರುವ ಘಿಸಾಡಿ ಕುಟುಂಬಗಳಲ್ಲಿ ಚಾಲ್ತಿಯಲ್ಲಿರುವ ಬೆಡಗುಗಳನ್ನು ಈ ಕೆಳಗಿನಂತೆ ಗುರುತಿಸಿದ್ದಾರೆ.

ಭಾಗ ಅ	ಭಾಗ ಆ
Surnames (Marthawada)	**Surnames (Telangana)**
1. Pawar	1. Poshinarwaru
2. Chavan	2. Poingantiwaru
3. Bhukya	3. Palakadawaru
4. Rothor (Rothod)	4. Heera Puramwaru
5. Solunke	5. Badapalawaru
6. Katker	6. Anvalikarwaru

Syed-Siraj-Ul-Hasan:1989:201

ಭಾಗ 'ಅ'ದಲ್ಲಿ ಉಲ್ಲೇಖಿಸಿರುವ ಬೆಡಗುಗಳು ಘಿಸಾಡಿ ಸಮುದಾಯದಲ್ಲಿ ಚಾಲ್ತಿಯಲ್ಲಿವೆ. ಭಾಗ 'ಆ' ಭಾಗದಲ್ಲಿ ಚಾಲ್ತಿಯಲ್ಲಿರುವ ಬೆಡಗುಗಳು ಆಂಧ್ರ ಪ್ರದೇಶದ ಮೂಲಕ್ಕೆ ಸೇರಿದ ಕಮ್ಮಾರರ ಬೆಡಗುಗಳಾಗಿವೆ ಎಂಬುದು ತಿಳಿದುಬರುತ್ತದೆ. ಇವರು ಕ್ಷೇತ್ರಕಾರ್ಯ ಕೈಗೊಂಡ ಸಂದರ್ಭದಲ್ಲಿ ಘಿಸಾಡಿ ಸಮುದಾಯದ ಮಾಹಿತಿದಾರರು ನಾವು ಮರಾಠಿ ಮೂಲಕ್ಕೆ ಸೇರಿದವರು ಎಂದು ಹೇಳಿರಬಹುದು. ಆದ್ದರಿಂದ ಅಧ್ಯಯನಕಾರರು ಇಲ್ಲಿ 'ಮರಾಠವಾಡಾ ಘಿಸಾಡಿ'ಗಳು ಎಂದು ಉಲ್ಲೇಖಿಸಿದ್ದಾರೆ. ಹಾಗೆಯೇ ಆಂಧ್ರಪ್ರದೇಶದಲ್ಲಿ ನೆಲೆಸಿರುವ ಘಿಸಾಡಿ ಸಮುದಾಯಗಳಲ್ಲಿ ರಾಠೊಡ್, ಬುಕ್ಯಾ, ಕಾಟಕೇರ್ ಎಂಬ ಬೆಡಗುಗಳು ಚಾಲ್ತಿಯಲ್ಲಿರುವುದು ಈ ಲೇಖಕರ ಉಲ್ಲೇಖಿತ ಅಭಿಪ್ರಾಯದಿಂದ ತಿಳಿದುಬರುತ್ತದೆ. ಆದರೆ ಕರ್ನಾಟಕದ ಪರಿಸರದ ಹಿನ್ನೆಲೆಯಿಂದ ಗುಲ್ಬರ್ಗಾ ಜಿಲ್ಲೆಯ ವ್ಯಾಪ್ತಿಯೊಂದಿಗೆ ಈ ಸಮುದಾಯದ ಅಧ್ಯಯನ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಈ ಮೂರು ಬೆಡಗುಗಳು ಇಲ್ಲಿ ಚಾಲ್ತಿಯಲ್ಲಿರುವುದಿಲ್ಲ.

೩. ಆಹಾರ ಪದ್ಧತಿ

ಪ್ರಪಂಚದಲ್ಲಿ ಬದುಕುವ ಪ್ರತಿಯೊಂದು ಜೀವಿಗೂ ಆಹಾರ ಅತ್ಯವಶ್ಯಕವಾಗಿದೆ. ಹಾಗೇ ಗಾಳಿ ಬೆಳಕು, ನೀರು, ಬೆಂಕಿ ಮುಂತಾದವು ಕೂಡಾ ಅವಶ್ಯವಾಗಿ ಬೇಕಾಗುತ್ತದೆ. ಆದಿಕಾಲದಿಂದಲೂ ಮಾನವ ತನ್ನ ಹೊಟ್ಟೆಪಾಡಿಗಾಗಿ ಆಹಾರ ಅನ್ವೇಷಣೆ ಮಾಡುತ್ತಾ ಹಗಲು ರಾತ್ರಿ ಶ್ರಮ ಪಡುತ್ತಿದ್ದಾನೆ. ಈ ಹಿನ್ನೆಲೆಯಲ್ಲಿ ತನ್ನದೇ ಆದ ಪಾರಂಪರಿಕ ಜ್ಞಾನ ಶಿಸ್ತುಗಳಿಂದ ಶ್ರಮ ವ್ಯಯಿಸಿ ತನ್ನ ದೈನಂದಿನ ಆಹಾರ ಪೂರೈಸಿಕೊಳ್ಳುತ್ತಿದ್ದಾನೆ. ಆಯಾ ಪರಿಸರದಲ್ಲಿ ಬೆಳೆಯುವ ಆಹಾರ ಪದಾರ್ಥಗಳು ಅಲ್ಲಿಯ ಜನರ ಬಹುಮುಖ್ಯ ಆಹಾರವಾಗಿರುತ್ತದೆ. ಒಂದು ಪರಿಸರದ ಜನರಿಗೆ ಸಹ್ಯವೆನಿಸಿದ ಆಹಾರ ಪದಾರ್ಥ, ಮತ್ತೊಂದು ಪರಿಸರದ ಜನರಿಗೆ ಅಸಹ್ಯವೆನಿಸುತ್ತವೆ.

ಸಸ್ಯಾಹಾರಿಗಳಿಗೆ ಸಸ್ಯ ಆಹಾರವೇ ಇಷ್ಟವಾದರೆ, ಮಾಂಸಾಹಾರಿಗಳಿಗೆ ಮಾಂಸದ ಊಟವೆಂದರೆ ಬಹಳ ಇಷ್ಟವಾಗುತ್ತದೆ. ಕರಾವಳಿ ತೀರದ ಪ್ರದೇಶದ ಜನರಿಗೆ ಮೀನು ಬಹಳ ಇಷ್ಟವಾದರೆ, ಇನ್ನಿತರ ಪ್ರದೇಶದ ಜನರಿಗೆ ಮೀನಿನ ಊಟ ಅಷ್ಟೇನು ಪ್ರಿಯವೆನಿಸುವುದಿಲ್ಲ. ಇವುಗಳಿಗೆಲ್ಲ ಪರಿಸರದ ಪ್ರಭಾವ ಹಾಗೂ ಅಭ್ಯಾಸದಿಂದ ಉಂಟಾದ ಮನಃಸ್ಥಿತಿ ಕಾರಣವಾಗಿರುತ್ತದೆ. ಒಟ್ಟಿನಲ್ಲಿ ಆಹಾರವು ಮಾನವನ ಬದುಕಿಗೆ ಬೇಕಾಗಿರುವ ಅಮೂಲ್ಯವಾದ ಪದಾರ್ಥವಾಗಿದೆ. ಆಹಾರವಿಲ್ಲದಿದ್ದರೆ ಮನುಷ್ಯ ಪ್ರಾಣವನ್ನು ಕಳೆದುಕೊಳ್ಳಬೇಕಾಗುತ್ತದೆ.

ಘಿಸಾಡಿ ಸಮುದಾಯವು ಕೂಡಾ ತನ್ನದೆ ಆಹಾರ ಪದ್ಧತಿಯ ಕ್ರಮಗಳನ್ನು ಹೊಂದಿದ್ದು, ಇವರು ದಿನಕ್ಕೆ ಮೂರು ಸಲ ಆಹಾರ ಸೇವಿಸುವುದನ್ನು ರೂಢಿಸಿಕೊಂಡಿದ್ದಾರೆ. ಇವರು ಮುಂಜಾನೆ ೮.೩೦ರಿಂದ ತಮ್ಮ ಕಮ್ಮಾರಿಕೆ ಕೆಲಸಗಳಲ್ಲಿ ತೊಡಗುವುದರಿಂದ ತಮ್ಮ ಮನೆಯಲ್ಲಿ ಬೆಳಿಗ್ಗೆ ರೊಟ್ಟಿ, ಚಟ್ನಿ ಊಟ ಮಾಡುತ್ತಾರೆ. ಆಗಾಗ ಕೆಲಸದ ಸಮಯದಲ್ಲಿ ಚಹಾ ಕುಡಿಯುವುದನ್ನು ರೂಢಿಸಿಕೊಂಡಿದ್ದಾರೆ. ಇವರಿಗೆ ಚಹಾ ಬೇಕಾದರೆ ಮನೆಯಲ್ಲಿ ಮಾಡಿಸುವುದಿಲ್ಲ. ತಮ್ಮಲ್ಲಿರುವ ಚಿಲ್ಲರೆ ಹಣ ಕೊಟ್ಟು ತಮ್ಮ ಮಕ್ಕಳ ಕೈಯಲ್ಲಿ ಒಂದು ಲೋಟ ಕೊಟ್ಟು, ಹೋಟೆಲುಗಳಿಂದ ಚಹಾ ತರಿಸಿ ಕುಡಿಯುತ್ತಾರೆ. ಸುಮಾರು ೧೨.೩೦ರ ಮಧ್ಯಾಹ್ನ ಕೆಲಸದಿಂದ ವಿಶ್ರಾಂತಿ ಪಡೆದುಕೊಂಡು ಸ್ನಾನ ಮಾಡುತ್ತಾರೆ. ೨.೦೦ ಗಂಟೆಯ ಒಳಗೆ ಮನೆಯಲ್ಲಿ ತಯಾರಿಸಿದ ಬಿಸಿ ಬಿಸಿಯಾದ ಊಟವನ್ನು ಮಾಡುತ್ತಾರೆ. ಒಂದು ವೇಳೆ ಕಮ್ಮಾರಿಕೆ ಕೆಲಸಗಳು ಬಿಡುವಿಲ್ಲದೆ ಬಂದರೆ ೪ ಗಂಟೆಯಿಂದ ೫ರ ತನಕ ಕೆಲಸ ಮಾಡಿ ಸ್ವಲ್ಪ ಚಹಾ ಕುಡಿದು ವಿರಾಮ ತೆಗೆದುಕೊಳ್ಳುತ್ತಾರೆ. ನಂತರ ರಾತ್ರಿ ೮.೩೦ರಿಂದ ೯.೦೦ ಗಂಟೆಗೆ ಊಟ ಮಾಡಿ ಸ್ವಲ್ಪ ಕುಡಿದು (ಸಾರಾಯಿ) ಮಲಗುವವರು ಇದ್ದಾರೆ.

ಘಿಸಾಡಿ ಜನರು ಮಾಂಸಾಹಾರಿಗಳು ಮತ್ತು ಸಸ್ಯಾಹಾರಿಗಳು. ಇವರು ಮೀನು, ಕುರಿ, ಆಡು, ಕೋಳಿ, ಮೊಲ, ಏಡಿ, ಕೌಜುಗ, ಆಮೆ, ಪಾರಿವಾಳ, ಚಿಗರೆಗಳ ಮಾಂಸವನ್ನು ತಿನ್ನುವರು. ಸಾಮಾನ್ಯವಾಗಿ ದಿನನಿತ್ಯ ರೊಟ್ಟಿ, ಬ್ಯಾಳಿ, ಕಾಯಿಪಲ್ಯಗಳನ್ನು ಊಟ ಮಾಡುತ್ತಾರೆ. ಇವರು ತಮ್ಮ ಗುಡಾರಗಳ ಮುಂದೆ ಒಲೆ ಹೂಡಿ ಅಡವಿಯಲ್ಲಿ ಸಂಗ್ರಹಿಸಿದ ಕಟ್ಟಿಗೆಯಿಂದ ಅಡುಗೆ ಮಾಡುತ್ತಾರೆ. ಹಬ್ಬ-ಹರಿದಿನಗಳಲ್ಲಿ ಗೋಧಿಯ ಹುಗ್ಗಿ, ಅಕ್ಕಿಯ ಹುಗ್ಗಿ, ಹೋಳಿಗೆ, ಸಜ್ಜಕ, ಚಕ್ಕೋಲಿ, ಕಡಬು, ಹಪ್ಪಳಗಳನ್ನು ಮಾಡುತ್ತಾರೆ. ಹಬ್ಬದ ಮರುದಿನ ಅಂದರೆ ಕರಿ ದಿನದಂದು, ಬೀಗರು ಅಥವಾ ಸಂಬಂಧಿಕರು ಬಂದಾಗ ಕುರಿ, ಕೋಳಿಯನ್ನು ಕೊಯ್ದು ಹೆಂಡ ಅಥವಾ ಸಾರಾಯಿ ತಂದು ಕುಡಿದು, ಕುಡಿಸಿ ಮಾಂಸದ ಊಟವನ್ನು ಮಾಡಿಸಿ ಸಂತೋಷದಲ್ಲಿ ತೇಲಾಡುತ್ತಾರೆ. ಇವರು ಗುಡಾರದ ಮನೆಗಳಲ್ಲಿ ರಾತ್ರಿ ಆಹಾರ ಉಳಿದರೆ, ಹಂದಿ, ನಾಯಿಗಳು ಬಂದು ತಿನ್ನುತ್ತವೆ ಎಂದು ಗುಡಾರದ ಬಿದಿರಿನ ಕೋಲಿಗೆ ನೆಲವಿಯನ್ನು ಕಟ್ಟಿರುತ್ತಾರೆ. ಆ ರಾತ್ರಿ ಉಳಿದ ಆಹಾರವನ್ನು ನೆಲವಿಗಳಲ್ಲಿ ಇಟ್ಟು ಸಂರಕ್ಷಿಸಿಕೊಳ್ಳುವರು.

೪. ಉಡುಗೆ-ತೊಡುಗೆ

ಫಿಸಾಡಿ ಜನಸಮುದಾಯವು ಇಂಡೋ ಆರ್ಯನ್ ಮೂಲದವರು. ಹೀಗಾಗಿ ಇವರಲ್ಲಿ ಗೋಧಿಯ ಬಣ್ಣದ ಬೆಳ್ಳಗಿರುವವರು ಮತ್ತು ಕಪ್ಪು ಮಿಶ್ರಿತ ಗಟ್ಟಿಮುಟ್ಟಾದ ಬಿಳಿಯ ಬಣ್ಣದವರು ಕಂಡುಬರುತ್ತಾರೆ. ಸಾಮಾನ್ಯವಾಗಿ ಇವರ ಮೈಕಟ್ಟು ನೋಡಿದೊಡನೆಯೇ ಇವರು ಕಷ್ಟಪಟ್ಟು ದುಡಿಯುವವರೆಂಬುದು ತಿಳಿದುಬರುತ್ತದೆ. ಇವರಲ್ಲಿ ಕೆಲವರು ನೋಡಲು ಬಹಳ ಸುಂದರವಾಗಿದ್ದರೆ ಕೆಲವರು ಸಾಧಾರಣವಾಗಿರುತ್ತಾರೆ. ಇನ್ನು ಕೆಲವರು ದಪ್ಪ-ಪುಷ್ಟವಾಗಿದ್ದರೆ ಕೆಲವರು ತೆಳ್ಳಗೆ ಇರುತ್ತಾರೆ. ಇವರ ವೇಷ-ಭೂಷಣವು ತಮ್ಮದೆಯಾದ ಮಹತ್ವ ಮತ್ತು ವಿಶಿಷ್ಟತೆಯನ್ನು ಹೊಂದಿದೆ. ಇವರಲ್ಲಿ ಮಕ್ಕಳು ಧರಿಸುವ ವೇಷ-ಭೂಷಣದಲ್ಲಿ ಒಂದೇ ಪ್ರಕಾರ ಕಂಡುಬಂದರೆ, ಯುವಕರು ಮತ್ತು ಹಿರಿಯರು ಧರಿಸುವ ವೇಷ-ಭೂಷಣಗಳಲ್ಲಿ ಭಿನ್ನಪ್ರಕಾರಗಳು ಕಂಡುಬರುತ್ತವೆ. ಹಾಗೆಯೇ ಹೆಂಗಸರಲ್ಲಿ ಕನ್ನೆಯರು, ಮುತ್ತೈದೆಯವರು ಹಾಗೂ ವಿಧವೆಯರು ಧರಿಸುವ ವೇಷ-ಭೂಷಣಗಳಲ್ಲಿ ವಿವಿಧ ಭಿನ್ನ ಮಾದರಿಗಳು ಕಂಡುಬರುತ್ತವೆ. ಹೀಗಾಗಿ ಫಿಸಾಡಿ ಸಮುದಾಯದ ಜನರ ವೇಷ-ಭೂಷಣಗಳ ವಿವಿಧ ಮಾದರಿಗಳನ್ನು ಈ ಕೆಳಗಿನಂತೆ ವಿಶ್ಲೇಷಿಸಲಾಗಿದೆ.

೧. ಮಕ್ಕಳ ಉಡುಗೆ-ತೊಡುಗೆ : ಫಿಸಾಡಿ ಜನರ ಆರ್ಥಿಕ ಸ್ಥಿತಿಯು ತುಂಬಾ ಶೋಚನೀಯ ವಾಗಿರುವುದರಿಂದ ಇವರ ಮಕ್ಕಳು ಯಾವಾಗಲು ಹರಕು-ಮುರುಕಾದ ಬಟ್ಟೆಗಳನ್ನು ಹಾಕಿ ಕೊಂಡಿರುತ್ತಾರೆ. ವರ್ಷದಲ್ಲಿ ಯಾವಾಗಲೋ ಒಂದು ಸಲ ತಂದ ಹೊಸ ಬಟ್ಟೆಗಳನ್ನು ಹಬ್ಬ-ಹರಿದಿನ ಇಲ್ಲವೇ ವಿಶೇಷ ಸಂದರ್ಭಗಳಲ್ಲಿ ಮಾತ್ರ ಹಾಕುತ್ತಾರೆ. ಸಾಮಾನ್ಯವಾಗಿ ಇವರ ಮಕ್ಕಳು ಅಂಗಿ, ಬನಿಯನ್, ಚಡ್ಡಿ, ಟೀಶರ್ಟ್, ಪ್ಯಾಂಟ್, ಸ್ಕರ್ಟ್, ಸಣ್ಣ ಲಂಗ, ಕುಪ್ಪಸ ಹಾಕಿಕೊಳ್ಳುತ್ತಾರೆ. ಕೆಲವು ಚಿಕ್ಕಪುಟ್ಟ ಮಕ್ಕಳಂತು ಬಟ್ಟೆ ಇಲ್ಲದೆ ಬರಿ ಮೈಯಲ್ಲಿಯೇ ಆಟವಾಡು ತ್ತಿರುತ್ತವೆ. ಒಂದು ವೇಳೆ ಹೆಣ್ಣು ಮಗುವಿದ್ದರೆ ಕೇವಲ ಚಡ್ಡಿ ಮಾತ್ರ ಹಾಕಲಾಗಿರುತ್ತದೆ. ಇವರ ಮಕ್ಕಳ ತಲೆಗಳು ವಾರಕ್ಕೆ ಒಂದು ಅಥವಾ ಎರಡು ಸಲ ಮಾತ್ರ ಎಣ್ಣೆ ಕಾಣುತ್ತವೆ. ದೇವರಿಗೆ ಜಡೆ ಬಿಡುವ ಹರಕೆ ಹೊತ್ತುಕೊಂಡ ಪಾಲಕರ ಮಕ್ಕಳ ತಲೆಯನ್ನು ಆ ದೇವರೇ ಕಾಪಾಡಬೇಕು. ಇವರ ಎಳೆ ಕೂಸುಗಳಿಗೆ ಕಿವಿ ಚುಚ್ಚಿ ತಾಮ್ರದ ಕಿವಿಯೋಲೆ ಹಾಕುತ್ತಾರೆ. ಹಾಗೇ ಕಾಲಿನಲ್ಲಿ ತಾಮ್ರದ ಇಲ್ಲವೇ ಬೆಳ್ಳಿಯ ಕಾಲಗಡಗ ಹಾಕುತ್ತಾರೆ. ಕೈಯಲ್ಲಿ ಮುತ್ತಿನ ಮಣಿಯ ಕೈಸರ ಹಾಕುತ್ತಾರೆ. ಕೆಲವು ಮಕ್ಕಳ ಕೈ ಮತ್ತು ಕೊರಳಿಗೆ ತಾಯತವನ್ನು, ಇಲ್ಲವೇ ಕರಿಯ ಅಥವಾ ಕೆಂಪು ಕಾಶಿದಾರ ಕಟ್ಟುತ್ತಾರೆ. ಗಂಡು ಮಗುವಿದ್ದರೆ ಅದರ ಟೊಂಕಕ್ಕೆ ಉಡಿದಾರ ಕಟ್ಟುತ್ತಾರೆ. ಹೆಣ್ಣು ಮಗುವಿದ್ದರೆ ಕೈಯಲ್ಲಿ ಕರ್ಪೂರ ಇಲ್ಲವೇ ಗಾಜಿನ ಬಳೆಗಳನ್ನು ತೊಡಿಸಲಾಗಿರುತ್ತದೆ.

೨. ಯುವಕರು ಉಡುಗೆ : ಫಿಸಾಡಿ ಯುವಕರು ಸಾಮಾನ್ಯವಾಗಿ ಇತ್ತೀಚೆಗೆ ಎಲ್ಲಾ ಯುವಕರು ಧರಿಸುವಂತಹ ಆಧುನಿಕ ಉಡುಗೆ ತೊಡುಗೆಗಳಾದ ಪ್ಯಾಂಟ್, ಶರ್ಟ್, ಟೀಶರ್ಟ್, ಬನಿಯನ್,

ಲುಂಗಿಗಳನ್ನು ಹಾಕಿಕೊಳ್ಳುತ್ತಾರೆ. ಕೆಲವು ಯುವಕರು ಕೈಯಲ್ಲಿ ಕೈ ಕಡಗ, ಕಾಶಿದಾರ, ವಾಚುಗಳನ್ನು, ಕೊರಳಿನಲ್ಲಿ ಚೈನ್‌ಸರ, ಕೆಂಪು ಇಲ್ಲವೇ ಕರಿಯ ಕಾಶಿದಾರವನ್ನು ಹಾಕಿಕೊಳ್ಳುತ್ತಾರೆ. ಎಲ್ಲಾ ಗಂಡಸರು ಟೊಂಕಕ್ಕೆ ಉಡಿದಾರ ಕಟ್ಟಿಕೊಳ್ಳುತ್ತಾರೆ. ಕೆಲಸದ ಸಂದರ್ಭದಲ್ಲಿ ಇಲ್ಲವೇ ಬೇಟೆಗೆ ಹೋದಾಗ ಲುಂಗಿ ಹಾಕಿಕೊಳ್ಳುತ್ತಾರೆ. ಇವರು ತಿರುಗಾಡುವಾಗ ಚಪ್ಪಲಿಯನ್ನು ಧರಿಸುತ್ತಾರೆ. ತಮ್ಮ ಮನೆಯಲ್ಲಿ ಯಾರಾದರೂ ಸತ್ತಾಗ ಶ್ರಾದ್ಧ ಕ್ರಿಯೆ ಮಾಡುವಾಗ ಸತ್ತ ವ್ಯಕ್ತಿಯ ಕುಟುಂಬಕ್ಕೆ ಸಂಬಂಧಿಸಿದವರು ತಲೆ ಬೋಳಿಸಿಕೊಳ್ಳುತ್ತಾರೆ. ಹಾಗೆಯೇ ಈ ಸಂದರ್ಭದಲ್ಲಿ ನೆತ್ತಿಯ ಮೇಲೆ ಸ್ವಲ್ಪ ಬ್ರಾಹ್ಮಣರ ಹಾಗೆ ಜೂಟ್ಟಿನ ಕೂದಲು ಬಿಡುತ್ತಾರೆ. ಆದರೆ ದೇವರಿಗೆ ಹರಕೆ ಹೊತ್ತುಕೊಂಡವರು ಪೂರ್ತಿ ತಲೆ ಬೋಳಿಸುತ್ತಾರೆ. ತಮ್ಮ ಮನೆಗಳಲ್ಲಿನ ಧಾರ್ಮಿಕ, ಸಾಂಸ್ಕೃತಿಕ ಕಾರ್ಯಕ್ರಮು ಇಲ್ಲವೇ ಹಬ್ಬ-ಹರಿದಿನಗಳಲ್ಲಿ ಹಣೆಗೆ ಉದ್ದನೆಯ ಕುಂಕುಮದ ನಾಮ ಹಚ್ಚಿಕೊಳ್ಳುತ್ತಾರೆ.

೩. **ಹಿರಿಯ ವ್ಯಕ್ತಿಗಳ ಉಡುಗೆ :** ಘಿಸಾಡಿ ಜನರ ಹಿರಿಯರು ಹೆಚ್ಚಾಗಿ ಬಿಳಿಯ ಬಟ್ಟೆಗಳನ್ನು ಹಾಕಿಕೊಳ್ಳುತ್ತಾರೆ. ಇವರು ತೊಡುವ ಉಡುಪುಗಳೆಂದರೆ ಪಂಚೆ(ಧೋತಿ), ಅರ್ಧ ತೋಳಿನ ಮತ್ತು ಉದ್ದನೆಯ ತೋಳಿನ ಅಂಗಿಗಳು. ಕೆಲವರು ಬಟ್ಟೆ ತಂದು ದರ್ಜಿಯಿಂದ ಅಳತೆಯನ್ನು ಕೊಟ್ಟು ಹೋಲಿಸಿರುವ ಬನಿಯನ್‌ಗಳನ್ನು ಹಾಕಿಕೊಳ್ಳುತ್ತಾರೆ. ಹೆಗಲಿನ ಮೇಲೆ ತಮಗೆ ಇಷ್ಟವಾದ ಬಣ್ಣದ ಟವೆಲ್‌ಗಳನ್ನು ಹಾಕಿಕೊಳ್ಳುತ್ತಾರೆ. ಕೆಲವರು ತಲೆಯ ಮೇಲೆ ಬಿಳಿಯ ಟೋಪಿ ಧರಿಸಿದರೆ, ಕೆಲವರು ರುಮಾಲು ಸುತ್ತುತ್ತಾರೆ. ಕಾಲಿನಲ್ಲಿ ಚರ್ಮದ ದಪ್ಪನೆಯ ಚಪ್ಪಲಿಗಳನ್ನು ಧರಿಸುತ್ತಾರೆ. ನಗರದ ಪರಿಸರಕ್ಕೆ ಹೊಂದಿಕೊಂಡಂತೆ ವಾಸಿಸುವ ಕೆಲವು ಹಿರಿಯ ಘಿಸಾಡಿ ವ್ಯಕ್ತಿಗಳು ಅಗಲವಾದ 'ಪೈಜಾಮಾ' (ಪ್ಯಾಂಟ್) ಧರಿಸುತ್ತಾರೆ. ಹಾಗೆಯೇ ಕೆಲವರು ಕೈಯಲ್ಲಿ ಕೋಲು ಹಿಡಿದಿರುತ್ತಾರೆ ಮತ್ತು ಕೆಲವರು ಬೆಳ್ಳಿಯ ಕಡಗ ಹಾಕಿಕೊಂಡಿರುತ್ತಾರೆ. ಈ ಬೆಳ್ಳಿಯ ಕಡಗ ನೀವು ಏಕೆ ಧರಿಸುತ್ತೀರಿ ಎಂದು ಸಂದರ್ಶನದ ವೇಳೆ ಪ್ರಶ್ನಿಸಿದಾಗ "ನಾವು ಬಹುದಿನಗಳಿಂದ ಸಂಗ್ರಹಿಸಲ್ಪಟ್ಟ ಹಣದಿಂದ ಈ ಬೆಳ್ಳಿಯ ಕಡಗ ಮಾಡಿಸಿದ್ದೇವೆ. ನಾವು ಅಲೆಮಾರಿಗಳಾಗಿರುವುದರಿಂದ ನಮ್ಮ ಹತ್ತಿರ ಹಣ ಸಂಗ್ರಹಿಸಿಟ್ಟುಕೊಳ್ಳಲು ಸೂಕ್ತವಾದ ರಕ್ಷಣೆ ಹಾಗೂ ಭದ್ರತೆಗಳಿರುವುದಿಲ್ಲವಾದ್ದರಿಂದ ನಾವು ಈ ರೀತಿಯ ವಸ್ತುಗಳನ್ನು ಮಾಡಿಸಿ ನಮ್ಮ ಜೊತೆಯಲ್ಲಿಯೇ ಆ ವಸ್ತುಗಳನ್ನು ಕಣ್ಮುಂದೆ ಇರುವ ರೀತಿಯಲ್ಲಿ ಹಣವನ್ನು ಅಭರಣಗಳ ರೂಪದಲ್ಲಿ ಧರಿಸುತ್ತೇವೆ" ಎಂದು ಹೇಳಿದರು (ಮಾಹಿತಿದಾರ: ತುಳಸಿರಾಮ ಚವ್ಹಾಣ್).

೪. **ಯುವತಿಯರ ವೇಷಭೂಷಣ :** ಅವಿವಾಹಿತ ಘಿಸಾಡಿ ಯುವತಿಯರು ಸಾಮಾನ್ಯವಾಗಿ ಸೀರೆ, ಕುಪ್ಪಸ, ಲಂಗ, ದಾವಣಿಗಳನ್ನು ನೂರಕ್ಕೆ ಒಬ್ಬರಂತೆ ಪಂಜಾಬಿ ಡ್ರೆಸ್‌ಗಳನ್ನು ಹಾಕಿ ಕೊಳ್ಳುವರು. ಕೈತುಂಬ ತಮಗೆ ಇಷ್ಟವಾದ ಬಣ್ಣದ ಗಾಜಿನ ಬಳೆಗಳನ್ನು ತೊಡಿಸಿಕೊಳ್ಳುವರು. ಕೊರಳಿನಲ್ಲಿ ಇತ್ತೀಚಿನ ಆಧುನಿಕ ರೋಲ್ಡ್‌ಗೋಲ್ಡ್‌ನ ಆಭರಣಗಳಾದ ಚೈನು ಸರಗಳು, ಮುತ್ತಿನ

ಸರಗಳನ್ನು ಹಾಕಿಕೊಳ್ಳುತ್ತಾರೆ. ಕಿವಿಗೆ ಓಲೆಗಳನ್ನು, ಮೂಗಿಗೆ ಮೂಗುತಿಯನ್ನು ಧರಿಸುವರು. ಯುವತಿಯರು ತಮ್ಮ ಹಣೆಯ ಮೇಲೆ ಗೋಲಾಕಾರದ ಚಿಕ್ಕದಾದ ಕುಂಕಮದ ಬೊಟ್ಟು ಹಚ್ಚಿ ಕೊಳ್ಳುವ ಹಾಗೂ ತೀರಾ ಇತ್ತೀಚಿನ ದಿನಗಳಲ್ಲಿ ಆಧುನಿಕತೆಯ ಗಾಳಿ ಬೀಸುತ್ತಿರುವುದರಿಂದ ಇವರಲ್ಲಿಯೂ ಅನೇಕ ಯುವತಿಯರು ಸೌಂದರ್ಯವರ್ಧಕ ವಸ್ತುಗಳಾದ ಫೌಡರ್ ಲಿಪ್‌ಸ್ಟಿಕ್, ಸ್ನೋಗಳನ್ನು ಬಳಸುತ್ತಿರುವರು.

೫. ಗೃಹಿಣಿಯರ ಉಡುಗೆ : ಎಲ್ಲ ವಿವಾಹಿತ ಗಂಡ ಜೀವಂತವಿದ್ದ ಮಹಿಳೆಯರಿಗೆ ಮುತ್ತೈದೆಯರು ಎಂದು ಕರೆಯಲಾಗುತ್ತದೆ. ಫಿಸಾಡಿ ಗೃಹಿಣಿಯರು ಸಾಮಾನ್ಯವಾಗಿ ಸೀರೆ ಕುಪ್ಪಸ ಗಳನ್ನು ತೊಡುತ್ತಾರೆ. ಹಬ್ಬ ಹರಿದಿನಗಳಲ್ಲಿ ಹೊಸ ಮಿಂಚು ಮಿಂಚಿನ ಸೀರೆ ಕುಪ್ಪಸಗಳನ್ನು ಧರಿಸುತ್ತಾರೆ. ಇವರಲ್ಲಿ ಕುಂಕುಮವು ವಿವಾಹಿತ ಮಹಿಳೆಯ ಪವಿತ್ರ ಸಂಕೇತವಾಗಿದೆ. ಸಮಾಜದ ವಿವಿಧ ಜನ ಸಮುದಾಯಗಳಲ್ಲಿ ಚಿಕ್ಕ ಗೋಲಾಕಾರದಲ್ಲಿ ಕುಂಕುಮ ಹಚ್ಚಿಕೊಂಡರೆ, ಇವರಲ್ಲಿ ವಿವಾಹಿತ ಮಹಿಳೆಯರು ಆಯತಾಕಾರದಲ್ಲಿ ಕುಂಕುಮ ಹಚ್ಚಿಕೊಳ್ಳುವ ಸಂಪ್ರದಾಯ ರೂಢಿಯಲ್ಲಿದೆ. ಅಂದರೆ, ಇದು ಸುಮಾರು ೨ರಿಂದ ೨ ೧/೨ ಇಂಚುಗಳಷ್ಟು ಉದ್ದ ಮತ್ತು ಒಂದು ಇಂಚಿನಷ್ಟು ಎತ್ತರವಾಗಿ ಆಯತಾಕಾರದಲ್ಲಿ ▬ ಕೆಂಪು ಕುಂಕುಮ ಹಚ್ಚಿಕೊಳ್ಳುವರು. ಆ ಕೆಂಪು ಕುಂಕುಮದ ಕೆಳಗೆ ಅರಿಶಿಣ ಬಣ್ಣದ ಒಂದು ಚಿಕ್ಕ ಬೊಟ್ಟು ಇಟ್ಟುಕೊಳ್ಳುತ್ತಾರೆ. ಹಸಿರು ಸಮೃದ್ಧಿಯ ಸಂಕೇತವನ್ನು ಸೂಚಿಸುವುದರಿಂದ ಇವರ ಧಾರ್ಮಿಕ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಹಸಿರು ಬಳೆಗಳನ್ನು ಹಾಕಿಸಿಕೊಳ್ಳುತ್ತಾರೆ. ಇನ್ನಿತರ ಸಂದರ್ಭಗಳಲ್ಲಿ ತಮಗೆ ಇಷ್ಟವಾದ ಬಣ್ಣದ ಗಾಜಿನ ಬಳೆಗಳನ್ನು ಹಾಕಿಸಿಕೊಳ್ಳುತ್ತಾರೆ.

ಕೆಲವು ಮಹಿಳೆಯರು ಈ ಗಾಜಿನ ಬಳೆಯ ರಕ್ಷಣೆಗಾಗಿ ಈ ಗಾಜಿನ ಬಳೆಗಳ ಮುಂಬಳೆಯಾಗಿ ಮತ್ತು ಹಿಂಬಳೆಯಾಗಿ ಬೆಳ್ಳಿಯ ಬಳೆಗಳನ್ನು ಹಾಕಿಕೊಂಡಿರುತ್ತಾರೆ. ಕಾಲಿನ ಬೆರಳುಗಳಲ್ಲಿ ಕಾಲುಂಗುರಗಳನ್ನು ತಪ್ಪದೆ ಹಾಕಿಕೊಳ್ಳುತ್ತಾರೆ. ಕೈ ಬೆರಳುಗಳಲ್ಲಿ ತಮ್ಮಗೆ ಇಷ್ಟಬಂದರೆ ಉಂಗುರಗಳನ್ನು ಹಾಕಿಕೊಳ್ಳುತ್ತಾರೆ. ಇನ್ನೂ ಕೆಲವರು ಕಾಲಿಗೆ ದಪ್ಪನೆಯ ಬೆಳ್ಳಿಯ ಕಡಗಗಳು, ಗೆಜ್ಜೆ ಚೈನುಗಳನ್ನು ಧರಿಸುತ್ತಾರೆ. ಕೊರಳಿನಲ್ಲಿ ತಾಳಿ, ಮುತ್ತಿನ ಸರ, ಆಧುನಿಕ ಆಭರಣಗಳನ್ನು, ಅನುಕೂಲವಿದ್ದವರು ಬಂಗಾರದ, ಬೆಳ್ಳಿಯ ಸರಗಳನ್ನು ಹಾಕಿಕೊಳ್ಳುತ್ತಾರೆ. ಮೂಗಿನಲ್ಲಿ ಮೂಗುತಿ, ಕಿವಿಯಲ್ಲಿ ಕಿವಿಯೋಲೆಯನ್ನು ಧರಿಸುತ್ತಾರೆ. ಕಮ್ಮಾರಿಕೆ ಕೆಲಸ ಮಾಡುವ ಸಂದರ್ಭದಲ್ಲಿ ಘನ್ ಒಡೆಯುವುದರಿಂದ ಟೊಂಕದ ಸೀರೆ ಗಟ್ಟಿಯಾಗಿರಬೇಕೆಂದು ಟೊಂಕಕ್ಕೆ ಡಾಬನ್ನು ಹಾಕಿಕೊಳ್ಳುತ್ತಾರೆ. ಅಲ್ಲದೆ ಈ ಸಂದರ್ಭದಲ್ಲಿ ಸೀರೆಯನ್ನು ಕಚ್ಚೆ ಹಾಕುವುದನ್ನು ಕಾಣಬಹುದು. ಕೆಲವು ಮಹಿಳೆಯರು ತಮಗೆ ಇಷ್ಟವಾದ ಕೇಶಾಲಂಕಾರವಾಗಿ ಜಡೆ ಅಥವಾ ತುರುಬುಗಳನ್ನು ಕಟ್ಟಿಕೊಳ್ಳುತ್ತಾರೆ. ಇವರಲ್ಲಿ ಯಾರಾದರೂ ಹೊರಗಿನ ಅಥವಾ ಸಂಬಂಧಿಕರು ಬಂದರೆ ತಲೆಯಮೇಲೆ ಸೀರೆಯ ಸೆರಗನ್ನು ಹಾಕಿಕೊಳ್ಳುತ್ತಾರೆ. ಅದು ಇತರರಿಗೆ ಕೊಡುವ ಗೌರವವಾಗಿದೆ.

೬. **ವಿಧವೆಯರ ಉಡುಗೆ :** ಅನೇಕ ಸಮುದಾಯಗಳಲ್ಲಿರುವಂತೆ ಇವರಲ್ಲೂ ವಿಧವೆಯರು ಹೆಚ್ಚು ಶೃಂಗಾರ ಮಾಡಿಕೊಳ್ಳುವಂತಿಲ್ಲ. ಏಕೆಂದರೆ ಹೆಚ್ಚು ಶೃಂಗಾರ ಮಾಡಿಕೊಂಡರೆ ಸಮಾಜದಲ್ಲಿ ವಿಧವೆಯರ ಮೇಲೆ ದುಷ್ಟ ಕಾಮುಕ ವ್ಯಕ್ತಿಗಳ ಕಣ್ಣುಗಳು ಬೀಳುತ್ತದೆ ಎಂಬುದು ಇದರ ಹಿಂದಿನ ಉದ್ದೇಶವಾಗಿದೆ. ಹೀಗಾಗಿ ಅನೇಕ ಶೃಂಗಾರ ವಸ್ತುಗಳು, ಹೂವುಗಳನ್ನು ಮುಡಿಯುವಂತಿಲ್ಲ. ಇವರಲ್ಲಿ ವಿಧವೆ ಸ್ತ್ರೀಯರು ಹೆಚ್ಚಾಗಿ ಬಿಳಿ ಬಣ್ಣದ ಸೀರೆಯನ್ನು ಧರಿಸುತ್ತಾರೆ. ಆದರೆ ಇತ್ತೀಚೆಗೆ ಯಾವುದೇ ನಿರ್ಬಂಧಗಳು ಇಲ್ಲದರಿಂದ ಬಣ್ಣದ ಸೀರೆಗಳನ್ನು ಧರಿಸುತ್ತಾರೆ. ಆದರೂ ಕೂಡಾ ಹಳೆಯ ಸೀರೆಗಳನ್ನು ತೊಟ್ಟುಕೊಳ್ಳವುದು ಕಂಡುಬರುತ್ತದೆ. ಹಣೆಗೆ ಕೆಂಪು ಕುಂಕುಮದ ಬದಲಿಗೆ ಬಿಳಿಯ ಬಣ್ಣದ ಆಯತಾಕಾರದಲ್ಲಿ ವಿಭೂತಿ ಅಥವಾ ಗಂಧಗಳಿಂದ ಮಾಡಿದ ಕುಂಕುಮವನ್ನು ಹಚ್ಚಿಕೊಳ್ಳುತ್ತಾರೆ. ಇದರಿಂದ ಈಕೆಯನ್ನು ವಿಧವೆ ಸ್ತ್ರೀಯೆಂದು ಗುರುತಿಸಬಹುದು. ಎರಡು ಕೈಗಳಿಗೆ ಬೆಳ್ಳಿಯ ಬಳೆಗಳನ್ನು ಹಾಕಿಕೊಳ್ಳುತ್ತಾರೆ. ಮೂಗಿನಲ್ಲಿ ಮೂಗುತಿ ಮಾತ್ರ ಧರಿಸಬಹುದು. ಏಕೆಂದರೆ, ಮೂಗಿನ ಮೂಗುತಿ ತವರು ಮನೆಯಿಂದ ಬಂದ ಉಡುಗೊರೆಯಾಗಿದೆ ಎಂಬ ಅಭಿಪ್ರಾಯ ಈ ಸಮುದಾಯದಲ್ಲಿದೆ. ಕಿವಿಯಾಭರಣವನ್ನು ಧರಿಸುವಂತಿಲ್ಲ. ವಿಧವೆ ಸ್ತ್ರೀಯರು ಯಾವುದೇ ಮುತ್ತೈದೆತನದ ಕಾರ್ಯಕ್ರಮಗಳಲ್ಲಿ ಭಾಗವಹಿಸುವಂತಿಲ್ಲ. ಹಿರಿಯ ವಿಧವೆಯರಾಗಿದ್ದರೆ ದೂರದಲ್ಲಿ ನಿಂತು ಕೆಲವು ಸಲಹೆ ಸೂಚನೆಗಳನ್ನು ನೀಡಬಹುದಾಗಿದೆ.

ಇವರಲ್ಲಿಯೇ ಇನ್ನೊಂದು ಪಂಗಡದ ಗುಂಪು ಕಂಡುಬರುತ್ತಿದ್ದು, ಇವರ ವೇಷ-ಭೂಷಣಗಳಲ್ಲಿ ಎರಡು ಭಿನ್ನ ಪ್ರಕಾರಗಳು ಕಂಡುಬರುತ್ತವೆ. ಇದಕ್ಕೆ ಮುಖ್ಯ ಕಾರಣ ಇವರು ಅಲೆಮಾರಿಗಳಾಗಿರುವುದರಿಂದ ಆಯಾ ಪ್ರದೇಶದ ಪರಿಸರಗಳಲ್ಲಿ ಬಹುದಿನಗಳಿಂದ ನೆಲೆ ನಿಂತುಕೊಂಡು ಅರೆ-ಅಲೆಮಾರಿ ಜೀವನ ನಡೆಸುವವರು ಒಂದು ಪಂಗಡವಾದರೆ ಇನ್ನೊಂದು ಪಂಗಡದ ಗುಂಪು ಸದಾ ಸಂಚಾರಿಗಳಾಗಿ ಎಂದೆಂದಿಗೂ ಒಂದು ಪ್ರದೇಶದಲ್ಲಿ ನೆಲೆ ನಿಲ್ಲದೆ ದೇಶದ ಅನೇಕ ರಾಜ್ಯಗಳ ವಿವಿಧ ಪ್ರದೇಶಗಳಲ್ಲಿ ಸಂಚಾರಿಗಳಾಗಿರುತ್ತಾರೆ. ಹೀಗಾಗಿ ಇವರ ಉಡುಗೆ ತೊಡುಗೆಗಳಲ್ಲಿ ಭಿನ್ನ ಮಾದರಿ ಕಂಡುಬರುತ್ತದೆ. ಯುವತಿಯರು ಲಂಗ, ಕುಪ್ಪಸ, ದಾವಣಿ, ಕಾಲಿನಲ್ಲಿ ಕಡಗ, ಕೊರಳಿನಲ್ಲಿ ರೋಲ್ಡ್‌ಗೋಲ್ಡ್ ಚೈನುಗಳು, ಕೈಯಲ್ಲಿ ಗಾಜಿನ ಬಳೆಗಳೊಂದಿಗೆ ಕರ್ಪೂರದ ಬಳೆಗಳನ್ನು ಧರಿಸುವರು. ಮದುವೆಯಾದ ಸ್ತ್ರೀಯರು ಕಾಲಿನ ಬೆರಳುಗಳಿಗೆ ಕಾಲುಂಗುರ, ಲಂಗದ ಮೇಲೆ ಡಾಬು ಹಾಕಿಕೊಳ್ಳುವರು. ಪುರುಷರ ಉಡುಗೆ ತೊಡುಗೆಯಲ್ಲಿ ಪ್ಯಾಂಟ್, ಶರ್ಟು, ಟೀ ಶರ್ಟ್, ಧೋತಿ, ರುಮಾಲು ಹಾಕಿಕೊಳ್ಳುವುದು ಕಂಡುಬರುತ್ತದೆ. ಇವರು ಕೆಲಸದ ಸಂದರ್ಭದಲ್ಲಿ ಪ್ಯಾಂಟ್ ಧರಿಸಿಯೂ ಕೆಲಸ ಮಾಡುವರು.

೫. ವೈದ್ಯ ಪದ್ಧತಿ

ಶ್ರಮಜೀವಿಗಳಾದ ಘಿಸಾಡಿ ಜನರಿಗೆ ಸಣ್ಣ-ಪುಟ್ಟ ಕಾಯಿಲೆಗಳು ಬಂದರೆ ಯಾವತ್ತೂ ಅಂಜುವುದಿಲ್ಲ. ಇವರಿಗೆ ಯಾವುದಾದರೂ ರೋಗ-ರುಜಿನಗಳು ಬಂದರೆ ವಿವಿಧ ಪ್ರಕಾರದ ವೈದ್ಯ

ವಿಧಾನಗಳಿಂದ ಅವುಗಳನ್ನು ಪರಿಹರಿಸಿಕೊಳ್ಳಲು ಪ್ರಯತ್ನಿಸುತ್ತಾರೆ. ಅವುಗಳೆಂದರೆ,

೧. ಗೃಹ ಔಷಧಿ ಮತ್ತು ನಾಟಿ ವೈದ್ಯರ ಸಂಪರ್ಕ.

೨. ಪರಿಣತ ಡಾಕ್ಟರ್‌ಗಳಿಗೆ ತೋರಿಸುವುದು.

೩. ದೇವರುಗಳಿಗೆ ಮೊರೆ ಹೋಗುವುದು ಹಾಗೂ ಮಾಂತ್ರಿಕರ ನೆರವು.

ಈ ಮೇಲಿನ ವಿವಿಧ ತಂತ್ರಗಳಿಂದ ತಮಗೆ ಬಂದಂತಹ ರೋಗ ನಿವಾರಣೆ ಮಾಡಿಕೊಳ್ಳಲು ಸತತ ಪ್ರಯತ್ನ ಮಾಡುತ್ತಾರೆ.

೧. ಗೃಹ ಔಷಧಿ ಮತ್ತು ನಾಟಿ ಔಷಧಿ

ಘಿಸಾಡಿ ಜನರ ಮನೆಯಲ್ಲಿ ಯಾರಿಗಾದರೂ ಸಣ್ಣಪುಟ್ಟ ಕಾಯಿಲೆಗಳು ಕಾಣಿಸಿಕೊಂಡಾಗ ಮನೆಯಲ್ಲಿಯೇ ಮದ್ದನ್ನು ತಯಾರಿಸಿಕೊಳ್ಳುವರು. ಮನೆಯಲ್ಲಿನ ಹಿರಿಯರಿಗೆ ಗೊತ್ತಿರುವ ಇಲ್ಲವೇ ತಮಗೆ ಗೊತ್ತಿರುವ ನಾಟಿ ವೈದ್ಯರಿಂದ ಔಷಧೋಪಚಾರಗಳಿಂದ ರೋಗವನ್ನು ಗುಣಪಡಿಸಿಕೊಳ್ಳುತ್ತಾರೆ. ನೆಗಡಿ, ಕೆಮ್ಮು, ಜ್ವರ, ತಲೆನೋವು, ಮೈ-ಕೈ ನೋವುಗಳಿಗೆ ತಮ್ಮಲ್ಲಿಯೇ ಮನೆ ಔಷಧವನ್ನು ತಯಾರಿಸುತ್ತಾರೆ. ಉದಾಹರಣೆ:

೧. **ನೆಗಡಿ :** ಶೀತ ಬಂದಾಗ ಬಿಸಿ ಬಿಸಿ ನೀರಿನಲ್ಲಿ ಜಿಂದಾಲ ಎಣ್ಣೆ ಅಥವಾ ಅಮೃತಾಂಜನವನ್ನು ಸ್ವಲ್ಪ ಬೇರಿಸಿ ಮೈತುಂಬಾ ಕಂಬಳಿಯನ್ನು ಇಲ್ಲವೇ ಕೌದಿಯನ್ನು ಹೊದ್ದುಕೊಂಡು ಆ ಬೀಸಿ ನೀರಿನ ಆವಿಯನ್ನು ಉಸಿರಾಟದಿಂದ ತೆಗೆದುಕೊಳ್ಳುತ್ತಾರೆ. ಇದರಿಂದ ಮುಖ ಮತ್ತು ತಲೆಯ ಬೆವರು ಬಿಟ್ಟು ಸ್ವಲ್ಪ ಸ್ವಲ್ಪ ಆರಾಮವಾಗುತ್ತ ಬರುತ್ತದೆ. ಇಲ್ಲವೇ ಬಿಸಿ ಬಿಸಿ ಪಾಯಸ ಕುಡಿಯುತ್ತಾರೆ. ರಾತ್ರಿ ಮಲಗುವಾಗ ಹುರಿಕಡಲೆ (ಪುಟಾಣಿ) ತಿಂದು ನೀರು ಕುಡಿಯದೆ ಮಲಗುತ್ತಾರೆ.

೨. **ತಲೆನೋವು :** ಅರ್ಧತಲೆನೋವು ಬಂದಾಗ ನೋಯುತ್ತಿರುವ ಭಾಗದಲ್ಲಿ ಊದಿನಕಡ್ಡಿಯ ತುದಿಯಿಂದ ಬೆಂಕಿಯಿಂದ ಆ ಭಾಗಕ್ಕೆ ಚುಟಿಕೆಯನ್ನು ಹಾಕುವರು. ಇದರಿಂದ ನೋವು ವಾಸಿಯಾಗುತ್ತದೆ.

೩. **ಕೆಮ್ಮು :** ಕೆಮ್ಮು ಬಂದರೆ ಬೆಳ್ಳುಳ್ಳಿ, ಬೆಲ್ಲ ಸೇರಿಸಿ ರಾತ್ರಿ ಮಲಗುವಾಗ ತಿನ್ನುತ್ತಾರೆ. ಇಲ್ಲವೇ ಬೆಳ್ಳುಳ್ಳಿ ಸಾರು ಮಾಡಿಸಿ ರಾತ್ರಿ ಊಟ ಮಾಡಿ ಮಲಗುತ್ತಾರೆ.

೪. **ಕಣ್ಣು ಬೇನೆ :** ಕಣ್ಣುಬೇನೆ ಬರಬಾರದೆಂದು ಮೂಸಂಬಿ ಸಿಪ್ಪೆಯ ರಸವನ್ನು ಕಣ್ಣಿಗೆ ಹಿಂಡಿಕೊಳ್ಳುತ್ತಾರೆ.

೫. **ಜ್ವರ :** ಜ್ವರ ಬಂದರೆ ರೋಗಿಯನ್ನು ಮಲಗಿಸಿ ಅವನ ಹಣೆಯ ಮೇಲೆ ತಣ್ಣೀರಿನ ಒದ್ದೆ ಬಟ್ಟೆಯನ್ನು ಹಾಕುವರು.

೬. ಕಾಲು-ಕೈಗಳಿಗೆ ಚಿಕ್ಕಪುಟ್ಟ ಗಾಯಗಳಾದರೆ ತಮ್ಮ ಹಿತ್ತಲಿನಲ್ಲಿರುವ ಗಾಯದ ತಪ್ಪಲು ಹಚ್ಚುತ್ತಾರೆ.

೭. ನಾಲಿಗೆ ಕೆಟ್ಟರೆ ಅಥವಾ ಗುಳ್ಳೆಗಳು ಇದ್ದರೆ ಅಂಜುರಿ ಎಲೆಯ ಹಾಲು ಹಚ್ಚುತ್ತಾರೆ.

೮. ಹಾವು, ಚೇಳು ಕಚ್ಚಿದರೆ ನಾಟಿ ವೈದ್ಯರಿಂದ ತಪ್ಪಲು ತೆಗೆದುಕೊಳ್ಳುತ್ತಾರೆ. ಹೀಗೆ ಘಿಸಾಡಿ ಜನರು ತಮ್ಮ ಸುತ್ತ-ಮುತ್ತಲಿರುವ ತಪ್ಪಲು, ಗಿಡಮೂಲಿಕೆಗಳು ಮತ್ತು ಮನೆಯಲ್ಲಿ ಬಳಸುವ ಆಹಾರ ಪದಾರ್ಥಗಳಿಂದ ಔಷಧಯುಕ್ತ ಅಂಶಗಳನ್ನು ತಿಳಿದು ಬಳಸುವುದು ನೇರವಾಗಿ ತಮ್ಮಗೆ ತಿಳಿದಿರುವ ನಾಟಿ ವೈದ್ಯರ ಸಲಹೆ ಸೂಚನೆಗಳನ್ನು ಚಾಚೂ ತಪ್ಪದೆ ಮಾಡಿ ರೋಗರುಜಿನಗಳನ್ನು ಗುಣಪಡಿಸಿಕೊಳ್ಳುತ್ತಾರೆ.

೨. ಪರಿಣತ ವೈದ್ಯರಿಂದ ಚಿಕಿತ್ಸೆ

ಘಿಸಾಡಿ ಸಮುದಾಯದಲ್ಲಿ ಯಾರಿಗಾದರೂ ಗಂಭೀರವಾದ ಕಾಯಿಲೆ ಬಂದರೆ ಅಥವಾ ನಡೆದಾಡಲು ಶಕ್ತಿ ಕಳೆದುಕೊಂಡರೆ ಅಂತಹ ರೋಗಿಯನ್ನು ಸರ್ಕಾರಿ ಇಲ್ಲವೇ ಖಾಸಗಿ ಪರಿಣತ ವೈದ್ಯರಿಂದ ಚಿಕಿತ್ಸೆ ಪಡೆದುಕೊಂಡು, ವೈದ್ಯರ ಸಲಹೆ ಸೂಚನೆಗಳಂತೆ ರೋಗಿಗೆ ಉಪಚಾರ ಮಾಡುತ್ತಾರೆ. ತಮ್ಮ ಸುತ್ತಮುತ್ತಲಿನ ಜನರಿಂದ ಅಥವಾ ವಿದ್ಯಾವಂತ ವ್ಯಕ್ತಿಗಳಿಂದ ಅನುಭವಿಕ ವೈದ್ಯರ ಬಗ್ಗೆ ಕೇಳಿ ತಿಳಿದು ರೋಗಿಯನ್ನು ತೋರಿಸಿ ಚಿಕಿತ್ಸೆಯನ್ನು ಕೊಡಿಸುತ್ತಾರೆ. ಏನೇ ಇದ್ದರು ಇವರು ಹೆಚ್ಚಾಗಿ ಸರ್ಕಾರಿ ಆಸ್ಪತ್ರೆಗಳಲ್ಲಿ ನುರಿತ ವೈದ್ಯರಿಂದಲೇ ರೋಗವನ್ನು ಗುಣಪಡಿಸಿ ಕೊಳ್ಳಲು ಪ್ರಯತ್ನಿಸುತ್ತಾರೆ. ಕಾರಣ ಇವರ ಆರ್ಥಿಕ ಸ್ಥಿತಿ, ಬಡತನದಿಂದ ಕೂಡಿದ್ದು, ಖಾಸಗಿ ಆಸ್ಪತ್ರೆಗಳ ಖರ್ಚುಗಳನ್ನು ನಿಭಾಯಿಸಲು ಇವರಿಗೆ ಅಸಾಧ್ಯವಾದ್ದರಿಂದ ಇವರು ಸರ್ಕಾರಿ ಆಸ್ಪತ್ರೆಗಳನ್ನು ಅವಲಂಬಿಸಿದ್ದಾರೆ.

೩. ದೇವರುಗಳಿಗೆ ಮೊರೆ ಹೋಗುವುದು ಹಾಗೂ ಮಾಂತ್ರಿಕರ ಚಿಕಿತ್ಸೆ

ರೋಗಗಳು ದೇವ-ದೇವತೆಗಳ ಶಾಪ, ದುಷ್ಟಶಕ್ತಿಗಳ ಪೀಡೆ, ದೇವ್ವ ಭೂತಗಳ ಕಾಟ, ಮಾಟಮಂತ್ರ ಹಾಗೂ ಪೂರ್ವಜರ ಅಸಂತೃಪ್ತಿಯಿಂದ ಕಾಣಿಸಿಕೊಳ್ಳುತ್ತವೆಂದು ಅನೇಕ ಘಿಸಾಡಿ ಜನರು ನಂಬಿದ್ದಾರೆ. ಪೂಜೆ ಪುನಸ್ಕಾರ, ವ್ರತ, ಪ್ರಾರ್ಥನೆ, ಹರಕೆಗಳ ಮೂಲಕ ದೇವರು ದೇವತೆಗಳನ್ನು ಆಗಾಗ ತೃಪ್ತಿ ಪಡಿಸದೆ ಹೋದರೆ, ಇಲ್ಲವೆ ಅವರನ್ನು ಮರೆತರೆ ಜೀವಿಗಳ ಮೇಲೆ ಈ ಪ್ರಕಾರದ ಪ್ರಯೋಗ ಮಾಡಿ ಜ್ಞಾಪಿಸಿಕೊಳ್ಳುವಂತೆ ಮಾಡುತ್ತಾರೆಂಬುದು ಘಿಸಾಡಿ ಜನರ ನಂಬಿಕೆಯಾಗಿದೆ. ವ್ಯಕ್ತಿಗೆ ಔಷಧಿಗಳಿಂದ ರೋಗಗಳು ಗುಣವಾಗದಿದ್ದರೆ ಸಾಧು-ಸಂತರ, ಇಲ್ಲವೇ ಮಂತ್ರವಾದಿಗಳ ಬಳಿಗೆ ಹೋಗಿ ಶಕುನ ಕೇಳುತ್ತಾರೆ. ತಮಗೆ ಬಂದಂತಹ ಗಾಳಿಸಂಬಂಧದ ರೋಗಗಳಿಗೆ ಪರಿಹಾರವನ್ನು ಕೇಳುತ್ತಾರೆ. ಮರೆತ ಹರಕೆಗಳನ್ನು ಜ್ಞಾಪಿಸಿಕೊಂಡು ದೇವರಿಗೆ ಹರಕೆಯನ್ನು ಅರ್ಪಿಸುವರು. ಕೆಲವೊಂದು ಸಲ ಮಾಂತ್ರಿಕರು ಕೊಟ್ಟಂತಹ ಬೂದಿಯನ್ನು,

ನಿಂಬೆಹಣ್ಣು, ತಾಯಿತವನ್ನು; ಇಲ್ಲವೇ ಕರಿದಾರವನ್ನು ರಟ್ಟೆ ಅಥವಾ ಕೊರಳಿಗೆ ಕಟ್ಟುತ್ತಾರೆ. ಇದರಿಂದ ರೋಗ ನಿವಾರಣೆಯಾಗುತ್ತದೆಂದು ನಂಬುತ್ತಾರೆ. ಸಾಮಾನ್ಯವಾಗಿ ಗಾಳಿಶಕ, ಭೂತಚೇಷ್ಟೆ, ಪಿಶಾಚಿ, ಪೀಡೆ ಕಾಣಿಸಿಕೊಂಡಾಗ ಮಾಂತ್ರಿಕರು ಇವುಗಳನ್ನು ಕಟ್ಟಿಕೊಳ್ಳಲು ಹೇಳುವರು. ಕೆಲವು ಸಂದರ್ಭದಲ್ಲಿ ಗ್ರಹಗತಿ ನಕ್ಷತ್ರಗಳ ದುಷ್ಪರಿಣಾಮದಿಂದಲೂ ರೋಗ ಕಾಣಿಸಿಕೊಳ್ಳುತ್ತವೆಂದು ನಂಬುತ್ತಾರೆ. ಮನೆಯಲ್ಲಿ ವ್ಯಕ್ತಿಗೆ ಕಾಯಿಲೆ, ಕಾಡಾಟಗಳು ವಿಪರೀತವಾದರೆ ಅದಕ್ಕೆ ಪೂರ್ವಜರ ಅಸಂತೃಪ್ತಿ ಕಾರಣವೆಂದು, ತಮ್ಮ ಪೂರ್ವಜರಿಗೆ ಹಿರಿಯರ ತಿಥಿ, ಪೂಜೆ ಪುನಸ್ಕಾರಗಳನ್ನು ಸಲ್ಲಿಸುವುದರಿಂದ ಪೀಡೆಗಳು ಬರುವುದಿಲ್ಲ ಎಂದು ಭಾವಿಸುತ್ತಾರೆ. ಇವು ಇವರ ನಂಬಿಕೆಯ ವೈದ್ಯ ವಿಧಾನಗಳಾಗಿವೆ ಎಂದು ಹೇಳಬಹುದು.

೬. ವಸತಿ ವ್ಯವಸ್ಥೆ

ಘಿಸಾಡಿ ಜನರು ಯಾವಾಗಲೂ ಪ್ರಕೃತಿಯ ಮಡಿಲಲ್ಲಿ ಬದುಕುವಂತಹ ನಿಸರ್ಗಪ್ರಿಯರು. ಇವರು ತಮ್ಮ ಕಮ್ಮಾರಿಕೆ ಕೆಲಸಗಳನ್ನು ಹುಡುಕಿಕೊಂಡು ಸುಮಾರು ಎರಡು ಅಥವಾ ಮೂರು ಕುಟುಂಬಗಳ ತಂಡ ಸೇರಿ ಒಂದು ಪ್ರಮುಖವಾದ ಊರನ್ನು ಆಯ್ಕೆ ಮಾಡಿಕೊಂಡು ಆ ಊರಿನ ಹೊರಗಡೆಯ ಜನನಿಬಿಡವಾಗಿ ತಿರುಗಾಡುವ ಸಾರ್ವಜನಿಕ ರಸ್ತೆ, ಶಾಲೆ, ಗುಡಿ, ಮಸೀದಿ, ಸರ್ಕಾರಿ ಕಛೇರಿಗಳಿರುವಂತಹ ಕಡೆಗೆ ತಮ್ಮ ಗುಡಾರಗಳನ್ನು ಹಾಕಿಕೊಳ್ಳುತ್ತಾರೆ. ಅಲ್ಲಿ ಸಿಗುವಂತಹ ಕೆಲಸಗಳನ್ನು ನಿರ್ವಹಿಸಿಕೊಂಡು ಹೋಗುತ್ತಾರೆ. ಈ ಗುಡಾರವು ತೀರಾ ಚಿಕ್ಕದಾಗಿದ್ದು ಇದುವೇ ಇವರ ಅರಮನೆಯಾಗಿರುತ್ತದೆ. ಅಂತೆಯೇ ಆರ್.ವಿ. ಎಂತೋನ್ ಅವರು ಇವರ ಗುಡಾರವನ್ನು ಕುರಿತು "Living in temporary sheds called pals formed by fixing two forked poles in the ground. Laying a third pole in the Forks of the two uprights, and stretching a cloth or large blanket over the horizontal pole so as to form a tent with sloping sides and open ends" (Enthoven R.V:1990:3) ವಿವರಣೆ ನೀಡಿದ್ದಾರೆ. ಈ ಗುಡಾರದ ಮಾದರಿ ಹೇಗಿರುತ್ತದೆ ಎಂದರೆ, ಇದು ತ್ರಿಕೋನಾಕಾರದಲ್ಲಿ ರಚನೆಯಾಗಿರುತ್ತದೆ. ಬೇಸಿಗೆ ಇನ್ನಿತರ ಸಂದರ್ಭದಲ್ಲಿ ಆಯಾತಕಾರದಲ್ಲಿ ಅಥವಾ ಚೌಕಕಾರದಲ್ಲಿ ಪ್ಲಾಸ್ಟಿಕ್‌ಗಳಿಂದ ರಚನೆ ಮಾಡಿರುತ್ತಾರೆ. ತ್ರಿಕೋನಾಕಾರದ ಗುಡಾರ ಹಾಕಿಕೊಳ್ಳುವಾಗ ಮೊದಲು ನೇರವಾಗಿ ಎರಡು ಬಿದರಿನ ಅಥವಾ ಕಬ್ಬಿಣದ ಕೋಲಿನ ಕಂಬಗಳು ನೆಲದಲ್ಲಿ ಅಗೆದು ಹಾಕಿರುತ್ತಾರೆ. ಈ ಎರಡು ಕಂಬಗಳ ಮೇಲೆ ಅಡ್ಡವಾಗಿ ಒಂದು ಉದ್ದನೆಯ ಕೋಲು ಹಾಕುತ್ತಾರೆ. ಈ ಕೋಲುಗಳ ಮೇಲೆ ತಮ್ಮಲ್ಲಿರುವಂತಹ ದೊಡ್ಡ ಪ್ಲಾಸ್ಟಿಕ್‌ನಿಂದ ಹೊದಿಕೆ ಮಾಡಿ ಆ ಹೊದಿಕೆಗೆ ಅಲ್ಲಲ್ಲಿ ದಪ್ಪನೆಯ ಹಗ್ಗಗಳನ್ನು ಕಟ್ಟುತ್ತಾರೆ. ತಮಗೆ ಬೇಕಾಗುವಷ್ಟು ಸ್ಥಳಾವಕಾಶ ಮಾಡಿಕೊಂಡು, ಸುತ್ತಲು ನೆಲದಲ್ಲಿ ಕಬ್ಬಿಣದ ಉದ್ದನೆಯ ಮೊಳೆಗಳನ್ನು ಜಡಿದು ಬಿಡುತ್ತಾರೆ. ಆಗ ಆ ಕಂಬಗಳ ಮೇಲೆ ಹೊದಿಸಿರುವ ಪ್ಲಾಸ್ಟಿಕ್‌ಗೆ ಕಟ್ಟಿದ ದಪ್ಪನೆಯ ಹಗ್ಗಗಳನ್ನು ಆ ನೆಲದಲ್ಲಿ ಜಡಿದ ಕಬ್ಬಿಣದ ಮಳೆಗಳಿಗೆ ಹೊಂದಿಸಿ ಕಟ್ಟುತ್ತಾರೆ. ಇವು ಎಷ್ಟೇ


ಮಳೆ-ಗಾಳಿ ಬಂದರೂ ಬಿಗಿಯಾಗಿ ಹಿಡಿದುಕೊಂಡಿರುತ್ತವೆ. ಈ ಗುಡಾರಗಳಲ್ಲಿಯೇ ಒಂದು ತೆಳ್ಳಗಿನ ಕೋಲನ್ನು ಕಟ್ಟಿರುತ್ತಾರೆ. ಈ ಕೋಲಿಗೆ ಇವರು ಧರಿಸುವ ಬಟ್ಟೆಬರೆಗಳನ್ನು ಹಾಕುತ್ತಾರೆ. ಚಿಕ್ಕ ತೊಟ್ಟಿಲಲ್ಲಿ ಆಟವಾಡುವ ಮಕ್ಕಳಿದ್ದರೆ ಗುಡಾರದ ಕೋಲಿಗೆ ಸೀರೆಯಿಂದ ಮಾಡಿದ ತೊಟ್ಟಿಲು ಕಟ್ಟುತ್ತಾರೆ. ಒಂದು ಮೂಲೆಯಲ್ಲಿ ತಮ್ಮ ಮನೆತನದ ದೇವರನ್ನು ಇಡಲು ಚಿಕ್ಕ ಜಗುಲಿಯನ್ನು ಗುಡಿಯ ಆಕಾರದಲ್ಲಿ ಕಟ್ಟಿರುತ್ತಾರೆ.

ಈ ಪುಟ್ಟ ಗುಡಾರದಲ್ಲಿಯೇ ಅಡುಗೆ ಮಾಡುವ ಪಾತ್ರೆಗಳು, ಗೃಹಬಳಕೆ ವಸ್ತುಗಳು, ಕೆಲಸದ ಸಾಮಗ್ರಿಗಳನ್ನು ಇಟ್ಟುಕೊಳ್ಳುವರು. ತಮ್ಮ ಗುಡಾರದ ಮುಂದಿನ ಅಂಗಳದಲ್ಲಿ ಕುಲುಮೆ ಅಥವಾ ಕುಲುಮೆಯ ಚಕ್ರ ಇಟ್ಟಿರುತ್ತಾರೆ. ಇಲ್ಲಿಯೇ ಕುಳಿತುಕೊಂಡು ಕಮ್ಮಾರಿಕೆ ಕೆಲಸ ಮಾಡುವುದರಿಂದ ಇದಿಷ್ಟು ಕೆಲಸ ಮಾಡುವ ಪ್ರದೇಶಕ್ಕೆ ಆಯತಕಾರದಲ್ಲಿ ಕಂಬಗಳನ್ನು ಹಾಕಿ ಅದರ ಮೇಲೆ ಪ್ಲಾಸ್ಟಿಕ್ ಹೊದಿಕೆ ಹಾಕಿ ನೆರಳು ಮಾಡಿರುತ್ತಾರೆ. ತಮ್ಮ ಗುಡಾರದ ಪಕ್ಕದಲ್ಲಿ ಸ್ಥಳಾವಕಾಶ ಮಾಡಿಕೊಂಡು ಒಲೆಗಳನ್ನು ಊದಿಕೊಂಡು ಅಡುಗೆ ಮಾಡುತ್ತಾರೆ. ಗುಡಾರದ ಹಿಂದಿನ ಭಾಗದಲ್ಲಿ ತಡಿಕೆಯಿಂದ ಇಲ್ಲವೇ ಹಳೆಯ ಚೀಲಗಳಿಂದ ಸ್ವಲ್ಪ ಮರೆಯಾಗುವ ರೀತಿಯಲ್ಲಿ ಬಚ್ಚಲನ್ನು ಮಾಡಿಕೊಂಡಿರುತ್ತಾರೆ. ಬೇಸಿಗೆ ಕಾಲದಲ್ಲಿ ಅಥವಾ ಮಂಗಳ ಕಾರ್ಯಗಳು ನಡೆಯುವ ಸಂದರ್ಭಗಳಲ್ಲಿ ತಮಗೆ ಬೇಕಾಗುವ ಮಾದರಿಯಲ್ಲಿ ಗುಡಾರಗಳನ್ನು ಆಯಾತಕಾರದಲ್ಲಿ ಚೌಕಕಾರ ದಲ್ಲಿ, ರಚನೆ ಮಾಡಿಕೊಳ್ಳುವರು.

ಗುಡಾರ ಚಿತ್ರ - ೧



ಗುಡಾರ ಚಿತ್ರ - ೨



ಬಿ. ಕುಲ(ಜಾತಿ) - ಪಂಚಾಯ್ತಿ

ಪ್ರಪಂಚದಲ್ಲಿನ ಪ್ರತಿಯೊಂದು ಬುಡಕಟ್ಟು ಸಮುದಾಯಗಳು ತಮ್ಮದೇ ಆದಂತಹ ಸಾಮಾಜಿಕ, ಧಾರ್ಮಿಕ, ಸಾಂಪ್ರದಾಯಿಕ ಮತ್ತು ನೈತಿಕ ನಿಯಮಗಳ ಹಿನ್ನೆಲೆಯಲ್ಲಿ ಕ್ರಮಬದ್ಧವಾದ ಅಥವಾ ನಿಯಮಬದ್ಧವಾದ ನಿಯಂತ್ರಣಗಳ ಅನುಸರಣೆಗಳೊಂದಿಗೆ ಅವಲಂಬಿತವಾದ ಅಧಿಕಾರವನ್ನು ಚಲಾಯಿಸುವ ಹಕ್ಕು ಪಡೆದುಕೊಂಡಿರುತ್ತದೆ. ಅದು ಸಾಮಾಜಿಕವಾಗಿ ಬುದ್ಧಿವಂತರಿಂದ ಕೂಡಿದ ಹಿರಿಯರ ಅಭಿಪ್ರಾಯಗಳೊಂದಿಗೆ ಮತ್ತು ತಮ್ಮ ಸಮುದಾಯದ ನಾಯಕ ಮುಖ್ಯಸ್ಥನ ನಿರ್ಣಯ ಗಳೊಂದಿಗೆ ನ್ಯಾಯ ನಿರ್ಣಯ ಕೈಗೊಳ್ಳುವ ಅಧಿಕಾರವನ್ನು ಪ್ರತಿಯೊಂದು ಬುಡಕಟ್ಟು ಸಮುದಾಯಗಳು ಪಾಲಿಸುತ್ತವೆ.



ಬುಡಕಟ್ಟು ಸಮುದಾಯಗಳಲ್ಲಿ ನ್ಯಾಯದ ಮುಂದೆ ಎಲ್ಲರೂ ಸರಿಸಮಾನರು ಎಂಬ ಕಲ್ಪನೆ ಸ್ಪಷ್ಟವಾಗಿದೆ. ಇವರ ನ್ಯಾಯ ನಿರ್ಣಯಗಳು ತಮ್ಮ ಸಮುದಾಯದ ಎಲ್ಲರಿಗೂ ಸರಳವಾಗಿ ಮತ್ತು ಸುಲಭವಾಗಿ ಅರ್ಥಮಾಡಿಕೊಳ್ಳುವಂತೆ ಇರುತ್ತವೆ. ಹಾಗೂ ತನ್ನ ವ್ಯಾಪ್ತಿಯಲ್ಲಿ ವಾಸಿಸುವ ಜನರ ಮೇಲೆ ಸಂಪೂರ್ಣ ಹತೋಟಿಯನ್ನು ಹೊಂದಿರುತ್ತದೆ. ಅಲ್ಲದೆ ಪ್ರತಿಯೊಬ್ಬ ವ್ಯಕ್ತಿಯ ನಡವಳಿಕೆಗಳು ತಮ್ಮ ಸಮುದಾಯದ ರೀತಿ-ನೀತಿಗಳಿಗನುಗುಣವಾಗಿ, ಆದರ್ಶಪ್ರಾಯವಾಗಿ ಜೀವನ ನಡೆಸುವಂತೆ ಇರುತ್ತದೆ. ಇವರಲ್ಲಿ ಬಹುತೇಕ ಎಲ್ಲರೂ ಪರಿಚಿತರಿರುವುದರಿಂದ ಧರ್ಮ, ಅಧರ್ಮ, ಸರಿ-ತಪ್ಪು ಇತ್ಯಾದಿಗಳ ಬಗ್ಗೆ ಪ್ರತಿಯೊಬ್ಬ ವ್ಯಕ್ತಿಯಲ್ಲೂ ಸ್ಪಷ್ಟವಾದ ನಂಬಿಕೆಗಳು ಇರುತ್ತವೆ. ಹೀಗಾಗಿ ಇವರಲ್ಲಿ ಹಿರಿಯರು ಅಥವಾ ನಾಯಕ ಕೊಡುವ ತೀರ್ಪುಗಳಿಗೆ ಮನ್ನಣೆ ಇರುವುದರಿಂದ ಯಾರೂ ಅದನ್ನು ಮೀರಿ ನಡೆಯಲು ಬಯಸವುದಿಲ್ಲ. ತಪ್ಪಿತಸ್ಥನು ಇಡೀ ಕುಲ ಸಮೂಹದ ಟೀಕೆಗಳಿಗೆ ಗುರಿಯಾಗುತ್ತಾನೆ.

ಬಹುತೇಕ ಬುಡಕಟ್ಟು ಸಮುದಾಯಗಳಲ್ಲಿ ಮುಖಂಡನಾದವನಿಗೆ ಸರ್ವಾಧಿಕಾರದಿಂದ ಮೆರೆಯಲು ಅವಕಾಶವಿರುವುದಿಲ್ಲ. ಏಕೆಂದರೆ ಆತ ತಮ್ಮ ಸಮುದಾಯದವನೆ ಆಗಿರುವುದರಿಂದ ತಮ್ಮ ಜನಾಂಗದ ಹಿತ ಕಾಪಾಡಿಕೊಂಡು ಹೋಗುವ ಜವಾಬ್ದಾರಿಯನ್ನು ಹೊಂದಿರುತ್ತದೆ. ಅಲ್ಲದೆ ವ್ಯಾಜ್ಯ ತಕರಾರುಗಳನ್ನು ಬಗೆಹರಿಸುವಾಗ ಸಾಮೂಹಿಕ ಚರ್ಚೆಗಳೊಂದಿಗೆ ನ್ಯಾಯ ನಿರ್ಣಯಗಳನ್ನು ಕೈಗೊಳ್ಳುವುದರಿಂದ ನಿಷ್ಪಕ್ಷಪಾತವಾದ ನಿರ್ಣಯಗಳು ಬುಡಕಟ್ಟು ಸಮುದಾಯಗಳಲ್ಲಿ ಕಂಡುಬರುತ್ತವೆ.

ಬುಡಕಟ್ಟು ಸಮುದಾಯದ ಪರಿಕಲ್ಪನೆಯಲ್ಲಿರುವ ಫಿಸಾಡಿ ಜನಸಮುದಾಯದಲ್ಲಿಯೂ ತಮ್ಮದೆ ಆದಂತಹ ಕುಲಪಂಚಾಯ್ತಿ ವ್ಯವಸ್ಥೆಯನ್ನು ಹೊಂದಿದ್ದಾರೆ ಎಂಬುದು ಕ್ಷೇತ್ರಕಾರ್ಯದಿಂದ ತಿಳಿದುಬರುತ್ತದೆ. ತಮ್ಮ ಸಮಾಜದ ಯಾವುದೇ ಬಗೆಯ ಆಂತರಿಕ ವ್ಯಾಜ್ಯ ವ್ಯವಹಾರಗಳು ಮತ್ತು ಸಮಸ್ಯೆ, ವಿವಾದಗಳನ್ನು ಹೊರಬಿಡದೆ ತಮ್ಮದೇ ನ್ಯಾಯ ಪಂಚಾಯ್ತಿಯಲ್ಲಿ ಅವುಗಳನ್ನು ಪರಿಹರಿಸಿಕೊಳ್ಳುತ್ತಾರೆ. ಇವರಲ್ಲಿ ಪ್ರತಿಯೊಬ್ಬರು ಸಮಾಜದ ಕಟ್ಟುಪಾಡುಗಳನ್ನು ಪಾಲಿಸಿಕೊಂಡು ಹೋಗುವ ಮನೋಭಾವನೆಯನ್ನು ಹೊಂದಿದ್ದಾರೆ. "ಗಂಡಿಗೆ ಕಳವು ಹೀನ, ಹೆಣ್ಣಿಗೆ ಹಾದರ ಹೀನ" ಎಂಬ ಜನಪದ ಅನುಭವದ ನುಡಿಯನ್ನು ಸ್ತ್ರೀಯರು ಮತ್ತು ಪುರುಷರು ಚೆನ್ನಾಗಿ ಅರಿತುಕೊಂಡು ಬಾಳುವವರಾಗಿದ್ದು, ತಮ್ಮ ಸಾಮಾಜಿಕ ಬದುಕಿನಲ್ಲಿ ಸ್ವಲ್ಪ ಅಸ್ತವ್ಯಸ್ತವಾದರೂ ಇವರು ತಮ್ಮ ಸಾಮಾಜಿಕ ವ್ಯವಸ್ಥೆ ಒಳಾಡಳಿತ ಮತ್ತು ಸಂಪ್ರದಾಯ ರೀತಿ-ನೀತಿ, ಕಟ್ಟುಪಾಡುಗಳನ್ನು ತುಂಬಾ ಕಟ್ಟುನಿಟ್ಟಾಗಿ ಕಾಪಾಡಿಕೊಂಡು ಬರುವುದರೊಂದಿಗೆ ಅವುಗಳನ್ನು ಪಾಲಿಸಿಕೊಂಡು ಹೋಗುತ್ತಾರೆ.

ಇವರಿಗೆ ಪ್ರಾಣಕ್ಕಿಂತ ಮಾನವೇ ಮುಖ್ಯವಾಗಿದ್ದು ತಮ್ಮ ಸಮಾಜದಲ್ಲಿ ಅನೈತಿಕತೆ, ಅವ್ಯವಹಾರ, ಅನ್ಯಾಯಗಳು ನಡೆಯದಂತೆ ಎಚ್ಚರ ವಹಿಸುತ್ತಾರೆ. ಇವರು ಸಾಮಾಜಿಕ ಬಂಧನದ

ರೀತಿ-ನೀತಿಗಳನ್ನು ಉಲ್ಲಂಘಿಸಿದವರ ಮೇಲೆ ಕಠಿಣ ಕ್ರಮ ಜರುಗಿಸುವುದರ ಮೂಲಕ, ತಮ್ಮ ಜನ ಸಮುದಾಯದ ಮೇಲೆ ಹಿಡಿತವನ್ನಿಟ್ಟುಕೊಂಡಿರುತ್ತಾರೆ. ಇವರಲ್ಲಿ ಕುಲಕ್ಕೆ ಮೀರಿದವರನ್ನು ಕುಲದಿಂದ ಬಹಿಷ್ಕರಿಸುವ ಬೆದರಿಕೆಯನ್ನಿಟ್ಟಿರುವುದರಿಂದ ಪ್ರತಿಯೊಬ್ಬ ಘಿಸಾಡಿ ಸಮುದಾಯದ ವ್ಯಕ್ತಿ ತಮ್ಮ ಸಾಮಾಜಿಕ ಕಟ್ಟು-ಪಾಡುಗಳಿಗೆ ತಲೆಬಾಗಿ ನಡೆಯುವುದರ ಮೂಲಕ ತಮ್ಮ ಸಮುದಾಯದಲ್ಲಿ ಶಾಂತಿ ಸುವ್ಯವಸ್ಥೆಯನ್ನು ಕಾಪಾಡಿಕೊಂಡು ಹೋಗುತ್ತಾರೆ.

೭. ಕುಲಪಂಚಾಯ್ತಿಯ ರಚನೆ

ಘಿಸಾಡಿ ಜನರು ತಮ್ಮ ಸಮುದಾಯದ ಕುಲ ಪಂಚಾಯ್ತಿಯನ್ನು ರಚನೆ ಮಾಡಿಕೊಂಡಿದ್ದು ಆ ಕುಲಪಂಚಾಯ್ತಿಯನ್ನು ***ಚಿತ್ತೋರಿ ರಜಪುತ ಗಾಡಿ ಲೋಹಾರ ಸಭಾ ಅಥವಾ ಘಿಸಾಡಿ ಲೋಹಾರ ಸಭಾ*** ಎಂದು ಕರೆದುಕೊಳ್ಳುವರು. ಇವರಲ್ಲಿ ಉದ್ಭವಿಸುವ ಯಾವುದೇ ಸಮಸ್ಯೆಗಳನ್ನು ಎಂತಹ ಪ್ರಸಂಗದಲ್ಲಿಯೂ ಅನ್ಯ ಸಮಾಜದವರಿಗೆ ತಿಳಿಯಪಡಿಸುವುದಿಲ್ಲ. ಇವರು ಯಾವುದೇ ವಿಷಯಗಳಿರಲಿ ತಮ್ಮ ಘಿಸಾಡಿ ಲೋಹಾರ ಸಭಾದ ಮೂಲಕ ಬಗೆಹರಿಸಿಕೊಳ್ಳುವ ವಿವೇಕಶಾಲಿಗಳಾಗಿದ್ದಾರೆ. ಇವರು ಸಾಮಾನ್ಯವಾಗಿ ತಾವು ನೆಲೆಸಿರುವ ಊರುಗಳಲ್ಲಿನ ಪ್ರಶಾಂತವಾದ ದೇವಸ್ಥಾನಗಳಲ್ಲಿ, ಇಲ್ಲವೆ ವಿಶಾಲವಾದ ಬಯಲು ಪ್ರದೇಶದಲ್ಲಿರುವ ದೊಡ್ಡ ಮರಗಳ ನೆರಳಿನಲ್ಲಿ, ಇವರ ಕುಲದೇವಿ ಅಂಬಾಭವಾನಿ ಮಂದಿರಗಳಲ್ಲಿ ಅಥವಾ ಸಮಸ್ಯೆ ಬಗೆಹರಿಸಿಕೊಳ್ಳುವವರ ಮನೆಗಳಲ್ಲಿ, ಇಲ್ಲವೇ ತಮ್ಮ ಸಮುದಾಯದ ಪ್ರಮುಖ ವ್ಯಕ್ತಿಗಳ ಮನೆಗಳಲ್ಲಿ ನ್ಯಾಯ-ನಿರ್ಣಯವನ್ನು ಮಾಡುತ್ತಾರೆ.

ಸಮಸ್ಯೆಯು ತೀರಾ ಗಂಭೀರವಾಗಿದ್ದಾಗ ಯಾರಿಗೂ ತೊಂದರೆಯಾಗಬಾರದೆಂದು ಭಾವಿಸಿ, ಪ್ರಶಾಂತವಾದ ಪ್ರಮುಖ ಸ್ಥಳವನ್ನೇ ಆಯ್ಕೆ ಮಾಡಿಕೊಂಡು ನ್ಯಾಯಪಂಚಾಯ್ತಿ ಸೇರುತ್ತಾರೆ. ಹೀಗೆ ಸೇರಿದ ಸಭೆಯನ್ನು ಇವರು ತುಂಬಾ ಗೌರವಿಸುತ್ತಾರೆ. ನ್ಯಾಯಾಲಯಕ್ಕೆ ಇರುವ ಸರ್ವರೀತಿಯ ಗೌರವ, ಮಾನ್ಯತೆಗಳು ಈ ಘಿಸಾಡಿ ಲೋಹಾರ ಸಭೆಗೆ ಇರುತ್ತದೆ. ಈ ಸಭೆಯಲ್ಲಿ ನ್ಯಾಯ ತೀರ್ಮಾನ ಮಾಡಲು ತಮ್ಮ ಸಮುದಾಯದ ಹಿರಿಯ ವ್ಯಕ್ತಿಯನ್ನು ಮುಖ್ಯಸ್ಥನನ್ನಾಗಿ ನಿಯಮಿಸಿರುತ್ತಾರೆ. ಸಮುದಾಯದವರು ಈ ವ್ಯಕ್ತಿಗೆ 'ಪುಡಾರಿ' ಎಂದು ಕರೆಯುತ್ತಾರೆ.

ಇವರ ನ್ಯಾಯ ಪಂಚಾಯ್ತಿ ಸಂದರ್ಭದಲ್ಲಿ ಯಾವುದಾದರೂ ಮೂರು ಬೆಡಗಿನ ಮುಖ್ಯಸ್ಥರನ್ನು ಕರೆಸಲೇಬೇಕಾಗುತ್ತದೆ. ಪಂಚಾಯಿತಿ ಸಂದರ್ಭದಲ್ಲಿ ವೃತ್ತಾಕಾರದಲ್ಲಿ ಸಭೆ ಸೇರಿರುತ್ತಾರೆ. ವೃತ್ತಾಕಾರದ ಮೊದಲ ಸರದಿಯಲ್ಲಿ ಮುಖ್ಯಸ್ಥನೊಂದಿಗೆ ಸಮುದಾಯದ ಇನ್ನಿತರ ಪ್ರಮುಖ ಹಿರಿಯರು ಕುಳಿತುಕೊಂಡಿರುತ್ತಾರೆ. ಎರಡನೆಯ ಸರದಿಯಲ್ಲಿ ತಮ್ಮ ಸಮುದಾಯದ ಸಾರ್ವಜನಿಕರು, ಆರೋಪಿಗಳು ಮತ್ತು ಹಿರಿಯ ಮಹಿಳೆಯರು ಕುಳಿತುಕೊಂಡಿರುತ್ತಾರೆ. ಇವರ ಈ ಸಭೆಯಲ್ಲಿ ತಮ್ಮ ಸಮುದಾಯದ ಸರ್ವರಿಗೂ ನ್ಯಾಯ ಸ್ಥಾನದಲ್ಲಿ ಪ್ರವೇಶವಿದ್ದು, ವಿವಾಹಿತ ಪುರುಷರಿಗೆ ಹೆಚ್ಚಿನ ನಿರ್ಬಂಧಗಳಿರುವುದಿಲ್ಲ. ಹಿರಿಯ ಮಹಿಳೆಯರು ಚರ್ಚೆಯಲ್ಲಿ ಪಾಲ್ಗೊಳ್ಳಲು ಅವಕಾಶ

ವಿರುತ್ತದೆ. ಆದರೆ ಕಿರಿಯ ಮಹಿಳೆಯರಿಗೆ ಪ್ರವೇಶವಿರುವುದಿಲ್ಲ. ಒಂದು ವೇಳೆ ವಾದಿ-ಪ್ರತಿವಾದಿ, ಸಾಕ್ಷಿದಾರ ಇಲ್ಲವೇ ಆರೋಪಿಗಳಾಗಿದ್ದರೆ ಮಾತ್ರ ಕಿರಿಯ ಮಹಿಳೆಯರನ್ನು ನ್ಯಾಯ ಸ್ಥಾನಕ್ಕೆ ಕರೆಸಲಾಗುತ್ತದೆ. ವಾದಿ-ಪ್ರತಿವಾದಿಗಳನ್ನೊಳಗೊಂಡಂತೆ ಅಲ್ಲಿ ನಡೆಯುವ ಚರ್ಚೆಯನ್ನು ಎಲ್ಲರೂ ಕೇಳಬಹುದಾಗಿದ್ದು ಅವಶ್ಯವಿದ್ದಲ್ಲಿ ಸಮಯೋಚಿತವಾಗಿದ್ದರೆ ಸಲಹೆ ಸೂಚನೆಗಳನ್ನು ನೀಡಬಹುದು. ಸಮುದಾಯದಲ್ಲಿನ ಇಬ್ಬರು ವ್ಯಕ್ತಿಗಳ ನಡುವೆ ಯಾವುದೇ ಭಿನ್ನಾಭಿಪ್ರಾಯ ಬಂದಾಗ, ಈ ವ್ಯಕ್ತಿಗಳು ತಮ್ಮ ಭಿನ್ನಾಭಿಪ್ರಾಯಗಳನ್ನು ಮುಖ್ಯಸ್ಥನ ಮುಂದೆ ಹೇಳುವಾಗ, ಇವರಿಬ್ಬರು ಪ್ರತ್ಯೇಕವಾಗಿ ಸಮುದಾಯದವರು ನಿಗದಿಪಡಿಸಿದ ಕನಿಷ್ಠ ದಂಡದ ಮೊತ್ತದ ಠೇವಣಿಯನ್ನು ಇಡಬೇಕಾಗುತ್ತದೆ. ಈ ಠೇವಣಿಯು ಸುಮಾರು ೧೦ ರೂ.ಗಳಿಂದ ೧೦೦ ರೂಪಾಯಿಗಳವರೆಗೆ ನಿಗದಿಪಡಿಸಲಾಗುತ್ತದೆ. ತಮ್ಮ ನಿಗದಿತ ಠೇವಣಿಯನ್ನು ಕೊಟ್ಟ ಬಳಿಕ ಸಮಸ್ಯೆಗಳನ್ನು ಹೇಳುತ್ತಾರೆ. ಆಗ ಮುಖ್ಯಸ್ಥನು "ನನ್ನ ಮಾತಿಗೆ ಬೆಲೆ ಕೊಟ್ಟರೆ ಮಾತ್ರ ನಿಮ್ಮಿಬ್ಬರ ಠೇವಣಿ ಹಣವನ್ನು ಮುಟ್ಟುತ್ತೇನೆ ಹಾಗೂ ನ್ಯಾಯ ತೀರ್ಮಾನ ಮಾಡುತ್ತೇನೆ" ಎಂದು ಹೇಳುತ್ತಾನೆ. ಆಗ ವ್ಯಾಜ್ಯ ಹೂಡಿದ ವ್ಯಕ್ತಿಗಳು ಒಪ್ಪಿಕೊಂಡ ಮೇಲೆ ಸಮಸ್ಯೆಯನ್ನು ಎಲ್ಲ ಮಗ್ಗಲುಗಳಿಂದ ಚರ್ಚಿಸಿ ನಂತರ ನ್ಯಾಯ-ತೀರ್ಮಾನ ಮಾಡಲಾಗುತ್ತದೆ. ನ್ಯಾಯ ತೀರ್ಮಾನವಾದ ಮೇಲೆ ಇವರಿಬ್ಬರು ಠೇವಣಿಯಾಗಿ ಕೊಟ್ಟಿರುವ ಹಣದಿಂದ ಚಹಾ ತರಿಸಿ ಕುಡಿಯುತ್ತಾರೆ. ಒಂದು ವೇಳೆ ನ್ಯಾಯ ತೀರ್ಮಾನವಾಗದೆ ಹೋದರೆ ಇವರಿಬ್ಬರ ಹಣವನ್ನು ಅವರವರಿಗೆ ವಾಪಸ್ ನೀಡಲಾಗುತ್ತದೆ.

ಈ ಇಬ್ಬರು ವ್ಯಕ್ತಿಗಳು ಬಹಳ ಕಠೋರವಾಗಿದ್ದು ಸಮಸ್ಯೆಯು ತೀರಾ ಗಂಭೀರವಾಗಿದ್ದರೆ ಇಂಥವರ ನ್ಯಾಯಗಳು ವಾರಗಟ್ಟಲೆ ನಡೆಯುತ್ತವೆ. ಆಗ ಇಂಥವರ ಮೇಲೆ ಹೆಚ್ಚಿನ ಪ್ರಮಾಣದ ದಂಡ ಮತ್ತು ಇವರ ಮನೆಯಲ್ಲಿ ಮಗು ಜನಿಸಿದಾಗ ಕೊಬ್ಬರಿ ಮತ್ತು ಅಜವಾನ ಬೆಲ್ಲದಿಂದ ಮಿಶ್ರಣ ಮಾಡಿದ ರಸವನ್ನು ಸವಿಯಲು ಯಾರೂ ಬರುವುದಿಲ್ಲ. ಇದು ಇವರ ಸಮುದಾಯದಲ್ಲಿ ಬಹುಮುಖ್ಯವಾದ ಸಂಪ್ರದಾಯವಾಗಿರುತ್ತದೆ. ಕೆಲವೊಂದು ಸಲ ತಪ್ಪಿತಸ್ಥ ವ್ಯಕ್ತಿಗಳಿಗೆ ಸಮುದಾಯದ ಮುಖ್ಯಸ್ಥ ಮತ್ತು ಹಿರಿಯರು ಸೇರಿ ಮಾಂಸದ ಊಟದ ದಂಡವನ್ನು ಕೂಡಾ ಹಾಕಲಾಗುತ್ತದೆ.

೮. ಮುಖ್ಯಸ್ಥನ ಕಾರ್ಯಗಳು

ಛಿಸಾಡಿ ಜನ ಸಮುದಾಯವು ವಿವಿಧ ಪ್ರದೇಶಗಳಲ್ಲಿ ನೆಲೆಸಿರುವುದರಿಂದ ಆಯಾ ನಿಗದಿತ ಪ್ರದೇಶದಲ್ಲಿ ನೆಲೆಸಿರುವಂತಹ ಹಿರಿಯ, ಅನುಭವಿಕ, ಬುದ್ಧಿವಂತ, ಧೈರ್ಯಶಾಲಿಯಾಗಿರುವಂತಹ ವ್ಯಕ್ತಿಗಳನ್ನು ತಮ್ಮ ಸಮುದಾಯದ ನಾಯಕ(ಮುಖ್ಯಸ್ಥನ)ನ್ನಾಗಿ ಆಯ್ಕೆ ಮಾಡಿಕೊಂಡಿರುತ್ತಾರೆ. ಪ್ರಮುಖವಾದ ವ್ಯವಹಾರಗಳೆಲ್ಲವು ಮುಖ್ಯಸ್ಥನ ಆಜ್ಞಾನುಸಾರವೇ ನಡೆಯುತ್ತಿರುತ್ತದೆ. ಆಂತರಿಕ ಹಾಗೂ ಬಾಹ್ಯ ವ್ಯವಹಾರಗಳನ್ನು ಬಹಳ ಸೂಕ್ಷ್ಮವಾಗಿ ಹಾಗೂ ವಿವೇಕಪೂರ್ವಕವಾದ ವಿವೇಚನೆಯಿಂದ ನಿಭಾಯಿಸುತ್ತಾನೆ. ಸಮಾಜದ ಯಾವುದೇ ಕಾರ್ಯಕಲಾಪಗಳು ನಡೆದಾಗ ನಾಯಕನು

ಹೇಳಿದ ಕೆಲಸ ಕಾರ್ಯಗಳಿಗೆ ಯಾರನ್ನು ಕರೆಯುತ್ತಾನೋ ಅವರು ಬಂದು ಆತ್ಮೀಯವಾಗಿ ಸಹಾಯ, ಸಹಕಾರ, ನೀಡಬೇಕಾಗುತ್ತದೆ. ಮುಖ್ಯಸ್ಥನ ಆಜ್ಞೆಗಳನ್ನು ಯಾರೂ ಮೀರುವಂತಿಲ್ಲ. ಹಿರಿಯರು ಅಥವಾ ದೈವದರು ಸಾಮಾನ್ಯವಾಗಿ ನ್ಯಾಯ ನಿರ್ಣಯವಾಗುವಲ್ಲಿ ತಮ್ಮ ತಮ್ಮ ಅಭಿಪ್ರಾಯಗಳನ್ನು ಮಂಡಿಸಿ ನಾಯಕನಿಗೆ ನೆರವನ್ನು ಸಲ್ಲಿಸುತ್ತಾರೆ. ನ್ಯಾಯ ಸ್ಥಾನದಲ್ಲಿ ಈ ಹಿರಿಯರ ಅಭಿಪ್ರಾಯಗಳನ್ನು ಕೇಳಿದ ಮೇಲೆಯೇ ನಾಯಕನು ಅಂತಿಮ ತೀರ್ಪು ನೀಡುತ್ತಾನೆ. ಆದರೂ ಕೆಲವು ಸಂದರ್ಭಗಳಲ್ಲಿ ಸಮಸ್ಯೆಯು ತೀರಾ ಬಿಗುವಿನಿಂದ ಕೂಡಿದ್ದರೆ ಅಥವಾ ಇತ್ಯರ್ಥ ವಾಗದಿರುವಾಗ ನ್ಯಾಯ ನಿರ್ಣಯಕ್ಕಾಗಿ ತಾವು ನೆಲೆಸಿರುವಂತಹ ಇತರೆ ಪ್ರದೇಶದ ಹಿರಿಯ ಮುಖ್ಯಸ್ಥರನ್ನು ಕರೆಸಲಾಗುತ್ತದೆ. ಈ ದೂತನು ಸಭೆ ಸೇರುವ ಸ್ಥಳ, ಊರು, ದಿನ ಹಾಗೂ ಸಮಯವನ್ನು ಅವರಿಗೆ ತಿಳಿಸಿಬರುತ್ತಾನೆ. ಹೀಗೆ ತಮ್ಮ ಸುತ್ತಲಿನ ಪ್ರದೇಶದಲ್ಲಿ ನೆಲೆಸಿರುವಂತಹ ಪ್ರಮುಖ ನಾಯಕರು ನಿಗದಿಪಡಿಸಿದ ಸಭೆಗೆ ಹಾಜರಾಗಿ ವಿಷಯವನ್ನು ಗಂಭೀರವಾಗಿ ಚರ್ಚಿಸಿ ಯೋಗ್ಯವಾದ ನ್ಯಾಯ ನಿರ್ಣಯವನ್ನು ಕೈಗೊಳ್ಳುತ್ತಾರೆ.

೯. ಅಪರಾಧಗಳ ವಿಧಾನಗಳು ಮತ್ತು ನ್ಯಾಯ ನಿರ್ಣಯಗಳು

ಘಿಸಾಡಿ ಲೋಹಾರ ಸಭಾದಲ್ಲಿ ಪ್ರಮುಖವಾಗಿ ಮೂರು ಬಗೆಯ ಅಪರಾಧಗಳು ಮತ್ತು ನ್ಯಾಯ ನಿರ್ಣಯ ವಿಧಾನಗಳನ್ನು ಅನುಸರಿಸಲಾಗುತ್ತದೆ.

೧. ವ್ಯಾವಹಾರಿಕ ಅಪರಾಧ ಅಥವಾ ಆಸ್ತಿಪಾಸ್ತಿಗಳ ತಕರಾರು

೨. ದಂಡಾಪರಾಧ ಅಥವಾ ದರೋಡೆ, ಹೊಡೆದಾಟ

೩. ಸಮುದಾಯದ ಆಂತರಿಕ ಮತ್ತು ಪ್ರಾದೇಶಿಕ ಸಮಸ್ಯೆಗಳು.

೧. ವ್ಯಾವಹಾರಿಕ ಅಪರಾಧ ಅಥವಾ ಆಸ್ತಿ-ಪಾಸ್ತಿಗಳ ತಕರಾರು : ಘಿಸಾಡಿ ಸಮುದಾಯವು ತಮ್ಮ ಆಸ್ತಿ-ಪಾಸ್ತಿ, ಹೊಲಮನೆ ಇತ್ಯಾದಿ ವಿಷಯಗಳನ್ನು ಬಗೆಹರಿಸುವ ನ್ಯಾಯ ಪಂಚಾಯ್ತಿಯಲ್ಲಿ ಸಮುದಾಯದವರೆಲ್ಲರೂ ಇರುತ್ತಾರೆ. ಅಣ್ಣ-ತಮ್ಮಂದಿರಲ್ಲಿ ಇಲ್ಲವೆ ಬಂಧು ಬಳಗದವರಲ್ಲಿ ಆಸ್ತಿಯ ವಿಷಯದಲ್ಲಿ ತಂಟೆ ತಕಾರರುಗಳು ಸಂಭವಿಸಿದಾಗ ಪಂಚಾಯಿತಿಗೆ ಮೊರೆ ಹೋಗುತ್ತಾರೆ. ಆಗ ಪಂಚಾಯ್ತಿಯ ಮುಖ್ಯಸ್ಥನು ಮತ್ತು ಹಿರಿಯರು ಸೇರಿ ಆಸ್ತಿಗೆ ಸಂಬಂಧಿಸಿದವರನ್ನು ಕರೆದು ಯಾರಿಗೂ ಅನ್ಯಾಯವಾಗದಂತೆ ಸರಿಪಾಲು ಮಾಡಿಕೊಟ್ಟು ವ್ಯಾಜ್ಯವನ್ನು ಬಗೆಹರಿಸಿಕೊಡುತ್ತಾರೆ. ದೈವದವರು ಸೇರಿ ಆಸ್ತಿ ಹೊಲ, ಮನೆಗಳನ್ನು ಒಂದೇ ಸಲಕ್ಕೆ ಸ್ಪಷ್ಟವಾಗಿ ಸಮಪಾಲು ಮಾಡಿಕೊಟ್ಟು ಹೋಗುತ್ತಾರೆ. ಪದೆ ಪದೆ ಇದೇ ಸಮಸ್ಯೆಯನ್ನು ತೆಗೆದುಕೊಂಡು ಬಂದರೆ ಅವರಿಗೆ ಛೀಮಾರಿಯನ್ನು ಹಾಕಿ ಕಳಿಸುತ್ತಾರೆ.

೨. ದಂಡಾಪರಾಧ ಅಥವಾ ದರೋಡೆ, ಹೊಡೆದಾಟ : ಘಿಸಾಡಿ ಸಮುದಾಯದಲ್ಲಿ ಸುಲಿಗೆ,

ದರೋಡೆ, ಹೊಡೆದಾಟಗಳಂತಹ ಅಪರಾಧ ವಿಷಯಗಳನ್ನು ಬಗೆಹರಿಸುವ ನ್ಯಾಯ ನಿರ್ಣಯಗಳಿದ್ದರೆ ಇಂತಹ ವಿಷಯಗಳಲ್ಲಿ ಕೈಗೊಳ್ಳುವ ತೀರ್ಮಾನಗಳು ಬಹಳ ಕಠೋರವಾಗಿರುತ್ತವೆ. ಈ ನ್ಯಾಯ ಪಂಚಾಯಿತಿ ಸಾಮಾನ್ಯವಾಗಿ ಒಂದೇ ದಿನದಲ್ಲಿ ಮುಗಿಯುವುದಿಲ್ಲ. ಇದು ಕೆಲವೊಂದು ಸಂದರ್ಭದಲ್ಲಿ ಸಾಕ್ಷಿ, ಪುರಾವೆಗಳಿಂದಾಗಿ ವಾರಗಟ್ಟಲೆ ನಡೆಯುವ ಸಾಧ್ಯತೆಗಳಿರುತ್ತವೆ. ಇಂಥವರಿಗೆ ಪ್ರಮಾಣ ಮಾಡಿ ತಾನು ಅಪರಾಧಿಯೋ ಅಲ್ಲವೋ ಎಂಬುದನ್ನು ಎದುರು ಹೇಳುವುದು, ಆ ರೀತಿ ಪ್ರಮಾಣ ಮಾಡಿದಾಗ ಸುಳ್ಳು ಹೇಳಿದರೆ ದೇವರು ಶಿಕ್ಷಿಸುತ್ತಾನೆ ಎಂಬ ನಂಬಿಕೆಯಿಂದ ಸುಳ್ಳು ಹೇಳಲು ಹಿಂಜರಿಯುತ್ತಾರೆ.

ಪರೀಕ್ಷೆ ಪ್ರಮಾಣ ಮಾಡುವಿಕೆ, ಸಾಕ್ಷಿ ಆಧಾರ ಪುರಾವೆಗಳಿಂದ ಅಪರಾಧವು ಸಾಬೀತಾದರೆ ಅಪರಾಧಿಯ ಸ್ಥಾನ ತುಂಬಾ ಹೀನಾಯವಾಗಿರುತ್ತದೆ. ಸಮಾಜದಿಂದ ಬಹಿಷ್ಕೃತವಾಗಿ ಒಂದು ಸಲ ತಿಳಿಯದೆ ಅಪರಾಧವೆಸಗಿದವನು ಪುನಃ ತನ್ನ ಜೀವನದಲ್ಲಿ ಅಂತಹ ತಪ್ಪುಗಳನ್ನು ಮಾಡಲು ಮುಂದಾಗುವುದಿಲ್ಲ. ಅಂತಹ ಅಪರಾಧಕ್ಕೆ ತಕ್ಕ ದಂಡವನ್ನು ವಿಧಿಸಲಾಗುತ್ತದೆ.

೩. **ಸಮುದಾಯದ ಆಂತರಿಕ ಮತ್ತು ಪ್ರಾದೇಶಿಕ ಸಮಸ್ಯೆಗಳು :** ಈ ಸಮುದಾಯದಲ್ಲಿ ತಮ್ಮ ಆಂತರಿಕ ವ್ಯವಹಾರಗಳಾದ ಗುಡಿ ಗುಂಡಾರಗಳ ನಿರ್ಮಾಣ, ವಿವಾಹ ಕಾರ್ಯಗಳು, ಹಬ್ಬ ಹರಿದಿನಗಳು, ಆಚರಣೆಗಳು, ಜಾತ್ರೆ ಉತ್ಸವಗಳು, ಪಟ್ಟಿ ಪಾವತಿಗಳ ಸಂಗ್ರಹಗಳಂತಹ ಅನೇಕ ಆಂತರಿಕ ವ್ಯವಹಾರಗಳು ಸಮುದಾಯದ ಮುಖ್ಯಸ್ಥನ ಮೂಲಕ ಇತರರ ಸಹಾಯ ಸಹಕಾರಗಳಿಂದ ನಡೆಯುತ್ತವೆ. ಪ್ರಾದೇಶಿಕ ವ್ಯವಹಾರಗಳೆಂದರೆ ಅನ್ಯ ಸಮುದಾಯದವರಿಂದ ಕಿರುಕುಳ, ತಂಟೆ ತಕರಾರುಗಳಂತಹ ಘಟನೆಗಳು ನಡೆದರೆ ಆ ಸಮುದಾಯದ ಮುಖ್ಯಸ್ಥನೊಂದಿಗೆ ಚರ್ಚೆ ಮಾಡಲಾಗುತ್ತದೆ. ಒಂದು ವೇಳೆ ಸಮಸ್ಯೆಯು ಬಹಳ ವಿಕೋಪಕ್ಕೆ ಹೋಗಿದ್ದರೆ ಸಂವಿಧಾನಾತ್ಮಕವಾಗಿ ನಿಯಮಿತವಾದ ಕೋರ್ಟ್ ಕಚೇರಿಗಳ ಮೊರೆ ಹೋಗುತ್ತಾರೆ. ಇಂತಹ ಸಂದರ್ಭಗಳು ಬಂದಿರುವುದು ತೀರಾ ಅಪರೂಪ ಎಂದು ಸಮುದಾಯದವರು ಹೇಳುತ್ತಾರೆ.

೧೦. ಕುಲ ಬಹಿಷ್ಕಾರ ಸಂದರ್ಭಗಳು

ಛಿಸಾಡಿ ಸಮುದಾಯದಲ್ಲಿ ತಮ್ಮ ಸಮುದಾಯದ ಯಾವುದೇ ಕುಟುಂಬದ ಹೆಣ್ಣಾಗಲಿ ಅಥವಾ ಗಂಡಾಗಲಿ ತಪ್ಪು ಮಾಡಿದಾಗ ಕುಲ(ಜಾತಿ) ಬಹಿಷ್ಕಾರ ಹಾಕುವ ಪದ್ಧತಿ ಜಾರಿಯಲ್ಲಿದೆ. ಹೀಗಾಗಿ ಸಮುದಾಯದ ಪ್ರತಿಯೊಬ್ಬ ವ್ಯಕ್ತಿ ತಮ್ಮ ಸಮಾಜಕ್ಕೆ ದ್ರೋಹ ಬಗೆಯದೆ ತಮ್ಮ ಜವಾಬ್ದಾರಿಗಳನ್ನರಿತುಕೊಂಡು ಸರಳತೆಯ ಜೀವನ ನಡೆಸುವುದು ಕಂಡುಬರುತ್ತದೆ.

ಕುಲ ಬಹಿಷ್ಕಾರ ಸಂದರ್ಭಗಳು ಮತ್ತು ಪಂಚಾಯ್ತಿ

೧. ಛಿಸಾಡಿ ಸಮುದಾಯಕ್ಕೆ ಸೇರಿದ ಪುರುಷನು ಅನ್ಯ ಜಾತಿಯ ಹೆಣ್ಣನ್ನು ಮದುವೆಯಾದಾಗ ಅಂಥವನನ್ನು ಜಾತಿಯಿಂದ ಬಹಿಷ್ಕರಿಸಲಾಗುತ್ತದೆ. ಹಾಗೆಯೇ ಅವರ ಕುಟುಂಬಕ್ಕೆ ಸೂಕ್ತವಾದ

ಅಲ್ಪ ಪ್ರಮಾಣದ ದಂಡ ಹಾಕಲಾಗುತ್ತದೆ. ಒಂದು ವೇಳೆ ಆ ಕುಟುಂಬದವರು ದಂಡ ಕಟ್ಟಿ ತಪ್ಪೊಪ್ಪಿಗೆ ಮಾಡಿಕೊಳ್ಳದೆ ಹೋದರೆ ಅವರಿಗೆ ಮದುವೆ ಮತ್ತು ಇತರ ಕಾರ್ಯಕ್ರಮಗಳಲ್ಲಿ ಬಾಜ ಮಾಡಲು ಅವಕಾಶವಿರುವುದಿಲ್ಲ. ಆದರೆ ಸಮಾರಂಭಗಳಲ್ಲಿ ಪಾಲ್ಗೊಳಬಹುದು.

೨. ಈ ಸಮುದಾಯದಲ್ಲಿನ ಯುವತಿಯು ಬೇರೆ ಕುಲಕ್ಕೆ ಸೇರಿದ ಹುಡುಗನನ್ನು ಪ್ರೀತಿಸಿ ಓಡಿ ಹೋದರೆ, ಇಲ್ಲವೇ ಮದುವೆ ಮಾಡಿಕೊಂಡರೆ, ಅಂಥವಳನ್ನು ಶಾಶ್ವತವಾಗಿ ಕುಲದಿಂದ ಬಹಿಷ್ಕರಿಸಲಾಗುತ್ತದೆ. ಈ ಸಂದರ್ಭದಲ್ಲಿ ಯುವತಿಯ ಕುಟುಂಬದವರು ತಮ್ಮ ಸಮಾಜಕ್ಕೆ ಅಲ್ಪ ಪ್ರಮಾಣದ ದಂಡ ಕಟ್ಟಿ, "ಇಂತಹ ಸಂದರ್ಭಗಳು ಇನ್ನೊಂದು ಸಲ ಬರದಂತೆ ಎಚ್ಚರ ವಹಿಸಿಕೊಳ್ಳುತ್ತೇವೆ" ಎಂದು ಸಮಾಜಕ್ಕೆ ಮಾತು ಕೊಡಬೇಕು.

೩. ವಿವಾಹಿತ ಮಹಿಳೆ ತನ್ನ ಗಂಡನನ್ನು ಬಿಟ್ಟು ಬೇರೆ ಜಾತಿಯ ವ್ಯಕ್ತಿಯೊಂದಿಗೆ ಅನೈತಿಕ ಸಂಬಂಧವಿಟ್ಟುಕೊಂಡಿದ್ದರೆ ಅವಳನ್ನು ಕೂಡಾ ಶಾಶ್ವತವಾಗಿ ಕುಲದಿಂದ ಬಹಿಷ್ಕರಿಸಲಾಗುತ್ತದೆ.

೪. ವಿವಾಹಿತ ಮಹಿಳೆ ತಮ್ಮ ಸಮುದಾಯದಲ್ಲಿಯೇ ಪರ ಪುರುಷನೊಂದಿಗೆ ಅನೈತಿಕ ಸಂಬಂಧವಿಟ್ಟುಕೊಂಡಿರುವುದು ಸಾಬೀತಾದರೆ, ಅವರಿಬ್ಬರು ಇಚ್ಛಿಸಿದಲ್ಲಿ ಮದುವೆ ಮಾಡಲಾಗುತ್ತದೆ ಇಲ್ಲದಿದ್ದರೆ ಕುಲದಿಂದ ಬಹಿಷ್ಕರಿಸಲಾಗುತ್ತದೆ.

೫. ತಮ್ಮ ಸಮುದಾಯದ ಅವಿವಾಹಿತ ಯುವಕ ಯುವತಿ ಓಡಿಹೋಗಿ ಮದುವೆ ಮಾಡಿಕೊಂಡು ಪುನಃ ಸಮುದಾಯಕ್ಕೆ ಮರಳಿದಾಗ, ಅವರನ್ನು ಪಂಚಾಯ್ತಿ ಸೇರಿಸಿ ಕುಲ ಸಂಪ್ರದಾಯದನುಸಾರ ಮತ್ತೊಮ್ಮೆ ವಿವಾಹ ಮಾಡಿಸಲಾಗುತ್ತದೆ ಅಥವಾ ಕುಲದಿಂದ ಬಹಿಷ್ಕರಿಸಲಾಗುತ್ತದೆ.

೬. ಸಮುದಾಯದ ಸ್ತ್ರೀಯಾಗಲಿ, ಪುರುಷನಾಗಲಿ ತಮ್ಮ ಸಮುದಾಯದ ಸಂಪ್ರದಾಯಗಳು, ಪುರಾತನ ಮೌಲ್ಯಗಳು, ಕಟ್ಟು-ಪಾಡುಗಳು, ರೀತಿ-ನೀತಿಗಳನ್ನು ಮುರಿಯುವಂತಹ ಕ್ರಿಯೆಗಳಲ್ಲಿ ತೊಡಗಿದಾಗ, ಇಲ್ಲವೇ ಸಮುದಾಯದ ಇತರರಿಗೆ ಆಘಾತಕರವಾಗುವಂತಹ ನೋವುಂಟುಮಾಡಿದಾಗ ಕುಲ ಬಹಿಷ್ಕಾರದ ಅಸ್ತ್ರವನ್ನು ಅಂಥವರ ಮೇಲೆ ಹೇರಲಾಗುತ್ತದೆ.

೭. ಈ ಸಮುದಾಯದ ವ್ಯಕ್ತಿ ಮೊದಲನೆಯ ಸಲ ತಪ್ಪು ಮಾಡಿದಾಗ ಮೊದಲನೆಯ ಊನ್‌ಕಟ್, ಎರಡನೆಯ ಸಲ ತಪ್ಪುಮಾಡಿದಾಗ ಎರಡನೆಯ ಊನ್‌ಕಟ್, ಮೂರನೆಯ ಸಲ ತಪ್ಪು ಮಾಡಿದಾಗ ಬಹಿಷ್ಕಾರಕ್ಕೆ ಗುರಿಯಾಗುತ್ತಾನೆ. ಇದಕ್ಕೆ 'ಆಕ್ರಿ ಮಾಸಿ' ಅಥವಾ 'ಗೇರ್ಹಾ ಮಾಸಿ' ಎಂದು ಕರೆಯುತ್ತಾರೆ. ಮುಂದೆ ಪಂಚಾಯ್ತಿ ಸೇರಿಸಲು ಅವಕಾಶವಿರುವುದಿಲ್ಲ ಮತ್ತು ಪಂಚಾಯ್ತಿಗೆ ಯಾರೂ ಬರುವುದಿಲ್ಲ.

೧೧. ಕುಲ ಶುದ್ಧೀಕರಣ

ಪ್ರತಿಯೊಬ್ಬ ವ್ಯಕ್ತಿ ತಾನು ವಾಸಿಸುವ ಸಮಾಜದಲ್ಲಿ ಚೆನ್ನಾಗಿ ಬಾಳುವುದರೊಂದಿಗೆ ಗೌರವ, ಆದರ, ಆತಿಥ್ಯಗಳನ್ನು ಹೊಂದಿರಬೇಕೆಂದು ಬಯಸುತ್ತಾನೆ. ಆದರೆ ವ್ಯಕ್ತಿಯ ಜೀವನದಲ್ಲಿ ಕೆಲವೊಂದು ಸಂದರ್ಭಗಳು ಆತನನ್ನು ಅಪರಾಧಿಯಾಗುವಂತೆ ಪ್ರೇರೇಪಿಸುತ್ತವೆ. ಇದಕ್ಕೆ ಕಾರಣ ಆತನಲ್ಲಿರುವ ಚಂಚಲ ಮನಸ್ಸು ಮತ್ತು ಸ್ವಭಾವ. ಕೆಲವೊಂದು ಸಲ ಅವಿವೇಕತನದ ಬುದ್ಧಿಯು ಕಾರಣವಾಗಿರುತ್ತದೆ. ಒಂದೊಂದು ಸಲ ವ್ಯಕ್ತಿಗೆ ಸಾರ್ವಜನಿಕ ವ್ಯವಸ್ಥೆಯಲ್ಲಿ ಅಸಮಾನತೆ, ಬಡತನಗಳಂತಹ ಕಾರಣಗಳು ಕೂಡಾ ಅಪರಾಧಿಯಾಗಲು ಅನುವು ಮಾಡಿಕೊಡುತ್ತದೆ. ಇಂತಹ ಪ್ರಸಂಗಗಳನ್ನು ದಿಟ್ಟತನದಿಂದ ಎದುರಿಸುವುದರೊಂದಿಗೆ, ವ್ಯಕ್ತಿ ತನ್ನ ಮನಸ್ಸಿನ ಚಂಚಲ ಸ್ವಭಾವವನ್ನು ಹತೋಟಿಯಲ್ಲಿಟ್ಟುಕೊಂಡರೆ ಪ್ರತಿಯೊಬ್ಬ ವ್ಯಕ್ತಿಗೆ ತಾವು ವಾಸಿಸುವ ಸಮಾಜ ಮತ್ತು ಸಮುದಾಯದಲ್ಲಿ ಗೌರವ ಸಿಗುತ್ತದೆ.

ಯಾವುದೇ ಬುಡಕಟ್ಟು ಸಮುದಾಯದ ಒಬ್ಬ ವ್ಯಕ್ತಿ ತಮ್ಮ ಕುಲ ಸಮೂಹಕ್ಕೆ ಇಲ್ಲವೇ ತಮ್ಮ ಸಮುದಾಯದ ಇತರರ ಕುಟುಂಬಕ್ಕೆ ಆಘಾತಕರವಾದ ನೋವುಂಟುಮಾಡಿದಾಗ ತನ್ನ ಇಡೀ ಸಮುದಾಯವೇ ಅವನನ್ನು ತಾತ್ಸಾರ ಮನೋಭಾವನೆಯಿಂದ ನೋಡುತ್ತದೆ. ಆ ವ್ಯಕ್ತಿ ಸಮುದಾಯದಲ್ಲಿ ಸಾಮಾಜಿಕ ಸ್ಥಾನಮಾನಗಳ ಕೊರತೆಯನ್ನು ಅನುಭವಿಸಬೇಕಾಗುತ್ತದೆ. ಕೊನೆಗೆ ಒಂದು ದಿನ ಆ ವ್ಯಕ್ತಿಗೆ ತನ್ನ ತಪ್ಪಿನ ಅರಿವುಂಟಾಗಿ ಸಮುದಾಯದ ಬಂಧು ಬಳಗದವರಲ್ಲಿ ತನ್ನ ತಪ್ಪೊಪ್ಪಿಕೊಳ್ಳಲು ಬೇಡಿಕೊಂಡಾಗ ಮಾನವೀಯ ಮೌಲ್ಯಗಳನ್ನೊಂದಿರುವ ಆ ಸಮುದಾಯ ಕುಲ ಶುದ್ಧೀಕರಣದ ವಿಧಿವಿಧಾನಗಳಿಂದ ಮತ್ತೆ ಆ ವ್ಯಕ್ತಿಗೆ ತನ್ನ ಸಮುದಾಯದಲ್ಲಿ ಮೊದಲಿನ ಸ್ಥಾನಮಾನಗಳನ್ನು ನೀಡುತ್ತದೆ.

ಈ ಸಮುದಾಯದಲ್ಲಿ ಕುಲ ಬಹಿಷ್ಕಾರದ ಜೊತೆಗೆ ತಮ್ಮದೆ ಆದಂತಹ ವಿಧಿ ವಿಧಾನಗಳಿಂದ ಕುಲಶುದ್ಧೀಕರಣಕ್ಕೆ ಅನುವು ಮಾಡಿಕೊಡಲಾಗುತ್ತದೆ. ಆರೋಪಿಯು ತನ್ನ ಕುಲಸ್ಥರೆಲ್ಲರನ್ನು ಮನವಿ ಮಾಡಿಕೊಂಡು ಕುಲಶುದ್ಧೀಕರಣಕ್ಕೆ ಬೇಡಿಕೊಳ್ಳುತ್ತಾನೆ. ಆಗ ತಮ್ಮ ಸಮುದಾಯದ ಹಿರಿಯ (ಮುಖ್ಯಸ್ಥ) ಮುಖಂಡನನ್ನು ತನ್ನ ಸಮುದಾಯಲ್ಲಿನ ಯಾವುದಾದರು ಕನಿಷ್ಠ ಮೂರು ಬೆಡಗಿನ ಪ್ರಮುಖರನ್ನು ಮತ್ತು ಇನ್ನಿತರ ಹಿರಿಯ ಮುಖಂಡರನ್ನು ಕರೆಯಿಸಿ ಅವರೆಲ್ಲರ ಅಭಿಪ್ರಾಯಗಳನ್ನು ಕೇಳಿ ತೀರ್ಮಾನ ತೆಗೆದುಕೊಂಡು ಕುಲಶುದ್ಧೀಕರಣಕ್ಕೆ ಅನುವು ಮಾಡಿ ಕೊಡುತ್ತಾನೆ.

ಈ ಸಂದರ್ಭದಲ್ಲಿ ಅವರ ತಪ್ಪುಗಳ ಆಧಾರದ ಮೇಲೆ ಕುಲ ಶುದ್ಧೀಕರಣದ ವಿಧಾನವನ್ನು ಅನುಸರಿಸಲಾಗುತ್ತದೆ.

೧. ತಪ್ಪಿತಸ್ಥ ವ್ಯಕ್ತಿ ತಮ್ಮ ಸಮುದಾಯದ ಹಿರಿಯರ ಎದುರಿನಲ್ಲಿ ಹಂಚಿನಲ್ಲಿ ಇಲ್ಲವೇ

ಮಡಿಕೆಯಲ್ಲಿ ಹಾಕಿ ಬಡಿಸಿದ ಊಟ ಮಾಡಿಸುವುದರ ಮೂಲಕ ಕುಲ ಶುದ್ಧೀಕರಣ ವಿಧಾನ ಮಾಡಲಾಗುತ್ತದೆ.

೨. ತಪ್ಪಿತಸ್ಥ ವ್ಯಕ್ತಿಯಿಂದ ಒಂದು ಕೊಬ್ಬಿದ ಕುರಿಯನ್ನು ತಂದು ಬ್ಯಾಟಿ ಮಾಡಿ, ಅದರ ಬೇಯಿಸಿದ ಮಾಂಸದ ತುಂಡನ್ನು ಸಮಾಜದವರ ಎದುರಿನಲ್ಲಿ ಪಕ್ಷಿಗಳಿಗೆ ಹಾರಿಸಿ ನಂತರ ಎಲ್ಲರೂ ಊಟ ಮಾಡುತ್ತಾರೆ. ಆಗ ಆ ವ್ಯಕ್ತಿಯ ಕುಲಶುದ್ಧೀಕರಣವಾಗುತ್ತದೆ. ಪಕ್ಷಿಗಳಿಗೆ ಮಾಂಸದ ತುಂಡು ಹಾರಿಸಿದರೆ ಆ ತಪ್ಪಿತಸ್ಥ ವ್ಯಕ್ತಿ ತಮ್ಮ ಮನೆಯವರ ಮರ್ಯಾದೆ ಮೂರು ಕಾಸಿನ ಕಿಮ್ಮತ್ತು ಇಲ್ಲದೇ ಹಾರಿಸಿ ಬಿಟ್ಟಿದ್ದಾನೆ ಎಂಬ ಕಲ್ಪನೆ ಸಮಾಜದ ಜನರಲ್ಲಿರುತ್ತದೆ.

೩. ತಪ್ಪಿತಸ್ಥ ವ್ಯಕ್ತಿಯ ನಾಲಿಗೆಯನ್ನು ಬೇವಿನ ಕಡ್ಡಿಯಿಂದ ಸುಡುವುದರ ಮೂಲಕ ಕುಲಶುದ್ಧೀಕರಣಗೊಳಿಸಲಾಗುತ್ತದೆ. ಇದರ ಅರ್ಥ ಇನ್ನು ಮುಂದೆ ಕೊಟ್ಟ ಮಾತಿನಂತೆ ನಡೆದುಕೊಂಡು ಜೀವನ ಮಾಡುವುದಾಗಿರುತ್ತದೆ.

ಈ ಮೇಲಿನ ವಿಧಾನಗಳನ್ನು ತಪ್ಪಿತಸ್ಥ ವ್ಯಕ್ತಿ ಅನುಸರಿಸಿದರೆ ಆ ವ್ಯಕ್ತಿ ಮತ್ತು ಕುಟುಂಬದವರು ಮೊದಲಿನಂತೆ ಸಾಮಾಜಿಕ ಸ್ಥಾನಮಾನವನ್ನು ಪಡೆದುಕೊಳ್ಳುತ್ತಾರೆ.

ಕ. ಆರ್ಥಿಕ ಜೀವನ

ಆರ್ಥಿಕ ಜೀವನವೆಂಬುದು ಒಬ್ಬ ವ್ಯಕ್ತಿಗೆ ಅನ್ವಯಿಸಿಕೊಂಡಾಗ ಆ ವ್ಯಕ್ತಿಯ ಶ್ರಮ ಉತ್ಪಾದನೆ, ಹಂಚಿಕೆ, ಅನುಭೋಗ ಅಂಶಗಳು ಒಳಗೊಂಡಿರುತ್ತವೆ. ಇದನ್ನೇ ಒಂದು ಸಮುದಾಯಕ್ಕೆ ಅನ್ವಯಿಸಿಕೊಂಡಾಗ ಆ ಸಮುದಾಯದ ಜೀವನ ವಿಧಾನ, ಉತ್ಪಾದನೆಯ ವಿವಿಧ ಆಯಾಮ, ಆಕಾರಗಳು, ಜೀವನ ಮಟ್ಟ, ಸ್ಥಿತಿಗತಿಗಳು ಅವರು ಹೊಂದಿರುವ ಸಾಮಾಜಿಕ ಸ್ಥಾನಮಾನಗಳಂತಹ ಅಂಶಗಳನ್ನು ಒಳಗೊಂಡಿರುತ್ತವೆ.

ಭಾರತೀಯ ಸಾಮಾಜಿಕ ವ್ಯವಸ್ಥೆಯಲ್ಲಿ ಅನೇಕ ಕುಲಸಮುದಾಯಗಳು ವಾಸಿಸುತ್ತಿವೆ. ಅದರಲ್ಲಿ ಅಲೆಮಾರಿ ಸಮುದಾಯಗಳು ಮತ್ತು ಪರಿಶಿಷ್ಟ ಜಾತಿ ಮತ್ತು ಬುಡಕಟ್ಟು ಸಮುದಾಯಗಳ ಸ್ಥಿತಿಯು ಬಹಳ ಶೋಚನೀಯ ಸ್ಥಿತಿಯಲ್ಲಿರುವುದು ಕಂಡುಬರುತ್ತದೆ. ಸಾಮಾನ್ಯವಾಗಿ ಆರ್ಥಿಕ ವ್ಯವಸ್ಥೆಯು ಒಂದು ಸಮುದಾಯದ ಸ್ಥಾನಮಾನಗಳನ್ನು ನಿರ್ಧರಿಸುತ್ತದೆ. ಯಾವ ಸಮುದಾಯದ ಆರ್ಥಿಕ ಪರಿಸ್ಥಿತಿಯು ಉತ್ತಮವಾಗಿರುತ್ತದೆಯೋ ಆ ಸಮುದಾಯ ಆಧುನೀಕರಣಗೊಂಡು ಬೆಳೆಯುತ್ತಿರುತ್ತದೆ. ಯಾವ ಸಮುದಾಯ ಆರ್ಥಿಕವಾಗಿ ಬಹಳ ಹಿಂದುಳಿದಿರುತ್ತದೆಯೋ ಆ ಸಮುದಾಯ ತನ್ನ ಹಳೆಯ ಪದ್ಧತಿಗಳನ್ನು ಉಳಿಸಿಕೊಂಡೇ ಸಾಗುತ್ತಿರುತ್ತದೆ.

ಪ್ರಸ್ತುತ ಘಿಸಾಡಿ ಸಮುದಾಯವು ಕೂಡಾ ಆರ್ಥಿಕವಾಗಿ ತೀರಾ ಹಿಂದುಳಿದ ಅಲೆಮಾರಿ ಬುಡಕಟ್ಟು ಸಮುದಾಯವಾಗಿದೆ. ಇವರ ವೇಷ-ಭೂಷಣಗಳನ್ನು ನೋಡಿದೊಡನೆಯೇ ಇವರ ಆರ್ಥಿಕ

ಪರಿಸ್ಥಿತಿಯ ಅರಿವಾಗುತ್ತದೆ. ಇಂದು ಘಿಸಾಡಿ ಸಮುದಾಯದ ಎಷ್ಟೋ ಕುಟುಂಬಗಳಿಗೆ ದಿನಕ್ಕೆ ಎರಡು ಸಲ ಊಟ ಮಾಡುವಷ್ಟು ಕೆಲಸಗಳು ಸಿಗುವುದಿಲ್ಲ. ತಮ್ಮ ಮೂಲ ವೃತ್ತಿಯಾದ ಕಮ್ಮಾರಿಕೆ ಕೆಲಸವನ್ನು ನಂಬಿದ ಇವರಿಗೆ ರೈತರ ಕೃಷಿ ಉಪಕರಣಗಳ ದುರಸ್ತಿ ಮತ್ತು ತಯಾರಿಕೆ ಕೆಲಸಗಳು ಸಿಕ್ಕಾಗ ಮಾತ್ರ ತುಂಬಾ ಆರಾಮವಾಗಿರುತ್ತದೆ. ಒಂದೊಂದು ಸಲ ಕೆಲಸಗಳು ಸಿಗದೆ ಹೋದಾಗ ಅನೇಕ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಹೀಗಾಗಿ ಅವರ ಆರ್ಥಿಕ ಜೀವನವು ಬಹಳ ಶೋಚನಿಯವಾಗಿದೆ. ಇವರು ಹೊಂದಿರುವ ಆರ್ಥಿಕ ಅವಲಂಬನೆಗಳು ಈ ಮುಂದಿನಂತಿವೆ.

೧೨. ಬೇಟೆ

ಒಂದು ಸಮುದಾಯದ ಆರ್ಥಿಕ ಉತ್ಪಾದನೆಯ ಚಟುವಟಿಕೆಗಳನ್ನು ನಿರ್ಧರಿಸುವಲ್ಲಿ, ಬೇಟೆಯು ಪ್ರಮುಖವಾದ ಒಂದು ಭಾಗವಾಗಿದೆ. ಬೇಟೆಯನ್ನು ಮೊದಲು ಆರಂಭಿಸಿದವನು ಆದಿಮಾನವ. ಅವನ ಉಗಮದೊಂದಿಗೆ ಅದು ಜನ್ಮ ತಾಳಿದಂತಿದೆ. ಮೊಟ್ಟಮೊದಲಿಗೆ ಕಾಡು-ಕಣಿವೆ ಪ್ರದೇಶ ಗಳಲ್ಲಿ ವಾಸಿಸತೊಡಗಿದ ಮಾನವ ತನ್ನ ಹೊಟ್ಟೆ ತುಂಬಿಸಿಕೊಳ್ಳುವುದಕ್ಕಾಗಿ ಕಾಡಿನಲ್ಲಿ ಸಿಗಬಹುದಾದ ಗಡ್ಡೆ ಗೆಣಸು, ಹಣ್ಣು ಹಂಪಲುಗಳಂತಹ ಆಹಾರ ಸಂಗ್ರಹಣೆಯ ಜೊತೆಗೆ ಪ್ರಾಣಿಗಳನ್ನು ಕೊಂದು ತಿನ್ನತೊಡಗಿದ. ಕೇವಲ ಆಹಾರಕ್ಕಾಗಿ ಮಾತ್ರವಲ್ಲದೆ, ಪ್ರಾಣರಕ್ಷಣೆಗಾಗಿ, ಪ್ರಾಣಿಗಳಿಂದ ಬರಬಹುದಾದ ತೊಂದರೆಗಳನ್ನು ತಪ್ಪಿಸಿಕೊಳ್ಳುವುದಕ್ಕಾಗಿ ಪ್ರಾಣಗಳನ್ನು ಬೇಟೆಯಾಡುತ್ತಿದ್ದನು. ಪ್ರಾಣಿಗಳ ಚರ್ಮದಿಂದ ತನ್ನ ಮೈ ಮುಚ್ಚಿಕೊಳ್ಳುವುದಕ್ಕಾಗಿ ಕಾಲ ಕ್ರಮೇಣ ಅವನಲ್ಲಿ ಅಲಂಕಾರ ಸೌಂದರ್ಯಪ್ರಿಯತೆಯೂ ಬೆಳೆದು ಆಗ ಪ್ರಾಣಿಗಳ ಚರ್ಮ, ಉಗುರು, ದಂತ, ಕೂದಲುಗಳಿಂದ ವಿಶೇಷವಾದ ಅಲಂಕಾರಗಳನ್ನು ಮಾಡಿಕೊಳ್ಳುವುದಕ್ಕಾಗಿ ಬೇಟೆಯಾಡುವುದು ರೂಢಿಯಾಯಿತು. ಕ್ರೂರ ಮೃಗಗಳನ್ನು ಬೇಟೆಯಾಡುವುದು ಆದಿ ಮಾನವನ ಚಿತ್ರಕಲೆಯಲ್ಲಿಯೇ ಸ್ಪಷ್ಟವಾಗಿ ದೃಢಪಟ್ಟಿದೆ. ಕಾಲ ಉರುಳಿದಂತೆ ಪ್ರಾಣಿ-ಪಕ್ಷಿಗಳ ಮಾಂಸವನ್ನು ಮಾರಿ ಜೀವನ ಹೊರೆಯುವುದಕ್ಕಾಗಿ ಮನುಷ್ಯ ಬೇಟೆ ಆಡತೊಡಗಿದ. ನವಿಲು, ಮುಂಗುಸಿ, ಗಿಡುಗ, ಪಾರಿವಾಳ, ಪುನಗಿನ ಬೆಕ್ಕು, ಬಾವಲಿ, ಉಡಾ ಮೊದಲಾದವುಗಳನ್ನು ಮಾಂಸಕ್ಕಾಗಿಯಲ್ಲದೆ ಅವುಗಳ ಕೊಬ್ಬಿನಿಂದ ಔಷಧಿಯನ್ನು ತಯಾರಿಸುವುದಕ್ಕಾಗಿಯೂ ಅವುಗಳನ್ನು ಬೇಟೆಯಾಡತೊಡಗಿದ. ಈ ಬೇಟೆಯಾಡುವ ತಂತ್ರಗಳನ್ನು ಮಾನವ ಪ್ರಾಣಿ-ಪಕ್ಷಿಗಳಿಂದ ಕಲಿತುಕೊಂಡಿದ್ದಾನೆಂದು ಕೆಲವರ ವಾದವಾಗಿದೆ. ಏಕೆಂದರೆ ಮಾನವ ಬೇಟೆಯಾಡುವ ವಿಧಾನಗಳಲ್ಲಿ ಹೆಚ್ಚಿನವು, ಪ್ರಾಣಿ-ಪಕ್ಷಿಗಳು ಬೇಟೆಯಾಡುವ ಕ್ರಮವನ್ನು ಪೂರ್ಣವಾಗಿ ಹೋಲುತ್ತವೆ. ಅಂದರೆ, ಪ್ರಾಣಿಗಳ ಅನುಕರಣೆಯಿಂದ ಮಾನವನು ಬೇಟೆಯ ವಿಧಾನ(ತಂತ್ರ)ವನ್ನು ಕಲಿತಿರಬಹುದು. ಹೇಗೆಂದರೆ, ಬಲೆಯೊಡ್ಡಿ ಪ್ರಾಣಿಗಳನ್ನು ಹಿಡಿಯುವುದನ್ನು ಅವನ್ನು ಜೇಡನಿಂದ ಕಲಿತ; ಹೊಂಚುಹಾಕಿ ಕೊಲ್ಲುವುದನ್ನು ಹುಲಿ ಕ್ರೂರ ಮೃಗಗಳಿಂದ ಕಲಿತ; ಮರಸ ಬೇಟೆಯನ್ನು ಕ್ರೂರ ಹುಲಿ, ಚಿರತೆ, ತೋಳಗಳಿಂದ ಕಂಡುಕೊಂಡ; ಹಾಗೆಯೇ ಗಾಳ

ಹಾಕುವುದನ್ನು ಮೀಂಚುಳ್ಳಿ ಗಿಡುಗಗಳಿಂದ ಕಲಿತಕೊಂಡ; ಸಾಮೂಹಿಕವಾಗಿ ಬೇಟೆಯಾಡುವುದನ್ನು ಕಾಡುನಾಯಿ ತೋಳಗಳಿಂದ ಕಲಿತುಕೊಂಡ. ಹೀಗೇ ಮೃಗ ಪಕ್ಷಿಗಳಿಂದ ಬೇಟೆಯಾಡುವುದನ್ನು ಕಲಿತುಕೊಂಡ.

ಪ್ರಸ್ತುತ ಘಿಸಾಡಿ ಜನಸಮುದಾಯದವು ಕೂಡಾ ಮಾಂಸಾಹಾರಿಗಳಾಗಿರುವುದರಿಂದ ಈ ಬೇಟೆ ವೃತ್ತಿಯು ಅವರಲ್ಲಿ ಸಹಜವಾಗಿ ರೂಢಿಗತವಾಗಿದೆ. ಇವರು ಅಲೆಮಾರಿಗಳಾಗಿರುವುದರಿಂದ ಒಂದು ಊರಿನಿಂದ ಮತ್ತೊಂದು ಊರಿಗೆ ತಮ್ಮ ಕುಲಕಸುಬಾದ ಕಮ್ಮಾರಿಕೆ ಕೆಲಸಗಳನ್ನು ಹುಡುಕಿಕೊಂಡು ಹೋಗುವಾಗ ದಾರಿಯುದ್ದಕ್ಕೂ ತಮ್ಮ ಗುಂಪಿನವರೊಂದಿಗೆ ಬೇಟೆಯನ್ನು ಹುಡುಕುತ್ತಾ ಹೋಗುತ್ತಾರೆ. ಕೆಲವೊಂದು ಸಲ ಕೆಲಸಗಳು ಸಿಗದೆ ಖಾಲಿ ಕುಳಿತುಕೊಂಡಾಗ, ಇಲ್ಲವೇ ಸಾಮೂಹಿಕ ವಾಗಿ ಬೇಟೆಬೇಕೆಂದು ನಿರ್ಧಾರ ತೆಗೆದುಕೊಂಡಾಗ, ಬೇಟೆಯಾಡಲು ಹೋಗುತ್ತಾರೆ. ಇವರು ಸಾಮಾನ್ಯವಾಗಿ ಮೊಲ, ಮುಂಗುಸಿ, ಗಿಡುಗ, ಜಿಂಕೆ, ಚಿಗರೆ, ಕಾಡು ಕುರಿ, ಉಡಾಗಳನ್ನು ಮತ್ತು ಪಕ್ಷಿಗಳಾದ ನವಿಲು, ಬುರ್ಲಿ, ಕೌಜುಗ, ಪಾರಿವಾಳ, ಅಬ್ಬುಲಿ ಹಕ್ಕಿ, ಚೋರೆಹಕ್ಕಿಗಳನ್ನು ಮತ್ತು ಜಲಚರವಾಸಿಗಳಾದ ಮೀನು, ಏಡಿಗಳನ್ನು ಹೆಚ್ಚಾಗಿ ಬೇಟೆಯಾಡುತ್ತಾರೆ. ಈ ಬೇಟೆಯ ಸಂದರ್ಭದಲ್ಲಿ ತಮ್ಮದೇ ಆದ ತಂತ್ರಗಳ ವಿಧಾನಗಳನ್ನು ಬಳಸುತ್ತಾರೆ. ಕ್ರೂರ ಮೃಗಗಳಾಗಿದ್ದರೆ ಸಾಮೂಹಿಕವಾಗಿ ಬೇಟೆಯಾಡುತ್ತಾರೆ. ಪಕ್ಷಿಗಳಾಗಿದ್ದರೆ ಬಲೆಗಳನ್ನು ಬಿಟ್ಟು ಹಿಡಿಯುತ್ತಾರೆ. ಇದು ಹೆಚ್ಚಾಗಿ ಮುದುಕರು, ಚಿಕ್ಕಮಕ್ಕಳು ಈ ತಂತ್ರ ಬಳಸುತ್ತಾರೆ. ಜಲಚರವಾಸಿಗಳಾದ ಮೀನು, ಏಡಿಗಳನ್ನು ಬೇಟೆಯಾಡಲು ಚಿಕ್ಕಮಕ್ಕಳು ಹೆಚ್ಚಾಗಿ ಹೋಗುವುದು ರೂಢಿಯಲ್ಲಿದೆ. ಈ ಬೇಟೆಯಾಡಲು ಜೊತೆಯಾಗಿ ಹೋದವರೆಲ್ಲ ಸಿಕ್ಕಂತಹ ಬೇಟೆಯನ್ನು ತಂದು ಎಲ್ಲರೂ ಸಮಪಾಲು ಹಂಚಿಕೊಳ್ಳುತ್ತಾರೆ. ಸಾಮಾನ್ಯವಾಗಿ ಇವರಲ್ಲಿ ಕಂಡುಬರುವ ಬೇಟೆಗಳನ್ನು ಈ ರೀತಿಯಾಗಿ ವಿವರಿಸಬಹುದು.

೫.೧. **ಏಡಿ ಬೇಟೆ :** ಏಡಿ ವಿಶೇಷವಾಗಿ ಜಲಾಶಯಗಳಲ್ಲಿ ಕಂಡುಬರುವ ಜಲಚರ ಪ್ರಾಣಿ, ಇವು ನೀರಿನ ಕೊರಕಲು ಹಳ್ಳ, ಹೊಳೆ, ನದಿ, ಕೆರೆ, ಬಾವಿ, ಗುಂಡಿ, ಗೊರಸು, ಗದ್ದೆಗಳ ಕಾಲುವೆ, ನಾಲೆ, ತೊರಿ, ಝರಿ ಮುಂತಾದವುಗಳಲ್ಲಿ ವಾಸಿಸುತ್ತವೆ. ಈ ಜಲಾಶಯಗಳಲ್ಲಿ ಬಂಡೆಗಳ ಸಂದು, ದರ, ಬಿಲಗಳಲ್ಲಿ ವಾಸಿಸುತ್ತವೆ. ಸಂಜೆಯಾದೊಡನೆ ಆಹಾರಾನ್ವೇಷಣೆಗೆ ಹೊರಡುತ್ತವೆ. ಇವು ಸದಾ ಕಾಲ ನೀರಿನಡಿಯಲ್ಲಿಯೇ ವಾಸಿಸುತ್ತವೆ.

ಘಿಸಾಡಿ ಜನಾಂಗದ ಹಲವರಿಗೆ ಏಡಿ ಬಲು ಪ್ರಿಯವಾದ ಆಹಾರ. ಅಷ್ಟೇ ಅಲ್ಲ, ಏಡಿ ಸಾರು ಬಲು ರುಚಿಕರವಾಗುವುದರೊಂದಿಗೆ ಕೆಲವೊಂದು ಕಾಯಿಲೆಗಳ ನಿವಾರಕವಾಗಿರುವುದರಿಂದ ಘಿಸಾಡಿ ಜನರು ಅವುಗಳನ್ನು ವಿಶೇಷವಾಗಿ ಹುಡುಕಿ ತಂದು ಉಪಯೋಗಿಸುತ್ತಾರೆ. ಏಡಿ ಗೊಜ್ಜಿನ ರಸ ಬಾಣಂತಿಯರ ಆರೋಗ್ಯಕ್ಕೆ ಮತ್ತು ಶಕ್ತಿವರ್ಧನೆಗೆ ಒಳ್ಳೆಯದೆಂದು ಬಳಸುತ್ತಾರೆ. ಏಡಿಸಾರನ್ನು

ಗೂರಲು, ಕೆಮ್ಮು ಮತ್ತು ದೀರ್ಘಕಾಲದ ಜ್ವರದ ನಿವಾರಣೆಗಾಗಿ ಉಪಯೋಗಿಸುವುದುಂಟು. ಕೆಲವರು ಏಡಿಯ ರಸವನ್ನು ಗೆಣಸು, ಮೊಳಕೆ ಕಾಳು, ತರಕಾರಿಗಳೊಂದಿಗೆ ಸೇರಿಸಿ ಊಟದಲ್ಲಿ ಬಳಸುತ್ತಾರೆ. ಒಂದೊಂದು ಸಲ ಏಡಿಯನ್ನು ಬೆಂಕಿಯಲ್ಲಿ ಸುಟ್ಟು ಅದಕ್ಕೆ ಎಣ್ಣೆ, ಉಪ್ಪು, ಕಾರಪುಡಿ, ಹುಳಿಯನ್ನು ಹಾಕಿ ಬಾಣಲಿಯಲ್ಲಿ ಹುರಿದು ಉಪಯೋಗಿಸುತ್ತಾರೆ. ಇವರು ಏಡಿಯ ಊಟವನ್ನು ಮಳೆಗಾಲ, ಚಳಿಗಾಲಗಳಲ್ಲಿ ಶೀತಕ್ಕೆ ಒಳ್ಳೆಯ ಸಿದ್ಧೌಷಧ ಎಂದು ಹೇಳುತ್ತಾರೆ.

ಬೇಟೆಯಾಡುವ ತಂತ್ರಗಳು : ಏಡಿಗಳು ಇರಬಹುದಾದ ನೀರಿನ ಗುಂಡಿಯನ್ನು ಒಡೆದು ನೀರನ್ನೆಲ್ಲಾ ಖಾಲಿ ಮಾಡಿದಾಗ ಗುಂಡಿಯ ತಳದಲ್ಲಿ ಏಡಿಗಳು ಉಳಿಯುತ್ತವೆ. ಆಗ ಅವುಗಳನ್ನು ಹಿಡಿದು ಬಟ್ಟೆಯ ಚೀಲದಲ್ಲಿ ಇಲ್ಲವೇ ಮುಚ್ಚಲು ಮತ್ತು ತೆರೆಯಲು ಭದ್ರವಾಗಿರುವ ಪಾತ್ರೆಗಳಲ್ಲಿ ಹಾಕಿಕೊಳ್ಳುತ್ತಾರೆ. ಗೆದ್ದಲು ಹುಳುಗಳನ್ನು ತಂದು ಅವುಗಳನ್ನು ಸಾಯಿಸಿ ಪುಡಿ ಮಾಡಿ ನೀರಿನಲ್ಲಿ ಕದಡುತ್ತಾರೆ. ಆಗ ಏಡಿಗಳು ಆ ಗೆದ್ದಲು ಹುಳಗಳನ್ನು ತಿನ್ನಲು ವಾಸನೆ ನೋಡಿಕೊಂಡು ಕಲ್ಲು ಪೊಟರೆಗಳಿಂದ ಹೊರಗೆ ಬಂದಾಗ ಅವುಗಳನ್ನು ಹಿಡಿಯುತ್ತಾರೆ. ಇನ್ನೊಂದು ವಿಧಾನವೆಂದರೆ, ಒಂದು ಕೋಲಿನ ತುದಿಗೆ ಮೀನು, ಕಪ್ಪೆ, ಕೋಳಿ, ಕುರಿಯ ಮಾಂಸವನ್ನು ಕಟ್ಟಿ, ಅದನ್ನು ಏಡಿಗಳು ಇರಬಹುದಾದ ಬಿಲಗಳಲ್ಲಿ, ಕಲ್ಲಿನ ಸಂಧಿಗಳಲ್ಲಿ ನಿಧಾನವಾಗಿ ತುರುಕುತ್ತಾ ಹೊಗುತ್ತಾರೆ. ಮಾಂಸದ ವಾಸನೆ ತಾಗಿದ ಕೂಡಲೆ ಅದನ್ನು ತಿನ್ನಲೆಂದು ಏಡಿಗಳು ಬಿಲದಿಂದ (ರಂಧ್ರ) ಹೊರಗೆ ಬರುತ್ತವೆ. ಆಗ ಮಾಂಸ ಕಟ್ಟಿದ ಕೋಲನ್ನು ನಿಧಾನವಾಗಿ ಹಿಂದಕ್ಕೆ ಎಳೆದುಕೊಳ್ಳುತ್ತಾ ಹೋಗುತ್ತಾರೆ. ಏಡಿ ಸ್ವಲ್ಪ ಸ್ವಲ್ಪ ಮುಂದಕ್ಕೆ ಬಂದ ತಕ್ಷಣ ಹಿಡಿಯಲು ಅನುಕೂಲವಾದಾಗ ಅವುಗಳನ್ನು ಹಿಡಿಯುತ್ತಾರೆ.

೧. **ಮೀನು ಬೇಟೆ :** ಮೀನು ಛಿಸಾಡಿ ಜನರ ಪ್ರಮುಖವಾದ ಮಾಂಸಾಹಾರ ಗಳಲ್ಲೊಂದಾಗಿದೆ. ಮೀನು ಬೇಟೆ ಆದ್ದುದರಿಂದ ಕಮ್ಮಾರಿಕೆ ಕೆಲಸಗಳು ಸಿಗದೆ ಇದ್ದಾಗ ಮೀನಿನ ಊಟ ಮಾಡಿದರೆ ಬುದ್ಧಿಶಕ್ತಿಯು ವೃದ್ಧಿಯಾಗುತ್ತದೆ ಎಂದು ಹೇಳುವರು. ಮೀನುಗಳು ದೊಡ್ಡ ಸಾಗರಗಳಿಂದ ಹಿಡಿದು ನದಿ, ಹೊಳೆ, ಹಳ್ಳಕೊಳ್ಳ, ಕೆರೆ, ಬಾವಿ, ಗುಂಡಿ, ಗದ್ದೆ, ಕಾಲುವೆಗಳಲ್ಲಿ ವಾಸಿಸುತ್ತವೆ. ಇವುಗಳ ಬೇಟೆಗೆ ಈ ಜನರು ಈ ಕೆಳಗಿನ ತಂತ್ರಗಳನ್ನು ಬಳಸುತ್ತಾರೆ.

೧.೧ **ಗುಂಡಿ ಉಗ್ಗುವುದು :** ಈ ಜನರು ಮೊದಲು ಮೀನುಗಳು ಇರಬಹುದಾದ ಗುಂಡಿಗಳನ್ನು ಹುಡುಕುತ್ತಾರೆ. ಆ ಗುಂಡಿಗೆ ಬರುವ ಮೇಲು ನೀರನ್ನು ಒಂದು ಕಾಲುವೆ ತೆಗೆದು ಬೇರೆ ಕಡೆಗೆ ತಿರುವುತ್ತಾರೆ. ಗುಂಡಿಯ ನೀರು ತಾನಾಗಿಯೇ ಹರಿದು ಹೋಗದಂತೆ ಗುಂಡಿಯ ಸುತ್ತಲೂ ದಿಂಡುಕಟ್ಟು ನಿರ್ಮಿಸುತ್ತಾರೆ. ಆ ನಂತರ ತೆರೆದ ಬಾಯಿಯಂತಿರುವ ಕಬ್ಬಿಣದ ಬುಟ್ಟಿ, ಬಿಂದಿಗೆ, ಪಾತ್ರೆ, ಮರಗಿಗಳಿಂದ ಗುಂಡಿಯ ನೀರೆಲ್ಲವನ್ನು ತೋಡಿ ಹೊರ ಚೆಲ್ಲುತ್ತಾರೆ. ಆಗ

ಗುಂಡಿಯ ನೀರು ಖಾಲಿಯಾದಾಗ ಮೀನು, ಏಡಿಗಳು ಗುಂಡಿಯ ತಳದಲ್ಲಿ ಉಳಿಯುತ್ತವೆ. ಅವೆಲ್ಲವನ್ನು ಕೈಯಿಂದ ಇಲ್ಲವೇ ಕೆಲವು ವಸ್ತುಗಳ ಸಹಾಯದಿಂದ ಹಿಡಿದು ತಮ್ಮ ಚೀಲದಲ್ಲಿ ಹಾಕಿಕೊಳ್ಳುತ್ತಾರೆ.

೧.೨ **ಬಲೆ ಹಾಕುವುದು** : ಭದ್ರವಾಗಿರುವ ಮೀನಿನ ಬಲೆಗಳನ್ನು ತಂದು ನೀರಿನಲ್ಲಿ ಬೀಸುತ್ತಾ ಹೋಗಿ, ಮತ್ತೊಂದು ಕಡೆಯಿಂದ ಎರಡು ಅಥವಾ ಮೂರು ಜನ ಸೇರಿ ಮೀನುಗಳನ್ನು ಓಡಿಸುವುದರ ಮೂಲಕ ಅವುಗಳಿಗೆ ಗಾಬರಿಗೊಳಿಸಿ ಬಲೆಯಲ್ಲಿ ಬೀಳುವಂತೆ ಮಾಡಿ ಹಿಡಿಯುತ್ತಾರೆ. ಕೆಲವೊಂದು ಸಲ ಸೀರೆ, ಪಂಚೆ, ಗುಡಾರ ಕಂಬಳಿಗಳಿಂದ ಎರಡು ಕಡೆಗಳಲ್ಲಿ ಒಬ್ಬೊಬ್ಬರಂತೆ ತುದಿಗಳನ್ನು ಹಿಡಿದು ಆ ಬಟ್ಟೆಯನ್ನು ನೀರಿನಲ್ಲಿ ಮುಳುಗಿಸುತ್ತಾರೆ. ಆಗ ಮತ್ತೊಂದು ಕಡೆಯಿಂದ ಮೀನುಗಳನ್ನು ಓಡಿಸಿದಾಗ ಅವು ಹಾಸಿರುವ ಬಟ್ಟೆಯ ಮೇಲೆ ಬಂದಾಗ ಬಟ್ಟೆಯನ್ನು ಮೇಲಕ್ಕೆ ಎತ್ತುತ್ತಾರೆ. ಆ ಮೀನುಗಳನ್ನು ತೆಗೆದುಕೊಂಡು ಪಾತ್ರೆಗಳಲ್ಲಿ ಹಿಡಿದಿಟ್ಟುಕೊಳ್ಳುತ್ತಾರೆ.

೧.೩ **ಗಾಳ ಹಾಕುವುದು** : ಗಾಳದಿಂದ ಮೀನು ಹಿಡಿಯುವುದು ಬಹಳ ಸುಲಭ ಪದ್ಧತಿಯಾಗಿರುವುದರಿಂದ ಘಿಸಾಡಿ ಜನರ ಮಕ್ಕಳು, ಹೆಂಗಸರು, ಮುದುಕರು ಇದೇ ಪದ್ಧತಿಯನ್ನು ಅನುಸರಿಸುತ್ತಾರೆ. ಸುಮಾರು ಒಂದು ಮಾರು ಉದ್ದದ ಒಂದು ಕೋಲಿನ ತುದಿಗೆ ಸುಮಾರು ಮಾರುದ್ದದ ತೆಳುವಾದ ರೇಷ್ಮೆಯ ದಾರವನ್ನು ಕಟ್ಟಿ, ಅದರ ತುದಿಗೆ ಒಂದು ಕಬ್ಬಿಣದ ಕೊಕ್ಕೆಯಂತಿರುವ ತಂತಿ ಗಾಳವನ್ನು ಬಿಗಿದಿರುತ್ತಾರೆ. ಈ ಗಾಳದ ತುದಿಯಲ್ಲಿ ಕೊಕ್ಕೆಯಂತಿರುವ ಕಬ್ಬಿಣದ ತುದಿಗೆ ಎರೆಹುಳು ಅಥವಾ ಯಾವುದೇ ಮಾಂಸದ ಸಣ್ಣ ತುಂಡನ್ನು ಸಿಕ್ಕಿಸಿ, ಹಳ್ಳಕೊಳ್ಳಗಳಲ್ಲಿನ ಆಳವಾದ ಗುಂಡಿಗಳ ದಡದ ಮೇಲೆ ಕುಳಿತು ಗಾಳವನ್ನು ನೀರಿನಲ್ಲಿ ಮುಳುಗಿಸುತ್ತಾರೆ. ಆಗ ಗಾಳದ ತುದಿಯಲ್ಲಿನ ಮಾಂಸದ ತುಂಡನ್ನು ತಿನ್ನಲು ಬಂದ ಮೀನಿನ ಗಂಟಲಿಗೆ ಗಾಳ ಸಿಕ್ಕಿಕೊಂಡಾಗ ನೀರಿನಲ್ಲಿ ವಿಲವಿಲನೆ ಒದ್ದಾಡುತ್ತದೆ. ಆಗ ಗಾಳದ ನೀರಿನ ಮೇಲೆ ತೇಲಿದ ಕಡ್ಡಿ ಅಲುಗಾಡುತ್ತದೆ. ಅದೇ ಸಮಯವನ್ನು ನೋಡಿ ಗಾಳವನ್ನು ಒಮ್ಮೆಗೆ ಮೇಲಕ್ಕೆ ಸೆಳೆದು ಮೀನನ್ನು ಗಾಳದಿಂದ ಬಿಡಿಸಿಕೊಳ್ಳುತ್ತಾರೆ.

೨. **ಪಕ್ಷಿ ಬೇಟೆ** : ಸಾಮಾನ್ಯವಾಗಿ ಈ ಸಮುದಾಯದವರು ಬೇಟೆಯಾಡುವ ಪಕ್ಷಿಗಳೆಂದರೆ ಕಾಡುಕೋಳಿ, ಬುರುಲೆ ಹಕ್ಕಿ, ಪಾರಿವಾಳ, ಕಾಡುಕೊಕ್ಕರೆ, ಕೌಜುಗನ ಹಕ್ಕಿಗಳನ್ನು ಬೇಟೆಯಾಡಿ ಅವುಗಳ ಮಾಂಸವನ್ನು ಊಟಕ್ಕೆ ಬಳಸುವುದು ರೂಢಿಯಲ್ಲಿದೆ. ಅಲ್ಲದೆ ಇವುಗಳ ಬೇಟೆಯ ಸಂದರ್ಭದಲ್ಲಿ ಹಲವಾರು ತಂತ್ರಗಳನ್ನು ಬಳಸುತ್ತಾರೆ. ಅವು ಈ ರೀತಿಯಾಗಿವೆ.

೨.೧ **ಬಿಲ್ಲಿನಿಂದ ಹೊಡೆಯುವುದು** : ದಾರಿಯಲ್ಲಿ ಹೋಗುವಾಗ ಅವರ ಕಣ್ಣಿಗೆ ಕಂಡಂತಹ ಪಕ್ಷಿಗಳನ್ನು ಬಿಲ್ಲಿನಿಂದ ಬೇಟೆಯಾಡುವ ಪದ್ಧತಿ ಅನುಸರಿಸುತ್ತಾರೆ. ಅಂದರೆ, ಒಂದು ಹಸಿ ಗಿಡದ ಉದ್ದನೆಯ ಛಡಿಯನ್ನು ತೆಗೆದುಕೊಂಡು ಅದರ ಎರಡು ತುದಿಗಳನ್ನು ಕಮಾನಿನಾಕಾರದಲ್ಲಿ

ಬಿಲ್ಲಿನಂತೆ ಬಾಗಿಸಿ ಎರಡು ತುದಿಗಳಿಗೆ ನಾರಿನಿಂದ ಅಥವಾ ರೇಷ್ಮೆಯಿಂದ ಮಾಡಿದ ದಾರದಿಂದ ಬಿಗಿದು ಕಟ್ಟಿ ಬಿಲ್ಲನ್ನು ಸಿದ್ಧಪಡಿಸಿಕೊಳ್ಳುತ್ತಾರೆ. ಕೆಲವು ಉದ್ದನೆಯ ಹಗುರವಾದ ಕಡ್ಡಿಗಳನ್ನು ತೆಗೆದುಕೊಂಡು ಆ ಕಡ್ಡಿಗಳ ತುದಿಗೆ ನುಣುಪಾದ ಸೂಜಿಯಂತಹ ಮುಳ್ಳುಗಳು ಅಥವಾ ಹರಿತವಾದ ಮೊನಚಾದ ವಸ್ತುಗಳನ್ನು ಚುಚ್ಚಿ ಅಡವಿಯಲ್ಲಿರುವಂತಹ ಪಕ್ಷಿಗಳಿಗೆ ಬಿಲ್ಲಿನಿಂದ ಹೊಡೆಯುವುದರ ಮೂಲಕ ಬೇಟೆಯಾಡುತ್ತಾರೆ.

೨.೨ **ಚಾಟಿ ಬಿಲ್ಲಿನಿಂದ ಹೊಡೆಯುವುದು :** ಈ ಸಮುದಾಯದ ಜನರು ಇಂಗ್ಲಿಷ್ 'Y' (ವೈ) ಆಕ್ಷರವನ್ನು ಹೋಲುವ ಮರದ ಕಟ್ಟಿಗೆಯನ್ನು ಆರಿಸಿ ಅದಕ್ಕೆ ಮೇಲಿನ ಎರಡು ತುದಿಗಳಿಗೆ ಸೈಕಲ್‌ನಲ್ಲಿ ಬಳಸುವ ಟ್ಯೂಬುಗಳ ರಬ್ಬರ್ ಪಟ್ಟಿಯಿಂದ ಗಟ್ಟಿಯಾಗಿ ಬಿಗಿದು ಕಟ್ಟಲಾಗುತ್ತದೆ. ಈ ರಬ್ಬರ್ ಪಟ್ಟಿಯಲ್ಲಿ ಸಣ್ಣ ಪ್ರಮಾಣದ ಕಲ್ಲಿನ ಹರಳುಗಳನ್ನಿಟ್ಟು ಬೇಟೆಯ ಕಡೆಗೆ ಗುರಿಯಿಟ್ಟು ಹೊಡೆಯುವುದರ ಮೂಲಕ ಬೇಟೆಯಾಡುತ್ತಾರೆ.

೨.೩ **ಕವಣೆಯಿಂದ ಹೊಡೆಯುವುದು :** ಕವಣೆಯಲ್ಲಿ ಕಲ್ಲನಿಟ್ಟು ಬೇಟೆಯನ್ನಾಡುವುದು ಇವರ ಪದ್ಧತಿಗಳಲ್ಲೊಂದು. ಇದು ಹೆಚ್ಚಿನ ಪ್ರಮಾಣದಲ್ಲಿ ಬಳಕೆಯಾಗುವುದಿಲ್ಲ. ಈ ಕವಣೆಗೆ ಒಂದು ಉದ್ದವಾದ ದಾರವಿರುತ್ತದೆ. ಮಧ್ಯದಲ್ಲಿ ತೊಗಲಿನಿಂದ ಮಾಡಿದ ಒಂದು ಕುಪ್ಪೆ ಇರುತ್ತದೆ. ಹಗ್ಗದ ಒಂದು ತುದಿಯಲ್ಲಿ ಒಂದು ಗಂಟು ಇದ್ದು, ಇನ್ನೊಂದು ತುದಿಯನ್ನು ಅದು ಜಾರದಂತೆ ಕೈಗೆ ಸುತ್ತಿಕೊಳ್ಳುತ್ತಾರೆ. ಆ ಕುಪ್ಪೆಯೊಳಗೆ ಹೆಣ್ಣು ಮಕ್ಕಳು ಆಟವಾಡುವ ಆಣೆಕಲ್ಲಿಗಿಂತ ಸ್ವಲ್ಪ ದಪ್ಪವಾದ ಕಲ್ಲನ್ನಿಟ್ಟು, ಹಗ್ಗದ ಇನ್ನೊಂದು ತುದಿಯ ಗಂಟನ್ನು ಹಿಡಿದು ತಮಗೆ ಗುರಿ ಮತ್ತು ವೇಗ ಸಿಗುವ ತನಕ ಬೀಸುತ್ತಿದ್ದು, ಅನಂತರ ತಮ್ಮ ಬೇಟೆಯ ಪಕ್ಷಿಗಳಿರುವ ಕಡೆಗೆ ಎಸೆಯುತ್ತಾರೆ.

೨.೪ **ಬಲೆ ಹಾಕುವುದು :** ಈ ಸಮುದಾಯದವರು ಪ್ರಾಣಿ ಪಕ್ಷಿಗಳು ಹೆಚ್ಚಾಗಿ ವಾಸಿಸುವ ಸ್ಥಳವನ್ನು ಗುರುತಿಸಿಕೊಂಡು ಆ ಪ್ರದೇಶದಲ್ಲಿ ಬಲೆಗಳನ್ನು ತಮಗೆ ಅನುಕೂಲವಾಗುವ ರೀತಿಯಲ್ಲಿ ಹಾಸಿ ಅವಿತು ಕುಳಿತುಕೊಳ್ಳುತ್ತಾರೆ. ಬಲೆಯ ಇನ್ನೊಂದು ತುದಿಯಿಂದ ಉದ್ದನೆಯ ಹಗ್ಗವನ್ನು ತಮ್ಮ ಕೈಯಲ್ಲಿಟ್ಟುಕೊಂಡಿರುತ್ತಾರೆ. ಆಗ ಪ್ರಾಣಿ-ಪಕ್ಷಿಗಳು ಬಲೆಯಲ್ಲಿ ಇಟ್ಟಿರುವಂತಹ ಆಹಾರಕ್ಕಾಗಿ ತಿನ್ನಲು ಬಂದಾಗ ತಮ್ಮ ಕೈಯಲ್ಲಿ ಹಿಡಿದುಕೊಂಡ ದಾರದ ತುದಿಯಿಂದ ಎಳೆದಾಗ ಪ್ರಾಣಿ-ಪಕ್ಷಿಗಳು ಬಲೆಯಲ್ಲಿ ಬೀಳುತ್ತವೆ. ಒಂದೊಂದು ಸಲ ತಾವು ಹಾಕಿರುವ ಬಲೆಯ ಕಡೆಗೆ ಪ್ರಾಣಿ-ಪಕ್ಷಿಗಳನ್ನು ಓಡಿಸಿಕೊಂಡು ಬಂದಾಗ ಬಲೆಯಲ್ಲಿ ಬೀಳುತ್ತವೆ. ಈ ರೀತಿಯಾಗಿ ಬಲೆಯಿಂದ ಬೇಟೆಯನ್ನಾಡುತ್ತಾರೆ.

೩. **ಪ್ರಾಣಿ ಬೇಟೆ :** ಘಿಸಾಡಿ ಜನರು ಪ್ರಾಣಿಗಳ ಬೇಟೆಯಲ್ಲಿ ಕೂಡಾ ತಮ್ಮದೇ ಆದ ನಿಪುಣತೆಯನ್ನು ಹೊಂದಿದವರಾಗಿದ್ದಾರೆ. ಇವರು ಸಾಮಾನ್ಯವಾಗಿ ಚಿಗರೆ, ಜಿಂಕೆ, ಮೊಲ, ಮುಂಗುಸಿ, ಉಡಾ ಮುಂತಾದವುಗಳನ್ನು ಬೇಟೆಯಾಡುತ್ತಾರೆ. ಚಿಗರೆಯ ಬೇಟೆಯನ್ನು ಹೆಚ್ಚಾಗಿ ಸಾಮೂಹಿಕವಾಗಿ

ಒಂದು ಗುಂಪು ಕಟ್ಟಿಕೊಂಡು ಚಿಗರೆಯನ್ನು ಬೆನ್ನಟ್ಟಿಸಿ ಹರಿತವಾದ ಆಯುಧಗಳನ್ನು ಬೀಸಿ ಅದರ ಕಾಲುಗಳಿಗೆ ಹೊಡೆದು ಗಾಯಮಾಡಿ ಕೆಳಗೆ ಬಿದ್ದ ಮೇಲೆ ಅದರ ಶಕ್ತಿ ಕುಂದುವವರೆಗೆ ಹೊಡೆಯುತ್ತಾರೆ. ಕೆಲವೊಂದು ಸಲ ನೆಲವನ್ನು ಅಗೆದು ಗುಂಡಿಯನ್ನು ತೋಡಿ ಗುಂಡಿಯ ಮೇಲೆ ತಪ್ಪಲುಗಳನ್ನಿಟ್ಟಾಗ ಅದು ಆಳವಾಗಿದೆ ಎಂಬುದು ಆ ಬೇಟೆಯ ಪ್ರಾಣಿಗೆ ತಿಳಿಯುವುದಿಲ್ಲ. ಆಗ ಬೇಟೆಯಲ್ಲಿ ನಿರತರಾದವರು ಉಪಾಯದಿಂದ ಆ ಪ್ರಾಣಿಯನ್ನು ಗುಂಡಿಯ ಕಡೆಗೆ ಓಡಿಸಿಕೊಂಡು ಬಂದಾಗ, ಅದು ತಪ್ಪಲುಗಳಿಂದ ಮುಚ್ಚಿರುವ ಗುಂಡಿಯಲ್ಲಿ ಬಿದ್ದ ತಕ್ಷಣ ಎಲ್ಲರೂ ಸೇರಿ ಬೇಟೆಯ ಪ್ರಾಣಿಯ ಶಕ್ತಿ ಕುಂದುವವರೆಗೆ ಹೊಡೆದುರುಳಿಸುತ್ತಾರೆ. ಕ್ರೂರ ಮೃಗಗಳಾದರೆ ಸಾಮೂಹಿಕವಾಗಿ ನಾಯಿಗಳಿಂದ ಬೆನ್ನಟ್ಟಿಸಿ ಹೊಡೆದುರುಳಿಸುತ್ತಾರೆ. ಪೊದೆಗಳಲ್ಲಿರುವ ಮುಂಗುಸಿ, ಮೊಲ, ಉಡಗಳನ್ನು ಕೂಡಾ ಬೆನ್ನಟ್ಟಿ ಕಟ್ಟಿಗೆ ಕಲ್ಲುಗಳಿಂದ, ಕೆಲವು ಸಂದರ್ಭಗಳಲ್ಲಿ ಬಲೆಗಳನ್ನು ಹಾಕಿ ಹೊಡೆದುರುಳಿಸುತ್ತಾರೆ. ಉಡದ ಮಾಂಸ ತಿಂದವರ ಸೊಂಟ ಗಟ್ಟಿಯಾಗುತ್ತದೆ ಎಂದು ಅದನ್ನು ಬಳಸುತ್ತಾರೆ.

೪. **ಜೇನು ಬೇಟೆ :** ಫಿಸಾಡಿ ಸಮುದಾಯದವರು ಜೇನು ಬೇಟೆಗೆ ಅಷ್ಟೇನು ಮಹತ್ವ ನೀಡಿರುವುದಿಲ್ಲ. ಎಲ್ಲಿಯಾದರೂ ಗಿಡಗೆಂಟೆಗಳ ಪೊದೆಯಲ್ಲಿ ಸಣ್ಣ ಜೇನುನೊಣಗಳ ಹಾರಾಟ ಕಂಡುಬಂದರೆ ಅವುಗಳನ್ನು ಶೋಧಿಸಿ ಬೇಟೆಯಾಡುತ್ತಾರೆ. ಆದರೆ ಇವರು ದೊಡ್ಡಜೇನಿನ ಬೇಟೆಯ ತಂಟೆಗೆ ಹೋಗುವುದಿಲ್ಲ. ಬೇಟೆಯಾಡಿದ ಜೇನು ಮಾರಾಟ ಮಾಡುವುದಿಲ್ಲ. ಅದನ್ನು ವಿವಿಧ ಸಂದರ್ಭಗಳಲ್ಲಿ ಔಷಧಕ್ಕಾಗಿ ಬಳಸಿಕೊಳ್ಳುವರು. ಹುಟ್ಟಿದ ಮಗುವಿನ ನಾಲಿಗೆಗೆ ಜೇನುತುಪ್ಪ ಹಚ್ಚಿದರೆ ನಾಲಿಗೆಯಿಂದ ಸ್ಪಷ್ಟವಾಗಿ ಬಹುಬೇಗನೆ ಮಾತನಾಡಲು ಬರುವುದು ಎಂಬ ನಂಬಿಕೆಯಿಂದ ಇದನ್ನು ಬಳಸುತ್ತಾರೆ. ಈ ವಿವಿಧ ತಂತ್ರಗಳಿಂದ ಬೇಟೆಯಾಡುವುದರ ಮೂಲಕ ತಮ್ಮ ಆಹಾರದ ಪೂರೈಕೆಯನ್ನು ಮಾಡಿಕೊಳ್ಳುವುದು ಫಿಸಾಡಿ ಸಮುದಾಯದಲ್ಲಿ ಕಂಡಬರುತ್ತದೆ.

೧೩. ಪಶುಪಾಲನೆ

ಬೇಟೆಯ ನಂತರ ಮಾನವನ ಆರ್ಥಿಕ ಉತ್ಪಾದನೆಯಲ್ಲಿ ಪಶುಪಾಲನೆಯು ದ್ವಿತೀಯ ಹಂತದಲ್ಲಿ ಬೆಳೆದು ಬಂದ ವ್ಯವಸ್ಥೆಯಾಗಿದೆ. ಬೇಟೆಯಾಡುವುದು ಸದಾಕಾಲ ಸಾಹಸದ ಪ್ರವೃತ್ತಿಯಾಗಿರುತ್ತದೆ. ಅಲ್ಲದೆ ಕೆಲವೊಂದು ಭೂಭಾಗದ ಪ್ರದೇಶವು ಬಯಲುಸೀಮೆಯಿಂದ ಕೂಡಿರುವುದರಿಂದ, ಅನಿವಾರ್ಯವಾಗಿ ಪಶುಪಾಲನೆಯ ಹಂತ ಆರಂಭವಾಯಿತು. ಭೂಮಿಯ ಮೇಲೆ ವಾಸಿಸುವ ವಿವಿಧ ರೀತಿಯ ಪ್ರಾಣಿ ಪಶುಗಳನ್ನು ಪಳಗಿಸಿ ಸಾಕು ಪ್ರಾಣಿಗಳನ್ನಾಗಿಸಿಕೊಂಡಿದ್ದು ಈ ಹಂತದಲ್ಲೇ ಎಂದು ಸ್ಪಷ್ಟವಾಗಿ ಹೇಳಬಹುದು. ಈ ಸಂದರ್ಭದಲ್ಲಿ ಮಾನವನ ಉದ್ದೇಶಗಳಲ್ಲಿ ಅಲ್ಪಸ್ವಲ್ಪ ಬದಲಾವಣೆಗಳಾಗಿ ಪ್ರಾಣಿಗಳನ್ನು ಕೊಲ್ಲುವುದರ ಜೊತೆಗೆ ಕೆಲವು ಪ್ರಾಣಿಗಳನ್ನು ಹಿಡಿದು ಅವುಗಳನ್ನು ಪಳಗಿಸಿ ಬಳಸಿಕೊಳ್ಳಲು ಆರಂಭಿಸಿದನು. ವ್ಯವಸಾಯಕ್ಕಾಗಿ, ಸರಕು ಸಾಗಾಣಿಕೆ

ಮಾಡುವುದಕ್ಕಾಗಿ, ಮಾಂಸದ ಆಹಾರಕ್ಕಾಗಿ, ಹೈನುಗಾರಿಕೆ, ಮನೆಯನ್ನು ಕಾಯುವುದಕ್ಕಾಗಿ, ಕಳ್ಳಕಾಕರಿಂದ ರಕ್ಷಣೆ ಮತ್ತು ಎಚ್ಚರಿಕೆಗೊಳಿಸುವುದಕ್ಕಾಗಿ, ಸಾಹಸ ಪ್ರದರ್ಶನಕ್ಕಾಗಿ, ಮೋಜಿಗಾಗಿ ವಿವಿಧ ರೀತಿಯ ಮತ್ತು ವಿವಿಧ ಜಾತಿಗೆ ಸೇರಿದ ಅನೇಕ ಪ್ರಾಣಿ ಪಕ್ಷಿಗಳನ್ನು ಹಿಡಿದು ತಂದು ಅವುಗಳಿಗೆ ಪ್ರೀತಿ-ಮಮತೆಯನ್ನು ವ್ಯಕ್ತಪಡಿಸಿ ಸಾಕಲು ಆರಂಭಿಸಿದನು.

ಈ ಪಶುಪಾಲನೆ ಮಾಡುವುದಕ್ಕೆ ಆಯಾ ಪ್ರದೇಶದ ಭೂಭಾಗದ ಪರಿಸರವು ಕೂಡಾ ಬಹಳ ಪ್ರಮುಖವಾಗಿರುತ್ತದೆ. ಅಂದರೆ ಬೇರೆ ಬೇರೆ ಪರಿಸರಗಳಲ್ಲಿ ವಾಸಿಸುವ ಜನ ಬೇರೆ ಬೇರೆ ಪ್ರಾಣಿಗಳನ್ನು ಸಾಕುತ್ತಾರೆ. ಹುಲ್ಲುಗಾವಲು ಪ್ರದೇಶದಲ್ಲಿ ದನ-ಕರುಗಳನ್ನು, ಉಷ್ಣವಲಯದ ಮರುಭೂಮಿ ಪ್ರದೇಶಗಳಲ್ಲಿ ಒಂಟೆ ಜಾತಿಗೆ ಸೇರಿದ ವಿವಿಧ ಪ್ರಾಣಿಗಳನ್ನು, ಹಿಮಾಲಯ ಪ್ರದೇಶದಲ್ಲಿ ಹಿಮಸಾರಂಗ ಪ್ರಾಣಿಗಳನ್ನು ಸಾಕುವುದು ರೂಢಿಯಲ್ಲಿದೆ. ಹೀಗೆ ಸಾಕಲ್ಪಟ್ಟ ಪ್ರಾಣಿಗಳಿಂದ ಹಾಲು, ಮಾಂಸ, ಉಣ್ಣೆ, ಚರ್ಮಗಳಂತಹ ಅಗತ್ಯ ವಸ್ತುಗಳನ್ನು ಪಡೆಯುವುದರ ಜೊತೆಗೆ ಕೆಲವು ಸರಕು ಸಾಗಣೆ ಕೆಲಸಕ್ಕೂ ಕೂಡಾ ಪ್ರಾಣಿಗಳನ್ನು ಬಳಸಲಾಗುತ್ತದೆ.

ಅಲೆಮಾರಿಗಳಾದ ಘಿಸಾಡಿ ಸಮುದಾಯವು ಪಶುಪಾಲನೆಯನ್ನು ಅವಲಂಬಿಸಿದೆ. ಇವರು ಬಹುಮುಖ್ಯವಾಗಿ ಈ ಮೂರು ಮುಖ್ಯ ಉದ್ದೇಶಗಳಿಗಾಗಿ ಪಶುಪಾಲನೆ ಮಾಡುವುದು ಕಂಡುಬರುತ್ತದೆ. ೧. ಸರಕು ಸಾಗಾಣಿಕೆಗಳನ್ನು ಸಾಗಿಸುವ ಉದ್ದೇಶದಿಂದ ೨. ಗೃಹ ಬಳಕೆಯ ಹೈನುಗಾರಿಕೆಗಾಗಿ ೩. ಅನಿವಾರ್ಯ ಸಂದರ್ಭಗಳು ಮತ್ತು ಮೋಜಿಗಾಗಿ ಪಶುಪಾಲನೆ ಮಾಡಿರುವುದು ಕಂಡುಬರುತ್ತದೆ. ಘಿಸಾಡಿ ಸಮುದಾಯದವರು ಅಲೆಮಾರಿಗಳಾಗಿರುವುದರಿಂದ ತಮ್ಮ ಸರಕು ಸಾಗಾಣಿಕೆಗಳನ್ನು ಒಂದು ಊರಿಂದ ಮತ್ತೊಂದು ಊರಿಗೆ ತೆಗೆದುಕೊಂಡು ಹೋಗುವುದಕ್ಕಾಗಿ ಟಾಂಗಗಳಿದ್ದವರು ಕುದುರೆಗಳು, ಬಂಡಿಗಳಿದ್ದವರು ಕೋಣ-ಎತ್ತುಗಳು, ಕೆಲವರು ಕತ್ತೆಗಳ ಮೇಲೆ ಸರಕು ಸಾಗಾಣಿಕೆಗಳನ್ನು ಸಾಗಿಸುವ ಉದ್ದೇಶಗಳಿಗಾಗಿ ಇವುಗಳನ್ನು ಸಾಕುತ್ತಾರೆ. ಹಾಗೆಯೇ ಇವರು ತಮ್ಮ ಮನೆಯ ಗೃಹ ಬಳಕೆಗಾಗಿ ಮಾತ್ರ ಹೈನುಗಾರಿಕೆ ಮಾಡಿರುವುದು ಬಹುತೇಕ ಜನರಲ್ಲಿ ಕಂಡುಬರುತ್ತದೆ. ಹೀಗಾಗಿ ಇವರು ಹಾಲು ಕೊಡುವ ಒಂದು ಅಥವಾ ಎರಡು ಆಕಳು, ಎಮ್ಮೆಗಳನ್ನು ಮಾತ್ರ ಸಾಕುತ್ತಾರೆ. ಕೆಲವೊಂದು ಸಲ ಶ್ರೀಮಂತ ರೈತರ ಕೃಷಿ ಸಲಕರಣೆಗಳ ತಯಾರಿ ಮತ್ತು ರಿಪೇರಿ ಮಾಡಿಕೊಟ್ಟಾಗ ಉಂಬಳಿಯಾಗಿ ದಾನದ ರೂಪದಲ್ಲಿ ಆಕಳು, ಕರು, ಕುರಿ, ಮೇಕೆಗಳನ್ನು ಪಡೆದುಕೊಂಡಿರುತ್ತಾರೆ. ಇವುಗಳನ್ನು ಸಾಕಿಕೊಂಡ ಇವರು ಇವುಗಳನ್ನು ಕೂಡಾ ಅಲೆಮಾರಿಗಳನ್ನಾಗಿ ಮಾಡಿ ತಮ್ಮೊಂದಿಗೆ ಒಂದು ಊರಿನಿಂದ ಮತ್ತೊಂದು ಊರುಗಳಿಗೆ ತೆಗೆದುಕೊಂಡು ಹೋಗುತ್ತಾರೆ. ಇನ್ನು ಅನಿವಾರ್ಯ ಸಮಯ ಸಂದರ್ಭಗಳು ಬರಬಹುದು ಎಂಬ ಉದ್ದೇಶದಿಂದ ಕೋಳಿ, ಕೊಕ್ಕರೆ, ಬಾತುಕೋಳಿಗಳನ್ನು ಸಾಕುತ್ತಾರೆ. ಅನಿವಾರ್ಯ ಸಂದರ್ಭವೆಂದರೆ ಇವರಿಗೆ ಕೆಲಸಗಳು ಸಿಗದೆ ಇದ್ದಾಗ, ಅತಿಯಾದ ಮಳೆ ಬರುತ್ತಿದ್ದಾಗ, ಮನೆಗೆ ನೆಂಟರು ಬಂದಾಗ, ತಮ್ಮಲ್ಲಿರುವ ಕೋಳಿ, ಕೊಕ್ಕರೆಗಳನ್ನು ಮಾರಾಟ ಮಾಡಿ ಅದರಿಂದ ಬಂದ ಹಣದಿಂದ ಆ

ಸಂದರ್ಭಗಳನ್ನು ನಿಭಾಯಿಸಿಕೊಳ್ಳುತ್ತಾರೆ. ಕೆಲವು ಸಂದರ್ಭಗಳಲ್ಲಿ ಮಾಂಸದ ಆಹಾರಕ್ಕೆ ಅನುಕೂಲ ವಾಗುತ್ತದೆ ಎಂದು ಇವುಗಳನ್ನು ಸಲಹುತ್ತಾರೆ. ನಾಯಿಗಳನ್ನು ತಮ್ಮ ಮನೆ ಗುಡಾರಗಳನ್ನು ರಕ್ಷಣೆ ಮಾಡುವುದಕ್ಕಾಗಿ ಪಾರಿವಾಳ, ಗಿಳಿಗಳನ್ನು ಇನ್ನಿತರ ಪಕ್ಷಿಗಳನ್ನು ಯುವಕರು ಮೋಜಿಗಾಗಿ ಸಾಕುವುದು ರೂಢಿಯಲ್ಲಿದೆ.

೧೪. ಕೃಷಿ

ಭೂಮಿಯು ಪ್ರಕೃತಿಯ ಕೊಡುಗೆಯಾಗಿದ್ದು ಅದು ವಿವಿಧ ಸಂಪನ್ಮೂಲಗಳ ಆಗರವಾಗಿದೆ. ಭೂಮಿಯ ಸ್ವರೂಪಗಳನ್ನು ಪರ್ವತ, ಪ್ರಸ್ಥಭೂಮಿ, ಮೈದಾಗಳೆಂದು ವರ್ಗೀಕರಿಸಲಾಗಿದೆ. ಭೂಮಿಯು ಮಾನವನ ಆರ್ಥಿಕ ಚಟುವಟಿಕೆ, ವಸತಿ, ಆಹಾರ, ಉಡುಪು, ಕೃಷಿ, ಔದ್ಯೋಗಿಕ ಬೆಳವಣಿಗೆ, ಸಾರಿಗೆ ಮುಂತಾದವುಗಳ ಮೇಲೆ ಪ್ರಭಾವ ಬೀರುತ್ತದೆ. ಸಾಮಾನ್ಯವಾಗಿ ನದಿ ಮೈದಾನಗಳಲ್ಲಿ ದಟ್ಟ ಜನವಸತಿ ಕಂಡುಬಂದರೆ, ಮರುಭೂಮಿ, ಗುಡ್ಡಗಾಡು, ಹಿಮದಿಂದ ಆವೃತ್ತವಾದ ಪ್ರದೇಶಗಳಲ್ಲಿ ಕಡಿಮೆ ಜನ ವಸತಿ ಇರುತ್ತದೆ. ಭೂಮಿಯ ಮೇಲಿನ ಮಣ್ಣು ನೈಸರ್ಗಿಕ ಸಂಪನ್ಮೂಲಗಳಲ್ಲಿ ಒಂದಾಗಿದೆ. ಇದು ಕೃಷಿ, ಸಸ್ಯವರ್ಗ, ಕೈಗಾರಿಕೆ ಹಾಗೂ ಜನವಸತಿಯ ಹಂಚಿಕೆಯನ್ನು ನಿಯಂತ್ರಿಸುತ್ತದೆ. ಉತ್ತಮ ದರ್ಜೆಯ ಮಣ್ಣುಗಳಾದ ಮೆಕ್ಕಲು, ಕಪ್ಪು, ಜೇಡಿ, ಕೆಂಪು ಮತ್ತು ಕಾಡು ಮಣ್ಣುಗಳು ಅಧಿಕ ಉತ್ಪಾದನೆ ಮತ್ತು ಇಳುವರಿ ನೀಡುತ್ತವೆ.

ಇಂತಹ ಒಳ್ಳೆಯ ಮಣ್ಣು ಮತ್ತು ಪರಿಸರಗಳನ್ನು ಆಯ್ಕೆ ಮಾಡಿಕೊಂಡು ಬೆಳೆಗಳನ್ನು ಬೆಳೆಯುವ ಉದ್ದೇಶದಿಂದ ಭೂಮಿಯನ್ನು ಸಾಗುವಳಿ ಮಾಡುವ ಕಾರ್ಯವೇ ವ್ಯವಸಾಯ ಅಥವಾ ಕೃಷಿ(ಬೇಸಾಯ) ಎನ್ನುತ್ತಾರೆ. ಇದು ಸಾಮಾನ್ಯವಾಗಿ ಹೆಚ್ಚಿನ ಜನರು ಅವಲಂಬಿಸುವ ಉದ್ಯೋಗ ವಾಗಿದೆ. ಕೇವಲ ಜೀವನೋಪಾಯದ ದೃಷ್ಟಿಯಿಂದ ಆಹಾರಕ್ಕಾಗಿ ಮಾತ್ರ ಆರಂಭಗೊಂಡ ವ್ಯವಸಾಯ ಅನಂತರ ಕಾಲಮಾನದಲ್ಲಿ ವಿಶೇಷ ತಜ್ಞತೆಯನ್ನು ಬಯಸುವ ವಿಶಿಷ್ಟ ಮತ್ತು ಅಧಿಕ ಉತ್ಪದನಾ ಕ್ಷೇತ್ರವಾಗಿ ವಿಕಾಸಗೊಂಡಿದೆ. ಹೀಗೆ ಕೃಷಿ ಹಾಗೂ ನಾಗರಿಕತೆ ವಿಕಾಸಗೊಂಡಂತೆ ಸಾಮಾಜಿಕ ಸಂಘಟನೆಗಳಿಂದ ಚಿಕ್ಕ ಸಮುದಾಯಗಳು, ರೈತ ಸಮುದಾಯಗಳು, ವಿವಿಧ ಸೇವೆಗಳನ್ನು ಒದಗಿಸುವ ಸಮುದಾಯಗಳು, ನಗರ ಮತ್ತು ಕೈಗಾರಿಕಾ ಕ್ಷೇತ್ರಗಳು ಪ್ರಬಲವಾಗಿ ಬೆಳೆದುಕೊಂಡವು. ಹೆಚ್ಚಿನ ಉತ್ಪತ್ತಿಯಾದ ಆಹಾರ ಪದಾರ್ಥದ ಬೆಳೆಗಳಲ್ಲಿ ತಮ್ಮ ಅಗತ್ಯಕ್ಕಿಂತ ಹೆಚ್ಚಾಗಿದ್ದ ಪಾಲನ್ನು ವಿವಿಧ ಸೇವೆಗಳನ್ನು ಒದಗಿಸುವ ಜನರಿಗೆ ಹಂಚಿ, ಮಾರುಕಟ್ಟೆಯಲ್ಲಿ ಮಾರಾಟ ಮಾಡಿ ಲಾಭ ಗಳಿಸುವ ಪದ್ಧತಿ ರೂಪುಗೊಂಡಿರುತ್ತದೆ. ಹೀಗಾಗಿ ಕೃಷಿಯು, ಬೇಟೆ ಪಶುಪಾಲನೆ ನಂತರ ಬೆಳೆದು ಬಂದ ಈ ಹಂತವನ್ನು ಪ್ರಪಂಚದ ಅನೇಕ ಕುಟುಂಬಗಳಿಗೆ ಆಧಾರ ಸ್ತಂಭವಾಗಿದೆ.

ಪ್ರಸುತ್ತ ಘಿಸಾಡಿ ಜನ ಸಮುದಾಯವು ಕೂಡಾ ತಮ್ಮ ಮೂಲ ವೃತ್ತಿಯಾದ ಕಮ್ಮಾರಿಕೆ ವೃತ್ತಿಯ ಜೊತೆಗೆ ಕನಿಷ್ಠ ಕಡಿಮೆ ಪ್ರಮಾಣದಲ್ಲಿ ಕೃಷಿಯನ್ನು ಅವಲಂಬಿಸಿದ್ದಾರೆ. ಹೇಗೋ

ಕೆಲವು ವರ್ಷಗಳ ಹಿಂದೆ ನೂರಕ್ಕೆ ಒಬ್ಬಿಬ್ಬರು ಎಂಬಂತೆ ಅಲ್ಲಲ್ಲಿ ಕೃಷಿ ಭೂಮಿಯನ್ನು ಹೊಂದಿರುವ ಕುಟುಂಬಗಳು ಕಂಡುಬರುತ್ತವೆ. ಇವರು ತಮ್ಮ ವೃತ್ತಿಯ ಜೊತೆಗೆ ಕೃಷಿಯನ್ನು ಕೂಡಾ ತಮ್ಮ ಪ್ರಧಾನ ಕಸುಬನ್ನಾಗಿ ಮಾಡಿಕೊಂಡು ಉಪಜೀವಿಸುತ್ತಿದ್ದಾರೆ. ಇರುವ ಒಬ್ಬಿಬ್ಬರು ಕೃಷಿಕರಲ್ಲಿ ಒಣ ಬೇಸಾಯದವರೆ ಕಂಡುಬರುತ್ತಾರೆ. ಕೆಲವರಂತು ತಮ್ಮ ಚಿಕ್ಕ ಭೂಮಿಗಳನ್ನು ತಮ್ಮಲ್ಲಿಗೆ ಬರುವ ಕೃಷಿ ಸಲಕರಣೆಗಳನ್ನು ರೀಪೇರಿ ಮತ್ತು ತಯಾರಿಕೆ ಮಾಡಿಸಿಕೊಳ್ಳುವ ರೈತರಿಂದ ಉಳಿಸಿಕೊಂಡು ಬಿತ್ತನೆ ಕಾರ್ಯ ಮಾಡಿಸಿ ಕೊಳ್ಳುವವರಿದ್ದಾರೆ. ಅಲ್ಪಸ್ವಲ್ಪ ಜನ ಭೂಮಿಯನ್ನು ಸಾಗುವಳಿ ಮಾಡಿಕೊಂಡು ತಮ್ಮ ವೃತ್ತಿ ಮತ್ತು ಕೃಷಿ ಕೂಲಿಯನ್ನೇ ಅವಲಂಬಿಸಿದ್ದಾರೆ. ಬಿತ್ತಿರುವ ಭೂಮಿಯಲ್ಲಿ ಬೆಳೆಗಳನ್ನು ದನ-ಕರುಗಳಿಂದ ರಕ್ಷಣೆ ಮಾಡುವುದಕ್ಕಾಗಿ ತಮ್ಮ ಹೊಲದ ಸುತ್ತಲು ಮುಳ್ಳಿನ ಬೇಲಿಗಳನ್ನು ಹಾಕಿ, ಒಂದು ಮೂಲೆಯಲ್ಲಿ ಚಿಕ್ಕ ಎರಡು ಕೊಲುಗಳಿಂದ 'V' (ವಿ) ಆಕಾರದಲ್ಲಿ ಚಿಕ್ಕ ಬಾಗಿಲನ್ನು ಬಿಟ್ಟಿರುತ್ತಾರೆ. ಅಲ್ಲಿ ಕೇವಲ ಮನುಷ್ಯ ಮಾತ್ರ ಬರುವಂತೆ ಮರದ ಕವೆ ಕೋಲನ್ನು ನಿಲ್ಲಿಸಿರುತ್ತಾರೆ. ಉಳುಮೆ ಮಾಡುವುದಕ್ಕೆ ಮರದ ನೇಗಿಲು ಮತ್ತು ಜೋಡಿ ಎತ್ತುಗಳನ್ನು ಬಳಸುತ್ತಾರೆ. ಹೊಲಗಳಲ್ಲಿ ಬೆಳೆಗಳು ಇಲ್ಲದ ಬೇಸಿಗೆ ಕಾಲದಲ್ಲಿ ತಮ್ಮ ಕೊಟ್ಟಿಗೆಯ ತಿಪ್ಪೆಗೊಬ್ಬರವನ್ನು ಮನೆಮಕ್ಕಳೆಲ್ಲಾ ಸೇರಿ ತಲೆಯ ಮೇಲೆ ಹೊತ್ತು, ಎತ್ತಿನ ಬಂಡಿಯ ಮೂಲಕ ತಮ್ಮ ಹೊಲಗಳಿಗೆ ತೆಗೆದುಕೊಂಡು ಹೋಗಿ, ಹೊಲದ ತುಂಬೆಲ್ಲಾ ಹರಡುತ್ತಾರೆ. ನಂತರ ಉಳುಮೆ ಮಾಡಿ ಬೆಳೆಗಳನ್ನು ಬಿತ್ತುತ್ತಾರೆ. ಬಿತ್ತಿದ ಪೈರು ಸುಮಾರು ಒಂದು ಅಡಿ ಬೆಳೆದ ಮೇಲೆ ಅವರು ಕಳೆ ತೆಗೆಸುವರು. ಹುಲುಸಾದ ಬೆಳೆ ಬೆಳೆದ ನಂತರ ಪೈರನ್ನು ಸಾರಿಸಿ ಸ್ವಚ್ಛಗೊಳಿಸಿದ ಕಣದಲ್ಲಿ ಹಾಕಿ ರಾಶಿ ಮಾಡುವರು.

ರಾಶಿಯನ್ನು ಚೀಲಗಳಲ್ಲಿ ತುಂಬುವುದಕ್ಕಿಂತ ಮೊದಲು ತಮ್ಮ ಹೊಲದಲ್ಲಿ ಅಥವಾ ಸೀಮೆಯಲ್ಲಿ ಇರುವ ದೇವರುಗಳಿಗೆ ಹೋಗಿ ಪೂಜೆಮಾಡಿ ಸ್ವಲ್ಪ ರಾಶಿಯ ಕಾಳುಗಳನ್ನಿಟ್ಟು, ರಾಶಿಗೂ ಕೂಡಾ ಪೂಜೆ ಸಲ್ಲಿಸಿ, ನಾಲ್ಕಾರು ಜನರು ಸೇರಿ ರಾಶಿಗೆ ನಮಸ್ಕರಿಸಿ ಚೀಲಗಳಲ್ಲಿ ತುಂಬುತ್ತಾರೆ. ಒಟ್ಟಿನಲ್ಲಿ ಘಿಸಾಡಿ ಜನರಲ್ಲಿ ಕಡಿಮೆ ಪ್ರಮಾಣದ ರೈತ ಕುಟುಂಬಗಳಿದ್ದರೂ ಕೂಡಾ ಕೃಷಿ ಮತ್ತು ಕೃಷಿಕೂಲಿಗಳಿಂದ ಅವಲಂಬಿತರಾಗಿರುವುದು ಕಂಡುಬರುತ್ತದೆ. ಕ್ಷೇತ್ರಕಾರ್ಯದ ಮಾಹಿತಿಗಳನ್ನಾಧರಿಸಿ ಗುಲ್ಬರ್ಗಾ ಜಿಲ್ಲೆಯ ಘಿಸಾಡಿ ಜನ ಸಮುದಾಯವು ಒಣ ಬೇಸಾಯ ಭೂಮಿಯನ್ನು ಮಾತ್ರ ಹೊಂದಿರುತ್ತಾರೆ.

ಕೋಷ್ಟಕ ೧ರ ಕ್ಷೇತ್ರಕಾರ್ಯ ಮಾಹಿತಿಯನ್ನು ಗಮನಿಸಿದಾಗ ಪ್ರಥಮ ಸ್ಥಾನದಲ್ಲಿ ಗುಲ್ಬರ್ಗಾ ಜಿಲ್ಲೆಯ ಅಫಜಲ್‌ಪುರ ತಾಲ್ಲೂಕಿನ ಪಟ್ಟಣ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಒಟ್ಟು ೨೮ ವಿಭಕ್ತ ಮತ್ತು ಅವಿಭಕ್ತ ಕುಟುಂಬಗಳಿದ್ದು, ಅದರಲ್ಲಿ ಅಫಜಲ್‌ಪುರ, ಚೌಡಾಪುರ, ದೇವಲ ಗಾಣಗಾಪುರ, ಸ್ಟೇಷನ್ ಗಾಣಗಾಪುರಗಳಲ್ಲಿ ಮಾತ್ರ ಅಲ್ಪ ಪ್ರಮಾಣದ ಭೂಮಿಯನ್ನು ಹೊಂದಿರುವ ಕುಟುಂಬಗಳು ಇರುತ್ತವೆ.

ಕೋಷ್ಟಕ ೧. ಗುಲ್ಬರ್ಗಾ ಜಿಲ್ಲೆಯ ಛಿಸಾಡಿ ಸಮುದಾಯದ ತಾಲ್ಲೂಕುವಾರು ಭೂ ಹಿಡುವಳಿ (ಎಕರೆಗಳಲ್ಲಿ)

ಸಂಖ್ಯೆ	ತಾಲೂಕುಗಳು	ಕುಟುಂಬ	ಒಣ ಭೂಮಿ	ನೀರಾವರಿ	ಒಟ್ಟು
೧	ಅಫಜಲ್‌ಪುರ	೨೮	೬೧	--	೬೧
೨	ಆಳಂದ	೧೬	೧೩.೫	--	೧೩.೫
೩	ಚಿತ್ತಾಪುರ	೯೧	೨೭	--	೨೭
೪	ಚಿಂಚೋಳಿ	೪೮	೩೭	--	೩೭
೫	ಗುಲ್ಬರ್ಗಾ	೬೦	೧೨	--	೧೨
೬	ಜೇವರ್ಗಿ	೨೧	೭	--	೭
೭	ಶಹಾಪುರ	೧೯	--	--	--
೮	ಸೇಡಂ	೩೭	೨	--	೨
೯	ಯಾದಗಿರಿ	೧೫	--	--	--
	ಒಟ್ಟು	೩೩೫	೧೫೯.೫	--	೧೫೯.೫

ಈ ಒಟ್ಟು ೨೮ ಕುಟುಂಬಗಳ ಪೈಕಿ ೬೧ ಎಕರೆ ಭೂಮಿಯು ಕೇವಲ ಕೆಲವೇ ಕುಟುಂಬಗಳಿಗೆ ಮಾತ್ರ ಇರುತ್ತದೆ. ಇಡೀ ಗುಲ್ಬರ್ಗಾ ಜಿಲ್ಲೆಯಲ್ಲಿ ಆಸ್ತಿ ಹೊಂದಿರುವ ಕುಟುಂಬಗಳು ಹೆಚ್ಚಿನ ಪ್ರಮಾಣದಲ್ಲಿ ಇರುವ ತಾಲ್ಲೂಕು ಇದಾಗಿದೆ. ದ್ವಿತೀಯ ಸ್ಥಾನದಲ್ಲಿರುವ ತಾಲ್ಲೂಕು ಎಂದರೆ ಚಿಂಚೋಳಿ. ಈ ತಾಲ್ಲೂಕಿನ ಪ್ರದೇಶದಲ್ಲಿರುವ ಗ್ರಾಮಗಳಾದ ಬೂರಂಗಪಳ್ಳಿ, ಕರ್ಚೆಕೇಡ್, ಜೀಲ್‌ವರ್ ಸೆ, ಕಲ್ಲೂರ್, ಜಟ್ಟೂರ್, ಮಿರಿಯಾಣ, ಸೋಮಲಿಂಗದಳ್ಳಿಗಳಲ್ಲಿ ವಾಸಿಸುವ ಕುಟುಂಬಗಳಿಗೆ ಸ್ವಲ್ಪ ಕೃಷಿಭೂಮಿ ಇದ್ದು, ಇಡೀ ತಾಲ್ಲೂಕಿನ ಒಟ್ಟು ೪೮ ಕುಟುಂಬಗಳಿದ್ದು, ಅದರಲ್ಲಿ ಕನಿಷ್ಠ ಹತ್ತು ಕುಟುಂಬಗಳಿಗೆ ೩೭ ಎಕರೆ ಕೃಷಿ ಭೂಮಿಯು ಇರುತ್ತದೆ. ತೃತೀಯ ಸ್ಥಾನದಲ್ಲಿ ಕಾಣಬರುವ ಚಿತ್ತಾಪೂರ ತಾಲ್ಲೂಕಿನಲ್ಲಿ ಒಟ್ಟು ೯೧ ಕುಟುಂಬಗಳ ಪೈಕಿ ೧೩ ಕುಟುಂಬಗಳಿಗೆ ಒಟ್ಟು ೨೭ ಎಕರೆ ಜಮೀನು ಇರುವುದು. ಆಳಂದ ತಾಲ್ಲೂಕಿನಲ್ಲಿ ಒಟ್ಟು ೧೬ ಕುಟುಂಬಗಳಲ್ಲಿ ನಾಲ್ಕಾರು ಕುಟುಂಬಗಳಿಗೆ ಒಟ್ಟು ೧೩.೫ ಎಕರೆ. ಆದರೆ ಗುಲ್ಬರ್ಗಾ ಜಿಲ್ಲೆಯಲ್ಲಿ ಸುಮಾರು ೬೦ ಕುಟುಂಬಗಳಿದ್ದು, ಅವುಗಳಲ್ಲಿ ನಾಲ್ಕು ಕುಟುಂಬಗಳಿಗೆ ಒಟ್ಟು ೧೨ ಎಕರೆ. ಜೇವರ್ಗಿ ತಾಲ್ಲೂಕಿನಲ್ಲಿ ೭ ಕುಟುಂಬಗಳಿಗೆ ತಲಾ ಒಂದೊಂದು ಎಕರೆಯಂತೆ ೭ ಎಕರೆ ಕೃಷಿ ಭೂಮಿಯಿದೆ. ಸೇಡಂ ತಾಲ್ಲೂಕಿನಲ್ಲಿ ಒಟ್ಟು ೩೭ ಕುಟುಂಬಗಳ ಪೈಕಿ ಕೇವಲ ಒಂದು ಕುಟುಂಬಕ್ಕೆ ೨ ಎಕರೆಯನ್ನು ಹೊಂದಿದೆ. ಕೊನೆಯದಾಗಿ ಉಳಿದ ಎರಡು ತಾಲ್ಲೂಕುಗಳಾದ ಶಾಹಾಪುರ ಮತ್ತು ಯಾದಗಿರಿ ತಾಲ್ಲೂಕಿನಲ್ಲಿ ತಲಾ ೧೯ ಮತ್ತು ೧೫ ಛಿಸಾಡಿ ಕುಟುಂಬಗಳು ಹೊಂದಿದ್ದು, ಅಲ್ಲಿ ಕೃಷಿ ಭೂರಹಿತರಾಗಿರುವುದು ಕ್ಷೇತ್ರಕಾರ್ಯದಿಂದ ಮೇಲಿನ ಕೋಷ್ಟಕದಲ್ಲಿ ಕಾಣಸಿಗುತ್ತದೆ. ಅದೇ ರೀತಿಯಾಗಿ ಸುರಪುರ ತಾಲ್ಲೂಕಿನಲ್ಲಿ ಛಿಸಾಡಿ ಸಮುದಾಯ ವಾಸವಿಲ್ಲದಿರುವುದು ಕ್ಷೇತ್ರಕಾರ್ಯದಿಂದ

ತಿಳಿಯುತ್ತದೆ. ಒಟ್ಟಾರೆ ಇಡೀ ಜಿಲ್ಲೆಯ ತಾಲ್ಲೂಕುವಾರು ಮತ್ತು ಗ್ರಾಮೀಣ ಪ್ರದೇಶಗಳ ಒಟ್ಟು ೩೩೫ ಕುಟುಂಬಗಳ ಪೈಕಿ ಕೇವಲ ಕೆಲವೇ ಕುಟುಂಬಗಳಿಗೆ ಒಟ್ಟು ೧೫೯.೫ ಎಕರೆ ಭೂಮಿಯು ಇರುವುದು ಹಾಗೂ ಅವರ ಅನೇಕ ಕುಟುಂಬಗಳು ತಮ್ಮ ವೃತ್ತಿ, ಅಲ್ಪ ಪ್ರಮಾಣ ಕೃಷಿ, ಕೂಲಿಕಾರ್ಮಿಕರಾಗಿ ಜೀವನ ನಡೆಸುವವರೆ ಹೆಚ್ಚಾಗಿ ಕಂಡುಬರುತ್ತಾರೆ.

೧೫. ಸಾಂಪ್ರದಾಯಿಕ ವೃತ್ತಿ (ಕುಲಕಸಬು)

ಕೃಷಿಯು ಭಾರತೀಯ ಗ್ರಾಮಗಳ ಪ್ರಧಾನ ವೃತ್ತಿಯಾಗಿದ್ದು ಸಮಸ್ತ ಜನಸಂಖ್ಯೆಯ ಬಹುತೇಕ ಭಾಗವು ವರ್ಷವಿಡೀ ಕೃಷಿಯಲ್ಲಿ ತೊಡಗಿರುತ್ತಾರೆ. ಈ ಕೃಷಿ ಜೀವನಕ್ಕೆ ಹಲವಾರು ವಿಶಿಷ್ಟ ಸೇವೆಗಳ ಸಂಗಮದ ಅನುಕೂಲತೆಗಳು ಬೇಕಾಗಿರುತ್ತದೆ. ಇಲ್ಲಿ ರೈತರು ಒಕ್ಕಲುತನ ಮಾಡಿದರೆ, ಕೃಷಿಯ ಚಟುವಟಿಕೆಗಳು ಸಮಗ್ರವಾಗಿ ನಡೆಯಬೇಕಾದರೆ, ಬಡಗಿಗಳು ಬಡಗಿತನ, ಕಮ್ಮಾರರು ಕಮ್ಮಾರಿಕೆ, ಕುಂಬಾರರು ಕುಂಬಾರಿಕೆ, ನೇಕಾರರು ನೇಯ್ಗೆ, ಮಡಿವಾಳರು ಬಟ್ಟೆಗಳನ್ನು ಶುಚಿತ್ವ ಮಾಡುವುದು, ಕ್ಷೌರಿಕ ಕ್ಷೌರವನ್ನು ಮಾಡುವುದು, ಭಜಂತ್ರಿ ಬಾಜಾಗಳನ್ನು ಬಾರಿಸುವುದು, ಚಮ್ಮಾರರು ಚಮ್ಮಾರಿಕೆ ಮಾಡುವುದು. ಇವರು ಮಾಡುವ ಈ ಎಲ್ಲ ಕೆಲಸಗಳಿಗೆ ಸಾಂಪ್ರದಾಯಿಕ ವೃತ್ತಿ ಅಥವಾ ಕುಲಕಸುಬು ಎಂದು ಕರೆಯಲಾಗುತ್ತದೆ.

ಗಟ್ಟಿಮುಟ್ಟಾದ ದೃಢಕಾಯರಾದ ಘಿಸಾಡಿ ಜನರ ಕುಲಕಸಬು ಕಮ್ಮಾರಿಕೆ ಕೆಲಸವಾಗಿದೆ. ಇವರು ಸದಾ ಶ್ರಮಜೀವಿಗಳಾಗಿದ್ದಾರೆ. ರಟ್ಟೆ ಮುರಿದು ರೊಟ್ಟಿ ತಿನ್ನಬೇಕೆಂಬ ಬಲವಾದ ನಂಬಿಕೆಯು ಇವರಲ್ಲಿದೆ. ಹೀಗಾಗಿ ಎಂಥ ಕಠಿಣ ಪ್ರಸಂಗ ಬಂದೊದಗಿದರೂ ಭಿಕ್ಷೆ ಬೇಡುವುದನ್ನು ಮತ್ತು ಸೋಮಾರಿತನದಿಂದ ಜೀವಿಸುವುದನ್ನು ಇವರು ವಿರೋಧಿಸುತ್ತಾರೆ. "ಕಾಮ್‌ಕರೋ ಕಾನಾ ಕಾವ್ಹೋ" ಎನ್ನುವ ಇವರ ಸಿದ್ಧಾಂತ. ಬೆವರು ಸುರಿಸಿದರೆ ಸುಖ ಸಿಗುತ್ತದೆ ಎಂಬುದನ್ನು ನಂಬಿದ್ದಾರೆ. ಇವರ ಆರ್ಥಿಕ ಉತ್ಪಾದನೆಯಲ್ಲಿ ಕುಲಕಸುಬಾದ ಕಮ್ಮಾರಿಕೆ ವೃತ್ತಿಯನ್ನು ಶೇ. ೮೦ರಷ್ಟು ಜನರು ಅನುಸರಿಸುತ್ತಾರೆ. ಆದುದರಿಂದ ಇವರ ವೃತ್ತಿ ಮತ್ತು ಕಬ್ಬಿಣದ ಪರಂಪರೆಯ ಸ್ಥೂಲ ವಿವರಣೆಯನ್ನು ಇಲ್ಲಿ ಚರ್ಚಿಸಬೇಕಾಗುತ್ತದೆ.

ಭಾರತದಲ್ಲಿ ಕಬ್ಬಿಣ ಯುಗ ಆರಂಭ

ಭಾರತದಲ್ಲಿ ವಿಶೇಷವಾಗಿ ದಕ್ಕನ್ ಮಧ್ಯ ಮತ್ತು ಪಶ್ಚಿಮ ಭಾಗಗಳ ಕೆಲವು ಸ್ಥಳಗಳಲ್ಲಿ ಕಬ್ಬಿಣದ ಅವಶೇಷಗಳು ಕಂಡುಬರುತ್ತವೆ. ಭಾರತಲ್ಲಿ ಕಬ್ಬಿಣ ಬಳಕೆಯ ಪ್ರಾಚೀನತೆಯನ್ನು ಗಮನಿಸಿದಾಗ ಅದು ಉತ್ತರ ಭಾರತದಲ್ಲಿ ಮೊದಲು ಪ್ರಾರಂಭವಾಯಿತೆಂದು ಕೆಲವು ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ಆದರೆ ಇಲ್ಲಿ ಕಬ್ಬಿಣ ಉತ್ಪಾದನೆಯ ಪ್ರಾಚೀನತೆಯ ಬಗ್ಗೆ ಅಷ್ಟೇನು ಸ್ಪಷ್ಟವಾಗಿ ತಿಳಿದುಬಂದಿಲ್ಲ. ವೇದದಲ್ಲಿ ಬರುವ 'ಆಯಸ್' ಎಂಬ ಪದ ಕಬ್ಬಿಣ ಅಥವಾ ಯಾವುದೋ ಒಂದು ಲೋಹಕ್ಕೆ ಸಂಬಂಧಿಸಿದುದಾಗಿದೆ ಎಂದು ತರ್ಕಿಸಲಾಗಿದೆ.

ಭಾರತದಲ್ಲಿ ಕಬ್ಬಿಣದ ಉತ್ಪಾದನೆಯನ್ನು ಕೆಲವು ಪುರಾತತ್ವ ಅವಶೇಷಗಳಿಂದ ಗುರುತಿಸಲಾಗಿದೆ. ಮಾರ್ಟಿಮರ್ ವ್ಹೀಲರ್ ಅವರು ಬ್ರಹ್ಮಗಿರಿಯಲ್ಲಿ ನಡೆಸಿದ ಉತ್ಖನನದಲ್ಲಿ ಕಬ್ಬಿಣದ ಅವಶೇಷಗಳು ದೊರಕಿವೆ. ಇವುಗಳಲ್ಲಿ ಉತ್ತರ ಭಾರತದ ಕೆಲವು ನೆಲೆಗಳಲ್ಲಿ ಕಂಡುಬಂದಿರುವ ಉಪಕರಣಗಳಿಗೆ ಹೋಲಿಸುತ್ತ. ಕಬ್ಬಿಣದ ಉತ್ಪಾದನೆ ದಕ್ಷಿಣ ಭಾರತದದಲ್ಲಿಯೇ ಮೊದಲು ಆರಂಭವಾಯಿತು. ಇದು ಎರಡು ಪ್ರದೇಶಗಳಲ್ಲಿಯ ಕಬ್ಬಿಣದ ಭಿನ್ನತೆಯಿಂದ ಕಂಡುಕೊಳ್ಳಬಹುದೆಂದು ಹೇಳುತ್ತಾರೆ.

"ಪಾಕಿಸ್ತಾನದ ಸ್ವಾತ್ ಕೊಳ್ಳದ ನೆಲೆಗಳಲ್ಲಿ ದೊರೆತ ಕಬ್ಬಿಣದ ಉಪಕರಣಗಳನ್ನು ಕಾರ್ಬನ್ ೧೪೦ ಕಾಲಮಾನದ ಪ್ರಕಾರ ಕ್ರಿ.ಪೂ. ೧೩೦೦ರಿಂದ ೯೦೦ರ ಅವಧಿಯಲ್ಲಿ ಇದರ ಬಳಕೆ ಪ್ರಾರಂಭವಾಗಿತ್ತೆಂದು ತಿಳಿಯುತ್ತದೆ. ಮುಖ್ಯವಾಗಿ ಉತ್ತರ ಭಾರತದಲ್ಲಿ ಕಬ್ಬಿಣದ ಬಳಕೆಯು ವರ್ಣರಂಜಿತ ಬೂದುಬಣ್ಣದ ಮಡಿಕೆಗಳಲ್ಲಿ ಕಂಡುಬರುತ್ತದೆ. ಹಸ್ತಿನಾಪುರದ ಸ್ತರ ವಿಂಗಡಣೆಯಲ್ಲಿ ಸಿಗುವ ಇದರ ಕಾಲ ಕ್ರಿ.ಪೂ. ೧೧೦೦ ಗಂಗಾ-ಯಮುನಾ ದೊ-ಆಬ್ ಪ್ರದೇಶದಲ್ಲಿ ಇದೇ ಚಿತ್ರಿತ ಬೂದು ಬಣ್ಣದ ಮಡಿಕೆಗಳನ್ನು ಉಪಯೋಗಿಸುತ್ತಿದ್ದ ಜನರು ಕಬ್ಬಿಣವನ್ನು ತಯಾರಿಸುತ್ತಿದ್ದರು. ಇದರ ಅವಧಿ ಕ್ರಿ.ಪೂ. ೮೦೦-೫೦೦. ಅತಿರಂಜಬೆರಾದಲ್ಲಿ ಮಾತ್ರ ಈ ಸಂಸ್ಕೃತಿಯು ಬಳಕೆಯಲ್ಲಿದ್ದ ಕಾಲ ಕಾರ್ಬನ್ ೧೪ ಕಾಲಮಾನನಿಂದ ಕ್ರಿ.ಪೂ. ೧೦೨೫ ಎಂದು ಹೇಳಬಹುದು. ಕಪ್ಪು ಹೊಳಪಿನ ಮತ್ತು ಚಿತ್ರಿತ ಬೂದು ಬಣ್ಣದ ಕೆಂಪು, ಕಪ್ಪು ಮಡಿಕೆಗಳ ಕಾಲದಲ್ಲಿ ಉತ್ತರ ಭಾರತದ ಬೆಂರಾಂಡ, ಸೊನ್ಪೂರ್, ಮಹಿಸಲ ಮುಂತಾದ ನೆಲಗಳ ಉತ್ಖನನಗಳಿಂದ ಕಂಡುಕೊಳ್ಳಲಾಗಿದೆ. 'ಅಹರದ' ಉತ್ಖನನದಲ್ಲಿ ಬಾಣಾ ಸಂಸ್ಕೃತಿಯ ಕಪ್ಪು-ಕೆಂಪು ಮಡಿಕೆಗಳು, ತಾಮ್ರ, ಕಬ್ಬಿಣದ ಉಪಕರಣಗಳು ದೊರೆತಿವೆ. ಇವುಗಳ ಆಧಾರದ ಮೇಲೆ 'ಅಹರ' ನೆಲೆಯಲ್ಲಿ ಕಬ್ಬಿಣದ ಬಳಕೆ ಕ್ರಿ.ಪೂ. ೧೩ನೆಯ ಶತಮಾನದಷ್ಟು ಹಿಂದಕ್ಕೆ ಹೋಗುತ್ತದೆ." (ಕರೀಗೌಡ ಬಿ.ಕೆ., ೨೦೦೦, ಪು.೩೪೯)

ನರ್ಮದೆಯ ದಕ್ಷಿಣ ಭಾಗದಲ್ಲಿ ಬೃಹತ್ ಕಲಾ ಸಂಸ್ಕೃತಿಯ ನೆಲೆಗಳಲ್ಲಿ ಮತ್ತು ಮಹಾರಾಷ್ಟ್ರದ ವಾಯುವ್ಯ ಭಾಗದ ವಿದರ್ಭ ಸುತ್ತಮುತ್ತ ಪ್ರದೇಶದಲ್ಲೂ ಕಬ್ಬಿಣದ ಬಳಕೆ ಕಂಡುಬರುತ್ತದೆ. ದಕ್ಷಿಣಕ್ಕೆ ಬೃಹತ್ ಶಿಲಾ ನೆಲೆಗಳಾದ ಬೋರ್ಗ್ಲಾಂವ್, ಕೈವಾಳಡ, ಬಾಗಿ, ಮೊಹರಿ, ನೈಕುಂದ್ ಹಾಗೂ ರೈಪುರ್ ಮಹಾರಾಷ್ಟ್ರ, ವೀರಾಪುರಂ ಆಂಧ್ರಪ್ರದೇಶ ಹಳ್ಳೂರು, ಕುಡಿತಿನಿ, ಕೋಮಾರನಹಳ್ಳಿ ಕರ್ನಾಟಕ, ಪಿಯಂಪಳ್ಳಿ ತಮಿಳನಾಡುಗಳಲ್ಲಿ ಕ್ರಿ.ಪೂ. ೧೦೦೦ದಿಂದ ೮೦೦ರ ಅವಧಿಯಲ್ಲಿ ಕಬ್ಬಿಣ ಬಳಕೆಯಲ್ಲಿತ್ತು ಎಂಬುದು ತಿಳಿದುಬರುತ್ತದೆ. ಇಂದಿಗೂ ಗಣಿಗಾರಿಕೆಯಲ್ಲಿ ಹೆಸರುವಾಸಿಯಾದ 'ಅಗಾರಿಯಾ' ಎಂಬ ಬುಡಕಟ್ಟು ಜನರೇ ಊದು ಕುಲುಮೆಗಳ ಮೂಲಕ ಅದಿರಿನಿಂದ ಕಬ್ಬಿಣವನ್ನು ತಯಾರಿಸುವ ಕಲೆಯಲ್ಲಿ ಪ್ರಮುಖರಾಗಿದ್ದಾರೆ. ಪ್ರಾಗೈತಿಹಾಸಿಕ ಕಾಲದಲ್ಲಿ ಗುಡ್ಡ-ಗಾಡಿನಲ್ಲಿ ವಾಸವಾಗಿದ್ದ ಬುಡಕಟ್ಟು ಜನಾಂಗದವರು ನಿತ್ಯ ಜೀವನದಲ್ಲಿ ಪ್ರಮುಖ ಕಾರ್ಯಗಳನ್ನು ಬಲ್ಲವರಾಗಿದ್ದರಿಂದ ಚಾರಿತ್ರಿಕ ಕಾಲದಲ್ಲಿ ಸಾಂಪ್ರದಾಯಿಕ ವೃತ್ತಿ ಮತ್ತು ಇನ್ನಿತರ

ಕಾರಣಗಳಿಂದ ಜಾತಿ ವ್ಯವಸ್ಥೆ ಬೆಳೆದು ಬಂದಾಗ, ಇವರಿಗೆ ಜನರು ಬೈಲು ಕಮ್ಮಾರರು, ಘಿಸಾಡಿಗಳು, ಗಾಡಿ ಲೋಹಾರ, ರಾಜಸ್ಥಾನ ಮೂಲದವಾಗಿರುವುದರಿಂದ ರಜಪೂತ ಕಮ್ಮಾರ ಎಂದು ಇಂದು ಈ ಘಿಸಾಡಿ ಸಮುದಾಯದವರನ್ನು ಗುರುತಿಸುತ್ತಿರಬಹುದು.

ವಿವಿಧ ಪ್ರಕಾರದ ಕಬ್ಬಿಣಗಳು

೧. ತಾಂಡವಾಳ (Cost Iron) : ಘಿಸಾಡಿ ಸಮುದಾಯದವರು ಊದು ಕುಲುಮೆಯಿಂದ ಹೊರಬಂದ ಕಬ್ಬಿಣವನ್ನು ತಾಂಡವಾಳವೆಂದು ಕರೆಯುತ್ತಾರೆ. ಇದನ್ನು ಕಬ್ಬಿಣದ ತುಂಡುಗಳಾಗಿ ಅಚ್ಚು ಹಾಕಿ ವಿವಿಧ ಕಾರ್ಯಗಳಿಗೆ ಉಪಯೋಗಿಸಬಹುದು. ಇದರಲ್ಲಿ ಎರಡು ಪ್ರಕಾರಗಳಿದ್ದು, ಒಂದು ಬೂದು ತಾಂಡವಾಳ, ಇನ್ನೊಂದು ಬಿಳಿ ತಾಂಡವಾಳ. ಬೂದು ತಾಂಡವಾಳವನ್ನು ಮರಳಿನ ಅಚ್ಚುಗಳಲ್ಲಿ ಹಾಕಿ ಪಡೆದುಕೊಳ್ಳಲಾಗುತ್ತದೆ. ಇದರಿಂದ ಕಬ್ಬಿಣದ ಒಲೆಗಳು ಗ್ರೇಟಿಂಗುಗಳು ಹಾಗೂ ವಿವಿಧ ಉಪಕರಣಗಳನ್ನು ತಯಾರಿಸುವಾಗ ಬಳಕೆ ಮಾಡಿಕೊಳ್ಳುತ್ತಾರೆ. ಆದರೆ ಇದರಿಂದ ಬೆಸೆಯಲು ಇಲ್ಲವೇ ತಗಡನ್ನು ತಯಾರಿಸಲು ಸಾಧ್ಯವಾಗುವುದಿಲ್ಲ ಎನ್ನುತ್ತಾರೆ.

ಕಾದ ಕಬ್ಬಿಣ ನಿಧಾನವಾಗಿ ತಣ್ಣಗಾಗುವುದನ್ನು ತಡೆದು ತಕ್ಷಣ ಶೈತ್ಯಗೊಳಿಸಿದರೆ ಅದರಲ್ಲಿರುವ ಇಂಗಾಲದ ಭಾಗವು ಸಿಮೆಂಟೈಟ್ ರೂಪದಲ್ಲಿಯೇ ಇರುವುದು. ಇದೇ ಬಿಳಿ ತಾಂಡವಾಳ, ಇದನ್ನು ೫ರಿಂದ ೭೦ ಗಂಟೆಗಳವರೆಗೆ ತೆಂಗಾವಿನಲ್ಲಿಟ್ಟು ನಿಧಾನವಾಗಿ ತಣಿಸಿದರೆ ಮೆದು ತಾಂಡವಾಳ ಉಂಟಾಗುವುದು. ಇದರಲ್ಲಿ ಭಾರಿ ಪ್ರಮಾಣದ ಯಂತ್ರಗಳ ಭಾಗ ಹಾಗೂ ಕೃಷಿ ಉಪಕರಣಗಳ ತಯಾರಿಕೆಗೆ ಉತ್ತಮವಾದ ಗುಣಗಳಿರುತ್ತವೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ. ಇದರಿಂದಲೂ ಬೆಸೆಯಲು ಬರುವುದಿಲ್ಲ.

೨. ಮೆದು ಕಬ್ಬಿಣ (Rught Iron) : ಊದು ಕುಲುಮೆಯ ತಯಾರಿಕೆಯ ಕಬ್ಬಿಣದಲ್ಲಿರುವ ಅಪದ್ರವ್ಯಗಳನ್ನು ಉರಿಸಿ ತೆಗೆದು ಮೆದು ಕಬ್ಬಿಣವನ್ನು ತಯಾರಿಸುವರು. ಇದರ ತಯಾರಿಕೆಗಾಗಿ ಪ್ರತಿವರ್ತಕ ಕುಲುಮೆಯನ್ನು ಉಪಯೋಗಿಸುತ್ತಾರೆ. ಇದರಲ್ಲಿ ಇಂಗಾಲ ಶೇ. ೦.೨ಗಿಂತ ಕಡಿಮೆಯಾಗಿದ್ದು ತಾಂಡವಾಳಕ್ಕಿಂತ ಬಿಗಿಯಾಗಿಯೂ, ಮೆದುವಾಗಿಯು ಇರುತ್ತದೆ. ಇದರಿಂದ ನೇಗಿಲುಗಳು, ಕುದರೆ ಲಾಳದಂಥ ಉಪಕರಣಗಳನ್ನು ನಿರ್ಮಿಸಬಹುದಲ್ಲದೆ ತಗಡನ್ನು ತಯಾರಿಸ ಬಹುದು ಮತ್ತು ಇದರಿಂದ ಬೆಸೆಯಬಹುದು.

೩. ಶುದ್ಧ ಕಬ್ಬಿಣ (Pure Iron) : ಈ ರೀತಿಯ ಕಬ್ಬಿಣದ ನಿರ್ಮಾಣವು ಹೆಚ್ಚಿನ ಬಳಕೆಯಲ್ಲಿಲ್ಲ. ಮೆದು ಕಬ್ಬಿಣಕ್ಕೆ ಶುದ್ಧ ಕಬ್ಬಿಣ ನಿಕಟವರ್ತಿಯಾಗಿರುವುದು. ಶುದ್ಧವಾದ ಪೆರಿಕ್ ಆಕ್ಸೈಡನ್ನು ಕಾಯಿಸಿ ಅದನ್ನು ಹೈಡ್ರೋಜನ್‌ನಿಂದ ಅಪಕರ್ಷಿಸಿ ಶುದ್ಧವಾದ ಕಬ್ಬಿಣವನ್ನು ಪಡೆಯಬಹುದು. ಈ ರೀತಿಯ ಕಬ್ಬಿಣಕ್ಕೆ ಬಿಳುಪಿನ ಪ್ರಕಾಶವಿದೆ. ಇದು ಮೃದುವಾಗಿರುವುದಲ್ಲದೆ ಇದರಿಂದ ತಗಡು, ತಂತಿ ಮುಂತಾದ ನಯವಾದ ವಸ್ತುಗಳನ್ನು ತಯಾರಿಸಬಹುದು.

ಘಿಸಾಡಿ ಸಮುದಾಯದವರು ತಮ್ಮ ದೈನಂದಿನ ಜೀವನೋಪಾಯಕ್ಕೆ ಸಂಬಂಧಿಸಿದಂತೆ ಕಬ್ಬಿಣದ ಉಪಕರಣಗಳನ್ನು ಐದು ರೀತಿಯ ವಿಧಾನಗಳಲ್ಲಿ ವಿಂಗಡಿಸುತ್ತಾರೆ.

೧. ವ್ಯವಸಾಯಕ್ಕೆ ಸಂಬಂಧಿಸಿದ ಉಪಕರಣಗಳು

೨. ಗೃಹಬಳಕೆ ಉಪಕರಣಗಳು

೩. ಯುದ್ಧ ಸಾಮಗ್ರಿಗಳು

೪. ಧಾರ್ಮಿಕ ಕೇಂದ್ರಗಳ ಉಪಕರಣಗಳು

೫. ವ್ಯಾಪಾರಕ್ಕೆ ಸಂಬಂಧಿಸಿದ ಉಪಕರಣಗಳು

೧. ವ್ಯವಸಾಯಕ್ಕೆ ಸಂಬಂಧಿಸಿದ ಉಪಕರಣಗಳು

ವ್ಯವಸಾಯದಲ್ಲಿ ಬರುವ ಸಾಮಗ್ರಿಗಳ ಉಪಯೋಗ ಮತ್ತು ಅವುಗಳಿಂದ ಬರುವ ಕಮ್ಮಾರಿಕೆಯ ಬಳಕೆಯು ಎಷ್ಟೆಂದರೆ ವರ್ಣಿಸಲು ಅಸಾಧ್ಯ. ಅಂತೆಯೇ "ಒಕ್ಕಲಿಗ ಒಕ್ಕದಿರೇ ಬಿಕ್ಕುವುದು ಜಗವೆಲ್ಲಾ" ಎಂಬ ನಾಣ್ಣುಡಿಯಲ್ಲಿ ಕಮ್ಮಾರಿಕೆಗೂ ಸಹಾ ಇದರಲ್ಲಿ ಪಾಲಿದೆ. ಅಂದರೆ, ಯಾವುದೇ ದೇಶದ ಆರ್ಥಿಕ ಉತ್ಪಾದನೆಯಲ್ಲಿ ಮತ್ತು ಅದರ ಪ್ರಗತಿಯ ಹಿಂದೆ ರೈತ ಮತ್ತು ಕಮ್ಮಾರಿಕೆ ಶ್ರಮ ಒಂದೇ ನಾಣ್ಯದ ಎರಡು ಮುಖಗಳಿಂದ್ದಂತೆ ಎಂಬುದು ಸ್ಪಷ್ಟವಾಗುತ್ತದೆ. ಏಕೆಂದರೆ, ನೇಗಿಲಿಗೆ ಬೇಕಾದ ರಂಟೆ, ಕುಳ, ಕುಡಕ್ಕೆ, ಜಿಗಳಿ ಎಂಬ ಬಂಧನ ಕೊಂಡಿಗಳು, ಬೆಳೆಗಳಿಗೆ ಸಾಲು ಮಾಡಲು ಪಿಳೆಗುಡ, ಹತಗುಡ, ಹೊಲ ಹರಗಲು ಅಥವಾ ಕಸ ಕಳೆ ತೆಗೆಯಲು ಹೆಗ್ಗುಡ, ಪಲಂಗ ಬಿತ್ತಿದ ಮೇಲೆ ಸಾಲು ಮಾಡಲು ಬಳಗುಡ, ಆಧುನಿಕ ಟ್ರಾಕ್ಟರ್ ಬಳಕೆಯ ಸಂದರ್ಭದಲ್ಲಿ ಡಮಗುಂಟೆ, ಹರಗಲು ಉಪಯೋಗಿಸುತ್ತಾರೆ. ಮತ್ತು ಬಂಡಿ-ಚಕ್ಕಡಿಗೆ ಬೇಕಾಗುವ ಸಾಮಗ್ರಿಗಳಾದ ಗಾಲಿಯ ಅಚ್ಚು, ಗಾಲಿಯ ಗಡ್ಡುಕಟ್ಟು, ಬಾಯ್‌ಕಟ್, ಗಾಲಿಗಳನ್ನು ಜೋಡಿಸುವ ಅಚ್ಚು, ರಂಧ್ರಕ್ಕೆ ಬೇಕಾದ ಬಾಯಿ ಬಳಿ ಮತ್ತು ಕಿವಿ ಬಳಿ, ಕಡೆಗೀಲುಗಳನ್ನು ತಯಾರಿಸುತ್ತಾರೆ. ಜೊತೆಗೆ ಎತ್ತಿಗೆ ಸಂಬಂಧಿಸಿದಂತೆ ಮೇವು ಕತ್ತರಿಸಲು ಮೇವು ಕತ್ತರಿ, ಕುಡಗೋಲು, ಕುರುಪಿ, ನರೆಕೋಲು, ಗುದ್ದಲಿ, ಸಲಿಕೆ, ಕೊಡಲಿ, ಏತನೀರಾವರಿಗೆ ಬೇಕಾಗುವ ಸಾಮಗ್ರಿಗಳಾದ ದೋಣಿ, ದೋಣಿ ಚೀಲಕಗಳು, ಬೆಲ್ಲ ತಯಾರಿಕೆಯ ಕೊಪ್ಪರಿಕೆ, ಬೆಲ್ಲದ ಪೆಂಟಿ ಮಾಡಲು ಬಕೆಟ್ ಸಾಚಾಗಳು. ಹೀಗೆ ಕೃಷಿಗೆ ಬೇಕಾಗುವ ವಿವಿಧ ರೀತಿಯ ಇನ್ನೂ ಅನೇಕ ಉಪಕರಣಗಳನ್ನು ತಯಾರಿಸುತ್ತಾರೆ.

೨. ಗೃಹಬಳಕೆ ಉಪಕರಣಗಳು

ಘಿಸಾಡಿ ಸಮುದಾಯದ ಜನರು ಗೃಹಬಳಕೆ ಸಾಮಗ್ರಿಗಳನ್ನು ತಯಾರಿಸಿ ಇಲ್ಲವೇ ರಿಪೇರಿ ಮಾಡಿಕೊಟ್ಟರೆ ಮಾಡಿದ ಕೆಲಸಕ್ಕೆ ನಗದು ರೂಪದಲ್ಲಿ ಹಣವನ್ನು ಪಡೆಯುತ್ತಾರೆ. ಕೆಲವೊಂದು ಸಲ ನಿರ್ದಿಷ್ಟವಾದ ರೂಪದಲ್ಲಿ ದವಸಧಾನ್ಯಗಳನ್ನು ಮಾತನಾಡಿ ಪಡೆಯುತ್ತಾರೆ. ಸಾಮಾನ್ಯವಾಗಿ ಇವರು ಮಾಡುವ ಗೃಹಬಳಕೆ ಸಾಮಗ್ರಿಗಳೆಂದರೆ, ತರಕಾರಿ ಕತ್ತರಿಸುವ ಈಳಿಗೆ, ಕುಡುಗೋಲು,

ಬಾಗಿಲಿನ ಮೊಳೆಗಳು ಮತ್ತು ಬಾಗಿಲಗಳಿಗೆ ಜೋಡಿ ಬಂಧನವಾಗುವ ಚಿಲಕಗಳು, ನಾಗವಾಸ, ಗೋಡೆಯಮೊಳೆ, ನಾಗವಾಡಸರಪಳಿ, ಕಿಟಕಿ ಮುಚ್ಚುವ ಮರಡು, ಒನಕೆಬಳೆ, ಹಾರೆ, ತೂಗುವ ಮಣೆಯ ಮೇಲಿನ ಬಳೆಗಳು, ಊಟದಮಣೆ ಮೇಲಿನ ಬಳೆಗಳು ಪೆಟ್ಟಿಗೆಯ ಚಿಲಕ, ಬೀಸುವ ಕಲ್ಲುಮಳೆ, ಬಾಗಿಲಿನ ಕಬ್ಬಿಣದ ಗುಳಿ, ಹೀಗೆ ಇನ್ನೂ ಹಲವಾರು ಅನೇಕ ಚಿಕ್ಕಪುಟ್ಟ ಗೃಹಬಳಕೆ ಸಾಮಗ್ರಿಗಳನ್ನು ತಯಾರಿಸಿ ಮತ್ತು ರಿಪೇರಿ ಮಾಡಿಕೊಡುತ್ತಾರೆ.

೩. ಯುದ್ಧ ಸಾಮಗ್ರಿಗಳು

"ಒಂದು ಕಾಲದಲ್ಲಿ ಮೇವಾಡಾ ಪ್ರಾಂತ್ಯದ ಅರಸು ಮನೆತನಗಳಿಗೆ ಯುದ್ಧ ಸಾಮಗ್ರಿಗಳನ್ನು ಮಾಡುವುದಾಗಿತ್ತು. ರಾಣಾಪ್ರತಾಪಸಿಂಗ್‌ನ ಅಡಳಿತದ ಕಾಲದಲ್ಲಿ ಯುದ್ಧ ನೆಲೆಗಳಲ್ಲಿಯೇ ಯುದ್ಧ ಸಾಮಗ್ರಿಗಳನ್ನು ತಯಾರಿಸಿಕೊಡುತ್ತಿರುವುದಾಗಿ ನಮ್ಮ ಪೂರ್ವಜರು ಹೇಳುತ್ತಿದ್ದರು" ಎಂದು ತಿಳಿಸುವರು. ರಾಣಾಪ್ರತಾಪಸಿಂಗನು ಮೊಗಲರಿಂದ ಸೋತು ಅಡವಿ ಪಾಲಗಿ ಸತ್ತ ನಂತರ, ರಾಜಾಶ್ರಯ ತಪ್ಪಿಹೋಗಿ ಮರಾಠ ಪ್ರದೇಶಕ್ಕೆ ಅಲೆಮಾರಿಗಳಾಗಿ ಶಿವಾಜಿ ಮಹಾರಾಜನ ಆಶ್ರಯದಲ್ಲಿ ಯುದ್ಧ ಸಾಮಗ್ರಿಗಳನ್ನು ಮಾಡಿಕೊಟ್ಟಿರುವುದಾಗಿ ಇವರು ಹೇಳುವರು"(ನಾರಾಯಣರಾವ್ ಸುರ್ವೇಶಿ, ಗುಲ್ಬರ್ಗಾ). ಕಾಲ ಉರುಳಿದಂತೆ ಕೃಷಿಗೆ ಸಂಬಂಧಿಸಿದ ಉಪಕರಣಗಳನ್ನು ಮಾಡುತ್ತಾ ಅಲೆಮಾರಿ ಗಳಾಗಿರುವುದಾಗಿ. ತಿಳಿಸುವರು. ಆದಿಕಾಲದಿಂದಲೂ ಅನುಸರಿಸಿಕೊಂಡುಬಂದ ಅನೇಕ ಕುಲ ಕಸುಬುಗಳಿಗೆ ಸನಾತನ ಕಾಲದಿಂದಲೂ ಯಾವ ಧಕ್ಕೆ ಬಾರದಂತೆ ಸಾರ್ವಜನಿಕರು ಎಷ್ಟು ಮಹತ್ವ ನೀಡುತ್ತಿದ್ದರೋ ಅಷ್ಟೇ, ಅದೇ ರೀತಿಯಲ್ಲಿ ರಾಜಮಹಾರಾಜರು ಇಂತಹ ಕುಲಕಸಬು ಅವಲಂಬಿತ ಕುಟುಂಬಗಳನ್ನು ಪ್ರೋತ್ಸಾಹಿಸುತ್ತಿದ್ದು ಇವರಿಂದ ಎಂದೂ 'ಕರವಸೂಲಿ' ಮಾಡುತ್ತಿರಲಿಲ್ಲ. ಇದರ ಬದಲಾಗಿ ತಿಂಗಳಲ್ಲಿ ಒಂದೆರಡು ದಿನ ರಾಜರ ಅರಮನೆಯ ಕೆಲಸಗಳನ್ನು ಯಾವ ಫಲಾಪೇಕ್ಷೆ ಇಲ್ಲದೆ ಕೆಲಸಗಳನ್ನು ಮಾಡಿಕೊಟ್ಟರೆ ಸಾಕು. ಅದನ್ನೇ 'ತೆರಿಗೆ' ಎಂದು ಭಾವಿಸಲಾಗುತ್ತಿತ್ತು. ಈ ರೀತಿಯ ಕರ ವಸೂಲಿ ಮಿಸಲಾತಿ ಆಗಿನ ಕಾಲದಲ್ಲಿ ಕುಲಕಸುಬುಗಳಿಗೆ ಇತ್ತು ಎಂಬುದು ಇತಿಹಾಸದಿಂದ ತಿಳಿದುಬರುತ್ತದೆ. ಆಗಿನ ಕಾಲದಲ್ಲಿ ರಾಜ ಮಹಾರಾಜರೂ ತಮ್ಮ ಸಾಮ್ರಾಜ್ಯಕ್ಕೆ ರಕ್ಷಣೆ ಮತ್ತು ಪರಿಸರದ ರಕ್ಷಣೆಗೆಂದು ವಿರೋಧಿ ಚಟುವಟಿಕೆಗಳನ್ನು ತಡೆಗಟ್ಟಲು ಬೇಕಾಗುವ ಸೇನಾಯುದ್ಧಗಳು ಹಾಗೂ ಮನುಷ್ಯನಿಗೆ ಯಾವುದೋ ಆತಂಕಕಾರಿ ಸಂದರ್ಭಗಳು ಬಂದಾಗ ತನ್ನ ಆತ್ಮರಕ್ಷಣೆಗೆಂದು ಅನೇಕ ರೀತಿಯ ವಿವಿಧ ಆಯುಧಗಳನ್ನು ಇವರು ತಯಾರಿಸಿ ಕೊಡುತ್ತಿದ್ದರು. ಈ ಆಯುಧಗಳು ತಯಾರಿಸುವ ಕಾರ್ಯಾಗಾರವನ್ನು 'ಕಮ್ಮಟ'ಗಳೆಂದು ಕರೆಯಲಾಗುತ್ತಿತು ಹಾಗೂ 'ಕಮ್ಮರ ಸಾಲೆ' ಎಂದೂ ಕೂಡ ಕರೆಯುತ್ತಿದ್ದರು. ಈ ಕಮ್ಮಟ ಸಾಲೆಯಲ್ಲಿ ಆಗಿನ ಕಾಲದಲ್ಲಿ ಭರ್ಚಿ ಮೊನೆಗಳು, ಕರವಾಳ, ತಲವಾರ ಎಂಬ ಕತ್ತಿಗಳು, ಸಬಳ, ಕೊಂ, ಭಲ್ಯ, ಶೂಲ, ಕರ್ಕಡೆ, ಸುರಿಗೆ, ಸುಸಲ, ಭಂಡಿವಾಳ, ಈಟಿ, ಶಕ್ತಿ, ಖಡ್ಗ, ತ್ರಿಶೂಲ, ಚಾಕು, ಉಳಿಗಳು,

ಪಂಚರಾಯುಧ, ತೋಮರ, ಮುಸುಂಡಿ, ಮುದ್ಗರ, ಗುರಾಣಿ, ಬಂದೂಕುಗಳು, ತೋಪಾಗಳು ಹೀಗೆ ಹಲವಾರು ಅನೇಕ ಯುದ್ಧ ಸಾಮಗ್ರಿಗಳನ್ನು ಆಗಿನ ಕಾಲದಲ್ಲಿ ನಮ್ಮ ಹಿರಿಯರು ತಯಾರಿಸಿಕೊಡುತ್ತಿದ್ದರು'' ಎಂದು ಘಿಸಾಡಿ (ಕಮ್ಮಾರರು) ಸಮುದಾಯದವರು ಹೇಳುತ್ತಾರೆ. ಅಲ್ಲದೆ ಇಂದಿಗೂ ಕೂಡಾ ಇದರಲ್ಲಿನ ಅನೇಕ ಸಾಮಗ್ರಿಗಳನ್ನು ಕೆಲವೊಂದು ಜನರು ಮಾಡಿಸಿಕೊಂಡು ಹೋಗುತ್ತಾರೆಂದು ಈ ಜನ ಹೇಳುತ್ತಾರೆ.

೪. ಧಾರ್ಮಿಕ ಕೇಂದ್ರಗಳ ಉಪಕರಣಗಳು

ದೇವಾಲಯಗಳ ಘಂಟೆ 'ಢಣ್' ಎಂಬ ನಾದ ತರಂಗಗಳನ್ನು ಹೊರಸೂಸುವ ಅದರೊಳಗಿನ ಕಬ್ಬಿಣದ ನಾಲಿಗೆ. ಈ ಕಠಿಣವಾದ ತುಂಡು ಹಿತ್ತಾಳೆಗೆ ಅಪ್ಪಳಿಸಿದರೆ ಘಂಟೆಯ ಎರಡು ಬಾಹುಗಳ ಬಡಿದಾಟವೇ ಆ ತರಂಗಗಳ ಚಾಲನೆಯಾಗಿದೆ. ಧಾರ್ಮಿಕ ಕೇಂದ್ರ ಮತ್ತು ಶಾಲೆಗಳಲ್ಲಿ ಸಮಯದ ಘಂಟೆ ಬಾರಿಸುವುದಕ್ಕಾಗಿ ಕಬ್ಬಿಣದ ತೂಗು ಮತ್ತು ಭಾರಿಸುವ ಸುತ್ತಿಗೆ ತಯಾರಿಸುವುದು. ದೇವರ ಎದುರಿಗೆ ಕಳಸ ಹಚ್ಚುವುದಕ್ಕೆ ಕಳಸದ ಕಬ್ಬಿಣದ ಸರಪಳಿ ತಯಾರಿಸುವುದು. ದೇವರ ಮುಂದಿರುವ ತ್ರಿಶೂಲ ಹೀಗೆಯೇ ಹತ್ತುಹಲವಾರು ಸಾಮಗ್ರಿಗಳು ಒಳಗೊಂಡಿರುತ್ತದೆ.

೫. ವ್ಯಾಪಾರಕ್ಕೆ ಸಂಬಂಧಿಸಿದ ಉಪಕರಣಗಳು

ಬೇಳೆ-ಕಾಳುಗಳನ್ನು ಅಳೆಯುವ ಅಳತೆ ಸಾಧನಗಳಾದ ಸೇರು, ಪಾವು, ಪಡಿ, ಕಾಲುಪಾವು, ಚಟಾಕು ಅಳತೆಯ ಸೇರುಗಳನ್ನು ಹಾಗೂ ಪದಾರ್ಥಗಳನ್ನು ತೂಕ ಮಾಡಲು ತಕ್ಕಡಿಯನ್ನು, ತಕ್ಕಡಿ ಕಲ್ಲುಗಳನ್ನು, ಉಣ್ಣೆ ಕತ್ತರಿಸುವ ಕತ್ತರಿ, ಕುರುಬರಿಗೆ ದೋಟಿ, ಕೊಡಲಿ, ಚಪಗೊಡಲಿ, ವೀಳ್ಯದ ಎಲೆ ಕತ್ತರಿಸಲು, ಅಡಿಕೆ ಕತ್ತರಿಸಲು ಉಗುರು ಸಾಧನ, ಒಡ್ಡರ ವೃತ್ತಿಗೆ ಸುತ್ತಿಗೆ, ಶಿಲ್ಪಿಗಳ ಸುತ್ತಿಗೆ, ಉಳಿ, ಚಾಣ, ಸಣ್ಣ ಹಾರಿ, ಗರಗಸ ಅನೇಕ ರೀತಿಯ ಚಿಕ್ಕ-ಪುಟ್ಟ ಉಪಕರಣ ಗಳನ್ನು ವ್ಯಾಪಾರ ಕ್ಷೇತ್ರಕ್ಕೆ ಸಂಬಂಧಿಸಿದವುಗಳನ್ನು ತಯಾರಿಸಿ ಕೊಡುವುದರಲ್ಲಿ ಇವರು ಪ್ರಸಿದ್ಧರಾಗಿದ್ದು, ಸಮಾಜದ ಎಲ್ಲ ವರ್ಗದವರಿಗೆ ಘಿಸಾಡಿ ಜನರು ಅವಶ್ಯವೆನಿಸಿದ್ದಾರೆ.

ಇವರ ವೃತ್ತಿಯಿಂದ ಬರುವ ಆದಾಯ

ಘಿಸಾಡಿ ಸಮುದಾಯದ ಕುಟುಂಬವೊಂದರಲ್ಲಿ ಕಮ್ಮಾರಿಕೆ ಕೆಲಸ ನಿರ್ವಹಿಸುವಾಗ, ಇಡೀ ಕುಟುಂಬದ ಸದಸ್ಯರು ಕೆಲಸದಲ್ಲಿ ತೊಡಬೇಕಾಗುತ್ತದೆ. ಒಬ್ಬ ವ್ಯಕ್ತಿ ಕಾದ ಕಬ್ಬಿಣಕ್ಕೆ ನಿಶ್ಚಿತವಾದ ರೂಪರೇಷೆಗಳನ್ನು ತರುವ ಕೆಲಸದಲ್ಲಿ ತೊಡಗಿದರೆ, ಇನ್ನೊಬ್ಬರು ಕುಲುಮೆಯ ತಿದಿ ಊದುತ್ತಾರೆ. ಮತ್ತೆ ಇಬ್ಬರು ಘನ್ ಹೊಡೆಯುತ್ತಿರುತ್ತಾರೆ. ಹೀಗೆ ಒಟ್ಟಿನಲ್ಲಿ ಈ ಕಮ್ಮಾರಿಕೆ ಕೆಲಸದಲ್ಲಿ ಇಡೀ ಕುಟುಂಬದ ಕನಿಷ್ಟ ೪ರಿಂದ ೫ ಜನರು ಶ್ರಮವಹಿಸಿ ದುಡಿಯಬೇಕಾಗುತ್ತದೆ. ಇಷ್ಟೆಲ್ಲಾ ಕುಟುಂಬದ ಸದಸ್ಯರು ದುಡಿದರೆ ಒಂದು ದಿನಕ್ಕೆ ಬಹಳ ಎಂದರೆ ೧೦೦ರಿಂದ ೧೫೦ ರೂಪಾಯಿ

ಗಳಷ್ಟು ಆದಾಯ ಮಾತ್ರ ಬರುತ್ತದೆ. ಇನ್ನು ಹಬ್ಬ, ಮಳೆಬಂದಾಗ ಕೃಷಿ ಕೆಲಸಗಳು ಕಡಿಮೆಯಾದಾಗ ಇವರಿಗೆ ಯಾವುದೇ ರೀತಿಯ ಕಮ್ಮಾರಿಕೆ ಕೆಲಸಗಳು ಸಿಗುವುದು ದುರ್ಬಲ, ಹೀಗಾಗಿ ಇವರ ಬದುಕು ಶೋಚನೀಯವಾಗಿದೆ.

ಇನ್ನು ಗ್ರಾಮೀಣ ಪರಿಸರದಲ್ಲಿ ಬಹುದಿನಗಳಿಂದ ನೆಲೆಸಿರುವಂತಹ ಘಿಸಾಡಿ ಸಮುದಾಯದ ಕುಟುಂಬಗಳ ಪರಿಸ್ಥಿತಿಯು ಕೂಡಾ ಇದೆ ರೀತಿಯದ್ದಾಗಿದೆ. ಗ್ರಾಮೀಣ ಘಿಸಾಡಿ ಕುಟುಂಬದವರು ಆ ಊರಿನ ರೈತರ ಜೋಡಿ ಎತ್ತುಗಳ ಉಳುಮೆಯ ಕಮ್ಮಾರಿಕೆ ಕೆಲಸವನ್ನು ವರ್ಷವಿಡೀ ನಿರ್ವಹಿಸಿದರೆ, ಒಂದು ಜೋಡಿ ಎತ್ತುಗಳಿಗೆ ೧೬ ಸೇರು ಜೋಳ, ಭತ್ತ ಮಾತ್ರ ಕೊಡುತ್ತಾರೆ. ಹೀಗೆ ಆ ಊರಿನ ಸುಮಾರು ೨೦ರಿಂದ ೨೫ ಜೋಡಿ ಎತ್ತುಗಳ ವಿವಿಧ ರೈತರ ಕೃಷಿ ಉಪಕರಣಗಳು ದುರಸ್ತಿ ಕೆಲಸಗಳನ್ನು ನಿರ್ವಹಿಸಿ ವರ್ಷವಿಡೀ ಬದುಕಬೇಕಾಗುತ್ತದೆ. ಉಳುಮೆ ಕೆಲಸಗಳು ಒಮ್ಮೆಲೆ ಬಂದಾಗ ಇಡೀ ಅಷ್ಟು ಜನ ರೈತರನ್ನು ಅವರು ಸಂಬಾಳಿಸಬೇಕಾಗುವ ಪರಿಸ್ಥಿತಿ ಬರುತ್ತದೆ. ಒಟ್ಟಿನಲ್ಲಿ ಘಿಸಾಡಿ ಸಮುದಾಯದವರು ದುಡಿದು ಸುರಿಸುವ ಬೇವರ ಹನಿಗಳಿಗೆ ಕನಿಷ್ಟ ಒಂದು ಮನೆಯನ್ನೂ ಕೂಡಾ ಕಟ್ಟಿಸಿಕೊಳ್ಳಲಾರದ ಸ್ಥಿತಿ ಇದೆ.

೧೬. ವೃತ್ತಿ ಸಂಬಂಧಿ ಸಲಕರಣೆಗಳ ಮಾಹಿತಿ

ಈ ಸಮುದಾಯದವರು ಬಳಸುವ ವೃತ್ತಿ ಸಂಬಂಧಿ ಸಲಕರಣೆಗಳ ಮಾಹಿತಿ ಎಂದರೆ, ಇಲ್ಲಿ ಅವಶ್ಯವಾಗಿ ಕೆಲವು ಸಲಕರಣೆಗಳ ಪರಿಚಯವನ್ನು ಮಾತ್ರ ಕೊಡಲಾಗಿದೆ. ಆದರೆ ಇನ್ನೂ ಅನೇಕ ಸಲಕರಣೆಗಳನ್ನು ಇವರು ಬಳಸುತ್ತಿದು ಅವುಗಳ ಪರಿಚಯ ಕೊಟ್ಟಿರುವುದಿಲ್ಲ. ಇಲ್ಲಿ ಅವರ ಕಬ್ಬಿಣದ ಕೆಲಸಕ್ಕೆ ಅವಶ್ಯವಾದ ಸಾಮಗ್ರಿಗಳನ್ನಷ್ಟೇ ಪರಿಗಣಿಸಲಾಗಿದೆ.

೧. ಜೋಡಿ ತಿದಿ : ಜೋಡಿ ತಿದಿಗೆ ಎರಡು ದನಗಳ ಪೂರ್ಣ ಚರ್ಮವು ಬಳಕೆಗೊಳ್ಳುತ್ತಿದ್ದು, ಕೆಳಭಾಗದ ಮತ್ತು ಮೇಲ್ಭಾಗದ ತಿದಿಯ ಹಲಗೆಗಳನ್ನು ತ್ರಿಕೋನಾಕಾರದಲ್ಲಿ ಕತ್ತರಿಸಿ, ಮೇಲ್ಭಾಗದ ಮತ್ತು ಕೆಳಭಾಗದ ಹಲಗೆಗಳನ್ನು ಹೊಂದಿಸಲು ದನದ ಚರ್ಮದಿಂದ ತಯಾರಿಸಿದ ತಿದಿಗಳನ್ನು ರಚನೆ ಮಾಡಲಾಗಿರುತ್ತದೆ. ಈ ಚರ್ಮವು ಗಾಳಿ ತುಂಬಿ ಕೊಳವೆಗಳ ಮೂಲಕ ಗಾಳಿ ಹೊರ ಬಂದಾಗ ಬೆಂಕಿಯು ಹೊತ್ತಿಕೊಳ್ಳುತ್ತದೆ. ಈ ಎರಡು ತಿದಿಗಳ ಗಾಳಿಯು ಒಂದೇ ಕಡೆ ನುಗ್ಗಲು ಎರಡು ತಿದಿಗಳ ಮುಂಭಾಗದ ಕಬ್ಬಿಣದ ಕೊಳವೆಗಳನ್ನು ಒಂದು ದೊಡ್ಡ ಮಣ್ಣಿನ ಕೊಳವೆಗೆ ಹೊಂದಿಸಲಾಗಿರುತ್ತದೆ. ಈ ಎರಡು ತಿದಿಗಳನ್ನು ಒತ್ತಲು ಅನುಕೂಲವಾಗುವಂತೆ ತಿದಿಗಳ ಮೇಲ್ಭಾಗದಲ್ಲಿ ಕೈಗಳನ್ನು ತೂರಿಸಿ ಹಿಡಿಯಲು ಅನುವು ಮಾಡಿರುತ್ತಾರೆ.

೨. ಕುಲುಮೆ : ಕಮ್ಮಾರಿಕೆ ವೃತ್ತಿಯಲ್ಲಿ ಕುಲುಮೆ, ಜೋಡಿ ತಿದಿ, ಬ್ಲೋವರ್(ಗಾಳಿಚಕ್ರ)ಗಳು, ಬಹಳ ಮುಖ್ಯವಾಗಿದ್ದು, ಈ ಮೂರರ ಕೆಲಸ ಒಂದೇ ರೀತಿಯದ್ದಾಗಿದೆ. ಆದರೆ ತಮ್ಮ ತಮ್ಮ ಅನುಕೂಲತೆಗಳಿಗೆ ತಕ್ಕಂತೆ ಈ ಘಿಸಾಡಿ ಸಮುದಾಯದವರು ಇವುಗಳನ್ನು ಬಳಸುತ್ತಾರೆ.

ಕುಲುಮೆಯು ಒಂದು ತ್ರಿಕೋನಾಕಾರದ ಕಟ್ಟಿಗೆಯ ಹಲಗೆಗೆ, ಚರ್ಮದಲ್ಲಿ ಗಾಳಿ ತುಂಬುವ ಹಾಗೆ ರಚನೆ ಮಾಡಿ, ಒಂದು ಉದ್ದನೆಯ ಕೋಲಿನಿಂದ ಆ ತಿದಿಯು ಗಾಳಿ ಹೊರಸೂಸುವ ಹಾಗೆ ಆ ಬೀದಿರಿನ ಕೋಲನ್ನು ಮೇಲೆ-ಕೆಳಗೆ ಮಾಡಿದಾಗ ಕುಲುಮೆಯಿಂದ ಗಾಳಿಯು ಹೊರ ಬರುತ್ತದೆ. ಆಗ ಬೆಂಕಿ ಹೊತ್ತಿಕೊಂಡು ಕಬ್ಬಿಣ ಕಾಯಿಸಲು ಅನುಕೂಲವಾಗುತ್ತದೆ. ಇದನ್ನು ಹೆಚ್ಚಾಗಿ ಖಾಯಂ ಆಗಿ ಒಂದೇ ಸ್ಥಳದಲ್ಲಿ ನಿರ್ಮಿಸಲಾಗುತ್ತದೆ. ಬಹು ದಿನಗಳ ನಂತರ ಇದನ್ನು ಇನ್ನೊಂದು ಸ್ಥಳದಲ್ಲಿ ರಚನೆ ಮಾಡಬಹುದು.

೩. **ಬ್ಲೋವರ್ :** ತಿದಿಯ ಆಧುನಿಕ ರೂಪಾಂತರವೇ ಬ್ಲೋವರ್ ಅಥವಾ ಬ್ಲೋರ್ ಆಗಿದೆ. ಚಕ್ರವನ್ನು ಒಳಗೊಂಡಿರುವ ಈ ಉಪಕರಣದ ಮೇಲ್ಕವಚವು ಚಕ್ರ ತಿರುಗಿಸಿದಾಗ ಉಂಟಾಗುವ ಗಾಳಿಯನ್ನು ತಡೆಹಿಡಿದು ಕೊಳವೆ ನಾಳದ ಮೂಲಕ ಹೊರ ಹಾಕುವ ಕಾರ್ಯವನ್ನು ಮಾಡುತ್ತದೆ. ಹೀಗೆ ಹೊರಸೂಸುವ ಗಾಳಿಯು ಕುಲುಮೆಯ ಬೆಂಕಿಯನ್ನು ತಯಾರಿಸಲು ಉಪಯೋಗಿಸಲಾಗುತ್ತದೆ. ಇದು ಅಲೆಮಾರಿ ಕಮ್ಮಾರಿಕೆ ವೃತ್ತಿಯನ್ನು ನಿರ್ವಹಿಸಲು ಬಹಳ ಅನುಕೂಲವಾಗಿದ್ದು ಇದನ್ನು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಅಥವಾ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಸುಲಭ ರೀತಿಯಲ್ಲಿ ಹೊತ್ತುಕೊಂಡು ಹೋಗಬಹುದು. ಬಹುತೇಕ ಘಿಸಾಡಿ ಸಮುದಾಯದವರು ಇದನ್ನು ಬಳಸುತ್ತಾರೆ.

೪. **ಗನ್ (ಚಮ್ಮಟಿಕೆ):** ಈ 'ಗನ್' ಎನ್ನುವ ಶಬ್ದವು ಬಹುಶಃ ಉರ್ದು ಭಾಷೆಯ ಮೂಲದ್ದಾಗಿರಬಹುದು. ಗನ್‌ಗಳು ವಿವಿಧ ಗಾತ್ರಗಳಲ್ಲಿ, ವಿವಿಧ ಆಕಾರಗಳಲ್ಲಿರುತ್ತವೆ. ಸುಮಾರು ಐದು ಪೌಂಡುಗಳಿಂದ ಹಿಡಿದು ೨೦ ಪೌಂಡುಗಳವರೆಗೆ ಲಭ್ಯವಿರುತ್ತದೆ. ಕಾದ ಕಬ್ಬಿಣದಿಂದ ಸಲಕರಣೆಗಳನ್ನು ತಯಾರಿಸುವಾಗ ಅಥವಾ ಸಲಕರಣೆಗಳ ರೂಪ ತಯಾರಿಕೆಯಲ್ಲಿ ಈ ಗನ್‌ನಿಂದ ಬಡಿದು ತಯಾರಿಸಲಾಗುತ್ತದೆ.

೫. **ಕೈ ಸುತ್ತಿಗೆ :** ಚಿಕ್ಕ ಚಮ್ಮಟಿಕೆಯ ಆಧುನಿಕ ರೂಪವೇ ಈ ಕೈಸುತ್ತಿಗೆ ಇದನ್ನು ಕಬ್ಬಿಣದ ಚಿಕ್ಕ ಸಲಕರಣೆಗಳನ್ನು ತಯಾರಿಸುವಲ್ಲಿ ಅಥವಾ ಸಲಕರಣೆಗಳ ರೂಪದ ಅಂತಿಮ ತಯಾರಿಕೆಯಲ್ಲಿ ನಿಧಾನವಾಗಿ ಇದರಿಂದ ಬಡಿದು ನಿಶ್ಚಿತವಾದ ರೂಪ ನೀಡುವುದಕ್ಕೆ ಇದನ್ನು ಬಳಸುತ್ತಾರೆ. ಸಾಮಾನ್ಯವಾಗಿ ಇದು ಕನಿಷ್ಠ ಒಂದು `ಪೌಂಡ್‌ನಿಂದ ಐದು ಪೌಂಡುಗಳವರೆಗೆ ಈ ಸುತ್ತಿಗೆ ತೂಕಗಳಲ್ಲಿ ಲಭ್ಯವಿರುತ್ತವೆ.

೬. **ಇಕ್ಕಳ :** ಈ ಇಕ್ಕಳವು ವಿವಿಧ ಆಕಾರ, ಗಾತ್ರಗಳಲ್ಲಿ ಲಭ್ಯವಿವೆ. ಇವುಗಳನ್ನು ಇವರೇ ಸ್ವತಃ ತಯಾರಿಸಿಕೊಳ್ಳುತ್ತಾರೆ. ಈ ಇಕ್ಕಳವು ಕಾದ ಕಬ್ಬಿಣದ ಸಲಕರಣೆಗಳನ್ನು ಹಿಡಿದುಕೊಳ್ಳಲು ಬಳಸಲಾಗುತ್ತದೆ. ಇದು ಸುಮಾರು ಎರಡು ಅಡಿಗಳಷ್ಟು ಉದ್ದವಿರುತ್ತದೆ.

೭. ಅಡಿಗಲ್ಲು : ಕಬ್ಬಿಣದ ಉಪಕರಣಗಳ ತಯಾರಿಕೆಯಲ್ಲಿ ಅವಶ್ಯವಾದದ್ದು ಈ ಅಡಿಗಲ್ಲು. ಇದು ಸಾಮಾನ್ಯವಾಗಿ ಎರಡು ಅಡಿ ಚೌಕಾಕಾರದಲ್ಲಿದ್ದು, ಎರಡೂವರೆ ಅಡಿ (೨½) ಎತ್ತರವನ್ನು ಹೊಂದಿರುತ್ತದೆ. ಈ ಅಡಿಗಲ್ಲಿನ ಮೇಲೆ ಕಬ್ಬಿಣವನ್ನು ಇಟ್ಟು ಚಮ್ಮಟಿಕೆಯಿಂದ ಹೊಡೆದು ಉಪಕರಣಗಳನ್ನು ತಯಾರಿಸಲಾಗುತ್ತದೆ.

೮. ಸರ : ತಿದಿಯ ಅಥವಾ ಚಕ್ರ ತಿದಿಯ ತುದಿ ಭಾಗದಲ್ಲಿಯ ಕಬ್ಬಿಣದ ಕೊಳವೆಯನ್ನು ಹೊಂದಿಸಿ, ಉಷ್ಣವನ್ನು ತಡೆಹಿಡಿದು ಗಾಳಿಯು ಕಬ್ಬಿಣದ ಭಟ್ಟಿಯೊಳಗೆ ಸಾಗಲು ಅವಶ್ಯವಾದ ಮಣ್ಣಿನ ಕೊಳವೆಗೆ ಸರವೆಂದು ಕರೆಯಲಾಗುತ್ತದೆ. ಈ ಸರವನ್ನು ಕೆಂಪು ಮಣ್ಣಿನಲ್ಲಿ ವಿಶಿಷ್ಟವಾಗಿ ತಯಾರಿಸಿ ಸುಡಲಾಗುತ್ತದೆ. ಈ ಸರಗಳ(ಕೊಳವೆ) ಒಳ ವಿಸ್ತೀರ್ಣವು ಸುಮಾರು ೩-೪ ಇಂಚುಗಳಷ್ಟಾಗಿರ ಬಹುದು. ಅದರ ಹೊರ ಮೈ ಸುತ್ತಳತೆ ಸುಮಾರು ಎರಡು ಅಡಿಗಳಷ್ಟಿರುತ್ತದೆ.

೯. ಬಕ್ಕಸ್ ಕೋಲು : ಕಬ್ಬಿಣದ ಉಪಕರಣಗಳ ತಯಾರಿಕೆಯಲ್ಲಿ, ಕಬ್ಬಿಣ ರಸವಾಗಿದೆಯೋ ಇಲ್ಲವೋ ಎಂದು ಹದ ನೋಡಲು ಈ ಬಕ್ಕಸ ಕೋಲನ್ನು ಉಪಯೋಗಿಸಲಾಗುತ್ತದೆ. ಇದರ ಉದ್ದ ಸುಮಾರು ಎಂಟು ಅಡಿಗಳಷ್ಟಿರುತ್ತದೆ. ಕೆಲವೊಂದು ಅಳತೆಗಳಲ್ಲಿ ಹೆಚ್ಚು ಕಡಿಮೆ ಇದ್ದು. ಇದರ ಮುಂದಿನ ತುದಿಯು ಸ್ವಲ್ಪ ಭಾಗದಂತಿರುತ್ತದೆ. ಕಾದ ಕಬ್ಬಿಣದ ಹದ ನೋಡಲು ಮತ್ತು ಇದ್ದಿಲುಗಳನ್ನು ಕುಲುಮೆಯೊಳಗೆ ದಬ್ಬಲು ಉಪಯೋಗಿಸಲ್ಪಡುತ್ತದೆ.

೧೦. ತಂಡಾಸ್ : ಕಬ್ಬಿಣ ತಯಾರಿಕೆಯಲ್ಲಿ ದೊಡ್ಡ ಗಾತ್ರದ ತಂಡಾಸ್‌ಗಳನ್ನು ಬಳಸ ಲಾಗುತ್ತದೆ. ಉಪಕರಣಗಳ ತಯಾರಿಕೆಗಳಲ್ಲಿ ಸಣ್ಣ ಪ್ರಮಾಣದ ತಂಡಾಸ್‌ಗಳನ್ನು ಬಳಸಲಾಗುತ್ತದೆ. ಉಪಕರಣಗಳ ತಯಾರಿಕೆ ಸಂದರ್ಭದಲ್ಲಿ ಇದ್ದಿಲುಗಳನ್ನು ಹಾಕಲು, ಬೆಂಕಿ ಹಿಡಿಯಲು ಚಿಕ್ಕ ಪುಟ್ಟ ಉಪಕರಣಗಳನ್ನು ಹಿಡಿಯಲು ಈ ಉಪಕರಣ ಬಳಸಲಾಗುತ್ತದೆ.

೧೧. ಬೆಸುಗೆ ಇಕ್ಕಳ : ಕಬ್ಬಿಣದ ಉಪಕರಣಗಳಿಗೆ ಬೆಸುಗೆ ಹಾಕುವಾಗ ಇದರಿಂದ ಒತ್ತಿ ಹಿಡಿದು ಬೆಸುಗೆ ಹಾಕಲಾಗುತ್ತದೆ. ಸಾಮಾನ್ಯವಾಗಿ ಬಂಡಿಯ ಗಾಲಿಯ ಹಳಿ ಬಿಗಿಯುವಾಗ ಅಥವಾ ಟಾಂಗಾದ ಗಾಲಿಗಳ ಹಳಿ ಬಿಗಿಯುವಾಗ ಇದನ್ನು ಉಪಯೋಗಿಸಲಾಗುತ್ತದೆ.

೧೨. ಬಿಲ್ಲಿಕ್ಕಳ : ಇದನ್ನು ಕೂಡಾ ಕಾದ ಕಬ್ಬಿಣವನ್ನು ಹಿಡಿದುಕೊಳ್ಳುವ ಸಂದರ್ಭದಲ್ಲಿ ಬಳಸಲಾಗುತ್ತದೆ. ಇದು ಬಿಲ್ಲಿನಾಕಾರದಲ್ಲಿ ಭಾಗಿರುವುದರಿಂದ ಬಿಲ್ಲಿಕ್ಕಳ ಎಂದು ಕರೆಯುತ್ತಾರೆ.

೧೩. ಚಾಣ : ಕಬ್ಬಿಣದಿಂದ ಉಪಕರಣಗಳನ್ನು ತಯಾರಿಸುವಾಗ, ಉಪಕರಣಗಳನ್ನು ಈ ಚಾಣದಿಂದ ಕತ್ತರಿಸಲಾಗುತ್ತದೆ. ಇದು ಉಕ್ಕಿನಿಂದ ತಯಾರಿಸಲಾಗಿದ್ದು ಇದರ ಮುಂಭಾಗವು ಅಗಲಕ್ಕೆ ಕೊಡಲಿಯ ಮೊನಚಾದ ತುದಿಯಂತೆ ಕಬ್ಬಿಣವನ್ನು ಕತ್ತರಿಸಲು ಅನುಕೂಲವಾಗುವ ಹಾಗೆ ಇರುತ್ತದೆ. ಇದರ ಹಿಂಭಾಗವು ದುಂಡಾಗಿ ಮತ್ತು ಚಪ್ಪಟೆಯಾಗಿರುತ್ತದೆ.

೧೪. ಪಂಚ್ (ತೂತುಮೊಳೆ): ಇದು ವಿವಿಧ ಗಾತ್ರಗಳಲ್ಲಿ ಲಭ್ಯವಿದ್ದು, ವಿವಿಧ ಗಾತ್ರಗಳಲ್ಲಿ ತಯಾರಿಕೆಯಾದ ಉಪಕರಣಗಳಿಗೆ, ಅವಶ್ಯವಿದ್ದಲ್ಲಿ ರಂಧ್ರಗಳನ್ನು ಹಾಕಲು ಇದನ್ನು ಬಳಸಲಾಗುತ್ತದೆ.

೧೫. ಚೆಟ್ನ ಮತ್ತು ಅರ : ಒಂದನ್ನು ಬಂಡಿಯ ಇರಿಸನ್ನು ಮಾಡುವಾಗ ಉಪಯೋಗಿಸಿದರೆ,

ಮತ್ತೊಂದನ್ನು ಕಬ್ಬಿಣದ ನಾಜೂಕಾದ ಉಪಕರಣಗಳಾದ ಕೊಡಲಿ, ಮಚ್ಚು, ಕುಡುಗೋಲು, ಈಳಿಗೆಗಳಂತಹ ಹರಿತವಾದ ವಸ್ತುಗಳ ತುದಿಯನ್ನು ಚೂಪಾಗಿಸಲು ಬಳಸಲಾಗುತ್ತದೆ.

೧೯. ಜಗ್ಗಿಕ್ಕಳ : ಬಂಡಿಯ ಗಾಲಿಯ ಹಳಿ ಬಗ್ಗಿಸುವಾಗ ಸರಿಯಾದ ರೀತಿಯಲ್ಲಿ ಗಾಲಿಗೆ ಹೊಂದಿಕೊಳ್ಳುವಂತೆ ಎಳೆದು ಕೂಡಿಸಲು ಈ ಉಪಕರಣವನ್ನು ಬಳಸಲಾಗುತ್ತದೆ.

೧೭. ಒಲೆಗದ್ದೆ : ಕುಲುಮೆ ಅಥವಾ ತಿದಿಯ (ಬ್ಲೋರ್‌ನ) ಮಧ್ಯಭಾಗಕ್ಕೆ ಒಂದು ಮಣ್ಣಿನ ಎತ್ತರವಾದ ಗದ್ದೆಯನ್ನು ನಿರ್ಮಿಸಲಾಗಿರುತ್ತದೆ. ಬಹುಶಃ ತಿದಿ ಊದುವ ವ್ಯಕ್ತಿಗೆ ಮತ್ತು ತಿದಿಗೆ ಬೆಂಕಿಯ ಶಾಖ ತಗಲಬಾರದು ಎಂಬ ಉದ್ದೇಶದಿಂದ ಈ ಮಣ್ಣಿನ ಗದ್ದೆ ನಿರ್ಮಿಸಿರಬಹುದು. ಬೆಂಕಿ ಚದುರದಂತೆ ಕಾಯ್ದುಕೊಳ್ಳಲು ಈ ಗದ್ದೆಯು ಸಹಕಾರಿಯಾಗಿರುತ್ತದೆ.

೧೭. ಅವಲಂಬಿತ ವೃತ್ತಿಗಳು

೧. ಕೃಷಿ ಕೂಲಿ ಕಾರ್ಮಿಕ ವೃತ್ತಿ

ಜೀವನ ಸಾಗಿಸಲು ಅಥವಾ ಉದರ ಪೋಷಣೆಗಾಗಿ ಇಲ್ಲದವರು ಉಳ್ಳವರ ಬಳಿ ದಿನವೊಂದಕ್ಕೆ ನಿಗದಿಪಡಿಸಿದ ಸಂಭಾವನೆಗಾಗಿ ಕೆಲಸ ಮಾಡುವುದೇ ಕೂಲಿ. ನಿರಂತರವಾಗಿ ಅಲೆಮಾರಿ ಜೀವನ ನಡೆಸುತ್ತಿದ್ದ ಘಿಸಾಡಿ ಸಮುದಾಯದವರು ಇತ್ತೀಚಿನ ದಿನಗಳಲ್ಲಿ ಹಲವಾರು ಗ್ರಾಮಗಳಲ್ಲಿ ನೆಲೆಸಿದ್ದಾರೆ. ತಾವು ನೆಲೆಸಿರುವ ಗ್ರಾಮಗಳಲ್ಲಿ ಭೂಮಾಲೀಕರ ಹತ್ತಿರ ಕೃಷಿ ಕಾರ್ಮಿಕ ಕೂಲಿಗಳಾಗಿ ಉಳ್ಳವರ ಹೊಲಗದ್ದೆಗಳಲ್ಲಿ ಕೃಷಿ ಕೂಲಿಗಳಾಗಿ ದುಡಿದು ತಮ್ಮ ಹೊಟ್ಟೆಯನ್ನು ತುಂಬಿಸಿಕೊಳ್ಳುವುದರೊಂದಿಗೆ ಕೂಲಿ ಜೀವನ ನಡೆಸುತ್ತಿರುವುದು ಕಂಡುಬರುತ್ತದೆ.

೨. ಬೇವಿನ ಬೀಜಗಳನ್ನು ಆಯ್ದುಕೊಳ್ಳುವುದು

ಯುಗಾದಿ ಹಬ್ಬ ಮುಗಿದ ಮೇಲೆ ಬೇಸಿಗೆಯ ಕಾಲದಲ್ಲಿ ಹೆಚ್ಚಾಗಿ ಕೂಲಿ ಕೆಲಸಗಳು ಗ್ರಾಮೀಣ ಭಾಗದಲ್ಲಿ ಸಿಗುವುದಿಲ್ಲ. ಹೀಗಾಗಿ ದುಡಿದರೆ ಒಪ್ಪೊತ್ತಿನ ಊಟ ಎಂಬುದಾಗಿ ತಿಳಿದಿರುವ ಈ ಸಮುದಾಯದ ಸ್ತ್ರೀಯರು ಮತ್ತು ಮಕ್ಕಳು ಬುಟ್ಟಿ ಇಲ್ಲವೇ, ಡಬ್ಬಿಗಳನ್ನು ತೆಗೆದುಕೊಂಡು ಹಳ್ಳ, ಕೊಳ್ಳ, ಹೊಲ, ಗದ್ದೆಗಳಲ್ಲಿ ಅಥವಾ ಸಾರ್ವಜನಿಕ ರಸ್ತೆಗಳಲ್ಲಿರುವಂತ ಬೇವಿನ ಮರಗಳನ್ನು ಹುಡುಕುತ್ತಾ ಕೆಳಗೆ ಉದುರಿ ಬಿದ್ದ ಬೀಜಗಳನ್ನು ಆಯ್ದುಕೊಂಡು, ತಮ್ಮ ಗುಡಾರದ ಅಂಗಳದಲ್ಲಿ ರಾಶಿ ಹಾಕಿ ಒಂದು ದಿನ ಬೇವಿನ ಬೀಜದ ವ್ಯಾಪಾರಿಯೊಂದಿಗೆ, ವ್ಯಾಪಾರದ ಮೌಲ್ಯವನ್ನು ನಿರ್ಧರಿಸಿಕೊಂಡು ಮಾರಾಟ ಮಾಡಿ ಸ್ವಲ್ಪ ಹಣ ಸಂಪಾದಿಸುತ್ತಾರೆ.

೩. ತಯಾರಿಸಿದ ವಸ್ತುಗಳನ್ನು ಮಾರಾಟ ಮಾಡುವುದು

ಇವರು ತಮ್ಮ ಕಮ್ಮಾರಿಕೆ ಕೆಲಸಗಳಿಂದ ತಯಾರಿಸಿದ ಕೃಷಿ ಉಪಕರಣಗಳಾದ ಕುರುಚಿಗೆ, ಕುಡುಗೋಲು, ಕೊಡಲಿ, ಗುದ್ದಲಿ, ಸಲಕೆ, ಪಲಗಾ, ಹಾರೆ, ಕೂರಿಗೆಯ ಮೋನಚ್ಚು, ಮೊಳೆಗಳು,

ಕೂರಿಗೆ ಬಳೆಗಳನ್ನು ಮತ್ತು ಗೃಹೋಪಯೋಗಿ ವಸ್ತುಳಾದ ಗೋಡೆಯ ಮೊನಚು ಮೊಳೆಗಳು, ತೊಟ್ಟಿಲಿನ ಬಳೆ ಮೊಳೆಗಳು, ದನಕರುಗಳಿಗೆ ಕಟ್ಟುವ ಮೊಳೆಗಳು, ಸರಪಳಿಗಳು, ದೇವರ ಗುಡಿಗಳಲ್ಲಿನ ಘಂಟೆಯ ಸಲಾಕೆಗಳನ್ನು ತಯಾರಿಸಿ ಅವುಗಳನ್ನು ಗ್ರಾಮಗಳಲ್ಲಿನ ರಸ್ತೆಗಳಲ್ಲಿ, ಗಲ್ಲಿ ಗಲ್ಲಿಗಳಲ್ಲಿ ಕೂಗುತ್ತಾ ಮಾರಾಟ ಮಾಡುತ್ತಾರೆ. ಜಾತ್ರೆ, ಊರಿನ ಸಂತೆಗಳಲ್ಲಿ, ನಗರದ ಮುಖ್ಯ ರಸ್ತೆಗಳಲ್ಲಿ ಕುಳಿತು ಮಾರಾಟ ಮಾಡಿ ಜೀವನ ನಡೆಸುತ್ತಾರೆ.

೪. ಕೂಲಿ ಕಾರ್ಮಿಕ ವೃತ್ತಿ

ಇಂದು ಈ ಸಮುದಾಯದ ಅನೇಕ ಸ್ತ್ರೀ-ಪುರುಷರು ಕೂಲಿ ಕಾರ್ಮಿಕರಾಗಿ, ಹೋಟೆಲ್‌ಗಳಲ್ಲಿ, ಮಾಲೀಕರ ಮನೆಗಳಲ್ಲಿ, ನಗರದ ಚಿಕ್ಕಪುಟ್ಟ ಕಾರ್ಖಾನೆಗಳಲ್ಲಿ, ಕಟ್ಟಡ ಕಟ್ಟುವ ಕೆಲಸಗಳಲ್ಲಿ, ಗಾರೆ ಹಾಕುವುದರಲ್ಲಿ, ರಸ್ತೆ ದುರಸ್ತಿ ಕೆಲಸಗಳಲ್ಲಿ, ಗಣಿ ಕೆಲಸಗಳಲ್ಲಿ ಭಾರ ಹೊರುವುದು, ಹೀಗೆ ತಮ್ಮ ಉಪಜೀವನಕ್ಕಾಗಿ ಬೇರೆ ಬೇರೆ ಕೆಲಸಗಳಲ್ಲಿ ತೊಡಗಿರುವುದು ಕಂಡುಬರುತ್ತದೆ.

೫. ಕಾಗದ ಮತ್ತು ಪ್ಲಾಸ್ಟಿಕ್ ಆರಿಸುವುದು

ನಗರದ ಪ್ರದೇಶಗಳಲ್ಲಿನ ಕೊಳಚೆ ಪ್ರದೇಶಗಳಲ್ಲಿ ನೆಲೆಸಿರುವ ಘಿಸಾಡಿ ಸಮುದಾಯದ ಮಕ್ಕಳು, ವಿವಿಧ ಬಡಾವಣೆಗಳ ರಸ್ತೆಗಳಲ್ಲಿ ಬಿದ್ದಿರುವ ಕಾಗದ, ಪ್ಲಾಸ್ಟಿಕ್ ಚೂರುಗಳನ್ನು ಆಯ್ದು ಕೊಂಡು ತಮ್ಮ ಹೆಗಲಿಗೆ ಹಾಕಿಕೊಂಡಿರುವ ಜೋಳಿಗೆಯಲ್ಲಿ ತುಂಬಿಕೊಳ್ಳುವರು. ಈ ಮಕ್ಕಳು ಮಳೆ, ಚಳಿ, ಬಿಸಿಲು ಎನ್ನದೆ ಅವುಗಳನ್ನು ತಂದು ಮಾರಾಟ ಮಾಡಿ ಅವುಗಳಿಂದ ಬಂದಿರುವಂತಹ ೧೦ ಅಥವಾ ೨೦ ರೂಪಾಯಿಗಳನ್ನು ತಂದೆ-ತಾಯಿಗಳ ಕೈಯಲ್ಲಿ ಕೊಡುವರು. ಇದರೊಂದಿಗೆ ತಮ್ಮ ಕುಟುಂಬದ ಹಿರಿಯರಿಗೆ ಅಲ್ಪಪ್ರಮಾಣದ ಹಣ ಸಹಾಯ ಮಾಡುವರು.

ಆಧಾರಗಳು

೧. ಕರೀಗೌಡ ಬಿ.ಕೆ. (ಸಂ), ***ಕರಕುಶಲ ಕಲೆಗಳು***, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦

೨. ಚಂದ್ರಶೇಖರಪ್ಪ ಟಿ.ಜಿ., ***ಭಾರತದ ಇತಿಹಾಸ*** ಪೂರ್ಣ ಪ್ರಕಾಶನ, ಶಿವಮೊಗ್ಗ, ೨೦೦೩, ಪು.೨೧೧-೨೧೯

೩. ಮನೋಹರ ಕುಮಾರ ಸಿ.ಬಿ., ***ಸಮಾಜಶಾಸ್ತ್ರದ ಮೂಲ ತಂತ್ರಗಳು***, ಶ್ರವಣ್ ಪ್ರಕಾಶನ, ಶಿವಮೊಗ್ಗ, ೨೦೦೪

೪. ರಾಮಚಂದ್ರ ಜೋಷಿ., ***ಸಮಾಜಶಾಸ್ತ್ರದ ಮೂಲ ತತ್ವಗಳು***, ಶ್ರೀ ಸಿದ್ಧಲಿಂಗೇಶ್ವರ ಪ್ರಕಾಶನ, ಗುಲ್ಬರ್ಗಾ, ೨೦೦೪

೫. Enthoven R.V., ***The Tribes and Castes of Bombay***, Vol-II, Asian Eduacational Services, New Delhi, 1990

೬. Syed Siraj-Ul-Hassan., ***The Castes and Tribe of HEH the Nizam's Dominion***, Asian Eduacational Services, New Delhi, 1989

ಅಧ್ಯಾಯ - ೫

ಸಾಂಸ್ಕೃತಿಕ ಮತ್ತು ಧಾರ್ಮಿಕ ಜೀವನ

ಅ. ಸಂಸ್ಕಾರಗಳು

೧. ಚೋಳಿಶಾಸ್ತ್ರ (ಸೀಮಂತ ಕಾರ್ಯ)

೨. ಫೈದಾಶಾಸ್ತ್ರ (ಜನನ)

೩. ಪಾಳ್‌ನ್ಹೋ ಶಾಸ್ತ್ರ (ತೊಟ್ಟಿಲು)

೪. ಜಾವೋಳ್ (ಜವಳ)

೫. ವೋಟಿ ಬರ್ಹೋನೊ (ಋತುಮತಿ)

೬. ಬಾಹಿರ್ ಭೈಸೀಚ್ (ತಿಂಗಳ ಮುಟ್ಟಿನಶಾಸ್ತ್ರ)

೭. ಘುಟ್ಟಿಶಾಸ್ತ್ರ (ನಿಶ್ಚಿತಾರ್ಥ)

೮. ಲಗೀನ್ (ವಿವಾಹ)

೯. ಮುತ್ತೂರ್ ವಿವಾಹ (ಉಡುಕಿ ಮದುವೆ)

೧೦. ಮರಣ್ (ಶವ ಸಂಸ್ಕಾರ)

ಆ. ಧಾರ್ಮಿಕತೆಗಳು

೧೧. ಹಬ್ಬಗಳು

೧೨. ಆಚರಣೆಗಳು

೧೩. ಧಾರ್ಮಿಕ ಕೇಂದ್ರಗಳ ಜಾತ್ರೆ-ಉತ್ಸವಗಳು

ಸಾಂಸ್ಕೃತಿಕ ಮತ್ತು ಧಾರ್ಮಿಕ ಜೀವನ

'ಸಂಸ್ಕೃತಿ' ಎಂಬುದು ಸಮಾಜ ವಿಜ್ಞಾನಿಗಳ ಪ್ರಮುಖ ಪರಿಕಲ್ಪನೆಗಳಲ್ಲೊಂದು. ಮಾನವಶಾಸ್ತ್ರ ಮತ್ತು ಸಮಾಜಶಾಸ್ತ್ರಗಳಲ್ಲಿ ಅದಕ್ಕೆ ಬಹಳ ವಿಸ್ತಾರವಾದ ಅರ್ಥವನ್ನು ನೀಡಲಾಗಿದೆ. ಸಮಾಜದ ಅಧ್ಯಯನವೆಂದರೆ ಸಂಸ್ಕೃತಿಯ ಅಧ್ಯಯನವೇ ಆಗಿದೆ ಎನ್ನುವಷ್ಟರ ಮಟ್ಟಿಗೆ ಅದು ಸಮಾಜ ಶಾಸ್ತ್ರೀಯ ಅಧ್ಯಯನಗಳೊಂದಿಗೆ ಸೇರಿಕೊಂಡಿದೆ. ಸಂಸ್ಕೃತಿಯು ಮಾನವ ಸಮಾಜದ ಉಸಿರು, ಅದು ಮಾನವನ ಸಮೂಹ ಜೀವನದ ಅಭಿವ್ಯಕ್ತಿ. ಸಂಸ್ಕೃತಿ ಮತ್ತು ಸಮಾಜ ಇವು ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ.

ಸಂಸ್ಕೃತಿಯು ಮಾನವ ಸಮುದಾಯದ ವಿಶಿಷ್ಟ ಆಸ್ತಿಯಾಗಿದೆ. ಮಾನವನಿಗಿಂತಲೂ ಕೆಳಮಟ್ಟದ ಪ್ರಾಣಿವರ್ಗಗಳಲ್ಲಿ ಅದು ಕಾಣಸದು. ಉಳಿದ ಪ್ರಾಣಿಗಳು ನೈಸರ್ಗಿಕ ಪರಿಸರದಲ್ಲಿ ಬದುಕಿ ಬಾಳುತ್ತವೆಯಾದರೂ ಮಾನವನು ಮಾತ್ರ ನೈಸರ್ಗಿಕ ಪರಿಸರದ ಜೊತೆಗೆ 'ಸಾಂಸ್ಕೃತಿಕ ಪರಿಸರ'ವೆಂಬ ಇನ್ನೊಂದು ಬಗೆಯ ಪರಿಸದಲ್ಲಿ ಹುಟ್ಟಿ-ಬೆಳೆದು, ತನ್ನ ಬಾಳು ನಡೆಸುತ್ತಾನೆ. ಪ್ರತಿಯೊಬ್ಬ ವ್ಯಕ್ತಿಯೂ ಸಮಾಜವೊಂದರಲ್ಲಿ ಹುಟ್ಟುತ್ತಾನೆ ಎಂಬ ಮಾತು ವಾಸ್ತವಿಕವಾಗಿ, ಪ್ರತಿಯೋರ್ವನೂ 'ಸಾಂಸ್ಕೃತಿಕ ಪರಿಸರ'ವೊಂದರಲ್ಲಿ ಹುಟ್ಟುತ್ತಾನೆ ಎಂಬರ್ಥವನ್ನು ಧ್ವನಿಸುವುದು. ಮಾನವನು ಸಮಾಜ ಜೀವಿಯಾಗಿದ್ದಾನೆ ಎಂಬ ಮಾತು ಮಾನವನು ಸಾಂಸ್ಕೃತಿಕ ಜೀವಿಯಾಗಿದ್ದಾನೆ ಎಂಬುದಕ್ಕೆ ಸಮಾನವಾಗಿದೆ.

'ಸಂಸ್ಕೃತಿ'ಯು ಬಹು ಅರ್ಥವ್ಯಾಪ್ತಿಯುಳ್ಳ ಪರಿಕಲ್ಪನೆಯಾಗಿದೆ. ಅದು ಮಾನವನ ಜೀವನ ವಿಧಾನದ ಪ್ರತೀಕ. ಅದು ನಮ್ಮ ನಡತೆಯನ್ನು, ನಮ್ಮ ಧಾರ್ಮಿಕ ಹಾಗೂ ನೈತಿಕತೆಯನ್ನು, ನಮ್ಮ ರೂಢಿ-ಸಂಪ್ರದಾಯಗಳನ್ನು, ನಂಬಿಕೆ-ಮೌಲ್ಯಗಳನ್ನು, ಆಚರಣೆ-ಆದರ್ಶಗಳನ್ನು, ಆರ್ಥಿಕ-ರಾಜಕೀಯ ಅಂಶಗಳಂತಹ ಮೊದಲಾದ ಚಟುವಟಿಕೆಗಳನ್ನು ಒಳಗೊಂಡಿದೆ. ತನ್ನ ವ್ಯಕ್ತಿಗತ ಮತ್ತು ಸಾಮಾಜಿಕ ಜೀವನದಲ್ಲಿ ಮಾನವನು ಸಂಪಾದಿಸಿರುವ ಎಲ್ಲ ಅಂಶಗಳನ್ನು ಸಂಸ್ಕೃತಿಯು ಒಳ ಗೊಂಡಿರುತ್ತದೆ.

ಸಂಸ್ಕೃತಿಯ ವ್ಯಾಖ್ಯಾನಗಳು

೧. ಲಿಂಟನ್ ಅವರ ಪ್ರಕಾರ "ಒಂದು ನಿರ್ದಿಷ್ಟ ಸಮಾಜದ ಸದಸ್ಯರು ಹಂಚಿಕೊಳ್ಳುವ ಹಾಗೂ ಪ್ರಸಾರ ಮಾಡುವ ಜ್ಞಾನ, ದೃಷ್ಟಿಕೋನ ಮತ್ತು ಸ್ವಾಭಾವಿಕ ನಡವಳಿಕೆಯ ನಮೂನೆಗಳ ಒಟ್ಟು ಮೊತ್ತವೇ ಸಂಸ್ಕೃತಿ."

೨. ಇ.ಬಿ. ಟೈಲರ್ ಅವರ ಪ್ರಕಾರ "ಸಂಸ್ಕೃತಿಯು ಮಾನವನು ತನ್ನ ಸಮಾಜದ ಸದಸ್ಯನಾಗಿದ್ದು ಕೊಂಡು ಸಾಧಿಸಿದ, ಜ್ಞಾನ, ನಂಬಿಕೆ, ಕಲೆ, ನೈತಿಕ ನಿಯಮ, ಕಾನೂನು, ಪದ್ಧತಿ ಮತ್ತು ಇನ್ನುಳಿದ ಯಾವುದೇ ಸಾಮರ್ಥ್ಯವನ್ನು ಒಳಗೊಂಡ ಅಖಂಡವಾದ ಸಂಕೀರ್ಣವಾದ ವ್ಯವಸ್ಥೆ".

೩. ಕ್ರೋಬರ್ ಅವರ ಪ್ರಕಾರ "ನಾವು ಕಲಿತ ಹಾಗೂ ಪ್ರಸಾರ ಮಾಡುವ ಸ್ವಭಾವ, ತಂತ್ರ ವಿಧಾನ, ಚಿಂತನೆ ಮತ್ತು ಮೌಲ್ಯಗಳ ಮೊತ್ತವಾಗಿದೆ".

೪. ಮೆಲಿನೊವಸ್ಕಿ ಅವರ ಪ್ರಕಾರ ಮಾನವಶಾಸ್ತ್ರಜ್ಞನ ಅಭಿಪ್ರಾಯದಲ್ಲಿ "ಮಾನವ ತನ್ನ ಜೀವಿತದ ಗೊತ್ತುಗುರಿಗಳನ್ನು ರೂಪಿಸಿಕೊಳ್ಳಲು ನಿರ್ಮಿಸಿಕೊಂಡ ಸಾಧನವೇ ಸಂಸ್ಕೃತಿ" (ಉಪಸಂಸ್ಕೃತಿ ಮಾಲೆ:೧೯೯೩:೨೮-೨೯).

ಅನೇಕ ಮಾನವಶಾಸ್ತ್ರಜ್ಞರು ಮತ್ತು ಸಮಾಜಶಾಸ್ತ್ರಜ್ಞರು ಸಂಸ್ಕೃತಿಯಲ್ಲಿ ಮೇಲು ಕೀಳುಗಳ ಕಲ್ಪನೆಯನ್ನು ಕಿಂಚಿತ್ತೂ ತರದೆ ಒಟ್ಟು ಜೀವನ ವಿಧಾನವನ್ನು 'ಸಂಸ್ಕೃತಿ'ಯೆಂದು ಪರಿಭಾವಿಸಿದ್ದಾರೆ. ವ್ಯಕ್ತಿಯ ಅಂತರಂಗದ ಅಂಶಗಳ ಬದಲು ಬಹಿರಂಗ ಬದುಕಿನ ಅಂಶಗಳನ್ನು ಇಲ್ಲಿ ಪ್ರಧಾನವಾಗಿ ಪರಿಗಣಿಸಿದ್ದಾರೆ.

ಇಂದಿನ ಸಮಕಾಲೀನ ಬೌದ್ಧಿಕ ಜಗತ್ತು ತಿರಸ್ಕೃತ ಸಮಾಜದ ಸಂಸ್ಕೃತಿಗಳ ಆತ್ಮಚರಿತ್ರೆಯನ್ನು ವೈಚಾರಿಕವಾಗಿ ವ್ಯಾಖ್ಯಾನಿಸಿ ನಿರೂಪಿಸುತ್ತಿರುವ ಈ ಕಾಲದಲ್ಲಿ ನಿರ್ಲಕ್ಷಿಸಲ್ಪಟ್ಟ ಸಮುದಾಯಗಳ ಸಮಷ್ಟಿ ಸಂವೇದನೆಯನ್ನು ಸೂಕ್ಷ್ಮವಾಗಿ ಗ್ರಹಿಸಬೇಕಾಗುತ್ತದೆ. ಜಗತ್ತಿನ ಮಾನವೀಯ ಮೌಲ್ಯಗಳ ವಿಕಾಸದ ಬಂಧುತ್ವವು ಆಯಾ ನೆಲದಿಂದಲೇ ಸಾಂಸ್ಕೃತಿಕ ರೂಪಕ ಪ್ರತಿಮ ಸಂಕೇತಗಳಾಗಿ ಸಮಷ್ಟಿ ಇಚ್ಛೆಯಾಗಿ ಸಂಯುಕ್ತಾಭಿವ್ಯಕ್ತಿಯ ಧಾರೆಯಲ್ಲಿ ನಿರಂತರವಾಗಿ ತನ್ನನ್ನು ತಾನೇ ಪರಂಪರೆಯ ಆವಿಷ್ಕಾರಗಳಿಂದ ಮರುರೂಪಿಸಿಕೊಳ್ಳುತ್ತಾ ಸಾಗುತ್ತಿರುತ್ತದೆ.

ಆದಿಮ ಯುಗದಿಂದ ಇವತ್ತಿನ ತಾಂತ್ರಿಕ ಯುಗದವರೆಗೂ ಮತ್ತು ನಾಳಿನ ಆಚೆಗೂ ಸಂಸ್ಕೃತಿಯ ಸ್ಮೃತಿಗಳು ರೂಪಾಂತರವಾಗುತ್ತಲೇ ಜಗತ್ತಿನ ವಿನ್ಯಾಸವನ್ನು ನಿರ್ಮಿಸುತ್ತಿರುತ್ತವೆ. ಯಾವುದೇ ಅಧ್ಯಯನವು ಸಮುದಾಯನಿಷ್ಠವಾಗಿರಬೇಕಾದರೆ ಅದು ಸಂಸ್ಕೃತಿಬದ್ಧವಾಗಿರಬೇಕಾಗುತ್ತದೆ. ಸಂಸ್ಕೃತಿಯ ಬದ್ಧತೆಯೂ ಆಯಾ ಸಮುದಾಯದ ಸಾಮಾಜಿಕ ಸಂದರ್ಭವನ್ನು ತಿಳಿಸಿಕೊಡುತ್ತದೆ. ಸಾಮಾಜಿಕ ಸಂದರ್ಭವು ಸಮಕಾಲೀನ ಅರಿವನ್ನು ಪೂರ್ವದ ಸಾಂಸ್ಕೃತಿಕ ಸ್ಮೃತಿಗಳ ಜೊತೆಗೆ

ಹೊಂದಿಕೊಳ್ಳುತ್ತದೆ. ನಿನ್ನೆಯ ನೈತಿಕ ಪ್ರಜ್ಞೆಯನ್ನು ಇಂದಿನ ಮೌಲ್ಯಗಳ ಮೂಲಕ ಪರೀಕ್ಷಿಸಲು ಸಂಸ್ಕೃತಿಯ ಸಮಗ್ರ ತಿಳುವಳಿಕೆ ಅಗತ್ಯವಾಗಿರುತ್ತದೆ. ಸಂಸ್ಕೃತಿಯ ಸ್ಮೃತಿಗಳಿಗೆ ಬದ್ಧವಾಗುವುದೆಂದರೆ ಸಮುದಾಯಗಳ ಜ್ಞಾನ ಪರಂಪರೆಗಳನ್ನು ಒಳಗಿನವರಾಗಿ ಸಂವೇದಿಸುವುದೆಂದು ಅರ್ಥ. ಸಂಸ್ಕೃತಿಯ ಒಳಗಿನವರಾಗಿರುವುದರಿಂದ ಮೌಲ್ಯಗಳ ವಿಕಾಸವನ್ನು ಸೂಕ್ಷ್ಮವಾಗಿ ಗ್ರಹಿಸಲು ಸಾಧ್ಯವಾಗುತ್ತದೆ. ಈ ಬಗೆಯ ವಿಶ್ವಾಸದಿಂದಲೇ ವಕ್ತೃವಿಗೂ ನಿರೂಪಕನಿಗೂ ಸಂಶೋಧಕನಿಗೂ ಅಂತರ ಬೇರ್ಪಡುವುದಿಲ್ಲ. ಸಂಶೋಧನೆಗಳು ವಾಸ್ತವದ ಮಾನವನ ಸಂಬಂಧಗಳಿಗೂ ವೈರುಧ್ಯಾರ್ಥಗಳು ಏರ್ಪಡದಂತೆ ಎಚ್ಚರ ವಹಿಸಬೇಕಾದದ್ದು ಇವತ್ತಿನ ಬಹುಪಾಲು ಮಾನವೀಯ ವಿಜ್ಞಾನಿಗಳ ಸಂದರ್ಭದಲ್ಲಿ ಆಗಬೇಕಾಗಿದೆ.

ಪ್ರತಿಯೊಂದು ಸಂಸ್ಕೃತಿಯು ತನ್ನ ಸಮುದಾಯದ ಅಗತ್ಯಕ್ಕೆ ಅನುಗುಣವಾಗಿ ವಿಕಾಸಗೊಳ್ಳುತ್ತದೆ. ನೈಸರ್ಗಿಕವಾಗಿ ವಿಕಾಸ ಹೇಗೆ ಅನಿವಾರ್ಯವೂ ಸಂಸ್ಕೃತಿಯ ವಿಚಾರದಲ್ಲೂ ವಿಕಾಸ ಪ್ರಕ್ರಿಯೆ ನಿರಂತರವಾಗಿ ಸಾಗಿ ಬಂದಿರುತ್ತದೆ. ಸಂಸ್ಕೃತಿಯ ಯಾವುದೇ ಒಂದು ಸಂಗತಿ ಬದಲಾದರೂ ಅದರ ಪರಿಣಾಮ ಅನೇಕ ನೆಲೆಗಳಿಗೂ ವ್ಯಾಪಿಸಿಕೊಳ್ಳುತ್ತದೆ. ಜೈವಿಕ ವೈವಿಧ್ಯತೆಯ ಜೀವ ಸರಪಳಿಯ ಸಂಬಂಧದ ರೀತಿಯಲ್ಲೇ ಸಂಸ್ಕೃತಿಯ ಆಚಾರ-ವಿಚಾರಗಳಲ್ಲೂ ಕಂಡುಬರುತ್ತದೆ.

ಸಂಸ್ಕೃತಿ ಒಂದೇ ಕಾಲ ಘಟ್ಟದಿಂದ ಬೆಳೆದಿರುವುದಿಲ್ಲ. ಜೀವ ಸರಪಳಿಯ ಯಾವೊಂದು ಸರಳ ರೇಖಾತ್ಮಕ ಏಕಾಕಾರದಿಂದ ವಿಕಾಸವಾಗಿರಲು ಸಾಧ್ಯವೇ ಇಲ್ಲ. ಸಂಸ್ಕೃತಿಯ ಪ್ರವೃತ್ತಿಯಾಗಿ ಬಹುರೂಪಗಳು ಬೆಳೆಯುತ್ತವೆ. ಬಹು ಘಟ್ಟಗಳಿಂದಲೇ ಒಂದು ಅನನ್ಯತೆಗೆ ಗುರುತು ಬರುವುದು. ಒಂದು ದೈವವಾಗಲಿ, ಒಂದು ಆಚರಣೆಯಾಗಲಿ, ಒಂದು ಐತಿಹ್ಯವಾಗಲಿ, ಒಂದು ಪುರಾಣವಾಗಲಿ, ಬಹು ಆಕಾರಗಳ ಪರಸ್ಪರ ಆಕರ್ಷಣೆ ವಿಕರ್ಷಣೆಯಿಂದ ತಮ್ಮ, ತಮ್ಮ ಸ್ವಂತ ಆಕೃತಿಗಳನ್ನು ನಿರ್ಧರಿಸಿಕೊಳ್ಳುತ್ತವೆ. ಬಹುತ್ವವು ಒಂದೊಂದು ಸಮುದಾಯದ ಸಾಂಸ್ಕೃತಿಕ ಮನಸ್ಸಿನಲ್ಲಿ ವಿಭಿನ್ನ ತಿರುವುಗಳನ್ನು ಪಡೆದುಕೊಳ್ಳುತ್ತವೆ.

"ಬಹು-ಸಂಸ್ಕೃತಿಗಳಿಂದ ಬಹು ದೈವಗಳು ಬೆಳೆಯುತ್ತವೆ ಎಂಬುದು ಮೊದಲೇ ನಿಸರ್ಗದಲ್ಲಿ ತೀರ್ಮಾನವಾಗಿರುವ ವಿಚಾರ, ಆಹಾರದ ಕ್ರಮದಲ್ಲಿ ವೈವಿಧ್ಯತೆ ಕಂಡುಬಂದುದರಿಂದ ನಮ್ಮ ಜೈವಿಕ ಸರಪಳಿಯ ಸಂಬಂಧಗಳಲ್ಲಿ ವೈವಿಧ್ಯತೆ ಉಂಟಾಗಿದೆ. ವೈವಿಧ್ಯತೆಯಿಂದ ಸಮಾಜಗಳಿಗೆ ಬಹು ಮೌಲ್ಯಗಳನ್ನು ನಿರೂಪಿಸಲು ಸಾಧ್ಯವಾಗುತ್ತದೆ. ಮಾನವನ ಮೆದುಳು ಬಹುರೂಪಗಳಿಂದ ಮಾತ್ರವೇ ವಿಕಾಸವಾಗುವುದು. ನಂಬಿಕೆಯ ಬಹುತ್ವದಿಂದಾಗಿ ಮನಸ್ಸು ಬಹು ದೈವಗಳನ್ನು ಅನುಸರಿಸುತ್ತದೆ. ವೈವಿಧ್ಯತೆಯ ಪರಂಪರೆಯಲ್ಲಿ ಬೆರೆತು ಒಂದೊಂದು ಸಮುದಾಯಕ್ಕೂ ಪ್ರತ್ಯೇಕವಾದ ಅವಕಾಶಗಳನ್ನು ಕಲ್ಪಿಸುತ್ತದೆ"(ಹರ್ಬರ್‌ಸ್ಪೆನ್ಸರ್:೧೯೭೨:೨೦) ಎಂಬ ಅಭಿಪ್ರಾಯವನ್ನು ಅವರು ವ್ಯಕ್ತಪಡಿಸುತ್ತಾರೆ.

ಇದರಿಂದ ಭಾರತದ ಅಲೆಮಾರಿಗಳನ್ನು ಅಧ್ಯಯನ ಮಾಡಲು ಹೊರಟಾಗ ನಮಗೆ ಇದೇ ಬಗೆಯ ವಿಸ್ಮಯಗಳು ಎದುರುಗೊಳ್ಳುತ್ತವೆ. ಎಲ್ಲಿಂದಲೋ ವಲಸೆ ಬಂದು ಆಧುನಿಕ ಪ್ರಭಾವಗಳನ್ನು ಅರಗಿಸಿಕೊಂಡು, ತಮ್ಮ ಸಾಂಸ್ಕೃತಿಕ ಚಹರೆಗಳನ್ನು ಉಳಿಸಿಕೊಂಡು ಬಂದಿರುವ ಅನೇಕ ಅಲೆಮಾರಿಗಳು ನಮ್ಮ ನಡುವೆ ಇದ್ದಾರೆ. ಪ್ರಸ್ತುತ ಘಿಸಾಡಿ ಸಮುದಾಯವು ಸಹ ಇದಕ್ಕೆ ಹೊರತಾಗಿಲ್ಲ. ಅದು ಬಹುಕಾಲದಿಂದಲೂ ತಮ್ಮ ಆದಿಮ ಚಹರೆಗಳನ್ನೇನು ಬಿಟ್ಟು ಕೊಟ್ಟಿಲ್ಲ. ಹಾಗೆಯೇ ತಮ್ಮ ಅನನ್ಯತೆಯನ್ನು ಒಪ್ಪವಾಗಿ ಉಳಿಸಿಕೊಂಡು ಬಂದಿದ್ದಾರೆ. ಹೀಗೆ ಉಳಿದುಕೊಂಡು ಬಂದ ಅವರ ಅನನ್ಯತೆ ಯಾವುದೋ ಕಾಲದ ಕತೆಯಲ ಅದು ಎಲ್ಲ ಬಗೆಯ ಆಧುನಿಕ ಪ್ರಭಾವಗಳ ಮಗ್ಗಲುಗಳಿಂದ ಮುಖಾಮುಖಿಯಾಗಿ ತನ್ನತನವನ್ನು ಉಳಿಸಿಕೊಂಡು ಬಂದಿದೆ. ಇವರು ತಮ್ಮದೇ ಆದ ಸಾಂಸ್ಕೃತಿಕ ಚಹರೆಗಳಡಿಯಲ್ಲಿ ವಿವಿಧ ಹಬ್ಬಗಳು, ಆಚರಣೆಗಳು, ವಿಧಿ ವಿಧಾನಗಳು, ಸಾಮಾಜಿಕ ಕಟ್ಟುಪಾಡುಗಳು, ಭಾಷೆಗಳನ್ನು ಉಳಿಸಿಕೊಂಡು ಬಂದವರಾಗಿದ್ದಾರೆ.

ಅ. ಸಂಸ್ಕಾರಗಳು

೧. ಚೋಳಿಶಾಸ್ತ್ರ (ಸೀಮಂತ ಚೊಚ್ಚಲ ಶಾಸ್ತ್ರ)

ಸಾಮಾನ್ಯವಾಗಿ ಪ್ರತಿಯೊಂದು ಜಾತಿ ಮತ್ತು ಬುಡಕಟ್ಟುಗಳಲ್ಲಿ ಸ್ತ್ರೀಯು ಮೊದಲನೆಯ ಸಲ ಗರ್ಭವತಿಯಾಗಿರುವುದು ಆನಂದದಾಯಕವಾಗಿರುತ್ತದೆ. ಹೊಸ ಜೀವಕ್ಕೆ ಜನ್ಮ ನೀಡಲು ಸಿದ್ಧವಿರುವ ಗರ್ಭಿಣಿ ಸ್ತ್ರೀಯನ್ನು ಕಂಡಾಗ ಕುಟುಂಬದ ಸದಸ್ಯರಿಗೆ ಎಲ್ಲಿಲ್ಲದ ಸಂತೋಷ. ಅವಳು ಸ್ವೀಕರಿಸುವ ಆಹಾರದಿಂದ ಹಿಡಿದು ಅವಳು ತೊಡುವ ಬಟ್ಟೆಗಳು, ಆಭರಣಗಳು, ಮಾಡುವ ಕೆಲಸಗಳು ಮೊದಲಾದವುಗಳ ಬಗ್ಗೆ ಮನೆಯಲ್ಲಿನ ಹಿರಿಯರು ಎಚ್ಚರಿಕೆ ವಹಿಸುತ್ತಾರೆ. ಗರ್ಭಿಣಿ ಸ್ತ್ರೀಯ ಮನಸ್ಸು ಸುಖ-ಸಂತೋಷದಿಂದ ಇರುವಂತೆ ನೋಡಿಕೊಂಡರೆ, ಅವಳ ಗರ್ಭದಲ್ಲಿರುವ ಮಗು ಆರೋಗ್ಯವಾಗಿ ಬೆಳೆಯುವುದು ಎಂದು ನಂಬಿದ ಹಿರಿಯರು, ಅವಳಿಗೆ ಅನುಕೂಲವಾಗುವ ರೀತಿಯಲ್ಲಿ ತಮ್ಮದೆ ಆದಂತಹ ಸಂಪ್ರದಾಯಗಳನ್ನು ಮಾಡಿದರು. ಅವುಗಳನ್ನು ಆಚರಿಸುವುದರ ಮೂಲಕ ಅವಳ ಮಾನಸಿಕ ಮತ್ತು ದೈಹಿಕ ಆರೋಗ್ಯವನ್ನು ಕಾಪಾಡಿದರು. ಇಂದು ಗರ್ಭಿಣಿ ಸ್ತ್ರೀಯನ್ನು ನೋಡಿಕೊಳ್ಳುವುದರ ಬಗ್ಗೆ ಆರೋಗ್ಯ ಅಧಿಕಾರಿಗಳು ನೀಡುವ ಸಲಹೆ ಸೂಚನೆಗಳನ್ನು ನಮ್ಮ ಹಿರಿಯರು ಬಹುದಿನಗಳ ಹಿಂದೆಯೇ ಅರ್ಥ ಮಾಡಿಕೊಂಡಿದ್ದರು ಎಂಬುದಕ್ಕೆ ಅವರು ಆಚರಿಸುವ 'ಗರ್ಭಿಣಿ ಶಾಸ್ತ್ರ'ದ ಆಚರಣೆಗಳೇ ಸಾಕ್ಷಿಯಾಗಿ ನಿಂತಿವೆ.

ಘಿಸಾಡಿ ಸಮುದಾಯದವರು ಅಲೆಮಾರಿಗಳಾಗಿರುವುದರಿಂದ ಚೊಚ್ಚಲ ಬಸುರಿ ಹೆಂಗಸಿನ ತವರು ಮನೆಯವರು ಉಡಿತುಂಬಿ, ಹೊಸ ಸೀರೆ ಉಡಿಸುವ ಸೀಮಂತ ಕಾರ್ಯ ಮಾಡುವ ಸಂಪ್ರದಾಯ ರೂಢಿಯಲ್ಲಿಲ್ಲದಿದ್ದರೂ ಕೂಡಾ ತೀರಾ ಇತ್ತೀಚಿನ ದಿನಗಳಲ್ಲಿ ಬೇರೆ ಸಮುದಾಯದವರ ಪ್ರಭಾವದಿಂದ ಇವರು ಕೂಡಾ ಚೊಚ್ಚಲ ಬಸುರಿಗೆ ಸೀಮಂತ ಕಾರ್ಯಕ್ರಮ

ಮಾಡುವ ಪದ್ಧತಿ ರೂಢಿಯಲ್ಲಿ ತಂದಿದ್ದಾರೆ. ಈ ಕಾರ್ಯಕ್ರಮಕ್ಕೆ ಇವರು 'ಚೋಳಿಶಾಸ್ತ್ರ' ಎಂದು ಕರೆಯುತ್ತಾರೆ. ಇವರು ಸಾಮಾನ್ಯವಾಗಿ ಗರ್ಭಿಣಿ ಸ್ತ್ರೀಗೆ ಐದು ಅಥವಾ ಏಳನೆಯ ತಿಂಗಳು ತುಂಬಿದಾಗ ಅವರ ತವರು ಮನೆಯ ಬಂಧುಬಳಗದವರು ಬಂದು ಅವಳಿಗೆ ಹೊಸ ಸೀರೆ, ಕುಪ್ಪಸ, ಹೂವು, ಬಳೆಗಳನ್ನು ಮತ್ತು ಹಣ್ಣು-ಹಂಪಲಗಳು, ಸಿಹಿತಿನಿಸುಗಳನ್ನು ತಂದು ಹೂವು ಮುಡಿಸುವ ಕಾರ್ಯವನ್ನು ಮಾಡುತ್ತಾರೆ. ಈ ಕಾರ್ಯಕ್ರಮದಲ್ಲಿ ಗರ್ಭಿಣಿಯ ಎಲ್ಲ ಬಯಕೆಯ ತಿಂಡಿ ತಿನಿಸುಗಳನ್ನು ತಂದಿರುತ್ತಾರೆ. ಜೊತೆಗೆ ಈ ಸಂದರ್ಭದಲ್ಲಿ ಉಡಿತುಂಬುವ ಹಾಡುಗಳನ್ನು ಹಾಡುವರು.

ನಂತರ ಕೊನೆಗೆ ಗರ್ಭಿಣಿ ಮಹಿಳೆಯು ಮನೆಯಲ್ಲಿನ ದೇವರಿಗೆ ಹಾಗೂ ಹಿರಿಯರಿಗೆ ನಮಸ್ಕಾರ ಮಾಡಿ ಆಶೀರ್ವಾದ ಪಡೆದುಕೊಳ್ಳುತ್ತಾಳೆ, ನಂತರ ಅಂದು ಅವರ ಮನೆಯಲ್ಲಿ ಮಾಡಿದ ಸಿಹಿ ಊಟದ ವಿಶೇಷತೆಯನ್ನು ಎಲ್ಲರೂ ಸವಿಯುತ್ತಾರೆ. ಅಂದು ರಾತ್ರಿ ಬಂದಂತಹ ಎಲ್ಲ ಬಂಧು ಬಳಗದವರು ಅಲ್ಲಿಯೇ ಮಲಗುತ್ತಾರೆ. ಮುಂಜಾನೆ ಎದ್ದು ಅವರ ಮನೆಯಲ್ಲಿ ಮಾಡಿದ ಫಲಾಹಾರವನ್ನು ಸೇವಿಸಿ ಗರ್ಭಿಣಿಯನ್ನು ತವರು ಮನೆಗೆ ಕರೆದುಕೊಂಡು ಹೋಗುತ್ತಾರೆ. ನಾಲ್ಕಾರು ದಿನಗಳವರೆಗೆ ಆಕೆಯನ್ನು ತವರು ಮನೆಯಲ್ಲಿಟ್ಟುಕೊಂಡು ಪುನಃ ಗಂಡನ ಮನೆಗೆ ಕಳಿಸುತ್ತಾರೆ.

ಗರ್ಭಿಣಿಯ ಆರೈಕೆಯಲ್ಲಿ ನಿರ್ಲಕ್ಷ್ಯ ಮಾಡಿದರೆ ಅಂಥವರನ್ನು ಸಮಾಜದಿಂದ ಬಹಿಷ್ಕರಿಸ ಲಾಗುತ್ತದೆ. ಅಂತೆಯೇ ಘುನ್ ಹೊಡೆಯುವುದು, ಕಟ್ಟಿಗೆ ಕಡಿಯುವುದು, ಕಟ್ಟಿಗೆ ಮುರಿಯುವುದು, ಅತಿ ಭಾರದ ಕೆಲಸಗಳನ್ನು ಗರ್ಭಿಣಿ ಸ್ತ್ರೀಗೆ ನಿಷೇಧಿಸಲಾಗಿದೆ. ಆದರೂ ಇವರ ಬದುಕಿನ ಅನಿವಾರ್ಯತೆಗಾಗಿ ಇಂತಹ ಕೆಲಸಗಳಲ್ಲಿ ತೊಡಗಿಕೊಂಡಿರುತ್ತಾರೆ.

೨. ಪೈದಾಶಾಸ್ತ್ರ (ಜನನ)

ಘಿಸಾಡಿ ಸಮುದಾಯದವರು ತಮ್ಮ ಸತ್ಸಂಪ್ರದಾಯಗಳನ್ನು ಎಂದಿಗೂ ಕೈ ಬಿಟ್ಟವರಲ್ಲ. ಅಂತೆಯೇ ಮಗು ಜನಿಸಿದಾಗ ತಮ್ಮದೆಯಾದಂತಹ ವಿಶಿಷ್ಟ ಆಚರಣೆಗಳನ್ನು ಆಚರಿಸುವುದರೊಂದಿಗೆ ತಮ್ಮ ವಿಧಿ-ವಿಧಾನಗಳನ್ನು ಕಟ್ಟುನಿಟ್ಟಾಗಿ ಕಾಪಾಡಿಕೊಂಡು ಬಂದಿದ್ದಾರೆ.

ಬಹುತೇಕ ಸಮುದಾಯಗಳಲ್ಲಿ ಮೊದಲನೆಯ ಮತ್ತು ಎರಡನೆಯ ಬಾಣಂತಿತನ ಕಾರ್ಯವು ತವರು ಮನೆಗಳಲ್ಲಿ ನಡೆದರೆ, ಘಿಸಾಡಿ ಸಮುದಾಯವು ಇದಕ್ಕೆ ತದ್ವಿರುದ್ಧವಾಗಿದೆ. ಗರ್ಭಿಣಿಯ ಗಂಡನ ಮನೆಯಲ್ಲಿಯೇ ಬಾಣಂತಿತನವಾಗಬೇಕೆಂಬ ನಿಯಮ ಕಡ್ಡಾಯವಾಗಿದೆ. ಏಕೆಂದರೆ ಹುಟ್ಟುವ ಮಗು ತನ್ನ ಕುಟುಂಬಕ್ಕೆ ಸೇರಿದ್ದಾಗಿರುವದರಿಂದ ಬಾಣಂತಿತನದ ಖರ್ಚು-ವೆಚ್ಚಗಳೆಲ್ಲವನ್ನು ಗಂಡನ ಮನೆಯವರೇ ನಿಭಾಯಿಸಬೇಕಾಗುತ್ತದೆ. ತಾಯಿ ಹಾಗೂ ಹುಟ್ಟಿದ ಮಗುವಿನ ಆರೋಗ್ಯ ಸುರಕ್ಷತೆಯನ್ನು ಕಾಪಾಡಿಕೊಂಡು ಹೋಗುವ ಕಾಳಜಿ ಆಕೆಯ ತವರು ಮನೆಯವರಿಗಿಂತ ಗಂಡನ ಮನೆಯವರಿಗೆ ಹೆಚ್ಚಾಗಿರುತ್ತದೆ ಎಂಬ ಅಭಿಪ್ರಾಯವನ್ನು ಇವರು ವ್ಯಕ್ತಪಡಿಸುತ್ತಾರೆ.

ಈ ಸಂಪ್ರದಾಯದ ಹಿಂದಿನ ಉದ್ದೇಶವನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ ಇವರು ಮೂಲತಃ ಅಲೆಮಾರಿಗಳಾಗಿರುವುದರಿಂದ ಬಾಣಂತಿ ಮಹಿಳೆಗೆ ಸುಮಾರು ಒಂದರಿಂದ ಮೂರು ತಿಂಗಳವರೆಗೆ ಆರೈಕೆ ಮಾಡಬೇಕಾಗುತ್ತದೆ. ಒಂದು ವೇಳೆ ಗರ್ಭಿಣಿಯನ್ನು ಬಾಣಂತಿತನಕ್ಕೆ ತವರು ಮನೆಗೆ ಕಳುಹಿಸಿದರೆ, ಪರಸ್ಪರ ಅಲೆಮಾರಿಗಳಾಗಿರುವುದರಿಂದ ದಿನೇ ದಿನೇ ದೂರವಾಗುತ್ತಾರೆ ಎಂಬ ಭಯ ಈ ಜನರಲ್ಲಿರುವುದರಿಂದ ಬಾಣಂತಿತನದ ಈ ಪದ್ಧತಿಯನ್ನು ಕಡ್ಡಾಯವಾಗಿ ಗಂಡನ ಮನೆಯಲ್ಲಿಯೇ ಜಾರಿಗೊಳಿಸಿರಬಹುದು ಎಂಬುದು ಸ್ಪಷ್ಟವಾಗುತ್ತದೆ.

ಬಸುರಿ ಹೆಂಗಸಿಗೆ ಹೆರಿಗೆ ನೋವುಗಳು ಕಾಣಿಸಿಕೊಂಡ ಕೂಡಲೇ ಆಕೆಯ ಗಂಡನ ಮನೆಯ ಬೆಡಗಿನವರು ಮತ್ತು ಹುಟ್ಟುವ ಮಗುವಿನ ತಾಯಿಯ ತವರುಮನೆಯ ಬೆಡಗಿನವರನ್ನು ಬಿಟ್ಟು ಸಮುದಾಯದಲ್ಲಿನ ಯಾವುದಾದರೊಂದು ಬೇರೆ ಬೆಡಗಿನವರನ್ನು ಕರೆಯಿಸಲೇಬೇಕೆಂಬ ಸಂಪ್ರದಾಯ ರೂಢಿಯಲ್ಲಿದೆ. ಈ ಸಂದರ್ಭದಲ್ಲಿ ನುರಿತ ಸೂಲಗಿತ್ತಿಯನ್ನು ಕರೆಯಿಸಿ ಬಾಣಂತಿತನ ಮಾಡಿಸ ಲಾಗುತ್ತದೆ. ಆದರೆ ಇತ್ತೀಚಿನ ದಿನಗಳಲ್ಲಿ ಆಸ್ಪತ್ರೆಗಳಲ್ಲಿಯೂ ಕೂಡಾ ಬಾಣಂತಿತನ ಮಾಡಿಸಿ ಕೊಳ್ಳುತ್ತಾರೆ.

ಈ ಸೂಲಗಿತ್ತಿಯು ಗರ್ಭಿಣಿ ಸ್ತ್ರೀಗೆ ಹೆರಿಗೆಯಾದ ತಕ್ಷಣ ಮಗುವಿನ ಹೊಕ್ಕಳ ಬಳ್ಳಿಯನ್ನು ಮೊದಲು ಕುಡುಗೋಲಿನಿಂದ, ಇತ್ತೀಚಿಗೆ ಹೊಸ ಬ್ಲೇಡ್‌ನಿಂದ ಕತ್ತರಿಸುತ್ತಾರೆ. ಆ ಸ್ಥಳಕ್ಕೆ ಕೆಲವು ದಿನಗಳವರೆಗೆ ಹರಳೆಣ್ಣೆ ಬೆರೆಸಿ ಅರಿಶಿಣವನ್ನು ಹಚ್ಚುತ್ತಾರೆ. ಹೆರಿಗೆ ಸಮಯದಲ್ಲಿ ಬಿದ್ದ ಮಗುವಿನ ಮಾಸವನ್ನು ಕುಂಬಾರನ ಮನೆಯಿಂದ ತಂದ ಒಂದು ಹೊಸ ಮಡಿಕೆಯಲ್ಲಿ ಹಾಕಿ, ಅದನ್ನು ಯಾರು ತುಳಿಯದಿರುವ ತಮ್ಮ ಮನೆ ಅಥವಾ ಗುಡಾರದ ಒಂದು ಮೂಲೆಯಲ್ಲಿ ಹುಗಿದಿಡುತ್ತಾರೆ. ಹೀಗೆ ಹುಗಿದಿಡುವಾಗ ಆ ಮಗಿಯಲ್ಲಿ ಕೆಲವು ಜೀವನಾವಶ್ಯಕ ವಸ್ತುಗಳಾದ ದವಸ ಧಾನ್ಯಗಳು ಮತ್ತು ನಾಣ್ಯವನ್ನು ಹಾಕಿ ಮೇಲೊಂದು ಮುಚ್ಚಳವನ್ನು ಮುಚ್ಚಿ ನೆಲದಲ್ಲಿ ಹೂಳುತ್ತಾರೆ.

ಹೆರಿಗೆಯಾದ ಸ್ತ್ರೀಗೆ ತಮ್ಮ ಮನೆ ಅಥವಾ ಗುಡಾರಗಳಲ್ಲಿಯ ಒಂದು ಮೂಲೆಯಲ್ಲಿ ಹೊರಸನ್ನು ಹಾಕಿ ಹಳೆಯ ಸೀರೆಗಳಿಂದ ಇಲ್ಲವೇ ಕಂಬಳಿಯಿಂದ ಪರದೆಯನ್ನು ಅಡ್ಡವಾಗಿ ಕಟ್ಟುವರು. ಏಕೆಂದರೆ ಹೊರಗಿನಿಂದ ಬಂದವರ ನೆರಳು ಬಾಣಂತಿ ಮತ್ತು ಮಗುವಿನ ಮೇಲೆ ಬೀಳಬಾರದೆಂದು ಪ್ರತ್ಯೇಕ ಕೋಣೆಯಂತೆ ವ್ಯವಸ್ಥೆಯನ್ನು ಮಾಡುತ್ತಾರೆ. ಇವರು ತೊಟ್ಟಿಲಿನಲ್ಲಿ ಹಾಕುವ ತನಕ ಹೆಚ್ಚಿನ ಮಡಿ ಮೈಲಿಗೆಯನ್ನು ಆಚರಿಸುವರು. ಈ ಸಂದರ್ಭದಲ್ಲಿ ಬಾಣಂತಿಯ ಹತ್ತಿರ ಕುಟುಂಬದಲ್ಲಿನ ಹಿರಿಯ ಮಹಿಳೆಯರು ಮತ್ತು ನುರಿತ ಸೂಲಗಿತ್ತಿಯರು ಮಾತ್ರ ಹೋಗಿ ಉಪಚಾರ ಮಾಡುತ್ತಾರೆ. ಬಾಣಂತಿಯ ಹತ್ತಿರ ದೆವ್ವ ಪಿಶಾಚಿಗಳು ಸುಳಿಯಬಾರದೆಂದು ಹೊರಸಿನ ಕೆಳಗೆ ಕುಡುಗೋಲು ಅಥವಾ ಕಬ್ಬಿಣದ ಸಲಾಕೆಯನ್ನು ಇಡುತ್ತಾರೆ. ತಲೆಯ ಬದಿಗೆ ನಿಂಬೆಕಾಯಿ ಇಟ್ಟಿರುತ್ತಾರೆ. ಮಲಮೂತ್ರ ವಿಸರ್ಜನೆಗೆ ಹೊರಗೆ ಹೋಗುವಾಗ ಬಾಣಂತಿಯ ತಲೆಯ ಮೇಲೆ

ಕಂಬಳಿ ಇಲ್ಲವೆ ಕುಂಚಿಗೆಯನ್ನು ಹೊದಿಸುತ್ತಾರೆ. ಹೊರ ಹೋಗುವ ಸಾಧ್ಯತೆಗಳಿರುವುದರಿಂದ ಸದಾ ತನ್ನ ಸೀರೆಯ ಸೆರಗಿನಂಚಿನಲ್ಲಿ ನಿಂಬೆಕಾಯಿಯನ್ನು ಕಟ್ಟಿಕೊಳ್ಳಬೇಕು. ಕೆಲವು ದಿನಗಳವರೆಗೆ ಬಾಣಂತಿಗೆ ಬೆಂಕಿಯನ್ನು ಕಾಯಿಸುತ್ತಾರೆ. ಇದರಿಂದ ಹಸಿ ಮೈಯಲ್ಲಿರುವ ಬಾಣಂತಿಗೆ ಶಾಖ ನೀಡುವುದರಿಂದ ಆರೋಗ್ಯ ಚೆನ್ನಾಗಿರುತ್ತದೆ ಎಂದು ಈ ವಿಧಾನವನ್ನು ಅನುಸರಿಸುತ್ತಾರೆ. ಹಾಗೆಯೇ ಬಾಣಂತಿಗೆ ಸಮಯಕ್ಕೆ ಸರಿಯಾಗಿ ಊಟೋಪಚಾರಗಳನ್ನು ನೀಡುತ್ತಾರೆ.

ಕೊಬ್ಬರಿ ಹಂಚುವ ಕಾರ್ಯ : ಘಿಸಾಡಿ ಸಮುದಾಯದಲ್ಲಿ ಮಗು ಜನಿಸಿದ ಮೂರನೆಯ ದಿನಕ್ಕೆ ಮಾಡುವ ಈ ಶಾಸ್ತ್ರಕ್ಕೆ 'ಕೊಬ್ಬರಿ ಹಂಚುವ ಕಾರ್ಯ' ಅಥವಾ 'ವತ್ತ್ ಕಾರ್ಯಕ್ರಮ' ಎಂದು ಕರೆಯುತ್ತಾರೆ. ಈ ಶಾಸ್ತ್ರವನ್ನು ಸಮುದಾಯದ ಎಲ್ಲರೂ ಪಾಲಿಸಬೇಕೆಂಬ ನಿಯಮವಿದೆ. ಮಗು ಜನಿಸಿದ ಕುಟುಂಬದವರು ಮಾಡುವ ಈ ಮೂರನೆಯ ದಿನದ ಸಂತೋಷ ಸಮಾರಂಭದ ಸಮಯ, ದಿನಾಂಕ, ವಾರವನ್ನು ತಾವು ನೆಲೆಸಿರುವ ಸುತ್ತಮುತ್ತಲಿನ ಕುಲಸ್ಥರಿಗೆ ಮತ್ತು ಬಂಧುಬಳಗದವರಿಗೆ ಹಾಗೂ ಬಾಣಂತಿಯ ತವರು ಮನೆಯವರಿಗೆ ತಿಳಿಸುತ್ತಾರೆ. ಹೀಗೆ ಗೊತ್ತುಪಡಿಸಿದ ಮೂರನೆಯ ದಿನದ ಕಾರ್ಯಕ್ರಮಕ್ಕೆ ಅಂದು ಸಾಂಯಕಾಲ ನಾಲ್ಕು ಗಂಟೆಯ ಒಳಗಾಗಿ ಎಲ್ಲ ಬಂಧು-ಬಳಗದವರು ಬಂದು ಅವರ ಮನೆಗೆ ಸೇರುತ್ತಾರೆ. ಅವರ ಮನೆಯಲ್ಲಿ ಅಂದು ಸಾಮಾನ್ಯವಾಗಿ ದಿನವೂ ಮಾಡುವಂತಹ ರೊಟ್ಟಿ, ಬ್ಯಾಳಿ, ಅನ್ನ, ಸಾರು, ಕಾಯಿಪಲ್ಲೆಗಳನ್ನು ಮಾತ್ರ ಮಾಡುತ್ತಾರೆ. ಆದರೆ ಅಂದು ವಿಶೇಷವಾಗಿ ಇವರು ಅಜಿವಾನ ಮತ್ತು ಬೆಲ್ಲದ ಮಿಶ್ರಣದಿಂದ ಸಿಹಿ ಪದಾರ್ಥವನ್ನು ತಯಾರಿಸಿ ಮನೆಯಲ್ಲಿಟ್ಟುಕೊಂಡಿರುತ್ತಾರೆ, ಅಂದು ಮನೆಗೆ ಬಂದಿರುವ ಬಂಧು-ಬಳಗದವರಿಗೆ ಕೊಬ್ಬರಿ ಬಟ್ಟಲು ಹಂಚುವುದಕ್ಕಾಗಿ ಆ ಸಿಹಿ ಪದಾರ್ಥವನ್ನು ಒಂದು ಅಗಲವಾದ ತಟ್ಟೆಯಲ್ಲಿಡುತ್ತಾರೆ. ಇವರ ಮನೆಗೆ ಬಂದಂತಹ ಎಲ್ಲ ಬಂಧು-ಬಳಗದವರ ಊಟೋಪಚಾರ ಮುಗಿದ ಮೇಲೆ ರಾತ್ರಿ ಒಂಬತ್ತು ಗಂಟೆಯೊಳಗೆ ಅವರ ಮನೆಯ ಅಂಗಳದಲ್ಲಿ ಒಂದು ಜಮಖಾನೆಯನ್ನು ಹಾಸಿ ಆ ಜಮಖಾನೆಯ ಮೇಲೆ ಸಮುದಾಯದ ಎಲ್ಲ ವಿವಾಹಿತ ಹಿರಿಯ ಮತ್ತು ಕಿರಿಯ ಪುರುಷರು ಮಾತ್ರ ಗೋಲಾಕಾರದಲ್ಲಿ ಕುಳಿತುಕೊಳ್ಳುತ್ತಾರೆ. ಹಿರಿಯ ಮುತ್ತೈದೆಯರು ಕೂಡಾ ಅಲ್ಲಿಯೇ ಸ್ವಲ್ಪ ದೂರದಲ್ಲಿ ಕುಳಿತುಕೊಂಡಿರುತ್ತಾರೆ. ಜಮಖಾನೆಯ ಮೇಲೆ ಕುಳಿತುಕೊಂಡ ಎಲ್ಲರಿಗೂ ಮೊದಲು ಕುಂಕುಮದ ತಿಲಕವಿಟ್ಟು, ಅವರೆಲ್ಲರೂ ಸೇರಿ ತಮ್ಮ ಸಮುದಾಯದ ಜನರ ಯೋಗಕ್ಷೇಮ, ಸಂಪ್ರದಾಯಗಳು, ಇತಿ-ಮಿತಿಗಳು, ರೀತಿ-ನೀತಿಗಳ ಪರಿಪಾಲನೆ ಮತ್ತು ಉಲ್ಲಂಘನೆಗಳಂತಹ ವಿಷಯಗಳ ಬಗ್ಗೆ ಚರ್ಚೆ ಮಾಡುತ್ತಾರೆ. ನಂತರ ಬಂದಂತಹ ಎಲ್ಲ ವಿವಾಹಿತ ಪುರುಷರಿಗೆ ಹಾಗೂ ಮುತ್ತೈದೆಯರಿಗೆ ಪ್ರತಿಯೊಬ್ಬರಿಗೊಂದರಂತೆ ಸಿಹಿ ರಸದ ಪದಾರ್ಥ ಹಾಕಿದ ಕೊಬ್ಬರಿಗಳನ್ನು ನೀಡುತ್ತಾರೆ.

ಒಂದು ವೇಳೆ ಬಹಿಷ್ಕರಿಸಲ್ಪಟ್ಟಂತಹ ಅಥವಾ ಈ ಸಂದರ್ಭದಲ್ಲಿ ಯಾರ ಜೊತೆಗಾದರು ಹೊಸ ಅಪರಿಚಿತ ಬಂಧುಬಳಗದವರು ಬಂದಿದ್ದರೆ, ಆ ವ್ಯಕ್ತಿ ತಮ್ಮ ಸಮುದಾಯದ ರೀತಿ-

ನೀತಿಗಳಿಗೆ ಬದ್ಧನಾಗಿದ್ದಾನೋ ಇಲ್ಲವೋ ಅಥವಾ ಬಹಿಷ್ಕರಿಸಲ್ಪಟ್ಟಂತವನೋ ಎಂಬುದನ್ನು ಕರೆದುಕೊಂಡು ಬಂದಂತಹ ವ್ಯಕ್ತಿಯಿಂದ ಖಚಿತಪಡಿಸಿಕೊಳ್ಳುತ್ತಾರೆ. ಒಂದು ವೇಳೆ ಕರೆದುಕೊಂಡು ಬಂದ ವ್ಯಕ್ತಿ ಯಾವುದೇ ರೀತಿಯ ಪ್ರತಿಕ್ರಿಯೆ ನೀಡದೆ ಸುಮ್ಮನಿದ್ದರೆ ಬಂದಂತಹ ವ್ಯಕ್ತಿಗೆ ಕೊಬ್ಬರಿ, ಬೆಲ್ಲ ಕೊಡುವುದಿಲ್ಲ. ಈ ರೀತಿ ಬಂದಂತಹ ವ್ಯಕ್ತಿಯು ತಪ್ಪಿತಸ್ಥನಾಗಿದ್ದು ಕೊಬ್ಬರಿ ಬೆಲ್ಲ ತೆಗೆದುಕೊಂಡಿದ್ದರೆ, ಆ ಚಾಜ ಕೊಡಿಸಿದ ವ್ಯಕ್ತಿ ಮುಂದೆ ತನ್ನ ಚಾಜ ಕಳೆದುಕೊಂಡು ಸಮುದಾಯದಿಂದ ಬಹಿಷ್ಕೃತನಾಗಬೇಕಾಗುತ್ತದೆ. ಬಂದಂತಹ ಎಲ್ಲರಿಗೂ ಕೊಬ್ಬರಿ-ಬೆಲ್ಲ ಹಂಚಿದ ಮೇಲೆ ಊರಿನಿಂದ ಬಂದ ಕೆಲವರು ಕುಡಿಯಲು ಹೋಗುತ್ತಾರೆ. ಅದೇ ಊರಿನವರಾಗಿದ್ದರೆ ತಮ್ಮ ತಮ್ಮ ಮನೆಗಳಿಗೆ ಹೋಗುತ್ತಾರೆ.

ನಾಲ್ಕನೆ ದಿನದ ಮಾಂಸದೂಟದ ಕಾರ್ಯಕ್ರಮ : ಕೊಬ್ಬರಿ ಹಂಚುವ ಮೂರನೆಯ ದಿನದ ಕಾರ್ಯಕ್ರಮಕ್ಕೆ ಬಂದಂತಹ ಎಲ್ಲ ಬಂಧುಬಳಗದವರು ಮತ್ತು ಬಾಣಂತಿಯ ತವರು ಮನೆಯವರು ಸೇರಿ ಅವರವರ ಯೋಗ್ಯತೆಗೆ ಅನುಗುಣವಾಗಿ ಕನಿಷ್ಠ ಹತ್ತುರೂಪಾಯಿಗಳಿಂದ ನೂರು ರೂಪಾಯಿ ಗಳವರೆಗೆ ಅವರ ಕೈಲಾದಷ್ಟು ಹಣ ಸಂಗ್ರಹಿಸಿಕೊಳ್ಳುವರು. ಅನಂತರ ನಾಲ್ಕನೆಯ ದಿನದ ಮಾಂಸ ದೂಟದ ಕಾರ್ಯಕ್ರಮದ ಖರ್ಚುವೆಚ್ಚಗಳಿಗೆ ತಯಾರಿ ಮಾಡಿಕೊಳ್ಳುತ್ತಾರೆ. ಈ ದಿನದ ಖರ್ಚು ವೆಚ್ಚಗಳು ಮಗು ಜನಿಸಿದ ಕುಟುಂಬದವರು ಮಾಡಿಕೊಳ್ಳುವುದಿಲ್ಲ. ಆದರೆ ಹೆಚ್ಚಿನ ಖರ್ಚುಗಳೇನ್ನಾದರೂ ಬಂದರೆ, ಬಾಣಂತಿಯ ತವರು ಮನೆಯವರು ನಿಭಾಯಿಸಿಕೊಳ್ಳುತ್ತಾರೆ.

ಈ ನಾಲ್ಕನೆಯ ದಿನದ ಕಾರ್ಯಕ್ರಮಕ್ಕೆ ಹೆಚ್ಚಿನ ಜನರು ಬಂದಿದ್ದರೆ, ಒಂದು ಕುರಿಯನ್ನು ಖರೀದಿಸಿ ತಂದು ಮಾಂಸದ ಅಡುಗೆ ಮಾಡಿ ಊಟ ಮಾಡುತ್ತಾರೆ. ಕಡಿಮೆ ಜನರು ಇದ್ದರೆ ಮಾಂಸವನ್ನು ಅಂಗಡಿಯಿಂದ ತಂದು ಮಾಂಸದ ಊಟವನ್ನು ಮಾಡುತ್ತಾರೆ. ಈ ಕಾರ್ಯಕ್ರಮದ ದಿನ ಎಲ್ಲರೂ ಸೇರಿ ಸಂತೋಷದಿಂದ ಪರಸ್ಪರ ಹರಟೆ, ಹಾಸ್ಯ, ಪಂದ್ಯಗಳಂತಹ ಕ್ರಿಯೆಗಳಲ್ಲಿ ತೊಡಗಿರುತ್ತಾರೆ. ಅಂದು ರಾತ್ರಿ ಕುಡಿಯುವವರಿದ್ದರೆ ಕುಡಿಯಲು ಹೋಗುತ್ತಾರೆ. ಆದರೆ ಇತ್ತೀಚಿನ ದಿನಗಳಲ್ಲಿ ಕೆಲವು ಯುವಕರು ಮತ್ತು ಹಿರಿಯರು ಕುಡಿಯುವುದನ್ನು ನಿರ್ಬಂಧಿಸಿದ್ದಾರೆ. ಒಟ್ಟಿನಲ್ಲಿ ಮಗು ಜನಿಸಿರುವುದಕ್ಕೆ ಇಡೀ ಸಮುದಾಯದ ಬಂಧು-ಬಳಗದವರು ಸಂತೋಷಪಡುತ್ತಾರೆ.

ಐದೇಶಿ ಅಥವಾ ಶೆಟವಾಹಿ ಪೂಜೆ : ಫಿಸಾಡಿ ಸಮುದಾಯದಲ್ಲಿ ಮಗು ಜನಿಸಿದ ಐದನೆಯ ದಿನಕ್ಕೆ ಪ್ರತಿಯೊಬ್ಬರು ಶೆಟವಾಹಿ ಪೂಜೆ ಮಾಡುವ ಸಂಪ್ರದಾಯವು ರೂಢಿಯಲ್ಲಿದೆ. ಈ ಪೂಜೆಗೆ ಇವರು 'ಪಾಚವಿ' ಅಥವಾ 'ಶೆಟವಾಹಿಶಾಸ್ತ್ರ' ಎಂದು ಕರೆಯುತ್ತಾರೆ. ಮಗು ಜನಿಸಿದ ಮೂರನೆಯ ದಿನ ಕೊಬ್ಬರಿ ಹಂಚುವ ಕಾರ್ಯಕ್ರಮ, ನಾಲ್ಕನೆಯ ದಿನ ಬಂಧುಗಳಿಗೆ ಮಾಂಸದೂಟವನ್ನು, ಐದನೆ ದಿನ ಶೆಟವಾಹಿ ಪೂಜೆ ಸಲ್ಲಿಸಿ ಬೇಟೆ ಮಾಡುವ ಸಂಪ್ರದಾಯ ರೂಢಿಯಲ್ಲಿದ್ದು, ಈ ಶೆಟವಾಹಿ ಪೂಜೆಯು ಮಗು ಜನಿಸಿದ ಕುಟುಂಬಕ್ಕೆ ಸಂಬಂಧಿಸಿದ್ದಾಗಿದೆ. ಆ ದಿನ ಮಾಡುವ

ಖರ್ಚುವೆಚ್ಚಗಳೆಲ್ಲವು ಅವರಿಗೆ ಸೇರಿದ್ದಾಗಿದೆ. ಅಂದು ಬಾಣಂತಿಯ ಮನೆಯಲ್ಲಿ ಅನುಕೂಲವಾಗುವ ಒಂದು ಕಡೆ ಶೆಟವಾಹಿ ಪೂಜೆಗೆ ಸ್ಥಳ ಗೊತ್ತುಪಡಿಸಿಕೊಂಡು, ಆ ಸ್ಥಳವನ್ನು ಸಗಣಿಯಿಂದ ಸಾರಿಸಿ ಸ್ವಚ್ಛಗೊಳಿಸುತ್ತಾರೆ. ನಂತರ ಸ್ವಚ್ಛಗೊಳಿಸಿದ ಸ್ಥಳದಲ್ಲಿ ಅರಿಶಿಣದಲ್ಲಿ ತೋಯಿಸಿದ ಬಿಳಿಯ ಕುಪ್ಪಸವನ್ನು ಹಾಸಲಾಗುತ್ತದೆ. ಈ ಹಾಸಿದ ಕುಪ್ಪಸದ ಕಣದ ಮೆಲೆ ಸ್ವಲ್ಪ ಮಣ್ಣು ತಂದು ಅದರ ಮೇಲೆ ಕುಪ್ಪೆ ಹಾಕುತ್ತಾರೆ. ಆ ಮಣ್ಣು ಕುಪ್ಪೆಯ ಮೇಲೆ ನೀರು ತುಂಬಿದ ತಂಬಿಗೆ ಅಥವಾ ಸಣ್ಣ ಬಿಂದಿಗೆಯನ್ನಿಟ್ಟು ಆ ತಂಬಿಗೆಯು ಕುತ್ತಿಗೆಗೆ ಅಕ್ಕಸಾಲಿಗರ ಮನೆಯಿಂದ ಮಾಡಿಸಿಕೊಂಡು ಬಂದ ಶೆಟಿಗ್ಯಮ್ಮನ ಪದಕವನ್ನು ಕಟ್ಟುತ್ತಾರೆ. ಆ ತಂಬಿಗೆಯ ಮುಂದೆ ಐದು ಚಿಕ್ಕ-ಚಿಕ್ಕ ಕಲ್ಲುಗಳನ್ನಿಟ್ಟು ತಂಬಿಗೆಗೆ ದಂಡಿಯನ್ನು ಕಟ್ಟಿ, ಆ ತಂಬಿಗೆಗೆ ಮತ್ತು ಕಲ್ಲುಗಳಿಗೆ ವಿಭೂತಿ, ಕುಂಕುಮ, ಎಲೆ-ಅಡಿಕೆ, ಹೂವು, ಅರಿಶಿಣಗಳಿಂದ ಪೂಜೆ ಸಲ್ಲಿಸುತ್ತಾರೆ. 'ಶೆಟಿಗ್ಯಾಮ್ಮ' ತಾಯಿ ಎದುರಿನಲ್ಲಿ ಬ್ಯಾಟಿ ಮಾಡುವ ಸಂಪ್ರದಾಯ ಅನುಸರಿಸುವಂತಾಗಿದೆ. ಆ ಬ್ಯಾಟಿ ಸಂದರ್ಭದಲ್ಲಿ ಕುರಿಯ ರುಂಡವನ್ನು ಮುಂಡದಿಂದ ಬೇರ್ಪಡಿಸುತ್ತಾರೆ. ರುಂಡವನ್ನು ಬೇರ್ಪಡಿಸಿದ ನಂತರ ಕುರಿಯ ಒಂದು ಬಲಗಾಲನ್ನು ಕತ್ತರಿಸಿ ಅದರ ಬಾಯಿಯಲ್ಲಿ ಇಡುತ್ತಾರೆ. ಕುರಿಯ ಬಾಯಿಯಲ್ಲಿ ಕಾಲನ್ನು ಇರಿಸಿದ ನಂತರ ಅದನ್ನು ತಂದು ಶೆಟಿಗಮ್ಮ ತಾಯಿ ಎದುರಿನಲ್ಲಿಡುತ್ತಾರೆ. ಈ ಎದುರಿನಲ್ಲಿಟ್ಟಿರುವ ಕುರಿಯ ತಲೆಯ ಮೇಲೆ ಕೊಬ್ಬರಿಯ ಇಲ್ಲವೇ ಕಣಕದ ದೀಪ ಬೆಳಗಿಸುತ್ತಾರೆ.

ಆ ತಂಬಿಗೆಯ ಎದುರಿನಲ್ಲಿಟ್ಟಿರುವ ಐದು ಚಿಕ್ಕ ಕಲ್ಲುಗಳ ಮುಂದೆ ಐದು ನೈವೇದ್ಯಗಳನ್ನು ಮಾಡಿ ಎಡೆ ಇಡುತ್ತಾರೆ. ಕೊನೆಯಲ್ಲಿ ಶೆಟವಾಹಿ ದೇವಿಯ ಎಲ್ಲ ಪೂಜೆ ಪುನಸ್ಕಾರಗಳು ಮುಗಿದ ಮೇಲೆ ತಾಯಿ ತನ್ನ ಮಗುವಿನೊಂದಿಗೆ ಆ ಶೆಟವಾಹಿ ಸುತ್ತಲು ಐದು ಪ್ರದಕ್ಷಿಣೆ ಹಾಕುವಳು. ಶೆಟಗೆಮ್ಮ ತಾಯಿಯಲ್ಲಿ "ಮಗುವಿನ ಆಯುರಾರೋಗ್ಯ ಭಾಗ್ಯ ಹಾಗೂ ಕಷ್ಟ-ನಷ್ಟಗಳನ್ನು ಸುಳಿಯದಂತೆ ಕಾಪಾಡು ಮಹಾತಾಯಿ" ಎಂದು ಪ್ರಾರ್ಥಿಸಿ ನಮಸ್ಕರಿಸುತ್ತಾಳೆ. ಆಮೇಲೆ ಈ ಶಾಸ್ತ್ರವು ಮುಕ್ತಾಯಗೊಳ್ಳುತ್ತದೆ. ನಂತರ ಬಂದಂತಹ ಎಲ್ಲ ಬಂಧು-ಬಳಗದವರು ಊಟ ಮಾಡುತ್ತಾರೆ.

ಅಂದು ಸಾಯಂಕಾಲ ಸೂಲಗಿತ್ತಿಗೆ ಸೀರೆ-ಕುಪ್ಪಸ, ಹೊಸ ಬಳೆಗಳನ್ನು ತೊಡಿಸಿ, ಉಡಿ ತುಂಬಿ ಕೈಲಾದಷ್ಟು ಹಣ ಮತ್ತು ದವಸಧಾನ್ಯಗಳನ್ನು ಕೊಟ್ಟು ಗೌರವಿಸಲಾಗುತ್ತದೆ. ಬಾಣಂತಿಯ ತವರು ಮನೆಯವರು ಮಗುವಿಗೆ, ತಂದೆ-ತಾಯಿಗಳಿಗೆ ಹೊಸ ಬಟ್ಟೆಗಳನ್ನು ತಂದಿದ್ದರೆ ಉಡುಗೊರೆ ಯಾಗಿ ನೀಡುತ್ತಾರೆ. ಒಂದು ವೇಳೆ ಮಗು ಜನಿಸಿದ ಏಳನೆಯ ದಿನಕ್ಕೆ ತೊಟ್ಟಿಲು ಕಾರ್ಯಕ್ರಮ ವನ್ನಿಟ್ಟುಕೊಂಡಿದ್ದರೆ ಅಂದೇ ಈ ಬಟ್ಟೆಗಳನ್ನು ನೀಡುತ್ತಾರೆ.

ಐದೇಶೀ ಮುಗಿದ ಮರುದಿನ ಅಂದರೆ ಆರನೆಯ ದಿನದಂದು ಶೆಟಗಮ್ಮ ತಾಯಿಯ ಪೂಜೆ

ಇಳಿಸುತ್ತಾರೆ. ಅಂದು ಮುಂಜಾನೆ ದೇವಿಗೆ ಕಾಯಿ ಕರ್ಪೂರ ಮಂಗಳಾರತಿಯನ್ನು ಮಾಡಿ ಪೂಜೆ ಇಳಿಸುತ್ತಾರೆ. ಪೂಜೆ ಇಳಿಸಿದ ಮೇಲೆ ಆ ದೇವಿಯ ಎದುರಿಗೆ ಇಟ್ಟಿರುವ ಕುರಿಯ ತಲೆಯಲ್ಲಿ ಮೆದುಳಿನ ಮಾಂಸವನ್ನು ಅಂದು ಮಾಡುವ ಅಡುಗೆಯಲ್ಲಿ ಬಳಸಿ ಊಟವನ್ನು ಮಾಡುತ್ತಾರೆ. ಉಳಿದ ಪೂಜೆಯ ಸಾಮಗ್ರಿಗಳನ್ನು ಆ ಅರಿಶಿಣದಲ್ಲಿ ತೋಯಿಸಿದ ಕುಪ್ಪಸದಲ್ಲಿ ಕಟ್ಟಿ ಮನೆಯಲ್ಲಿಡುತ್ತಾರೆ. ಮತ್ತೆ ಅದನ್ನು ತೊಟ್ಟಿಲ್ಲಿನಲ್ಲಿ ಹಾಕುವ ಕಾರ್ಯಕ್ರಮದಂದು ತೆಗೆಯುತ್ತಾರೆ.

೩. ಪಾಳ್‌ನ್ಹೋ ಶಾಸ್ತ್ರ (ನಾಮಕರಣ)

ಮಗುವನ್ನು ತೊಟ್ಟಿಲಿನಲ್ಲಿ ಹಾಕಿ ಹೆಸರಿಡುವುದಕ್ಕೆ ಇವರು "ಪಾಳ್‌ನ್ಹೋಶಾಸ್ತ್ರ" ಎಂದು ಕರೆಯುತ್ತಾರೆ. ಇವರ ಸಮುದಾಯದಲ್ಲಿ ಪ್ರತಿಯೊಬ್ಬರು ಮಗು ಜನಿಸಿದ ಏಳನೆಯ ದಿನಕ್ಕೆ ಮಗುವನ್ನು ತೊಟ್ಟಿಲಿಗೆ ಹಾಕಿ ಹೆಸರಿಡುವ ಕಾರ್ಯಕ್ರಮ ನೆರವೇರಿಸುತ್ತಾರೆ. ಆದರೆ ಇತ್ತೀಚಿನ ದಿನಗಳಲ್ಲಿ ಅವರವರ ಅನುಕೂಲತೆಗಳಿಗೆ ತಕ್ಕಂತೆ ಮಗುವನ್ನು ತೊಟ್ಟಿಲಿಗೆ ಹಾಕಿ ಹೆಸರಿಡುವ ಪದ್ಧತಿ ಅನುಸರಿಸುತ್ತಿದ್ದಾರೆ. ಮಗು ಜನಿಸಿದ ಒಂದರಿಂದ, ಒಂದೂವರೆ ತಿಂಗಳುಗಳೊಳಗಾಗಿ ತೊಟ್ಟಿಲ್ಲಿಗೆ ಹಾಕುವುದನ್ನು ಬಿಡುವುದಿಲ್ಲ. ೭ನೆಯ ದಿನಕ್ಕೆ ತೊಟ್ಟಿಲು ಕಾರ್ಯಕ್ರಮ ಇಟ್ಟುಕೊಂಡಿದ್ದರೆ ಮನೆ ಇನ್ನೂ ಮೈಲಿಗೆ ಇರುವುದರಿಂದ, ಅನ್ಯಜಾತಿ ಸಮುದಾಯದವರು ಈ ಕಾರ್ಯಕ್ರಮಕ್ಕೆ ಬರಲು ಅನುಮಾನ ಪಡುತ್ತಾರೆ. ಆದುದ್ದರಿಂದ ಇತ್ತೀಚಿನ ದಿನಗಳಲ್ಲಿ ನೆರೆಹೊರೆಯವರಿಗೆ ಹೇಳುವುದರಿಂದ ತೊಟ್ಟಿಲು ಕಾರ್ಯಕ್ರಮ ನೆರವೇರಿಸುವ ದಿನಗಳಲ್ಲಿ ಹೆಚ್ಚು ಕಡಿಮೆಯಾಗಿದೆ.

ಘಿಸಾಡಿ ಸಮುದಾಯದವರು ಸಾಮಾನ್ಯವಾಗಿ ಅಲೆಮಾರಿಗಳಾಗಿರುವುದರಿಂದ ಜೋಳಿಗೆ ತೊಟ್ಟಿಲುಗಳಲ್ಲಿಯೇ ಕಾರ್ಯಕ್ರಮ ನೆರವೇರಿಸುತ್ತಿದ್ದು. ಇತ್ತೀಚಿನ ದಿನಗಳಲ್ಲಿ ಇವರಲ್ಲಿಯೂ ಕೂಡ ಇಂದು ಬದಲಾವಣೆಯಾಗಿ ಸ್ವಂತ ಮನೆಯನ್ನು ಹೊಂದಿದವರು ಅಥವಾ ಬಹುದಿನಗಳಿಂದ ಒಂದೇ ಊರಿನಲ್ಲಿ ವಾಸಿಸುವಂತಹವರು ಕಟ್ಟಿಗೆ ಅಥವಾ ಕಬ್ಬಿಣದ ತೊಟ್ಟಿಲಿನಲ್ಲಿ 'ನಾಮಕರಣ' ಮಾಡುತ್ತಿದ್ದಾರೆ. ಈಗ ಇವರು ಮಗುವನ್ನು ತೊಟ್ಟಿಲಿನಲ್ಲಿ ಹಾಕುವ ನಿಗದಿತ ದಿನವನ್ನು ಬ್ರಾಹ್ಮಣ ಪುರೋಹಿತನಲ್ಲಿಗೆ ಹೋಗಿ ಪಂಚಾಂಗದ ಮೂಲಕ ಒಳ್ಳೆಯ ದಿನವನ್ನು ಗೊತ್ತುಪಡಿಸಿಕೊಳ್ಳುವರು. ಆ ದಿನ ತಮ್ಮ ಮನೆಯನ್ನು ಸಾರಿಸಿ, ಮನೆಯಲ್ಲಿನ ಎಲ್ಲ ಬಟ್ಟೆಬರೆಗಳನ್ನು ತೊಳೆದು ಸ್ವಚ್ಛಗೊಳಿಸಿಕೊಂಡು, ಅಂಗಳದಲ್ಲಿ ರಂಗೋಲಿ ಹಾಕುವರು. ತಮ್ಮ ಮನೆಯ ಇಲ್ಲವೇ ಗುಡಾರಗಳಿಗೆ ತೋರಣಗಳನ್ನು ಕಟ್ಟಿ, ತೊಟ್ಟಿಲನ್ನು ಹೂವುಗಳಿಂದ ಅಲಂಕರಿಸುತ್ತಾರೆ. ಅಂದವಾಗಿ ಸಿಂಗರಿಸ್ಪಲ್ಪಟ್ಟಂತಹ ತೊಟ್ಟಿಲಿನ ಕೆಳಗೆ ಸ್ವಲ್ಪ ಅಕ್ಕಿಯ ಕುಪ್ಪೆಯನ್ನು ಹಾಕಿ ಆ ಕುಪ್ಪೆಯ ಮೇಲೆ ತುಂಬಿದ ನೀರಿನ ಒಂದು ತಂಬಿಗೆಯನ್ನು ಇಡುತ್ತಾರೆ. ಆ ತಂಬಿಗೆಗೆ ಹೂವು ವೀಳ್ಯದೆಲೆ, ದಂಡೆಗಳಿಂದ ಸಿಂಗರಿಸಿ ತಂಬಿಗೆಗೆ ಹೊಂದಿಕೊಳ್ಳುವಂತಹ ಒಂದು ಹೊಸ ಕೆಂಪು ಇಲ್ಲವೇ ಹಸಿರು ಕುಪ್ಪಸದ ಕಣವನ್ನು ಏರಿಸಲಾಗುತ್ತದೆ. ಈ ಸಂದರ್ಭದಲ್ಲಿ ಮಗುವಿನ ತಾಯಿಯು ಹಸಿರು ಬಳೆ,

ಹೊಸ ಸೀರೆ, ದಂಡೆಯನ್ನು ಕಟ್ಟಿಕೊಂಡು ತನ್ನ ಮಗುವಿನೊಂದಿಗೆ ತೊಟ್ಟಿಲಿನ ಪಕ್ಕದಲ್ಲಿಯೇ ಕುಳಿತು ಕೊಂಡಿರುತ್ತಾಳೆ.

ಮೊದಲು ತೊಟ್ಟಿಲಿನ ಕೆಳಗಿರುವ ತಂಬಿಗೆಗೆ ಮತ್ತು ತೊಟ್ಟಿಲಿಗೆ ವಿಭೂತಿ, ಕುಂಕುಮ, ಅರಿಶಿಣ, ಗಂಧ, ದೀಪಗಳನ್ನು ಹಚ್ಚುವ ಮೂಲಕ ಪೂಜೆಯನ್ನು ಮಾಡಲಾಗುತ್ತದೆ. ಹೂವು, ಉದ್ದಿನಕಡ್ಡಿ ಕಾಯಿ, ಕರ್ಪೂರದಿಂದ ಮಂಗಳಾರತಿಯೊಂದಿಗೆ ಪೂಜೆ ಸಲ್ಲಿಸಿ ಮಾಡಿದ ನೈವೇದ್ಯವನ್ನು ತೊಟ್ಟಿಲಿನ ಕೆಳಗೆ ಇಡುವರು. ನಂತರ ಮಗುವಿನ ಸೋದರತ್ತೆ ತಾಯಿಯ ತೊಡೆಯಲ್ಲಿರುವ ಮಗುವನ್ನು ತೆಗೆದುಕೊಂಡು, ಐದು ಜನ ಮುತ್ತೈದೆಯರ ಕೈಯಲ್ಲಿ ತೊಟ್ಟಿಲಿನ ಮೇಲಿನಿಂದ ಕೆಳಕ್ಕೆ ಕೆಳಗಿನಿಂದ ಮೇಲೆ ಕೊಡುತ್ತಾರೆ. ಆಗ ಆ ಐದು ಜನ ಮುತ್ತೈದೆಯರು ತಾಯಿಗೆ ಕಳಸ ಬೆಳಗಿ ಕುಂಕುಮ ಹಚ್ಚಿ ಕಡಲೆ ಗುಗ್ರಿಗಳನ್ನು ಆಕೆಯ ತಲೆ, ಎರಡು ಭುಜ, ತೊಡೆಗಳ ಮೇಲೆ ಇಳಿಸಿ ಬಿಡುತ್ತಾರೆ.

ಆಗ ಸೋದರತ್ತೆಯಾದವಳು ಮಗುವನ್ನು ತೊಟ್ಟಿಲಿನಲ್ಲಿ ಹಾಕಿ ತೊಟ್ಟಿಲಿನ ಸುತ್ತಲೂ ತಿರುಗುತ್ತಾ ಮೊದಲನೆಯ ಸುತ್ತಿನಲ್ಲಿ ಹೆಣ್ಣಾಗಿದ್ದರೆ, ಹೆಣ್ಣು ದೇವತೆಗಳ ಹೆಸರು, ಗಂಡಾಗಿದ್ದರೆ ಗಂಡು ದೇವರ ಹೆಸರು ಹೇಳುತ್ತಾಳೆ. ಎರಡನೆಯ ಸುತ್ತಿನಲ್ಲಿ ತಮ್ಮ ಹಿರಿಯರ ಹೆಸರುಗಳನ್ನು ಹೇಳುತ್ತಾಳೆ. ಕೊನೆಯ ಸುತ್ತಿನಲ್ಲಿ ಮಗುವಿನ ಕುಟುಂಬದವರು ನಿರ್ಧರಿಸಿದ ಹೆಸರು ಹೇಳಿ, ಮಗುವಿಗೆ ಹೆಸರಿಡುವ ಕಾರ್ಯ ಮುಗಿಸುತ್ತಾಳೆ. ಹೀಗೆ ಸೋದರತ್ತೆ ಮಗುವಿಗೆ ಹೆಸರಿಡುವಾಗ ಆಕೆಯ ಬೆನ್ನಿಗೆ ಬಾರಿಸುತ್ತಾರೆ. ಆಗ ಎಲ್ಲರೂ ನಕ್ಕು ನಲಿದು ಸಂತೋಷದಲ್ಲಿ ಮುಳುಗುತ್ತಾರೆ. ನಂತರ ಜೋಗುಳಪದ ಮುಗಿದ ಮೇಲೆ, ಮಂಗಳಾರತಿ ಪದ ಹಾಡಿ ಕೊನೆಯಲ್ಲಿ ತಾಯಿಯ ತಲೆಯ ಮೇಲೆ ತೊಟ್ಟಿಲಿನ ಕೆಳಗಿರುವ ತುಂಬಿದ ತಂಬಿಗೆಯನ್ನಿಟ್ಟು ಅಂಗಳಕ್ಕೆ ಕರೆತರುತ್ತಾರೆ. ಆಗ ಆ ಅಂಗಳದಲ್ಲಿ ಮೊದಲೇ ಒಂದು ಆಲದ ಕೊಂಬೆತಂದು ಇಟ್ಟಿರುತ್ತಾರೆ. ಈ ಕೊಂಬೆಯ ಎದುರಿನಲ್ಲಿ ಆಕೆಯ ತಲೆಯ ಮೇಲಿರುವ ತಂಬಿಗೆಯನ್ನು ಇಳಿಸಿ, ಶೆಟವಾಹಿ ಪೂಜೆಯ ದಿನ ಪೂಜೆ ಮಾಡಿದ ಕುಪ್ಪಸದ ಕಣ ಇನ್ನಿತರ ವಸ್ತುಗಳನ್ನು ಕಟ್ಟಿ ಮನೆಯಲ್ಲಿ ಇಟ್ಟಿರುತ್ತಾರೆ. ಅವುಗಳನ್ನು ತಂದು ಆ ಆಲದ ಗಿಡದ ಕೊಂಬೆಯ ಮತ್ತು ಅಲ್ಲಿ ಇಟ್ಟಿರುವ ತಂಬಿಗೆಗೆ ಪೂಜೆ ಸಲ್ಲಿಸಿ ದೀಪ ಬೆಳಗಿಸುತ್ತಾರೆ. ಸಾಯಂಕಾಲ ಪೂಜೆ ಇಳಿಸಿದ ಮೇಲೆ ಅವೆಲ್ಲವನ್ನು ಕಟ್ಟಿ ಮರುದಿನ ಮುಂಜಾನೆ ಹರಿಯುವ ನೀರಿನಲ್ಲಿ ಬಿಡುತ್ತಾರೆ.

ಅಂಗಳದಲ್ಲಿ ಪೂಜೆ ಮುಗಿದ ಮೇಲೆ ತಾಯಿ ಮಗುವಿನೊಂದಿಗೆ ಮನೆಯ ದೇವರಿಗೆ ನಮಸ್ಕರಿಸುತ್ತಾಳೆ. ಆಗ ಆಕೆಯ ತವರು ಮನೆಯವರು ತಂದೆ-ತಾಯಿ ಮತ್ತು ಮಗುವಿಗೆ ಹೊಸ ಬಟ್ಟೆಗಳನ್ನು ಉಡುಗೊರೆಯಾಗಿ ನೀಡುತ್ತಾರೆ. ಇವರು ಬಟ್ಟೆ ಬರೆಗಳು ಮಾಡುವುದು ಮುಗಿದ ಮೇಲೆ ಉಳಿದ ಬಂಧುಬಳಗದವರು ಬಟ್ಟೆಗಳನ್ನು ಉಡುಗೊರೆಯಾಗಿ ಕೊಡುತ್ತಾರೆ. ಅಂದು

ಮನೆಯಲ್ಲಿ ಸಿಹಿ ಅಡುಗೆಯ ಊಟೋಪಚಾರ ಮಾಡಿಸಿರುತ್ತಾರೆ. ಸಿಹಿ ಅಡುಗೆಯ ಉಟೋಪಚಾರ ಮುಗಿದ ಮೇಲೆ ಬಂಧುಬಳಗದವರು ತಮ್ಮ ಮನೆ, ಊರುಗಳಿಗೆ ಹೋಗುತ್ತಾರೆ.

೪. ಜಾವೋಳ್ (ಜವಳ)

ಘಿಸಾಡಿ ಸಮುದಾಯದವರು ಹುಟ್ಟಿದ ಮಗು ಹೆಣ್ಣಾಗಲಿ, ಗಂಡಾಗಲಿ ಹುಟ್ಟಿದ ಪ್ರತಿಯೊಂದು ಮಕ್ಕಳಿಗೂ ಮೊದಲನೆಯ ಸಲ ಕೂದಲು ಕತ್ತರಿಸುವ ಜವಳ ಪದ್ಧತಿಯನ್ನು ಅನುಸರಿಸುವ ಸಂಪ್ರದಾಯ ರೂಢಿಯಲ್ಲಿದೆ.

ಇವರು ಸಾಮಾನ್ಯವಾಗಿ ಯಾವ ದೇವರಿಗೂ ಹರಕೆ ಹೊತ್ತುಕೊಳ್ಳದಿದ್ದರೆ ಸೋದರ ಮಾವನಿಗೆ ಒಂದು ಒಳ್ಳೆಯ ದಿನ ನೋಡಿ ಕರೆಸಿ ಆತನ ಮೂಲಕ ಜವಳ ತೆಗೆಸುತ್ತಾರೆ. ಒಂದು ವೇಳೆ ಇವರು ತಾವು ನಂಬಿರುವ ದೇವರಲ್ಲಿಗೆ ಬಂದು ಜವಳ ತೆಗೆಸುತ್ತೇವೆ ಎಂದು ಹರಕೆ ಹೊತ್ತುಕೊಂಡಿದ್ದರೆ, ಅಲ್ಲಿಗೆ ಹೋಗಿ ಅಲ್ಲಿರುವ ಪೂಜಾರಿಗಳ ಇಲ್ಲವೇ ಪುರೋಹಿತರ ಮೂಲಕ ಜವಳ ತೆಗೆಸುತ್ತಾರೆ. ಇವರು ಸಾಮಾನ್ಯವಾಗಿ ತಾವು ನಂಬಿರುವ ದೇವರಲ್ಲಿ ಬ್ಯಾಟಿ ಮಾಡುತ್ತೇವೆ ಎಂದು ಹರಕೆ ಹೊತ್ತುಕೊಳ್ಳುವ ಸಂಪ್ರದಾಯ ರೂಢಿಯಲ್ಲಿದೆ. ಆದರೆ, ನೂರರಲ್ಲಿ ಒಬ್ಬರು ಬರೀ ಜವಳ ತೆಗೆಸಿಕೊಂಡು ಹೋಗುವ ಹರಕೆ ಹೊತ್ತುಕೊಂಡಿರುತ್ತಾರೆ.

ಇವರು ಹರಕೆ ಹೊತ್ತುಕೊಂಡ ಗುಡಿ ಗುಂಡಾರಗಳಲ್ಲಿರುವ ಪುರೋಹಿತರ ಇಲ್ಲವೇ ಪೂಜಾರಿಗಳ ಮೂಲಕ ಮೊದಲನೆಯ ಸಲ ಜವಳ ತೆಗೆಸಿದರೂ ಔಪಚಾರಿಕವಾಗಿ ಮನೆಯಲ್ಲಿ ಮತ್ತೊಂದು ಸಲ ಸೋದರ ಮಾವನ ಮೂಲಕ ಕೂದಲು ಕತ್ತರಿಸಿ ಜವಳ ತೆಗೆಯುವ ಸಂಪ್ರದಾಯ ಅನುಸರಿಸುತ್ತಾರೆ. ಇದಾದ ನಂತರ ಕ್ಷೌರಿಕನಿಗೆ ಹಣವನ್ನು ನೀಡಿ ಕೂದಲು ಕತ್ತರಿಸಲು ಹೇಳುತ್ತಾರೆ.

ಸೋದರ ಮಾವ ಮಗುವಿಗೆ ಜವಳ ತೆಗೆಯುವಾಗ ಅನುಸರಿಸುವ ವಿಧಿ ವಿಧಾನಗಳೆಂದರೆ, ಮೊದಲು ತಮ್ಮ ಮನೆ ಅಥವಾ ಗುಡಾರದಲ್ಲಿ ಜವಳ ತೆಗೆಯುವ ಸ್ಥಳ ಮತ್ತು ದಿಕ್ಕನ್ನು ಆಯ್ಕೆ ಮಾಡಿಕೊಂಡು ಆ ಸ್ಥಳದಲ್ಲಿ ಒಂದು ಚಾಪೆಯನ್ನು ಹಾಸುತ್ತಾರೆ. ಚಾಪೆಯ ಮೇಲೆ ಸೋದರ ಮಾವನ ಎದುರಿನಲ್ಲಿ ಜವಳ ತೆಗೆಸಿಕೊಳ್ಳುವ ಮಗುವನ್ನು ಕೂಡಿಸುತ್ತಾರೆ. ಜೊತೆಯಲ್ಲಿ ತಾಯಿ ಕೂಡಾ ಕುಳಿತುಕೊಂಡಿರುತ್ತಾಳೆ. ಆಗ ಮನೆಯಲ್ಲಿನ ಯಾರಾದರೊಬ್ಬರು ಒಂದು ಅಗಲವಾದ ತಟ್ಟೆಯಲ್ಲಿ ಸ್ವಲ್ಪ ಅಕ್ಕಿ, ಕತ್ತರಿ ಒಂದು ಕೊಬ್ಬರಿ, ಒಂದು ಬೆಳ್ಳುಳಿ ಗಡ್ಡೆ, ಅಡಿಕೆ, ಉತ್ತತ್ತಿ, ವೀಳ್ಯದೆಲೆಗಳನ್ನು ತಂದು ಇಡುತ್ತಾರೆ. ಆಗ ಸೋದರ ಮಾವನು ಮೊದಲು ಕತ್ತರಿಗೆ ವಿಭೂತಿ, ಕುಂಕುಮ, ಗಂಧಗಳಿಂದ ಪೂಜಿಸಿ ಹೂವು ಹಾಕಿ, ನಂತರ ಮನೆಯಲ್ಲಿನ ದೇವರಿಗೆ ಕಾಯಿ, ಕರ್ಪೂರದ ಮಂಗಳಾರತಿಯನ್ನು ಮಾಡಿ ಕತ್ತರಿಗೆ ಮತ್ತು ಮನೆಯಲ್ಲಿನ ದೇವರಿಗೆ ನೈವೇದ್ಯವನ್ನು ಸಮರ್ಪಿಸುವರು. ಆಮೇಲೆ ಮಗುವಿನ ಹಣೆಗೆ ಒಂದು ಉದ್ದನೆಯ ತಿಲಕವಿಟ್ಟು ವೀಳ್ಯದೆಲೆಯೊಂದಿಗೆ ಕೂದಲನ್ನು ಜೋಡಿಸಿ ಹಿಡಿದು ಮಗುವಿನ ತಲೆಯ ಬಲ ಭಾಗದಲ್ಲಿ ಎರಡು ಕಡೆ, ಎಡಭಾಗದಲ್ಲಿ

ಎರಡು ಕಡೆ ಹಿಂಭಾಗದಲ್ಲಿ ಒಂದು ಕಡೆ ಕೂದಲುಗಳನ್ನು ಕತ್ತರಿಸಿ ತಾಯಿಯ ಉಡಿಯಲ್ಲಿ ಇಡುತ್ತಾನೆ.

ನಂತರ ತಾಯಿ ತನ್ನ ಮಗುವಿನೊಂದಿಗೆ ಮನೆಯ ದೇವರಿಗೆ ನಮಸ್ಕರಿಸಿ, ತನ್ನ ಉಡಿಯಲ್ಲಿರುವ ಕೂದಲುಗಳನ್ನು ಒಂದು ಬಿಳಿ ಬಟ್ಟೆಯಲ್ಲಿ ಕಟ್ಟಿಟ್ಟು ಅನುಕೂಲವಾಗುವ ಒಂದು ದಿನ ನದಿಗೆ ಬಿಟ್ಟು ಬರುತ್ತಾರೆ. ಇದಾದ ಮೇಲೆ ಮನೆಯಲ್ಲಿ ಮಾಡಿದ ಸಿಹಿ ಅಡುಗೆಯನ್ನು ಸೋದರ ಮಾವನಿಗೆ ಊಟ ಮಾಡಿಸುತ್ತಾರೆ. ಸೋದರ ಮಾವನ ಊಟ ಮುಗಿದ ಮೇಲೆ ಅನುಕೂಲವಿದ್ದವರು ಸೋದರ ಮಾವನಿಗೆ ಬಟ್ಟೆ ಕಾಣಿಕೆ ನೀಡುತ್ತಾರೆ. ಅನನುಕೂಲವಿದ್ದವರು ಕನಿಷ್ಠ ಒಂದು ಟವೇಲ್, ಟೊಪ್ಪಿಗೆಯನ್ನಾದರೂ ನೀಡುತ್ತಾರೆ. ಆದರೆ ದೇವರಲ್ಲಿ ಹರಕೆ ಹೊತ್ತುಕೊಂಡು ಜವಳ ತೆಗೆಸುವವರಿದ್ದರೆ, ಸೋದರ ಮಾವನು ಮಗುವಿಗೆ ಮತ್ತು ಮಗುವಿನ ತಂದೆ-ತಾಯಿಗಳಿಗೆ ಸಂಪೂರ್ಣ ಆಯಾರಿ ಬಟ್ಟೆಗಳನ್ನು ತರಬೇಕಾಗುತ್ತದೆ. ಸೋದರ ಮಾವನು ತೀರಾ ಬಡವನಾಗಿದ್ದರೆ ಕನಿಷ್ಟ ಮಗುವಿಗೆ ಒಂದು ಹೊಸ ಅಂಗಿಯನ್ನಾದರೂ ತರಬೇಕಾಗುತ್ತದೆ. ಇವರು ಸೋದರ ಮಾವನಿಂದ ಜವಳ ತೆಗೆಸುವ ಸಂಪ್ರದಾಯದ ಹಿನ್ನೆಲೆಯನ್ನು ನೋಡಿದಾಗ ಮಗುವಿನ ಮೇಲೆ ಭಾವನಾತ್ಮಕವಾದ ಪ್ರೀತಿ ಇರುವ ಸೋದರ ಮಾವನು ಕತ್ತರಿಯಿಂದ ಕೂದಲನ್ನು ಕತ್ತರಿಸುವಾಗ ಬಹಳ ಎಚ್ಚರಿಕೆಯಿಂದ ಮಗುವಿಗೆ ಯಾವ ತೊಂದರೆಯಾಗದಂತೆ ಕೂದಲುಗಳನ್ನು ಕತ್ತರಿಸುತ್ತಾನೆ ಎಂಬ ನಂಬಿಕೆ ಇವರಲ್ಲಿರಬಹುದು. ಅಥವಾ ಮೊದಲನೆಯ ಸಲ ಕ್ಷೌರಿಕನಿಂದ ಕೂದಲು ಕತ್ತರಿಸಿದರೆ, ಮಗುವಿನ ತಲೆ ಮೈಲಿಗೆಯಾಗುತ್ತದೆ ಎಂಬ ಭಾವನೆ ಇವರಲ್ಲಿರಬಹುದು.

೫. ವೋಟಿ ಬರ್ಹೋನೊ (ಋತುಮತಿ)

ವಯಸ್ಸಿಗೆ ಬಂದಿರುವ ಹೆಣ್ಣು ಮಗಳೊಬ್ಬಳು ಋತುಮತಿಯಾಗುವುದನ್ನು ಫಿಸಾಡಿ ಸಮುದಾಯದವರು "ವೋಟ್ಟಿ ಬರ್ಹೋನೋ" ಎಂದು ಕರೆಯುತ್ತಾರೆ. ಅಂದರೆ ನಮ್ಮ ಹುಡುಗಿ ಋತುಮತಿಯಾದಳು, ದೊಡ್ಡವಳಾದಳು, ಮೈನೆರೆದಳು ಎಂಬುದಾಗಿದೆ. ಅಲ್ಲದೆ ವೋಟ್ಟಿ ರ್ಹೋನೋ ಎಂಬ ಋತುಮತಿ ಶಾಂತಿ ಕಾರ್ಯಕ್ರಮವನ್ನು ಕೂಡಾ ಮಾಡುತ್ತಾರೆ.

ಋತುಮತಿಯಾದಾಗ ಇವರು ಮೊದಲು ಹುಡುಗಿಯ ಸೋದರತ್ತೆಗೆ ಬರಲು ತಿಳಿಸುತ್ತಾರೆ. ನಂತರ ತಮ್ಮ ಸಮಾಜದವರಿಗೆ ಹಾಗೂ ಬಂಧು-ಬಳಗದವರಿಗೆ ವಿಷಯ ತಿಳಿಸುತ್ತಾರೆ. ಆಗ ಮೊದಲು ಸೋದರತ್ತೆ ಬಂದು ಋತುಮತಿಯಾದವಳಿಗೆ ಐದು ದಿನಗಳವರೆಗೆ ನೀರು ಹಾಕಿ ಉಪಚಾರ ಮಾಡುವ ಪದ್ಧತಿ ರೂಢಿಯಲ್ಲಿದೆ. ಒಂದು ವೇಳೆ ಸೋದರತ್ತೆ ಬಹಳ ದೂರದ ಊರಿನಲ್ಲಿದ್ದು, ಬರುವುದಕ್ಕೆ ತೊಂದರೆಗಳಾಗಬಹುದಾದ ಸನ್ನಿವೇಶಗಳಿದ್ದರೆ, ತಮ್ಮ ಕುಟುಂಬದಲ್ಲಿನ ಹಿರಿಯ ಮುತ್ತೈದೆಯರು ಕೂಡಾ ನೀರು ಹಾಕಿ ಉಪಚಾರ ಮಾಡಬಹುದಾಗಿದೆ. ಋತುಮತಿಗೆ ಐದು ದಿನಗಳವರೆಗೆ ಇವರು ತೀರಾ ಕಟ್ಟುನಿಟ್ಟಾದ ಮಡಿ ಮೈಲಿಗೆಯನ್ನು ಆಚರಣೆ

ಮಾಡುವವರಾಗಿದ್ದಾರೆ. ಪ್ರತಿದಿನ ಮುಂಜಾನೆ ಹಾಗೂ ಸಾಯಂಕಾಲ ತಲೆ ಸ್ನಾನ ಮಾಡಿಸಿ, ಹಾಗೇ ನೀರು ಹಾಕಿದ ಸೋದರತ್ತೆ ಅಥವಾ ಮುತ್ತೈದೆ ಕೂಡಾ ಸ್ನಾನ ಮಾಡಿ ಅವಳಿಗೆ ಹೂವುಗಳನ್ನು ಮುಡಿಸಿ ಕಳಸ ಬೆಳಗುತ್ತಾರೆ. ನಂತರ ಅವಳಿಗೆ ಕೊಟ್ಟಿರುವ ತಟ್ಟೆ, ತಂಬಿಗೆಯಲ್ಲಿಯೇ ಐದು ದಿನಗಳವರೆಗೆ ಊಟವನ್ನು ಮಾಡುಬೇಕು. ಋತುಮತಿಯಾದವಳಿಗೆ ಒಳ್ಳೆಯ ಪೌಷ್ಠಿಕ ಆಹಾರಗಳಾದ ಹಣ್ಣು, ಕೊಬ್ಬರಿ, ಬೆಲ್ಲಗಳನ್ನು ನೀಡುತ್ತಾರೆ. ಏಕೆಂದರೆ, ಋತುಮತಿಯಾದ ಹುಡುಗಿಯ ದೇಹದಲ್ಲಿ ಬದಲಾವಣೆಗಳಾಗುತ್ತವೆ ಎಂಬ ನಂಬಿಕೆಯಿಂದ ಈ ರೀತಿಯ ಆಹಾರ ನೀಡುತ್ತಾರೆ. ಹಾಗೆಯೇ ಅವಳು ಬಳಸಿದ ಅಂದಿನ ಬಟ್ಟೆಗಳನ್ನು ಅಂದೇ ತೊಳೆದು ಸ್ವಚ್ಛ ಮಾಡುತ್ತಾರೆ.

ಈ ಸಂದರ್ಭದಲ್ಲಿ ಋತುಮತಿಯಾದ ಹುಡುಗಿ ಹಳೆಬಟ್ಟೆಗಳನ್ನು ತೊಟ್ಟುಕೊಂಡು ಮನೆಯಲ್ಲಿಯೇ ಇರಬೇಕಾಗುತ್ತದೆ. ಒಂದು ವೇಳೆ ಬಹಿರ್ದೆಸೆಗೆ ಹೊರಗಡೆ ಹೋಗುವಾಗ ಅವಳ ಕೈಯಲ್ಲಿ ನಿಂಬೆಹಣ್ಣು ಅಥವಾ ಕಬ್ಬಿಣದಂತಹ ವಸ್ತುಗಳನ್ನು ಕೊಟ್ಟು ಅವಳ ಜೊತೆಗೆ ಮನೆಯಲ್ಲಿನ ಹಿರಿಯ ಮಹಿಳೆಯರು ಹೋಗುತ್ತಾರೆ. ಕಾರಣ ಹಸಿಮೈಯಲ್ಲಿರುವ ಹುಡುಗಿ ಒಬ್ಬಳನ್ನೇ ಹಗಲು ಮತ್ತು ರಾತ್ರಿಹೊತ್ತಿನಲ್ಲಿ ಹೊರಗೆ ಕಳಿಸಬಾರದು, ಒಂದು ವೇಳೆ ಕಳಿಸಿದರೆ ಹೊರಗಿನ ಕೆಟ್ಟ ಗಾಳಿ ಸಂಬಂಧಗಳಾದ ದೆವ್ವ, ಭೂತ, ಪಿಶಾಚಿಗಳು ಆವರಿಸಿಕೊಳ್ಳುತ್ತವೆ ಎಂಬ ಭಯ ಇವರಲ್ಲಿದೆ.

ಕೊನೆಯ ಐದನೆಯ ದಿನದ ಸ್ನಾನ ಮುಗಿದ ಮೇಲೆ ಸೋದರತ್ತೆ ಅಥವಾ ಸೋದರಮಾವನ್ನು ತಂದ ಹೊಸ ಸೀರೆಯನ್ನು ತೊಡಿಸಿ ಉಡಿತುಂಬಿ ತಲೆಗೆ ಹೂವಿನ ದಂಡೆಯನ್ನು ಮುಡಿಸಿ ಅವಳಿಗೆ ಕಳಸವನ್ನು ಬೆಳಗುತ್ತಾರೆ. ಬೆಳಗಿದ ಮೇಲೆ ಅವಳ ಮೈಲಿಗೆ ಬಿಡಿಸಿದ ಸೋದರತ್ತೆಗೆ ತಮ್ಮ ಮನೆಯ ಯಾರಾದರೂ ಮುತ್ತೈದೆಯವರು ಸೀರೆಯನ್ನು ಉಡಿಸಿ ಉಡಿ ತುಂಬುತ್ತಾರೆ. ನಂತರ ಗಂಗಾ ಸ್ಥಳಕ್ಕೆ ಹೋಗಿ ಹಳ್ಳ, ಬಾವಿ, ಕೆರೆ, ನದಿಗೆ ಪೂಜೆ ಸಲ್ಲಿಸಿ, ಹನುಮಂತರಾಯನ ಗುಡಿಗೆ ಹೋಗಿ ದರ್ಶನವನ್ನು ಮಾಡಿ ಮನೆಗೆ ಬರುತ್ತಾರೆ. ಅಂದು ಅವರ ಮನೆಯಲ್ಲಿ ಸಿಹಿ ಅಡುಗೆಯನ್ನು ಮಾಡಿಸಿ ಸಮುದಾಯದ ಜನರಿಗೆ ಉಟೋಪಚಾರವನ್ನು ಮಾಡಿಸುತ್ತಾರೆ.

ಈ ಐದು ದಿನಗಳ ಮೈಲಿಗೆ ಕಳೆದ ಮೇಲೆ ತಮ್ಮ ಕುಟುಂಬದ ಸ್ಥಿತಿಗತಿಗಳಿಗನುಗುಣವಾಗಿ ಐದು, ಒಂಬತ್ತು, ಹನ್ನೊಂದು ದಿನಗಳವರೆಗೆ ಋತುಮತಿಯಾದ ಹುಡುಗಿಯನ್ನು ಕೂಡಿಸಿ ಹಾಡುತ್ತಾರೆ ಹಾಗೂ ಹೂವು ಮುಡಿಸುವ ಕಾರ್ಯವನ್ನು ಮಾಡುತ್ತಾರೆ. ಈ ರೀತಿ ಕೂಡಿಸಿದ ದಿನಗಳಲ್ಲಿ ಬಂಧುಬಳಗದವರನ್ನೆ ಕರೆಯಿಸುತ್ತಾರೆ. ಕರೆದ ಬಂಧುಬಳಗದವರು ಬಂದು ಋತುಮತಿಯಾದ ಹುಡುಗಿಗೆ ಸಾಹಿತ್ಯ ಕೊಡುತ್ತಾರೆ. ಅಂದರೆ ಬೇಳೆ, ಬೆಲ್ಲ, ಒಳ್ಳೆಣ್ಣೆ, ಗೋದಿಹಿಟ್ಟು, ಅಕ್ಕಿ, ಸಂಬಾರ ಪದಾರ್ಥಗಳನ್ನು ನೀಡಿ ಊಟ ಮಾಡಿಸಿ, ಅವಳಿಗೆ ಹೊಸ ಬಟ್ಟೆಗಳನ್ನು ತಂದು ಹೂವು ಮುಡಿಸುವ ಕಾರ್ಯವನ್ನು ಮಾಡಿ ಅವಳಿಗೆ ಉಡುಗೊರೆಯನ್ನು ಕೊಡುತ್ತಾರೆ.

ಇವರಲ್ಲಿ ಕೆಲವರು "ಗಂಗಳ ತುಂಬಿಸುವ" ಕಾಣಿಕೆ ಕೊಡುವ ಪದ್ಧತಿ ರೂಢಿಯಲ್ಲಿದೆ. ಅಂದರೆ ೫, ೯, ೧೧ ಗಂಗಳಗಳ ತುಂಬ, ಕರ್ಚಿಕಾಯಿ, ಕೋಡುಬಳೆ, ಮಾಲದಿ, ಪೂರಿ, ಸಂಡಿಗೆ, ಹಪ್ಪಳ, ಚಿತ್ರನ್ನ, ಬಾಳೆಹಣ್ಣು, ಅಂಜೂರಹಣ್ಣು, ಸಪೋಟ, ಸೀತಾಫಲ, ದ್ರಾಕ್ಷಿ ಮುಂತಾದ ಅನೇಕ ರೀತಿಯ ಹಣ್ಣು ಹಂಪಲುಗಳನ್ನು ಪ್ರತಿಯೊಂದು ಗಂಗಳದಲ್ಲಿ ತುಂಬಿಕೊಂಡು ಸೀರೆ, ಕುಪ್ಪಸ, ಹೂವಿನ ದಂಡೆಗಳನ್ನು ಕಾಣಿಕೆಯಾಗಿ ಕೊಡುವುದು ರೂಢಿಯಲ್ಲಿದೆ. ಅವರವರ ಅನುಕೂಲತೆಗಳಿಗೆ ತಕ್ಕಂತೆ ೫, ೯, ೧೧ "ಗಂಗಳ ತುಂಬಿಸಿ" ಕಾಣಿಕೆ ಕೊಡುತ್ತಾರೆ. ಈ ಗಂಗಳ ತುಂಬಿಸುವ ಪದ್ಧತಿಯು ಘಿಸಾಡಿ ಸಮುದಾಯದಲ್ಲಿ ಹೆಚ್ಚಿನ ಸರಳತೆ, ಕಡಿಮೆ ಖರ್ಚು ಇರುವುದರಿಂದ ಬಹುತೇಕ ಜನರು ಇದೇ ಕಾಣಿಕೆಯನ್ನು ತಂದು ಕೊಡುತ್ತಾರೆ.

೬. ಬಾಹಿರ್ ಭೈಸೀಚ್ (ತಿಂಗಳ ಮುಟ್ಟಿನ ಶಾಸ್ತ್ರ)

ಸಾಮಾನ್ಯವಾಗಿ ಪ್ರತಿಯೊಬ್ಬ ವಯಸ್ಕ ಮಹಿಳೆಯರು ತಿಂಗಳಿಗೊಮ್ಮೆ ಮುಟ್ಟಾಗುವುದು ಅವಳ ದೇಹದಲ್ಲಾಗುವ ಪ್ರತಿ ತಿಂಗಳ ದೈಹಿಕ ಪರಿವರ್ತನೆಯಾಗಿದ್ದು ಇದು ಪ್ರತಿ ಮಹಿಳೆಯರಲ್ಲಿ ನಡೆಯುವ ನಿರಂತರ ಪ್ರಕೃತಿಯ ಕ್ರಿಯೆಯಾಗಿದೆ. ಈ ಸಂದರ್ಭದಲ್ಲಿ ಸ್ತ್ರೀಯು ಮೂರು ದಿನಗಳವರೆಗೆ ಅಪವಿತ್ರಳೆಂದು ಬಹುತೇಕ ಸಮುದಾಯಗಳಲ್ಲಿ ಭಾವಿಸುತ್ತಾರೆ.

ಘಿಸಾಡಿ ಜನರು ಮುಟ್ಟಾದ ಹೆಂಗಸು ಹೊರಗೆ ಕುಳಿತುಕೊಂಡಿದ್ದಾಳೆ ಎಂಬುದಕ್ಕೆ ಇವರು "ಭೈರಂ ಭೈಸಿಚ್" ಎಂದು ಕರೆಯುತ್ತಾರೆ. ಮುಟ್ಟಾದ ಹೆಂಗಸು ಕನಿಷ್ಠ ಮೂರು ದಿನಗಳವರೆಗೆ ಅಪವಿತ್ರಳೆಂದು ಭಾವಿಸಿ ಇವರ ಮನೆ ಅಥವಾ ಗುಡಾರಗಳಲ್ಲಿಯ ಒಂದು ಮೂಲೆಯಲ್ಲಿ ಕುಳಿತುಕೊಳ್ಳಬೇಕಾಗುತ್ತದೆ. ಈ ಸಂದರ್ಭಗಳಲ್ಲಿ ಮುಟ್ಟಾದ ಹೆಂಗಸು ಅಡುಗೆ ಕೆಲಸ ಮಾಡುವಂತಿಲ್ಲ ಮತ್ತು ಮುಖ್ಯವಾಗಿ ದೇವರ ಪೂಜೆ, ಪುನಸ್ಕಾರಗಳನ್ನು, ಶುಭ, ಮಂಗಳ ಕಾರ್ಯದಲ್ಲಿ ಪಾಲ್ಗೊಳ್ಳುವಂತಿಲ್ಲ. ಈ ಸಂದರ್ಭದಲ್ಲಿ ಇವರು ಬಾಳೆಗಿಡ, ನಿಂಬೆಗಿಡ, ಕರಿಬೇವಿನ ಗಿಡ, ತುಳಸಿ ಗಿಡಗಳನ್ನು ಇವರು ಮುಟ್ಟಲು ನಿಷೇಧಿಸಲಾಗಿದೆ. ಕಾರಣ ಮುಟ್ಟಾದ ಮಹಿಳೆಯು ಇಂಥ ಗಿಡಗಳನ್ನು ಮುಟ್ಟುವುದರಿಂದ ಅವು ಒಣಗಿ ಹೋಗುತ್ತವೆ ಎಂಬ ನಂಬಿಕೆ ಇವರಲ್ಲಿದೆ.

ಆದರೆ ಈ ಸಂದರ್ಭದಲ್ಲಿ ಮುಟ್ಟಾದ ಮಹಿಳೆಯರು ಪಾತ್ರೆಗಳನ್ನು ತೊಳೆಯುವುದು, ಬಟ್ಟೆ ಬರೆಗಳನ್ನು ಸ್ವಚ್ಛಗೊಳಿಸುವುದು, ಮನೆ ಕಸಗುಡಿಸುವಂತಹ ಕೆಲಸಗಳನ್ನು ಮಾಡಬಹುದು. ಇವರು ಮುಟ್ಟಾದ ಮಹಿಳೆ ಮೂರನೆಯ ದಿನದ ಸ್ನಾನ ಮುಗಿದ ಮೇಲೆ ಪರಿಶುದ್ಧಳಾಗಿ ನಂತರ ನಾಲ್ಕು ಅಥವಾ ಐದನೆಯ ದಿನದಿಂದ ದೇವರ ಪೂಜೆ, ಪುನಸ್ಕಾರಗಳು, ಮಂಗಳಕರ ಕಾರ್ಯದಲ್ಲಿ ಭಾಗವಹಿಸಬಹುದಾಗಿದೆ.

೭. ಘುಟ್ಟಿಶಾಸ್ತ್ರ (ನಿಶ್ಚಿತಾರ್ಥ)

ಘಿಸಾಡಿ ಸಮುದಾಯದವರು ತಮ್ಮ ಮಕ್ಕಳ ಮದುವೆಯ ವಯಸ್ಸು ಸಮೀಪಿಸಿದಾಗ ಆದಷ್ಟು

ಬೇಗನೆ ಮದುವೆ ಮಾಡಿ ಮುಗಿಸುವ ವಿಚಾರದಲ್ಲಿ ತೊಡಗುತ್ತಾರೆ. ಅದರಲ್ಲೂ ಹೆಣ್ಣು ಋತುಮತಿಯಾದ ಮೇಲಂತೂ ಅವರು ಇನ್ನೂ ಹೆಚ್ಚು ಚಿಂತಿತರಾಗಿ ಎಲ್ಲಾದರೂ ಒಳ್ಳೆಯ ಗಂಡಿನ ಅನ್ವೇಷಣೆಗಾಗಿ ಬಂಧು ಬಳಗದವರಲ್ಲಿ ವಿನಂತಿಸಿಕೊಳ್ಳುತ್ತಾರೆ. ಹೆಣ್ಣು ಋತುಮತಿಯಾದ ಮೇಲೆ ಬಹಳ ದಿನಗಳವರೆಗೆ ಮನೆಯಲ್ಲಿಟ್ಟುಕೊಳ್ಳದೆ ಆದಷ್ಟು ಬೇಗನೆ ಮದುವೆ ಮಾಡಿ ತಮ್ಮ ಜವಾಬ್ದಾರಿಯಿಂದ ಮುಕ್ತರಾಗಲು ಬಯಸುತ್ತಾರೆ. ಆದುದರಿಂದ ಋತುಮತಿಯಾದ ಎರಡು ಅಥವಾ ಮೂರು ವರ್ಷಗಳಲ್ಲಿಯೇ ಅವಳ ಮದುವೆ ಮಾಡಿ ಮುಗಿಸುತ್ತಾರೆ. ಆದರೆ ಗಂಡಿನ ವಿಷಯದಲ್ಲಿ ಇವರು ಅಷ್ಟೊಂದು ತಲೆ ಕೆಡಿಸಿಕೊಳ್ಳುವುದಿಲ್ಲ. ಮದುವೆ ವಯಸ್ಸಿಗೆ ಬಂದರೆ ಹೆಣ್ಣು ಒಪ್ಪಿತವಾದರೆ ಮದುವೆ ಮಾಡಿ ಮುಗಿಸುತ್ತಾರೆ. ಈ ಮೊದಲು ಇವರ ಸಮುದಾಯದಲ್ಲಿ ಬಾಲ್ಯವಿವಾಹಗಳು ಯಥೇಚ್ಛವಾಗಿ ನಡೆಯುತ್ತಿದ್ದವು. ಇಂದು ಬಾಲ್ಯವಿವಾಹ ಸಂಪೂರ್ಣವಾಗಿ ಕಡಿಮೆಯಾಗಿವೆ.

ಆದರೂ ಕೂಡಾ ಅಧ್ಯಯನದ ಕ್ಷೇತ್ರಕಾರ್ಯದ ವ್ಯಾಪ್ತಿಯಲ್ಲಿ ಅಂಕಿಅಂಶಗಳನ್ನು ಕಲೆ ಹಾಕುವಾಗ ಒಂದೆರಡು ಕುಟುಂಬದವರು ಬಾಲ್ಯವಿವಾಹ ಮಾಡಿರುವುದು ಕಂಡುಬಂದಿದೆ. ಈ ಮೊದಲು ಸಾಮಾನ್ಯವಾಗಿ ಇವರು ಮಾಡುವ ಮದುವೆಯ ವಯಸ್ಸೆಂದರೆ ಗಂಡಿಗೆ ೧೫ರಿಂದ ೨೦ ವರ್ಷಗಳು ಹೆಣ್ಣಿಗೆ ೧೨ರಿಂದ ೧೫ ವರ್ಷಗಳಲ್ಲಿ ಮದುವೆ ಮಾಡಿ ತಮ್ಮ ಜವಾಬ್ದಾರಿಯನ್ನು ಕಳೆದುಕೊಳ್ಳಲು ಬಯಸುತ್ತಿದ್ದರು. ಆದರೆ ಇಂದಿನ ಯುವಕರು ಮೇಲೆ ತಿಳಿಸಿರುವ ವಯಸ್ಸಿನ ನಂತರ ಮದುವೆಯಾಗಲು ಬಯಸುತ್ತಿದ್ದಾರೆ. ಇವರಲ್ಲಿ ಸಹ ಗೋತ್ರದ ಅಥವಾ ಒಂದೇ ಬೆಡಗಿನವರಲ್ಲಿ ವಿವಾಹವಾಗಲು ನಿಷೇಧವಿರುವುದರಿಂದ ಪರಸ್ಪರ ವಿರುದ್ಧ ಅಥವಾ ಎರಡು ಭಿನ್ನ ಬೆಡಗುಗಳಲ್ಲಿ ವಿವಾಹ ಅಥವಾ ಹೆಣ್ಣಿನ ಆಯ್ಕೆ ಮಾಡಿಕೊಳ್ಳಲು ಅವಕಾಶವಿರುತ್ತದೆ. ಇವರಲ್ಲಿ ಪ್ರತಿಯೊಂದು ಬೆಡಗಿನವರು ಒಂದೇ ಸಂತತಿಗೆ ಸೇರಿದವರಾಗಿರುವುದರಿಂದ ಇವರೆಲ್ಲ ಅಣ್ಣ-ತಮ್ಮಂದಿರು ಎಂಬ ಭಾವನೆಯಿರುತ್ತದೆ. ಹೀಗಾಗಿ ಪರಸ್ಪರ ಬೇಸೆ ಬೆಡಗಿನಲ್ಲಿ ಕನ್ಯಾನ್ವೇಷಣೆಯಲ್ಲಿ ತೊಡಗುತ್ತಾರೆ. ಒಂದೇ ಬೆಡಗುಗಳಲ್ಲಿ ವಿವಾಹ ಸಂಬಂಧಗಳುಂಟಾದರೆ ಹುಟ್ಟುವ ಮಕ್ಕಳು ಆರೋಗ್ಯವಾಗಿರುವುದಿಲ್ಲ, ಅಲ್ಲದೇ ಇಡೀ ತಮ್ಮ ಸಮುದಾಯದ ವಂಶ ಹಾಳಾಗಿ ಅನಾಹುತ ಗಳಾಗಬಹುದು ಎಂಬ ಮನೋವೈಜ್ಞಾನಿಕ ಕಲ್ಪನೆಯನ್ನು ಕಂಡುಕೊಂಡಿದ್ದಾರೆ. ಈ ಮನೋಭಾವನೆ ಎಲ್ಲ ಬುಡಕಟ್ಟುಗಳಲ್ಲಿ ಕಂಡುಬರುತ್ತದೆ. ಹೀಗಾಗಿ ವಿವಾಹ ಸಂದರ್ಭದಲ್ಲಿ ಬಳ್ಳಿ, ಬೆಡಗು ಸ್ಪಷ್ಟವಾಗಿ ವಿಚಾರಿಸಿ ಮದುವೆ ನಿಶ್ಚಿತಾರ್ಥ ಮಾಡುತ್ತಾರೆ.

ಛಿಸಾಡಿ ಸಮುದಾಯ ಗಾತ್ರದಲ್ಲಿ ಅತಿ ಕಡಿಮೆ ಜನಸಂಖ್ಯೆ ಹೊಂದಿರುವ ಚಿಕ್ಕ ಸಮುದಾಯವಾಗಿರುವುದರಿಂದ ಇವರು ವಾಸಿಸುವ ಪ್ರದೇಶದಲ್ಲಿನ ಎಲ್ಲ ಬಂಧುಬಳಗದವರು ಬಹುತೇಕ ಪರಸ್ಪರ ಪರಿಚಯದವರೇ ಆಗಿರುತ್ತಾರೆ. ಆದುದರಿಂದ ಕನ್ಯೆಯನ್ನು ನೋಡಲು ಹುಡುಗ ಹೋಗುವುದು ಬಹಳ ವಿರಳ. ಆದರೆ ಬಹಳ ದೂರದಲ್ಲಿ ನೆಲೆಸಿರುವ ಹೊಸ ಸಂಬಂಧಗಳೇನಾದರೂ ಬಂದರೆ, ತಂದೆ ತಾಯಿ, ಬಂಧುಬಳಗದವರ ಜೊತೆಗೆ ಹುಡುಗ ಕನ್ಯೆಯನ್ನು ನೋಡಲು

ಹೋಗುತ್ತಾನೆ. ಕನ್ಯೆ ನೋಡಲು ಹೋದ ಹುಡುಗನಿಗೆ ಕನ್ಯೆಯನ್ನು ಶೃಂಗರಿಸಿ ಮಣೆಯ ಮೇಲೆ ಕೂಡಿಸಿ ತೋರಿಸುವ ಪದ್ಧತಿ ಇವರಲ್ಲಿ ಇರುವುದಿಲ್ಲ. ಸಾಮಾನ್ಯವಾಗಿ ಹುಡುಗಿ ಮನೆಯಲ್ಲಿ ಎಲ್ಲರಂತೆ ಕೆಲಸ ಕಾರ್ಯಗಳಲ್ಲಿ ತೊಡಗಿದ್ದಾಗ, ಹೊರ ಒಳಗೆ ಬಂದು ಹೋಗುವಾಗ ಹುಡುಗನಿಗೆ ಇವಳೇ ಕನ್ಯೆ ಎಂದು ತೋರಿಸುತ್ತಾರೆ. ಆದರೆ ಸಂಬಂಧ ಬೆಳೆಸುವ ವಿಚಾರದಲ್ಲಿ ಹುಡುಗನಿಗಿಂತ ಹಿರಿಯರ ಆಯ್ಕೆಯೇ ಪ್ರಧಾನವಾಗಿರುತ್ತದೆ. ಇವರಲ್ಲಿ ಬಹುತೇಕ ಹಿರಿಯರು ತೆಗೆದುಕೊಳ್ಳುವ ನಿರ್ಧಾರಕ್ಕೆ ಹುಡುಗನು ಸಮ್ಮತಿಸುತ್ತಾನೆ.

ಸಾಲುವಳಿ ನೋಡುವುದು ಮತ್ತು ವಧುವರರ ಶುಲ್ಕ : ಘಿಸಾಡಿ ಜನರಲ್ಲಿ ಪರಸ್ಪರ ಎರಡು ಕುಟುಂಬದವರಿಗೆ ಸಂಬಂಧ ಬೆಳೆಸಲು ಒಪ್ಪಿತವಾದ ಕೂಡಲೇ ಮೊದಲು ಬ್ರಾಹ್ಮಣ ಪುರೋಹಿತನಲ್ಲಿಗೆ ಎರಡು ಕುಟುಂಬದ ಹಿರಿಯರು ಮತ್ತು ಬಂಧುಬಳಗದವರು ವಧುವರರ ಜಾತಕ ಮತ್ತು ಮದುವೆಯ ಸಾಲುವಳಿಯನ್ನು ತೆಗೆಸಿ ನೋಡುತ್ತಾರೆ. ಆದರೆ ಇವರಲ್ಲಿ ವಧುವಿನ ಜಾತಕವಾಗಲಿ, ವರನ ಜಾತಕವಾಗಲಿ ಬರಹ ರೂಪದಲ್ಲಿ ಬರೆಸಿ ಇಟ್ಟಿರುವುದಿಲ್ಲ. ಆಗ ಪುರೋಹಿತರು ಕೇವಲ ವಧುವರರ ವ್ಯಾವಹಾರಿಕ ನಾಮದಲ್ಲಿ ನಕ್ಷತ್ರ ಹಾಗೂ ರಾಶಿಯನ್ನು ಮಾತ್ರ ನೋಡಿ ವಧುವರರ ಸಾಲುವಳಿ ಕೂಡಿ ಬರುವುದೋ, ಇಲ್ಲವೋ ಎಂಬುದನ್ನು ನೋಡಿ ಹೇಳುತ್ತಾನೆ. ಒಂದು ವೇಳೆ ಪರಸ್ಪರ ಸಾಲುವಳಿ ಕೂಡಿ ಬರದಿದ್ದರೆ, ವಧುವಿನ ಹೆಸರು ಬದಲಾಯಿಸಿ ಸಾಲುವಳಿಯನ್ನು ಕೂಡಿಸಲು ಸಲಹೆಯನ್ನು ನೀಡುತ್ತಾರೆ. ಈ ರೀತಿ ವಧುವಿನ ಹೆಸರನ್ನು ಬದಲಾವಣೆ ಮಾಡಿ ಸಾಲುವಳಿಯನ್ನು ಜೋಡಿಸಿ ಮದುವೆ ಮಾಡಿ ಮನೆ ತುಂಬಿಸಿಕೊಂಡ ಮೇಲೆ ಬದಲಾವಣೆಯಾಗಿರುವ ಹೊಸ ಹೆಸರಿನಿಂದಲೇ ಅವಳನ್ನು ಕರೆಯುತ್ತಾರೆ.

ಬಹುದಿನಗಳ ಹಿಂದೆ ಇವರ ಸಮುದಾಯದಲ್ಲಿ 'ದುಬೇಜಿ' ಎಂಬ ಬೆಡಗಿನವರು ಪೌರೋಹಿತ್ಯ ಸ್ಥಾನಮಾನವನ್ನು ವಹಿಸಿಕೊಳ್ಳುತ್ತಿದ್ದು ಈ ಬೆಡಗಿನವರೇ ಮೊದಲು ವಧುವರರ ತಂದೆತಾಯಿಗಳ ನಿರ್ಧಾರದ ನಂತರ ಘಟ್ಟಿಕಾರ್ಯಕ್ಕೆ ಒಪ್ಪಿಗೆ ನೀಡುತ್ತಿದ್ದರು ಎಂದು ಹೇಳುತ್ತಾರೆ. ಬಹುಶಃ ಇದೇ ಇವರ ಮೂಲ ಸಂಪ್ರದಾಯವಾಗಿದ್ದು ಅದನ್ನು ಕಡ್ಡಾಯವಾಗಿ ಅನುಸರಿಸಿರಬಹುದು ಎಂಬುದು ಗೋಚರವಾಗುತ್ತದೆ.

ವಧುವರರ ಶುಲ್ಕ : ಘಿಸಾಡಿ ಜನರಲ್ಲಿ ಮೊದಲು ಹೆಣ್ಣಿನ ತಂದೆ-ತಾಯಿಗಳಿಗೆ ತೆರವು ಅಥವಾ ಕನ್ಯಾಶುಲ್ಕ ಕೊಟ್ಟು ಮದುವೆ ಮಾಡಿಕೊಳ್ಳುವ ಸಂಪ್ರದಾಯ ರೂಡಿಯಲ್ಲಿತ್ತು. ಇಂದು ಈ ಪದ್ಧತಿ ಸಂಪೂರ್ಣವಾಗಿ ಕುಗ್ಗಿದೆ. ಆದರೆ ವರದಕ್ಷಿಣೆ ಕೊಡುವ ಪದ್ಧತಿಯು ರೂಡಿಯಲ್ಲಿಲ್ಲ. ಎರಡು ಕುಟುಂಬಗಳಿಗೆ ಪರಸ್ಪರ ಸಂಬಂಧ ಒಪ್ಪಿಗೆಯಾದರೆ ಕೆಲವೊಂದು ಖರ್ಚು-ವೆಚ್ಚಗಳಲ್ಲಿ ಇಬ್ಬರಿಗೂ ಸಮಪಾಲು ಇರುತ್ತದೆ.

ವಧು-ವರರ ಕುಟುಂಬಗಳೆರಡಕ್ಕೂ ಸಂಬಂಧ ಒಪ್ಪಿತವಾಗಿದ್ದರೆ, ವರನ ತಂದೆ-ತಾಯಿ ಹೊಸ

ಸೀರೆ ತಂದು ಕನ್ಯೆಗೆ ಉಡಿಸಿ, ಉಡಿಯಲ್ಲಿ ಅಕ್ಕಿ ತುಂಬಿ, ಕುಂಕುಮ, ಹೂವು ಮುಡಿಸಿ ಸಂಬಂಧವನ್ನು ಗಟ್ಟಿಗೊಳಿಸುತ್ತಾರೆ. ಈ ರೀತಿ ಮಾಡುವ ಈ ವಿಧಾನಕ್ಕೆ ಇವರು ಸಣ್ಣ ಕುಂಕುಮಕಾರ್ಯ ಎಂದು ಹೇಳುತ್ತಾರೆ. ಈ ಸಂದರ್ಭದಲ್ಲಿ ಪರಸ್ಪರ ಎರಡು ಕುಟುಂಬದವರು ಪ್ರತ್ಯೇಕವಾಗಿ ೭.೫೦ ರೂ.ನಂತೆ ಒಟ್ಟು ೧೫ ರೂಪಾಯಿಗಳನ್ನು ತಮ್ಮ ಸಮುದಾಯದ ಮುಖ್ಯಸ್ಥನಿಗೆ (ಪುಢಾರಿಗೆ) ಕನ್ಯಾನಿರ್ಧಾರಿತ ಶುಲ್ಕವನ್ನು ಕೊಡುತ್ತಾರೆ. ಹೀಗೆ ಒಂದು ಸಲ ಮುಖ್ಯಸ್ಥನ ಸಮಕ್ಷಮದಲ್ಲಿ ಕನ್ಯಾನಿರ್ಧಾರಿತ ಶುಲ್ಕವನ್ನು ಪಡೆದ ಮೇಲೆ ಎಂತಹ ಸಂದರ್ಭದಲ್ಲಿಯೂ ಕನ್ಯಾ ನಿರ್ಧಾರವನ್ನು ಬದಲಿಸುವುದಿಲ್ಲ. ಹಾಗೇನಾದರೂ ಆದರೆ ಅವರು "ಚಿತ್ತೋರಿಗಡ ಲೋಹಾರ ಸಭಾ ಪಂಚಾಯಿತಿ"ಯಲ್ಲಿನ ದಂಡನೆಗೆ ಗುರಿಯಾಗಬೇಕಾಗುತ್ತದೆ.

ದೊಡ್ಡ ಕುಂಕುಮ ಕಾರ್ಯ : ಈ ದೊಡ್ಡ ಕುಂಕುಮ ಕಾರ್ಯಕ್ರಮಕ್ಕೆ ಒಂದು ಒಳ್ಳೆಯ ದಿನವನ್ನು ಬ್ರಾಹ್ಮಣ ಪುರೋಹಿತನಲ್ಲಿ ಕೇಳಿ ಎರಡು ಕುಟುಂಬದ ಹಿರಿಯರು ಮತ್ತು ಸಮುದಾಯದ ಪ್ರಮುಖರು ಸೇರಿ ನಿಗದಿಪಡಿಸಿಕೊಳ್ಳುತ್ತಾರೆ. ಈ ಕಾರ್ಯಕ್ರಮವು ಹೆಣ್ಣಿನವರ ಮನೆಯಲ್ಲಿಯೇ ನಡೆಯುತ್ತಿದ್ದು ಈ ಕಾರ್ಯಕ್ರಮದ ಖರ್ಚುವೆಚ್ಚಗಳಲ್ಲಿ ಇಬ್ಬರೂ ಸಮಪಾಲು ಹಂಚಿಕೊಳ್ಳಬೇಕೆಂಬ ಕಡ್ಡಾಯವಾದ ನಿಯಮವಿದೆ. ಈ ದೊಡ್ಡ ಕುಂಕುಮ ಕಾರ್ಯಕ್ಕೆ ಎರಡು ಕಡೆಯವರ ಇಡೀ ಬಂಧುಬಳಗದವರು ಬರುತ್ತಾರೆ. ಅಂದು ಮುಂಜಾನೆ ಎಲ್ಲರ ಫಲಾಹಾರವಾದ ಮೇಲೆ ಕನ್ಯೆಗೆ ಹಾಗೂ ಬಂದಂತಹ ಎಲ್ಲ ಮುತ್ತೈದೆಯರಿಗೆ ಹಸಿರು ಬಳೆಯನ್ನು ತೊಡಿಸುವ ಕಾರ್ಯಕ್ರಮ ನಡೆಯುತ್ತದೆ. ಅಂದು ಸಾಯಂಕಾಲ ಪರಸ್ಪರ ಎರಡು ಕುಟುಂಬದ ಕಡೆಯ ಬಂಧುಬಳಗದ ಹಿರಿಯರು ಹಾಸಿದ ಜಮಖಾನೆಯ ಮೇಲೆ ಅಂಗಳದಲ್ಲಿ, ಇಲ್ಲವೇ ಅಲ್ಲಿರುವ ಒಂದು ಕಟ್ಟೆಯ ಮೇಲೆ ಕುಳಿತುಕೊಂಡಿರುತ್ತಾರೆ. ಆಗ ಒಂದು ತಟ್ಟೆಯಲ್ಲಿ ಎಲೆ, ಅಡಿಕೆ, ಬೀಡಿ, ಸಿಗರೇಟುಗಳನ್ನು ಇಟ್ಟಿರುತ್ತಾರೆ. ಜೊತೆಗೆ ಒಂದು ಗ್ಲಾಸಿನಲ್ಲಿ ಸ್ವಲ್ಪ ಅಕ್ಕಿ ಹಾಕಿ ಊದಿನ ಕಡ್ಡಿಗಳ್ನು ಹಚ್ಚಿರುತ್ತಾರೆ. ಆ ತಟ್ಟೆಯಲ್ಲಿ ಕುಂಕುಮದ ಬಟ್ಟಲು ಇಟ್ಟಿರುತ್ತಾರೆ. ಅದನ್ನು ತೆಗೆದುಕೊಂಡು ಬಂದು ಕುಳಿತುಕೊಂಡ ಹಿರಿಯರ ಮಧ್ಯದಲ್ಲಿಡುತ್ತಾರೆ. ಆಗ ಎರಡು ಕಡೆಯ ಹಿರಿಯರು ಮತ್ತು ಎರಡು ಕಡೆಯ ಕುಟುಂಬದ ಸಂಬಂಧಿಕರು ಪರಸ್ಪರ ಸಂಬಂಧ ಒಪ್ಪಿಯಾಗಿದ್ದು ಸಂಬಂಧದ ವಿಚಾರದಲ್ಲಿ ಯಾವ ತಂಟೆ ತಕರಾರುಗಳಿಲ್ಲ ಹಾಗೂ ಮನೆಗೆ ಬಂದ ಸೊಸೆಗೆ ನಾವು ಸ್ವಂತ ಮಗಳಂತೆ ನೋಡಿಕೊಳ್ಳುತ್ತೇವೆ ಎಂಬ ಒಪ್ಪಿಗೆ ಕೊಟ್ಟ ಮೇಲೆ ಆಗ ಬಂದಂತಹ ಎಲ್ಲ ಬಂಧುಬಳಗದವರಿಗೆ ಕುಂಕುಮದ ತಿಲಕವಿಡುವರು. ಪ್ರತಿಯೊಬ್ಬರಿಗೂ ಸಣ್ಣ ಹೂವಿನ ಮಾಲೆಗಳನ್ನು ಹಾಕುತ್ತಾರೆ. ಆ ಮೇಲೆ ಕನ್ಯೆಗೆ ಹೊಸ ಸೀರೆ ಉಡಿಸಿ ಉಡಿಅಕ್ಕಿಯನ್ನು ಹಾಕಿ, ತಲೆಗೆ ಹೂವಿನ ದಂಡೆಯನ್ನು ಮುಡಿಸಿ ಆರತಿಯನ್ನು ಮಾಡುತ್ತಾರೆ. ನಂತರ ದೇವರಿಗೆ, ಹಿರಿಯರಿಗೆ ನಮಸ್ಕಾರ ಮಾಡಿಸುತ್ತಾರೆ. ಅನುಕೂಲವಿದ್ದವರು ಬಂಗಾರದ ಒಡವೆಗಳನ್ನು ಹಾಕುತ್ತಾರೆ. ಇತ್ತೀಚಿನ ದಿನಗಳಲ್ಲಿ ವಧುವಿನ

ಜೊತೆಯಲ್ಲಿ ವರನನ್ನು ಕೂಡಿಸಿ ಹೊಸ ಬಟ್ಟೆಗಳನ್ನು ನೀಡುವ ಸಂಪ್ರದಾಯ ರೂಢಿಯಲ್ಲಿ ಬಂದಿದೆ. ಇದು ಇವರ ಸಂಸ್ಕೃತಿಯಲ್ಲಾಗುತ್ತಿರುವ ಬದಲಾವಣೆಯಾಗಿದೆ.

ಅಂದು ನೂತನ ವಧುವರರಿಗೆ ಸುಮಾರು ೭, ೯, ೧೧ ತಟ್ಟೆಗಳನ್ನು ತುಂಬಿಸಿ ಪ್ರತಿಯೊಂದು ತಟ್ಟೆಯಲ್ಲಿ ಹಣ್ಣು ಸಿಹಿ ತಿಂಡಿಗಳನ್ನು ತಿನ್ನಲು ಕೊಡುತ್ತಾರೆ. ಔಪಚಾರಿಕವಾಗಿ ಪ್ರತಿಯೊಂದು ಪದಾರ್ಥವನ್ನು ಸ್ವಲ್ಪ ಸ್ವಲ್ಪ ತಿಂದು ಉಳಿದವುಗಳನ್ನು ಚಿಕ್ಕಮಕ್ಕಳಿಗೆ ಹಂಚುತ್ತಾರೆ. ಈ ಎಲ್ಲ ಕಾರ್ಯಕ್ರಮ ಮುಗಿದ ಮೇಲೆ ಎಲ್ಲರು ಅಂದು ಮಾಡಿದ ಮಾಂಸದ ಅಡಿಗೆಯನ್ನು ಮತ್ತು ಇನ್ನಿತರ ವಿಶೇಷ ಪದಾರ್ಥಗಳನ್ನು ಊಟ ಮಾಡುತ್ತಾರೆ. ಬಂದಂತಹ ಎಲ್ಲ ಬಂಧುಬಳಗದವರ ಊಟ ಮುಗಿದ ನಂತರ ಅವರವರ ವಯಸ್ಸಿಗೆ ಅನುಗುಣವಾಗಿ ಮದ್ಯಪಾನ ಮಾಡಲು ಹೋಗುತ್ತಾರೆ. ಆದರೆ ಇಂದು ಮದ್ಯಪಾನ ಮಾಡುವ ಪದ್ಧತಿಯನ್ನು ನಿರ್ಬಂಧಿಸಲಾಗುತ್ತಿದೆ.

೮. ಲಗೀನ್ (ವಿವಾಹ)

ಘಿಸಾಡಿ ಸಮುದಾಯದಲ್ಲಿ ವಿವಾಹಕ್ಕೆ 'ಲಗೀನ್' ಎಂದು ಕರೆಯುತ್ತಾರೆ. ಭಾರತೀಯ ಹಿಂದೂ ಸಮಾಜದಲ್ಲಿ ವಿವಾಹವು ಒಂದು ಪವಿತ್ರವಾದ ಬಂಧನವಾಗಿದೆ. ವಿವಾಹವು ಸಮಾಜದಲ್ಲಿ ಮತ್ತು ಸಮುದಾಯಗಳಲ್ಲಿ ಅನೈತಿಕತೆಗಳನ್ನು ತಡೆಗಟ್ಟುವಲ್ಲಿ ಬಹಳ ಪ್ರಾಮುಖ್ಯತೆಯನ್ನು ಪಡೆದುಕೊಂಡಿದೆ. ಅಲ್ಲದೆ ಮುಂದಿನ ಕುಟುಂಬಕ್ಕೆ ನಾಂದಿಯಾಗಿ ಪ್ರತಿಯೊಂದು ಕುಟುಂಬದ ಪೀಳಿಗೆಯನ್ನು ಮುಂದುವರೆಸಿಕೊಂಡು ಹೋಗುವ ಸಾಧನವಾಗಿ ಕಾರ್ಯ ನಿರ್ವಹಿಸುತ್ತದೆ. ನಾಗರಿಕತೆಯ ವಿಕಾಸದ ವಿವಿಧ ಹಂತಗಳಲ್ಲಿ ಮತ್ತು ವಿವಿಧ ಜನಾಂಗೀಯ ಜನ ಸಮುದಾಯಗಳಲ್ಲಿ ವಿವಾಹದ ವಿಧಿ ವಿಧಾನಗಳಲ್ಲಿ ಅನೇಕ ಬಗೆಯ ಭಿನ್ನತೆಗಳಿರುವುದು ಕಂಡುಬರುತ್ತದೆ. ಅಲ್ಲದೆ ಅನೇಕ ರೀತಿಯ ಮನೋರಂಜನೆಯ ಅಂಶಗಳನ್ನು ಕೂಡಾ ಒಳಗೊಂಡಿರುತ್ತದೆ.

'ವಿವಾಹ' ಎಂಬ ಪದವು ಸಂಸ್ಕೃತ ಭಾಷೆಯ ಶಬ್ದವಾಗಿದೆ. ಇದು 'ವಿ' ಮತ್ತು 'ವಾಹ' ಎಂಬ ಎರಡು ಶಬ್ದಗಳ ಸಂಯೋಗವಾಗಿರುತ್ತದೆ. 'ವಿ' ಹೋಗು, 'ವಾಹ' ಹೊತ್ತು, ಹೊತ್ತುಕೊಂಡು ಹೋಗು ಎಂದು ಅರ್ಥೈಸಲಾಗುತ್ತದೆ. ಅಂದರೆ ಹೆಣ್ಣಿನ ಮನೆಯಿಂದ ಗಂಡ ನಾದವನು ವಿವಾಹವಾದ ಮೇಲೆ ತನ್ನ ಮನೆಗೆ ಕರೆದುಕೊಂಡು ಹೋಗುವುದರ ಹಿನ್ನೆಲೆಯನ್ನು ಸೂಚಿಸಬಹುದು. ಇಲ್ಲವೇ ವಿವಾಹಿತ ಹೆಣ್ಣು ಶಾಶ್ವತವಾಗಿ ತಾನು ಹುಟ್ಟಿದ ಮನೆ ಕಳೆದುಕೊಳ್ಳುವ ಸನ್ನಿವೇಶವನ್ನು ಹೊಂದಿದೆ.

ಭಾರತೀಯ ಸಮಾಜದಲ್ಲಿ ವಿವಾಹವು ಕೇವಲ ಸಾಮಾಜಿಕ ಒಪ್ಪಂದವಾಗಿರದೆ, ಧಾರ್ಮಿಕ ಸಂಸ್ಕಾರವಾಗಿದೆ. ಅದು ನಮ್ಮಲ್ಲಿಯ ವಿವಾಹ ಸಂದರ್ಭದ ಆಚರಣೆಗಳಲ್ಲಿಯೇ ಕಂಡುಬರುತ್ತದೆ. ಅದು ಪುರುಷ ಮತ್ತು ಸ್ತ್ರೀಯರ ನಡುವೆ ಬಹಳ ಮಟ್ಟಿಗೆ ಶಾಶ್ವತವಾದ ವೈವಾಹಿಕ ಬಾಂಧವ್ಯವನ್ನು ಉಂಟುಮಾಡುವುದನ್ನು ನಾವು ಕಾಣುತ್ತೇವೆ. ನಮ್ಮಲ್ಲಿ ವಿವಾಹವು ಕೇವಲ ಕಾಮ ತೃಷೆಯನ್ನು

ನೀಗಿಸುವ ಕಾರ್ಯವಾಗಿರದೆ ಆಧ್ಯಾತ್ಮಿಕ ಧ್ಯೆಯ ಸಾಧನೆಯ ಹಾದಿಯಾಗಿ ಕಂಡುಬರುತ್ತದೆ. ಅದು ವೈಯುಕ್ತಿಕ ಕಾರ್ಯವಾಗಿರದೆ ಸಾಮಾಜಿಕ ಮಹತ್ವವುಳ್ಳದ್ದಾಗಿರುವುದನ್ನು ನಾವು ನೋಡುತ್ತೇವೆ.

"ಸ್ತ್ರೀ-ಪುರುಷರಲ್ಲಿಯ ಈ ಲೈಂಗಿಕ ಆಕರ್ಷಣೆಯ ಉದ್ದೇಶ ಕೇವಲ ಸಂತಾನಾಭಿವೃದ್ಧಿಗೆ ಮಾತ್ರ ಸೀಮಿತವಾಗಿಲ್ಲ. ನಿಸರ್ಗದ ಈ ನಿಯಮವನ್ನು ಸಾಕಷ್ಟು ಉಪಯೋಗಿಸಿ ಮಾನವ ಕುಲದ ಧ್ಯೇಯೋದ್ದೇಶಗಳನ್ನು ತಿಳಿದುಕೊಂಡು ಸರ್ವೋತ್ಕೃಷ್ಟವೂ ಆದ ಸಾಮಾಜಿಕ ಜೀವನವನ್ನು ರೂಪಿಸಬೇಕೆಂಬುದೇ ಪ್ರಕೃತಿಯ ಉದ್ದೇಶ. ಅದಕ್ಕಾಗಿ ಸ್ತ್ರೀ ಪುರುಷರಲ್ಲಿ ಜೀವನ ಪರ್ಯಂತ ನೆಲೆ ನಿಲ್ಲಬಲ್ಲ ಮೈತ್ರಿ ಸಂಬಂಧ, ವಿಶ್ವಾಸ ನಂಬಿಕೆ, ಆತ್ಮೀಯತೆ, ಅವಲಂಬನೆ ಮತ್ತು ಸಹಕಾರವನ್ನು ಉಂಟು ಮಾಡುವುದೇ ನಿಸರ್ಗದ ಗುರಿ. ಈ ಗುರಿಯ ಸಾಧನೆಗಾಗಿ ಹಾಗೂ ಮನುಕುಲದ ಮುಂದುವರಿಕೆಗಾಗಿ 'ವಿವಾಹ'ವೆಂಬ ಸಾಮಾಜಿಕ ಸಂಸ್ಥೆ ಹುಟ್ಟಿಕೊಂಡಿದೆ" (ಸರಗಣಾಚಾರಿ ಎಸ್.ಎಸ್:೧೯೯೯:೧-೨) ಎಂಬ ಮಾತು ಭಾರತೀಯ ಸಾಮಾಜಿಕ ವ್ಯವಸ್ಥೆಗೆ ಒಪ್ಪುತ್ತದೆ. ಅದು ಗಂಡು ಮತ್ತು ಹೆಣ್ಣಿನ ನಡುವೆ ಮದುವೆ ನಂತರ ಮುಕ್ತ ಮನಸ್ಸನ್ನು ರೂಪಿಸಿ ಲೈಂಗಿಕ, ಕೌಟುಂಬಿಕ ಸಂಬಂಧಗಳನ್ನು ಗಟ್ಟಿಗೊಳಿಸುತ್ತದೆ.

೮.೧. ವಿವಾಹದ ವಿಧಿ-ವಿಧಾನಗಳು

ಘಿಸಾಡಿ ಸಮುದಾಯದಲ್ಲಿ ವಿವಾಹವು ಮಾತುಕತೆಯ ಪ್ರಕಾರ ಹೆಣ್ಣಿನ ಮನೆಯಲ್ಲಾದರೂ ಮಾಡಬಹುದು, ಇಲ್ಲವೇ ಗಂಡಿನ ಮನೆಯಲ್ಲಾದರೂ ಮಾಡಬಹುದು. ಇವರಲ್ಲಿ ಮದುವೆಗೆ ಸಂಬಂಧಿಸಿದಂತೆ ತುಂಬಾ ವಿಶಿಷ್ಟವಾದ ವಿಧಿ-ವಿಧಾನಗಳು ಮತ್ತು ಆಚರಣೆಗಳು ಇವೆ. ಪೂರ್ವ ಕಾಲದಲ್ಲಿ ನಿರಂತರ ಅಲೆಮಾರಿಗಳಾಗಿದ್ದ ಇವರು, ಕೆಲವು ಸಂದರ್ಭಗಳಲ್ಲಿ ಅಲೆಮಾರಿ ಗುಂಪಿನ ಅನೇಕ ತಂಡಗಳು ನಿರ್ದಿಷ್ಟ ಸ್ಥಳಗಳಲ್ಲಿ ನೆಲೆಸುತ್ತಿದ್ದವು. ಹೀಗೆ ಈ ತಂಡಗಳು ಪರಸ್ಪರ ಕೂಡಿದಾಗ ಮಾತ್ರ ತಮ್ಮ ಮಕ್ಕಳ ಮದುವೆ ಮುಂಜಿ ಮೊದಲಾದ ಕಾರ್ಯಗಳನ್ನು ನೆರವೇರಿಸುತ್ತಿದ್ದರು. ಅವರ ಈ ಕಾರ್ಯಗಳಿಗೆ ಬೆಳದಿಂಗಳ ರಾತ್ರಿ ತುಂಬಾ ಪ್ರಶಸ್ತವಾದ ಕಾಲ. ಅವರ ಬಹುತೇಕ ಕಾರ್ಯಗಳು ರಾತ್ರಿಯಲ್ಲಿಯೇ ಜರುಗುತ್ತಿದ್ದವು. ಘಿಸಾಡಿ ಸಮುದಾಯದ ಮದುವೆ ಒಂದೇ ದಿನದಲ್ಲಿ ಮುಗಿಯುವ ಸಮಾರಂಭವಲ್ಲ. ಕನಿಷ್ಠ ಪಕ್ಷ ೫-೬ ದಿನಗಳಾದರೂ ಬೇಕು. ಆದರೆ ಇತ್ತೀಚಿನ ದಿನಗಳಲ್ಲಿ ಇವರಲ್ಲಿಯೂ ಸಹ ೧ ಅಥವಾ ೨ ದಿನಗಳಲ್ಲಿ ಮದುವೆ ಸಂಭ್ರಮದ ಕಾರ್ಯ ಮುಗಿದು ಹೋಗುತ್ತದೆ.

೮. ಹಂದರ ಹಾಕುವುದು (ಮದುವೆ ಚಪ್ಪರ)

ಸಾಮಾನ್ಯವಾಗಿ ಗ್ರಾಮೀಣ ಪ್ರದೇಶದಲ್ಲಿ ನೆಲೆಸಿರುವಂತಹ ಘಿಸಾಡಿ ಸಮುದಾಯದ ಕುಟುಂಬಗಳಲ್ಲಿ ಮದುವೆ ಕಾರ್ಯ ನೆರವೇರುತ್ತಿದ್ದರೆ ಅವರ ಮನೆಯ ಅಂಗಳದ ಮುಂದೆ ಹಸಿರು ಎಲೆಗಳಿಂದ ತುಂಬಿದ ದೊಡ್ಡದಾದ ಮದುವೆ ಚಪ್ಪರವನ್ನು ಹಾಕುತ್ತಾರೆ. ಆ ದೊಡ್ಡಚಪ್ಪರದಲ್ಲಿ

ನಾಲ್ಕು ಕಂಬಗಳಿಂದ ತುಂಬಿದ ಇನ್ನೊಂದು ಚಿಕ್ಕ ಹಂದರವನ್ನು ಹಾಕುತ್ತಾರೆ. ಈ ಚಿಕ್ಕ ಹಂದರದ ನಾಲ್ಕು ಕಂಬಗಳಿಗೆ ಸುಣ್ಣ, ಜಾಜಿ, ಅರಿಶಿಣ, ಕುಂಕುಮ, ವಿಭೂತಿಗಳಿಂದ ಚಿತ್ರ ಬಿಡಿಸಿರುತ್ತಾರೆ. ಹಾಗೆ ನಾಲ್ಕು ಕಂಬಗಳಿಗೆ ಪ್ರತಿಯೊಂದಕ್ಕೆ ಒಂದರಂತೆ ಪ್ರಣತಿಯ ದೀಪವನ್ನು ಕಟ್ಟಿರುತ್ತಾರೆ. ಈ ದೀಪಗಳು ಗಾಳಿಗೆ ನಂದದಂತೆ ಅಗಲವಾದ ಎಲೆಯ ಪತ್ರೋಳಿಗಳಿಂದ ರಕ್ಷಣೆ ಕಟ್ಟುತ್ತಾರೆ. ಮಾವಿನ ಎಲೆಗಳಿಂದ ಹಾಗೂ ಬಾಳೆಗೊನೆಯ ಕಂಬಗಳನ್ನು ಕಟ್ಟಿ ಇಡೀ ಚಪ್ಪರವನ್ನು ಶೃಂಗರಿಸುತ್ತಾರೆ. ಆದರೆ ನಗರ ಮತ್ತು ಪಟ್ಟಣ ಪ್ರದೇಶಗಳಲ್ಲಿನ ಫಿಸಾಡಿ ಜನರು ಈ ನಾಲ್ಕು ಕಂಬಗಳಿಂದ ಮಾಡಿದ ಚಿಕ್ಕ ಚಪ್ಪರವನ್ನು ಮಾತ್ರ ಹಾಕುತ್ತಾರೆ. ಉಳಿದಂತೆ ಶಾಮಿಯಾನಗಳಿಂದ ಅಲಂಕರಿಸುತ್ತಾರೆ. ಹಾಗೆ ಒಂದು ಕಡೆ ತಮ್ಮ ಪುಟ್ಟ ಮನೆಯ ಅಂಗಳದ ಭಾಗದಲ್ಲಿ ಹಂದರದ ಕಂಬಕ್ಕೆ ಆಲದ ಹಸಿರು ಕೊಂಬೆಯನ್ನು ನೆಲದಲ್ಲಿ ನೆಟ್ಟಿರುತ್ತಾರೆ. ಇದಕ್ಕೆ ವಿಶೇಷವಾದ ಪೂಜೆ ಪುನಸ್ಕಾರಗಳನ್ನು ಕೂಡಾ ಮಾಡುತ್ತಾರೆ. ಮದುವೆಯಾದ ಬಳಿಕ ಚಪ್ಪರ ಇಳಿಸಿದರೂ ಈ ಆಲದ ಕೊಂಬೆ ಕೆಲವು ದಿನಗಳವರೆಗಾದರೂ ಹಸಿರಿನಿಂದ ತಂಪು ಶಾಂತಿ ತರಲೆಂದು ಹಾಗೇ ಬಿಡುತ್ತಾರೆ.

ಈ ನಾಲ್ಕು ಕಂಬಗಳಿಂದ ಮಾಡಿದ ಹಂದರದಲ್ಲಿಯೇ ಮದುಮಕ್ಕಳಿಗೆ ನೀರು ಹಾಕುವುದು, ಅರಿಶಿಣ ಹಚ್ಚುವ ಕಾರ್ಯ ನೆರವೇರುತ್ತದೆ. ಸಾಮಾನ್ಯವಾಗಿ ಈ ಹಂದರವು ಮದುವೆಯ ನಿಗದಿತ ದಿನಕ್ಕಿಂತ, ಒಂದು ದಿನ ಮೊದಲು ಹಾಕುತ್ತಾರೆ. ಅಂದಿನಿಂದ ಹಂದರ ಇಳಿಸುವವರೆಗೆ ಸುಮಾರು ಐದು ಅಥವಾ ಒಂಬತ್ತು ದಿನಗಳವರೆಗೂ ಹಂದರಕ್ಕೆ ನೈವೇದ್ಯ ಹಿಡಿದು ಪೂಜೆ ಸಲ್ಲಿಸುತ್ತಾರೆ.

ಈ ಹಸಿರು ತಪ್ಪಲಿನ ಮದುವೆಯ ಚಪ್ಪರವು ಮದುವೆ ಇದ್ದವರ ಮನೆಯ ಸೌಂದರ್ಯವನ್ನು ಹೆಚ್ಚಿಸಿ, ಹಸಿರು ಬಣ್ಣದ ಎಲೆಗಳು ಬೀಸುವ ಗಾಳಿಗೆ ಅಲುಗಾಡುತ್ತಾ ಬರುವವರಿಗೆ ಸ್ವಾಗತವನ್ನು ಬಯಸುತ್ತವೆ.

ಆ. ಮದುಮಗ ಅಥವಾ ಮದುಮಗಳನ್ನು ಕರೆಯಿಸುವುದು

ಮದುವೆ ಕಾರ್ಯ ಇಟ್ಟುಕೊಂಡವರು ಮದುಮಗನನ್ನು ಅಥವಾ ಮದುಮಗಳನ್ನು ಒಂದು ದಿನ ಮುಂಚಿತವಾಗಿ ಕರೆದುಕೊಂಡು ಬರಲು ಹೋಗುತ್ತಾರೆ. ಕರೆದುಕೊಂಡು ಬಂದ ಮೇಲೆ ಊರಿನ ಆಂಜನೇಯನ ದೇವಸ್ಥಾನದಲ್ಲಿ ಕುಳಿತುಕೊಳ್ಳುತ್ತಾರೆ. ಆಮೇಲೆ ಸಾಯಂಕಾಲ ಬಾಜಾ ಭಜಂತ್ರಿಗಳಿಂದ ಬೀಗರನ್ನು ಕರೆಯಲು ಬರುತ್ತಾರೆ. ಮೊದಲು ಮದುಮಗನಿಗೆ ಅಥವಾ ಮದುಮಗಳಿಗೆ ಕಳಸದಿಂದ ಆರತಿ ಬೆಳಗಿ ಸಾಂಪ್ರದಾಯಿಕ ಹಾಡುಗಳ್ನು ಹಾಡಿ ಕರೆದುಕೊಂಡು ಹೋಗುವಾಗ ದಾರಿಯಲ್ಲಿ ಮೆರವಣಿಗೆ ಮಾಡುತ್ತಾರೆ. ಹೆಣ್ಣು-ಗಂಡು ಎಂಬ ಭೇದ-ಭಾವವಿಲ್ಲದೆ ಎಲ್ಲರೂ ಕುಣಿಯುತ್ತಾ ಮದುಮಗನನ್ನು ಅಥವಾ ಮದುಮಗಳನ್ನು ಮನೆಗೆ ಕರೆದುಕೊಂಡು ಬರುತ್ತಾರೆ. ಮನೆಗೆ ಬಂದ ಬಳಿಕ ಒಂದು ತೆಂಗಿನಕಾಯಿಯನ್ನು ಒಡೆಯುತ್ತಾರೆ. ಕಳಸದ ಆರತಿಯನ್ನು ಬೆಳಗಿ ಮನೆಯೊಳಕ್ಕೆ ಸ್ವಾಗತಿಸುತ್ತಾರೆ. ಮದುವೆಯನ್ನು ಮಂದಿರಲ್ಲಿ ಇಟ್ಟುಕೊಂಡಿದ್ದರೆ

ಅಲ್ಲಿಯೇ ಇದ್ದು, ಒಂದು ದಿನದಲ್ಲಿ ಮದುವೆ ಕಾರ್ಯಕ್ರಮ ಮುಗಿಸಿಕೊಂಡು ತಮ್ಮ ಮನೆಗಳಿಗೆ ತೆರಳುವರು.

ಇ. ಹಸಿರು ಬಳೆ ತೊಡಿಸುವ ಕಾರ್ಯ

ಮದುಮಗ ಅಥವಾ ಮದುಮಗಳು ಮನೆಗೆ ಬಂದ ಬಳಿಕ ಅಂದು ರಾತ್ರಿ ಎಲ್ಲರ ಊಟ ಮುಗಿದ ಮೇಲೆ ಮದುಮಗಳಿಗೆ ಹಸಿರು ಬಳೆ ತೊಡಿಸುವ ಕಾರ್ಯಕ್ರಮ ನೆರವೇರಿಸುತ್ತಾರೆ. ಹಸಿರು ಬಳೆಯು ಮುತ್ತೈದೆ ಹೆಣ್ಣುಮಕ್ಕಳಿಗೆ ಮುತ್ತೈದೆತನ ಗಟ್ಟಿಗೊಳಿಸಿ ಸೌಂದರ್ಯವನ್ನು ಹೆಚ್ಚಿಸುತ್ತದೆ ಎಂಬುದು ಫಿಸಾಡಿ ಜನರ ಅಭಿಪ್ರಾಯವಾಗಿದೆ. ಮೊದಲು ಮದುಮಗಳ ಬಲಗೈಗೆ ಇಪ್ಪತ್ತೊಂದು, ಎಡಗೈಗೆ ಹತ್ತೊಂಬತ್ತು ಹಸಿರು ಬಳೆಗಳನ್ನು ತೊಡಿಸಿದ ಬಳಿಕ, ಉಳಿದ ಮುತ್ತೈದೆಯರಿಗೆ ಕನಿಷ್ಟ ಐದು ಹಸಿರು ಬಳೆಗಳನ್ನು ಹಾಕಿಸಬೇಕಾಗುತ್ತದೆ. ಕೆಲವೊಂದು ಮಹಿಳೆಯರು ಇಷ್ಟ ಪಟ್ಟರೆ ಹೆಚ್ಚಾಗಿ ಬಳೆಗಳನ್ನು ಹಾಕಿಸಿಕೊಳ್ಳಬಹುದು. ಈ ಹಸಿರು ಬಳೆ ಹಾಕಿಸಿಕೊಳ್ಳುವ ಸಂಸ್ಕೃತಿ ಇಂದಿಗೂ ಕಟ್ಟುನಿಟ್ಟಾಗಿ ಆಚರಣೆಯಲ್ಲಿರುವುದು ಕಂಡುಬರುತ್ತದೆ. ಹಸಿರು ಬಣ್ಣವು ಶಾಂತಿ ಸಮೃದ್ಧಿಯನ್ನು ಸೂಚಿಸುವುದಾಗಿದೆ.

ಈ. ಕಲಿಗಲ್ಲು ಪೂಜೆ

ಹಸಿರು ಬಳೆ ಹಾಕಿಸಿಕೊಳ್ಳುವ ಕಾರ್ಯಕ್ರಮ ಮುಗಿದ ಬಳಿಕ ಈ ಕಲಿಗಲ್ಲು ಪೂಜೆ ಕಾರ್ಯ ಪ್ರಾರಂಭವಾಗುತ್ತದೆ. ಮೊದಲು ಶಿಶ್ನದ ಆಕಾರದಲ್ಲಿರುವ ಕುಟ್ಟುವ ಕಲಿಗಲ್ಲಿಗೆ, ಒಂದು ಅರಿಶಿಣದ ಕಂಕಣವನ್ನು ಕಟ್ಟುತಾರೆ. ಆಮೇಲೆ ಯೋನಿ ಆಕಾರದಲ್ಲಿರುವ ತಗ್ಗು ಕಲ್ಲಿಗೆ ಹಾಗೂ ಶಿಶ್ನದ ಆಕಾರದಲ್ಲಿರುವ ಕಲಿಗಲ್ಲಿಗೆ ವಿಭೂತಿ, ಗಂಧ, ಕುಂಕುಮ, ಅರಿಶಿಣ, ದೀಪಗಳನ್ನು ಹಚ್ಚಿ ಆರತಿಯನ್ನು ಬೆಳಗಿ ಪೂಜೆಯನ್ನು ಮಾಡುತ್ತಾರೆ. ಪೂಜೆ ಸಲ್ಲಿಸಿದ ಮೇಲೆ ಐದು ಜನ ಮುತ್ತೈದೆಯರು ಸೇರಿ ಒಬ್ಬರಿಗೊಬ್ಬರು ತಮ್ಮ ಕೈಗಳಿಗೆ ಅರಿಶಿಣದ ಕಂಕಣಗಳನ್ನು ಕಟ್ಟಿಕೊಳ್ಳುತ್ತಾರೆ. ಕಂಕಣವನ್ನು ಕಟ್ಟಿಕೊಂಡ ಮೇಲೆ ಕಲಿಗಲ್ಲಿನಲ್ಲಿ ಅರಿಶಿಣದ ಬೊಟ್ಟುಗಳನ್ನು ಹಾಕಿ, ಐದು ಜನ ಮುತ್ತೈದೆಯರು ಸೇರಿ ಅರಿಷಿಣದ ಬೊಟುಗಳನ್ನು ಕುಟ್ಟಿ ಪುಡಿ ಮಾಡುವರು. ಈ ಸಂದರ್ಭದಲ್ಲಿ ಕುಟ್ಟಿದ ಅರಿಶಿಣದ ಪುಡಿಯನ್ನೇ ಮರುದಿನ ಮುಂಜಾನೆ ಮದುವೆ ಚಪ್ಪರದಲ್ಲಿ ಮದುಮಕ್ಕಳಿಗೆ ಅರಿಶಿಣ ಹಚ್ಚುವ ಕಾರ್ಯವನ್ನಾಗಿ ಮಾಡುತ್ತಾರೆ. ಈ ಯೋನಿ ಮತ್ತು ಶಿಶ್ನದ ಆಕಾರದಲ್ಲಿರುವ ಕಲಿಗಲ್ಲು ಪೂಜೆ ಮತ್ತು ಇದರಲ್ಲಿ ಕುಟ್ಟಿರುವ ಅರಿಶಿಣ ಪುಡಿಯನ್ನು ಮದುಮಕ್ಕಳಿಗೆ ಹಚ್ಚುವುದರ ಸಾಂಸ್ಕೃತಿಕ ಸಂಪ್ರದಾಯವು ಈ ನವ ದಂಪತಿಗಳ ದಾಂಪತ್ಯ ಜೀವನವು ಗಟ್ಟಿಯಾಗಿರಲಿ ಮತ್ತು ಶಾಶ್ವತವಾಗಿರಲಿ ಎಂಬುದರ ಉದ್ದೇಶವಾಗಿದೆ ಎಂಬುದು ಸ್ಪಷ್ಟವಾಗುತ್ತದೆ. ಅಲ್ಲದೆ ಇದನ್ನು ಆಚರಣೆಯ ರೂಪದಲ್ಲಿ ರೂಢಿಗೆ ತಂದಿದ್ದಾರೆ.

ಉ. ಬೀಸುವ ಕಲ್ಲಿನ ಪೂಜೆ

ಕಲಿಗಲ್ಲು ಪೂಜೆ ಕಾರ್ಯಕ್ರಮ ಮುಗಿದ ಬಳಿಕ ಈ ಬೀಸುವ ಕಲ್ಲಿನ ಪೂಜೆ ಮಾಡಿ

ದವಸದಾನ್ಯಗಳನ್ನು ಬೀಸುವ ಕಾರ್ಯಕ್ರಮ ಮಾಡುತ್ತಾರೆ. ಮೊದಲು ಐದು ಜನ ಮುತ್ತೈದೆಯರು ಸೇರಿ ಒಂದು ಮರದಲ್ಲಿ ಸ್ವಲ್ಪ ಅಕ್ಕಿ, ಜೋಳ, ಗೋದಿ, ಬೇಳೆಕಾಳು, ಅರಿಶಿಣದ ಚೂರುಗಳನ್ನು ಮಿಶ್ರಣ ಮಾಡಿ ಸಾಂಪ್ರದಾಯಿಕವಾಗಿ ಬೀಸುವ ಮತ್ತು ಕುಟ್ಟುವ ಪದಗಳನ್ನು ಹಾಡುತ್ತಾ ಬೀಸುತ್ತಾರೆ. ಮರದಲ್ಲಿ ತಂದಿರುವ ಆ ದವಸಧಾನ್ಯಗಳು ಬೀಸುವುದು ಮುಗಿದ ಬಳಿಕ ಐದು ಮುತ್ತೈದೆಯರಿಗೆ ಸೀರೆಯ ಸೆರಗಿನ ಕೊಂಕನು ತೆಗೆದುಕೊಂಡು ತಮ್ಮ ಕೈಯಲ್ಲಿ ಹಿಡಿದುಕೊಂಡು ಬೀಸುವ ಕಲ್ಲಿನ ಕಂಬವನ್ನು ಎಲ್ಲರೂ ಬಿಗಿಯಾಗಿ ಹಿಡಿಯುತ್ತಾರೆ. ಆಗ ಮದುಮಗನ ಮನೆಯವರು ಈ ಮುತ್ತೈದೆಯರಿಗೆ ಕನಿಷ್ಠ ೨೦ ರೂಪಾಯಿಗಳ ಕಾಣಿಕೆ ನೀಡಿದಾಗ ಬೀಸುವ ಕಂಬಕ್ಕೆ ಹಿಡಿದ ಕೈಗಳನ್ನು ಬಿಡುತ್ತಾರೆ. ಆಮೇಲೆ ಒಬ್ಬರಿಗೊಬ್ಬರು ಹಾಸ್ಯ ಒಗಟುಗಳನ್ನು ಹೇಳುತ್ತಾ ಗಂಡನ ಹೆಸರು ಹೇಳುತ್ತಾರೆ. ಕೊನೆಗೆ ಬೀಸಿರುವಂತಹ ದವಸಧಾನ್ಯಗಳನ್ನು ತೆಗೆದುಕೊಂಡು ಹೋಗಿ ದೇವರ ಜಗುಲಿಯ ಮೇಲೆ ಇಡುತ್ತಾರೆ.

ಈ ಬೀಸುವಕಲ್ಲಿನ ಪೂಜೆಯ ಸಂಪ್ರದಾಯವನ್ನು ಸೂಕ್ಷ್ಮವಾಗಿ ವಿವೇಚನೆ ಮಾಡಿದರೆ ನವ ದಂಪತಿಗಳಿಗೆ ತಮ್ಮ ಮುಂದಿನ ಜೀವನದಲ್ಲಿ ಎಂತಹ ಕಠಿಣ ಪ್ರಸಂಗಗಳು ಬಂದರೂ ಈ ಬೀಸುವ ಕಲ್ಲಿನ ಎರಡು ಭಾಗಗಳು ಸದಾ ಒಂದಕ್ಕೊಂದು ಪೂರಕವಾಗಿ ಸಮನಾಗಿ ಕಾರ್ಯ ನಿರ್ವಹಿಸುವ ಹಾಗೆ ನವದಂಪತಿಗಳು ಕೂಡಾ ತಮ್ಮ ಮುಂದಿನ ದಾಂಪತ್ಯ ಜೀವನದಲ್ಲಿ ಹಾಗೂ ಸಂಸಾರದಲ್ಲಿನ ಕಷ್ಟ-ಸುಖಗಳೆರಡನ್ನು ಸಮನಾಗಿ ಹಂಚಿಕೊಂಡು ಉತ್ತಮ ಜೀವನ ಮಾಡುವುದರ ಉದ್ದೇಶ ಒಳಗೊಂಡಿದೆ. ಇದರಿಂದ ಘಿಸಾಡಿ ಸಮುದಾಯದವರು ಪ್ರಕೃತಿಯಲ್ಲಿರುವ ಅನೇಕ ವಸ್ತುಗಳ ಪೂಜಾ ಆರಾಧಕರು ಎಂಬುದನ್ನು ಕೂಡಾ ಕಂಡುಕೊಳ್ಳಬಹುದು.

ಊ. ವಿನೋದ ಕಾರ್ಯಕ್ರಮಗಳು

ಈ ಮೇಲಿನ ಎಲ್ಲ ಕಾರ್ಯಕ್ರಮಗಳು ಮುಗಿದ ಬಳಿಕ ಸಮುದಾಯದಲ್ಲಿನ ಯುವಕರು, ಯುವತಿಯರು, ಸೋದರ ಸೊಸೆ, ಸೋದರ ಮಾವಂದಿರು ಹಾಗೂ ಮುದುಕರು, ವಯಸ್ಕರು, ಸೇರಿ ಹಾಸ್ಯ, ವಿನೋದ ವಿಂಡಬನೆಗಳು, ಒಗಟುಗಳು, ಮೂಕಾಭಿನಯ, ಗಂಡಸರ ವೇಷ-ಭೂಷಣವನ್ನು ಹೆಂಗಸರು, ಹೆಂಗಸರ ವೇಷಭೂಷಣವನ್ನು ಗಂಡಸರು ತೊಟ್ಟು ಪಾತ್ರಗಳನ್ನು, ನೃತ್ಯಗಳನ್ನು ಮಾಡುತ್ತಾರೆ. ಒಟ್ಟಾರೆ ರಾತ್ರಿಯಿಂದ ಬೆಳಗಿನವರೆಗೆ ಹಾಸ್ಯ ಕಾರ್ಯಗಳಲ್ಲಿ ತೊಡಗಿರುತ್ತಾರೆ. ನಿದ್ದೆಯಲ್ಲಿದ್ದ ಕೆಲವು ಜನರನ್ನು ಎಚ್ಚರಗೊಳ್ಳುವಂತೆ ಛೇಡಿಸುತ್ತಾರೆ.

ಋ. ಜನಿವಾರ ಕಾರ್ಯ

ಹಂದರ ಹಾಕುವ ದಿನ ೯ ಎಳೆಯ ಜನಿವಾರವನ್ನು ಮದುಮಗನಿಗೆ ಹಾಕಲಾಗುತ್ತದೆ. ಹಾಗೆಯೇ ಹಂದರ ಇಳಿಸುವ ದಿನ ಜನಿವಾರವನ್ನು ತೆಗೆದುಹಾಕುತ್ತಾರೆ. ಏಕೆಂದರೆ ಇವರು ಮದ್ಯ ಮತ್ತು ಮಾಂಸಾಹಾರಿಗಳಾಗಿರುವುದರಿಂದ ಈ ರೀತಿ ಸಂಪ್ರದಾಯಕ್ಕೆ ಮಾತ್ರ ಜನಿವಾರ ಹಾಕಿಕೊಳ್ಳುತ್ತೇವೆ ಎಂದು ಸಮುದಾಯದವರು ಹೇಳುತ್ತಾರೆ. ಈ ಜನಿವಾರವನ್ನು ಹಾಕಿಕೊಂಡು ಮದ್ಯ ಮತ್ತು ಮಾಂಸಾಹಾರ ಸೇವಿಸುವುದು ಧರ್ಮಬಾಹಿರ ಕೆಲಸವೆಂದು ಇವರ ನಂಬಿಕೆಯಾಗಿದೆ.

೮.೨. ಮದುವೆಯ ಕಾರ್ಯ

ಈ ಮೇಲೆ ವಿವರಿಸಲಾದ ಕಾರ್ಯಗಳೆಲ್ಲವು ಮದುವೆಯ ನಿಗದಿತ ದಿನಕ್ಕಿಂತ ಒಂದು ದಿನ ಮೊದಲು ನಡೆದರೆ ಈ ಮುಂದೆ ವಿವರಿಸುವ ಕಾರ್ಯಗಳು ಮದುವೆಯ ದಿನ ನಡೆಯುತ್ತದೆ.

ಅ. ಹಂದರದಲ್ಲಿ ಎಣ್ಣೆ ಹಚ್ಚಿ ನೀರು ಹಾಕುವ ಕಾರ್ಯ

ನಾಲ್ಕು ಕಂಬಗಳಿಂದ ಜೋಡಿಸಲ್ಪಟ್ಟ ಮದುವೆ ಹಂದರದಲ್ಲಿ ಐದು ಕಂಚಿನ ತಂಬಿಗೆಗಳನ್ನು ಚೌಕಾಕಾರದಲ್ಲಿ ಇಟ್ಟು ಈ ಐದು ಕಂಚಿನ ತಂಬಿಗೆಗಳಿಗೆ ಸೂರಿಗೆ ದಾರಗಳನ್ನು ಸುತ್ತುತ್ತಾರೆ. ಮಧ್ಯದಲ್ಲಿ ಎರಡು ಮಣೆಗಳನ್ನು ಒಂದರ ಪಕ್ಕದಲ್ಲಿ ಇನ್ನೊಂದು ಇಟ್ಟಿರುತ್ತಾರೆ. ಆಗ ಮದುಮಕ್ಕಳು ಕೈ ಹಿಡಿದು ಕರೆತಂದು ಸೂರಿಗೆ ಸುತ್ತಿರುವ ದಾರವನ್ನು ದಾಟಿಸಿ ಒಳಗೆ ಹಾಕಿರುವ ಮಣೆಯ ಮೇಲೆ ಮದುಮಕ್ಕಳನ್ನು ಕುಳಿತುಕೊಳ್ಳಲು ಸೂಚಿಸುತ್ತಾರೆ. ಇವರು ಕುಳಿತುಕೊಂಡ ಮೇಲೆ ಐದು ಜನ ಮುತ್ತೈದೆಯರು ಸೇರಿ ಸಾಂಪ್ರದಾಯಿಕ ಎಣ್ಣೆ ಹಚ್ಚುವ ಹಾಡುಗಳನ್ನು ಹಾಡುತ್ತಾ ಕೊಬ್ಬರಿ ಬಟ್ಟಲಿನಲ್ಲಿರುವ ಎಣ್ಣೆಯನ್ನು ಹಚ್ಚುತ್ತಾರೆ. ಐದು ಗಣಿಕೆ ಕಂಡಿಕೆ ಇರುವ ಜೋಳದ ಕಡ್ಡಿಯ ಒಂದು ತುದಿಗೆ ವೀಳ್ಯದೆಲೆ, ಅರಿಶಿಣದ ಬೊಟ್ಟು, ಚಿಕ್ಕ ಬಿಳಿಬಟ್ಟೆ ಕಟ್ಟಿರುತ್ತಾರೆ. ಈ ಒಂದು ತುದಿಯ ಭಾಗವನ್ನು ಒಳ್ಳೆಣ್ಣೆಯಲ್ಲಿ ಅದ್ದಿ, ಮದುಮಕ್ಕಳಿಗೆ ಎಣ್ಣೆ ಹಚ್ಚುತ್ತಾರೆ. ಕನಿಷ್ಟ ಐದು ಸಾಂಪ್ರದಾಯಿಕ ಹಾಡುಗಳನ್ನು ಹಾಡುವವರೆಗೆ ಎಣ್ಣೆ ಹಚ್ಚುತ್ತಾರೆ. ಬಳಿಕ ವಧುವರರಿಗೆ ನೀರು ಹಾಕಿ ಹಂದರಲ್ಲಿ ಸ್ನಾನ ಮಾಡಿಸುತ್ತಾರೆ. ಈ ನೀರು ಹಾಕುವ ಕಾರ್ಯ ಮುಗಿದ ಕೂಡಲೆ ವಧುವರರ ಮೈಕೈಗಳನ್ನು ಒಣ ಬಟ್ಟೆಯಿಂದ ಒರೆಸಿ ಹಸಿ ಬಟ್ಟೆಗಳನ್ನು ಬಿಡಿಸಿ, ಹೊಸ ಬಿಳಿ ಬಟ್ಟೆಗಳನ್ನು ತೊಡಲು ಕೊಡುತ್ತಾರೆ. ನಂತರ ದೇವರಿಗೆ ನಮಸ್ಕರಿಸಲು ತಿಳಿಸುತ್ತಾರೆ. ಕೊನೆಯಲ್ಲಿ ಐದು ಜನ ಮುತ್ತೈದೆಯರು ಸೇರಿ ಐದು ತಂಬಿಗೆಗಳಿಗೆ ಸುತ್ತಿರುವ ಸೂರುಗಿ ದಾರವನ್ನು ಬಿಡಿಸಿ ಆ ಸೂರಿಗೆ ದಾರವನ್ನು ಐದು ಸಲ ಮೇಲೆ ಕೆಳಗೆ ಮಾಡಿ ಮಡಚಿ ತೆಗೆಯುತ್ತಾರೆ.

ಆ. ಅರಿಶಿಣ ಹಚ್ಚುವ ಕಾರ್ಯ

ಹಂದರದಲ್ಲಿ ನೀರು ಹಾಕಿ ಹೊಸ ಬಿಳಿ ಬಟ್ಟೆಗಳನ್ನು ತೊಡಿಸಿ ದೇವರಿಗೆ ನಮಸ್ಕರಿಸಿದ ಮೇಲೆ ತಮ್ಮ ಮನೆಯ ಅಂಗಳದ ಒಂದು ಅನುಕೂಲವಾದ ಸ್ಥಳದಲ್ಲಿ, ಒಂದು ಹೊಸ ಜಮಖಾನೆಯನ್ನು ಹಾಸುತ್ತಾರೆ. ಆ ಜಮಖಾನೆಯ ಮೇಲೆ ಕುಂಕುಮವನ್ನು ಕಲಬೆರಿಸಿದ ಅಕ್ಕಿ ಕಾಳುಗಳಿಂದ, ಎರಡು ಹಸಿಗೆಗಳ ಚಿತ್ರವನ್ನು ಬಿಡಿಸುತ್ತಾರೆ. ಈ ಹಸಿಗೆ ಕಟ್ಟೆಯ ನಾಲ್ಕು ಮೂಲೆಗಳ ಮೇಲೆ ಉತ್ತತ್ತಿ ಅಡಿಕೆ, ಅರಿಶಿಣದ ಬೊಟ್ಟು, ತುಂಬಿದ ಕೊಬ್ಬರಿಗಳನ್ನು ಇಡುತ್ತಾರೆ. ಆಮೇಲೆ ವಧುವರರಿಗೆ ಕರೆಯಿಸಿ ಹಸಿಗೆ ಕಟ್ಟೆಯ ಮೇಲೆ ಇಬ್ಬರೂ ಕುಳಿತುಕೊಳ್ಳಲು ಸೂಚಿಸುತ್ತಾರೆ. ಇವರು ಕುಳಿತುಕೊಂಡ ಮೇಲೆ ಎರಡು ಕಡೆಯ ಬಂಧುಬಳಗದವರು ನೀರಿನಲ್ಲಿ ಮಿಶ್ರಣ ಮಾಡಿದ ಅರಿಶಿಣದ ಪುಡಿಯನ್ನು ವಧು-ವರರ ಕೈಕಾಲು, ಮುಖಗಳಿಗೆ ಹಚ್ಚುತ್ತಾರೆ. ಚಿಕ್ಕ ಮಕ್ಕಳು ವಧು-

ವರರಿಗೆ ತಮಾಷೆ ಮಾಡುತ್ತಿರುತ್ತಾರೆ. ಈ ಅರಿಶಿಣ ಹಚ್ಚುವ ಕಾರ್ಯಕ್ರಮ ಮುಗಿದ ಬಳಿಕ ವಧುವರರಿಬ್ಬರು ಕೈಕಾಲು ಮುಖಗಳನ್ನು ತೊಳೆದುಕೊಂಡು ಬಾಸಿಂಗವನ್ನು ಕಟ್ಟಿಕೊಂಡು ಮುಂದಿನ ತಾಳಿ ಕಾರ್ಯಕ್ಕೆ ಸಿದ್ಧರಾಗುತ್ತಾರೆ.

ಇ. ಕುಂಬಾರನ ಮನೆಯಿಂದ ಹೊಸ ಗಡಿಗೆ ಮಡಿಕೆಗಳು ತರುವ ಕಾರ್ಯ

ಮದುಮಕ್ಕಳಿಗೆ ಅರಿಶಿಣ ಹಚ್ಚುವ ಕಾರ್ಯ ಮುಗಿದ ಬಳಿಕ, ಗಂಡಿನ ಕಡೆಯ ಬಳಗದವರು ಹೆಣ್ಣಿನ ಕಡೆಯ ಜೋಡಿ ದಂಪತಿಗಳಿಗೆ ಹೆಣ್ಣಿನ ಕಡೆಯ ಬಳಗದವರಿಗೆ ಹಾಗೂ ಗಂಡಿನ ಕಡೆಯ ಜೋಡಿ ದಂಪತಿಗಳಿಗೆ ಹೊಸ ಬಟ್ಟೆಗಳನ್ನು ಆಯಾರಿ ಮಾಡುತ್ತಾರೆ. ಗಂಡಸರು ಬಿಳಿಯ ಬಟ್ಟೆಗಳನ್ನು ತೊಡಬೇಕೆಂಬ ಕಡ್ಡಾಯ ನಿಯಮವಿರುವುದರಿಂದ, ಎರಡು ಕಡೆಯ ಗಂಡಸರು ಬಿಳಿಯ ಬಟ್ಟೆಗಳನ್ನು ಆಯಾರಿಯನ್ನೇ ತೊಡುತ್ತಾರೆ. ಈ ಬಿಳಿಯ ಬಟ್ಟೆ ಹಾಕುವುದರ ಉದ್ದೇಶ ಎರಡು ಹೊಸ ಕುಟುಂಬಗಳ ಸಂಬಂಧವು ಯಾವುದೇ ಕಲ್ಮಶವಿಲ್ಲದೆ ಶುದ್ಧವಾದ ಹಾಲಿನಂತೆ ಶಾಶ್ವತವಾಗಿರಲಿ ಎಂಬ ಅಂಶವನ್ನು ಒಳಗೊಂಡಿದೆ ಎಂಬುದು ಸ್ಪಷ್ಟವಾಗುತ್ತದೆ.

ಈ ಹೊಸ ಬಿಳಿ ಬಟ್ಟೆಗಳನ್ನು ತೊಟ್ಟು ಎರಡು ಕಡೆಯ ಬಂಧುಬಳಗವರು ಕೂಡಿಕೊಂಡು ಕುಂಬಾರನ ಮನೆಗೆ ವಾದ್ಯಗೋಷ್ಠಿಯೊಂದಿಗೆ, ಮೆರವಣಿಗೆಯ ಮೂಲಕ ೯ ಅಥವಾ ೨೪ ಹೊಸ ದೊಡ್ಡ ಮತ್ತು ಚಿಕ್ಕ ಮಡಿಕೆಗಳನ್ನು ತರಲು ಹೋಗುತ್ತಾರೆ. ಕುಂಬಾರರು ಈ ಫಿಸಾಡಿ ಸಮುದಾಯದವರು ಹೇಳಿದಷ್ಟು ಗಡಿಗೆ, ಮಡಿಕೆಗಳಿಗೆ ಬಣ್ಣಗಳಿಂದ ಅಲಂಕರಿಸಿ ಅದರ ಮೇಲೆ ಚಿತ್ರಗಳನ್ನು ಬರೆದಿರುತ್ತಾನೆ. ಹೀಗೆ ಬರೆದ ಮಡಿಕೆಗಳಿಗೆ ಪ್ರತಿಯೊಂದಕ್ಕೂ ಅರಿಶಿಣದ ಕಂಕಣವನ್ನು ಕಟ್ಟಿ, ದೂಪ ದೀಪಗಳನ್ನು ಹಚ್ಚಿ ಇಟ್ಟಿರುತ್ತಾನೆ. ಮೆರವಣಿಗೆಯಲ್ಲಿ ಹೋದಂತಹ ಈ ಸಮುದಾಯವು ಕುಂಬಾರನಿಗೆ ಸೀರೆ, ಕುಪ್ಪಸ, ಕಾಯಿ, ಕರ್ಪೂರ, ಹೂವು, ಅಕ್ಕಿ, ಕೈಯಲ್ಲಾದಷ್ಟು ಕಾಸನ್ನು ಕಾಣಿಕೆಯಾಗಿ ನೀಡಿ ಈ ಹೊಸ ಮಡಿಕೆಗಳನ್ನು ಪೂಜಿಸಿ ತರುತ್ತಾರೆ.

ಈ. ಗಂಗೆ ಪೂಜೆ ಮಾಡಿ ನೀರು ತರುವುದು

ಕುಂಬಾರನ ಮನೆಯಿಂದ ತಂದ ಹೊಸ ಮಡಿಕೆಗಳನ್ನು ತಲೆಯ ಮೇಲೆ ಹೊತ್ತು ಅಥವಾ ಹೆಗಲಮೇಲೆ ಹೊತ್ತುಕೊಂಡು ವಾದ್ಯದೊಂದಿಗೆ ಗಂಗೆ ಪೂಜೆ ಮಾಡಿ ನೀರು ತರಲು ಗಂಗಾಸ್ಥಳಕ್ಕೆ ಹೋಗುತ್ತಾರೆ. ಬಾವಿ, ಹಳ, ಕೊಳ್ಳ ಗಂಗಾಸ್ಥಳಕ್ಕೆ ತಲುಪಿದ ಮೇಲೆ ಬಾವಿಯ ದಡದಲ್ಲಿ ೫ ಚಿಕ್ಕ ಕಲ್ಲುಗಳನ್ನಿಟ್ಟು ಅವುಗಳಿಗೆ ವಿಭೂತಿ, ಕುಂಕುಮ, ಹೂವು, ದೂಪ-ದೀಪಗಳಿಂದ ಪೂಜಿಸಿ ನೈವೇದ್ಯವನ್ನು ಸಲ್ಲಿಸಿ ಗಂಗಾ ಜಲದಲ್ಲಿ ಒಂದು ನೈವೇದ್ಯ ತೇಲಿ ಬಿಡುತ್ತಾರೆ. ಹಾಗೆಯೇ ಒಂದು ಅಥವಾ ಎರಡು ಮಡಿಕೆಗಳನ್ನು ಅಲ್ಲಿಯೇ ಬಿಡುತ್ತಾರೆ.

ಆಮೇಲೆ ಕನಿಷ್ಟ ಎರಡು ಗಡಿಗೆಗಳಲ್ಲಿ ನೀರು ತುಂಬಿಕೊಂಡು ಮೆರವಣಿಗೆಯ ಮೂಲಕ ಮದುವೆ ಮನೆಗೆ ಬಂದು ಸೇರುತ್ತಾರೆ. ನೀರು ತುಂಬಿರುವ ಗಡಿಗೆ ಮಡಿಕೆಗಳು ದೇವರ ಜಗುಲಿಯ ಪಕ್ಕದಲ್ಲಿ ಇಡುತ್ತಾರೆ.

ಮಾನವನಿಗೆ ನೀರು ಅವಶ್ಯಕವಾದ ಮೂಲಭೂತ ವಸ್ತುವಾಗಿರುವುದರಿಂದ ಸಾಮಾನ್ಯವಾಗಿ ಯಾವುದೇ ಸಮುದಾಯಗಳಲ್ಲಿ ನಡೆಯುವ ಸಣ್ಣಪುಟ್ಟ ಕಾರ್ಯಕ್ರಮಗಳಿಂದ ಹಿಡಿದು ದೊಡ್ಡ ಕಾರ್ಯಕ್ರಮಗಳಲ್ಲಿ ಗಂಗೆ ಪೂಜೆ ನಡೆದುಕೊಂಡು ಬಂದಿರುವುದು ನಾವು ಕಂಡುಕೊಳ್ಳುತ್ತೇವೆ. ಅಂತೆಯೇ ನೀರು ಪವಿತ್ರವಾದ ಈ ಪ್ರಕೃತಿಯ ಕೊಡುಗೆಯಾಗಿದೆ. ಆದ್ದರಿಂದ ಈ ಸಮುದಾಯದಲ್ಲಿ ಕೂಡಾ ನೀರಿಗೆ ಪ್ರಮುಖವಾದ ಮಹತ್ವ ನೀಡಿರುವುದು ಕಂಡುಬರುತ್ತದೆ.

ಉ. ತಾಳಿ ಕಾರ್ಯ

ಘಿಸಾಡಿ ಸಮುದಾಯದಲ್ಲಿ ತಾಳಿ ಕಾರ್ಯ ನೆರವೇರಿಸಲು ಬ್ರಾಹ್ಮಣ ಪುರೋಹಿತನನ್ನು ಕರೆಸುವ ಸಂಪ್ರದಾಯ ರೂಢಿಯಲ್ಲಿದೆ. ಈ ಮೊದಲೇ ಬ್ರಾಹ್ಮಣ ಪುರೋಹಿತನಿಗೆ ಮದುವೆಯ ದಿನಾಂಕ ಹಾಗೂ ಸಮಯವನ್ನು ಗೊತ್ತುಪಡಿಸಿರುತ್ತಾರೆ. ಅಂದು ಮದುವೆ ಕಾರ್ಯ ನೆರವೆರಿಸುವ ಮನೆಯಲ್ಲಿನ ಯಾರಾದರೊಬ್ಬರು ಹೋಗಿ ಬ್ರಾಹ್ಮಣ ಪುರೋಹಿತನನ್ನು ಕರೆದುಕೊಂಡು ಬರುತ್ತಾನೆ.

ಪುರೋಹಿತನು ಬಂದ ಮೇಲೆ ಅನುಕೂಲವಾಗುವ ಮನೆಯಲ್ಲಿನ ಅಂಗಳದಲ್ಲಿ ಒಂದು ಹೊಸ ಜಮಖಾನೆಯನ್ನು ಹಾಸುತ್ತಾರೆ. ಇಲ್ಲವೆ ಮದುವೆ ಕಾರ್ಯ ಮಂದಿರಗಳಲ್ಲಿ ನೆರವೇರುತ್ತಿದ್ದರೆ, ಅಲ್ಲೂ ಕೂಡಾ ಒಂದು ಸ್ಥಳ ಆಯ್ಕೆ ಮಾಡಿಕೊಂಡು ಜಮಖಾನೆ ಹಾಸುತ್ತಾರೆ. ಈ ಜಮಖಾನೆಯ ಮೇಲೆ ಬ್ರಾಹ್ಮಣ ಪುರೋಹಿತನು ಅಕ್ಕಿಕಾಳುಗಳಿಂದ ಎರಡು ಹಸಿಗೆ ಚಿತ್ರಗಳನ್ನು ಬರೆಯುತ್ತಾನೆ. ಈ ಹಸಿಗೆ ಚಿತ್ರಗಳ ಮೇಲೆ ನವಜೋಡಿಗಳನ್ನು ಕೂಡಿಸುತ್ತಾನೆ. ಆಗ ಬ್ರಾಹ್ಮಣನು ಶಾಸ್ತ್ರೋಕ್ತವಾಗಿ ಮಂತ್ರಗಳಿಂದ ವರನಿಂದ ವಧುವಿಗೆ ತಾಳಿ ಕಟ್ಟಿಸುವ ಕಾರ್ಯ ನೇರವೆರಿಸುತ್ತಾನೆ. ಈ ತಾಳಿಕಟ್ಟಿದ ತಕ್ಷಣ ಬಾಜಾ ಭಜಂತ್ರಿಗಳಿಂದ ಗಟ್ಟಿಮೇಳವನ್ನು ಬಾರಿಸಲಾಗುತ್ತದೆ. ಆಗ ಬಂದಂತಹ ಬಂಧುಬಳಗದವರೆಲ್ಲರೂ ವಧುವರರಿಗೆ ಅಕ್ಷತೆಯನ್ನು ಹಾಕಿ ಆಶೀರ್ವಾದಿಸಿ ಹಾರೈಸುತ್ತಾರೆ. ನಂತರ ಬಂದವರಿಗೆಲ್ಲ ಮದುವೆಯ ಊಟವನ್ನು ಮಾಡಿಸುತ್ತಾರೆ. ಕೊನೆಗೆ ಸಾಯಂಕಾಲ ವಧುವರರನ್ನು ಅಂಜನೇಯನ ದೇವಸ್ಥಾನಕ್ಕೆ ಮೆರವಣಿಗೆಯ ಮುಖಾಂತರ ಕರೆದುಕೊಂಡು ಹೋಗಿ ದೇವರಿಗೆ ಕಾಯಿ-ಹಣ್ಣುಗಳನ್ನು ಅರ್ಪಿಸುತ್ತಾರೆ. ಪುನಃ ಮೆರವಣಿಗೆಯ ಮೂಲಕ ಊರಿನಲ್ಲಿ ವಧುವರರನ್ನು ಕರೆತರುತ್ತಾರೆ. ಹೀಗೆ ದೇವರಿಗೆ ಹೋದವರು ಇನ್ನುಳಿದ ತಮ್ಮ ಕುಲದೈವ ದೇವರುಗಳ ದರ್ಶನವನ್ನು ಕೂಡಾ ಮಾಡಿಕೊಂಡು ಬರುತ್ತಾರೆ.

ಈ ತಾಳಿ ಕಾರ್ಯ ಮುಗಿದ ಬಳಿಕ ವಧುವರರ ತಂದೆ-ತಾಯಿಗಳಿಗೆ ಹೊಸ ಬಟ್ಟೆಗಳನ್ನು ಉಡುಗೊರೆಯಾಗಿ ನೀಡುತ್ತಾರೆ. ಹಾಗೇ ಕೆಲವು ಬಂಧುಗಳು ಕೂಡಾ ಹೊಸ ಬಟ್ಟೆಗಳನ್ನು ಉಡುಗೊರೆಯಾಗಿ ಆಯಾರಿ ಮಾಡುತ್ತಾರೆ.

ಊ. ಮದುವೆ ಚಪ್ಪರ ಇಳಿಸುವ ಕಾರ್ಯ

ಘಿಸಾಡಿ ಸಮುದಾಯದಲ್ಲಿ ಮದುವೆಯ ಹಂದರವನ್ನು ಸಾಮಾನ್ಯವಾಗಿ ಮದುವೆಯಾಗಿ ಐದು

ದಿನಗಳಲ್ಲಿ ತೆಗೆಯುವ ಪದ್ಧತಿ ರೂಡಿಯಲ್ಲಿದೆ. ಕೆಲವೊಂದು ಸಂದರ್ಭಗಳಲ್ಲಿ ಅನನುಕೂಲವಾದರೆ ೬ ದಿನಗಳಲ್ಲಿ ಕೂಡಾ ಇಳಿಸುತ್ತಾರೆ. ಇವರು ಮದುವೆ ಚಪ್ಪರ ಇಳಿಸುವ ದಿನ "ಹಂದರ ಬ್ಯಾಟ" ಮಾಡಿ ಮದುವೆ ಚಪ್ಪರ ತೆಗೆಯುತ್ತಾರೆ. ಅ ದಿನ ಮಾಂಸದ ಊಟವನ್ನು ಇವರ ಮನೆಯಲ್ಲಿ ಮಾಡುತ್ತಾರೆ. ಏಕೆಂದರೆ ಹಂದರ ಹಾಕುವ ದಿನ ಮದುಮಗನಿಗೆ ಜನಿವಾರ ಹಾಕಿರುವುದರಿಂದ ಹಂದರ ಇಳಿಸುವ ದಿನಗಳವರೆಗೆ, ಇವರ ಸಮುದಾಯದಲ್ಲಿ ಮದುವೆ ಮಾಡುವ ಎರಡು ಕುಟುಂಬದಲ್ಲಿನ ಸದಸ್ಯರು ಮಾಂಸವನ್ನು ತಿನ್ನುವಂತಿಲ್ಲ. ಈ ಹಂದರ ತೆಗೆಯುವ ದಿನ ಹಂದರಕ್ಕೆ ಪೂಜೆ ಮಾಡಿ ಜನಿವಾರ ತೆಗೆಯುತ್ತಾರೆ. ಆಮೇಲೆ ಹಂದರಬ್ಯಾಟ ಮಾಡಿದ ಬಳಿಕ ಮಾಂಸದಡಿಗೆಯನ್ನು ಮಾಡಿ ಬೀಗರಿಗೆ ಬಳಗದವರಿಗೆ ಊಟೋಪಚಾರವನ್ನು ಮಾಡಿಸುತ್ತಾರೆ.

೮.೩. ವಿವಾಹ ವಿಚ್ಛೇದನ ಪದ್ಧತಿ

ಜನಪದರು ಹೇಳುವ ಪ್ರಕಾರ ಸಂಸಾರವೆಂಬುದು ಸಾಗರವಿದ್ದಂತೆ. ಕುಟುಂಬವೆಂಬುದು ಬಂಡಿ ಇದ್ದಂತೆ. ಗಂಡ-ಹೆಂಡತಿ ಆ ಬಂಡಿಯ ಚಕ್ರಗಳಂತೆ. ಇವರಿಬ್ಬರ ಮಧ್ಯೆ ಮಾನಸಿಕ ಶಾಂತಿ, ಸಹಕಾರ, ಮನೋಭಾವನೆಗಳಿಲ್ಲದೆ ಹೋದಾಗ ವಿವಾಹ ವಿಚ್ಛೇದನೆಯಂತಹ ವಿಧಿವಿಧಾನಗಳಿಗೆ ಅನಿವಾರ್ಯವಾಗಿ ಹೋಗಲೇಬೇಕಾಗುತ್ತದೆ. ಫಿಸಾಡಿ ಸಮುದಾಯದಲ್ಲಿಯೂ ದಂಪತಿಗಳಿಬ್ಬರಲ್ಲಿ ವಿರಸ ಉಂಟಾಗಿ ಸಂಸಾರದಲ್ಲಿ ಹೊಂದಾಣಿಕೆ ಇಲ್ಲದಿದ್ದರೆ ಗಂಡನಾಗಲಿ, ಇಲ್ಲವೇ ಹೆಂಡತಿಯಾಗಲಿ ವಿವಾಹ ವಿಚ್ಛೇದನ ಪಡೆದುಕೊಳ್ಳಲು ಅವಕಾಶ ಕಲ್ಪಿಸಿದ್ದಾರೆ. ಇವರು ಈ ವಿವಾಹ ವಿಚ್ಛೇದನೆಗೆ "ಸೋಡ್‌ಚೇಟೀ" ಎಂದು ಕರೆಯುತ್ತಾರೆ.

ಈ ವಿವಾಹ ವಿಚ್ಛೇದನೆ ಪಡೆದುಕೊಳ್ಳುವವರು ಮೊದಲು ತಮ್ಮ ಸಮುದಾಯದ ಯಾವುದಾದರೂ ಕನಿಷ್ಠ ಮೂರು ಬೆಡಗಿನ ಮುಖ್ಯಸ್ಥರಿಗೆ ಹಾಗೂ ಸಮುದಾಯದ ಹಿರಿಯನಾದ ಪುಢಾರಿಗೆ ಅಂದರೆ, ತೀರ್ಮಾನ ಮಾಡುವ ಮುಖ್ಯಸ್ಥನನ್ನು ಕರೆಯಿಸಿ ಕುಲಪಂಚಾಯ್ತಿಯ ಮೂಲಕ ಪಡೆಯುತ್ತಾರೆ. ಈ ಸಂದರ್ಭದಲ್ಲಿ ಹೆಣ್ಣಿಗೆ ಕಟ್ಟಿದ ತಾಳಿ ಕಾಲುಂಗುರಗಳನ್ನು ವಾಪಸ್ಸು ಪಡೆಯುವ ಮತ್ತು ತಪ್ಪಿತಸ್ಥರಿಗೆ ಸೂಕ್ತವಾದ ದಂಡ ಕಟ್ಟುವ ಪದ್ಧತಿ ರೂಢಿಯಲ್ಲಿದೆ.

ವಿವಾಹ ವಿಚ್ಛೇದನೆ ಪಡೆದುಕೊಳ್ಳುವ ಕಾರಣಗಳು

೧. ಗಂಡನಾದವನು ಮದುವೆಯಾಗಿ ಕಾರಣಾಂತರಗಳಿಂದ ಆಕೆಯನ್ನು ತವರು ಮನೆಯಲ್ಲಿ ಬಿಟ್ಟಾಗ, ಗಂಡನಾಗಲಿ ಇಲ್ಲವೇ ಹೆಂಡತಿಯಾಗಲಿ ವಿವಾಹ ವಿಚ್ಛೇದನ ಪಡೆದುಕೊಳ್ಳಬಹುದು.

೨. ಒಂದು ವೇಳೆ ಗಂಡ-ಹೆಂಡತಿಯರಲ್ಲಿ ಯಾರಾದರೂ ಒಬ್ಬರು ಬೇರೊಬ್ಬರೊಡನೆ ಅನೈತಿಕ, ಲೈಂಗಿಕ ಸಂಬಂಧ ಹೊಂದಿದ್ದರೆ, ಅಂತಹ ಸಂದರ್ಭದಲ್ಲಿ ವಿವಾಹ ವಿಚ್ಛೇದನೆಗೆ ಅವಕಾಶವಿರುತ್ತದೆ.

ಈ ಮೇಲಿನ ಕಾರಣಕ್ಕೆ ಮಾತ್ರ ವಿವಾಹ ವಿಚ್ಛೇದನೆ ಮಾಡಿಕೊಳ್ಳಬಹುದು. ಇನ್ನಾವುದೇ

ಕಾರಣಕ್ಕೆ ವಿಚ್ಛೇದನೆ ಇಚ್ಛಿಸುವುದಿಲ್ಲ. ಏಕೆಂದರೆ ವಿಚ್ಛೇದನ ಪಡೆದ ಸ್ತ್ರೀ-ಪುರುಷರಿಗೆ ಇವರ ಸಮಾಜದಲ್ಲಿ ಗೌರವ ಸಿಗುವುದಿಲ್ಲ. ಅವರನ್ನು ಪ್ರತಿಯೊಬ್ಬರು ತಿರಸ್ಕಾರದ ದೃಷ್ಟಿಯಿಂದ ನೋಡುವುದರ ಮೂಲಕ ಹೀನಾಯವಾದ ಬದುಕಿಗೆ ಗುರಿಯಾಗುತ್ತಾರೆ. ಆದ್ದರಿಂದಲೇ ಘಿಸಾಡಿ ಸಮುದಾಯದಲ್ಲಿ ಅನೈತಿಕ ಸಂಬಂಧಗಳು ತೀರಾ ಕಡಿಮೆ. ಹಾಗೇನಾದರೂ ಅವು ಕಾಣಿಸಿಕೊಂಡರೆ ಅದಕ್ಕೆ ಕಾರಣರಾದ ವ್ಯಕ್ತಿಗಳಿಗೆ ಕುಲಬಹಿಷ್ಕಾರವನ್ನು ಘೋಷಿಸಿ ಶಿಕ್ಷೆಗೆ ಗುರಿಪಡಿಸುತ್ತಾರೆ.

ಬಹುಪತ್ನಿತ್ವ : ಘಿಸಾಡಿ ಸಮುದಾಯದಲ್ಲಿ ಏಕಪತ್ನಿ ವಿವಾಹ ಕುಟುಂಬಕ್ಕೆ ಹೆಚ್ಚಿನ ಪ್ರಾಶಸ್ತ್ಯ ಇದ್ದರೂ ಕೆಲವೊಂದು ಸಂದರ್ಭಗಳಲ್ಲಿ ಬಹುಪತ್ನಿತ್ವ ವಿವಾಹಕ್ಕೆ ಅವಕಾಶವಿದೆ. ಅಂದರೆ ಮದುವೆಯಾಗಿ ಬಹುದಿನಗಳವರೆಗೆ ಮಕ್ಕಳಾಗದಿದ್ದರೆ ಅಥವಾ ಹೆಂಡತಿಯು ಬಂಜೆ ಎಂದು ಕಂಡುಬಂದಲ್ಲಿ ಮಕ್ಕಳನ್ನು ಪಡೆಯುವ ಉದ್ದೇಶದಿಂದ ಇನ್ನೊಂದು ಮದುವೆಯಾಗಲು ಅವಕಾಶವಿದೆ. ಈ ಜನ ಸಂತಾನೋತ್ಪತ್ತಿಯ ವಿಷಯದಲ್ಲಿ ತುಂಬಾ ನಿಷ್ಠುರರಾಗಿರುವುದು ಕಂಡುಬರುತ್ತದೆ. ಕೆಲವೊಂದು ಸಲ ಹೆಂಡತಿಯು ಅನಾರೋಗ್ಯದಿಂದ ಬಳಲುತ್ತಿದ್ದು ಸದಾ ರೋಗಿಯಾಗಿದ್ದರೆ ಮರು ಮದುವೆ ಮಾಡಿಕೊಳ್ಳಲು ಅವಕಾಶವಿದೆ. ಪದೆ ಪದೇ ಹೆಣ್ಣು ಮಗು ಜನಿಸಿದರೆ ಗಂಡು ಮಗುವಿನ ಪ್ರಾಪ್ತಿಗಾಗಿ ಕೂಡಾ ಮರು ಮದುವೆ ಮಾಡಿಕೊಂಡಿರುವುದು ಕಡಿಮೆ ಪ್ರಮಾಣದಲ್ಲಿ ಕಂಡುಬರುತ್ತದೆ. ಒಟ್ಟಿನಲ್ಲಿ ಇವರಲ್ಲಿ ಬಹುಪತ್ನಿತ್ವ ಕುಟುಂಬಕ್ಕಿಂತ ಏಕಪತ್ನಿತ್ವ ಕುಟುಂಬಕ್ಕೆ ಹೆಚ್ಚಿನ ಗೌರವ ಇದೆ.

೯. ಮುತ್ತೂರ್ ವಿವಾಹ (ಉಡುಕಿ ಮದುವೆ)

ಸಮಾಜದ ಅನೇಕ ಜಾತಿ ಮತ್ತು ಬುಡಕಟ್ಟು ಸಮುದಾಯಗಳಲ್ಲಿ ತಮ್ಮ ಜನಾಂಗೀಯ ಜನ ಶುದ್ಧತೆಯನ್ನು ಕಾಪಾಡಿಕೊಂಡು ಬರುವ ಹಿನ್ನೆಲೆಯಾಗಿರಬಹುದು ಮತ್ತು ಸಮುದಾಯಗಳ ಸಾಮಾಜಿಕ ಸಮಸ್ಯೆಗಳನ್ನು ಪರಿಹರಿಸುವ ಪ್ರಯತ್ನದ ಹಿನ್ನೆಲೆಯಾಗಿರಬಹುದು ಅಥವಾ ಸಮುದಾಯದ ಸ್ತ್ರೀಯರು ಮತ್ತು ಪುರುಷರಾಗಲಿ ವಿಧವೆಯರಾಗಿ ಅವರನ್ನು ಹೊಂದಿರುವ ಮಕ್ಕಳು ಅನಾಥರಾಗುವ, ಅವರಿಗೆ ಸ್ಥಿರವಾದ ಭದ್ರತೆಯನ್ನೊದಗಿಸುವ ಸುದುದ್ದೇಶದ ಹಿನ್ನೆಲೆಯಾಗಿರಬಹುದು. ಇಂತಹ ಕಾರಣಗಳಿಂದ ಗಂಡು ಮತ್ತು ಹೆಣ್ಣಿನ ಜೀವನದ ಬದುಕಿನ ಮುಂದುವರಿಕೆಯಂತಹ ಕಾರ್ಯಗಳ ಪ್ರಯತ್ನದ ಹಿನ್ನೆಲೆಯಲ್ಲಿ ಅನೇಕ ಜಾತಿ ಮತ್ತು ಬುಡಕಟ್ಟುಗಳಲ್ಲಿ ಈ ಉಡುಕಿ ಮದುವೆಗಳಿಗೆ ಅವಕಾಶ ಕಲ್ಪಿಸಲಾಗಿದೆ.

ಇಲ್ಲಿ ಘಿಸಾಡಿ ಸಮುದಾಯವು ಕೂಡಾ ಮುತ್ತೂರ್ (ಉಡುಕಿ) ಮದುವೆಗಳಿಗೆ ಅವಕಾಶ ಕಲ್ಪಿಸಿರುವುದು ತಮ್ಮ ಸಮುದಾಯದ ನಿರಂತರ ಬೆಳವಣಿಗೆಯ ಮುಂದುವರಿಕೆ ಎಂದು ಹೇಳಬಹುದು. ವಿಧುರ ಮತ್ತು ವಿಧವೆಯರ ನಡುವೆ ನಡೆಯುವ ಈ ಉಡುಕಿ ಮದುವೆಗೆ ಇವರು "ಮುತ್ತೂರ್ ವಿವಾಹ" ಎಂದು ಕರೆಯುತ್ತಾರೆ. ಈ ಮುತ್ತೂರ್ ವಿವಾಹವು ವಿಶಿಷ್ಟವಾದ

ಸಂಪ್ರದಾಯಗಳಿಂದ ಕೂಡಿದ್ದು. ವಿವಾಹವಾಗುವ ಗಂಡು ಹೆಣ್ಣು, ಇಬ್ಬರೂ ಮೊದಲು ಒಪ್ಪಿಕೊಂಡ ಮೇಲೆ ಸಮುದಾಯದ ದೈವದವರು ಅನುಮೋದನೆ ಮತ್ತು ಪರವಾನಿಗೆ ನೀಡಿದ ಬಳಿಕ ಈ ವಿವಾಹ ನಡೆಯುತ್ತದೆ. ಈ ವಿವಾಹ ಮಾಡುವ ನಿಗದಿತ ದಿನ ಗೊತ್ತುಪಡಿಸಿಕೊಂಡು ಅಂದು ಸಾಯಂಕಾಲ ಮದುವೆಗೆ ಸಕಲ ಸಿದ್ಧತೆ ಮಾಡಿಕೊಳ್ಳುತ್ತಾರೆ. ಏಕೆಂದರೆ ಈ ಮದುವೆ ಕಾರ್ಯಗಳು ಎಲ್ಲರೂ ಮಲಗಿದ ಮೇಲೆ ಅರ್ಧರಾತ್ರಿಯಲ್ಲಿಯೇ ನಡೆಯುತ್ತವೆ.

ಈ ಮದುವೆಯನ್ನು ಮುತ್ತೈದೆಯರು, ಚಿಕ್ಕಮಕ್ಕಳು ನೋಡಬಾರದು ಎಂಬ ಸಂಪ್ರದಾಯ ಇವರಲ್ಲಿ ರೂಢಿಯಲ್ಲಿದೆ. ಈ ಮದುವೆ ಮಾಡಿಕೊಳ್ಳುವ ಗಂಡು ಮತ್ತು ಹೆಣ್ಣಿಗೆ ವಿಧುರ ಮತ್ತು ವಿಧವೆಯರು ಹಾಗೂ ಉಡುಕಿ ಮದುವೆ ಮಾಡಿಕೊಂಡವರು ಸೇರಿ ಹೆಣ್ಣಿಗೆ ಸ್ನಾನ ಮಾಡಿಸುವ, ಅರಿಶಿಣ ಹಚ್ಚುವ, ಬಳೆ ತೊಡಿಸುವ, ಮೂಗುತಿ ಹಾಕುವ, ಹೂವಿನ ದಂಡೆಗಳನ್ನು ಮುಡಿಸುವ, ಹಾಗೆಯೇ ಗಂಡಿಗೆ ಸ್ನಾನ ಮಾಡಿಸಿ ಹೊಸ ಬಟ್ಟೆಗಳನ್ನು ತೊಡಿಸುವ ಆರತಿ ಬೆಳಗುವ ಕಾರ್ಯಗಳೆಲ್ಲವನ್ನು, ವಿಧವೆ ವಿಧುರರೇ ಮಾಡುತ್ತಾರೆ. ನಂತರ ಅವರಿಬ್ಬರಿಗೂ ತಮ್ಮ ಮನೆಯ ದೇವರ ಎದುರಿನಲ್ಲಿ ಚಾಪೆ ಹಾಸಿ ಪಕ್ಕದಲ್ಲಿ ಕೂಡಿಸಿ ಮದುವೆ ಮಂತ್ರಗಳಿಲ್ಲದೆ ತಾಳಿ ಕಟ್ಟಿಸುತ್ತಾರೆ. ಸಾಮಾನ್ಯವಾಗಿ ಈ ಮದುವೆ ಮದುವೆಯು ಮಾಡಿಕೊಳ್ಳುವ ಗಂಡು ಅಥವಾ ಹೆಣ್ಣಿನ ಮನೆಯಲ್ಲಿ ನಡೆಯುತ್ತದೆ.

ಈ ಮದುವೆಗೆ ಸಿಹಿ ಊಟ ಮಾಡಿಸುವುದಿಲ್ಲ. ಆದರೆ ಕುರಿಬ್ಯಾಟಿ ಮಾಡಿ ಮಾಂಸದೂಟ ಮಾಡಲೇಬೇಕಾಗುತ್ತದೆ. ಜೊತೆಗೆ ಅನ್ನ, ಸಾರು, ಚಪಾತಿ, ಕಾಯಿಪಲ್ಯಗಳನ್ನು ಮಾಡಿರುತ್ತಾರೆ. ಅಂದು ರಾತ್ರಿ ಮದುವೆ ಮುಗಿದ ಮೇಲೆ ಎಲ್ಲರೂ ಊಟ ಮಾಡಿ ಮಲಗುತ್ತಾರೆ. ಕೆಲವರು ಮದ್ಯಪಾನ ಮಾಡಿ ಸ್ವಲ್ಪ ಹೊತ್ತು ಹರಟೆ ಹೊಡೆದು ಮಲಗುತ್ತಾರೆ. ಈ ಮದುವೆಯ ಖರ್ಚು ವೆಚ್ಚಗಳಲ್ಲಿ ಮದುವೆ ಮಾಡಿಕೊಳ್ಳುವ ಹೆಣ್ಣಿನ ತವರು ಮನೆಯವರು ಹಾಗೂ ಗಂಡಿನ ಕಡೆಯವರು ಸಮಪಾಲು ಹಂಚಿಕೊಳ್ಳಬೇಕು.

ಈ ಮದುವೆ ಮಾಡಿಕೊಂಡು ನವದಂಪತಿಗಳು ಮುಂಜಾನೆ ಕೋಳಿ ಕೂಗುವುದಕ್ಕಿಂತ ಮೊದಲೆ ಎದ್ದು ಸ್ನಾನ ಮಾಡಿ, ಆಂಜನೇಯ ದೇವರಿಗೆ ಇಬ್ಬರೂ ಜೊತೆಯಾಗಿ ಹೋಗಿ ಎಡಗಡೆ ಪ್ರದಕ್ಷಿಣೆಯನ್ನು ಹಾಕಿ ಹೂವು ಕಾಯಿ-ಹಣ್ಣುಗಳನ್ನು ಅರ್ಪಿಸಿ ಪೂಜೆಯನ್ನು ಮಾಡಿಸಿ ತಮ್ಮ ಸಮುದಾಯದವರು ಏಳುವುದಕ್ಕಿಂತ ಮುಂಚೆಯೇ ಮನೆ ಸೇರಬೇಕಾಗುತ್ತದೆ.

ಮುತ್ತೈದೆಯರು ಹಾಗೂ ಮಕ್ಕಳು ಈ ಮದುವೆ ನೋಡಬಾರದು ಎಂಬ ಸಂಪ್ರದಾಯ ಇವರಲ್ಲಿರುವುದು ನೋಡಿದರೆ ಚಿಕ್ಕ ಮಕ್ಕಳಲ್ಲಿ ಮತ್ತು ಮುತ್ತೈದೆಯರಲ್ಲಿ ಗಾಢವಾದ ಕೆಟ್ಟ ಪರಿಣಾಮಗಳು ಬೀರಬಹುದು ಎಂಬ ಕಲ್ಪನೆ ಇವರಲ್ಲಿರಬಹುದು.

ಅಂತೆಯೇ ಇತ್ತೀಚಿನ ದಿನಗಳಲ್ಲಿ ಸಂಸ್ಕೃತಿಯ, ಸಂಪ್ರದಾಯದ ಬದಲಾವಣೆಯ ಗಾಳಿ

ಇವರಲ್ಲಿಯೂ ಬೀಸಿರುವುದು ಮತ್ತು ಮದುವೆ ಮಾಡಿಕೊಳ್ಳುವ ಹುಡುಗಿ ಬಹಳ ಚಿಕ್ಕವಳಾಗಿದ್ದರೆ ಆಕೆಯ ಸಮಾನ ವಯಸ್ಕ ಗೆಳತಿಯರಿಗೆ ಬಿಟ್ಟು ಮದುವೆ ಮಾಡಿಕೊಳ್ಳುವುದು ಹಿಂಸೆ ಎನಿಸುತ್ತದೆ ಎಂಬ ಕಲ್ಪನೆಯಿಂದ ಅಥವಾ ಇನ್ನಿತರ ತಮ್ಮ ಅನುಕೂಲತೆಗಳಿಗಾಗಿ ಸಮುದಾಯದ ಹಿರಿಯರಿಂದ ಒಪ್ಪಿತವಾಗಿ ಹಗಲು ಸಮಯದಲ್ಲಿಯೇ ದೇವರ ಗುಡಿಗಳ ಎದುರಿನಲ್ಲಿ ಮದುವೆ ಮಾಡಿಸುತ್ತಿದ್ದಾರೆ. ಸಾಮಾನ್ಯವಾಗಿ ಇತ್ತೀಚಿನ ದಿನಗಳಲ್ಲಿ ಉಡುಕಿ ಮದುವೆಯಲ್ಲಿ ಎಲ್ಲರೂ ಪಾಲ್ಗೊಳ್ಳುತ್ತಿರುವುದು ಕೂಡಾ ನಡೆಯುತ್ತಿದೆ.

ಈ ಉಡುಕಿ ಮದುವೆ ಮಾಡಿಕೊಂಡು ಮನೆ ಸೇರಿದ ದಂಪತಿಗಳು ತಮ್ಮ ಲೈಂಗಿಕ ಬಯಕೆ ಹಾಗೂ ತಮ್ಮ ಸಂಸಾರದ ಸಹಬಾಳ್ವೆಗೆ ಮಾತ್ರ ಬದುಕುತ್ತಾರೆ. ವಿನಾಃ ಅವರು ಕಳೆದುಕೊಂಡ ಮಂಗಳ ಕಾರ್ಯಗಳನ್ನು ಮಾಡುವ ಅರ್ಹತೆಯನ್ನು ಪುನಃ ಮರಳಿ ಪಡೆಯುವುದಿಲ್ಲ. ಒಂದು ವೇಳೆ ಉಡುಕಿ ಮದುವೆ ಮಾಡಿಕೊಳ್ಳದೆ ವಿಧುರನಾಗಿ ಉಳಿದವನು ಪೂಜಾಕಾರ್ಯಗಳಲ್ಲಿ ನೆರವಾಗಲು ಅಡ್ಡಿಯಿಲ್ಲ. ಇವರ ಸಮುದಾಯದಲ್ಲಿ ಮದುವೆಯಾಗದ ಹುಡುಗ ವಿಧವೆಯಾಗಿ ಚಿಕ್ಕವಳಾಗಿ ಸುಂದರಳಾಗಿದ್ದರೆ ಆಕೆಯನ್ನು ಮದುವೆ ಮಾಡಿಕೊಳ್ಳಲು ಬಯಸಿದರೆ, ಇದಕ್ಕೆ ಮುಖ್ಯಸ್ಥರು ಒಪ್ಪುವುದಿಲ್ಲ. ಒಂದು ವೇಳೆ ಹುಡುಗ ಆಕೆಯನ್ನು ಮದುವೆ ಮಾಡಿಕೊಳ್ಳುತ್ತೇನೆಂದರೆ ಮಂಗಳ ಕಾರ್ಯಗಳಲ್ಲಿ ಭಾಗವಹಿಸುವ, ಕ್ರಿಯಾವಿಧಿಗಳನ್ನು ಕಳೆದುಕೊಂಡು ಉಡುಕಿ ಮದುವೆ ಚಾಜಗಳನ್ನು ಪಡೆದುಕೊಳ್ಳುತ್ತಾನೆ.

೧೦. ಶವಸಂಸ್ಕಾರ

ಹುಟ್ಟು-ವಿಕಾಸ-ಅಂತ್ಯ ಈ ಮೂರು ಕ್ರಮಗಳ ಕ್ರಿಯೆಯಲ್ಲಿ ಮಾನವನ ಬದುಕಿನ ಚಿತ್ರಣಗಳ ಪದರುಗಳು ಪ್ರತಿಬಿಂಬಿಸುತ್ತವೆ. ಪ್ರಪಂಚದಲ್ಲಿ ಜೀವವಿರುವ ಯಾವುದೇ ಪ್ರಾಣಿಯಾಗಲಿ ಈ ಮೂರು ಚಕ್ರಗಳ ಸುಳಿಗಳಲ್ಲಿ ನಾಶ ಹೊಂದಲೇ ಬೇಕು. ಜನಪದರು "ಮೂಳೆ ಮಾಂಸಾದಿಗಳಿಂದ ಕೂಡಿದ ಈ ದೇಹ ಬರುವಾಗ ಬೆತ್ತಲೆ, ಹೋಗುವಾಗ ಬೆತ್ತಲೆ, ಬಂದು ಹೋಗುವ ನಡುವೆ ಬರಿ ಕತ್ತಲೆ" ಎನ್ನುತ್ತಾರೆ. ಆದರೆ ಮಾನವನು ತನ್ನ ಹುಟ್ಟಿನ ಜೀವನದಿಂದ, ಅಂತ್ಯದವರೆಗೆ ಸಮಾಜಕ್ಕೆ ಅನೇಕ ಹೊಸ ಜ್ಞಾನ ಪರಂಪರೆಯನ್ನು ಬಿಟ್ಟು "ಹುಟ್ಟಿದ್ದು ಸಾಯಲೇ ಬೇಕು. ಕಟ್ಟಿದ್ದು ಬೀಳಲೇ ಬೇಕು" ಎಂಬುದನ್ನು ನಿರ್ದಿಷ್ಟಪಡಿಸಿ ಹೋಗುತ್ತಾನೆ. ಸಮಾಜದಲ್ಲಿನ ಅನೇಕ ವ್ಯವಸ್ಥೆಗಳ ಸ್ತರಗಳ ಸುಳಿಗಳಲ್ಲಿ ಕಷ್ಟ-ಸುಖಗಳನ್ನು ಅನುಭವಿಸಿ, ಹುಟ್ಟಿನಿಂದ ಚಟ್ಟದವರೆಗೆ ಅನೇಕ ಸಂಸ್ಕಾರಗಳನ್ನು ಪಡೆದುಕೊಳ್ಳುತ್ತಾನೆ. ಅವುಗಳಲ್ಲಿ ಈ ಕೊನೆಯ ಸಂಸ್ಕಾರವೇ ಮರಣ ಸಂಸ್ಕಾರವಾಗಿದೆ.

ಪ್ರಪಂಚದ ಪ್ರತಿಯೊಂದು ಜಾತಿ ಮತ್ತು ಬುಡಕಟ್ಟುಗಳಲ್ಲಿ ವ್ಯಕ್ತಿ ಹುಟ್ಟಿದ ಕೂಡಲೇ ಕೆಲವೊಂದು ಆಚರಣೆಗಳು ವಿಧಿ-ವಿಧಾನಗಳು ಅನುಸರಿಸುವಂತೆ ಸಾಯುವಾಗಲೂ ಕೆಲವು ವಿಧಿ-ವಿಧಾನಗಳನ್ನು ಅನುಸರಿಸುತ್ತಾರೆ. ಈ ಸಂದರ್ಭದಲ್ಲಿ ಆಚರಿಸುವ ವಿಧಾನಗಳು ಹಾಗೂ ಸಂಪ್ರದಾಯಗಳು ಕೆಲವು ಜನಾಂಗಗಳಲ್ಲಿ ತುಂಬಾ ಕಟ್ಟುನಿಟ್ಟಾಗಿ ವಿಶಿಷ್ಟತೆಯಿಂದ ಕೂಡಿರುತ್ತವೆ.

ಘಿಸಾಡಿ ಜನ ಸಮುದಾಯದಲ್ಲಿ ಕೂಡಾ ಶವ ಸಂಸ್ಕಾರ ಸಂದರ್ಭದಲ್ಲಿ ತಮ್ಮದೆಯಾದಂತಹ ವಿಧಿ-ವಿಧಾನಗಳನ್ನು ಅನುಸರಿಸುತ್ತಿದ್ದು, ಇವರಲ್ಲಿ ಶವ ಸುಡುವ ಪದ್ಧತಿಯೇ ಪ್ರಚಲಿತದಲ್ಲಿದೆ. ಸುಮಾರು ೧೪ ವರ್ಷದ ಒಳಗಿನ ವಯಸ್ಸಿನ ಮಕ್ಕಳು ಸತ್ತರೆ ಮಾತ್ರ ಶವವನ್ನು ಹೂಳುತ್ತಾರೆ. ಇವರ ಮನೆಯಲ್ಲಿ ಯಾರಾದರೂ ಸತ್ತರೆ ತಕ್ಷಣವೇ ಆತನ ಕುಲ-ಬಂಧುಗಳಿಗೆ ಸುದ್ದಿ ತಿಳಿಸುತ್ತಾರೆ. ವ್ಯಕ್ತಿಯ ಸಾವು ಸಂಭವಿಸುವ ಸಂದರ್ಭದಲ್ಲಿ ಔಪಚಾರಿಕವಾಗಿ ಯಾರಾದರೊಬ್ಬರು ಕುಲದವರು ಇರಲೇಬೇಕೆಂಬ ಸಂಪ್ರದಾಯ ರೂಢಿಯಲ್ಲಿದ್ದು, ವಯಸ್ಸಾದವರು ಸಾಯಂಕಾಲ ಇಲ್ಲವೇ, ರಾತ್ರಿ ಹೊತ್ತು ಸತ್ತರೆ, ಸತ್ತವರ ಮನೆಯ ಮುಂದೆ ಬೆಳಗಿನ ಜಾವದವರೆಗೆ ಭಜನೆ ಮಾಡಿಸುತ್ತಾರೆ. ಇದು ಇತ್ತೀಚೆಗೆ ಇತರ ಸಮುದಾಯದವರ ಪ್ರಭಾವದಿಂದ ಬೆಳೆದುಬಂದಿದೆ. ಚಿಕ್ಕ ವಯಸ್ಸಿನವರು ಅಥವಾ ಮಧ್ಯವಯಸ್ಕರು ಸತ್ತರೆ ಬೆಳಗಿನ ಜಾವದವರೆಗೆ ಬೆಂಕಿ ಕಾಯಿಸುತ್ತಾ ಮತ್ತು ಮದ್ಯಪಾನ ಮಾಡುತ್ತಾ ಕಾಲಹರಣ ಮಾಡುತ್ತಾರೆ. ಇದು ಪೂರ್ವಕಾಲದಿಂದಲೂ ಇವರಲ್ಲಿರುವ ಪದ್ಧತಿಯಾಗಿದೆ. ಮರುದಿನ ಮಧ್ಯಾಹ್ನ ೧೨ ಗಂಟೆಯ ನಂತರ ಹೆಣಕ್ಕೆ ಸ್ನಾನ ಮಾಡಿಸುತ್ತಾರೆ. ಈ ಸ್ನಾನ ಮಾಡಿಸುವಾಗ ಮೊದಲು ಬೆಂಕಿ ಕೊಡುವ ವ್ಯಕ್ತಿಯ ಮೂಲಕ ಸತ್ತ ವ್ಯಕ್ತಿಗೆ ಸಂಪ್ರದಾಯಕ್ಕೆಂದು ಐದು ತಂಬಿಗೆ ನೀರು ಹಾಕಿಸಿ ಶವಕ್ಕೆ ಸ್ನಾನ ಮಾಡಿಸುತ್ತಾರೆ. ಆಮೇಲೆ ಉಳಿದವರು ಸ್ನಾನ ಮಾಡಿ, ಹೆಣಕ್ಕೆ ಹೊಸ ಬಟ್ಟೆಗಳ್ನು ತೊಡಿಸಿ ಎರಡು ಕಾಲುಗಳನ್ನು ಮುರಿದು ಮಲಗಿಸುತ್ತಾರೆ. ಮಲಗಿಸಿದ ಶವದ ಮೇಲೆ ಸುವಾಸನೆ ಬೀರಲೆಂದು ಗಂಧ ಚೆಲ್ಲುವರು. ನಂತರ ಜ್ಯೋತಿ ಬೆಳಗಿಸಿ ಆ ಜ್ಯೋತಿಯನ್ನು ಶವದ ಬಲಭಾಗದಲ್ಲಿ ಇಡುತ್ತಾರೆ. ಕೊನೆಗೆ ಕರ್ಪೂರದಿಂದ ಮಂಗಳಾರತಿಯನ್ನು ಮಾಡಿದ ಬಳಿಕ ಶವಸಂಸ್ಕಾರಕ್ಕೆ ಶವವನ್ನು ಸ್ಮಶಾನಕ್ಕೆ ತೆಗೆದುಕೊಂಡು ಹೋಗುವ ಸಿದ್ಧತೆಗಳು ನಡೆಯುತ್ತವೆ.

ಈ ಸಂದರ್ಭದಲ್ಲಿ ಕುಲದ ಪ್ರಮುಖರೆಲ್ಲರೂ ಸೇರಿ ಹೆಣದ ಚಟ್ಟ ಎತ್ತಲು ಶಾಸ್ತ್ರೋಕ್ತವಾಗಿ ನಾಲ್ಕು ಜನ ವಿವಿಧ ಬೇರೆ ಬೇರೆ ಬೆಡಗಿಗೆ (ಗೋತ್ರಕ್ಕೆ) ಸೇರಿದ ವ್ಯಕ್ತಿಗಳನ್ನು ನೇಮಕ ಮಾಡುತ್ತಾರೆ. ಒಂದು ವೇಳೆ ನಾಲ್ಕು ಜನ ವಿವಿಧ ಬೆಡಗಿಗೆ ಸೇರಿದ ವ್ಯಕ್ತಿಗಳು ಅಲ್ಲಿ ಇರದಿದ್ದರೆ, ಕನಿಷ್ಠ ಮುಂದೆ ಇಬ್ಬರೂ ಒಂದೇ ಬೆಡಗಿಗೆ ಸೇರಿದವರನ್ನು, ಹಾಗೆ ಹಿಂದೆ ಇಬ್ಬರೂ ಒಂದೇ ಬೆಡಗಿಗೆ ಸೇರಿದವರನ್ನು ಆಯ್ಕೆ ಮಾಡಿ ನೇಮಿಸುತ್ತಾರೆ. ಬಹುಶಃ ಇವರು ಅಲೆಮಾರಿಗಳಾಗಿರುವುದರಿಂದ ಒಂದೇ ಬೆಡಗಿಗೆ ಸೇರಿದ ನಾಲ್ಕು ಜನ ವ್ಯಕ್ತಿಗಳು ಸಿಗದೇ ಹೋದ ಸಂದರ್ಭದಲ್ಲಿ ಈ ಪದ್ಧತಿ ಜಾರಿಗೆ ತಂದಿರಬಹುದು ಎನಿಸುತ್ತದೆ.

ಹೆಣದ ಚಟ್ಟ ಹೊತ್ತುಕೊಂಡು ದಾರಿ ಸಾಗುವಾಗ ಮಧ್ಯದಲ್ಲಿ ಯಾರು ಬೇಕಾದರೂ ಬದಲಿಸಿ ಹೆಣವನ್ನು ಹೆಗಲು ಕೊಟ್ಟು ಹೊರಬಹುದು. ಈ ಸಂದರ್ಭದಲ್ಲಿ ಸತ್ತವರ ಕುಟುಂಬಕ್ಕೆ ಸೇರಿದ ವ್ಯಕ್ತಿ ಬೆಂಕಿಯ ಗಡಿಗೆ ಹಿಡಿದುಕೊಂಡು ಚಟ್ಟದ ಮುಂದೆ ಸ್ಮಶಾನದ ದಾರಿ ಹಿಡಿದುಕೊಂಡು ಹೋಗುತ್ತಿರುತ್ತಾನೆ. ಅಲ್ಲಿರುವ ಎಲ್ಲರೂ "ರಾಮ ನಾಮ ಸತ್ಯ ಹೈ, ರಾಮ್ ನಾಮ ಸತ್ಯ ಹೈ" ಎನ್ನುತ್ತಾ ದಾರಿಯುದ್ದಕ್ಕೂ ಹೇಳುತ್ತ ಸಾಗುತ್ತಾರೆ.

ಸ್ಮಶಾನ ಇನ್ನೂ ಸ್ವಲ್ಪ ದೂರ ಇರುವಾಗಲೇ ಹೆಣವನ್ನು ನೆಲಕ್ಕೆ ಇಳಿಸಿ ಸ್ವಲ್ಪ ವಿಶ್ರಾಂತಿ ಕೊಡುತ್ತಾರೆ. ಹಾಗೆ 'ರಾಮ್ ನಾಮ ಸತ್ಯ ಹೈ' ಎನ್ನುವುದು ಈ ವಿಶ್ರಾಂತಿ ಕೊಟ್ಟ ಮೇಲೆ ಬಿಟ್ಟು ಬಿಡುತ್ತಾರೆ. ಈ ಸಂದರ್ಭದಲ್ಲಿ ಹೆಣದ ಚಟ್ಟ ನೆಲಕ್ಕೆ ಇಳಿಸುವಾಗ ಮತ್ತು ಪುನಃ ಹೊತ್ತುಕೊಂಡು ಹೋಗುವಾಗ ನೇಮಿಸಲ್ಪಟ್ಟಂತಹ ನಾಲ್ಕು ಜನರೆ ಇರಬೇಕಾಗುತ್ತದೆ. ಆಗ ಮುಂದಿನವರು ಹಿಂದೆ, ಹಿಂದಿನವರು ಮುಂದೆ ಬಂದು ಹೆಗಲು ಕೊಡುತ್ತಾರೆ.

ಸ್ಮಶಾನ ಭೂಮಿಗೆ ಅಥವಾ ಹೆಣ ಸುಡುವ ಸ್ಥಳಕ್ಕೆ ತಲುಪಿದ ಮೇಲೆ ಪುನಃ ನೇಮಿಸಲ್ಪಟ್ಟಂತಹ ನಾಲ್ಕು ಜನರೇ ಚಟ್ಟವನ್ನು ಹೆಗಲುಕೊಟ್ಟು ಇಳಿಸಬೇಕಾಗುತ್ತದೆ. ಚಟ್ಟವನ್ನು ಕೆಳಗೆ ಇಳಿಸಿದ ಮೇಲೆ ಮೊದಲು ಬೆಂಕಿ ಹಿಡಿದವನು ಹೆಣದ ಬಾಯಿಯಲ್ಲಿ ನೀರು ಹಾಕುತ್ತಾನೆ. ಆಮೇಲೆ ಸತ್ತ ವ್ಯಕ್ತಿ ಕುಟುಂಬದವರು, ಬಂಧು-ಬಳಗದವರು ಕೆಲವು ಜನ ಕುಲಸ್ಥರು ಸೇರಿ ನೀರು ಹಾಕುತ್ತಾರೆ. ನೀರು ಹಾಕುವುದು ಮುಗಿದ ಬಳಿಕ ಹೆಣಕ್ಕೆ ಪೂಜೆ ಪುನಸ್ಕಾರಗಳನ್ನು ಮಾಡಿ, ಹೆಣದ ರೂಮಾಲನ್ನು ಕುಟುಂಬಕ್ಕೆ ಸಂಬಂಧಿಸಿದ ಯಾರಾದರೊಬ್ಬರು ಮಕ್ಕಳಿಗೆ ಇಲ್ಲವೆ ಚಿಕ್ಕಪ್ಪನಿಗೆ ಒಪ್ಪಿಸುತ್ತಾರೆ. ಒಂದು ವೇಳೆ ಮಹಿಳೆ ಸತ್ತರೆ ರೂಮಾಲು ತೆಗೆದು ಒಪ್ಪಿಸುವ ಪ್ರಶ್ನೆಯೇ ಬರುವುದಿಲ್ಲ. ಈ ರುಮಾಲು ತೆಗೆದು ಒಪ್ಪಿಸುವ ಸಂಪ್ರದಾಯವನ್ನು ಸೂಕ್ಷ್ಮವಾಗಿ ಗ್ರಹಿಸಿದಾಗ ಫಿಸಾಡಿ ಜನರು ಮೊದಲಿನಿಂದಲೂ ಪಿತೃಪ್ರಧಾನ ಕುಟುಂಬ ವ್ಯವಸ್ಥೆಗೆ ಬದ್ಧರಾಗಿರುವುದು ಕಂಡು ಬರುತ್ತದೆ.

ಆ ನಂತರ ಬೆಂಕಿ ಹಿಡಿದುಕೊಂಡು ಬಂದವನಿಗೆ ಪುನಃ ಇಲ್ಲೊಂದು ಸಲ ಒಂದು ಕೊಡ ನೀರು ಹಾಕಿ ಸ್ನಾನ ಮಾಡಿಸುವರು. ಬಳಿಕ ನೀರು ತುಂಬಿದ ಹೊಸ ಮಡಿಕೆ ತಂದು ಆತನ ಹೆಗಲ ಮೇಲೆ ಹೊರಿಸಿ ಹೆಣವನ್ನು ಸುಡಲು ಮಲಗಿಸಿರುವ ಕಟ್ಟಿಗೆಯ ಸುತ್ತಲು ಐದು ಸಲ ಪ್ರದಕ್ಷಿಣೆ ಹಾಕಿಸುತ್ತಾರೆ. ಈ ಪ್ರದಕ್ಷಿಣೆ ಹಾಕುವಾಗ ಪ್ರತಿಯೊಂದು ಸುತ್ತಿಗೆ ಒಂದೊಂದು ಸಲ ಮಡಿಕೆಗೆ ಜೀವದಾನ ಕಲ್ಲಿನಿಂದ ರಂದ್ರ ಹಾಕುತ್ತಾರೆ. ಆಗ ಆ ನೀರು ಹೆಣ ಸುಡುವ ಕಟ್ಟಿಗೆಯ ಸುತ್ತಲು ಬಿದ್ದು ನೆಲವನ್ನು ತಂಪುಗೊಳಿಸುತ್ತದೆ. ಕೊನೆಯ ಐದನೆಯ ಸುತ್ತು ಮುಗಿದ ಬಳಿಕ ಆ ವ್ಯಕ್ತಿ ಹಿಂದೆ ತಿರುಗಿ ನೋಡದೆ ತನ್ನ ಹೆಗಲಮೇಲಿರುವ ಮಡಿಕೆಯನ್ನು ಹಿಂದಕ್ಕೆ ಬಿಟ್ಟಾಗ ಒಡೆಯುತ್ತದೆ. ಆಗ ಆ ವ್ಯಕ್ತಿಯು ಸತ್ತಹೆಣವನ್ನು ತಿರುಗಿ ನೋಡದೆ 'ಲಭೋ ಲಭೋ' ಎಂದು ಬಾಯಿ ಬಡಿದುಕೊಳ್ಳುತ್ತ ಸ್ಮಶಾನದಿಂದ ಸ್ವಲ್ಪ ದೂರಕ್ಕೆ ಓಡಿ ಹೋಗಬೇಕು. ನಂತರ ಮನೆಯನ್ನು ಸೇರಬೇಕು. ಈ ಸಂದರ್ಭದಲ್ಲಿ ಪುರುಷ ಸತ್ತರೆ ಅವನ ಹೆಂಡತಿಯ ಬಳೆ, ಕಾಲುಂಗುರ, ತಾಳಿಯನ್ನು ಯಾರಾದರೂ ವಿಧವೆಯರು ಬಂದು ತೆಗೆಯುತ್ತಾರೆ.

ಇದು ಮುಗಿದ ತಕ್ಷಣವೇ ಬೆಂಕಿ ಮಡಿಕೆಯಲ್ಲಿ ತಂದಿರುವ ಬೆಂಕಿಯಿಂದಲೇ ಶವ ಸುಡುವ ಕಟ್ಟಿಗೆಗೆ ಬೆಂಕಿ ಹಚ್ಚುತ್ತಾರೆ. ಕೆಲವೊಂದು ಸಂದರ್ಭಗಳಲ್ಲಿ ಬಹಳ ದೂರದ ಸಂಬಂಧಿಕರು

ಬರುವವರಿದ್ದರೆ, ರಾತ್ರಿ ಹೊತ್ತಿನಲ್ಲಿ ಹೆಣ ಸುಡುವ ಪ್ರಸಂಗಗಳು ಬಂದರೆ ಸೂರ್ಯಾಸ್ತ ವಾಗುವುದಕ್ಕಿಂತ ಮೊದಲೇ ಹೆಣಕ್ಕೆ ಒಂದು ಊದಿನಕಡ್ಡಿಯಿಂದ ಬೆಂಕಿಯ ಚುಟುಕಿಯನ್ನು ಇಡುತ್ತಾರೆ. ಇದಕ್ಕೆ ಇವರು 'ದಾಗ್' ಇಡುವುದು ಎಂದು ಕರೆಯುತ್ತಾರೆ. ಬೆಂಕಿಯಿಟ್ಟಿರುವ ಹೆಣವು ಪೂರ್ತಿ ಸುಟ್ಟು ತಲೆ 'ಡಬ್' ಎಂದ ತಕ್ಷಣವೇ ಎಲ್ಲರೂ ಮನೆಗೆ ಹಿಂದಿರುಗುತ್ತಾರೆ. ಮನೆ ಸೇರಿದ ಬಳಿಕ ಕುಲಸ್ಥರೆಲ್ಲರೂ ಸೇರಿ ೫-೧೦ ರೂಪಾಯಿ ವಂತಿಕೆ ಸಂಗ್ರಹಿಸಿ ಆ ದಿನ ಉಪ್ಪಿಲ್ಲದ ಅನ್ನ, ಸಾರು ಮಾಡಿ ಊಟ ಮಾಡಿಸುತ್ತಾರೆ. ಇದಕ್ಕಿಂತ ಮೊದಲು ಹೆಣ ಸುಟ್ಟು ಮನೆಗೆ ಬರುವುದರೊಳಗಾಗಿ, ಯಾರಾದರೊಬ್ಬರು ಇಲ್ಲವೇ ಇಬ್ಬರೂ ಮನೆಯಲ್ಲಿಯೇ ಇದ್ದು, ಅವರು ಹೆಣ ಸುಟ್ಟು ಮನೆಗೆ ಬರುವುದರೊಳಗಾಗಿ ತಮ್ಮ ಮನೆ ಅಥವಾ ಗುಡಾರವನ್ನು ಒಳ ಹೊರಗಿನ ಆವರಣವನ್ನು ಸ್ವಚ್ಛವಾಗಿ ತೊಳೆದು ಶುಭ್ರಗೊಳಿಸುತ್ತಾರೆ. ಹೀಗೆ ಮಾಡುವುದರೊಂದಿಗೆ ಹೆಣದ ಅಂತಿಮ ಸಂಸ್ಕಾರ ಕೊನೆಗೊಳ್ಳುತ್ತದೆ.

ಮೂರನೇ ದಿನದ ಕಾರ್ಯ

ಘಿಸಾಡಿ ಸಮುದಾಯದಲ್ಲಿ ವ್ಯಕ್ತಿ ತೀರಿಕೊಂಡ ಮೂರನೆಯ ದಿನಕ್ಕೆ "ಹೆಗಲ್ ಕಲೆಸುವ" ಸೂತಕ ಕಾರ್ಯ ನೆರವೇರಿಸುವರು. ಅಂದು ಅವರ ಮನೆಯಲ್ಲಿ ಎರಡು ಪ್ರಕಾರದ ಅಡುಗೆ ವ್ಯವಸ್ಥೆ ಮಾಡಿರುತ್ತಾರೆ. ಮೊದಲನೆಯದು ಎಲ್ಲ ಕುಲಸ್ಥರಿಗೆ ಸರಿ ಹೊಂದುವ ಚಪಾತಿ, ಅನ್ನ, ಚಿತ್ರನ್ನ, ಸಾರು, ಕಾಯಿಪಲ್ಯಗಳ ದೊಡ್ಡ ಅಡುಗೆ ವ್ಯವಸ್ಥೆ ಮಾಡುತ್ತಾರೆ. ಇನ್ನು ಎರಡನೆಯದಾಗಿ ಸತ್ತ ವ್ಯಕ್ತಿಗೆ ಇಷ್ಟವಿರುವ ಪದಾರ್ಥಗಳ ಚಿಕ್ಕ ಅಡುಗೆಯನ್ನು ಮಾಡುವರು. ಜೊತೆಗೆ ಕುಡಿಯುವವನಾಗಿದ್ದರೆ ಹೆಂಡ, ಸಾರಾಯಿ, ಬೀಡಿ, ಸಿಗರೇಟು, ಲವಂಗ, ಅಡಿಕೆ, ಎಲೆ, ತಂಬಾಕು ಇವೆಲ್ಲವುಗಳನ್ನು ತಂದು ಔಡಲ ಎಲೆ ಅಥವಾ ಪತ್ರಾವಳಿಯಲ್ಲಿ ಹಾಕುವರು. ಬಜಾರದಿಂದ ತಂದ ಎರಡು ಹೊಸ ಮರಗಳ ಮುಂದೆ ಇರುವ ಉದ್ದನೆಯ ಕಡ್ಡಿಯನ್ನು ತೆಗೆದು, ಆ ಎರಡು ಮರಗಳಲ್ಲಿ ಪತ್ರವಳಿಯಲ್ಲಿ ಹಾಕಿರುವ ಇಷ್ಟವಿರುವ ಪದಾರ್ಥಗಳನ್ನು ಸತ್ತ ವ್ಯಕ್ತಿಗೆ ಇಡುತ್ತಾರೆ.

ಆಮೇಲೆ ನಾಲ್ಕು ಜನ ಕುಲಸ್ಥರು ಮತ್ತು ಬಂಧು-ಬಳಗದವರು ಸೇರಿ ಆ ಎರಡು ಮರಗಳನ್ನು ತೆಗೆದುಕೊಂಡು ಹೋಗಿ, ಒಂದು ಮರ ಹೆಣಕ್ಕೆ ವಿಶ್ರಾಂತಿ ಕೊಟ್ಟ ಸ್ಥಳದಲ್ಲಿಡುತ್ತಾರೆ. ಅದನ್ನು ಕಾಗೆ ಬಂದು ತಿಂದ ತಕ್ಷಣ ಅಲ್ಲಿಯೇ ಸ್ವಲ್ಪ ದೂರದಲ್ಲಿ ನೋಡುತ್ತಾ ಕುಳಿತ ಅವರು ಮುಂದೆ ಇನ್ನೊಂದು ಮರ ತೆಗೆದುಕೊಂಡು ಹೋಗಿ ಹೆಣ ಸುಟ್ಟಂತಹ ಸ್ಥಳದಲ್ಲಿ ಇಡುತ್ತಾರೆ. ಹೆಣ ಸುಟ್ಟ ಸ್ಥಳದಲ್ಲಿನ ಬೂದಿ ಬೇರ್ಪಡಿಸಿ ಸುಟ್ಟ ವ್ಯಕ್ತಿಯ ಉಳಿದಿರುವ ಎಲುಬುಗಳನ್ನು ಆಯ್ದು ಸಂಗ್ರಹಿಸಿ ಹೊಸ ಬಿಳಿ ಬಟ್ಟೆಯಲ್ಲಿ ಕಟ್ಟುತ್ತಾರೆ. ನಂತರ ಆ ಸ್ಥಳದಲ್ಲಿ ನೀರು ಚಿಮ್ಮಿಕಿಸಿದ ಬಳಿಕ ಉಳಿದುರುವ ಇನ್ನೊಂದು ಮರದಲ್ಲಿರುವ ಪದ್ಥಾರ್ಥಗಳನ್ನು ಅಲ್ಲಿಟ್ಟು ಊದಿನ ಕಡ್ಡಿಯಿಂದ ಬೆಳಗಿ ವಾಪಸ್ಸು ಮನೆಗೆ ಬರುತ್ತಾರೆ. ಇವರು ಬರುವಾಗ ಬಿಳಿಬಟ್ಟೆಯಲ್ಲಿ ಕಟ್ಟಿರುವ ಎಲುಬುಗಳನ್ನು

ತೆಗೆದುಕೊಂಡು ಬಂದು ಯಾರಾದರೊಬ್ಬರು ನದಿಗೆ ಅಥವಾ ಹಳ್ಳಕ್ಕೆ ಬಿಟ್ಟುಬರುತ್ತಾರೆ. ಈ ಕಾರ್ಯ ಮುಗಿದ ಬಳಿಕ ಎಲ್ಲರೂ ಸೇರಿ ಊಟ ಮಾಡುತ್ತಾರೆ. ಜೊತೆಗೆ ಅಕ್ಕ-ಪಕ್ಕದವರಿಗೂ ಸಹ ಕರೆಯುತ್ತಾರೆ. ಸತ್ತ ವ್ಯಕ್ತಿಗೆ ಇಷ್ಟವಿರುವ ಪದಾರ್ಥಗಳ ಅಡುಗೆ ಮಾಡಿ "ಹೆಗಲ್ ಕಳೆಸುವ" ಕಾರ್ಯದ ಮೂಲಕ ಆತನ ಆತ್ಮಕ್ಕೆ ಶಾಂತಿ ಸಿಗಲೆಂದು ಈ ಕಾರ್ಯ ನೇರವೇರಿಸುವರು. ಒಂದು ವೇಳೆ ಈ ಕಾರ್ಯವನ್ನು ನೆರವೇರಿಸದಿದ್ದರೆ ಆತನ ಆತ್ಮ ಭೂತವಾಗಿ ಕಾಡುತ್ತದೆ ಎಂಬ ನಂಬಿಕೆ ಇವರಲ್ಲಿದೆ.

೧೦ನೇ ದಿನದ ದಾಳ್ ತೊಟೊ ಕಾರ್ಯಕ್ರಮ

ಇವರ ಸಮುದಾಯದಲ್ಲಿ ವ್ಯಕ್ತಿ ಸತ್ತ ಮೂರನೆಯ ದಿನದ ಕಾರ್ಯಕ್ರಮ ಮುಗಿದ ಬಳಿಕ ೧೦ನೆಯ ದಿನಕ್ಕೆ ಸತ್ತ ವ್ಯಕ್ತಿಯ ಬೀಗರು ಬಂದು ೧೦ನೆಯ ದಿನದ ಸಾಯಂಕಾಲ ಕುದಿಸಿದ ಬ್ಯಾಳಿಯಲ್ಲಿ ತುಪ್ಪ ಸೇರಿಸಿ ಚಪಾತಿಯೊಂದಿಗೆ ಊಟ ಮಾಡಲು ವ್ಯವಸ್ಥೆ ಮಾಡುತ್ತಾರೆ. ಜೊತೆಗೆ ಅನ್ನ ಸಾರು ಕೂಡ ಮಾಡಿರುತ್ತಾರೆ. ಈ ೧೦ನೆಯ ದಿನದ ಊಟೋಪಚಾರದ ಖರ್ಚುವೆಚ್ಚಗಳನ್ನು ಬೀಗರೇ ಮಾಡುವ ಸಂಪ್ರದಾಯ ರೂಢಿಯಲ್ಲಿದೆ. ಇವರು ಈ ಕಾರ್ಯಕ್ರಮಕ್ಕೆ 'ದಾಲ್ ತೋಟೋ' ಕಾರ್ಯಕ್ರಮವೆಂದು ಕರೆಯುತ್ತಾರೆ.

೧೧ನೇ ದಿನದ ಪಿಂಡಶಾಂತಿ ಸಂಸ್ಕಾರ ಪೂಜೆ

ಘಿಸಾಡಿ ಸಮುದಾಯದಲ್ಲಿ ವ್ಯಕ್ತಿ ಸತ್ತ ೧೧ನೆಯ ದಿನದ ಕಾರ್ಯವಾಗಿ ಪಿಂಡ ಶಾಂತಿ ಸಂಸ್ಕಾರ ಪೂಜೆ ಮಾಡುವ ಸಂಪ್ರದಾಯ ರೂಡಿಯಲ್ಲಿದೆ. ಈ ಪೂಜೆ ಮಾಡುವ ನಿಗದಿತ ದಿನ ಬರುವ ಮೊದಲೇ ಅವರ ಮನೆ ಅಥವಾ ಗುಡಾರಗಳನ್ನು ಶುಭ್ರವಾಗಿಸಿಕೊಳ್ಳುವರು. ಬಾಡಿಗೆ ಅಥವಾ ಸ್ವಂತ ಮನೆ ಹೊಂದಿರುವವರು ಮನೆಗೆ ಸುಣ್ಣ-ಬಣ್ಣ ಬಳಿದು ಮನೆಯ ಮುಂದೆ ರಂಗೋಲಿ ಹಾಕುತ್ತಾರೆ. ಮನೆಯಲ್ಲಿನ ಪಾತ್ರೆ ಹಳೆಯ ಬಟ್ಟೆಬರೆಗಳನ್ನು ಕೌದಿಗಳನ್ನು ಹಾಸಿಗೆಗಳನ್ನು ತೊಳೆದು ಸ್ವಚ್ಛಗೊಳಿಸಿಕೊಳ್ಳುವರು.

ಈ ಕಾರ್ಯ ನೆರವೇರಿಸುವ ದಿನ ಮುಂಜಾನೆ ಎದ್ದು ಅವರ ಅನುಕೂಲತೆಗಳಿಗೆ ತಕ್ಕಂತೆ ಹೋಳಿಗೆ, ಚಪಾತಿ, ಅನ್ನ, ಸಾರು, ಕಾಯಿಪಲ್ಯ ಮಾಡುವರು. ಮಾರುಕಟ್ಟೆಯಿಂದ ಬೂಂದಿ, ಲಡ್ಡು, ಮೈಸೂರುಪಾಕ್, ಜಿಲೇಬಿ ಇನ್ನಿತರ ಸಿಹಿ ಪದಾರ್ಥಗಳನ್ನು ಖರೀದಿಸಿ ತಂದಿರುತ್ತಾರೆ. ಇವೆಲ್ಲವುಗಳನ್ನು ಪಾತ್ರೆಗಳಲ್ಲಿ ತುಂಬಿಕೊಂಡು ಊರಿನ ಸಮೀಪದಲ್ಲಿ ಹರಿಯುವ ನೀರಿನ ಕಾಲುವೆ, ನದಿ, ಹಳ್ಳ ಕೊಳ್ಳ ಇಲ್ಲವೇ ತೋಟಗಳಿಗೆ ಹೋಗಿ, ಒಂದು ವಿಶಾಲವಾದ ಮರದ ಕೆಳಗಿನ ನೆರಳನ್ನು ಆಯ್ಕೆ ಮಾಡಿಕೊಳ್ಳುವರು. ಆ ಮರದ ಕೆಳಗೆ ಪಿಂಡ ಶಾಂತಿ ಸಂಸ್ಕಾರ ಪೂಜೆ ನೆರವೇರಿಸಿಕೊಳ್ಳಲು ಆ ಸ್ಥಳವನ್ನು ಸಗಣಿಯಿಂದ ಗೋಲಾಕಾರವಾಗಿ ಸಾರಿಸಿ ಸ್ವಚ್ಛಗೊಳಿಸುತ್ತಾರೆ.

ಈ ಮೊದಲೇ ಬ್ರಾಹ್ಮಣ ಪುರೋಹಿತನಿಗೆ ಪಿಂಡಶಾಂತಿ ಪೂಜೆಗೆ ಆಹ್ವಾನಿಸಿರುತ್ತಾರೆ. ಆಗ

ಬ್ರಾಹ್ಮಣ ಪುರೋಹಿತನು ಸಗಣಿಯಿಂದ ಸಾರಿಸಿದ ಚಿಕ್ಕ ಗೋಲಾಕಾರದ ಆವರಣದ ಮೇಲೆ ವಿವಿಧ ಬಣ್ಣಗಳಿಂದ ಕೂಡಿದ ಕುಂಕುಮದಿಂದ ಮಂಡಲ ಬರೆಯುತ್ತಾನೆ. ಈ ಮಂಡಲವು ಚೌಕಾಕಾರದಲ್ಲಿದ್ದು ಪ್ರತಿಯೊಂದು ಮೂಲೆಗಳಿಗೆ ಉದ್ದನೆಯ ಗೆರೆಗಳಿಂದ ಭೇಧಿಸಲ್ಪಟ್ಟಿರುತ್ತದೆ. ಆಗ ಸತ್ತ ವ್ಯಕ್ತಿಯ ಹಿರಿಯ ಮಗನಿಗೆ ಇಲ್ಲವೇ ಕುಟುಂಬಕ್ಕೆ ಸಂಬಂಧಿಸಿದ ವ್ಯಕ್ತಿ ಪಿಂಡ ಶಾಂತಿ ಪೂಜೆಯ ಕ್ರಿಯಾವಿಧಿಗಳನ್ನು ಅನುಸರಿಸಲು ತಲೆ ಬೋಳಿಸಿಕೊಂಡಿರುತ್ತಾನೆ. ಈ ವ್ಯಕ್ತಿಯ ಮುಖಾಂತರವೇ ಬ್ರಾಹ್ಮಣ ಪಿಂಡ ಶಾಂತಿ ಪೂಜೆ ಮಾಡಿಸುತ್ತಾನೆ. ಮೊದಲಿಗೆ ನೆಲದ ಮೇಲೆ ಸಾರಿಸಿದ ಮಂಡಲ ಚಿತ್ರಕ್ಕೆ ಔಪಚಾರಿಕವಾಗಿ ಪೂಜೆ ಸಲ್ಲಿಸಿದ ಬಳಿಕ ಎರಡನೆಯ ಹಂತದಲ್ಲಿ ಆ ಮಂಡಲದ ಸೂರ್ಯ ದಿಕ್ಕಿನ ಕಡೆಗಳಲ್ಲಿ ೧೧ ಗೋದಿಹಿಟ್ಟಿನ ಗೋಲಾಕಾರದ ಪಿಂಡಗಳನ್ನು ಮಾಡಿ ವೀಳ್ಯದೆಲೆಯಲ್ಲಿಡುತ್ತಾರೆ. ಹಾಗೆಯೇ ಮಂಡಲದ ಎದುರಿನಲ್ಲಿ ಪಿಂಡ ಭೂತವನ್ನು ಮಾಡಿ ಕೂಡಿಸಿರುತ್ತಾರೆ. ಆಗ ಬ್ರಾಹ್ಮಣ ತಲೆ ಬೋಳಿಸಿಕೊಂಡಿರುವ ವ್ಯಕ್ತಿಗೆ ಮಂಡಲದ ಎದುರಿನಲ್ಲಿ ಕೂಡಿಸಿ, ಮಂತ್ರಗಳನ್ನು ಪಠಿಸುತ್ತಾ ಆತನ ಮೂಲಕ ಪೂಜೆ ವಿಧಿ-ವಿಧಾನಗಳನ್ನು ಮಾಡಿಸುತ್ತಿರುತ್ತಾನೆ. ಮೊದಲು ೧೧ ಪಿಂಡಗಳಿಗೆ ಕುಂಕುಮ, ಗಂಧ, ಹೂವು, ದೀಪ, ಕಾಯಿ, ಕರ್ಪೂರಗಳಿಂದ ಪೂಜೆ ಸಲ್ಲಿಸಿ ೧೧ ಚಿಕ್ಕ ಚಿಕ್ಕ ನೈವೇದ್ಯಗಳನ್ನು ಹಿಡಿಯುತ್ತಾರೆ. ಆಮೇಲೆ ಆ ಮಂಡಲದ ಮಧ್ಯದಲ್ಲಿ ಕಟ್ಟಿಗೆಯ ಚೂರು ಮತ್ತು ಬೆರಣಿಯಿಂದ ಹೋಮದ ಪುಡಿಯನ್ನು ಹಾಕಿ ಬೆಂಕಿ ಹೊತ್ತಿಸಲಾಗುತ್ತದೆ. ಆ ಹೊತ್ತಿಸಿರುವ ಬೆಂಕಿಯಲ್ಲಿ ಜೀವದಾನ ಕಲ್ಲು, ಇಲ್ಲವೇ ಹೆಣದ ಎಲುಬಿನ ಚೂರನ್ನು ತಂದು ಹಾಕುತ್ತಾರೆ. ಈ ಮೊದಲೇ ಹೆಣ ಸುಟ್ಟ ಸ್ಥಳದಲ್ಲಿ ಯಾರಿಗೂ ಗೊತ್ತಾಗದೆ ಹಾಗೆ ಜೀವದಾನ ಕಲ್ಲು ಇಲ್ಲವೇ ಎಲುಬಿನ ಚೂರನ್ನು ಒಂದು ಕಡೆ ಯಾರಾದರೂ ಇಬ್ಬರೂ ಸೇರಿ ಬಚ್ಚಿಟ್ಟಿರುತ್ತಾರೆ. ಅಂದು ಅವರೇ ಹೋಗಿ ಹೆಣ ಸುಟ್ಟ ಸ್ಥಳದಲ್ಲಿಟ್ಟು ಆ ಕಲ್ಲನ್ನು ಮನೆಗೆ ತರದೆ ನೇರವಾಗಿ ಇಲ್ಲಿಗೆ ತರುತ್ತಾರೆ. ಏಕೆಂದರೆ ಮತ್ತೆ ಮನೆಗೆ ಅದನ್ನು ತೆಗೆದುಕೊಂಡು ಹೋದರೆ ಮನೆ ಮೈಲಿಗೆಯಾಗುತ್ತದೆ ಎಂಬ ನಂಬಿಕೆ ಅವರಲ್ಲಿದೆ.

ಆ ಜೀವದಾನ ಕಲ್ಲು ಅಥವಾ ಸುಟ್ಟು ಉಳಿದ ಎಲುಬಿನ ಒಂದು ಸಣ್ಣ ಚೂರು ಆ ಮಂಡಲದ ಮಧ್ಯದಲ್ಲಿ ಹೋಮ ಸುಡುವ ಕಟ್ಟಿಗೆಯಲ್ಲಿ ಹಾಕಿ ಸುಡುತ್ತಾರೆ. ಈ ರೀತಿ ೧೧ನೆಯ ದಿನಕ್ಕೆ ಸುಟ್ಟರೇ ಸತ್ತ ವ್ಯಕ್ತಿ ದೆವ್ವ ಪಿಶಾಚಿ ಆಗುವುದಿಲ್ಲ. ಮತ್ತು ಸತ್ತ ವ್ಯಕ್ತಿಗೆ ಆತ್ಮಶಾಂತಿ ಯಾಗುತ್ತದೆ ಎಂಬ ನಂಬಿಕೆ ಇವರಲ್ಲಿದೆ. ಪೂಜೆಗೆ ಕುಳಿತುಕೊಂಡಿರುವ ವ್ಯಕ್ತಿ ೧೧ ನೈವೇದ್ಯಗಳನ್ನು ತೆಗೆದುಕೊಂಡು ೧೧ ಸಲ ಹರಿಯುವ ನೀರಿನಲ್ಲಿ ಬಿಟ್ಟು ಪ್ರತಿಯೊಂದು ಸಲ ನೀರಿನಲ್ಲಿ ಸ್ನಾನ ಮಾಡುತ್ತಾನೆ. ಈ ೧೧ ನೈವೇದ್ಯಗಳನ್ನು ನೀರಿನಲ್ಲಿ ಬಿಟ್ಟ ಬಳಿಕ ಒಂದು ನೈವೇದ್ಯ ಆಕಳಿಗೆ, ಇನ್ನೊಂದು ನೈವೆದ್ಯ ಕಾಗೆಗೆ ಮತ್ತೊಂದು ನೈವೇದ್ಯ ಅಗ್ನಿಕುಂಡಕ್ಕೆ ಎಡೆ ಹಿಡಿದು ಅಲ್ಲಿಯೇ ಬಿಡುತ್ತಾರೆ.

ಕೊನೆಗೆ ಅಗ್ನಿಕುಂಡದ ಸುತ್ತಲು ಮೊದಲು ಸತ್ತ ವ್ಯಕ್ತಿಯ ಕುಟುಂಬದವರು ಎಳ್ಳು-

ಕುಂಕುಮಗಳಿಂದ ಮಿಶ್ರಣ ಮಾಡಿದ ಕಲಬೆರಕೆ ನೀರು ತಂಬಿಗೆಯಿಂದ ಸುರಿಯುತ್ತಾರೆ. ಆಮೇಲೆ ಸುತ್ತಲು ಮೂರು ಸಲ ಪ್ರದಕ್ಷಿಣೆ ಹಾಕಿ ನಮಸ್ಕಾರ ಸಲ್ಲಿಸುತ್ತಾರೆ. ಈ ರೀತಿ ಇವರು ಮಾಡುವುದು ಮುಗಿದ ಬಳಿಕ ಉಳಿದ ಕುಲಸ್ಥರು ಹಾಗೂ ಬಂಧುಬಳಗದವರು ಹೀಗೆ ನೀರು ಸುರಿದು ಪ್ರದಕ್ಷಿಣೆ ಹಾಕಿ ನಮಸ್ಕಾರ ಸಲ್ಲಿಸುವರು. ಬಳಿಕ ಎಲ್ಲರೂ ಊಟ ಮಾಡುತ್ತಾರೆ. ಎಲ್ಲರೂ ಅಂದಿನ ವನಭೋಜನ ಅಥವಾ ಪಿಂಡಪೂಜೆಯ ಭೋಜನ ಸವಿದ ಮೇಲೆ ಸಾಯಂಕಾಲ ಮನೆಗೆ ಹಿಂತಿರುಗುತ್ತಾರೆ.

ಇವರಲ್ಲಿ ಈ ರೀತಿ ಪಿಂಡಶಾಂತಿ ಪೂಜೆ ಮತ್ತು ಭೋಜನದ ಹಿಂದಿನ ಮುಖ್ಯ ಉದ್ದೇಶವೆಂದರೆ ಸತ್ತ ವ್ಯಕ್ತಿಯ ಆತ್ಮಕ್ಕೆ ಶಾಂತಿ ಸಿಗಲಿ ಹಾಗೂ ಸತ್ತ ವ್ಯಕ್ತಿಯ ನೆನಪು ಮರೆಮಾಚಿ ಎಲ್ಲರೂ ಸಂತೋಷದಿಂದ ಇದ್ದು ಮುಂದಿನ ಜೀವನ ಸುಗಮವಾಗಿ ಸಾಗಲಿ, ಹಳೆಯ ಕಹಿ-ನೆನಪುಗಳು ಮರೆಯಲಿ ಎಂಬ ನಂಬಿಕೆಯಿಂದ ಈ ಕಾರ್ಯಕ್ರಮ ಇವರಲ್ಲಿ ರೂಢಿಗೆ ಬಂದಿರಬಹುದು ಎಂಬುದು ಕಾಣಸಿಗುತ್ತದೆ.

೧೨ನೆಯ ದಿನದ ಮಾಂಸದೂಟದ ಕಾರ್ಯಕ್ರಮ

ಛಿಸಾಡಿ ಸಮುದಾಯದಲ್ಲಿ ವ್ಯಕ್ತಿ ಸತ್ತಮೇಲೆ ಆ ಕುಟುಂಬದವರು ೧೧ನೆಯ ದಿನದ ಪಿಂಡಶಾಂತಿ ಸಂಸ್ಕಾರ ಪೂಜೆ ಕಾರ್ಯ ಮುಗಿಯುವವರೆಗೂ ಮಾಂಸದೂಟ ಮಾಡುವುದು ನಿಷೇಧವಿರುತ್ತದೆ. ಈ ೧೧ನೆಯ ದಿನದ ಪಿಂಡಶಾಂತಿ ಕಾರ್ಯ ಮುಗಿದ ಬಳಿಕ ಅಂದು ಬಂದಂತಹ ಕುಲಸ್ಥರೆಲ್ಲರೂ ಸೇರಿ ತಮ್ಮ ತಮ್ಮ ಯೋಗ್ಯತಾನುಸಾರ ಕನಿಷ್ಠ ೧೦ ರೂಪಾಯಿಗಳಿಂದ ೫೦ ರೂಪಾಯಿಗಳವರೆಗೆ ತಮ್ಮಲ್ಲಿಯೇ ಪರಸ್ಪರ ವಂತಿಗೆ ಸಂಗ್ರಹಿಸಿ ೧೨ನೆಯ ದಿನದ ಬ್ಯಾಟಿ ಮಾಡುವ ಮಾಂಸದೂಟಕ್ಕೆ ಏರ್ಪಾಡು ಮಾಡುತ್ತಾರೆ. ಎಲ್ಲರೂ ಸಂಗ್ರಹಿಸಿರುವ ಹಣವನ್ನು ನಾಲ್ಕು ಜನ ಮುಖ್ಯಸ್ಥರ ಮೂಲಕ ಒಂದು ಕುರಿಯನ್ನು ಖರೀದಿಸುವರು. ೧೨ನೆಯ ದಿನದ ಮುಂಜಾನೆ ಕುರಿಗೆ ಪೂಜೆ ಮಾಡಿ ಹೂವಿನ ಹಾರ ಹಾಕಿ ಮುಸ್ಲಿಂ ಮುಲ್ಲಾನ ಮೂಲಕ ಕುರಿಯ ಕುತ್ತಿಗೆಯನ್ನು ಕತ್ತರಿಸುತ್ತಾರೆ. ನಂತರ ಅದರ ಎಲ್ಲ ಭಾಗಗಳನ್ನು ಬೇರ್ಪಡಿಸಿ ಕುರಿಯ ಮಾಂಸದೂಟಕ್ಕೆ ಏರ್ಪಾಡು ಮಾಡುತ್ತಾರೆ. ಜೊತೆಗೆ ಚಪಾತಿ ಅನ್ನ, ಬಿರಿಯಾನಿ ಈ ರೀತಿಯಾಗಿ ಭಕ್ಷಭೋಜನವನ್ನು ಮಾಡುತ್ತಾರೆ.

ಎಲ್ಲ ಅಡುಗೆ ತಯಾರಾದ ಬಳಿಕ ಒಂದು ಔಡಲ ಎಲೆಯಲ್ಲಿ ಆ ಅಡುಗೆ ಪದಾರ್ಥಗಳನ್ನು ಹಾಕಿ ಸತ್ತ ವ್ಯಕ್ತಿಯನ್ನು ಸುಡಲು ತೆಗೆದುಕೊಂಡು ಹೋದ ದಾರಿಯಲ್ಲಿ ಅಗಲು ಬಿಟ್ಟು ಬರುತ್ತಾರೆ. ಆಮೇಲೆ ಅಂದು ಅಲ್ಲಿ ಸೇರಿದ ಸಮುದಾಯದ ಕುಲಸ್ಥರೆಲ್ಲರು ಊಟ ಮಾಡುತ್ತಾರೆ. ಕೊನೆಗೆ ತಮ್ಮ ತಮ್ಮ ಮನೆಗಳಿಗೆ ಮತ್ತು ಊರುಗಳಿಗೆ ಹೋಗುವಾಗ ಆ ಕುಟುಂಬದವರ ಬಾಯಿಯಲ್ಲಿ ಮೊದಲು ಬೇವಿನ ತಪ್ಪಲಿನ ಕಹಿ ಕೊಟ್ಟು ನಂತರ ಬಾಯಿಯಲ್ಲಿ ಸಕ್ಕರೆಯ ಸಿಹಿ ಹಾಕಿ ಹೋಗುತ್ತಾರೆ.

ಒಟ್ಟಿನಲ್ಲಿ ಘಿಸಾಡಿ ಸಮುದಾಯದಲ್ಲಿ ವ್ಯಕ್ತಿ ಸತ್ತ ಬಳಿಕ ೩ನೆಯ, ೧೦ನೆಯ, ೧೧ನೆಯ, ೧೨ನೆಯ ದಿನದ ಕಾರ್ಯಗಳನ್ನು ಮಾಡುವುದರ ಉದ್ದೇಶವೆಂದರೆ ಸತ್ತ ವ್ಯಕ್ತಿಯ ಕುಟುಂಬದವರು ಬೇಗನೆ ಆ ಕಹಿ ನೆನಪು ಮರೆಯಲಿ ಎಂಬ ಕಾರಣಕ್ಕಾಗಿ ಮೇಲಿಂದ ಮೇಲೆ ಇಷ್ಟೊಂದು ಕಾರ್ಯಕ್ರಮಗಳನ್ನು ಇಟ್ಟುಕೊಂಡಿದ್ದಾರೆ ಎನಿಸುತ್ತದೆ.

ಅವಿವಾಹಿತ ವಯಸ್ಕರ ಶವ ಸಂಸ್ಕಾರ

ಘಿಸಾಡಿ ಸಮುದಾಯದಲ್ಲಿ ಮದುವೆ ವಯಸ್ಸಿಗೆ ಬಂದ ಅವಿವಾಹಿತ ಹುಡುಗ ಅಥವಾ ಹುಡುಗಿ ತೀರಿಕೊಂಡರೆ ಅವರ ಮದುವೆಯ ಆಸೆ ಆಕಾಂಕ್ಷೆಗಳನ್ನು ಪೂರೈಸುವುದಕೋಸ್ಕರ ಔಪಚಾರಿಕವಾಗಿ ಶವ ಸುಡುವ ಸಂದರ್ಭದಲ್ಲಿ "ಲಕ್ಕಿ ಕಟ್ಟಿಗೆ"ಗೆ ಮದುವೆ ಮಾಡಿ ಶವ ಸುಡುವ ಪದ್ಧತಿ ಅನುಸರಿಸುತ್ತಾರೆ. ಗಂಡು ಹುಡುಗ ಸತ್ತರೇ ಆ ಲಕ್ಕಿ ಕಟ್ಟಿಗೆಗೆ ಹೆಣ್ಣಿನ ವೇಷ-ಭೂಷಣಗಳನ್ನು ತೊಡಿಸಿ ಅರಿಶಿಣ ಬೊಟ್ಟನಿಂದ ತಾಳಿ ಕಟ್ಟಿದ ಮೇಲೆ, ಎಲ್ಲರೂ ಅಕ್ಕಿಕಾಳು ಹಾಕುವರು. ಈ ಕಾರ್ಯ ಮುಗಿದ ಬಳಿಕ ಶವ ಸುಡುತ್ತಾರೆ. ಹಾಗೇ ಹೆಣ್ಣು ಹುಡುಗಿ ಸತ್ತರೆ ಆ ಲಕ್ಕಿ ಬಡಿಗೆಗೆ ಗಂಡಿನ ವೇಷ-ಭೂಷಣಗಳನ್ನು ತೊಡಿಸಿ ಹೆಣ್ಣು ಶವಕ್ಕೆ ಅರಿಶಿಣ ಬೊಟ್ಟಿನ ತಾಳಿ ಕಟ್ಟಿದ ಮೇಲೆ ಎಲ್ಲರೂ ಅಕ್ಕಿ ಕಾಳು ಹಾಕುವ ಕಾರ್ಯಮುಗಿದ ಬಳಿಕ ಶವ ಸುಡುತ್ತಾರೆ. ಈ ಪದ್ಧತಿ ಅನುಸರಿಸುವ ಮುಖ್ಯ ಉದ್ದೇಶವೆಂದರೆ ಮದುವೆ ವಯಸ್ಸಿಗೆ ಬಂದ ಅವಿವಾಹಿತ ಹುಡುಗ ಹುಡುಗಿಯ ಆಸೆ ಪೂರೈಸುವುದರೊಂದಿಗೆ ಇವರು ದೆವ್ವ ಭೂತಗಳಾಗಿ ಇದ್ದವರನ್ನು ಕಾಡಬಾರದು ಎಂಬ ಸದ್ದುದೇಶದಿಂದ ಮದುವೆ ಮಾಡಿ ಶವವನ್ನು ಸುಡುವ ಪದ್ಧತಿ ಇವರಲ್ಲಿದೆ.

ಚಿಕ್ಕಮಕ್ಕಳ ಶವ ಸಂಸ್ಕಾರ

ಈ ಸಮುದಾಯದಲ್ಲಿ ೧೪ ಮತ್ತು ೧೫ ವರ್ಷದ ಒಳಗಿನ ಚಿಕ್ಕ ಮಕ್ಕಳು ತೀರಿಕೊಂಡರೆ ಮಾತ್ರ ಶವವನ್ನು ಹೂಳುತ್ತಾರೆ. ಶವ ಊಳಿದ ಮೇಲೆ ೧೦, ೧೧, ೧೨ನೇ ದಿನದ ಕಾರ್ಯಗಳನ್ನು ಮಾಡುವುದಿಲ್ಲ. ಆದರೆ ಶವ ಹೂತ ೩ನೆಯ ದಿನ ಕುಲಸ್ಥರೆಲ್ಲರೂ ಬಂಧುಬಳಗ ದವರೆಲ್ಲರೂ ಸೇರಿ ಶವ ಹೂತಿರುವ ಕುಣಿಗೆ ಹೋಗಿ ಕುಣಿಯ ಮೇಲೆ "ಹಾಲು" ಎರೆದು ಬರುವುದರೊಂದಿಗೆ ಮನೆಯಲ್ಲಿರುವುದನ್ನೆ ಊಟ ಮಾಡಿ ಎಲ್ಲರೂ ತಮ್ಮ ತಮ್ಮ ಊರುಗಳಿಗೆ ಮತ್ತು ಮನೆಗಳಿಗೆ ಹೋಗುತ್ತಾರೆ. ಈ ವಯಸ್ಸಿನ ಮಕ್ಕಳು ಹಾಲು ಕುಡಿಯುವ ವಯಸ್ಸಿನ ಮಕ್ಕಳೆಂದೇ ಪರಿಗಣಿಸಿ, ಕೊನೆಗೆ ಹಾಲು ಎರೆದು ಅವರ ಹಾಲು ಕುಡಿಯುವ ಆಸೆ ಪೂರೈಸುವ ಸಂಪ್ರದಾಯ ಅನುಸರಿಸುತ್ತಾರೆ.

ಆ. ಧಾರ್ಮಿಕತೆ

ಧಾರ್ಮಿಕವಾಗಿ ಭಾರತ ದೇಶವು ವೈವಿಧ್ಯತೆಯ ದೇಶವಾಗಿದ್ದು ವಿವಿಧ ಧರ್ಮದ ಜನರು ಇಲ್ಲಿ ವಾಸಿಸುತ್ತಾರೆ. ಅಂತೆಯೇ ಇಲ್ಲಿ ಕಂಡುಬರುವಷ್ಟು ಧಾರ್ಮಿಕ ಮಠ, ಮಂದಿರ, ಗುಡಿ

ಗೋಪುರಗಳು ಬೇರಾವ ರಾಷ್ಟ್ರಗಳಲ್ಲಿ ಕಂಡುಬರುವುದಿಲ್ಲ. ಇಲ್ಲಿನ ಪ್ರತಿಯೊಂದು ದೈವಗಳಿಗೂ ಇದು ನಮ್ಮ ಮನೆದೇವರು, ಕುಲದೈವ ಎಂದು ಅನೇಕ ಧಾರ್ಮಿಕ ವಿಧಿ-ವಿಧಾನಗಳನ್ನು ಅನುಸರಿಸುತ್ತಾರೆ.

೧೧. ಹಬ್ಬಗಳು

ಸಾಮುದಾಯಿಕ ಬದುಕಿನಲ್ಲಿ ಜನಾಂಗದ ಐಹಿಕ ಸುಖ ಸಾಧನೆಯಲ್ಲಿ ಮತ್ತು ಪರಲೋಕದ ಮುಕ್ತಿ ಸುಖ ಪ್ರಾಪ್ತಿಗಳಲ್ಲಿ ಹಬ್ಬಗಳು ಬಹಳ ಪ್ರಮುಖವಾದ ಪಾತ್ರ ವಹಿಸುತ್ತವೆ. ಅಂತೆಯೇ ಜಗತ್ತಿನ ಎಲ್ಲ ಜನಾಂಗವು ದೇವರ ಪ್ರೀತ್ಯರ್ಥವಾಗಿ ಹಬ್ಬಗಳನ್ನು ಆಚರಿಸುತ್ತಾ ಬಂದಿರಬಹುದು. ಇವುಗಳನ್ನು ಆಚರಿಸಿದರೆ ಧರ್ಮವನ್ನು ಆಚರಿಸಿದಂತೆಯೇ ಎಂಬ ನಂಬಿಕೆಯಲ್ಲಿ ಹಬ್ಬ ಧರ್ಮದ ಆಚರಣೆಯಲ್ಲಿಯೇ ಬೆಳೆದು ಬಂದಂತೆ ತೋರುತ್ತದೆ.

ಈ ಹಬ್ಬಗಳು ಮಾನವನ ಜೀವ ಜಗತ್ತು, ದೇವರುಗಳ ಸಂಬಂಧ, ಹುಟ್ಟು-ಸಾವು, ಸುಖ-ದುಃಖ, ಅನೇಕ ಜೀವನ ಸಂಬಂಧಿ ಪ್ರಮುಖ ವಿಚಾರಗಳ ಬಗೆಗೆ ಸಮರ್ಪಕವಾದ ರೀತಿಯಲ್ಲಿ ಆಲೋಚಿಸಿ ಮಾನವನನ್ನು ಬಾಳಿನ ಪಥದಲ್ಲಿ ಸುಖವಾಗಿ ಹಾಗೂ ಸುರಕ್ಷಿತವಾಗಿ ಸಾಗಿಸಿ ಅವನ ಜೀವನವನ್ನು ಉನ್ನತಗೊಳಿಸುತ್ತದೆ. ಹಬ್ಬಗಳು ಮಾನವನ ಸಂಕುಚಿತ ಭಾವನೆಗಳನ್ನು ದೂರ ಮಾಡಿ ಪರಸ್ಪರ ಸಹಕಾರ, ಸಹಬಾಳ್ವೆಯಂತಹ ಕಾರ್ಯಗಳನ್ನು ಏರ್ಪಡಿಸುತ್ತದೆ. ಮಾನವನ ನಿತ್ಯ ಲೌಕಿಕ ಜೀವನದಿಂದ ಪಾರಮಾರ್ಥಿಕ ಜೀವನದತ್ತ ಮುನ್ನಡೆಯಲು ಸನಾತನವಾಗಿ ಆಚರಿಸುತ್ತಾ ಬಂದ ಈ ಹಬ್ಬಗಳು ಅನೇಕ ಸಮುದಾಯಗಳ ಚರಿತ್ರೆಯನ್ನು ಕಟ್ಟಿಕೊಡುವಲ್ಲಿ ಬಹಳ ಪ್ರಮುಖವಾಗಿವೆ.

ಚಂದ್ರ-ಸೂರ್ಯರ ಗತಿಗಳು ಬದಲಾಗುವುದೇ 'ಪರ್ವ'. ಬಹುತೇಕ ಪುರಾತನ ಹಬ್ಬಗಳು ಫಲೋತ್ಪತ್ತಿ ಸಂಬಂಧಿಯಾಗಿದ್ದು, ಅವು ಋತುಗತಿಯನ್ನು ಚಂದ್ರ ಸೂರ್ಯರ ಚಲನೆಯನ್ನು ಅವಲಂಬಿಸಿದವು. ಈ ಸಂಪ್ರದಾಯಗಳೇ ಮುಂದೆ ಹಬ್ಬಗಳಾದವು. 'ಪರ್ವ' ಎಂಬ ಪದಕ್ಕೆ 'ಹಬ್ಬ' ಎಂಬ ಅರ್ಥ ಬರಲು ಕಾರಣ ಸ್ಪಷ್ಟವಾಗಿದೆ.

ಈ ಹಬ್ಬಗಳ ಆಚರಣೆಯಲ್ಲಿ ಆಧ್ಯಾತ್ಮಿಕ ಆರೋಗ್ಯ, ಸಾಮಾಜಿಕ, ಸಾಂಸ್ಕೃತಿಕ ಹಾಗೂ ಧಾರ್ಮಿಕ ಅಂಶಗಳು ಕ್ರೋಢೀಕೃತವಾಗಿದ್ದು, ಪ್ರಾರ್ಥನೆ ಮನಸ್ಸಿನ ಶುದ್ಧಿಗೆ ಅವಕಾಶ ಕಲ್ಪಿಸಿದರೆ, ವಿಶೇಷ ಆಹಾರ ಸೇವನೆ ದೇಹದ ಆರೋಗ್ಯವನ್ನು ಕಾಪಾಡುತ್ತದೆ. ಹಬ್ಬಗಳ ಆಚರಣೆಯಲ್ಲಿ ಹಿರಿಯರು, ಬಂಧುಮಿತ್ರರು ಸಮುದಾಯದವರು ಬೆರೆಯುವುದು ಸಾಮಾಜಿಕ ಸಾಮರಸ್ಯವನ್ನು ಬೆಳೆಸುತ್ತದೆ. ಲೌಕಿಕವಾದ ಈ ರೀತಿಯ ಸ್ನೇಹ ಸಹಕಾರಗಳು ಪರಸ್ಪರ ತಿಳುವಳಿಕೆಯನ್ನು ಹೆಚ್ಚಿಸುತ್ತವೆ.

ಛಸಾಡಿ ಸಮುದಾಯದಲ್ಲಿ ಪ್ರತಿಯೊಂದು ಅಮಾವಾಸ್ಯೆ, ಹುಣ್ಣಿಮೆಗಳಿಗೆ ಹೆಚ್ಚಿನ ಮಹತ್ವ

ಕೊಟ್ಟಿರುವುದು ಕಂಡುಬರುವುದಿಲ್ಲ. ಆದರೂ ಎಲ್ಲ ಅಮಾವಾಸ್ಯೆಗಳಿಗೆ ಮಾತ್ರ ಪ್ರಾಶ್ಯಸ್ತ್ಯ ಕೊಟ್ಟಿರುವುದು ಕಂಡುಬರುತ್ತದೆ. ಆದರೆ ವಿಶೇಷವಾಗಿ ಇವರು ಪ್ರತಿ ವರ್ಷ ಯುಗಾದಿ, ಮಹಾನವಮಿ, ನಾಗರಪಂಚಮಿ, ದೀಪಾವಳಿ, ಸಂಕ್ರಾಂತಿ, ಹೋಳಿ ಹುಣಿಮೆ ಹಬ್ಬಗಳನ್ನು ಚಾಚೂ ತಪ್ಪದೇ ಆಚರಿಸುತ್ತಾರೆ. ಅಲ್ಲದೆ ಇಸ್ಲಾಂ ಧರ್ಮದ 'ಮೊಹರಂ' ಹಬ್ಬವನ್ನು ಆಚರಿಸುತ್ತಾರೆ. ಆದರೆ ಕ್ರೈಸ್ತಧರ್ಮದ ಹಬ್ಬಗಳನ್ನು ಆಚರಿಸುವುದು ಕಂಡುಬರುವುದಿಲ್ಲ. ಏಕೆಂದರೆ ಇಸ್ಲಾಂ ಧರ್ಮೀಯರು ಈ ದೇಶದ ನೆಲವನ್ನು ಆಳಿರುವುದರಿಂದ ಅನೇಕ ಆಚರಣೆಗಳು ಅನೇಕ ಸಮುದಾಯಗಳಲ್ಲಿ ಕಂಡುಬರುತ್ತವೆ. ಆದ್ದರಿಂದ ಇವರು ಇಸ್ಲಾಂ ಹಬ್ಬ ಆಚರಿಸುತ್ತಾರೆ.

೧. ಯುಗಾದಿ ಹಬ್ಬ

ಪ್ರತಿ ವರ್ಷಕ್ಕೆ ಒಂದು ಸಲ ಆರಂಭಿಕ ಚೈತ್ರ ಮಾಸದಲ್ಲಿ ಬರುವ ಈ ಯುಗಾದಿ ಹಬ್ಬವನ್ನು ಹಿಂದೂಗಳು ಹೊಸ ವರ್ಷವೆಂದೇ ಗುರುತಿಸುತ್ತಾರೆ.. ಆರಂಭಿಕ ಹೊಸ ವರ್ಷದ ಹಬ್ಬವೆಂದು ಹಿಂದೂಗಳು ಸಂಭ್ರಮ, ಸಂತೋಷದಿಂದ ಆಚರಿಸುವ ಈ ಹಬ್ಬವು ಛಿಸಾಡಿ ಸಮುದಾಯದಲ್ಲಿ ಕೂಡಾ ಬಹು ಸಂಭ್ರಮ ಸಂತೋಷದಿಂದ ಆಚರಿಸುವ ಹಬ್ಬವಾಗಿದೆ.

ಛಿಸಾಡಿ ಸಮುದಾಯದಲ್ಲಿ ಈ 'ಹಬ್ಬ' ಇನ್ನು ಎರಡು ಮೂರು ದಿನಗಳಲ್ಲಿ ಬರುವುದಕ್ಕಿಂತ ಮೊದಲು ಇವರು ತಮ್ಮ ಮನೆಗಳನ್ನು ಸ್ವಚ್ಛಗೊಳಿಸಿ ಮನೆಯಲ್ಲಿನ ಬಟ್ಟೆ ಹಾಸಿಗೆಗಳನ್ನು ಶುಭ್ರವಾಗಿಸಿ, ಹಳೆಯ ಪಾತ್ರೆಗಳನ್ನೆಲ್ಲ ತೊಳೆದು ಈ ಹಬ್ಬದ ದಿನ ಮುಂಜಾನೆ ಎದ್ದು ತಮ್ಮ ಮನೆ ಅಥವಾ ಗುಡಾರಗಳಲ್ಲಿನ ನೆಲ ಅಂಗಳಗಳನ್ನು ದನಗಳ ಸಗಣಿಯಿಂದ ಸಾರಿಸಿಕೊಳ್ಳುವರು. ಹಾಗೆಯೇ ತಮ್ಮ ಅಂಗಳದ ಮುಂದೆ ವಿವಿಧ ರೀತಿಯ ಅಲಂಕೃತವಾದ ರಂಗೋಲಿಯ ಚಿತ್ರಗಳನ್ನು ಬಿಡಿಸುತ್ತಾರೆ. ಎಲ್ಲರೂ ಸ್ನಾನ ಮಾಡಿ ಅನುಕೂಲವಾದರೆ ಹೊಸ ಬಟ್ಟೆಗಳನ್ನು ತಂದು ಹಾಕಿಕೊಳ್ಳುತ್ತಾರೆ. ಅಂದು ಇವರ ಮನೆಗಳಲ್ಲಿ ಹಬ್ಬದ ಸಿಹಿ ಅಡಿಗೆಯಾದ ಹೋಳಿಗೆ, ಹುಗ್ಗಿ, ಕಡಬು, ಅನ್ನ-ಸಾಂಬಾರು, ಹಪ್ಪಳ ಮುಂತಾದ ಭಕ್ಷ್ಯಭೋಜನವನ್ನು ಮಾಡುತ್ತಾರೆ. ಮುಖ್ಯವಾಗಿ ಅಂದಿನ ವಿಶೇಷವೆಂದರೆ ಬೇವು-ಬೆಲ್ಲ ಸವಿಯುವ ಸಂಭ್ರಮ. ಬೇವು ಬೆಲ್ಲದಿಂದ ಹಾಗೂ ವಿವಿಧ ರೀತಿಯ ಹಣ್ಣುಗಳಿಂದ ತಯಾರಿಸಿದ ರುಚಿಕರವಾದ ರಸದ ಸವಿಯನ್ನು ಕುಡಿಯುತ್ತಾರೆ.

ಶಿವ-ಪಾರ್ವತಿ ಕೋಲು ಕಟ್ಟುವುದು : ಈ ಯುಗಾದಿ ಹಬ್ಬದ ದಿನ ಪ್ರತಿಯೊಬ್ಬ ಛಿಸಾಡಿ ಸಮುದಾಯದ ಕುಟುಂಬಗಳ ಮನೆ ಅಥವಾ ಗುಡಾರಗಳ ಅಂಗಳದ ಮಧ್ಯದಲ್ಲಿ ತಮ್ಮ ಮನೆ ಅಥವಾ ಗುಡಾರಗಳಿಗಿಂತ ಎತ್ತರವಾದ ಉದ್ದನೆಯ ಬಿದಿರಿನ ಕಂಬದ ಕೋಲನ್ನು ತೆಗೆದುಕೊಂಡು ಆ ಕೋಲಿಗೆ ಒಂದು ಹೊಸ ಸೀರೆಯನ್ನು ತೊಡಿಸುತ್ತಾರೆ. ಅದರ ಮೇಲೆ ಒಂದು ತಾಮ್ರದ ತಂಬಿಗೆಯನ್ನು ಬೋರಲಾಗಿ ಕಟ್ಟುತ್ತಾರೆ. ಆ ತಂಬಿಗೆ ಹಾಗೂ ಸೀರೆಯನ್ನು ಹೂವುಗಳಿಂದ ಅದಕ್ಕೆ ಶೃಂಗರಿಸುತ್ತಾರೆ. ಬೇವಿನ ಎಲೆಗಳನ್ನು ಕೂಡ ಕಟ್ಟುತ್ತಾರೆ. ಆ ಬಿದರಿನ ಕೋಲಿನ ತಳ ಭಾಗದಲ್ಲಿ

ಅಂದರೆ, ನೆಲದಲ್ಲಿ ಒಂದು ತುಂಬಿದ ತಂಬಿಗೆಯನ್ನಿಟ್ಟು ಅದಕ್ಕೆ ವಿಭೂತಿ, ಹೂವು, ಕುಂಕುಮಗಳಿಂದ ಹಾಗೂ ಗಂಧ ದೀಪ ದೂಪಗಳಿಂದ ಅಲಂಕರಿಸುತ್ತಾರೆ. ಮನೆಯಲ್ಲಿನ ಎಲ್ಲ ಮುತ್ತೈದೆಯರು ಕಳಸದಿಂದ ಬೆಳಗುತ್ತಾರೆ. ಈ ಸೀರೆ ಉಡಿಸಿರುವ ಕೋಲು ಸಾಕ್ಷಾತ್ ಶಿವನ ಸತಿ ಪಾರ್ವತಿ ಎಂದು ನಂಬುತ್ತಾರೆ. ಮರುದಿನ ಮುಂಜಾನೆ ಈ ಕೋಲಿಗೆ ಮತ್ತೊಂದು ಸಲ ಪೂಜೆಮಾಡಿ ಕೋಲಿಗೆ ಕಟ್ಟಿರುವ ಸೀರೆ ತೆಗೆದುಕೊಂಡು ಮನೆಯಲ್ಲಿನ ಯಾರಾದರೊಬ್ಬ ಮುತ್ತೈದೆಯರು ಧರಿಸುತ್ತಾರೆ. ಈ ಯುಗಾದಿ ಹಬ್ಬವು ಆರಂಭಿಕ ಬೇಸಿಗೆ ಕಾಲದಲ್ಲಿ ಬರುವುದರಿಂದ ಈ ಕೋಲು ಸಾಕ್ಷಾತ್ ಶಿವ-ಪಾರ್ವತಿಯರಾಗಿ ಅದಕ್ಕೆ ಕಟ್ಟಿರುವ ಬೇವಿನ ತಪ್ಪಲು ಪರಿಸರದಲ್ಲಿ ಒಳ್ಳೆಯ ಆರೋಗ್ಯ ಮತ್ತು ನೆರಳು ನೀಡಲಿ ಎಂಬ ಉದ್ದೇಶ ಒಳಗೊಂಡಿದೆ.

ಮನೆ ದೇವರು ಹಾಗೂ ಸಲಕರಣೆಗಳ ಪೂಜೆ : ಕೋಲಿನ ಪೂಜೆ ಮುಗಿದ ಬಳಿಕ ಮನೆಯಲ್ಲಿನ ದೇವರಿಗೆ ಹಾಗೂ ಇವರ ವೃತ್ತಿಗೆ ಸಂಬಂಧಿಸಿದ ಸಾಧನ ಸಲಕರಣೆಗಳಿಗೆ ಅಲಂಕರಿಸಿ, ವಿಭೂತಿ, ಕುಂಕುಮ, ಹೂವು, ದೂಪ-ದೀಪಗಳನ್ನು ಬೆಳಗಿಸಿ ಕರ್ಪೂರದಿಂದ ಮಂಗಳಾರತಿಯನ್ನು ಮಾಡಿ ನಮಸ್ಕರಿಸುತ್ತಾರೆ. ವೃತ್ತಿ ಸಲಕರಣೆಗಳು ಅವರ ಬದುಕಿನ ನಿರ್ವಹಣೆಯ ಮುಖ್ಯ ಸಾಧನಗಳಾಗಿ ರುವುದರಿಂದ ಇವುಗಳಿಗೆ ಪೂಜ್ಯ ಭಾವನೆಯಿಂದ ಗೌರವಿಸುತ್ತಾರೆ. ಬಳಿಕ ಮನೆಯಲ್ಲಿ ಮಾಡಿದ ಸಿಹಿ ಅಡುಗೆಯನ್ನು ಊಟ ಮಾಡುತ್ತಾರೆ.

೨. ಮಹಾನವಮಿ ಹಬ್ಬ

ಈ ಮಹಾನವಮಿ ಹಬ್ಬವು ಆಶ್ವೀಜ ಮಾಸದಲ್ಲಿ ಅಂದರೆ ಸೆಪ್ಟಂಬರ್ ಅಥವಾ ಅಕ್ಟೋಬರ್ ತಿಂಗಳಿನಲ್ಲಿ ಬರುವ ಹಿಂದೂ ಹಬ್ಬಗಳಲ್ಲೊಂದು. ಈ ಹಬ್ಬವು ಘಿಸಾಡಿ ಸಮುದಾಯದವರಿಗೆ ತಮ್ಮ ಕುಲದೇವರ ಹಬ್ಬವಾಗಿದ್ದು, ಇವರು ಈ ಹಬ್ಬವನ್ನು ಬಹಳ ವಿಶೇಷ ಭಕ್ತಿ ಭಾವ, ಪೂಜೆ ಪುನಸ್ಕಾರಗಳೊಂದಿಗೆ ಆಚರಿಸುತ್ತಾರೆ.

ಮಹಾಲಯ ಅಮಾವಾಸ್ಯೆಯ ದಿನದಿಂದ ವಿಜಯ ದಶಮಿಯ ಒಟ್ಟು ೯ರಿಂದ ೧೦ ದಿನಗಳವರೆಗೆ ಘಿಸಾಡಿ ಜನರು ಬಹಳ ಸಂತೋಷ, ಸಂಭ್ರಮದಲ್ಲಿರುತ್ತಾರೆ. ಬಹುತೇಕ ಈ ಸಮುದಾಯದ ಶೇ. ೯೯ರಷ್ಟು ಜನರು ಅಂಬಾಭವಾನಿ ದೇವಿಯ ಹೆಸರಿನಲ್ಲಿ ಕನಿಷ್ಟ ೫ರಿಂದ ೯ ದಿನಗಳವರೆಗೆ ದೀಪ ಹಾಕುವ ಕಾರ್ಯಕ್ರಮ ಇಟ್ಟುಕೊಂಡಿರುತ್ತಾರೆ. ಈ ದೀಪ ಹಾಕುವ ಕಾರ್ಯಕ್ರಮದ ವಿವರಣೆಯನ್ನು 'ಆಚರಣೆಗಳು' ಎಂಬ ಶಿರ್ಷಿಕೆಯಲ್ಲಿ ಸವಿಸ್ತಾರವಾಗಿ ವಿವರಿಸಲಾಗಿದೆ. ಈ ಮಹಾಲಯ ಅಮಾವಾಸ್ಯೆ ಬರುವ ಎರಡು ದಿನಗಳ ಮುಂಚೆಯೇ ಇವರು ತಮ್ಮ ಮನೆಯಲ್ಲಿನ ಬಟ್ಟೆ-ಬರೆಗಳನ್ನು, ಪಾತ್ರೆ ಪಗಡೆಗಳನ್ನು, ಮನೆ-ಮಾರು ಸಾರಿಸಿಕೊಂಡು ಶುಚಿತ್ವವಾಗಿಟ್ಟು ಕೊಂಡಿರುತ್ತಾರೆ. ಈ ಹಬ್ಬವನ್ನು ಇವರು ಮೊದಲು ಅಮವಾಸ್ಯೆ ಪೂಜೆ, ಆಯುಧಪೂಜೆ, ವಿಜಯದಶಮಿ ಪೂಜೆ, ಅಂಬಾಭವಾನಿ ಪೂಜೆಗಳನ್ನು ಈ ಸಂದರ್ಭದಲ್ಲಿ ತಪ್ಪದೇ ಆಚರಿಸುತ್ತಾರೆ.

ಆಯುಧ ಪೂಜೆ : ಇವರು ಆಯುಧ ಪೂಜೆಯನ್ನು ಮಾಡುವ ದಿನ ತಮ್ಮ ಕುಲ ಕಸುಬಿನಲ್ಲಿ ಬಳಸುವ ಎಲ್ಲ ಸಾಧನ ಸಲಕರಣೆಗಳನ್ನು ತೊಳೆಯುವರು. ಆಮೇಲೆ ದೇವರ ಜಗುಲಿಯ ಪಕ್ಕದಲ್ಲಿ ಇಲ್ಲವೆ ಕುಲುಮೆಯ ಪಕ್ಕದಲ್ಲಿ ಸಾಲಾಗಿ ಜೋಡಿಸಿ ಇಡುವರು. ಜೋಡಿಸಿಟ್ಟ ಪ್ರತಿಯೊಂದು ಸಾಧನ ಸಲಕರಣೆಗಳಿಗೆ ವಿಭೂತಿ, ಕುಂಕುಮ, ಹೂವುಗಳಿಂದ ಅಲಂಕರಿಸುವರು. ನಂತರ ದೀಪ ಬೆಳಗಿಸಿ, ಹಣ್ಣು-ಕಾಯಿಗಳನ್ನಿಟ್ಟು ಕರ್ಪೂರದಿಂದ ಮಂಗಳಾರತಿಯನ್ನು ಮಾಡುವರು. ಇವರು ಇವುಗಳಿಗೆ ಬಹಳ ಭಯ ಭಕ್ತಿ ತೋರಿಸುವುದರ ಮೂಲಕ ಪೂಜೆಯನ್ನು ಮಾಡುತ್ತಾರೆ. ಇವರು ತಮ್ಮ ಕುಲಕಸುಬಿನ ಸಾಧನ ಸಲಕರಣೆಗಳಿಗೆ ವರ್ಷಕ್ಕೆ ಎರಡು ಸಲ ಪೂಜೆಯನ್ನು ಮಾಡುತ್ತಾರೆ. ಒಂದು ಯುಗಾದಿ ಹಬ್ಬದಲ್ಲಿ, ಎರಡನೆಯದು ಈ ಮಹಾನವಮಿಯ ಆಯುಧ ಪೂಜೆಯ ದಿನದಂದು ಪೂಜಿಸುತ್ತಾರೆ.

೩. ನಾಗರ ಪಂಚಮಿ

ಘಿಸಾಡಿ ಸಮುದಾಯದವರು ಅಲೆಮಾರಿಗಳಾಗಿರುವುದರಿಂದ ಕನಿಷ್ಟ "ನಾಗರ ಪಂಚಮಿ" ಹಬ್ಬದ ಹೆಸರಿನಲ್ಲಾದರೂ ತಮ್ಮ ಕುಟುಂಬದ ಹೆಣ್ಣು ಮಕ್ಕಳನ್ನು ತವರು ಮನೆಗೆ ಕರೆಸಿಕೊಳ್ಳುವ ಹಾಗೂ ಮಕ್ಕಳ ಕುಶಲೋಪರಿಯನ್ನು ವಿಚಾರಿಸುವ ಹಬ್ಬವಾಗಿ ನಾಗರ ಪಂಚಮಿಯನ್ನು ಆಚರಿಸುತ್ತಾರೆ.

ನಾಗರ ಪಂಚಮಿಯ ಹಬ್ಬವು ನಾಗರ ಅಮಾವಾಸ್ಯೆ ನಾಗಚತುರ್ಥಿ, ನಾಗಪಂಚಮಿ ಎಂಬ ಮೂರು ಹೆಸರುಗಳಿಂದ ಗುರುತಿಸುವುದರ ಮೂಲಕ ಇವರು ಈ ಹಬ್ಬವನ್ನು ಆಚರಿಸುತ್ತಾರೆ. ತವರು ಮನೆಗೆ ಬಂದ ಹೆಣ್ಣು ಮಕ್ಕಳಿಗೆ ಹೊಸ ಬಟ್ಟೆಗಳನ್ನು, ಬಳೆಗಳನ್ನು ಉಡುಗೊರೆಯಾಗಿ ನೀಡುತ್ತಾರೆ. ಹಾಗೆಯೇ ಹೂವು, ಕೊಬ್ಬರಿ, ಹಣ್ಣು-ಹಂಪಲು, ಉಡಿಯಲ್ಲಿ ತುಂಬಿಸುತ್ತಾರೆ. ಉಡಿ ತುಂಬಿಸಿಕೊಂಡ ಮಗಳು ತವರು ಮನೆಯನ್ನು "ಬೆಳೆಯುವ ಬಳ್ಳಿಯ ಹಾಗೆ ಬೆಳೆಯಲಿ, ಹೂ ಕಾಯಿ ಹಣ್ಣುಗಳಾಗಿ ಫಲ ಕೊಡಲಿ" ಎಂದು ಹಾರೈಸುತ್ತಾರೆ. ಈ ಹಬ್ಬದ ಸಂದರ್ಭದಲ್ಲಿ ಇವರ ಮನೆಯಲ್ಲಿ ಸಿಹಿ ಅಡುಗೆಯನ್ನು ಮಾಡಲಾಗುತ್ತದೆ. ಅಂದು ಅವರು ತಮ್ಮ ಹತ್ತಿರದಲ್ಲಿರುವ ಮರಗಳಿಗೆ ಜೋಕಾಲಿಯನ್ನು ಹಾಕಿ ಹೆಣ್ಣು ಮಕ್ಕಳು ಜೋಕಾಲಿ ಆಟವನ್ನು ಆಡುತ್ತಾರೆ. ಪಂದ್ಯಗಳನ್ನು ಕಟ್ಟುತ್ತಾರೆ, ಕಥೆಗಳನ್ನು ಹೇಳುತ್ತಾರೆ. ಸಿನಿಮಾ ಚಿತ್ರಗೀತೆಗಳು, ಸಂಪ್ರದಾಯ ಹಾಡುಗಳನ್ನು ಹಾಡುತ್ತಾರೆ. ಹೀಗೆ ವಿವಿಧ ಬಗೆಯ ಮನೋರಂಜನೆಯಿಂದ ಹಬ್ಬವನ್ನು ಸಂಭ್ರಮಿಸುತ್ತಾರೆ.

೪. ದೀಪಾವಳಿ ಹಬ್ಬ

ಘಿಸಾಡಿ ಸಮುದಾಯದವರು ದೀಪಾವಳಿಯನ್ನು ತುಂಬಾ ಸಡಗರದಿಂದ ಆಚರಿಸುತ್ತಾರೆ. ಈ ಹಬ್ಬಕ್ಕೆ ಬಲಿಪಾಡ್ಯದ ದಿನ ಮನೆಮಾರು ಸ್ವಚ್ಛಗೊಳಿಸಿಕೊಂಡು ಅಂದು ಹಬ್ಬದ ಸಿಹಿ ಭಕ್ಷ್ಯ

ಭೋಜನವನ್ನು ಮಾಡುತ್ತಾರೆ. ಸಾಯಂಕಾಲ ತಮ್ಮ ಮನೆಯ ದೇವರಿಗೆ ಹಾಗೂ ಅಂಗಳದಲ್ಲಿ ದೀಪಗಳನ್ನು ಬೆಳಗಿಸುತ್ತಾರೆ. ಯಾವುದಾದರೂ ಕುಟುಂಬದಲ್ಲಿ ಹೊಸದಾಗಿ ಮದುವೆಯಾಗಿದ್ದರೆ ಆ ವರ್ಷ ಅಳಿಯನನ್ನು ಕರೆಯಿಸಿ ಅಳಿಯ ಮಗಳಿಗೆ ಕನಿಷ್ಟ ಕೈಲಾದಷ್ಟು ಹೊಸ ಬಟ್ಟೆಗಳನ್ನು ಉಡುಗೊರೆಯನ್ನಾಗಿ ನೀಡುವ ಸಂಪ್ರದಾಯ ಇವರಲ್ಲಿದೆ.

೫. ಸಂಕ್ರಾಂತಿ ಹಬ್ಬ

ಸಂಕ್ರಾಂತಿ ಹಬ್ಬವು ಸಹ ಒಂದು ವಿಶೇಷ ಹಬ್ಬವಾಗಿದ್ದು ಈ ಸಮುದಾಯದವರು ವಿಶೇಷವಾಗಿ ಈ ಹಬ್ಬದ ಸಂದರ್ಭದಲ್ಲಿ ಸಜ್ಜೆ ರೊಟ್ಟಿ, ಎಳ್ಳು ಹಚ್ಚಿದ ರೊಟ್ಟಿ, ಬಿಳಿ ಜೋಳದ ಒಣ ರೊಟ್ಟಿ, ಸೇಂಗಾ ಹೋಳಿಗೆ, ಎಳ್ಳಿನ ಹೋಳಿಗೆ, ಬದನೆಕಾಯಿ, ಗಟ್ಟಿ ಬ್ಯಾಳಿ, ಭರತ್, ಹಿಂಡಿ, ಕಾರೆಳ್ಳು ಹಿಂಡಿ, ಉಳ್ಳಾಗಡ್ಡಿ ಚಟ್ನಿ, ಕಬ್ಬು, ಬಾರಿಕಾಯಿ, ಜಾಮಕಾಯಿ ಹಣ್ಣುಗಳನ್ನು ಕಟ್ಟಿಕೊಂಡು ಹರಿಯುವ ನೀರಿನಲ್ಲಿ ಅಂದು ಸ್ನಾನ ಮಾಡಿ ಬಳಿಕ ಹಳ್ಳದ ದಂಡೆ, ನದಿ ತೀರಗಳಲ್ಲಿ ಎಲ್ಲರೊಂದಿಗೆ ಸೇರಿ ಊಟ ಮಾಡಿ ಅಲ್ಲಿರುವ ದೇವರುಗಳ ದರ್ಶನ ಪಡೆದುಕೊಂಡು ಮನೆಗೆ ಬರುತ್ತಾರೆ.

ಇದೇ ಪ್ರಕಾರ ಎಳ್ಳಮಾಸಿ ಹಬ್ಬದಲ್ಲೂ ಸಹ ಇವರು ಇಂತಹ ವಿಶೇಷವಾದ ಅಡುಗೆ ಪದಾರ್ಥಗಳನ್ನು ಮಾಡಿ ನಗರದ ಸರ್ಕಾರಿ ತೋಟಗಳಲ್ಲಿ ಇಲ್ಲವೇ ಉದ್ಯಾನವನಗಳಲ್ಲಿ, ಮಾಲೀಕರ ಹೊಲ-ಗದ್ದೆಗಳಲ್ಲಿ, ಇಲ್ಲವೆ ಹಳ್ಳಿಯ ತೊಟಗಳಲ್ಲಿ ಊಟ ಮಾಡಿಕೊಂಡು ಬರುತ್ತಾರೆ. ಈ ಸಂದರ್ಭದಲ್ಲಿ 'ಭಜಿಪಲ್ಯ' ಎಂಬ ವಿಶೇಷವಾದ ಅಡುಗೆ ಮಾಡಿರುತ್ತಾರೆ.

೬. ಹಬ್ಬದ ಕರಿ

ಬಹುತೇಕ ಹಿಂದೂ ಹಬ್ಬಗಳು ಮುಗಿದ ಮರುದಿನ 'ಕರಿ' ಆಚರಣೆ ಮಾಡುವುದು ರೂಢಿಯಲ್ಲಿದೆ. ಇದೇ ರೀತಿ ಫಿಸಾಡಿ ಸಮುದಾಯವು ಕೂಡಾ 'ಹಬ್ಬದ ಕರಿ' ಆಚರಣೆಯನ್ನು ಸಂತೋಷದಿಂದ ಆಚರಿಸುತ್ತಾರೆ. ಏಕೆಂದರೆ ಹಬ್ಬದ ದಿನ ಸಿಹಿ ಅಡುಗೆಯನ್ನು ಊಟ ಮಾಡಿದರೆ, ಈ ಹಬ್ಬದ ಮರುದಿನ ಕರಿ ಆಚರಣೆಯಲ್ಲಿ ಮಾಂಸದ ಊಟವನ್ನು ಮಾಡಿ ಮದ್ಯಪಾನ ಮಾಡುವುದು ಸಹಜವಾಗಿದೆ. ಇವರಿಗೆ ಈ ಕರಿ ಆಚರಣೆಯ ಊಟವೆಂದರೆ, ಎಲ್ಲಿಲ್ಲದ ಸಂತೋಷ. ಅಂದು ಈ ಸಮುದಾಯವು ಕೋಳಿ, ಕುರಿ ಮಾಂಸ ಹಾಗೂ ಬೇಟೆಯಾಡಿದ ಪಕ್ಷಿ, ಮೀನು ಹಿಡಿದು ತಂದು ಮನೆಗಳಲ್ಲಿ 'ಕರಿ' ಅಡುಗೆ ಮಾಡಿಸುತ್ತಾರೆ ಇಡೀ ಸಮುದಾಯವು ಕರಿ ಆಚರಣೆಯಲ್ಲಿ ಸಂಭ್ರಮಿಸುತ್ತದೆ.

೭. ಮೊಹರಂ ಹಬ್ಬ

ಸರ್ವಧರ್ಮಗಳ ಸಮನ್ವಯಕಾರು ಹಾಗೂ ಆರಾಧಕರು ಆಗಿರುವ ಈ ಸಮುದಾಯದವರು

ಇಸ್ಲಾಂ ಧರ್ಮದ ಮೊಹರಂ ಹಬ್ಬವನ್ನು ತುಂಬಾ ಶ್ರದ್ಧಾ ಭಕ್ತಿಯಿಂದ ಆಚರಿಸುತ್ತಾರೆ. ಅಮಾವಾಸ್ಯೆಯಾಗಿ ಚಂದ್ರ ಕಂಡನೆಂದರೆ ಗುದ್ದಲಿ ಬಿದ್ದ ಮೇಲೆ ಅಲಾಯಿ ಕುಣಿಗೆ ಭಕ್ತಿ ಭಾವಗಳಿಂದ ನಮಸ್ಕರಿಸಿ ಬರುತ್ತಾರೆ. ಕುಣಿಯುವ ಆಸಕ್ತಿ ಇರುವವರು ಅಲಾಯಿ ಕುಣಿತದಲ್ಲಿ ಭಾಗಿಗಳಾಗುತ್ತಾರೆ. ತಮ್ಮ ಅನುಕೂಲಗಳಿಗೆ ತಕ್ಕಂತೆ ಮನೆಯಲ್ಲಿ ಗೋದಿಯ ಮಾಲದಿ, ಚಿತ್ರಾಹ್ನ ಅನ್ನ ಸಾಂಬಾರುಗಳನ್ನು ನೈವೇದ್ಯಕ್ಕೆ ತೆಗೆದುಕೊಂಡು ಹೋಗಿ ಬರುತ್ತಾರೆ. ಕೆಲವರು ಇಸ್ಲಾಂ ಧರ್ಮದ ಕನಿಷ್ಟ ಇಬ್ಬರು ಫಕೀರರನ್ನು ಕರೆಯಿಸಿ ಊಟ ಮಾಡಿಸುತ್ತಾರೆ. ಇನ್ನು ಕೆಲವು ಜನರು ಹರಕೆ ಹೊತ್ತುಕೊಂಡು ದೇವರಿಗೆ ಕುರಿ, ಕೋಳಿ ಬಲಿ ಕೊಡುವ ಸಂಪ್ರದಾಯ ಸಹ ಅನುಸರಿಸುತ್ತಾರೆ.

೧೨. ಆಚರಣೆಗಳು

೧. ಗೊಂದಲ ಆಚರಣೆ ಕಾರ್ಯ

ಗೊಂದಲ ಆಚರಣೆಯ ಕಾರ್ಯವು ಅಂಬಾಭವಾನಿ ದೇವಿಯ ಹೆಸರಿನಲ್ಲಿ ನಡೆಯುವ ಶಾಂತಿ ಆಚರಣೆಯ ಕಾರ್ಯವಾಗಿದೆ. ಈ ಸಮುದಾಯದಲ್ಲಿ ಚೊಚ್ಚಿಲ ಮಗ ಅಥವಾ ಮಗಳು ಇಲ್ಲವೇ ಕೊನೆಯ ಮಗ ಅಥವಾ ಮಗಳ ಮದುವೆ ಕಾರ್ಯ ಮಾಡಿದರೆ, ಇವರು ಗೊಂದಲದ ಮೇಳ ಕಾರ್ಯಕ್ರಮ ನೆರವೇರಿಸುವ ಸಂಪ್ರದಾಯ ರೂಢಿಯಲ್ಲಿದೆ. ಈ ಕಾರ್ಯಕ್ರಮವು ಮದುವೆಯಾದ ದಿನದ ರಾತ್ರಿ ಇಲ್ಲವೆ ಅವರ ಅನುಕೂಲಗಳಿಗೆ ತಕ್ಕಂತೆ ಮದುವೆಯಾದ ಕನಿಷ್ಟ ೧೫ರಿಂದ ೨೦ ದಿನಗಳ ಒಳಗಾಗಿ ಗೊಂದಲಿಗರ ಮೇಳ ಹಾಕಿಸುವ ಸಂಪ್ರದಾಯ ಇವರಲ್ಲಿದೆ.

ಈ ಗೊಂದಲಿಗರ ಮೇಳದಲ್ಲಿ ಸಾಮಾನ್ಯವಾಗಿ ಮೂರು ಜನ ಕಲಾವಿದರಿದ್ದು, ನಾಯಕನು ಡೋಲನ್ನು ಹಿಡಿದಿರುತ್ತಾನೆ. ಉಳಿದವರಿಬ್ಬರು ತಾಳ, ಶ್ರುತಿಯನ್ನು ಹಿಡಿದಿರುತ್ತಾರೆ. ತಲೆಗೆ ಕೆಂಪು ಅಥವಾ ಬಿಳಿಯ ರುಮಾಲನ್ನು ಸುತ್ತಿಕೊಂಡು ನಿಲುವಂಗಿ, ಪಂಚೆಯನ್ನು ಧರಿಸಿರುತ್ತಾರೆ. ಅಂಗಿಯ ಮೇಲೆ ಕೋಟು ಹಾಕಿಕೊಂಡು ಕೊರಳಿನಲ್ಲಿ ಸಣ್ಣ ಕವಡೆ ಸರವನ್ನು ಹಾಕಿಕೊಂಡಿರುತ್ತಾರೆ. ಇದರಲ್ಲಿ ಒಬ್ಬ ಇಲ್ಲವೇ ಇಬ್ಬರು ವ್ಯಕ್ತಿಗಳು ಕಾಲಿನಲ್ಲಿ ಗೆಜ್ಜೆ ಕಟ್ಟಿಕೊಂಡು ಗೊಂದಲಿ ಮೇಳವನ್ನು ಮಾಡುವವರಾಗಿರುತ್ತಾರೆ.

ಗೊಂದಲಿ ಹಾಕುವವರು ಅಂಬಾಭವಾನಿ ಹೆಸರಿನಲ್ಲಿ ಬಾಳೆದಿಂಡು, ಕಬ್ಬಿನ ದಿಂಡು, ಮಾವಿನ ಎಲೆಗಳಿಂದ ಅಂಬಾಭವಾನಿ ದೇವಿಯ ಮಂಟಪ ಮಾಡಿರುತ್ತಾರೆ. ಆ ಮಂಟಪದಲ್ಲಿ ಒಂದು ತಾಮ್ರದ ತಂಬಿಗೆಯ ಮೇಲೆ ಒಂದು ತೆಂಗಿನ ಕಾಯಿಯನ್ನಿಡುವರು. ಅದಕ್ಕೆ ಹೂವಿನ ದಂಡೆ, ಹೂವಿನ ತೊಟ್ಟಿಲುಗಳಿಂದ ಶೃಂಗರಿಸಿದ ಬಳಿಕ, ಇದಕ್ಕೆ ದೇವಿಯ ಪ್ರತಿರೂಪವೆಂದು ಭಾವಿಸಿ ಪೂಜೆ ಸಲ್ಲಿಸುತ್ತಾರೆ. ಬಳಿಕ ಆರಂಭದಲ್ಲಿ ಗಣಪತಿಯ ಸ್ತೋತ್ರಗಳಿಂದ ಗೊಂದಲದ ಮೇಳ ಪ್ರಾರಂಭಿಸುತ್ತಾರೆ.

ಆಮೇಲೆ ಅಂಬಾಭವಾನಿ, ಪಾರ್ವತಿ, ಶಿವ, ಜಮದಗ್ನಿ, ರೇಣುಕೆ ಎಲ್ಲಮ್ಮರ ಲೀಲೆಗಳು, ಪವಾಡಗಳು ದೇವಿಯ ಸ್ತುತಿ, ಗೀತೆ ನಾಮಸ್ಮರಣೆಗಳನ್ನು, ಕನ್ನಡ ಮತ್ತು ಮರಾಠಿ ಭಾಷೆಗಳಲ್ಲಿ ಹಾಡುತ್ತಾರೆ. ಈ ಗೊಂದಲ ಕಾರ್ಯಕ್ರಮ ನೋಡುವ ನೋಡುಗರು ಗೊಂದಲ ಕಲೆಗೆ ಪ್ರೋತ್ಸಾಹಿಸುವುದಕ್ಕಾಗಿ ಮಧ್ಯದಲ್ಲಿ ಪ್ರವೇಶಿಸಿ ಕಾಣಿಕೆ ರೂಪದಲ್ಲಿ ಹಣವನ್ನು ಕೊಡುತ್ತಾರೆ. ಕಾಣಿಕೆಯನ್ನು ನೀಡಿದವರ ಹೆಸರನ್ನು ಕೇಳಿ ಅವರಿಗೆ ದೇವಿಯು ಐಶ್ವರ್ಯ, ಸಂಪತ್ತು, ಆರೋಗ್ಯ, ಮಕ್ಕಳ ಭಾಗ್ಯ ಕರುಣಿಸಲೆಂದು ಹಾರೈಸುತ್ತಾರೆ.

ಗೊಂದಲಿಗರ ಈ ಕಲೆಯು ಸಂಪ್ರದಾಯಗಳಿಂದ ಕೂಡಿದ ಸ್ವಚ್ಛಂದವಾದ ದೇಶೀಯ ಕಲೆಯಾಗಿದೆ. ರಾತ್ರಿ ಪ್ರಾರಂಭವಾಗಿ ಬೆಳಿಗ್ಗೆ ಮುಗಿಯುವ ಸಂಪ್ರದಾಯವನ್ನು ಹೊಂದಿರುವ ಈ ಕಲೆಯ ಕಾರ್ಯಕ್ರಮವು ನೋಡುಗರ ಮನಸ್ಸನ್ನು ಬೆಳಗ್ಗೆಯವರೆಗೆ ಸೆಳೆದಿಟ್ಟುಕೊಳ್ಳುತ್ತದೆ. ಇಡೀ ರಾತ್ರಿ ಬೆಳಿಗ್ಗೆಯಾಗಿರುವುದೇ ಗೊತ್ತಾಗುವುದಿಲ್ಲ. ಏಕೆಂದರೆ ಗೊಂದಲಿಗರ ಹಾಡಿನ ಜೊತೆಗೆ ಹಗುರವಾದ ಅಥವಾ ನಯವಾದ ನೃತ್ಯ, ಲಯ, ತಾಳ, ಧ್ವನಿ ನೋಡುಗರ ಮನಸ್ಸು ಕಲೆಯ ಕಡೆಗೆ ಕೇಂದ್ರಿಕರಿಸುತ್ತದೆ. ಮಧ್ಯದಲ್ಲಿ ಗೊಂದಲಿಗರು ಹಾಸ್ಯ, ವಿಡಂಬನೆಗಳನ್ನು ಹೇಳಿ ಪ್ರೇಕ್ಷಕರ ಮನಸ್ಸನ್ನು ಸಂತೋಷಪಡಿಸುತ್ತಾರೆ. ಸಾಮಾನ್ಯವಾಗಿ ಈ ಗೊಂದಲಿಗರ ಕಲೆಯು ಉತ್ತರ ಕರ್ನಾಟಕದಲ್ಲಿ ಹೆಚ್ಚು ಪ್ರಚಲಿತದಲ್ಲಿದೆ.

ಘಿಸಾಡಿ ಸಮುದಾಯದವರು ಗೊಂದಲ ಪೂಜೆಗೆ ಎಷ್ಟೇ ಹಣ ಖರ್ಚಾಗಲಿ ಸಾಲ ಮಾಡಿಯಾದರೂ ಆಚರಿಸುತ್ತಾರೆ. ಅಲ್ಲದೆ ಬಹುದಿನಗಳಿಂದ ಕೂಡಿಸಿದ ಹಣವನ್ನು ಪೂರ್ತಿ ಈ ಪೂಜೆಕಾರ್ಯಕ್ಕೆ ವಿನಿಯೋಗಿಸಲು ಹಿಂಜರಿಯುವುದಿಲ್ಲ. ಸಮುದಾಯದ ಹೆಚ್ಚಿನ ಕುಟುಂಬಗಳು ಗುಡಾರಗಳಲ್ಲಿ ಅಥವಾ ತೀರಾ ಇಕ್ಕಟ್ಟಾದ ಮನೆಗಳಲ್ಲಿ ನೆಲೆಸಿರುವುದರಿಂದ, ಇವರು ನೇರವಾಗಿ ಅಂಬಾಭವಾನಿ ಮಂದಿರಗಲಿಗೆ ನವ ಜೊಡಿಗಳನ್ನು ಕರೆದುಕೊಂಡು ಹೋಗಿ, ಅಲ್ಲಿಯೇ ಈ ಗೊಂದಲ ಕಾರ್ಯ ಮುಗಿಸುತ್ತಾರೆ. ಕೆಲವರಿಗೆ ಸ್ಥಳದ ಅನುಕೂಲವಿದ್ದರೆ ತಮ್ಮ ಮನೆಯ ಅಂಗಳದಲ್ಲಿ ಈ ಕಾರ್ಯ ನೆರವೇರಿಸುತ್ತಾರೆ.

ಗೊಂದಲ ಪೂಜೆಯ ಕಾರ್ಯಕ್ಕೆ ಬೇಕಾಗುವ ಸಾಮಗ್ರಿಗಳು

---

೧. ಕಾಲುಸೇರು - ಅಕ್ಕಿ	೨. ಸೇಬಿನ ಹಣ್ಣುಗಳು - ೫
೩. ಮೂಸಂಬಿ ಹಣ್ಣು - ೫	೪. ಚಿಕ್ಕು ಹಣ್ಣುಗಳು - ೫
೫. ನಿಂಬೆಹಣ್ಣು - ೧೨	೬. ಒಂದು ಡಜನ್ ಬಾಳೆಹಣ್ಣು
೭. ತೆಂಗಿನ ಕಾಯಿ - ೫	೮. ಒಂದು ಕೆಂಪು ಕುಪ್ಪಸದ ಕಣ
೯. ಬಿಳಿ ಕಾಟನ್ ಬಟ್ಟೆ - ೨ ಮೀಟರ್	೧೦. ಅಡಿಕೆ - ೫೦ ಗ್ರಾಂ.
೧೧. ಕಲ್ಲುಸಕ್ಕರೆ - ೫೦ ಗ್ರಾಂ.	೧೨. ಎಂಟು ಕೊಬ್ಬರಿ ಬಟ್ಟಲುಗಳು

೧೩. ಖಾರಿಕ್ - ೫
೧೪. ಬದಾಮ್ - ೫
೧೫. ಅರಿಶಿಣ ಬೊಟ್ಟು - ೫
೧೬. ವೀಳ್ಯದೆಲೆಗಳು - ೫೦
೧೭. ಹೂವಿನ ದಂಡಿಗಳು - ೯
೧೮. ಹೂವಿನ ತೊಟ್ಟಿಲು - ೧
೧೯. ಹೂವಿನ ಉಂಡಿ- ೧
೨೦. ಕುಂಕುಮ - ೧೦ ಗ್ರಾಂ.
೨೧. ಊದಿನ ಕಡ್ಡಿಗಳು
೨೨. ಕರ್ಪೂರ
೨೩. ಗಂಧದ ಎಣ್ಣೆ
೨೪. ಕಬ್ಬು
೨೫. ಬಾಳೆದಿಂಡುಗಳು
೨೬. ಅರಿಶಿಣದ ಪುಡಿ - ೧೦ ಗ್ರಾಂ.
೨೭. ಮಾವಿನ ಎಲೆಗಳು
೨೮. ಯಾಲಕ್ಕಿ - ೧೦ ಗ್ರಾಂ.
೨೯. ಲವಂಗ - ೧೦ ಗ್ರಾಂ.
೩೦. ಕಿಸ್‌ಮಿಸ್ - ೧೦ ಗ್ರಾಂ.
೩೧. ಕುರಿ ಬಲಿ
೩೨. ನೈವೇದ್ಯ

ಗೊಂದಲಿಗರ ಸಂಬಳ (ವಾದ್ಯ) ಪೂಜೆ

ಗೊಂದಲ ಮಂಟಪ ರಚನೆ ಮಾಡುವುದಕ್ಕಿಂತ ಮೊದಲು ಗೊಂದಲಿಗರು ತಮ್ಮ ಸಂಬಳ (ವಾದ್ಯ)ಗಳಿಗೆ ಪೂಜೆ ಸಲ್ಲಿಸುವ ಸಂಪ್ರದಾಯವಿದೆ. ಇವರು ಒಂದು ನಿಶ್ಚಿತವಾದ ಸ್ಥಳವನ್ನು ಆಯ್ಕೆ ಮಾಡಿಕೊಂಡು, ಆ ಸ್ಥಳದಲ್ಲಿ ಒಂದು ಜಮಖಾನೆಯನ್ನು ಹಾಸುತ್ತಾರೆ. ನಂತರ ತಮ್ಮ ಎಲ್ಲಾ ಸಂಬಳ(ವಾದ್ಯ)ಗಳನ್ನು ಇಟ್ಟು ಅವುಗಳಿಗೆ ಹೂವು ಗಂಧ ಕುಂಕುಮ, ವಿಭೂತಿ, ದೀಪ-ಧೂಪಗಳಿಂದ ಪೂಜೆ ಸಲ್ಲಿಸುತ್ತಾರೆ. ಆಮೇಲೆ ಮದುವೆಯಾಗಿರುವ ನವ ಜೋಡಿಗಳು ಬಂದು ಸಂಬಳಗಳಿಗೆ ಕಳಸದಿಂದ ಬೆಳಗುತ್ತಾರೆ. ಹೀಗೆ ಗೊಂದಲಿಗರ ಸಂಬಳಗಳಿಗೆ ಪೂಜೆ ಸಲ್ಲಿಸಿ ಶಾಂತಿ ಮಾಡಲಾಗುತ್ತದೆ.

ಬಲಿ ಕೊಡುವುದು

ಘಿಸಾಡಿ ಸಮುದಾಯದವರು ಗೊಂದಲ ಹಾಕಿಸುವ ದಿನ ತಮ್ಮ ಮನೆಯಲ್ಲಿ ಅಂಬಾಭವಾನಿಗೆ ಕುರಿ ಬಲಿ ಕೊಡುತ್ತಾರೆ. ಈ ಕುರಿ ಬಲಿ ಕೊಡುವ ಉದ್ದೇಶವೆಂದರೆ, ದೈತ್ಯ ಶಕ್ತಿಗಳು ಅಥವಾ ದುಷ್ಟಶಕ್ತಿಗಳ ನಿರ್ಮೂಲನೆ ಮಾಡುವುದಕ್ಕಾಗಿ ಕುರಿ ಬಲಿ ಕೊಡುವ ಸಂಸ್ಕೃತಿ ಇವರಲ್ಲಿದೆ. ಈ ಕುರಿ ಬಲಿ ಕೊಟ್ಟ ಬಳಿಕ ಇದರ ಅಡುಗೆ ಮಾಡಿ ತಾವು ಊಟ ಮಾಡುತ್ತಾರೆ. ಆದರೆ ದೇವಿಗೆ ದವಸಧಾನ್ಯಗಳಿಂದ ತಯಾರಿಸಿದ ಅಡುಗೆ ಮಾತ್ರ ನೈವೇದ್ಯ ಹಾಗೂ ಹಣ್ಣುಹಂಪಲುಗಳನ್ನು ಅರ್ಪಿಸುತ್ತಾರೆ. ಕುರಿಯ ಬಲಿ ಕೊಟ್ಟ ಬಳಿಕ ಅದರ ತಲೆಯನ್ನು ತಂದು ಗೊಂದಲದ ಮಂಟಪದ ಎದುರಿನಲ್ಲಿ ಇಡುತ್ತಾರೆ. ಆ ಕುರಿಯ ತಲೆಯನ್ನು ಮರುದಿನ ನೆಲದಲ್ಲಿ ಊಳುತ್ತಾರೆ.

ಗೊಂದಲ ಮಂಟಪ ರಚನೆ ಹಾಗೂ ಪೂಜೆ ವಿಧಾನ

ಈ ಸಮುದಾಯದವರು ತಮ್ಮ ಮನೆಯ ಪಡಸಾಲೆಯಲ್ಲಿ ಇಲ್ಲವೇ ತಮ್ಮ ಮನೆಯ ಅಂಗಳದಲ್ಲಿ ಸ್ವಲ್ಪ ವಿಶಾಲವಾದ ಸ್ಥಳ ಆಯ್ಕೆ ಮಾಡಿಕೊಂಡು ಚಿಕ್ಕದಾದ ಜಮಖಾನೆಯನ್ನು ಹಾಸುತ್ತಾರೆ. ಆ ಜಮಖಾನೆಯ ಮೇಲೆ ಮಂಟಪದ ಮಣೆ ಇಡುತ್ತಾರೆ. ಆ ಮಂಟಪದ ಮಣೆಯ ಮೇಲೆ ಒಂದು ಕೆಂಪು ಇಲ್ಲವೆ ಬಿಳಿಯ ಬಣ್ಣದ ಬಟ್ಟೆ ಹಾಸುತ್ತಾರೆ. ಆಮೇಲೆ ಬಾಳೆದಿಂಡು, ಕಬ್ಬಿನ ಗರಿಕೆ, ಮಾವಿನ ಎಲೆ, ಹೂವುಗಳಿಂದ ಮಂಟಪದ ಮಣೆಯ ನಾಲ್ಕು ಭಾಗಗಳಿಗೆ ಸುತ್ತುವರಿದು ಒಂದಕ್ಕೊಂದು ಸಂಧಿಸಿ ಕೂಡಿಸಿ ಬಿಗಿಯಾಗಿ ಕಟ್ಟಿ ಮಂಟಪವನ್ನು ರಚಿಸಲಾಗುತ್ತದೆ. ಮಂಟಪ ರಚನೆಯಾದ ಬಳಿಕ, ಆ ಮಂಟಪದ ಮಣೆಯ ಮೇಲೆ ಒಂದು ಸವಾ ಸೇರು ಅಕ್ಕಿಯನ್ನು ಹಾಕಿ ಗೋಲಾಕಾರದಲ್ಲಿ ಕುಪ್ಪೆ ಮಾಡಲಾಗುತ್ತದೆ. ಈ ಕುಪ್ಪೆಯ ಮೇಲೆ ಒಂದು ತಾಮ್ರದ ತಂಬಿಗೆಯ ಮೇಲೆ ಒಂದು ತೆಂಗಿನಕಾಯಿಯನ್ನು ಇಡಲಾಗುತ್ತದೆ.

ಈ ತಾಮ್ರದ ತಂಬಿಗೆ ಹಾಗೂ ಅದರ ಮೇಲಿರುವ ತೆಂಗಿನ ಕಾಯಿಯೇ ಆ ಅಂಬಾಭವಾನಿ ದೇವಿಯ ಪ್ರತಿರೂಪವೆಂದು ನಂಬುತ್ತಾರೆ. ನಂತರ ಅದಕ್ಕೆ ಕುಪ್ಪಸದ ಕಣ ಏರಿಸಿ ದಂಡೆಯನ್ನು ಕಟ್ಟಿ ಶೃಂಗರಿಸಲಾಗುತ್ತದೆ. ಈ ತಾಮ್ರದ ತಂಬಿಗೆಯ ಬಲ ಹಾಗೂ ಎಡ ಭಾಗಗಳಲ್ಲಿ ವಿವಿಧ ರೀತಿಯ ಹಣ್ಣು ಹಂಪಲುಗಳನ್ನಿಡುತ್ತಾರೆ. ಅಲ್ಲದೆ ಇವುಗಳ ಜೊತೆಗೆ ಕೊಬ್ಬರಿ ಬಟ್ಟಲು, ಅರಿಶಿಣಬೊಟ್ಟು, ಅಡಿಕೆ, ಉತ್ತತ್ತಿ, ಲವಂಗ, ಕಾಜು, ಕಿಸ್‌ಮಿಸ್, ಯಾಲಕ್ಕಿ, ಬಾದಾಮಿ, ಖಾರಿಕ್, ಕಲ್ಲುಸಕ್ಕರೆ, ನಿಂಬೆಕಾಯಿಗಳನ್ನು ಸಹ ಇಡಲಾಗುತ್ತದೆ. ಮಂಟಪದ ಮಧ್ಯದಲ್ಲಿ ಹೂವಿನ ತೊಟ್ಟಿಲನ್ನು ಕಟ್ಟಿ ಅಲಂಕರಿಸುತ್ತಾರೆ.

ಮದುವೆಯಾಗಿರುವ ನವ ಜೋಡಿಗಳು ಅರಿಶಿಣ ಹಚ್ಚಿಸಿಕೊಂಡು ಅಕ್ಕಿ ಕಾಳುಗಳನ್ನು ಹಾಕಿಸಿಕೊಂಡ ಬಟ್ಟೆಗಳನ್ನು ಧರಿಸಿಕೊಂಡು ಈ ಪೂಜೆ ಕಾರ್ಯ ನೆರವೇರಿಸಬೇಕೆಂಬ ಸಂಪ್ರದಾಯ ರೂಢಿಯಲ್ಲಿದೆ. ನವ ಜೋಡಿಗಳು ಸ್ನಾನ ಮಾಡಿಕೊಂಡು ಇವೆ ಬಟ್ಟೆಗಳನ್ನು ಧರಿಸಿ ಬಂದು ಮೊದಲು ಮಂಟಪದಲ್ಲಿನ ದೇವಿಗೆ ಕಳಸ, ದೀಪ ದೂಪಗಳಿಂದ ಹಾಗೂ ಕಾಯಿ-ಕರ್ಪೂರಗಳಿಂದ ಪೂಜೆ ಸಲ್ಲಿಸುತ್ತಾರೆ. ತರುವಾಯ ಈ ನವ ಜೋಡಿಗಳು ದೇವಿಯ ಎದುರಿನಲ್ಲಿ ಜ್ಯೋತಿ ಬೆಳಗಿಸಿ ಮಂಗಳಾರತಿಯನ್ನು ಮಾಡಿದ ಮೇಲೆ ಗೊಂದಲಿಗರ ಮೇಳ ಪ್ರಾರಂಭವಾಗುತ್ತದೆ. ಮರುದಿನ ಮುಂಜಾನೆ ಈ ಗೊಂದಲಿಗರ ಮೇಳ ಮುಗಿದ ಬಳಿಕ ದೀಪವನ್ನು ಹಾಲಿನಿಂದ ನಂದಿಸಿ ಪೂಜೆಯನ್ನು ಮುಕ್ತಾಯಗೊಳಿಸುತ್ತಾರೆ.

ಮುಂಜಾನೆ ಗೊಂದಲಿಗರಿಗೆ ಕಾಣಿಕೆಯನ್ನು ಕೊಟ್ಟು ಕಳುಹಿಸಲಾಗುತ್ತದೆ. ಆಮೇಲೆ ಪೂಜೆ ವಿಸರ್ಜನೆಯಾಗುವ ಸಂದರ್ಭದಲ್ಲಿ ಗೊಂದಲ ಹಾಕಿಸಿದವರ ತಂದೆ ತಾಯಿಗಳಿಗೆ ಬಂಧು ಬಳಗದವರು ಅಥವಾ ಬೀಗರು ಬಟ್ಟೆಗಳನ್ನು ಆಯಾರಿ ಮಾಡುತ್ತಾರೆ. ಹೀಗೆ ವಿವಿಧ ಹಂತಗಳಿಂದ ಗೊಂದಲ ಪೂಜೆಯ ಕಾರ್ಯ ನೆರವೇರಿಸಿ ಮುಕ್ತಾಯಗೊಳಿಸುತ್ತಾರೆ.

೨. ಮುತ್ತೈದೆಯರಿಗೆ ಊಟ ಮಾಡಿಸುವ ಕಾರ್ಯ

ಛಿಸಾಡಿ ಸಮುದಾಯಗಳಲ್ಲಿನ ಯಾವುದೇ ಕುಟುಂಬಗಳಲ್ಲಿ ಮಂಗಳ ಕಾರ್ಯಗಳು ಜರಗುವ ಸಂದರ್ಭಗಳಲ್ಲಿ ಸಾಮಾನ್ಯವಾಗಿ ಮುತ್ತೈದೆಯರಿಗೆ ಬಾಗಿನ ಕೊಟ್ಟು ಊಟ ಮಾಡಿಸುವ ಸಂಪ್ರದಾಯವನ್ನು ಅನುಸರಿಸುವ ಪದ್ಧತಿ ರೂಢಿಸಿಕೊಂಡು ಬಂದಿದ್ದಾರೆ. ಮಂಗಳ ಕಾರ್ಯ ಜರುಗುವ ನಿಗದಿತ ದಿನಕ್ಕಿಂತ ಎರಡು ಅಥವಾ ಮೂರು ದಿನಗಳ ಮೊದಲೇ ಮುತ್ತೈದೆಯರಿಗೆ ಊಟ ಮಾಡಿಸುವ ಸಂಪ್ರದಾಯ ಅನುಸರಿಸುತ್ತಾರೆ.

ಈ ಕಾರ್ಯ ನೆರವೇರಿಸುವುದಕ್ಕಿಂತ ಮೊದಲು ಈ ಸಮುದಾಯವರು ತಮ್ಮ ಮನೆ ಮಾರುಗಳನ್ನು ಸ್ವಚ್ಛಗೊಳಿಸಿಕೊಂಡು ಅವರವರ ಯೋಗ್ಯತೆಗಳಿಗನುಸಾರವಾಗಿ ಐದು ಇಲ್ಲವೇ ಇಬ್ಬರು ಮುತ್ತೈದೆಯರಿಗೆ ಇಳೆ ಕೊಟ್ಟು ಔತಣಕ್ಕೆ ಕರೆಸುತ್ತಾರೆ. ಈ ಇಳೆ ತೆಗೆದುಕೊಂಡ ಮಹಿಳೆಯರು ಅಂದು ಇವರ ಮನೆಗೆ ಬರುತ್ತಾರೆ. ಬಂದ ಬಳಿಕ ಬಾಜಾ ಭಜಂತ್ರಿಗಳನ್ನು ತೆಗೆದುಕೊಂಡು ಮೆರವಣಿಗೆ ಮೂಲಕ ಗಂಗೆ ಪೂಜೆಗೆಂದು ಸಮೀಪದಲ್ಲಿ ಹರಿಯುವ ನದಿ, ಹಳ್ಳಕೊಳ್ಳಗಳಿಗೆ ಹೋಗಿ ಆ ನೀರಿನ ದಡದಲ್ಲಿ ೫ ಚಿಕ್ಕ ಕಲ್ಲುಗಳನ್ನಿಡುವರು. ಆ ಕಲ್ಲುಗಳಿಗೆ ಕುಂಕುಮ, ವಿಭೂತಿ, ಹೂವುಗಳಿಂದ ಪೂಜಿಸಿ ಕಾಯಿ ಕರ್ಪೂರಗಳಿಂದ ಮಂಗಳಾರತಿಯನ್ನು ಮಾಡಿ ನೈವೇದ್ಯವನ್ನು ಅರ್ಪಿಸುತ್ತಾರೆ. ತದನಂತರ ಬಂದ ಮುತ್ತೈದೆಯರಿಂದ ಕಳಸ ಬೆಳಗಿಸುವ ಕಾರ್ಯವನ್ನು ಮುಗಿಸುತ್ತಾರೆ. ಬಳಿಕ ನೈವೇದ್ಯವನ್ನು ಹರಿಯುವ ನೀರಿನಲ್ಲಿ ತೇಲಿ ಬಿಡುವರು. ನಂತರ ಎರಡು ತಂಬಿಗೆಯಲ್ಲಿ ನೀರು ತುಂಬಿಕೊಂಡು ತಲೆಯ ಮೇಲೆ ಹೊತ್ತು ಮನೆಯ ಕಡೆ ಮೆರವಣಿಗೆಯ ಮೂಲಕ ಬರುತ್ತಾರೆ. ಮನೆಗೆ ಬಂದ ಬಳಿಕ ಮನೆಯಲ್ಲಿನ ದೇವರಿಗೆ ಪೂಜೆ ಪುನಸ್ಕಾರಗಳನ್ನು ಸಲ್ಲಿಸಿದ ಮೇಲೆ ಆ ತಂಬಿಗೆಗಳನ್ನು ದೇವರ ಜಗಲಿಯ ಮೇಲೆ ಇಳಿಸುತ್ತಾರೆ.

ಆಮೇಲೆ ಅಂದು ಅವರ ಮನೆಯಲ್ಲಿ ಹೋಳಿಗೆ, ಕಡಬು, ಕಾಳುಗಳು, ಹಪ್ಪಳ, ಅನ್ನ ಸಾರು ಅಡಿಗೆಯನ್ನು ಮಾಡಿಸಿರುತ್ತಾರೆ. ಮೊದಲು ಮುತ್ತೈದೆ ಮಹಿಳೆಯರಿಗೆ ಕನಿಷ್ಠ ಇಬ್ಬರಿಗೆ ಊಟಕ್ಕೆ ಕುಳಿತುಕೊಳ್ಳಲು ದೇವರ ಜಗುಲಿಯ ಎದುರಿನಲ್ಲಿ ಅನುವು ಮಾಡುವರು. ಅಲ್ಲಿ ಚಾಪೆ ಹಾಸಿ ಅವರಿಗೆ ಹೂವಿನ ದಂಡೆಯನ್ನು ಕಟ್ಟಿ ಕುಂಕುಮ ಹಚ್ಚಿ ಕಳಸ ಬೆಳಗಿ ಉಡಿಯಲ್ಲಿ ಹೊಸ ಕುಪ್ಪಸದ ಕಣ, ಕೊಬ್ಬರಿ, ಹಣ್ಣು ಹಂಪಲಗಳನ್ನು ನೀಡಿ ನಮಸ್ಕರಿಸುವರು. ಈ ರೀತಿ ವಿವಾಹಿತ ಮುತ್ತೈದೆ ಮಹಿಳೆಯರಿಗೆ ಊಟ ಮಾಡಿಸಿದರೆ ಹೆಣ್ಣು ಮಕ್ಕಳ ಮುತ್ತೈದೆತನ ಶಾಶ್ವತವಾಗಿರುತ್ತದೆ ಎಂಬ ನಂಬಿಕೆ ಇವರಲ್ಲಿರುವುದು ಕಂಡುಬರುತ್ತದೆ.

ಮರುದಿನ ಮುಂಜಾನೆ ದೇವರ ಜಗುಲಿಯ ಮೇಲೆ ಇರುವ ತುಂಬಿದ ತಂಬಿಗೆಗಳಿಗೆ ಅನ್ನ ಶ್ಯಾವಿಗೆ ನೈವೇದ್ಯ ಹಿಡಿದು ಪೂಜೆ ಮಾಡಿ, ಆ ತಂಬಿಗೆಯಲ್ಲಿರುವ ನೀರನ್ನು ಹೂವಿನ ಗಿಡಗಳಿಗೆ ಹಾಕಿ ಪೂಜೆ ಇಳಿಸುತ್ತಾರೆ. ಆಮೇಲೆ ಈ ಕಾರ್ಯಕ್ಕೆ ಬಂದಂತಹ ಬಂಧು ಬಳಗದವರು ತಮ್ಮ

ಊರುಗಳಿಗೆ ಹೋಗುತ್ತಾರೆ. ಶುಭಕಾರ್ಯಗಳು ನಡೆಯುವುದಕ್ಕಿಂತ ಮೊದಲು ಈ ಕಾರ್ಯ ನೆರವೇರಿಸಿದರೆ ಮನೆಯಲ್ಲಿ ಶಾಂತಿ, ಸಮಾಧಾನ, ಯಾವುದೇ ರೀತಿಯ ಅಡ್ಡಿ ಅತಂಕಗಳು ಬರುವುದಿಲ್ಲ ಎಂಬ ನಂಬಿಕೆ ಇವರಲ್ಲಿದೆ.

೩. ಅಂಬಾಭವಾನಿ ದೇವಿಯ ಹೆಸರಿನಲ್ಲಿ ದೀಪ ಹಾಕುವ ಕಾರ್ಯ

ಘಿಸಾಡಿ ಸಮುದಾಯದಲ್ಲಿ ಪ್ರತಿಯೊಂದು ಕುಟುಂಬಗಳಲ್ಲಿ ಮಹಾನವಮಿ ಹಬ್ಬದ ಸಂದರ್ಭದಲ್ಲಿ ಅಂಬಾಭವಾನಿ ಹೆಸರಿನಲ್ಲಿ ದೀಪ ಹಾಕುವ ಕಾರ್ಯ ಮಾಡುತ್ತಾರೆ. ೯ ಅಥವಾ ೫ ದಿನಗಳವರೆಗೆ ಹಗಲು ರಾತ್ರಿ ದೀಪ ನಂದದಂತೆ ನೋಡಿಕೊಂಡು ದೀಪಗಳಿಗೆ ಪ್ರತಿನಿತ್ಯವು ಎಣ್ಣೆಯನ್ನು ಹಾಕಿ ದೀಪ ಕಾಯುವುದೇ ದೀಪದ ಕಾರ್ಯವಾಗಿದೆ. ಇವರು ದೀಪ ಹಾಕುವ ಸಂದರ್ಭದಲ್ಲಿ ಹೆಚ್ಚಿನ ಮಡಿ ಮೈಲಿಗೆ ಆಚರಣೆ ಮಾಡುವರು. ಎಲ್ಲ ಹಬ್ಬಗಳಲ್ಲಿ ಮಾಡುವಂತೆ ಇಲ್ಲಿಯೂ ಸಹ ಮನೆಯ ಪ್ರತಿಯೊಂದು ವಸ್ತುವನ್ನು ಶುಭ್ರವಾಗಿಸಿ ಸ್ವಚ್ಛತೆಯನ್ನು ನಿರ್ಮಿಸುತ್ತಾರೆ. ಮನೆಯಲ್ಲಿ ಹಬ್ಬದ ವಾತಾವರಣವನ್ನು ತೋರುವಂತೆ ಮಾವಿನ ತೋರಣ, ಅಂಗಳದಲ್ಲಿ ರಂಗೋಲಿಯನ್ನು ಹಾಕುತ್ತಾರೆ.

ಮನೆಯಲ್ಲಿನ ಯಾರಾದರೊಬ್ಬರು ಮುತ್ತೈದೆ ದೇವಿಯ ಪೂಜೆ ಕಾರ್ಯವನ್ನು ನೆರವೇರಿಸುತ್ತಾಳೆ. ಅಲ್ಲದೆ ಇದಕ್ಕೆ ಹೆಚ್ಚಿನ ಮಡಿ ಮೈಲಿಗೆಯಿಂದ ಇರುವುದರೊಂದಿಗೆ ದಿನಾಲು ದೇವಿಯ ಪೂಜೆಯಾದ ಬಳಿಕ ಒಂದೇ ಸಲ ಊಟವನ್ನು ಮಾಡಬೇಕಾಗುತ್ತದೆ. ಇವರು ದೇವಿಯ ಪೂಜೆಯನ್ನು ಮಾಡಲು ಮನೆಯ ಒಂದು ನಿರ್ದಿಷ್ಟವಾದ ಸ್ಥಳವನ್ನು ಆಯ್ದುಕೊಳ್ಳುವರು. ಆ ಸ್ಥಳದಲ್ಲಿ ನಾಲ್ಕು ಬಿದರಿನ ಕೋಲುಗಳಿಂದ ಮಂಟಪವನ್ನು ನಿರ್ಮಿಸಿ ಅದಕ್ಕೆ ಜೋಳದ ಕಬ್ಬು, ಬಾಳೆದಿಂಡು, ಮಾವಿನ ಎಲೆ, ಹೂವಿನ ಮಾಲೆಗಳಿಂದ ಹಾಗೂ ಬಣ್ಣದ ಕಾಗದಗಳಿಂದ ಅಲಂಕರಿಸಿ ಮಂಟಪ ಮಾಡುವರು. ಮಂಟಪದ ಒಳಗಡೆ ಒಂದು ಮಣೆಯನ್ನು ಹಾಕಿ ಅದರ ಮೇಲೆ ಕೆಂಪು ಬಟ್ಟೆಯನ್ನು ಹಾಸಿ ಆ ಬಟ್ಟೆಯ ಮೇಲೆ ಮಂಡಲವನ್ನು ಬರೆಯುವರು. ಆ ಮಂಡಲದ ಮೇಲೆ ಅಂಬಾಭವಾನಿ ಮೂರ್ತಿ ಅಥವಾ ಫೋಟೋವನ್ನು ಇಟ್ಟು ಮೂರ್ತಿಯ ಎಡ ಮತ್ತು ಬಲ ಭಾಗದಲ್ಲಿ ಖಡ್ಗಗಳನ್ನು ಇರಿಸಿ ಅವುಗಳಿಗೆ ಕುಂಕುಮ, ವಿಭೂತಿಗಳನ್ನು ಹಚ್ಚಿ ಹಸಿರು ಗಾಜಿನ ಬಳೆಗಳನ್ನು ತೊಡಿಸುವರು. ಆ ಖಡ್ಗಗಳ ತುದಿಗೆ ನಿಂಬೆಹಣ್ಣುಗಳನ್ನು ಚುಚ್ಚಲಾಗುತ್ತದೆ. ಹೀಗೆ ನಿಂಬೆಹಣ್ಣು ಚುಚ್ಚಿದರೆ, ದೈವ ಶಕ್ತಿಯ ಎದುರಿನಲ್ಲಿ ದುಷ್ಟಶಕ್ತಿ ನಾಶವಾಗುತ್ತದೆಂಬ ಸಂಕೇತ ಸೂಚಿಸುತ್ತದೆ. ನಂತರ ಮುಂದೆ ದೇವಿಯ ಪೂಜೆಗಾಗಿ ಸಕಲ ಸಿದ್ಧತೆಗಳನ್ನು ಮಾಡಿರುತ್ತಾರೆ. ಮಂಟಪದ ಅಕ್ಕಪಕ್ಕದಲ್ಲಿ ಅಲಂಕೃತವಾಗಿಸಿ ಇಟ್ಟಿರುವ ಹಣ್ಣು ಹಂಪಲುಗಳು, ಹೂವು, ಕೊಬ್ಬರಿ ಬಟ್ಟಲು, ಉತ್ತತ್ತಿ, ಎಲೆಅಡಿಕೆ, ಹೊಸ ಕುಪ್ಪಸದ ಕಣ, ತೆಂಗಿನಕಾಯಿ ಇಡುವರು. ದೇವಿಯ ಎದುರಿನಲ್ಲಿ ಅಗಲವಾದ ಪ್ರಣತಿಯಲ್ಲಿ ಐದು ಅಥವಾ ಒಂಬತ್ತು ದಿನಗಳವರೆಗೆ ಹಗಲು ರಾತ್ರಿ ದೀಪವನ್ನು ಹಚ್ಚಲಾಗುತ್ತದೆ. ಮುತ್ತೈದೆಯರು ಬೆಳಗಲು ಕಳಸವನ್ನು ಇಟ್ಟಿರುತ್ತಾರೆ.

ದೇವಿಯ ಹೆಸರಿನಲ್ಲಿ ೫ ಅಥವಾ ೯ ದಿನಗಳವರೆಗೆ ಪೂಜೆ ಮಾಡುವ ಮಹಿಳೆ ರೊಟ್ಟಿ, ಪಲ್ಯ, ಕಾಳು, ಕಡಿ, ಹಿಟ್ಟುಗಳನ್ನು ಭಿಕ್ಷೆ ಬೇಡಿ ತರುತ್ತಾಳೆ. ಇದಕ್ಕೆ ಇವರು 'ಜೋಗದ ಭಿಕ್ಷೆ' ಎಂದು ಕರೆಯುತ್ತಾರೆ. ಜೋಗದ ಬುಟ್ಟಿಗೆ ಪೂಜೆ ಮಾಡಿದ ಬಳಿಕ ಮನೆಯಲ್ಲಿ ಮಾಡಿದ ಸಿಹಿ ಅಡುಗೆ ದೇವಿಗೆ ನೈವೇದ್ಯಕ್ಕೆ ಹಿಡಿಯುತ್ತಾಳೆ. ಆಮೇಲೆ ಮನೆಯಲ್ಲಿ ಎಲ್ಲರೂ ಸೇರಿ ಒಟ್ಟಾಗಿ ಅಡುಗೆ ಮತ್ತು ಜೋಗದ ಊಟವನ್ನು ಮಾಡುವರು. ಈ ಭಿಕ್ಷೆ ಬೇಡಿಕೊಂಡು ತಂದ ಜೋಗದ ಊಟ ಮಾಡಿದರೆ ಮನುಷ್ಯನಿಗೆ ಯಾವುದೇ ರೋಗ ರುಜಿನಗಳು ಬರುವುದಿಲ್ಲ ಎಂಬ ನಂಬಿಕೆ ಇವರಲ್ಲಿದೆ. ಕೊನೆಯ ಪೂಜೆ ಮುಕ್ತಾಯ ಮಾಡುವ ದಿನ ದೇವಿ ಎದುರಿಗೆ 'ಕುರಿಬಲಿ' ಮಾಡಿ ಬ್ಯಾಟಿ ಆಚರಣೆಯನ್ನು ಮಾಡುವ ಸಂಪ್ರದಾಯ ರೂಢಿಯಲ್ಲಿದೆ. ತರುವಾಯ ಮಾಡಿದ ಬ್ಯಾಟಿಯ ಮಾಂಸದ ಅಡಿಗೆಯನ್ನು ಮಾಡಿಸಿ ಅಕ್ಕಪಕ್ಕದವರಿಗೆ ಹಾಗೂ ಕುಲಸ್ಥರೆಲ್ಲರಿಗೂ ಕರೆದು ಉಣಬಡಿಸುವರು. ಮಿಕ್ಕಿದ ಮಾಂಸವನ್ನು ಮರುದಿನ ಊಟ ಮಾಡದೇ, ಅಂದೇ ಉಳಿದ ಅಡುಗೆಯನ್ನು ನೆಲದಲ್ಲಿ ಊಳುತ್ತಾರೆ.

ಸಸಿ ಬೆಳೆಸುವ ಕಾರ್ಯ : ಮಹಾನವಮಿಯ ದಿನ ದೀಪ ಹಾಕುವ ಮೊದಲನೆಯ ದಿನ ಮನೆಯಲ್ಲಿ ಯಾರಾದರೊಬ್ಬರು ಹುತ್ತದ ಗಡ್ಡೆಗೆ ಹೋಗಿ ಹುತ್ತದ ಮಣ್ಣನ್ನು ತಂದು ಅದನ್ನು ಚೆನ್ನಾಗಿ ಹದಗೊಳಿಸಿ ಪುಡಿಮಾಡುವರು. ನಂತರ ಎರಡು ಅಗಲವಾದ ಬಿದಿರಿನ ಬುಟ್ಟಿಯಲ್ಲಿ ಆ ಮಣ್ಣನ್ನು ತುಂಬಿ ಮಣ್ಣಿನಲ್ಲಿ ಐದು ಅಥವಾ ಒಂಬತ್ತು ದಿನಸಿನ ವಿವಿಧ ದವಸಧಾನ್ಯಗಳನ್ನು ಹಾಕಲಾಗುತ್ತದೆ. ದವಸಧಾನ್ಯಗಳು ಹಾಕಿದ ಆ ಎರಡು ಬಿದರಿನ ಬುಟ್ಟಿಗಳನ್ನು ದೇವಿಯ ಮಂಟಪದ ಅಕ್ಕಪಕ್ಕದಲ್ಲಿ ಇಡಲಾಗುತ್ತದೆ. ಪೂಜೆ ಮಾಡಿದ ನಂತರ ಇವುಗಳಿಗೆ ದಿನ ನಿತ್ಯ ನೀರನ್ನು ಹಾಕಲಾಗುತ್ತದೆ. ಬುಟ್ಟಿಯಲ್ಲಿ ಹಾಕಿರುವ ದವಸಧಾನ್ಯಗಳ ಬೀಜಗಳು ಮೊಳಕೆಯೊಡೆದು ಸಸಿಗಳು ಬೆಳೆದರೆ ನಾವು ಮಾಡಿದ ಪೂಜೆ ದೇವಿಗೆ ಇಷ್ಟವಾಗಿದೆ ಎಂದು ನಂಬುತ್ತಾರೆ. ಒಂದು ವೇಳೆ ಸಸಿಗಳು ದುರ್ಬಲವಾಗಿ ಬೆಳೆದರೆ ದೇವಿಗೆ ನಾವು ಮಾಡಿದ ಪೂಜೆ ಇನ್ನೂ ತೃಪ್ತಿಕರವಾಗಿಲ್ಲವೆಂದು ನಂಬುತ್ತಾರೆ.

ತರಗ ಕಟ್ಟುವುದು : ದೇವಿಯ ಹೆಸರಿನಲ್ಲಿ ದೀಪ ಹಾಕುವ ಕಾರ್ಯ ಮುಕ್ತಾಯ ಗೊಳಿಸುವುದಕ್ಕಿಂತ ಒಂದು ದಿನ ಮೊದಲು ಬೆಲ್ಲ, ಗೋದಿಹಿಟ್ಟು, ಕಡ್ಲೆಹಿಟ್ಟುಗಳನ್ನು ಮಿಶ್ರಣಮಾಡಿ ನೀರು ಹಾಕಿ ಬೆರೆಸಿ ಕಣಕ ಮಾಡುವರು. ಆಮೇಲೆ ಹದ ಬರುವವರೆಗೆ ನಾದಿಕೊಂಡು ಗೋಲಾಕಾರದ ವಿವಿಧ ರೀತಿಯ ಗಾರಿಗೆಗಳನ್ನು ಮಾಡಿ ಎಣ್ಣೆಯಲ್ಲಿ ಕರಿಯಲಾಗುತ್ತದೆ. ಈ ಕರಿದ ಗಾರಿಗೆಗಳನ್ನು ಪ್ರತಿ ಐದು, ಐದು ಗಾರಿಗೆಗಳನ್ನು ಜೋಡಿಸಿ ದಾರದಲ್ಲಿ ಪೋಣಿಸಿ ಸುಮಾರು ೧೧ ಅಥವಾ ೨೧ ಸರಗಳನ್ನು ಮಾಡುವರು. ಅವುಗಳನ್ನು ಮನೆಯಲ್ಲಿನ ನೆಲವಿಗೆ ಇಳಿಬಿಟ್ಟು ನೇತಾಡುವ ಹಾಗೆ ದೇವಿಯ ಮಂಟಪದ ಮೇಲೆ ಕಟ್ಟಲಾಗುತ್ತದೆ. ಕೊನೆಗೆ ದೇವಿಯ ಪೂಜೆ

ಮುಗಿದ ಬಳಿಕ ಅಂದು ಸಂಜೆ ಮನೆಯಲ್ಲಿನ ಯಾರಾದರೊಬ್ಬ ಬಾಲಕ ಅವುಗಳನ್ನು ಕಡಿದು ದೇವಿಯ ಮುಂದೆ ಇಟ್ಟು ನಮಸ್ಕಾರ ಮಾಡಿ ಬರುತ್ತಾನೆ.

ಪೂಜೆ ಮುಗಿದ ಮರುದಿನ ಬೆಳಿಗ್ಗೆ ಎದ್ದು ಮನೆಯಲ್ಲಿ ಎಲ್ಲರೂ ಸ್ನಾನ ಮಾಡಿ ದೇವಿಯ ಮಂಟಪದ ಬಾಳೆದಿಂಡು, ಕಬ್ಬಿನ ಸಿಪ್ಪೆ, ಮಾವಿನ ಎಲೆಗಳು, ಬುಟ್ಟಿಯಲ್ಲಿನ ಸಸಿಗಳನ್ನು ತೆಗೆದುಕೊಂಡು ಹೋಗಿ ಹರಿಯುವ ನೀರಿನಲ್ಲಿ ಬಿಟ್ಟು ಬರುತ್ತಾರೆ. ಅಲ್ಲಿಗೆ ದೇವಿಯ ಪೂಜೆ ಮುಕ್ತಾಯವಾಗುತ್ತದೆ.

ಇನ್ನಿತರ ಆಚರಣೆ

೧. **ಕಾಲುಧೂಳಿ ತೆಗೆಯುವುದು :** ಊಟ ಮಾಡುವಾಗ ಊಟದ ತಟ್ಟೆ ದಾಟಿದರೆ ಇಲ್ಲವೇ ಊಟ ಮಾಡುವಾಗ ಹೊರಗಿನಿಂದ ಯಾರಾದರೂ ಬಂದು ಇವರು ಊಟ ಮಾಡುತ್ತಿರುವ ತಟ್ಟೆಯನ್ನು ದಿಟ್ಟಿಸಿ ನೋಡಿದರೆ, ಕೆಟ್ಟ ಕಣ್ಣು ಬಿದ್ದು ಹೊಟ್ಟೆ ನೋಯಿಸುತ್ತದೆ ಎಂಬುದು ಇವರ ನಂಬಿಕೆಯಾಗಿದೆ. ಆದ್ದದರಿಂದ ಮೂರು ಚಿಕ್ಕ ಕಲ್ಲುಗಳನ್ನು ತಂದು ಹೊಟ್ಟೆ ನೋಯಿಸುವ ವ್ಯಕ್ತಿಗೆ ಮೂರು ಸಲ ಒಟ್ಟಿಗೆ ನಿವಾಳಿಸುತ್ತಾ ಅವರ ಕಣ್ಣು, ಇವರ ಕಣ್ಣು, ಕೆಟ್ಟ ಕಣ್ಣು, ಅವರ ಬಾಯಿಗೆ ಮಣ್ಣು ಬೀಳಾ ಎಂದು ಹೇಳುತ್ತಾ ಮೂರು ಸಲ ಇಳಿಸಿ ಮೂರು ದಾರಿಗಳಿ ಗೊಂದರಂತೆ ತೂರಿ ಬರುತ್ತಾರೆ.

ವಿಧಾನ ೨ : ತಟ್ಟೆಯಲ್ಲಿ ಸ್ವಲ್ಪ ಒಣ ಸಗಣಿಯ ಪುಡಿಯನ್ನು ನೀರಿನಲ್ಲಿ ಕದಡಿ ಅಥವಾ ಒಣ ಕುಳ್ಳಿನ ಪುಡಿಯನ್ನು ಹಾಕಿ, ಆಮೇಲೆ ಹೊಟ್ಟೆ ನೋಯುವವರ ಮುಖದಿಂದ ಮೂರು ಸಲ ಇಳಿಸಿ, ಕೆಂಡ ತುಂಬಿದ ಲೋಟವನ್ನು ಆ ನೀರಿಗೆ ಬೋರಲಾಗಿ ಹಾಕುತ್ತಾರೆ. ಹೀಗೆ ಮಾಡುವುದ ರಿಂದ ಹೊಟ್ಟೆ ನೋವು ನಿವಾರಣೆಯಾಗುತ್ತದೆ ಎಂಬ ನಂಬಿಕೆ ಇವರದ್ದಾಗಿದೆ.

೨. **ಎದೆಯ ಹಾಲಿನ ದೃಷ್ಟಿ :** ತಾಯಿಯ ಎದೆಯ ಹಾಲು ಮಗು ಕುಡಿಯದೆ ಅಳುತ್ತಿದ್ದರೆ, ಎದೆ ಹಾಲಿನ ದೃಷ್ಟಿದೋಷವಾಗಿದೆ ಎಂದು ನಂಬುತ್ತಾರೆ. ಆಗ ಸಮುದ್ರದಲ್ಲಿನ ಕಪ್ಪೆ ಚಿಪ್ಪೆಗೆ ಸ್ವಲ್ಪ ತಾಯಿ ಎದೆ ಹಾಲನ್ನು ಹಾಕಿ, ಒಲೆಯ ಬೆಂಕಿಯ ಕೆಂಡದ ಮೇಲೆ ಇಟ್ಟು ಕಾಯಿಸುತ್ತಾರೆ. ಆಗ ಹಾಲು ಚಟ್ ಚಟ್ ಎಂಬ ಶಬ್ದ ಬಂದರೆ ದೃಷ್ಟಿ ದೋಷವಾಗಿದೆ ಎಂದು ನಂಬುತ್ತಾರೆ.

೩. **ಮಕ್ಕಳಿಗೆ ದೃಷ್ಟಿ ತೆಗೆಯುವುದು :** ಚಿಕ್ಕ ಮಗುವು ವಿಪರೀತ ಅಳುತ್ತಿದ್ದರೆ ಅಥವಾ ಒಂದೇ ಸಮನೆ ಹಠ ಮಾಡುತ್ತಿದ್ದರೆ ಆ ಮಗುವಿಗೆ ದೃಷ್ಟಿ ದೋಷವಾಗಿದೆ ಎಂಬ ನಂಬಿಕೆ ಇದೆ. ಆ ಮಗುವಿನ ಮುಖಕ್ಕೆ ಮೂರಿ ಬಾರಿ ಹಳೆಯ ಬಟ್ಟೆಯಿಂದ ಇಳಿಸಿ ಆ ಬಟ್ಟೆಯನ್ನು ಬೆಂಕಿಯಿಂದ ಸುಡುತ್ತಾರೆ. ಆಗ ಆ ಬಟ್ಟೆಯು ಸುಟ್ಟು ಕೆಟ್ಟವಾಸನೆ ಬೀರುತ್ತಿದ್ದರೆ, ಮಗುವಿಗೆ ಯಾರದೋ ದೃಷ್ಟಿ ತಗುಲಿದೆ ಎಂದು ನಂಬುತ್ತಾರೆ. ವಾಸನೆಯ ಪ್ರಮಾಣ ತೀರಾ ಕಡಿಮೆ ಇದ್ದರೆ ದೃಷ್ಟಿ ದೋಷವಾಗಿಲ್ಲ ಎಂಬುದು ನಂಬಿಕೆ.

ವಿಧಾನ ೨ : ಕರಿ ಕ್ಯಾರಳದಿಂದ ಮಗುವಿನ ಮುಖಕ್ಕೆ ನಿವಾಳಿಸಿ ಸುಡುತ್ತಾರೆ. ಸುಟ್ಟ ಮೇಲೆ ಕ್ಯಾರಳದ ಬೂದಿಯನ್ನು ಮಗುವಿನ ಕಾಲಿಗೆ ಹಚ್ಚುತ್ತಾರೆ. ಇದರಲ್ಲಿ ಗಂಡು ಮಗುವಾಗಿದ್ದರೆ ಬಲಗಾಲಿಗೆ ಅಥವಾ ಹೆಣ್ಣು ಮಗುವಾಗಿದ್ದರೆ ಎಡಗಾಲಿಗೆ ಅದರ ಬೂದಿಯಿಂದ ಚಿಕ್ಕ ಚುಕ್ಕೆಯನ್ನು ಇಡುತ್ತಾರೆ.

೪. ಕೈಕಾಲು ಹುಣ್ಣುಗಳಿಗೆ : ಆಟವಾಡುವ ಮಕ್ಕಳ ಕೈ ಕಾಲುಗಳಿಗೆ ವಿಪರೀತ ಹುಣ್ಣುಗಳಾಗಿದ್ದರೆ, ಇವುಗಳಿಗೆ ಇವರು 'ದಾಟ್ ಬಕ್ಕೆ' ಅಥವಾ 'ದಾಟ್ ಹುಣ್ಣುಗಳು' ಎಂದು ಹೇಳುತ್ತಾರೆ. ಇದಕ್ಕಾಗಿ ಮೂರು ಬೀಡಿಗಳನ್ನು ತೆಗೆದುಕೊಂಡು ಆದಿತ್ಯವಾರ ಅಥವಾ ಬುಧವಾರದಂದು ಕತ್ತಲಾಗುತ್ತಿದ್ದಂತೆಯೇ ಆ ಮಕ್ಕಳ ಮುಖದಿಂದ ಮೂರು ಬಾರಿ ಇಳಿಸಿ ಮೂರು ದಾರಿ ಸೇರುವಲ್ಲಿ ಬಿಸಾಡಿ ಬರುತ್ತಾರೆ. ಇದರಿಂದ ಕ್ರಮೇಣ ಈ ಹುಣ್ಣುಗಳು ಮಾಯವಾಗುತ್ತವೆ ಎಂಬ ನಂಬಿಕೆ ಇವರದ್ದಾಗಿದೆ.

೫. ಕುಳ್ಳಿನ ಪಾವಿತ್ರ್ಯತೆ : ಇವರು ಸಗಣಿಯ ಕುಳ್ಳುಗಳು ಬಹಳ ಪವಿತ್ರವೆಂದು ನಂಬುತ್ತಾರೆ. ಆದುದರಿಂದ ಕುಳ್ಳುಗಳನ್ನು ಕದಿಯುವುದಾಗಲಿ, ಸುಳ್ಳು ಹೇಳಿ ಮನೆಗೆ ತೆಗೆದುಕೊಂಡು ಹೋಗುವುದಾಗಲಿ ಮಾಡುವುದಿಲ್ಲ. ಏಕೆಂದರೆ ಇವರಲ್ಲಿ ಶವ ಸುಡುವ ಪದ್ಧತಿಯಿರುವುದರಿಂದ ಶವ ಸುಡುವ ಸಂದರ್ಭದಲ್ಲಿ ಈ ರೀತಿಯ ಸುಳ್ಳು ಹೇಳಿದರೆ ಹೆಣಕ್ಕೆ ಹಿಡಿದುಕೊಂಡ ಕುಳ್ಳಿನ ಬೆಂಕಿ ಹೊತ್ತುವುದಿಲ್ಲ ಎಂಬ ನಂಬಿಕೆ ಇವರದ್ದಾಗಿದೆ.

೬. ಬಲಿ ಆಚರಣೆ : ಬಲಿ ಎಂದರೆ ವಿಧಿಪೂರ್ವಕವಾಗಿ ನಾಶ ಮಾಡುವುದು. ಈ ರೀತಿ ನಾಶ ಮಾಡುವುದು ಒಂದು ವಸ್ತು, ಒಂದು ಪ್ರಾಣಿಯನ್ನು ದೈವದ ಎದುರಿನಲ್ಲಿ ಬಲಿಕೊಟ್ಟರೆ, ಅವರಿಗೆ ಕಾಡುತ್ತಿರುವ ಕಂಟಕಗಳು ದೂರವಾಗುತ್ತವೆ ಎಂಬುದು ಇವರ ನಂಬಿಕೆಯಾಗಿದೆ. ಅಂದರೆ ದೈವಶಕ್ತಿಯ ಮುಂದೆ ಯಾವ ದುಷ್ಟಶಕ್ತಿಯ ಆಟ ನಡೆಯದೆ ನಾಶವಾಗುತ್ತದೆ ಎಂಬ ನಂಬಿಕೆ ಇವರಲ್ಲಿದೆ.

೭. ಹರಕೆಗಳು : ಯಾರಾದರೂ ಒಬ್ಬ ವ್ಯಕ್ತಿಯು ಅನಾರೋಗ್ಯದಿಂದ ಬಳಲುತ್ತಿದ್ದರೆ ಅಥವಾ ದೇವರಲ್ಲಿ ಸುಖ, ಸಂಪತ್ತು, ಐಶ್ವರ್ಯ ಪ್ರಾಪ್ತಿಗಾಗಿ ದೇವರಲ್ಲಿ ಹರಕೆ ಹೊತ್ತುಕೊಳ್ಳುವ ಸಂಪ್ರದಾಯ ರೂಢಿಯಲ್ಲಿದೆ. ಕೆಲವೊಂದು ಸಂದರ್ಭದಲ್ಲಿ ಸವ್ವಾ ರೂಪಾಯಿಗೆ ಪೂಜೆ ಮಾಡಿ ಮುಡುಪನ್ನು ಕಟ್ಟಿಡುತ್ತಾರೆ. ಅವರ ಹರಕೆ ನೆರವೇರಿಸಿದ ಮೇಲೆ ದೇವರಿಗೆ ಸಮರ್ಪಿಸಿ ಬರುತ್ತಾರೆ. ಈ ಮುಡಿ ಕಟ್ಟುವುದರಲ್ಲಿ ವಿವಿಧ ಬಗೆಗಳಿವೆ. ಇವುಗಳಲ್ಲದೆ ದೇವರುಗಳಿಗೆ ಉರುಳು ಸೇವೆ, ಉದ್ದಂಡ ನಮಸ್ಕಾರ, ಹರಕೆ, ಕುರಿಬಲಿ, ಕೋಳಿಬಲಿ, ಗೊಂದಲು ಹಾಕಿಸುವುದಾಗಿ ಹತ್ತು ಹಲವು ಬಗೆಯ ಹರಕೆಗಳನ್ನು ಹೊತ್ತುಕೊಳ್ಳುತ್ತಾರೆ. ಹೊತ್ತ ಹರಕೆಯನ್ನು ಮರೆತರೆ ಅಥವಾ ಹರಕೆ ತೀರಿಸದಿದ್ದರೆ ದೇವರು ಪುನಃ ಕಾಡುತ್ತಾನೆಂಬ ನಂಬಿಕೆ ಇವರಲ್ಲಿದೆ.

೧೩. ಧಾರ್ಮಿಕ ಕೇಂದ್ರಗಳ ಜಾತ್ರೆ-ಉತ್ಸವಗಳು

ಪ್ರಕೃತಿಯಲ್ಲಿ ಮಡಿಲಲ್ಲಿ ಬದುಕುವ ಮಾನವನು ಬಹುದಿನಗಳ ಹಿಂದಿನಿಂದಲೂ ತಾನು ಕಾಣುವ ಮರ-ಬಳ್ಳಿ, ನೆಲ-ಜಲ, ಕಲ್ಲು-ಮಣ್ಣು ಮೊದಲಾದ ವಸ್ತುಗಳಲ್ಲಿ ಒಂದು ವಿಶೇಷ ಶಕ್ತಿ ಅಡಗಿದೆ ಎಂದು ನಂಬಿದ್ದಾನೆ. ರೋಗಗಳು ಕಾಡಿದಾಗ, ಕಷ್ಟಗಳು ಬಂದಾಗ, ಬೆಳೆ ನಾಶವಾದಾಗ, ತನಗೆ ರಕ್ಷಣೆ ಪಡೆಯಲು ಆ ಕಣ್ಣಿಗೆ ಕಾಣದ ನಿಗೂಢವಾದ ಶಕ್ತಿಯ ಕಡೆಗೆ ಮೊರೆ ಹೋಗುತ್ತಾನೆ. ಇಲ್ಲಿ ಮಾನವನಿಗೆ ಭಕ್ತಿಯ ಜೊತೆಗೆ ಭೀತಿಯು ದೇವರಲ್ಲಿ ನಂಬಿಕೆ ಹುಟ್ಟುವಂತೆ ಮಾಡುತ್ತದೆ.

ಪ್ರಪಂಚದಲ್ಲಿನ ಪ್ರತಿಯೊಂದು ಹಿಂದೂ ದೇವತೆಗಳ ಮತ್ತು ದೇವರುಗಳನ್ನು ಒಂದು ಸೀಮೆಗೆ ಸಂಬಂಧಿಸಿದು ಎಂದು ಹೇಳಬಹುದು. ಆದರೆ ಒಂದು ಸಮುದಾಯಕ್ಕೆ ಸಂಬಂಧಿಸಿವೆ ಎಂದು ಹೇಳುವುದು ಕಷ್ಟದ ಕೆಲಸ. ಏಕೆಂದರೆ, ದೇವತೆಗಳು, ದೇವರುಗಳು ಮಾನವನ ಮಾನಸಿಕ ಭಾವನೆಗೆ ಸಂಬಂಧಿಸಿದ್ದು. ಛಿಸಾಡಿ ಸಮುದಾಯದವರು ನಡೆದುಕೊಳ್ಳುವ ಅಂಬಾಭವಾನಿ, ಕಾಳಮ್ಮ, ಎಲ್ಲಮ್ಮ, ಮಾರೆಮ್ಮ, ದುರುಗಮ್ಮ, ಭಾಗಮ್ಮ, ಸೈಟಿಗೆಮ್ಮ, ಖಂಡೋಬಾ, ಆಂಜನೇಯ ಹೀಗೆ ಹತ್ತು ಹಲವಾರು ದೇವರುಗಳು ಅನೇಕ ಸಮುದಾಯಗಳಲ್ಲಿ ಪೂಜಿಸಲ್ಪಡುತ್ತವೆ. ಇವುಗಳನ್ನು ನಮ್ಮ ಕುಲದೇವರು, ಮನೆದೇವರು ಎಂದು ಹೇಳುತ್ತಾರೆ. ಹೀಗಿರುವಾಗ ಈ ದೇವರುಗಳು ಅಥವಾ ದೈವಗಳು ಒಂದು ಸಮುದಾಯಕ್ಕೆ ಸಂಬಂಧಪಟ್ಟಿವೆ ಎಂದು ಹೇಳುವುದು ಕಷ್ಟದ ಕೆಲಸವಾಗಿದೆ.

ಛಿಸಾಡಿ ಸಮುದಾಯದ ಪ್ರತಿಯೊಂದು ಕುಟುಂಬದವರು ತಮ್ಮ ಮನೆ ಇಲ್ಲವೇ ಗುಡಾರಗಳಲ್ಲಿ ಅಂಬಾಭವಾನಿ ದೇವರ ಜಗುಲಿ ನಿರ್ಮಿಸಿಕೊಂಡಿರುತ್ತಾರೆ. ಅಲ್ಲದೆ ಕೇರಿಯಲ್ಲಿನ ದೇವಿಯ ದೇವಸ್ಥಾನಗಳಾದ ಎಲ್ಲಮ್ಮ, ದುರುಗಮ್ಮ, ಮಾರೆಮ್ಮ, ಭವಾನಿ ಎಂಬ ಸ್ತ್ರೀದೇವತೆಗಳ ಗುಡಿಗಳಿಗೂ ಸಹ ಭಕ್ತಿಯಿಂದ ನಡೆದುಕೊಳ್ಳುತ್ತಾರೆ. ಬಹುತೇಕ ಈ ಸಮುದಾಯವು ಸ್ತ್ರೀ ಶಕ್ತಿ ದೇವತೆಗಳ ಆರಾಧಕರಾಗಿರುವುದು ಕಂಡುಬರುತ್ತದೆ. ದೇವತೆಗಳಿಗೆ ಕೋಳಿ, ಕುರಿ ಬಲಿ ಅರ್ಪಿಸುವ ಹಾಗೂ ಸಿಹಿ ನೈವೇದ್ಯ ಮಾಡುವ ಸಂಪ್ರದಾಯ ಇವರಲ್ಲಿದೆ. ಹಿಂದೂ ದೇವರುಗಳಲ್ಲದೆ ಇಸ್ಲಾಂ ದೇವರುಗಳಿಗೂ ಬಹಳ ಭಕ್ತಿಯಿಂದ ನಂಬಿಕೆಯಿಂದ ನಡೆದುಕೊಳ್ಳುತ್ತಾರೆ.

ಗುಲ್ಬರ್ಗಾ ಜಿಲ್ಲೆಯ ಛಿಸಾಡಿ ಸಮುದಾಯದ ದೈವಗಳು

ಸ್ತ್ರೀ ದೈವಗಳು	ದೈವಗಳ ನೆಲೆಗಳು
ಅಂಬಾಭವಾನಿ	ತುಳಜಾಪುರ (ಮಹಾರಾಷ್ಟ್ರ)
ಕಾಳಮ್ಮ	ಸಿರಸಂಗಿ, ಚಿಣಮಗೇರಿ, ಕುನ್ನೂರು
ಎಲ್ಲಮ್ಮ	ಮಾಹೋರ (ಜೇವರ್ಗಿ ತಾಲೂಕು) ನಾಗಾವಿ (ಚಿತ್ತಾಪೂರ ತಾ.) ಸೌದತ್ತಿ (ಬೆಳಗಾವಿ ಜಿ.), ಸುಲ್ತಾನಪುರ (ಗುಲ್ಬರ್ಗಾ ಜಿ.)

ಭಾಗಮ್ಮ	ಘತ್ತರಗಿ (ಅಫಜಲ್‌ಪುರ ತಾಲೂಕು)
ದ್ಯಾವಮ್ಮ	ಸ್ಥಳೀಯ ದೇವಾಲಯಗಳು
ದುರುಗಮ್ಮ	ಅಲ್ಲೂರ್ (ಬಿ) ಚಿತ್ತಾಪೂರ ತಾ.

ಪುರುಷ ದೈವಗಳು	ನೆಲೆಸಿರುವ ನೆಲೆಗಳು
ಜೆಜೋರಿ ಖಂಡೋಬಾ	ಮಹಾರಾಷ್ಟ್ರದಲ್ಲಿ
ಆಂಜನೇಯ	ಸ್ಥಳೀಯ ಊರಿನ ದೇವಾಲಯಗಳು
ಘಿಸಾಡಿ ಬಾಬಾ	ಮಹಾರಾಷ್ಟ್ರದ ಸೋಲಾಪುರ ಜಿಲ್ಲೆಯ ಮಾರಡಿ ಹತ್ತಿರ
ವೆಂಕಟೇಶ್ವರ (ಬಾಲಾಜಿ)	ತಿರುಪತಿ
ಮೌನೇಶ್ವರ	ತಿಂತಿಣಿ (ಸುರಪುರ ತಾಲೂಕು)
ನರಸಿಂಹ ಸ್ವಾಮಿ	ಬೀದರ್
ಮಲ್ಲಯ್ಯ	ಮೈಲಾಪುರ (ಯಾದಗಿರಿ ತಾಲ್ಲೂಕು)
ರಾಜಾಬಾಕ್ಸರ್	ಬಸವಕಲ್ಯಾಣ, ಸಾತಖೇಡ

ಇಸ್ಲಾಂ ದೈವಗಳು	ನೆಲೆಗಳು
ಇಸ್ಮಾಯಿಲ್ ಖಾದ್ರಿ	ಪೋಡವಾಡಿ (ಬೀದರ್ ಜಿಲ್ಲೆ)
ಮಹಿಬೂಬ್ ಸುಭಾನಿ	ನಿಲ್ಲೂರ, ಗಾಣಗಾಪುರ (ಅಫಜಲ್‌ಪುರ ತಾ.)
ಹುಸೇನಭಾಷ್	ಮಂಗಾಲಿ
ದಾವಲ್‌ಮಲ್ಲಿಕ್	
ರಣಪೀರ್ ದರ್ಗಾ	ಗುಲ್ಬರ್ಗಾ
ಖಾಜಾಬಂದೇ ನವಾಜ್	ಗುಲ್ಬರ್ಗಾ
ಸಿದ್ಧಿಭಾಷಾ	ಗುಲ್ಬರ್ಗಾ
ಬಿಬಿ ಫಾತಿಮಾ ದರ್ಗಾ	ಮೆಹಬೂಬ್ ನಗರ, ಕ್ಕೊಯಲಾಕೊಂಡ

೧. ಅಂಬಾಭವಾನಿ

ಅಂಬಾಭವಾನಿ, ಅಂಬಮ್ಮ, ಅಂಬಾಮಾತಾ, ಅಂಬಾದೇವಿ, ಅಂಬಾಬಾಯಿ, ತುಳಜಾಭವಾನಿ ಹೀಗೆ ಈ ದೇವತೆಯನ್ನು ಪ್ರಾದೇಶಿಕವಾಗಿ ಗುರುತಿಸುವುದು ವಾಡಿಕೆಯಲ್ಲಿದೆ. ಘಿಸಾಡಿ

ಸಮುದಾಯದವರು ಕೂಡ ಈ ದೇವತೆಯನ್ನು ಮನೆ ದೇವರು, ಕುಲದೇವರು, ಧರ್ಮದೇವತೆ ಎಂದು ಪೂಜಿಸುತ್ತಾರೆ. ಈ ದೇವಿಯ ಮೂಲ ಸ್ಥಳವು ಮಹಾರಾಷ್ಟ್ರದ ಸೋಲಾಪುರ ಜಿಲ್ಲೆಯ ತುಳಜಾಪುರದಲ್ಲಿದೆ.

ಪಾರ್ವತಿಯ ಇನ್ನೊಂದು ಹೆಸರಿನ ಅವತಾರವೇ ಅಂಬಾಭವಾನಿ ಎಂದು ಅನೇಕ ಜನರ ನಂಬಿಕೆಯಾಗಿದೆ. ಈ ಬಗ್ಗೆ ಕಲ್ಪನಿಕ ಕತೆಗಳಿವೆ. ಅಂಬಾಭವಾನಿ ಜಾತ್ರೆಯು ಪ್ರತಿವರ್ಷ ಮಹಾನವಮಿ ಅಮಾವಾಸ್ಯೆಯಾದ ನಂತರ ಒಂಬತ್ತು ದಿನಗಳವರೆಗೆ ನಡೆಯುತ್ತದೆ. ಅಂಬಾಭವಾನಿಗೆ ಈ ಸಂದರ್ಭದಲ್ಲಿ ವಿಶೇಷ ಪೂಜೆ ಮಾಡಲಾಗುತ್ತದೆ. ಬಳಿಕ ವಿಜಯದಶಮಿಯಂದು ದೇವಿಯ ಮೂರ್ತಿಯನ್ನು ಪಲ್ಲಕ್ಕಿಯಲ್ಲಿಟ್ಟು ಮೆರವಣಿಗೆ ಮಾಡುವುದರ ಮೂಲಕ ಜಾತ್ರೆ ಮಾಡಲಾಗುತ್ತದೆ. ಈ ಜಾತ್ರೆಯ ಸಂದರ್ಭದಲ್ಲಿ ಘಿಸಾಡಿ ಸಮುದಾಯದ ಅನೇಕ ಜನರು ಅಲ್ಲಿಗೆ ಪಾದಯಾತ್ರೆ ಹೋಗುತ್ತಾರೆ. ಇನ್ನು ಕೆಲವರು ಜಾತ್ರೆ ದರ್ಶನಕ್ಕೆ ಹೋಗುತ್ತಾರೆ. ಕೆಲವರು ತಾವುಗಳು ಹೊತ್ತುಕೊಂಡಿರುವ ಹರಕೆಯನ್ನು ತಿರಿಸಲು ಹೋಗುತ್ತಾರೆ. ಇನ್ನು ಕೆಲವರು ತಾವು ನೆಲೆಸಿರುವ ಪ್ರದೇಶದ ಅಂಬಾಭವಾನಿ ದೇವಸ್ಥಾನಗಳಿಗೆ ಅಂದಿನ ದಿನ ಪೂಜೆಯನ್ನು ಸಲ್ಲಿಸುತ್ತಾರೆ. ಗುಲ್ಬರ್ಗಾದ ಘಿಸಾಡಿ ಸಮುದಾಯದವರು ಸ್ವತಃ ಅಂಬಾಭವಾನಿ ಮಂದಿರವನ್ನು ಗುಲ್ಬರ್ಗಾ ನಗರದ ಸುಲ್ತಾನಪುರದ ರಸ್ತೆಯಲ್ಲಿ ಭಕ್ತರಿಂದ ದೇಣಿಗೆ ಸಂಗ್ರಹಿಸಿ ಬಹು ಅಚ್ಚುಕಟ್ಟಾಗಿ ಸುಂದರವಾಗಿ ಕಟ್ಟಿಸಿದ್ದಾರೆ.

೨. ಕಾಳಮ್ಮ

ಪುರಾತನ ಕಾಲದಲ್ಲಿ ಬುಡಕಟ್ಟಿನ ಜನರು ಸೂರ್ಯ ಮುಳುಗಿದ ಕೂಡಲೇ ಬರುವ ಭಯಂಕರ ಕತ್ತಲು ನೋಡಿ ಹೆದರಿ ಕಾಳರಾತ್ರಿಯನ್ನು ಓಡಿಸಲು ಕಾಳಮ್ಮ ಸೃಷ್ಟಿ ಮಾಡಿದ್ದಾರೆ ಎಂಬವನನ್ನು ಜನಪದ ಕಥೆಯಿದೆ. ಘಿಸಾಡಿ ಸಮುದಾಯವು ಒಂದು ಬುಡಕಟ್ಟು ವೃತ್ತಿ ಸಮುದಾಯವಾಗಿದ್ದು ಈ ದೇವತೆ ತಮ್ಮ ಉದ್ಯೋಗ ಅಥವಾ ಕುಲಕಸುಬಿನ ದೇವತೆ ಎಂದು ನಂಬುತ್ತಾರೆ. ಇವರು ತಮ್ಮ ವೃತ್ತಿ ಸಂಬಂಧಿತ ಪ್ರತಿಯೊಂದು ಸಾಧನ ಸಲಕರಣೆಗಳನ್ನು ಕಾಳಮ್ಮನ ರೂಪವೆಂದು ಪೂಜ್ಯ ಭಾವನೆಯಿಂದ ಅವುಗಳನ್ನು ಭಕ್ತಿಯಿಂದ ಪೂಜಿಸುತ್ತಾರೆ. ಅಲ್ಲದೆ ಸಿರಸಂಗಿ ಕಾಳಮ್ಮ, ಚಿಮಣಗೇರಿ ಕಾಳಮ್ಮ, ಕನ್ನೂರು ಕಾಳಮ್ಮ ಮಂದಿರಗಳಿಗೆ ಹೋಗಿ ಪೂಜೆ ಪುನಸ್ಕಾರಗಳನ್ನು ಸಲ್ಲಿಸುತ್ತಾರೆ. ಪ್ರತಿವರ್ಷ ಈ ದೇವಿಯ ಜಾತ್ರೆ ನಡೆಯುತ್ತದೆ. ಅನುಕೂಲಸ್ಥರು ಈ ಜಾತ್ರೆಗೆ ಹೋಗುತ್ತಾರೆ. ಕೆಲವರು ಹರಕೆಗಳನ್ನು ಹೊತ್ತುಕೊಂಡು ತೀರಿಸಿ ಬರುತ್ತಾರೆ.

೩. ಎಲ್ಲಮ್ಮ

ಈ ಸಮುದಾಯದ ಸ್ತ್ರೀ ದೈವಗಳಲ್ಲಿ ಎಲ್ಲಮ್ಮ ದೇವತೆಯೂ ಒಬ್ಬಳಾಗಿದ್ದಾಳೆ. ಇವರು ತಾವು ನೆಲೆಸಿರುವ ಪ್ರದೇಶಗಳಲ್ಲಿ ಸಮೀಪವಿರುವ ಮತ್ತು ತಮ್ಮ ಭಕ್ತಿ ಭಾವನೆಗಳಿಗೆ ಸ್ಪಂದಿಸುವ

ಎಲ್ಲಮ್ಮ ದೇವಿಗೆ ಬಹಳ ಭಕ್ತಿಯಿಂದ ನಡೆದುಕೊಳ್ಳುತ್ತಾರೆ. ಅಲ್ಲಿ ನಡೆಯುವ ಜಾತ್ರೆ ಉತ್ಸವಗಳಲ್ಲಿ ಹೋಗಿ ದೇವಿಯ ಸೇವೆಗಾಗಿ ಹೂವು ಹಣ್ಣು, ಸೀರೆ ಕುಪ್ಪಸದ ಕಣ, ಹಸಿರು ಬಳೆ, ಕಾಯಿ ಕರ್ಪೂರಗಳನ್ನು ದೇವಿಗೆ ನೀಡಿ ಪೂಜೆಯಲ್ಲಿ ಭಾಗವಹಿಸಿ ದರ್ಶನವನ್ನು ಪಡೆಯುತ್ತಾರೆ. ಹಾಗೆಯೇ ಇವರು ಹೊತ್ತುಕೊಂಡ ಹರಕೆಯನ್ನು ಬಲಿಗಳ ಮೂಲಕ ಅರ್ಪಿಸುತ್ತಾರೆ. ಗುಲ್ಬರ್ಗಾದಲ್ಲಿ ಬಹುತೇಕ ಈ ಸಮುದಾಯವು ಸುಲ್ತಾನಪುರ ಎಲ್ಲಮ್ಮ ದೇವಿಯ ಜಾತ್ರೆಗೆ ಹೋಗುವುದು ಕಂಡುಬರುತ್ತದೆ. ಇವರು ಈ ಎಲ್ಲಮ್ಮ ದೇವಿಗೆ ಮಾತ್ರ ಕೋಳಿ ಬಲಿ ಕೊಡುವ ಸಂಪ್ರದಾಯ ಅನುಸರಿಸುತ್ತಾರೆ.

೪. ಭಾಗಮ್ಮ ಘುತ್ತರಗಿ

ಅಫಜಲ್‌ಪುರ ತಾಲ್ಲೂಕಿನ ಭೀಮಾನದಿ ತೀರದಲ್ಲಿರುವ ಘುತ್ತರಗಿ ಗ್ರಾಮದ ಭಾಗಮ್ಮ ದೇವಿ ಭಕ್ತರಿಗೆ ಭಾಗ್ಯವನ್ನು ನೀಡುವ ದೇವತೆಯಾಗಿದ್ದಾಳೆ. ಘಿಸಾಡಿ ಸಮುದಾಯದವರು ಈ ಭಾಗ್ಯಮ್ಮ ದೇವಿಗೆ ಭಕ್ತಿಯಿಂದ ನಡೆದುಕೊಳ್ಳುತ್ತಾರೆ. ಕೆಲವು ಮಹಿಳೆಯರು ಕುಟುಂಬದ ಹಿತಕ್ಕಾಗಿ ಬೇಡಿ ಕೊಂಡ ತಮ್ಮ ಹರಕೆಗಳನ್ನು 'ಸಿಡಿ' ಆಡುವ ಮುಖಾಂತರ ಆಚರಿಸುವುದು ಕಂಡುಬರುತ್ತದೆ.

೫. ಸೀಮೆ ಮಾರಗಮ್ಮ, ದುರುಗಮ್ಮ

ಘಿಸಾಡಿ ಸಮುದಾಯದವರು ನೆಲೆಸಿರುವ ಊರಿನ ಗಡಿ ಭಾಗದಲ್ಲಿನ ಅಡವಿಯಲ್ಲಿರುವ ಸೀಮೆ ಮಾರಗಮ್ಮ, ದುರುಗಮ್ಮ ಅಥವಾ ಊರಿನ ಹಳ್ಳಕೊಳ್ಳ ಹುತ್ತದ ಗಡ್ಡೆಗಳಂತಹ ಪ್ರದೇಶಗಳಲ್ಲಿನ ಸೀಮೆ ದೇವತೆಳನ್ನು ನಂಬುತ್ತಾರೆ. ಯಾರಾದರೂ ಹರಕೆ ಹೊತ್ತುಕೊಂಡಿದ್ದರೆ, ಅವರು ತಮ್ಮ ಇಡೀ ಸ್ಥಳೀಯ ಸುತ್ತಮುತ್ತಲಿನ ಕುಲಸ್ಥರಿಗೆ ಹಾಗೂ ಬಂಧು ಬಳಗದವರಿಗೆ ಕರೆಯಿಸಿ ಬ್ಯಾಟಿ ಮಾಡಿ ದೇವರಿಗೆ ಅರ್ಪಿಸಿ ಊಟವನ್ನು ಮಾಡಿಸುತ್ತಾರೆ.

೬. ಜೆಜೋರಿ ಖಂಡೋಬಾ

ಜೆಜೋರಿ ಖಂಡೋಬ ದೇವಾಲಯವು ಮಹಾರಾಷ್ಟ್ರದಲ್ಲಿದ್ದು ಮೈಲಾಪುರ ಮಲ್ಲಯ್ಯ ದೇವರ ಪ್ರತಿರೂಪ ಅಥವಾ ಮೈಲಾರಲಿಂಗ 'ಮಲ್ಲಯ್ಯ' ಹಾಗೂ 'ಖಂಡೋಬ' ಒಂದೇ ಎಂದು ಈ ಸಮುದಾಯದ ಅಭಿಪ್ರಾಯವಾಗಿದೆ. ಈ ಮೈಲಾರಲಿಂಗ ಪೂಜೆ ಸಂದರ್ಭದಲ್ಲಿ ಏಳು ಕೋಟಿ ಮೈಲಾರಲಿಂಗ ಎಂಬ ಉಕ್ತಿ ಉಚ್ಚರಿಸುವ ಹಾಗೆ ಜೆಜೋರಿ ಖಂಡೋಬಾ ದೇವಾಲಯದಲ್ಲಿ ಕೂಡಾ ಏಳು ಕೋಟಿ ಜೆಜೋರಿ ಖಂಡೋಬಾ ಎನ್ನುವ ಉಕ್ತಿ ಉಚ್ಚರಿಸುವುದರೊಂದಿಗೆ ಪೂಜೆ ಮಾಡುತ್ತಾರೆ. ಹೀಗಾಗಿ ಮೈಲಾಪುರ ಮೈಲಾರಲಿಂಗ ದೇವರು ಹಾಗೂ ಜೆಜೋರಿ ಖಂಡೋಬಾ ದೇವರು ಒಂದೇ ಎಂದು ಈ ಸಮುದಾಯದವರ ಆಚರಣೆಗಳನ್ನು ಗಮನಿಸಿದಾಗ ತಿಳಿದುಬರುತ್ತದೆ. ಇಲ್ಲಿಯ ಘಿಸಾಡಿ ಸಮುದಾಯದವರು ಈ ದೇವಾಲಯವು ಮಹಾರಾಷ್ಟ್ರದಲ್ಲಿರುವುದರಿಂದ ಅನುಕೂಲವಾದರೆ ಮಾತ್ರ ನಾಲ್ಕು ಅಥವಾ ಐದು ವರ್ಷಗಳಿಗೊಮ್ಮೆ ಮಾತ್ರ ಹೋಗಿ ದರ್ಶನ

ಮಾಡಿಕೊಂಡು ಬರುವರು. ಆದರೆ ಕುದುರೆ ಮೇಲೆ ಕುಳಿತಿರುವ ಈ ಜೆಜೋರಿ ಖಂಡೋಬಾ ಮೂರ್ತಿಯನ್ನು ತಮ್ಮ ಜಗುಲಿಯ ಮೇಲೆ ಇಟ್ಟು ಅನೇಕ ಜನ ಘಿಸಾಡಿ ಸಮುದಾಯದವರು ಪೂಜೆ ಮಾಡುತ್ತಾರೆ. ಈ ದೇವರನ್ನು ನಾಲ್ಕು ಹೆಸರುಗಳಿಂದ ಗುರುತಿಸಲಾಗುತ್ತದೆ. ೧. ಖಂಡೋಬಾ ೨. ಏಳುಕೋಟಿ ಮಲ್ಹಾರ್ ೩. ಜೆಜೋರಿ ಮಲ್ಹಾರಿ ೪. ಮಾರ್ಥಂಡ ಮಲ್ಹಾರಿಗಳೆಂದು.

೭. ಆಂಜನೇಯ

ಘಿಸಾಡಿ ಸಮುದಾಯವರು ಯಾವ ಊರಿನಲ್ಲಿ ನೆಲೆಸಿರುತ್ತಾರೊ, ಆ ಊರಿನ ಆಂಜನೇಯ ದೇವರಿಗೆ ಭಕ್ತಿಯಿಂದ ನಡೆದುಕೊಳ್ಳುತ್ತಾರೆ. ಈ ದೇವರಿಗೆ ಶನಿವಾರದಂದು ಕಾಯಿ ಕರ್ಪೂರಗಳಿಂದ ಪೂಜೆಯನ್ನು ಮಾಡಿಸುವರು. ಇವರ ಮನೆಗಳಲ್ಲಿ ಹೊಸದಾಗಿ ಮದುವೆಯಾದರೆ ಇಲ್ಲವೆ ಋತುಮತಿಯಾದರೆ ಅಂತಹ ಸಂದರ್ಭದಲ್ಲಿ ಆಂಜನೇಯ ದೇವರ ದರ್ಶನವನ್ನು ಮೊದಲಿಗೆ ಮಾಡಿಸುತ್ತಾರೆ. ಇವರ ಕುಟುಂಬಗಳಲ್ಲಿ ಬಹುತೇಕ ಜನರು ಆಂಜನೇಯ ಅಥವಾ ಅಂಬಾಭವಾನಿ ಮಂದಿರಗಳಲ್ಲಿ ವಿವಾಹ ಕಾರ್ಯಗಳನ್ನಿಟ್ಟುಕೊಳ್ಳುತ್ತಾರೆ.

೮. ಘಿಸಾಡಿ ಬಾಬಾ

ಈ ಸ್ಮಾರಕದ ಮಂದಿರವನ್ನು ಮಹಾರಾಷ್ಟ್ರದ ಸೋಲಾಪುರ ಜಿಲ್ಲೆಯ 'ಮಾರಡಿ' ಎಂಬಲ್ಲಿ ನದಿಯ ದಂಡೆಯ ಮೇಲೆ ಕಟ್ಟಲಾಗಿದೆ. ಈ ದೇವಾಲಯವು ಇವರ ಜನಾಂಗದಲ್ಲಿ ಮಹತ್ಕಾರ್ಯಗಳನ್ನು ಸಾಧಿಸಿದ ಸಾಂಸ್ಕೃತಿಕ ನಾಯಕ, ತ್ಯಾಗಿ, ಪರೋಪಕಾರಿ ಪುರುಷನಾದ ಘಿಸಾಡಿ ಬಾಬಾನ ನೆನಪಿಗಾಗಿ ಕಟ್ಟಿಸಲಾಗಿದೆ ಎಂದು ಹೇಳುತ್ತಾರೆ. ಈ ಪುರುಷನು ಸದಾ ದೇವರ ಪರಮ ಭಕ್ತನಾಗಿದ್ದು, ಒಂದು ದಿನ ಅಂಬಾಭವಾನಿ ದರ್ಶನಕ್ಕಾಗಿ ಹಾಗೂ ಕುರಿಯ 'ಬಲಿ ಹರಕೆ' ತೀರಿಸುವುದಕ್ಕಾಗಿ ಕುಟುಂಬದ ಸಮೇತ ತುಳಜಾಪುರಕ್ಕೆ ಹೋಗುವಾಗ ದಾರಿ ಮಧ್ಯದಲ್ಲಿ ನದಿ ದಾಟುವ ಸಂದರ್ಭ ಬಂದಿತ್ತು. ಆಗ ಒಮ್ಮಿಂದೊಮ್ಮಲೇ ಬಂದ ನದಿಯ ಪ್ರವಾಹಕ್ಕೆ ನೀರಿನಲ್ಲಿ ಕೊಚ್ಚಿಕೊಂಡು ಹೋದನು ಎಂಬ ಪ್ರತೀತಿ ಇದೆ. ಆದುದರಿಂದ ಘಿಸಾಡಿ ಬಾಬಾನ ನೆನಪಿಗಾಗಿ ಅದೇ ನದಿಯ ದಂಡೆಯ ಮೇಲೆ ಆತನ ಹೆಸರು ಅಜರಾಮರವಾಗಿ ಉಳಿಯಲಿ ಎಂದು ಒಂದು ಮಂದಿರವನ್ನು ಕಟ್ಟಿದ್ದಾರೆ. ಇಂದಿನ ಘಿಸಾಡಿ ಸಮುದಾಯಕ್ಕೆ ಅದೊಂದು ಪವಿತ್ರವಾದ ಸ್ಥಳವಾಗಿದ್ದು, ಅಲ್ಲಿ ಅನೇಕ ಹರಕೆಗಳನ್ನು ಹೊತ್ತುಕೊಂಡು ದರ್ಶನವನ್ನು ಮಾಡುವ ಮೂಲಕ ದೇವರ ಕೃಪೆಗೆ ಪಾತ್ರರಾಗುತ್ತಾರೆ.

ಇಸ್ಲಾಂ ದೈವಗಳು

ಸದಾ ಶಾಂತಿ ಸೌಹಾರ್ದತೆಯನ್ನು ಬಯಸುವ ಈ ಸಮುದಾಯದವರು ಸರ್ವಧರ್ಮಗಳ ಸಮಾನ ಭಾವನೆ ಮತ್ತು ದೈವತ್ವಗಳ ಭಕ್ತಿ ಭಾವನೆಯನ್ನು ಹೊಂದಿರುವ ಇವರು ಇಸ್ಲಾಂ ದೇವರುಗಳಿಗೂ ತುಂಬಾ ಶ್ರದ್ಧೆಯಿಂದ ನಡೆದುಕೊಳ್ಳುತ್ತಾರೆ.

ಗುಲ್ಬರ್ಗಾ ಜಿಲ್ಲೆಯಲ್ಲಿನ ಅನೇಕ ಘಿಸಾಡಿ ಸಮುದಾಯದವರು ಬೀದರ್ ಜಿಲ್ಲೆಯ ಗೊಡವಾಡಿ ಇಸ್ಮಾಯಿಲ್ ಖಾದ್ರಿ, ಮಂಗಾಲಿಯ, ಹುಸೇನಭಾಷಾ, ನೀಲೂರಿನ ಮಹಿಬೂಬ್ ಸುಬಾನಿ, ಲಾಡ್ಲಾಪುರದ ಹಾಜಿ ಸರೋವರ, ಗುಲ್ಬರ್ಗಾದ ರಾಹೇಶ್‌ಪೀರ್, ಬಂದೇನವಾಜ, ಸಿದ್ದಿಭಾಷಾ, ದಾವಲ್‌ಮಲ್ಲಿಕ್ ಹೀಗೆ ಹಲವು ದೇವರುಗಳನ್ನು ಶ್ರದ್ಧೆಯಿಂದ ಹರಕೆ, ಕುರಿಬಲಿ ನೀಡಿ ಪೂಜಿಸುವ ಮೂಲಕ ಇಸ್ಲಾಂ ದೈವಗಳಲ್ಲಿ ನಂಬಿಕೆಯನ್ನಿಟ್ಟು ನಡೆದುಕೊಳ್ಳುತ್ತಾರೆ.

ಧಾರ್ಮಿಕ ಜಾತ್ರೆ ಉತ್ಸವಗಳು

ಹಬ್ಬವು ಒಂದೊಂದು ಕುಟುಂಬದವರು ಇಲ್ಲವೆ ಜಾತಿಯವರು ಆಚರಿಸುವ ಆಚರಣೆಯಾದರೆ, ಜಾತ್ರೆ ಉತ್ಸವಗಳು ಹಲವಾರು ಜಾತಿಗಳ, ಧರ್ಮಗಳ ಜನರು ಒಟ್ಟುಗೂಡಿಸಿ ಆಚರಿಸುವ ಸಾಮೂಹಿಕ ಆಚರಣೆಯಾಗಿದೆ. ಜಾತ್ರೆಗೆ ಬಹುದೂರದಿಂದ ಜನ ಬಂದು ಸೇರುವರು. ಜಾತ್ರೆ ನಡೆಯುವಷ್ಟು ದಿನ ಅಲ್ಲಿಗೆ ಬರುವ ಭಕ್ತರಿಗೆ ಸಂತೋಷ ನೀಡುತ್ತದೆ. ಎಲ್ಲರನ್ನು ಒಂದಾಗಿಸುವಂತೆ ಮಾಡಿ ವಿವಿಧತೆಯಲ್ಲಿ ಏಕತೆ ಎಂಬ ನುಡಿಗಟ್ಟಿನ ಅಂಶವಾಗಿ ಪರಿಣಮಿಸುತ್ತದೆ. ಇಂತಹ ಭಾವನೆಗಳು ಜಾತ್ರೆಯ ಅಂತರಾಳದಲ್ಲಿ ಕಂಡುಬರುವುದು ಸಹಜ. ಈ ಜಾತ್ರೆ ಎಲ್ಲ ಸಮುದಾಯಗಳ ಸಾಮೂಹಿಕ ಸಂಭ್ರಮವಾಗಿದ್ದು, ದೇವರಲ್ಲಿ ಭಯ ಭಕ್ತಿ ಹುಟ್ಟಿಕೊಳ್ಳುತ್ತವೆ. ಹೀಗೆಯೇ ಹತ್ತು ಹಲವು ವಿವಿಧ ಸಮುದಾಯಗಳ ಸಂತೋಷದ ಮುಖಗಳಾಗಿ ಹಲವಾರು ನಾಣ್ಣುಡಿಗಳಿವೆ. “ಜಾತ್ರೆಗೆ ಹೋದರೂ ಪಾತ್ರೆ ತರದೆ ಬರಬಾರದು”, “ಜಾತ್ರೆಯೂ ಮುಗಿಯಿತು, ಧೋತ್ರವು ಹರಿಯಿತು”, “ಜಾತ್ರೆಗೆ ಹೋಗೋನು ಜಾಣ, ದಿಬ್ಬಣಕ್ಕೆ ಹೋಗೋನು ಕೋಣ”, “ಜನರಿದ್ದರೆ ಜಾತ್ರೆ ಜನರಿಲ್ಲದಿದ್ದರೆ ಕ್ಷೇತ್ರೆ”, “ಜಂಬ ಮಾಡಿ ಜಾತ್ರೆಗೆ ಹೋದರೆ ಕೂಸಿನ ಕೈಯಲ್ಲಿ ಕಾಸಿನ ಕಡವೆ ಇಲ್ಲ”. ಇತ್ಯಾದಿ ಲೋಕೋಕ್ತಿಗಳು ಜಾತ್ರೆಯ ವ್ಯಾಪ್ತಿ ಮತ್ತು ಮಹತ್ವವನ್ನು ಸಾರುತ್ತವೆ.

ಘಿಸಾಡಿ ಸಮುದಾಯವರು ಅಂಬಾಭವಾನಿ, ಕಾಳಮ್ಮ, ಎಲ್ಲಮ್ಮ, ಭಾಗಮ್ಮ ಜಾತ್ರೆಗಳಿಗೆ ಹೋಗಿ ತಮ್ಮ ಹರಕೆಗಳನ್ನು ತೀರಿಸುತ್ತಾರೆ. ಅಲ್ಲದೆ ತಾವು ನೆಲೆಸಿರುವ ಪರಿಸರದಲ್ಲಿನ ಸುತ್ತಮುತ್ತಲಿನ ಜಾತ್ರೆಗಳಲ್ಲಿ ತಾವು ತಯಾರಿಸಿದ ಕೃಷಿ-ಉಪಕರಣಗಳು, ಗೃಹೋಪಯೋಗಿ ವಸ್ತುಗಳನ್ನು ಮಾರಾಟ ಮಾಡುವುದು. ಹೀಗಾಗಿ ಇವರು ಕೆಲವು ಜಾತ್ರೆಗಳಲ್ಲಿ ದರ್ಶನಗಳನ್ನು ಪಡೆಯುವುದಕ್ಕೆ ಹೋದರೆ, ಇನ್ನು ಕೆಲವು ಜಾತ್ರೆಗಳಿಗೆ ವ್ಯಾಪಾರದ ಉದ್ದೇಶಗಳಿಗಾಗಿ ಹೋಗುವುದು ರೂಢಿಯಲ್ಲಿದೆ.

ಆಧಾರಗಳು

೧. ಬರಗೂರು ರಾಮಚಂದ್ರಪ್ಪ., (ಸಂ) ಉಪಸಂಸ್ಕೃತಿ ಅಧ್ಯಯನ ಮಾಲೆ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೩

೨. ಸರಗಣಾಚಾರಿ ಎಸ್.ಎಸ್., *ಭಾರತೀಯ ಸಮಾಜದ ಅಧ್ಯಯನ* ಜಯಶ್ರೀ ಪ್ರಕಾಶನ, ಬಾಗಲಗೋಟೆ, ೧೯೯೯

3. Herbert Spncer., *"On Social Evolution"*, `midy way reprint the Universtiy of Chicago press and london, 1972

ಅಧ್ಯಾಯ - ೬

ಭಾಷೆ, ಸಾಹಿತ್ಯ ಮತ್ತು ಕಲೆ

೧. ಭಾಷೆ

೨. ಸಾಹಿತ್ಯ

೩. ಕಲೆ

೪. ಕ್ರೀಡೆಗಳು

ಭಾಷೆ, ಸಾಹಿತ್ಯ ಮತ್ತು ಕಲೆ

೧. ಸಮುದಾಯದ ಭಾಷೆ

ಮಾನವನು ಸಂಘಜೀವಿ ಎಂಬುದು ಸರ್ವಸಾಮಾನ್ಯ ಮಾತಾಗಿದೆ. ಸಂಘಜೀವಿಯಾದ ಮಾನವನಿಗೆ ಭಾಷೆ ಸಂಪರ್ಕ ಸಾಧನವಾಗಿ ಕಾರ್ಯ ನಿರ್ವಹಿಸುತ್ತದೆ. ಸಂಘಜೀವಿಯಾದ ಮಾನವನು ಪುರಾತನ ಕಾಲದಲ್ಲಿ ಚಿಕ್ಕ-ಚಿಕ್ಕ ಗಣಗಳನ್ನು ಕಟ್ಟಿಕೊಂಡು ತಮ್ಮ ಗುಂಪಿನವರೊಂದಿಗೆ ವಾಸಿಸುತ್ತಿದ್ದನು. ಅಲ್ಲದೆ ತಮ್ಮದೇ ಆದಂತಹ ಸಂಜ್ಞೆಗಳ ಮೂಲಕ ಭಾಷೆಯನ್ನು ಕಟ್ಟಿಕೊಂಡು ಮಾತನಾಡುವುದನ್ನು ಕಲಿತುಕೊಂಡನು. ಸಮಾಜವು ಬೆಳೆದಂತೆ ಗಣಗಳು ಗ್ರಾಮಗಳಾಗಿ ಪರಿವರ್ತನೆ ಹೊಂದಿದಾಗ, ಅನೇಕ ಭಾಷೆ ಉಪಭಾಷೆಗಳು ಸಾಮಾಜಿಕ ವ್ಯವಸ್ಥೆಯಲ್ಲಿ ಕಂಡುಬರತೊಡಗಿದವು. ನಂತರ ತಮ್ಮದೇ ಆದ ಸ್ವತಂತ್ರ ಭಾಷೆಯಾಗಿ ಪರಿವರ್ತನೆಗೊಂಡು ಸಾಮುದಾಯಿಕ ಬದುಕಿನ ರೀತಿನೀತಿಗಳನ್ನು ಜೀವನ ವಿಧಾನಗಳನ್ನು ತಿಳಿಸುವಲ್ಲಿ ಭಾಷೆಯು ಪ್ರಮುಖ ಪಾತ್ರ ವಹಿಸತೊಡಗಿತು.

ಮನುಷ್ಯನಿಗೆ ಭಾಷೆಯು ಹಸಿವೆ ನೀರಡಿಕೆಗಳಂತೆ ಹುಟ್ಟಿನೊಂದಿಗೆ ಸರಳವಾಗಿ ಬರುವಂಥದಲ್ಲ, ಅದು ರೂಢಿಸಿಕೊಳ್ಳುವ ವಿಶಿಷ್ಟ ಶಕ್ತಿಯನ್ನು ಮನುಷ್ಯ ಪಡೆದುಕೊಂಡಿದ್ದು, ಮಾನವನ ಶಾರೀರಿಕ ಮತ್ತು ಸಾಮಾಜಿಕ ಅಂಶಗಳೊಡನೆ ಹೊಂದಿಕೊಂಡಿದೆ. ಅವನು ನೆಲೆಸಿರುವ ಪರಿಸರ, ಕಲಿಕೆಗಳ ಮೂಲಕ ಭಾಷೆಯನ್ನು ರೂಢಿಸಿಕೊಳ್ಳಲು ಪ್ರಯತ್ನಿಸುತ್ತಾನೆ. ಜೊತೆಗೆ ಭಾಷೆಯ ಬೆಳವಣಿಗೆ ಮತ್ತು ಹುಟ್ಟಿಗೆ ಕಾರಣನಾಗುತ್ತಾನೆ. ಭಾಷೆಯು ವ್ಯಕ್ತಿಯ ವ್ಯಕ್ತಿತ್ವದ ಅಭಿವೃದ್ಧಿ, ವಿಕಾಸ, ಸಂಸ್ಕೃತಿ, ಬೆಳವಣಿಗೆಗೆ ಅವಶ್ಯಕವಾಗಿದೆ. ಭಾಷೆ ಇಲ್ಲದೇ ಮನುಷ್ಯ ಬದುಕಬಲ್ಲನಾದರೂ ಅವನ ಬದುಕು ದುರ್ಬಲವೆನಿಸುತ್ತದೆ. ಆದ್ದರಿಂದ ಸಮಾಜ ಜೀವಿಯಾದ ಮಾನವನಿಗೆ ಭಾಷೆಯು ಅನಿವಾರ್ಯವಾದ ವ್ಯಾವಹಾರಿಕ ಸಂಪರ್ಕ ಸಾಧನವಾಗಿ ಬೆಳೆದು ಬಂದಿದ್ದು, ಇಂದು ಜಗತ್ತಿನಾದ್ಯಂತ ಸುಮಾರು ಮೂರು ಸಾವಿರಕ್ಕೂ ಹೆಚ್ಚಿನ ಭಾಷೆಗಳಿರುವುದು ಬೆಳಕಿಗೆ ಬಂದಿದೆ. ಹೀಗೆ ಬೆಳಕಿಗೆ ಬಂದಿರುವ ಹಲವಾರು ಬಾಷೆಗಳಿಗೆ 'ಲಿಪಿ' ರೂಪಿಸುವ ವ್ಯವಸ್ಥೆ ಸಾಧ್ಯವಾಗಿಲ್ಲ. 'ಲಿಪಿ' ಇಲ್ಲದ ಅನೇಕ ಬುಡಕಟ್ಟಿನ ಭಾಷೆಗಳು ಆಯಾ ಭಾಷಿಕ ಜನರೊಡನೆ ಸ್ವತಂತ್ರವಾಗಿ ಬಳಕೆಯಲ್ಲಿದ್ದು ಶತಮಾನ ದುದ್ದಕ್ಕೂ ಬೆಳೆದುಕೊಂಡು ಬಂದಿವೆ.

ಪ್ರಸ್ತುತ ಸಂದರ್ಭದಲ್ಲಿ ಘಿಸಾಡಿ ಜನಸಮುದಾಯವು ಕೂಡಾ ತನ್ನ ಅಂತರಾಳದಲ್ಲಿ

ತನ್ನದೆಯಾದಂತಹ ಮಾತೃಭಾಷೆಯನ್ನು ಹೊಂದಿದ್ದು ತಾವು ಮಾತನಾಡುವ ಭಾಷೆಗೆ "ಫಿಸಾಡಿ ಭಾಷೆ" ಎಂದು ಹೇಳುತ್ತಾರೆ. ಫಿಸಾಡಿ ಭಾಷೆಯನ್ನು ಕುರಿತು ವಿದ್ವಾಂಸರು ತಮ್ಮದೆಯಾದ ಭಿನ್ನಾಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ.

೧. ಸಿಂಗ್ ಕೆ.ಎಸ್. ಅವರು "They speak a dialect of marwari at home" (1998:189) ಈ ಮಾರವಾರಿ ಭಾಷೆಯು ರಾಜಸ್ಥಾನದ ಒಂದು ಉಪ ಭಾಷೆಯಾಗಿದ್ದು, ಈ ಭಾಷೆಯಲ್ಲಿನ ಶಬ್ದ ಉಚ್ಛಾರಮೆಗಳು ಫಿಸಾಡಿ ಭಾಷೆಯಲ್ಲಿ ಕಂಡುಬರುತ್ತವೆ ಎಂದು ಇವರು ಉಲ್ಲೇಖಿಸುತ್ತಾರೆ.

೨. ಶೇರಿಂಗ್ ಎಂ.ಎ. ಅವರು "They speak of themselves as Rajpoots" (1974:339) ಎಂದು ದಾಖಲಿಸಿರುವುದನ್ನು ನೋಡಿದರೆ ಈ ಭಾಷೆ ರಾಜಸ್ಥಾನ ಭಾಗದ ಉಪ ಭಾಷೆಗಳಿಗೆ ಸಂಬಂಧಿಸಿದೆ ಎಂಬುದು ಗೋಚರಿಸುತ್ತದೆ.

೩. ಸೈಯದ್ ಸಿರಾಜ್ ಉಲ್ ಹಸನ್ ಅವರು "Their home tongue is Gujarathi. But they speak marathi and Hindustani" (1989:201) ಈ ಸಮುದಾಯವು ಮಹಾರಾಷ್ಟ್ರ ಕಡೆಯಿಂದ ಆಂಧ್ರಪ್ರದೇಶಕ್ಕೆ ವಲಸೆ ಬಂದಾಗ ಮರಾಠಿ ಹಾಗೂ ಹಿಂದಿ ಭಾಷೆಗಳನ್ನು ಆಂಧ್ರದ ಗಡಿಭಾಗದಲ್ಲಿ ವ್ಯಾವಹಾರಿಕವಾಗಿ ಬಳಸಿರಬಹುದು.

೪. ಆರ್.ವಿ. ಏಂಟ್ಸಿಹನ್‌ರವರು "Their home tongue which is a corrupt Gujarati" (1990:3) ಎಂದು. ಈ ಭಾಷೆಯು ಗುಜರಾತಿ ಭಾಷೆಗೆ ಸಂಬಂಧಿಸಿರಬಹುದು ಎಂಬ ಅಭಿಪ್ರಾಯ ಇವರು ವ್ಯಕ್ತಪಡಿಸುತ್ತಾರೆ.

೫. ಜಿ.ಎ. ಗ್ರಿಯರ್‌ಸನ್‌ರವರು "An examination of the specimens will show that the language closely agrees with ordinary colloquial Gujarati" (GGA:1968:453) ಎಂದು ಹೇಳುವುದರೊಂದಿಗೆ ಅನೇಕ ಶಬ್ದ ಸಂಗ್ರಹಗಳನ್ನು ಕೂಡಾ ಮಾಡಿದ್ದಾರೆ.

ಈ ಮೇಲಿನ ಇಬ್ಬರ ಮತ್ತು ಕೆಳಗಿನ ಮೂರು ಜನ ವಿದ್ವಾಂಸರ ಅಭಿಪ್ರಾಯಗಳನ್ನು ನೋಡಿದಾಗ ಈ ಭಾಷೆ ರಾಜಸ್ತಾನ ಮತ್ತು ಗುಜರಾತ್ ಪ್ರಾಂತ್ಯಗಳ ನಡುವಿನ ಗಡಿಭಾಗದಲ್ಲಿ ಜನ್ಮ ತಾಳಿರಬಹುದಾದ ಸ್ವತಂತ್ರ ಭಾಷೆಯಾಗಿದೆ ಎಂಬುದು ಸ್ಪಷ್ಟವಾಗುತ್ತದೆ. ಇವರ ಈ ಭಾಷೆಗೆ 'ಲಿಪಿ' ಇಲ್ಲದಿರುವುದು ಹಾಗೂ ತನ್ನದೆಯಾದಂತಹ ಸ್ವತಂತ್ರ ಇತಿಹಾಸವು ಇಲ್ಲದಾಗಿದೆ. ಆಯಾ ಪ್ರಾಂತೀಯ ಭಾಷೆಗಳ ಪ್ರಭಾವಕ್ಕೆ ಒಳಗಾಗಿ ತನ್ನ ವಿಶಿಷ್ಟ ಭಾಷಾ ಸಂಪತ್ತನ್ನು ಉಳಿಸಿಕೊಂಡಿದ್ದು ಇದೊಂದು ಮಿಶ್ರಭಾಷೆಯಂತೆ ಕಂಡುಬರುತ್ತದೆ. ಅಲೆಮಾರಿಗಳಾದ ಇವರು ರಾಜಸ್ಥಾನ ಮತ್ತು ಗುಜರಾತ ಗಡಿಭಾಗಗಳ ಮುಖಾಂತರ ದೇಶದ ವಿವಿಧ ಭಾಗಗಳಲ್ಲಿ ಚದುರಿಕೊಂಡು ವಾಸಿಸುವ

ರಾಗಿರುವುದರಿಂದ ಇವರ ಭಾಷೆಯು ಯಾವ ಭಾಷೆಯ ಪ್ರಭಾವಕ್ಕೆ ಒಳಗಾಗಿದೆ ಎಂಬುದನ್ನು ನಿಖರವಾಗಿ ಗುರುತಿಸುವುದು ಕಷ್ಟಕರವಾಗಿದೆ.

ಒಟ್ಟಿನಲ್ಲಿ ಇವರ ಭಾಷೆಯು ಇಂಡೋ ಆರ್ಯನ್ ಭಾಷಾ ವರ್ಗಕ್ಕೆ ಸೇರಿದುದಾಗಿದ್ದು, ಇವರ ಭಾಷೆಯ ಮೇಲೆ ಉತ್ತರ ಭಾರತದ ಭಾಷೆಗಳ ಪ್ರಭಾವವಾಗಿರುವುದು ಕಂಡುಬರುತ್ತದೆ. ಆರ್ಯ ಪರಿವಾರದ ಹಿಂದಿ ಭಾಷೆಯ ಉಪಭಾಷೆಗಳಾದ "ಮಾರವಾಡಿ" ಕೈರವಾಡಿ, ಕಾತ್ಯವಾಡಿ(ಜಾಲವಾಡಿ) ಲಮಾಣಿ, ಚಾರೋಟರಿ, ಪಟಾಣಿ, ಶೃತಿ, ಜಯಪುರಿ, ಮಾಲವಿ ಭಾಷೆಗಳೊಂದಿಗೆ ಈ ಭಾಷೆಯು ನಿಕಟ ಸಂಬಂಧ ಹೊಂದಿರುವುದು ಕಂಡುಬರುತ್ತದೆ. ಇವುಗಳ ಜೊತೆಗೆ ಮುಖ್ಯವಾಗಿ ಗುಜರಾತಿ, ಮರಾಠಿ, ಪಾರ್ಸಿ, ಅರಬ್ಬೀ, ಕನ್ನಡ, ತೆಲುಗು ಮುಂತಾದ ಭಾಷೆಗಳ ಅನೇಕ ರೂಪಗಳು ಇವರ ಭಾಷೆಯಲ್ಲಿ ಕಂಡುಬರುತ್ತವೆ.

ಈ ಘಿಸಾಡಿ ಸಮುದಾಯದ ಭಾಷೆ, ಧ್ವನಿತತ್ವ, ಉಚ್ಚಾರಣೆ, ಹಾವ-ಭಾವಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ ಕರ್ನಾಟಕದಲ್ಲಿ ನೆಲೆಸಿರುವ ಲಮಾಣಿ, ಹರಿಣ ಶಿಕಾರಿ, ರಜಪೂತ ಮತ್ತು ಘಿಸಾಡಿ ಜನರಲ್ಲಿ ಅನೇಕ ರೀತಿಯ ಭಿನ್ನತೆಗಳು ಮತ್ತು ಸಾಮ್ಯತೆಗಳು ಕಂಡುಬರುತ್ತವೆ. ಘಿಸಾಡಿ ಭಾಷೆಯು ಎಷ್ಟೇ ಪ್ರಾದೇಶಿಕ ಭಾಷೆಗಳ ಪ್ರಭಾವಕ್ಕೆ ಒಳಗಾಗಿದ್ದರೂ ಅದು ತನ್ನ ಸ್ವತಂತ್ರವಾದ ಅಸ್ತಿತ್ವವನ್ನು ಕಳೆದುಕೊಂಡಿಲ್ಲ. ಭಾರತದ ಯಾವುದೇ ಮೂಲೆಯಲ್ಲಿ ವಾಸಿಸುವ ಘಿಸಾಡಿ ಜನರು ಪರಸ್ಪರ ಮಾತನಾಡುವಾಗ ಸುಲಭವಾಗಿ ಅರ್ಥೈಸಿಕೊಳ್ಳಬಲ್ಲರು. ಒಟ್ಟಿನಲ್ಲಿ ಜನ ಸಮುದಾಯವನ್ನು ಬಂಧಿಸುವ ಏಕಮೇವ ಸೂತ್ರವೆಂದರೆ ಇವರಾಡುವ ಭಾಷೆಯಾಗಿದೆ.

೧.೧. ವಿವಿಧ ವಲಯಗಳಲ್ಲಿ ಭಾಷೆ ಬಳಕೆ

ಘಿಸಾಡಿ ಜನ ಸಮುದಾಯವು ಅಲೆಮಾರಿ ಕಮ್ಮಾರಿಕೆ ವೃತ್ತಿ ಅನುಸರಿಸುತ್ತಿರುವುದರಿಂದ ತಮ್ಮ ಮಾತೃಭಾಷೆಯ ಜೊತೆಗೆ ವಿವಿಧ ವಲಯಗಳಲ್ಲಿ ಬಳಕೆಯಲ್ಲಿರುವ ಪ್ರಾದೇಶಿಕ ಭಾಷೆಗಳನ್ನು ಕೂಡಾ ಮಾತನಾಡುವುದನ್ನು ಮೈಗೂಡಿಸಿಕೊಂಡಿದ್ದಾರೆ.

೧. ಘಿಸಾಡಿ ಜನರು ತಮ್ಮ ಕುಟುಂಬಗಳಲ್ಲಿ ತಮ್ಮ ಮಾತೃಭಾಷೆಯಲ್ಲಿಯೇ ಮಾತನಾಡುತ್ತಾರೆ ಹುಟ್ಟಿದ ಮಗುವಿಗೆ ಭಾಷೆಯ ಕಲಿಕೆಯ ಹಂತದಲ್ಲಿ ತಮ್ಮ ಮಾತೃಭಾಷೆಯನ್ನು ಕಲಿಸಿಕೊಡುತ್ತಾರೆ. ಇವರ ಕುಟುಂಬಗಳಲ್ಲಿ ಧಾರ್ಮಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು, ನಿರ್ಣಯಗಳು, ಕುಲಪಂಚಾಯಿತಿಗಳು, ನಡೆದಾಗ ತಮ್ಮ ಸಮುದಾಯದವರೆಲ್ಲರೂ ಸೇರಿದಾಗ, ತಮ್ಮ ಮಾತೃಭಾಷೆಯನ್ನು ಬಳಸುತ್ತಾರೆ.

೨. ಈ ಸಮುದಾಯದ ಜನರು ತಮ್ಮ ಮಾತೃಭಾಷೆಯ ಜೊತೆಗೆ ತಾವು ನೆಲೆಸಿರುವ ಪ್ರದೇಶಗಳ ಪ್ರಾದೇಶಿಕ ಭಾಷೆಗಳಲ್ಲಿ ಕೂಡಾ ಮಾತನಾಡುತ್ತಾರೆ. ಅಂದರೆ, ಕರ್ನಾಟಕದಲ್ಲಿ ಕನ್ನಡ, ಆಂಧ್ರಪ್ರದೇಶದ ಗಡಿ ಭಾಗಗಳಲ್ಲಿರುವವರು ತೆಲುಗು, ಮಹಾರಾಷ್ಟ್ರದ ಗಡಿ ಭಾಗದಲ್ಲಿರುವವರು

ಮರಾಠಿ ಭಾಷೆಗಳಲ್ಲಿ ಮಾತನಾಡುತ್ತಾರೆ. ಅಲ್ಲದೆ ಬಹುದಿನಗಳಿಂದ ಆ ಪ್ರದೇಶಗಳಲ್ಲಿ ಅಲೆದಾಡುತ್ತಾ ಆಯಾ ಪ್ರಾದೇಶಿಕ ಭಾಷೆಗಳು ಇವರ ದ್ವಿತೀಯ ಮಾತೃ ಭಾಷೆಗಳಾಗಿವೆ. ಇತ್ತೀಚಿನ ದಿನಗಳಲ್ಲಿ ಇವರು ಕರ್ನಾಟಕ, ಆಂಧ್ರಪ್ರದೇಶ, ಮಹಾರಾಷ್ಟ್ರದಲ್ಲಿ ನೆಲೆಸಿದವರು ಆಯಾ ಭಾಷೆಗಳಲ್ಲಿ ಓದುವುದು, ಬರೆಯುವುದರೊಂದಿಗೆ ಆಯಾ ಪ್ರದೇಶದ ಶಾಲೆಗಳಲ್ಲಿ ಶಿಕ್ಷಣ ಪಡೆಯುವ ಸಂಖ್ಯೆಯೂ ಕಂಡುಬರುತ್ತದೆ.

೩. ಘಿಸಾಡಿ ಸಮುದಾಯವು ಅಲೆಮಾರಿ ಕಮ್ಮಾರಿಕೆ ವೃತ್ತಿ ಅನುಸರಿಸುತ್ತಿರುವುದರಿಂದ ಇವರು ವ್ಯಾವಹಾರಿಕವಾಗಿ ಜನರು ಬಳಸುವಂತಹ ವಿವಿಧ ಭಾಷೆಗಳನ್ನು ಮಾತನಾಡುತ್ತಾರೆ. ಹಿಂದಿ ಭಾಷೆಯು ವ್ಯಾವಹಾರಿಕವಾಗಿ ವಿವಿಧ ವಲಯಗಳಲ್ಲಿ ಹೆಚ್ಚಾಗಿ ಬಳಕೆಯಾಗುವುದರಿಂದ, ಇವರು ಹಿಂದಿ ಭಾಷೆಯನ್ನೂ ಚೆನ್ನಾಗಿ ಮಾತನಾಡುತ್ತಾರೆ. ಆದರೆ ಹೆಂಗಸರು ಬಹುಸಂಖ್ಯಾತರು ಮಾತನಾಡುವ ಭಾಷೆಗಳನ್ನು ಕಲಿತುಕೊಂಡಿದ್ದು, ಬಹುತೇಕ ಘಿಸಾಡಿ ಹೆಣ್ಣು ಮಕ್ಕಳಿಗೆ ಹಿಂದಿ ಭಾಷೆ ಮಾತಾನಾಡಲು ಬರುತ್ತದೆ. ಚಿಕ್ಕ-ಪುಟ್ಟ ಮಕ್ಕಳು ತಮ್ಮ ಮಾತೃಭಾಷೆಗಳನ್ನೇ ಮಾತನಾಡುತ್ತಾರೆ. ಸುಮಾರು ಹತ್ತು ವರ್ಷಗಳಿಗಿಂತ ಮೇಲ್ಪಟ್ಟ ಮಕ್ಕಳು ಆಯಾ ಪ್ರಾದೇಶಿಕ ಭಾಷೆ ಮತ್ತು ಹಿಂದಿ ಭಾಷೆಯನ್ನು ತಿಳಿದುಕೊಳ್ಳುವ ಮತ್ತು ಮಾತನಾಡುವ ಹಂಬಲ ಮತ್ತು ಕುತೂಹಲ ಹೊಂದಿದ್ದಾರೆ. ಘಿಸಾಡಿ ಭಾಷೆಯ ಕೆಲವು ಶಬ್ದಗಳ ಪರಿಚಯವನ್ನು ಈ ಕೆಳಗಿನಂತೆ ನೀಡಲಾಗಿದೆ.

ಅಲಂಕಾರಗಳ ಹೆಸರು

ಕನ್ನಡ ಪದ	ಘಿಸಾಡಿ ಪದ	ಕನ್ನಡ ಪದ	ಘಿಸಾಡಿ ಪದ
ಅರಿಶಿಣ	ಹಳದ್	ಉಂಗುರು	ಅಂಗಟೀ
ಕರಿಮಣಿ	ಪೋತ್	ಕಾಡಿಗೆ	ಕಾಜಲ್
ಕುಂಕುಮ	ಕುಕ್ಕೂ	ಗಂಧ	ಗಂಧ್
ಗೆಜ್ಜೆ	ಘುಂಗುರು	ತುರುಬು	ಬುಚಡೊ, ಚೊಂಡೋ
ನತು	ನತ್ತ	ಬಳೆ	ಬಾಂಗಡಿ
ಬೈತಲೆ	ಬಾಂಗ್	ಸರಿಗೆ	ಪದರ್
ಹಣಿಗೆ	ಕಾಂಗ್ ಸೀ	ಹೂವು	ಪೂಲ್

ಕಾಯಿಪಲ್ಲೆ ಹೆಸರು

ಗೆಣಸು	ರತ್ತಾಳು	ಆಲುಗಡ್ಡೆ	ಆಲು, (ಬಟಾಟೆ)
ಬೆಂಡಿಕಾಯಿ	ಬೆಂಡಿಯೋ	ಶಾವಿಪಲ್ಯ	ಅಳುನಾ ಪಾನ್
ಹಗಲಕಾಯಿ	ಖಾರಲು	ಮೆಂತ್ಯೆಪಲ್ಲೆ	ಮೆಂತಿನಿ ಭಾಜಿ
ಕುಂಬಳಕಾಯಿ	ಬೋಪುಳೋ	ಬದನೆಕಾಯಿ	ವಾಂಗು

ಕನ್ನಡ ಪದ	ಘಿಸಾಡಿ ಪದ	ಕನ್ನಡ ಪದ	ಘಿಸಾಡಿ ಪದ
ಬೆಳ್ಳುಳ್ಳಿ	ಲಸೂನ್	ಸವತೆಕಾಯಿ	ಕಾಕಡಿ
ಮೆಣಸಿನಕಾಯಿ	ಮಿರ್ಚಿ	ಹೀರೆಕಾಯಿ	ದೊಡ ಕಾ
ಉಳ್ಳಾಗಡ್ಡಿ	ಕಾಂದೋ	ಗಜ್ಜರಿ	ಗಾಜರ್

ಹಣ್ಣುಗಳ ಹೆಸರು

ಅಂಜೂರ	ಅಂಜೀರ್	ಮಾವಿನಹಣ್ಣು	ಅಂಬ್ಯೋ
ಕಲ್ಲಂಗಡಿ	ಕಲ್ಲಂಗಡಾ	ಮೂಸಂಬಿ	ಮೋಸಂಬಿ
ದಾಳಿಂಬೆ	ಅನಾರ್	ದ್ರಾಕ್ಷಿ	ಅಂಗುರ್
ಪೇರಲಹಣ್ಣು	ಪೇರು	ಲಿಂಬೆಹಣ್ಣು	ಲಿಂಬು
ಬಾರಿಹಣ್ಣು	ಬೋರ್	ಸೀತಾಫಲ	ಸೀತಾಫಲ್
ಹತ್ತಿಹಣ್ಣು	ಉಂಬ್ರಾ	ಹುಣಿಸೆಹಣ್ಣು	ಅಮ್ಲಿ
ನೀಲದಹಣ್ಣು	ಜಾಂಬ್ಯಾ	ತೆಂಗಿನಕಾಯಿ	ನಾರಲ್
ಬಾಳೆಹಣ್ಣು	ಕೇಳಾ		

ಉದ್ಯೋಗಸ್ಥರ ಹೆಸರು

ಅಂಗಡಿಕಾರ	ದುಕಾನದಾರ್	ಅಕ್ಕಸಾಲಿಗ	ಸೋನಾರ್
ಅಗಸ	ಧೋಬಿ	ಉಪ್ಪಾರ	ಗೌಂಡಿ
ಒಕ್ಕಲಿಗ	ಕುಣಬಿ	ಕಂಚಗಾರ	ವತ್ತಾರ್
ಕಟಕ	ಕಸಾಯಿ	ಕಮ್ಮಾರ್	ಲೋಹಾರ, ಘಿಸಾಡಿ
ಕುಂಬಾರ	ಕುಂಬಾರ್	ಕೂಲಿಕಾರ	ಮಜುರದಾರ್
ಗವಳಿಗ	ಗವಾಳಿ	ಜಾಡರವ	ಹಟ್ಟಿಗಾರ್
ಚಿತ್ರಗಾರ	ಬೋಲಾವ್	ಬಳೆಗಾರ	ಕಸಾರೇ
ಬಡಿಗ	ಸುತ್ತಾರ್	ಮೀನುಗಾರ	ಬ್ಯೂಹಿ
ಮೇದಾರ	ಬುರಡಿ	ಹೂಗಾರ	ಪೂಲಾರೆ
ಶಿಂಪಿಗ	ಸಿಪ್ಪಿ, ದರ್ಜಿ	ಮೋಸಗಾರ	ದೋಕೆಬಾಜ್

ರೋಗಗಳ ಹೆಸರು

ಕೆಮ್ಮು	ಖೋಖ್ಲೋ	ಕಜ್ಜಿ	ಖಜನಿ, ಗಜಕರ್ಣ
ಕಫ	ಪಿತ್	ಜಂತು	ಜತ್
ದಣಿವು	ತಾಪ್	ಪಿತ್ತ	ಪಿತ್
ಬೆವರು	ಘಾಮ್	ಮಹಾಮಾರಿ	ಲೋಟ್ಟು, ಬೇಮಾರಿ

ಕನ್ನಡ ಪದ	ಫಿಸಾಡಿ ಪದ	ಕನ್ನಡ ಪದ	ಫಿಸಾಡಿ ಪದ
ಕಣ್ಣುಬೇನೆ	ದೋಳೋ ದುಖಾರೇಸೋ	ಕುರು	ಫೋಡೋ
ಜ್ವರ	ತಾಪ್	ನೆಗಡಿ	ಸರ್ದಿ
ಬಿಕ್ಕು	ಕಸಕ್ಯೊ, ಗುಚ್‌ಕೆ	ಶಕೆ	ಗರಮ್
ಹುಚ್ಚ	ಏಡೋ		

ದಿಕ್ಕುಗಳ ಹೆಸರು

ಪೂರ್ವ	ಪೂರ್ಲ್	ನೈರುತ್ಯ	ನೈರುತ್
ಪಶ್ಚಿಮ	ಪಶ್ಚಿಮ್	ವಾಯುವ್ಯ	ವಾಯ್ಯು
ಉತ್ತರ	ಉತ್ತರ್	ಆಗ್ನೇಯ	ಆಗ್ನೋಯ
ದಕ್ಷಿಣ	ದಕ್ಷಿಣ್	ಈಶಾನ್ಯ	ಈಶ್ಯಾನ್

ಸೃಷ್ಟಿ ಹೆಸರುಗಳು

ಆಕಾಶ	ಆಬಾಳ್	ಜಗತ್ತು	ದೇಶ
ಕತ್ತಲೆ	ಅಂದಾರೋ	ದಿಕ್ಕು	ದಿಶಾ
ಚಳಿ	ಥಂಡ್	ನಕ್ಷತ್ರ	ಚನ್ನಿ
ಜೀವ	ಜೀವ್	ಬಿಸಿಲು	ತಡಕೋ
ನರಕ	ನರಕ್	ಬೆಳದಿಂಗಳು	ಉಜ್ಜಾಲೋ
ನೀರು	ಪಾನಿ	ಮನುಷ್ಯ	ಮನುಷ್ಯ
ಬೆಳಕು	ಉಜಾಲ	ಮಿಂಚು	ಹೀಜ್
ಬೆಂಕಿ	ಆಗ್	ರಾತ್ರಿ	ರಾತ್
ಮಳೆ	ಪಾನಿಪೌಸಾಳೋ	ಸ್ವರ್ಗ	ಸ್ವರ್ಗ
ದೇವರು	ಬಗವಾನ್	ಹಗಲು	ದಿವಸ್
ಚಂದ್ರ	ಚಂದ್ರಮ್	ಸೂಕ್ಷ್ಮ	ಬಾರಿಕ
ಮೋಕ್ಷ	ವರದಾನ್	ಶಕೆ	ಗರಮ
ನಿರ್ವಂಶ	ನಾಶ್	ಸೂರ್ಯ	ಸೂರಿಜ್
ಜ್ಯೋತಿ	ದಿವೋ	ಹುಟ್ಟು	ಪೈದಾ
ದೈವ	ನಸೀಬಾ	ಸಾವು	ಮರಣ್

ಅವಯುವದ ಹೆಸರುಗಳು

ಅಂಗೈ	ಹಾತೆಲಿ	ಜೊಲ್ಲು	ಜೋಳು
ಎದೆ	ಛಾತಿ	ತುಟಿ	ಹೋಟ್

ಕನ್ನಡ ಪದ	ಘಿಸಾಡಿ ಪದ	ಕನ್ನಡ ಪದ	ಘಿಸಾಡಿ ಪದ
ಕಣ್ಣು	ಡೋಳೊ	ದವಡೆ ಹಲ್ಲು	ದಾಡ್‌ದಾತ್
ಕಾಲು	ಘಗ್	ನೆತ್ತಿ	ಠಾಳು
ಕೀಲು	ಗುಡುಗೋ	ಬಾಯಿ	ಮೂಂಡು
ಕೈ	ಹಾತ್	ಬೆರಳು	ಬೋಟ್ ಕಾ
ಕೋಡು	ಸಿಂಗ್	ಮೆದಳು	ಬೇಜೋ
ಗಡ್ಡ	ದಾಡಿ	ಮುಂಗೈ	ಕೋಪರ್
ಮೂತ್ರ	ಮುತ್ತರ್	ಕೊರಳು	ಗಳೋ
ರಕ್ತ	ಲುಹೀ	ಗಂಟಲು	ನಲ್‌ಡೋ
ಸಿಂಬಳ	ಸೇಂಬುಡ್	ಗಲ್ಲ	ಖಲ್ಲಾ
ಉಗುರು	ನಕ್	ತಲೆ	ಮಾತು
ಎಲುಬು	ಹಡಕಾ	ತೊಗಲು	ಚಾಮಡ್
ಕರುಳು	ಅತ್ತಡಾ	ನರ	ನಸ್
ಕಿವಿ	ಕಾನ್	ಬಾಲ	ಸೇಪೂಟ್
ಕೂದಲು	ಕೇಸೋ	ಬೆನ್ನು	ಪೀಠೊ
ಬೆವರು	ಫಾಮ್	ಹಲ್ಲು	ದಾತ್
ಮೀಸೆ	ಮೂಛಾ	ಹೆಜ್ಜೆ	ಪೌವಲ್, ಪಂಜಾ
ಮೂಗು	ನಾಕ್	ಹುಬ್ಬು	ಪಾಪನೇ
ಮೊಲೆ	ದಾಯೋ	ಹೊಟ್ಟೆ	ಪೇಠ್
ರಟ್ಟೆ	ರಟ್ಟಾ	ಹಣೆ	ಖಪಾಳ್

ಕಾಳಿನ ಹೆಸರು

ಅಕ್ಕಿ	ಚೋಕಾ	ತೊಗರಿ	ತೋರ್
ಎಳ್ಳು	ತಿಳ್	ಬೇಳೆ	ದಾಳ್
ಜೋಳ	ಜವಾರಿ	ಸಜ್ಜೆ	ಬಾಜರೀ
ನವಣೆ	ರಾಳದಾ, ಚೋಕಾ	ಮೆಂತ್ಯ	ಮೇಥಿ
ಭತ್ತ	ದಾನ್	ಉದ್ದು	ಉಡಿದ್
ಕುಸುಬಿ	ಕುಸಂಬೊ	ಗೋದಿ	ಗ್ವ್

ಕಿರಾಣಿ ದಿನಸಿ ಹೆಸರುಗಳು

ಅರಿಶಿಣ	ಹಳದ್	ಇಂಗು	ಇಂಗ್
ಕೊಬ್ಬರಿ	ಕೋಬ್ರೂ	ಜೀರಿಗೆ	ಜೀರೂ

ಕನ್ನಡ ಪದ	ಘಿಸಾಡಿ ಪದ	ಕನ್ನಡ ಪದ	ಘಿಸಾಡಿ ಪದ
ಯಾಲಕ್ಕಿ	ಇಲಾಚಿ	ಅವಲಕ್ಕಿ	ಪವ್ಹೋ
ಉತ್ತತ್ತಿ	ಖಾರಿಕ್	ಮಂಡಳ	ಚೂರುಮೂರಾ
ಮೆಣಸು	ಮಿಠಿಯೋ, ಕಾಳಿಮಿರಿ	ಸಕ್ಕರೆ	ಸಾಕ್ಕಾರ್

ಗೃಹೋಪಯೋಗಿ ಹೆಸರುಗಳು

ಅಡಿಗೆ	ಸೈಪಾಕಾ	ಅಂತಸ್ತು	ಮಹಡಿ
ಊಟ	ಜಮಾನು	ಕಟ್ಟಿಗೆ	ಲಾಕಡು
ಒರಳು	ಉಕ್ಕಳ್	ಊದುಗೊಳವಿ	ಫೋಕಣಿ
ಕಸ	ಖಚರೋ	ಒನಕೆ	ಮುಸಳ್
ನೆಲ	ಜಮೀನ್	ದೀವಿಗೆ	ದೀವ್ಹೊ
ಬೂದಿ	ರಾಖ್	ಬುಟ್ಟಿ	ಟೋಪುಲೋ
ಮೊರ	ಸೂಪುಡು	ಹೊರಸು	ಖ್ವಾಟಲೋ
ಅಂಗಳ	ಅಂಗಾನ	ತೊಟ್ಟಿಲು	ಪಾಳನೋ
ಕಂಬ	ಕಂಬೋ	ಪಾವಟಿಗೆ	ಸೀಡಿ
ಚಿಲಕ	ಕೊಂಡೊ	ಮೂಲೆ	ಮೂಲೊ
ಬಚ್ಚಲು	ನ್ಹಾನೀ	ಹೊಸ್ತಿಲು	ಉಮುರೋ
ಹಂಚು	ತವ್ಹೋ	ಬೀಸುವಕಲ್ಲು	ಘುರ್ ಟೀ

ಊಟದ ಹೆಸರುಗಳು

ಅನ್ನ	ಬಾತ್, ದಾನ್	ಉಂಡೆ	ಲಡ್ಡು
ಉಪ್ಪು	ಮೀಟ್, ಲೂನ್	ಕಡಬು	ಉಂಡಾ
ತುಪ್ಪ	ಘೀ	ಪಲ್ಲೆ	ಭಾಜಿ
ರೋಟಿ	ಭಾಕರ್	ಹುಗ್ಗಿ	ಖೀರ್
ಸಾರು	ದಾಳ್	ಸಂಡಿಗೆ	ಖುರಡಿ
ಹೋಳಿಗೆ	ಪೋಳಿ, ತೇಲ್‌ಚಿ	ಹಪ್ಪಳ	ಪಾಪಡ
ಹಾಲು	ದೂದು	ಪದಾರ್ಥ	ಸಾಮಾನ್

ಪಾತ್ರೆಯ ಹೆಸರುಗಳು

ಕೊಡ	ಘಡೋ	ಪಾತ್ರೆ	ಭಾಸನ್
ಸವಟು	ಪಳಿ	ತಂಬಿಗೆ	ತಾಂಬಿಯೋ
ಮಗಿ	ವಾಟಕೋ	ಹರಿವೆ	ಡೇರ್ಹೋ

ಕನ್ನಡ ಪದ	ಛಿಸಾಡಿ ಪದ	ಕನ್ನಡ ಪದ	ಛಿಸಾಡಿ ಪದ
ಬಣ್ಣದ ಹೆಸರುಗಳು			
ಕರಿ	ಕಾಳು	ಹಸಿರು	ಹಿರುವು
ಕೆಂಪು	ಲಾಲ್	ಬಿಳಿ	ಪಾಂಡ್ರೂ
ನೀಲಿ	ನೀಳು	ಹಳದಿ	ಪಿಳೂ
ಗಿಡದ ಹೆಸರುಗಳು			
ಆಲದ ಮರ	ಪಿಪಳ್ನ್ನಃಜಾಡ್	ತೆಂಗಿನಮರ	ನಾರೇಳಾಜಾಡ್
ಬೇವಿನಮರ	ಲೀಮ್ನಾ ಜಾಡ್	ಹುಣಸೆ ಮರ	ಅಮಲ್ಹಿ, ಜಾಡ್
ಜಾಲಿಮರ	ಬಾಬಳ್ನೊಜಾಡ್	ಬೀಜ	ಬಿಯೋ
ಬೇರು	ಜಡ್	ಎಲೆ	ಪತ್ತ್
ಧಾತುಗಳ ಹೆಸರುಗಳು			
ಉಕ್ಕು	ಸಾರ್	ಬಂಗಾರ	ಸೋನಾ
ಕಬ್ಬಿಣ	ಲೋಡಾ	ವಜ್ರ	ಹಿರೋ
ತಾಮ್ರ	ತಾಂಬೋ	ಹಿತ್ತಾಳೆ	ಹಿತ್ತಳ್
ಗಿಲಾಟಿ	ಜರ್ಮನ್	ಕಂಚು	ಖಾಸೋ
ನೀರಿಗೆ ಸಂಬಂಧಿಸಿದ ಹೆಸರುಗಳು			
ಕೆರೆ	ತಳೋ	ಕಾಲುವೆ	ನಾಲೀ
ನದಿ	ನದ್	ಬಾವಿ	ಹೀರೀ
ಕಾಲದ ಹೆಸರುಗಳು			
ಚಳಿಗಾಲ	ಥಂಡ್‌ಖಾಳೋ	ಮಳೆಗಾಲ	ಪಾವಸಾಳೋ
ಬೇಸಿಗೆಕಾಲ	ಉನ್ನಾಳೋ	ವಾರ	ವಾರ್
ತಿಂಗಳು	ಮೈನೋ	ವರ್ಷ	ವರಷ್
ಮುಂಜಾನೆ	ಸಕ್ಕಾಳಿ	ಮಧ್ಯಾಹ್ನ	ದುಪಾರ್
ಹುಣ್ಣಿಮೆ	ಪೂನಿಮ್	ಅಮಾವಾಸ್ಯೆ	ಅಮಾಸ್ಯೆ
ಸುಗ್ಗಿ	ಸಿಜ್ಜನ್		
ಭೂಮಿಯ ಸಂಬಂಧದ ಹೆಸರುಗಳು			
ಅಡವಿ	ರಾನ್	ಮಣ್ಣು	ಮಾರಿ
ಊರು	ಗಾವ್	ಹೊಲ	ಖೇತರ್

ಕನ್ನಡ ಪದ	ಘಿಸಾಡಿ ಪದ	ಕನ್ನಡ ಪದ	ಘಿಸಾಡಿ ಪದ
ಮೈದಾನ	ಬೈಲು	ಕಲ್ಲು	ದೊಂಡೋ
ಇಳಕಲು	ಉತ್ತಾರ್	ಹರಳು	ಖಡಾ
ಏರು	ಟೆಕಡೋ		
ಜಲಚರ ಪ್ರಾಣಿಗಳ ಹೆಸರುಗಳು			
ಏಡಿ	ಖೇಕೊಡೋ	ಮೀನು	ಮಾಛಲು
ಮೊಸಳೆ	ಮಗರ್	ಕಪ್ಪೆ	ಬೇನ್‌ಕೊಳಿ
ಆಮೆ	ತಾಂಬೇಲಿ, ಖಾಸೋ		
ಮಳೆಗೆ ಸಂಬಂಧಿಸಿದ ಹೆಸರು			
ಇಬ್ಬನಿ	ಥಂಡ್‌ಪಡಾರಿಸ್	ಸಿಡ್ಲು	ಈಜ್ ಪಡಾರಿಸ್
ಕಾಮನಬಿಲ್ಲು	ಕಾಮನ್‌ಬಿಲ್	ಗುಡುಗು	ಆಬಾಳ್ ಗಡ್‌ಗಡ್
ಮಿಂಚು	ಇಜ್	ಮೋಡ	ಆಬಾಳ್ ಆವಾರಿಚ್
ಹನಿ	ಪಾನಿ ತೆಂಬಾರಿಚ್	ಆಣೆಕಲ್ಲು	ಗಾರ್
ಪಶುಗಳ ಹೆಸರುಗಳು			
ಆಕಳು	ಗಾಯ್	ಕೋಣಾ	ಹಲ್ಯೋ
ಎಮ್ಮೆ	ಬೈಂಸ್	ದನ	ಜನವಾರ್
ಇಲಿ	ಉಂದುರೂ	ನಾಯಿ	ಕುತ್ತುರು
ಕುರಿಮರಿ	ಬಕರಾನು ಬಂಚು	ಬೆಕ್ಕು	ಮಾಂಜರ್
ಆಡು	ಬಕರೂ	ಮುಂಗುಲಿ	ಮೂಂಗುಷ್
ಕತ್ತೆ	ಗಾರಡೂ	ಹೆಗ್ಗಣ	ಘೂಂಸ್
ಎತ್ತು	ಬೈಲ್	ಕುದುರೆ	ಗೌಡೋ
ಟಗರು	ಮೆಂಡೋ	ಹೋರಿ	ಬೈಲ್
ಅಡವಿ ಮೃಗಗಳು			
ಆನೆ	ಹಾತೀ	ಹಾವು	ಸಾಫ್
ನರಿ	ಕೋಲೋ	ಮಂಗ	ಮಾಖಾಡ, ವಾಂದ್ರೋ
ಮೊಲ	ಸಸೋ	ಹುಲಿ	ವಾಘು
ಚಿರತೆ	ಚಿತೋ	ಹಂದಿ	ಡುಖರ್
ಒಂಟಿ	ಓಂಟ್	ಚಿಗರಿ	ಹರಣ್

ಕನ್ನಡ ಪದ	ಛಿಸಾಡಿ ಪದ	ಕನ್ನಡ ಪದ	ಛಿಸಾಡಿ ಪದ
ತೋಳ	ಲಾಂಡಗೋ	ಸಾರಂಗ	ಸಾರಂಗ್
ಇಣಚಿ	ಗಿಲ್ಲೇರಿ		

ಪಕ್ಷಿಗಳು

ಕಾಗೆ	ಕೌಲೋ	ಗಿಳಿ	ಮಿಟೋ, ಪೋಪಟ್
ನವಿಲು	ಮೋರ್	ಕೋಗಿಲೆ	ಕೋಯಲ್
ಗುಬ್ಬಿ	ಚಿಮನಿ	ಪಾರಿವಾಳ	ಕಬೂತರ್
ಕೋಳಿ	ಕುಕಡೀ	ಗೂಗೆ	ಗೂಗ್ಗೂ
ಬಾತಕೋಳಿ	ಬದಕ್	ಅಗಸಿ	ಯೆಸ್

ಕೀಟಗಳು

ಪಾತರಗಿತ್ತಿ	ಪಾಕೋಳಿ, ಪೂಲ್‌ಪಾಕರು	ಕಂಟಿ ಇರುವೆ	ಮುಂಗಳೋ
ಗುಂಗೀಹುಳ	ಗುಂಗೋ	ನುಸಿ	ನುಸೀ
ಹಲ್ಲಿ	ಚಿಪಲಕ್	ತಗಣಿ	ಡೊಕನೀ
ನೋಣ	ಮಾಖ್ಬಿ	ಇರುವೆ	ಮುಂಗೀ

ಗ್ರಾಮಕ್ಕೆ ಸಂಬಂಧಿಸಿದ ಹೆಸರುಗಳು

ಅಂಗಡಿ	ದುಖಾನ್	ಕೋಟೆ	ಕಿಲ್ಲಾ
ನಳ	ನಳ್	ಸಂತೆ	ಬಜಾರ್
ಓಣಿ	ಗಲ್ಲಿ	ತೋಟ	ಮಳೋ
ಮನೆ	ಘರ್	ಧಾರಿ	ವಾಟ್, ರಸ್ತೋ

ಆಪ್ತಬಂಧುಗಳ ಸಂಬೋಧನೆಗಳು

ಅಕ್ಕ	ಬೈಯಿ	ಅತ್ತಿಗೆ	ಬಾಬಿ
ತಂಗಿ	ನಾನೀಬೇನ್	ಅಳಿಯ	ಜಮಾಹೀ
ಅಣ್ಣ	ಅಣ್ಣಾ	ಬೀಗರು	ಪಾವನಾ
ತಮ್ಮ	ನಾನೋಬೈ	ಮೈದುನ	ದೇವರ್
ತಂದೆ	ಬಾಪ್	ಸೊಸೆ	ವವೂ
ತಾಯಿ	ಆಯಿ	ಅತ್ತೆ	ಅಕ್ಕಾ, ಸಾಸೋ
ಅಜ್ಜ	ಅಜ್ಜಾ	ಅಜ್ಜಿ	ಅಜ್ಜಿ
ಬೀಗತಿ	ಹೇವಾನ್	ಮೊಮ್ಮಗ	ನಾತಿಯೋ

ಕನ್ನಡ ಪದ	ಛಿಸಾಡಿ ಪದ	ಕನ್ನಡ ಪದ	ಛಿಸಾಡಿ ಪದ
ನಾದಿನಿ	ನನ್ನಂದೋ	ಮಗ	ಬೇಟೋ
ಮಗಳು	ಬೇಟಿ	ಹೆಂಡತಿ	ಬೈಕೋ
ಬೀಗಾ	ಯಹ್ಹಿ		

ಉಡುಗೆಗಳ ಹೆಸರುಗಳು

ಲುಂಗಿ	ಲುಂಗೀ	ರುಮಾಲು	ಪಟಕೋ
ಕಿಸೆ	ಕಿಸೋ	ತಟ್ಟು	ಪೋತ್ತು
ಟೊಪ್ಪಿಗೆ	ಟೋಪಿ	ದೋತರ	ದೋತ್ತರ್
ಕಂಬಳಿ	ಗೊಂಗಡಿ	ತೆಕ್ಕೆ	ಟೇಕೋ
ಸೀರೆ	ಲೂಗುಡೂ	ಬಟ್ಟೆ	ಕಪಡಾ
ಕುಪ್ಪಸ	ಜಂಪರ್	ತಲೆದಿಂಬು	ಹುಸೀ ಕೀ
ನೂಲು	ಡೋರೋ	ಹಾಸಿಗೆ	ವಛಾನು
ಚಾಪೆ	ಬೊರ್‍ಯೋ	ದಟ್ಟಿ	ಬಾಳಿತು

ವಾರಗಳು

ಸೋಮವಾರ	ಸೋಮಾರ್	ಮಂಗಳವಾರ	ಮಂಗಲವಾರ್
ಬುಧವಾರ	ಬುಧುವಾರ್	ಗುರುವಾರ	ಬೆಸ್ತುವಾರ್
ಶುಕ್ರವಾರ	ಶುಕ್ರುವಾರ್	ಶನಿವಾರ	ಶನಿವಾರ್
ಆದಿತ್ಯವಾರ	ಐತ್ವಾರ್		

ಸಂಖ್ಯೆಗಳು

ಒಂದು	ಏಕ	ಹನ್ನೊಂದು	ಅಕರಾ
ಎರಡು	ಬೇ	ಹನ್ನೆರಡು	ಬೇರ್‍ಹಾ
ಮೂರು	ತೀನ್	ಹದಿಮೂರು	ತೇರ್‍ಹಾ
ನಾಲ್ಕು	ಚಾರ್	ಹದಿನಾಲ್ಕು	ಚೌದಾ
ಐದು	ಪಾಚ್	ಹದಿನೈದು	ಪಂದ್ರಾಹ್
ಆರು	ಚೋ	ಹದಿನಾರು	ಸೋಳ್ಹಾ
ಏಳು	ಸಾತ್	ಹದಿನೇಳು	ಸತ್ತರಾ
ಎಂಟು	ಅಟ್	ಹದಿನೆಂಟು	ಅಟ್ಹಾ
ಒಂಬತ್ತು	ನವ್	ಹತ್ತೊಂಬತ್ತು	ಏಕೋಣಿಸ್

ಕನ್ನಡ ಪದ	ಛಿಸಾಡಿ ಪದ	ಕನ್ನಡ ಪದ	ಛಿಸಾಡಿ ಪದ
ಹತ್ತು	ದಸ್	ಇಪ್ಪತ್ತು	ವೀಸ್
ಮೂವತ್ತು	ತೀಸ್	ಸಾವಿರ	ಹಜಾರ್
ನಲವತ್ತು	ಚ್ಯಾಳೀಸ್	ಹತ್ತುಸಾವಿರ	ದಸ್‌ಹಜಾರ್
ಐವತ್ತು	ಪನಾಸ್	ಐವತ್ತುಸಾವಿರ	ಪನಾಸ್‌ಹಜಾರ್
ಅರವತ್ತು	ಸಾಟ್	ಒಂದು ಲಕ್ಷ	ಏಕಲಾಕ್
ಎಪ್ಪತ್ತು	ಸತ್ತರ್	ಕೋಟಿ	ಕರೋಡ್
ಎಂಬತ್ತು	ಐಂಸೀ	೫೦ ಪೈಸೆ	ಆಟಾಣಾ
ತೊಂಬತ್ತು	ನೌವದ್	ಒಂದು ರೂ.	ಏಕ್‌ರೂಪೋ
ನೂರು	ಸೌ		

<u>ಶಬ್ದಸಂಗ್ರಹ</u>

ಮೇಲೆ	ವುಪ್ಪರ್	ಸಾವು	ಮರ್
ಯಾವಾಗ	ಕೌವು	ಸತ್ಯ	ಖರ್‍ಹೊ
ಸಾಕು	ಬಸ್	ತಾಪ	ತ್ರಾಸ್‌ವಹ್ಹಿಚ್
ಮಾಡು	ಕರ್	ಕೊಡು	ದೇ
ನೀನು	ತೂ	ತಗೋ	ಲೇ
ನಾವು	ಅಪುನ್	ಬಾ	ಆವ್ಹ
ನಾನು	ಮ್ಹೀ	ನಡೆ	ಚಾಲ್
ಮಾತು	ವಾತ್	ಕೆಲಸ	ಕಾಮ್
ಸ್ವಚ್ಛ	ಪಾಕ್	ನೆನಪು	ಯಾದ್
ತೋಟ	ಮಳ್ಹೋ	ದೇವರು	ದೇವ್ಹ
ಸ್ವಂತ	ಖುದ್ದುನ್ಹೋ	ಹತ್ತಿರ	ನಜೀಕ್
ತೂಕ	ತೋಲ್, ಕಾಟೋ	ಸಂಜೆ	ಸಂದ್ಯಾ
ಜೀವ	ಜೀವ್ಹ	ಬಹಳ	ಘನ್ಹೋ

ಕನ್ನಡ ವಾಕ್ಯ ರಚನೆ	ಛಿಸಾಡಿ ವಾಕ್ಯ ರಚನೆ
<u>ವಾಕ್ಯ ರಚನೆಗಳು</u>	
ಸಾಕುಮಾಡು	ಬಸಕರ್
ಹಗಲು ಬಾ	ದಿವಸ್ ನೂ ಆವ್ಹ
ಹಟ ಮಾಡಬೇಡ	ಜಿದ್ದ ನಕೋ ಕರೊ

ಕನ್ನಡ ವಾಕ್ಯ ರಚನೆ	ಛಿಸಾಡಿ ವಾಕ್ಯ ರಚನೆ
ತುಸು ಮಲಗು	ತೊಡು ಸಿರ್ರೋ
ಸುಮ್ಮನೆ ಇರು	ಗಫ್ ಬೈಸ್
ಹಗಲು ಮಲಗಬೇಡಾ	ದಿವಸ್ ನೋ ಸೀರೊ ನ್ಹಕೋ
ಎಲ್ಲರನ್ನು ಕೂಡಿಕೊಂಡು ನಡೆ	ಸಮ ದಾ ಮಿಳಿನ್ಹ ಚಾಲ್ಲೋ
ಜನರು ಹೇಳಿದ್ದು ಕೇಳು	ಸಗಳಾ ಜನಾನೀ ವಾತ್ ಐಕ್
ಇದನ್ನು ಕುಡಿದು ಬಿಡು	ಇಟ್ಲೊ ಪಿನ್ ಸೋಡ್
ಸೇತುವೆಯ ಮೇಲೆ ನಡೆ	ಪೂಲ್‌ಪರ್ ಚ್ಯಾಲ್
ನೀನು ನಾಳೆ ತೋಟಕ್ಕೆ ಹೋಗು	ಸಕ್ಕಾಳಿ ಕುಟನ್ನಾ ಮಳಾಯೇ ಜ್ಹಾ
ಇಂದು ಅಭ್ಯಾಸ ಮಾಡು	ಅತಾ ಬೌಸೀನ್ ವ್ಹಾಚ್
ಸತ್ಯ ಮಾತಾಡು	ಕರ್‍ರೂ ವಾತ್‌ಕರ್
ಚಿಕ್ಕಪ್ಪನನ್ನು ಕರೆ	ಕಾಕಾ ನ್ಹ ಬುಲ್ಹಾವ್
ಒಳ್ಳೆಯ ಕೆಲಸ ಮಾಡು	ಚಾಂಗ್ ಲ್ಹೂ ಕಾಮ್ ಕರ್
ರಾತ್ರಿ ಬೇಗ ಮಲಗು	ರಾತನೋ ಲವಕರ್ ಸಿರ್ರೋ
ಅವನು ನಿನ್ನೆ ಹೋದನು	ವುಯೋ ಕಾಲ್ಹ್‌ಚ ಗಯೇ
ದೇವರ ಉಪಕಾರ ಮನ್ನಿಸುತ್ತೇನೆ	ದೇವನ್ಹಾ ಮೇ ಯಾದ್ ಕರೂಚ್ಛ
ಒಪ್ಪಿಗೆ ಮಾತು	ಕಬುಲ್ ನೀ ವ್ಹಾತ್ ಚ್
ಹೀಗೆ ಅಲ್ಲ	ಏ ನವ್ಹೋ
ಏನು ವಿಚಾರ ಮಾಡುತ್ತಿರುವಿರಿ?	ಸುವಿಚಾರ್ ಖಾರಾ ರೋಚ್ಹ್?
ಖಾತ್ರಿಯ ಮಾತು	ಖರೂವ್ಹಾತ್
ಕೃತಜ್ಞತೆ	ಮೆರಭಾನಿ
ಆಶ್ಚರ್ಯದ ಮಾತು	ಘನು ವ್ಹಾತ್
ದುಃಖದ ಮಾತು	ದುಃಖನಿ ವ್ಹಾತ್
ಸಂಬಂಧ ಮಾತು	ರೀಸ್ತಾನೂ ವ್ಹಾತ್
ಗೆಳೆಯರ ಭೆಟ್ಟಿ	ದೊಸ್ತೊನೋ ಮಿಳೇನು
ಗಾದೆಯ ಮಾತು	ಅರ್ಥನೊ ವ್ಹಾತ್
ನೀತಿಯ ನುಡಿ	ಅಖಲ್ ನೀ ವ್ಹಾತ್
ಹುಡುಗರ ನಡತೆ	ಬಂಚ್ಹೋನು ಚಾಲ್‌ನ್ಹೋ
ಹಿರಿಯರ ಮಾನ ಕಾಯಬೇಕು	ಮುಟಾನೋ ಮಾನ ಮೇಕ ನ್ಹೊ

ಕನ್ನಡ ವಾಕ್ಯ ರಚನೆ	ಫಿಸಾಡಿ ವಾಕ್ಯ ರಚನೆ
ಕೂಸು ತಾಯಿ ಹಾಲು ಕುಡಿಯುತ್ತದೆ	ಬಟ್ಯಾ ಮಾ ನ್ಹು ದೂದ್ ಫಿಚ್ಯ್
ಎಮ್ಮೆ ಆಕಳು ಹಾಲು ಕುಡಿ	ಗಾಯ್ ಬೈಂಹಿಸ್ ನ್ಹೂ ದೂದ್ ಫೀ

<u>ಶಬ್ದ ಸಂಗ್ರಹ</u>

ಒಳ್ಳೆಯ	ಛಾಂಗಲ್ಯೂ	ತಂಗಿ	ಬೇಹ್ನ
ಪತ್ರ	ಪತ್ರ್, ಛಿಟಿ	ಸ್ನೇಹ	ದೋಸ್ತಿ
ಅಭ್ಯಾಸ	ವ್ಹಾಚನ್ಯೂ	ನೆಟ್ಟಗೆ	ಸೀದಾ
ಸುಮ್ಮನೆ	ಗಪ್	ಖಾತ್ರಿ	ಬರ್ರ್ಹೋಸೊ

<u>ವಾಕ್ಯ ರಚನೆಗಳು</u>

ಒಳ್ಳೆಯವರ ಸ್ನೆಹ ಮಾಡು	ಚಾಂಗ್ ಲೋ ದೋಸ್ತೊ ಬಾಂದ್
ಸುಮ್ಮನೆ ಹೋಗು	ಗಫ್ ಚುಫ್ ಜ್ಹಾ
ಹೋಗೋ ಹೋಗು ನೀ ಏನು ಮಾಡ್ತಿದಿ?	ಜ್ಹಾರೇ ಜಾ ಗಫ್‌ಚುಫ್ ಜಾ ತೂಸು ಕರೇಚ್ಯ್?
ನಾನು ಸಹಾಯ ಮಾಡುವೆನು	ಮೇ ಮದತ್ ಖರ್ರ್ಹೋಚ್ಛ
ಇಲ್ಲಿಂದ ಆ ಊರು ಬಹಳ ದೂರವಿದೆ	ಹೇ ತ್ಹೀನ್ಹ್ ಗಾಂವ್ ಗನ್ಯೂ ದೂರ್ ಚ್ಛ
ಸುಮ್ಮನೆ ಬಾ ಕಿರಚಬೇಡ	ಗಪ್ ಆವ್ಹ್ ಅಲ್ಯೂನಕ್ಹೋ
ರಾಮನೂ, ಕೃಷ್ಣನೂ ಊರಿನಿಂದ ಬಂದರು	ರಾಂ, ಕ್ರಿಷ್ನೋ ಗಾಂವ್ ತೀನ್ ಆಯೋಚ್ಛ
ನಾನು ಅದೇ ಪುಸ್ತಕವನ್ನು ಓದಿದೆನು	ಮ್ಹೇ ವೋಚ್ಛ ಪುಸ್ತಕ ವ್ಹಾ ಚ್ಹೋ
ಮಾತಡಲಿಕ್ಕೆ ಬರುವುದಿಲ್ಲ	ವ್ಹಾತ್ ಖರ್ರ್ಹಾನೋ ನಹಿಃ ಆವೋತೋ
ಈ ಮಾತು ನನಗೆ ಖಾತ್ರಿ ಇದೆ	ಈ ವ್ಹಾತ್ ಮನೋ ಬರೋಸ್ಹಚ್ಛ
ಅವರಿಗೆ ಹಿಂದುಸ್ತಾನಿ ಚೆನ್ನಾಗಿ ಬರುವುದು	ವೋವನ್ ಹಿಂದೂಸ್ತಾನಿ ವಾತ್‌ಚಾಂಗ್ಲೂ ಆವ್ಹೂಚ್ಛ

<u>ಶಬ್ದ ಸಂಗ್ರಹ</u>

ಕ್ಷೇಮ	ಚಾಂಗ್ಲೂಚ್ಹ್	ಹೌದು	ವೋಯ್
ನಂಬಿಕೆ	ಭರ್ರ್ಹೋಸೋ	ಮಾತು	ವಾತ್ಹೋ
ಉಪಕಾರ	ಉಪಕಾರ್	ಮನಸ್ಸು	ಮನ್
ಕೆಡಕು	ಖರಾಬ್		

<u>ವಾಕ್ಯ ರಚನೆಗಳು</u>

ನಮಸ್ಕಾರ ಸಾಹೇಬರೇ!	ರಾಮ್ ರಾಮ್ ಹೋ !
ನಮಸ್ಕಾರ! ಬನ್ನಿ ಕುಳಿತುಕೊಳ್ಳಿರಿ	ರಾಮ್ ರಾಮ್! ಆಹೋ ಬೈಸೋ

ಕನ್ನಡ ವಾಕ್ಯ ರಚನೆ	ಫಿಸಾಡಿ ವಾಕ್ಯ ರಚನೆ
ತಮ್ಮ ಹೆಸರೇನು?	ತುಮಾರು ನಾವ್ ಸುಚ್?
ತಾವು ಎಲ್ಲಿಂದ ಬಂದಿರುವಿರಿ?	ತುಮೇ ಕ್ಯಾತೀನ್ ಆಯೋ?
ಇಲ್ಲಿ ನಿಮಗೆ ಏನು ಕೆಲಸವಿದೆ?	ಯೋ ತುಮಾರು ಸೋ ಕಾಮ್ ಸೋ?
ನಿಮಗೆ ಹಿಂದಿ ಮಾತನಾಡಲು ಬರುತ್ತದೆಯೇ?	ತುಮ್ ನ್ಹ ಹಿಂದಿ ವಾತ್ ಕರ್‍ನ್ಹಾನಾ ಆವುತ್ಸ್ ಸೂ?
ನಿಮಗೆ ನಮ್ಮ ಮಾತು ತಿಳಿಯುತ್ತದೆಯೇ?	ತುಮ್ ನ್ಹಂ ಹಮಾರಿ ವಾತ್ ಕಳಸ್ಸೋ?
ಒಳ್ಳೆಯದು ನೀವು ಹೋಗಿ ಬನ್ನಿ	ಚಾಂಗಲ್ಲೂ ಜೈನ್ಹಾವೋ
ನಮಸ್ಕಾರ ಹೋಗಿ ಬರುವೆನು	ರಾಮ್‌ರಾಮ್ ಜೈನ್ಹಂ ಆವೂಚ್ಫ್
ನೀವು ಕ್ಷೇಮದಿಂದ ಇರುವಿರಾ?	ತುಮೆ ಆರಾಮ್ ರವ್ಹೋ?
ಈಗ ನನಗೆ ಹಣದ ಅಡಚಣೆ ಬಹಳವಿದೆ	ಹಾತ್ಹಾ ಮನ ಪೈಸಾನು ಘನ್ನೂ ಅಡಚಣ್ ಚ್ಹ
ದೇವರು ನಿಮಗೆ ಕಲ್ಯಾಣ ಮಾಡಲಿ	ದೆವ್ರೋ ತುಮ್ ನಃ ಸಾಂಗ್ಲೂ ಮೆಕಾಂದೇ

ಲಿಂಗ ವಿಚಾರ

೧. ಫಿಸಾಡಿ ಭಾಷೆಯಲ್ಲಿ ಜೀವವುಳ್ಳ ಮನುಷ್ಯ, ಪಶು, ಪಕ್ಷಿ ಮುಂತಾದವುಗಳ ಪುರುಷ ಜಾತಿಗೆ ಪುಲ್ಲಿಂಗ ಎಂದು, ಸ್ತ್ರೀ ಜಾತಿಗೆ ಸ್ತ್ರೀಲಿಂಗವೆಂದು ಕರೆಯಲಾಗುತ್ತದೆ.

ಪುಲ್ಲಿಂಗ		ಸ್ತ್ರೀಲಿಂಗ	
ಗಂಡು ಕುದುರೆ	ಘೋಡೋ	ಹೆಣ್ಣು ಕುದುರೆ	ಘೋಡಿ
ಗಂಡು ಹುಡುಗ	ಗಡಿ ಪೋರೋ	ಹೆಣ್ಣು ಹುಡುಗಿ	ಪ್ಹೋರ್‍ನ್ಹಾಹ
ಗಂಡು ಕೋಳಿ	ಕುಕ್ಕುಡೋ	ಹೆಣ್ಣು ಕೋಳಿ	ಕುಕ್ಕಡೀ

೨. ಫಿಸಾಡಿ ಭಾಷೆಯಲ್ಲಿ ಈ ಕೆಳಗಿನ ಕೆಲವು ನಿರ್ಜೀವ ಶಬ್ದಗಳು ಪುಲ್ಲಿಂಗಗಳಾಗುತ್ತವೆ.

ಪುಲ್ಲಿಂಗ			
ಜಗತ್ತು	ದುನಿಯಾ	ಕಟ್ಟಿಗೆ	ಲಾಕ್ಕಡಾ
ಸೇವರ್	ಘುಡೀ	ಕೋಣೆ	ಕೊಲ್ಹಿ
ಸಮುದ್ರ	ದರಿಯಾ	ಕೀಲಿ	ಕುಲ್ಲೂಪು
ಚಾಪೆ	ಬೋರಿಯೋ	ರೊಟ್ಟಿ	ಬಾಕರ್
ದೀಪದ ಹುಳು	ದೀವ್ಹಾನಾತೀಡೊ	ತುಪ್ಪ	ಘೀ

ವಚನ ವಿಚಾರ

೧. ಫಿಸಾಡಿ ಭಾಷೆಯಲ್ಲಿ ಕೆಲವು ನಾಮಗಳ ಏಕವಚನ ಮತ್ತು ಬಹುವಚನಗಳು ಯಾವಾಗಲೂ ಒಂದೇ ರೂಪವಾಗುವವು.

ಏಕವಚನ		ಬಹುವಚನ	
ಉಸುಕು	ರೇತಿ	ಉಸುಕು	ರೇತಿ
ಕಸ	ಕಚ್ಚರೋ	ಕಸ	ಕಚ್ಚರೋ
ಜಮಿನ್	ಕೇತರ್	ಜಮಿನ್	ಕೇತರೋ
ಕೆಸರು	ಚಿಕ್ಕಲ್	ಕೆಸರು	ಚಿಕ್ಕುಲ್
ಹೆಸರು	ನಾವೋ	ಹೆಸರುಗಳು	ನಾವೋ
ಒಗ್ಗಟ್ಟು	ವಿಳಿಸ್ಥ	ಒಗ್ಗಟ್ಟು	ವಿಳಿಸ್ಥ

೨. ಫಿಸಾಡಿ ಭಾಷೆಯಲ್ಲಿ ಕೆಲವು ನಾಮಗಳು ಏಕವಚನ ಮತ್ತು ಬಹುವಚನಗಳಲ್ಲಿ ಬೇರೆ ರೂಪಗಳಾಗುವವು.

ಏಕವಚನ		ಬಹುವಚನ	
ಪುಸ್ತಕ	ಪುಸ್ತಕ್	ಪುಸ್ತಕಗಳು	ಪುಸ್ತಕೋ
ಕವಿ	ಕವಿ	ಕವಿಗಳು	ಕವಿಯೋ
ಕಂಟಿ	ಜಾಡಿ	ಕಂಟಿಗಳು	ಜಾಡಿವೋ
ಯಜಮಾನ	ಮುಟೋಮನುಷ್	ಯಜಮಾನರು	ಮುಟೋಮನುಷಯೋ
ಪಶು	ಜನಾವರ್	ಪಶುಗಳು	ಜನಾವರೋ
ಕಲ್ಲು	ದೊಂಡೋ	ಕಲ್ಲುಗಳು	ದೊಂಡಾ

<u>ಕಾಲ ವಿಚಾರದಲ್ಲಿ</u>

ಫಿಸಾಡಿ ಭಾಷೆಯಲ್ಲಿ ವರ್ತಮಾನ ಕಾಲ, ಭೂತಕಾಲ, ಭವಿಷ್ಯತ್‌ಕಾಲಗಳಲ್ಲಿ ಬಳಕೆಯಾಗುವ ಕೆಲವು ವಾಕ್ಯ ರಚನೆಗಳನ್ನು ಕೆಳಗಿನಂತೆ ವಿವರಿಸಲಾಗಿದೆ.

ವರ್ತಮಾನ ಕಾಲ

ಏಕವಚನ	ಬಹುವಚನ
ನಾನು ಮಾಡುತ್ತೇನೆ-ಮೇ ಕರೋಚ್ಛಃ	ನಾವು ಮಾಡುತ್ತೇವೆ-ಅಪುನ್ ಕರೇಚ್
ನೀನು ಮಾಡುತ್ತೀ-ತೂ ಕರೋಚ್ಛಃ	ನೀವು ಮಾಡುತ್ತೀರಿ-ತುಮೇ ಕರೇಚ್
ಅವನು ಮಾಡುತ್ತಾನೆ-ಓ ಕರೋಚ್ಛಃ	ಅವರು ಮಾಡುತ್ತಾರೆ-ವೋ ಕರೋಚ್ಛಃ

ಭೂತಕಾಲ

ಏಕವಚನ	ಬಹುವಚನ
ನಾನು ಮಾಡಿದೆನು-ಮ್ಹೋ ಕರೆತ್ಹೋ	ನಾವು ಮಾಡಿದೆವು-ಹಮ್ ಕರ್‍ಯಾ
ನೀನು ಮಾಡಿದಿ-ತ್ಹು ಕರೇಚ್ಥ	ನೀವು ಮಾಡಿದಿರಿ-ತುಮ ಕರ್‍ಯಾಸು
ಅವನು ಮಾಡಿದನು-ಹೋ ಕರೇಚ್ಫ	ಅವರು ಮಾಡಿದರು-ವೋ ಲೋಕೋ ಕರ್‍ಯೆ

ಭವಿಷ್ಯತ್ ಕಾಲ

ಏಕವಚನ	ಬಹುವಚನ
ನಾನು ಮಾಡುವೆನು-ಮೇ ಕರ್ರೂಚ್ಛ್	ನಾವು ಮಾಡುವೆವು-ಹಮ್ ಲೋಗೋ ಕರ್‌ಹೇಚ್ಫ್
ನೀನು ಮಾಡುವಿ-ತು ಕರಸೂ	ನೀವು ಮಾಡುವಿರಿ-ತುಮ್ ಲೋಗೋ ಕರ್‌ಹೇಚ್ಫ್
ಅವನು ಮಾಡುವನು-ವೋ ಕರಸೂ	ಅವರು ಮಾಡುವರು-ವೋ ಲೋಗೋ ಕರ್‌ಹೆಚ್ಫ್

೨. ಸಾಹಿತ್ಯ

ಜನಪದ ಸಾಹಿತ್ಯವು ಬಾಯಿಯಲ್ಲಿಯೇ ಬ್ರಹ್ಮಾಂಡವನ್ನು ತುಂಬಿಕೊಂಡಿರುವ ಅನಕ್ಷರಸ್ಥ ಸಮಾಜದ ಸಾಹಿತ್ಯವಾಗಿದೆ. ತಮ್ಮ ಜೀವನದ ಪಾಡನ್ನೇ ಹಾಡಾಗಿ ನೀಡುವುದರೊಂದಿಗೆ ತಮ್ಮ ಜೀವನದ ನೋವು ನಲಿವುಗಳನ್ನು ಆಚಾರ ವಿಚಾರಗಳನ್ನು ರೂಢಿ ಸಂಪ್ರದಾಯಗಳನ್ನು ಹಾಡಿನಲ್ಲಿ ವಿಶ್ಲೇಷಿಸುವ ಸಾಹಿತ್ಯದ ಒಂದು ಪ್ರಕಾರವಾಗಿದೆ. ಅಂತೆಯೇ ಜನಪದ ಸಾಹಿತ್ಯ ಪ್ರಕಾರಗಳಲ್ಲಿಯೇ ಜನಪದ ಗೀತೆಗಳಿಗೆ ಪ್ರಮುಖ ಸ್ಥಾನವಿದೆ. ಅವು ಆಯಾ ಜನಾಂಗದ ಸಂಸ್ಕೃತಿಯನ್ನು ಎತ್ತಿಹಿಡಿಯ ಬಲ್ಲ ಕುರುಹುಗಳಾಗಿವೆ.

ವಿಶಿಷ್ಟ ಸಂಸ್ಕೃತಿ ಪರಂಪರೆಯನ್ನುಳ್ಳ ಘಿಸಾಡಿ ಸಮುದಾಯದವರು ತಮ್ಮ ಭಾಷೆಯಲ್ಲಿ, ಮರಾಠಿ ಭಾಷೆಯಲ್ಲಿ ಹಾಗೂ ಕನ್ನಡ ಭಾಷೆಯಲ್ಲಿ ಹಾಡುಗಳನ್ನು ಹಾಡುವರು. ಇತ್ತೀಚಿನ ದಿನಗಳಲ್ಲಿ ತಮ್ಮ ಭಾಷೆಗಿಂತ ಕನ್ನಡ ಭಾಷೆಯಲ್ಲಿಯೇ ಹೆಚ್ಚಾಗಿ ಹಾಡುವುದನ್ನು ರೂಢಿಸಿ ಕೊಂಡಿದ್ದಾರೆ. ಏಕೆಂದರೆ, ಇವರ ಮನೆಗಳ ಸಾಂಪ್ರದಾಯಿಕ ಕಾರ್ಯಕ್ರಮಗಳಿಗೆ ಅಕ್ಕಪಕ್ಕದ ವಿವಿಧ ಸಮುದಾಯದವರನ್ನು ಆಮಂತ್ರಿಸುವರು. ಆದುದರಿಂದ ಅವರಿಗೆ ಅರ್ಥವಾಗುವುದಿಲ್ಲ ಎಂಬ ಮನೋಭಾವನೆಯಿಂದ ಕನ್ನಡ ಭಾಷೆಯಲ್ಲಿಯೇ ಹಾಡುತ್ತಿದ್ದಾರೆ.

ಇವರ ಜೀವನದ ವಿವಿಧ ಘಟ್ಟಗಳಲ್ಲಿ ಅಂದರೆ, ಜನನದಿಂದ ಹಿಡಿದು ಮರಣದವರೆಗೂ ನಡೆಯುವ ಅನೇಕ ಸಂಸ್ಕಾರಗಳಲ್ಲಿ, ಸಾಮಾಜಿಕ ಕಟ್ಟುಪಾಡುಗಳಲ್ಲಿ, ಜೀವನದ ಸಂಘರ್ಷಗಳ ಹಿನ್ನೆಲೆಯಲ್ಲಿ ಜನಪದ ಗೀತೆಗಳನ್ನು ಹಾಡುತ್ತಾರೆ. ಹಬ್ಬ ಹರಿದಿನಗಳಲ್ಲಿ, ದೇವರು ದೇವತೆಗಳ ಸ್ತುತಿ ಗೀತೆಗಳನ್ನು, ಪ್ರಾರ್ಥನೆ ಗೀತೆಗಳನ್ನು, ಮದುವೆ ಮುಂಜಿಗಳಲ್ಲಿ, ಮಂಗಳ ಗೀತೆ, ಮನರಂಜನೆ ಗಾಗಿ ಪ್ರಣಯ ಗೀತೆ, ಹಾಸ್ಯಗೀತೆ, ಮೋಜಿನ ಗೀತೆಗಳು, ಏಕಾಂಗಿಯಾಗಿ ವೃತ್ತಿ ನಿರತರಾದಾಗ, ಬೀಸುವಾಗ, ಕುಟ್ಟುವಾಗ, ಮಗುವನ್ನು ತೊಟ್ಟಿಲಿನಲ್ಲಿ ತೂಗುವಾಗ ಹಾಡುವ ಹಾಡುಗಳು ಅವರ ಹೃದಯವನ್ನು ಸ್ಪಷ್ಟವಾಗಿ ಬಿಚ್ಚಿ ತೋರಿಸುತ್ತವೆ. ಅಂತಹ ಕೆಲವು ಹಾಡುಗಳನ್ನು ಇಲ್ಲಿ ವಿಶ್ಲೇಷಿಸಲಾಗಿದೆ.

೧. ಗಂಗಾ ಸ್ಥಳಕ್ಕೆ ಹೋಗಿ ನೀರು ತರುವ ಪದ

“ಗಂಗಾ ಜಮುನಾ ಲಾ ಪಾನೀ ನಿತ್ತಾಳ್ ಬರಗ್ಯಾಃ ರಾಂಜನಿ

ಗಂಗಾ ಜಮುನಾ ಲಾ ಪಾನೀ ನಿತ್ತಾಳ್ ಬರಗ್ಯಾ! ರಾಂಜನಿ

ಗಂಗಾ ಗೇಲಿ ಪಾನ್ಯಾಲಾ ಜಮುನಾ ಬಸಲೀ ಮಾರ್ಯಾ ಲಾ
ಗಂಗಾ ಗೇಲಿ ಪಾನ್ಯಾಲಾ ಜಮುನಾ ಬಸಲೀ ನಾಯಾಲಾ"

(*ಸರೋಜಾ ಘಿಸಾಡಿ, ಗಾರಂಪಳ್ಳಿ*)

ಈ ಮೇಲಿನ ಹಾಡಿನಲ್ಲಿ ನಾಲ್ಕು ಸಾಲುಗಳನ್ನು ಮಾತ್ರ ಆಯ್ದುಕೊಂಡಿದ್ದು ಆ ಸಾಲುಗಳ ಅರ್ಥವಿವರಣೆ ಈ ರೀತಿಯಾಗಿದೆ. ಗಂಗಾ ಮತ್ತು ಜಮುನಾ ಇಬ್ಬರೂ ಒಂದೇ ಕುಟುಂಬದ ಹೆಣ್ಣು ಮಕ್ಕಳಾಗಿದ್ದು ಇವರು ಮನೆಯಲ್ಲಿನ ದೇವರ ಪೂಜೆಗಾಗಿ ನೀರು ತರಲು ನಿರ್ಣಯ ಮಾಡಿಕೊಳ್ಳುತ್ತಾರೆ. ಆಗ ಗಂಗಾ ನೀರು ತರಲು ಹರಿಯುವ ನದಿಗೆ ಕೊಡ ತೆಗೆದುಕೊಂಡು ಹೋಗುತ್ತಾಳೆ. ಆಗ ಜಮುನಾ ಸ್ನಾನ ಮಾಡಲು ಬಚ್ಚಲಿಗೆ ಹೋಗುತ್ತಾಳೆ. ಸ್ವಲ್ಪ ಸಮಯದ ಬಳಿಕ ಗಂಗಾ ನೀರು ತಂದು ಬಚ್ಚಲಿನಲ್ಲಿ ಕುಳಿತುಕೊಂಡಿರುವ, ಜಮುನಾಳ ತಲೆಯ ಮೇಲೆ ನೀರು ಹಾಕಿ ಸ್ನಾನ ಮಾಡಿಸುತ್ತಾಳೆ. ಆಮೇಲೆ ಜಮುನಾ ನದಿಗೆ ಹೋಗಿ ನೀರು ತಂದು ಗಂಗಾಳ ತಲೆಯ ಮೇಲೆ ನೀರು ಹಾಕಿ ಸ್ನಾನ ಮಾಡಿಸುತ್ತಾಳೆ. ಈ ಇಬ್ಬರ ಸ್ನಾನವಾದ ಮೇಲೆ ಮನೆಯಲ್ಲಿನ ದೇವರ ಪೂಜೆಯ ನೀರಿಗಾಗಿ ಕೊಡಗಳನ್ನು ತೆಗೆದುಕೊಂಡು ಹೋಗಿ ನದಿಯ ನೀರನ್ನು ತರುತ್ತಾರೆ. ಈ ಹಾಡನ್ನು ಇವರು ತಮ್ಮ ಮನೆಯಲ್ಲಿನ ಸಾಂಪ್ರದಾಯಿಕ ಕಾರ್ಯಕ್ರಮಗಳಲ್ಲಿ ಹಾಡುತ್ತಾರೆ.

೨. ಮದುವೆ ಮಾಡಿಕೊಂಡು ತವರುಮನೆ ಬಿಟ್ಟು ಹೋಗುವಾಗ

"ದರವಾಜನಾ ಚೌಂಕಟವ್ಹಾ ಕವ್ಹಾಮಾನ್ ಸುಟ್ ಸನ್ನವ್ಹಾ
ದರವಾಜನಾ ಚೌಂಕಟವ್ಹಾ ಕವ್ಹಾಮಾನ್ ಸುಟ್ ಸನ್ನವ್ಹಾ
ಮಿಟ್‌ಮಾರಿ ಸುಮಾನಾ ಕಂವ್ಹಾಮಾನ್ ಬಿಟ್ ಸನ್ನವ್ಹಾ
ಮಿಟ್‌ಮಾರಿ ಸುಮಾನಾ ಕಂವ್ಹಾಮಾನ್ ಬಿಟ್ ಸನ್ನವ್ಹಾ" ||ದಾರವಾಜನಾ||
ಜಮೇ ಮಾರೋ ಮಾರುತಿ ಕಂವ್ಹಾಮಾನಾ ಬೋಲ್ ಸನಗಾ!
ಜಮೇ ಮಾರೋ ಮಾರುತಿ ಕಂವ್ಹಾಮಾನಾ ಬೋಲ್ ಸನಗಾ! ||ದಾರವಾಜನಾ||

(*ರೇಣುಕಾ*)

ಹೊಸದಾಗಿ ಹೆಣ್ಣು ಮಗಳು ಮದುವೆ ಮಾಡಿಕೊಂಡು ಗಂಡನ ಮನೆಗೆ ಹೋಗುವಾಗ ಆಕೆಗೆ ಆಗುವ ನೋವನ್ನು ಕುರಿತು ಹಾಡುವ ಪದ ಇದಾಗಿದ್ದು ಆರು ಸಾಲುಗಳಲ್ಲಿ ಮಾತ್ರ ವಿವರಿಸಲಾಗಿದೆ. ಹೊಸದಾಗಿ ಮದುವೆಯಾದ ಹೆಣ್ಣುಮಕ್ಕಳು ತಾನು ಆಡಿ ನಲಿದಾಡಿದಂತಹ ತವರು ಮನೆಯ ಬಾಗಿಲನ್ನು ಬಿಟ್ಟು ಗಂಡನ ಮನೆಗೆ ಹೋಗುವಾಗ, ಆಕೆಯ ಮನದಲ್ಲಿ ಸಾವಿರಾರು ನೋವು, ದುಃಖ, ಒಲ್ಲದ ಮನಸ್ಸುಗಳ ತೊಳಲಾಟದಲ್ಲಿ ಅಬ್ಬರದ ದುಃಖ ಸಂಭ್ರಮದಲ್ಲಿ ಅನಿವಾರ್ಯವಾಗಿ ತನ್ನ ತವರು ಮನೆಯನ್ನು ಬಿಟ್ಟು ಹೋಗಲೇಬೇಕಾಗುವ ಸಂದರ್ಭ ಇದ್ದಾಗಿರುತ್ತದೆ. ಈ ಒಲ್ಲದ ಮನಸ್ಸಿನ ನೋವಿನ ಅಂಶಗಳೇ ಈ ಹಾಡಿನ ಸಾಲಿನಲ್ಲಿರುತ್ತವೆ.

೩. ಅಳಿಯ ಹಾಗೂ ಮಗಳಿಗೆ ಬುದ್ಧಿಮಾತು ಹೇಳುವ ಪದ

ಹಿಮ್ ಕಿಂ ಕರೇನಿ ಯಾವ್ಹೋನ್ ಹೋತಿ
ಹಿಮ್ ಕಿಂ ಕರೇನಿ ಯಾವ್ಹೋನ್ ಬೈ ||ಹಿಮ್||
ಮಾರ್ಕನ್ ದಸ್ಪಾಚ್ ಲಿವ್ಹಾನ್ ಹೋತಿ
ಚಾಂಗ್ಲೂ ಸಂಸಾರ ಕರ್ಹ್ಯಾಃನ್ ಹೋತಿ ||ಹಿಮ್||
ಮಾರಿ ಬೇಟ್ಲೀನ್ ಲಿಂಜ್ಹಾನ್ ಹೋತಿ
ಚಾಂಗ್ಲೂ ಸಂಸಾರ ಕರ್ಹ್ಯಾಃನ್ ಹೋತಿ ||ಹಿಮ್||
ಮಾರ್ಕನ್ ದಸ್ಪಾಚ್ ಲಿವ್ಹಾನ್ ಹೋತಿ
ಬೇಟೀನ್ಹಿ ಚಾಂಗ್ಲೂ ಕವ್ಹಾನ ಹೋತಿ ||ಹಿಮ್||
ಚಾಂಗ್ಲೂ ಶಿಕ್ಷಣ ದಿವಾನ್ ಹೋತಿ
ಬೈಯಾಲ್ಹಾ ಘರ್ಹಾ ಸಾಂಗ್ಲೂ ನಂದ್ಹಾಕ್ ನ್ಹೂ ||ಹಿಮ್||
ಆಹೋ ಸಗಳಾ ಮುಂಡೂಬ್ ನ್ಹಾ ಆಫನ್
ಸಗಾಳ್ಹಾ ಬೈ ಚೀನ್ ಕರ್ಹ್ಯಾಃನ್ ಹೋತಾ ||ಹಿಮ್||
ಆಹೋ ಕೋನ್ ಕೋನ್ ಕನ್ಹಾರ್ ಹೋನಾ
ಆರ್ಶಿವಾದ ದೇವನ್ಹಾ ಹೋತಾ ||ಹಿಮ್||
ಹಿಮ್ ಕೀಂ ಕರೇಗು ಸಾಸು ಬೈ
ಹಿಮ್ ಕೀಂ ಕರಿತು ಸಾಸು ಬೈ ||ಹಿಮ್||
ಆ ಹೋಗಾ ಮಜ್ಜರ್ ಕವ್ಹಾನ್ ಹೋತಿ
ಮಾರಿ ಮಾ ಬಾಪ್ ಹೂಮನ್ ಹೋತಿ ||ಹಿಮ್||

(ಶೇಖರ, ತಂದೆ ಶಂಕರ, ಸಾಳುಂಕೆ, ಸೊಲ್ಲಾಪುರ)

ಈ ಹಾಡಿನಲ್ಲಿ ಪರಸ್ಪರ ಇಬ್ಬರು ಬೀಗತಿಯರು ಹಾಗೂ ಕೊನೆಯಲ್ಲಿ ಮಗ ಅಥವಾ ಅಳಿಯ ಹಾಡುವುದರೊಂದಿಗೆ ಈ ಹಾಡು ಮುಕ್ತಾಯವಾಗುತ್ತದೆ. ಮೊದಲಿಗೆ ಬೀಗತಿ ತನ್ನ ಮಗಳು ತವರು ಮನೆಗೆ ಬಂದಿರುವುದಕ್ಕೆ ಒಂದು ದಿನ ಮಗನ ತಾಯಿಯ ಹತ್ತಿರ ವಿಷಯ ತೋಡಿಕೊಳ್ಳುತ್ತಾಳೆ. ಅದೇನೆಂದರೆ, ನನ್ನ ಮಗಳು ಹಾಗೂ ಅಳಿಯ ಚೆನ್ನಾಗಿ ಸಂಸಾರ ಮಾಡಲು ತಂದೆ-ತಾಯಿಗಳಾದ ನೀವು ತಿಳುವಳಿಕೆ ಹೇಳಬೇಕಾಗಿತ್ತು. ಹಾಗೇ ಏನಾದರು ಸಂಸಾರದಲ್ಲಿ ಕಡಿಮೆ ಬಿದ್ದರೆ ಹತ್ತು- ಐದು ರೂಪಾಯಿಗಳ ಸಹಾಯಮಾಡುತ್ತಿದ್ದೆವು. ಅದನ್ನು ನೀವು ಬಳಸಿಕೊಂಡು ಬಂದಂತಹ ತೊಂದರೆಗಳನ್ನು ನೀಗಿಸಿಕೊಳ್ಳಬೇಕಾಗಿತ್ತು. ಅದು ಬಿಟ್ಟು ಹೀಗೆ ನನ್ನ ಮಗಳನ್ನು ತವರು ಮನೆಗೆ ಏಕೆ ಕಳಿಸಿದಿರಿ? ಎಂದು ಪ್ರಶ್ನೆ ಮಾಡುತ್ತಾಳೆ.

ಹಾಗೇ ಮುಂದುವರೆದು ಈಗಲೂ ಕೂಡಾ ಕಾಲ ಮಿಂಚಿಲ್ಲ, ನನ್ನ ಮಗಳು ಚಿಕ್ಕವಳು, ಅವಳಿಗೆ ಕರೆದುಕೊಂಡು ಹೋಗಿ ಒಳ್ಳೆಯ ಶಿಕ್ಷಣ, ನಡತೆಗಳನ್ನು ತಮ್ಮ ಕುಟುಂಬಕ್ಕೆ ಹೊಂದಿಕೊಳ್ಳುವ ಹಾಗೆ ನಡೆಸಿಕೊಂಡು ಅವಳಿಗೆ ತಿಳುವಳಿಕೆ ಕೊಡಬೇಕೆಂದು ಬೀಗತಿಯಲ್ಲಿ ನಿವೇದಿಸಿಕೊಳ್ಳುತ್ತಾಳೆ. ಆಗ ಮಗನ ತಾಯಿ ಬೀಗತಿಗೆ ಹೇಳುತ್ತಾಳೆ. ಹಾಗಿದ್ದರೆ ನಾಲ್ಕು ಜನ ಸಮಾಜದ ಹಿರಿಯರನ್ನು ಕರೆದು ಅವರ ಮಾತಿಗೆ ಬೆಲೆಕೊಟ್ಟು ನ್ಯಾಯ ಮಾಡಿ ಬಿಡುಗಡೆ ಅಥವಾ ದೂರವಾಗಿರುವ ಗಂಡ-ಹೆಂಡತಿಯರಿಬ್ಬರಿಗೂ ಹೊಂದಿಕೆ ಮಾಡಿ ಆಶೀರ್ವಾದ ಮಾಡ ಬಹುದಲ್ಲ ಎನ್ನುತ್ತಾಳೆ.

ಆಗ ಕೊನೆಯಲ್ಲಿ ಅಳಿಯನಾದವನು ಬಂದು "ನಿನ್ನ ಮಗಳು ನನಗೆ ಬಿಟ್ಟಿರುವುದಕ್ಕೆ ನಿಮ್ಮ ಕುಮಕ್ಕು ಇದ್ದಿರಬಹುದು, ನೀವು ಕೊಟ್ಟಿರುವ ಸಲಿಗೆಯಿಂದಲೇ ಈ ರೀತಿ ವರ್ತನೆ ಮಾಡುತ್ತಿದ್ದಾಳೆ. ಆಕೆಗೆ ಒಳ್ಳೆಯ ಬುದ್ಧಿ ಕಲಿಸಿ, ತಿಳುವಳಿಕೆ ಹೇಳಿ ಕಳಿಸಿಕೊಡಬೇಕಾಗಿತ್ತು. ನೀವು ನಿಮ್ಮ ಮನೆಯಲ್ಲಿ ಮಗಳನ್ನು ಇಟ್ಟುಕೊಂಡು ತಪ್ಪು ಮಾಡಿದಿರಿ. ಆಗಲೇ ಅವಳಿಗೆ ತಿಳುವಳಿಕೆ ಹೇಳಿ ಕಳಿಸಿದರೆ ಇಲ್ಲಿಯ ತನಕ ನಮ್ಮಿಬ್ಬರ ಸಂಸಾರ ಬಹಳ ಚೆನ್ನಾಗಿ ನಡೆಯುತ್ತಿತ್ತು", ಎಂದು ಅಳಿಯ ಅತ್ತೆಗೆ ಹೇಳುತ್ತಾನೆ. ಒಟ್ಟಿನಲ್ಲಿ ಗಂಡ-ಹೆಂಡತಿಯರಿಬ್ಬರಲ್ಲಿ ವಿರಸ ಉಂಟಾಗಿ ಮತ್ತು ಎರಡು ಬೀಗರ ಕುಟುಂಬಗಳಲ್ಲಿ ಪರಸ್ಪರ ತಿಳುವಳಿಕೆ ಇಲ್ಲದೆ ಆಗುವ ಪ್ರಮಾದ ಈ ಹಾಡಿನಲ್ಲಿ ವ್ಯಕ್ತವಾಗಿದೆ.

೪. ಅರಿಶಿಣ ಹಚ್ಚುವ ಪದ

೧. ಸೋನಾ ನ್ಹು ಫಿತಳಿ ಮ್ಹಾ ಹಳದ ಲಾವೋಹೋ,
ಹಳದ ಲಾವೋಹೋ
ಸೋನಾ ನ್ಹು ಫಿತಳಿ ಮ್ಹಾ ಹಳದ ಭರ್ರ್ಯೊಹೋ,
ಹಳದ ಭರ್ರ್ಯೊಹೋ
ಹಮಾರು ತುಮಾರು ಲಾಡು ಹಳದ ಮಾ ಮಿಳ್ಳುಚ್ಚಹೋ,
ಹಳದ ಮಾ ಮಿಳ್ಳುಚ್ಚಹೋ

೨. ಚಾಂದಿನಾ ಫಿತ್ತಳಿ ಮ್ಹಾ ಕಿಸಕೋ ಬಿ ಬರ್‍ರ್ಯೋಹೋ,
ಕಿಸಕೋ ಬಿ ಬರ್‍ರ್ಯೋಹೋ
ಸೋನಾ ನ್ಹು ಫಿತ್ತಳಿ ಮಾ ಅಕ್ಷದ ಲಾವೋಹೋ,
ಅಕ್ಷದ ಲಾವೋಹೋ
ಹಮಾರು ತುಮಾರು ಲಾಡು ಅಕ್ಷದ ಮಿಳ್ಳುಚ್ಯೋ,
ಅಕ್ಷದ ಮಿಳ್ಳುಚ್ಯೋ

೩. ಸೋನಾ ನ್ನು ಘಿತ್ತಳಿ ಮ್ಮಾ ಕುಕ್ಕು ಬಿ ಲಾಹೋವ್ವೋ,
ಕುಕ್ಕು ಬಿ ಲಾಹೋವ್ವೋ
ಸೋನಾ ನ್ನು ಘಿತ್ತಳಿ ಮ್ಮಾ ಹೋಟಿ ಬಿ ಬರೋಹೋ,
ಹೋಟಿ ಬಿ ಬರೋಹೋ
ಹಮಾರು ತುಮಾರು ಲಾಡು ಮಿಳ್ಳುಚ್ಚಿ ಹೋ, ಪ್ರೇಮ್,
ಮಿಳ್ಳುಚ್ಚಿ ಹೋ,
(*ಸರೋಜಾ, ಗಾರಂಪಳ್ಳಿ*)

ಈ ಮೇಲಿನ ಹಾಡು ಮದುಮಗಳಿಗೆ ಮದುವೆ ಸಂದರ್ಭದಲ್ಲಿ ಮದುವೆ ಚಪ್ಪರದಲ್ಲಿ ಕೂಡಿಸಿ, ಅರಿಶಿಣ ಹಚ್ಚುವಾಗ ಐದು ಜನ ಮುತ್ತೈದೆಯರು ಹಾಡುತ್ತಾರೆ. ಮೊದಲಿಗೆ ಬಂಗಾರದ ತಟ್ಟೆಯಲ್ಲಿ ಅರಿಷಿಣ ತನ್ನಿರೇ, ಅರಿಶಿಣ ತನ್ನಿರೇ, ಆ ಅರಿಶಿಣವನ್ನು ಮದುಮಗಳಿಗೆ ಹಚ್ಚಿರಿ, ಅರಿಶಿಣದಲ್ಲಿಯೇ ಬೀಗರ ಪ್ರೇಮ ಶಾಶ್ವತವಾಗಿರುತ್ತದೆ ಎಂದು ಆ ನುಡಿಯ ಸಾಲಿನಲ್ಲಿ ಹೇಳುತ್ತದೆ. ಹಾಗೆಯೇ ಮುಂದುವರೆದು ಬೆಳ್ಳಿಯ ತಟ್ಟೆಯಲ್ಲಿಯೂ ಅರಿಶಿಣ, ಅಕ್ಷತೆ, ತರಬೇಕು. ಈ ನಮ್ಮ ಮದುಮಗಳಿಗೆ ಹಚ್ಚಿರೆ, ಕೊನೆಯಲ್ಲಿ ಮದುಮಗಳಿಗೆ ಕುಂಕುಮ ಹಚ್ಚಿ ಸೀರೆ ಕುಪ್ಪಸ ತೊಡಿಸಿ ಮುತ್ತೈದೆ ಮಹಿಳೆಯರೆಲ್ಲರೂ ಸೇರಿ ಬೆಳಗಿ ಕಳಸಿರೇ ಎಂದು ಹೇಳಿ ಈ ಮೇಲಿನವುಗಳಲ್ಲಿಯೇ ನಮ್ಮ ನಿಮ್ಮ ಕ್ಷೇಮ ಶಾಶ್ವತವಾಗಿರುತ್ತದೆ ಎಂದು ಐದು ಜನ ಮುತ್ತೈದೆಯರು ಹಾಡುತ್ತಾರೆ. ಈ ಮುತ್ತೈದೆಯರಿಗೆ ಮೊದಲಿನವರು ಹಾಡಿನ ಪಲ್ಲವಿ, ಉಳಿದವರು ಹಾಡಿನ ಪಲ್ಲವಿಯನ್ನು ಪುನರ್ ಹಾಡುವುದಾಗಿರುತ್ತದೆ.

೫. ಮದುಮಗಳು ಗಂಡನ ಮನೆಗೆ ಹೋಗುವಾಗ ಹಾಡುವ ಪದ

೧. ನೌರಾಣಿ ಮೋಟಾರ್ ವೈಟ್ ತೀಸಜೀರೇ
ನೌರಾಣಿ ಮೋಟಾರ್ ವೈಟ್ ತೀಸಜೀರೇ
ಆಜ್ ಮರಿ ಸುಮನ್ ಸಸರಾಲ್ ಚಲೀ ರೇ
ಆಜ್ ಮರಿ ಸುಮನ್ ಸಸರಾಲ್ ಚಲೀ ರೇ ||ಪ||

ಆಯಿ ಬಿ ರೋಜಾನ್, ಬಾಪ್ ಬಿ ರೋಜನ್
ಆಯಿ ಬಾಪ್ಪುನು ಮನ್ ದುಃಖ ಚಲೀ ರೇ
ಆಯಿ ಬಾಪ್ಪುನು ಮನ್ ದುಃಖ ಚಲೀ ರೇ
ಆಜ್ ಮರಿ ಸುಮನ್ ಸಸರಾಲ್ ಚಲೀ ರೇ
ಆಜ್ ಮರಿ ಸುಮನ್ ಸಸರಾಲ್ ಚಲೀ ರೇ

೨. ನೌರಾಣಿ ಮೋಟಾರ ಚಮ ಕೀ ತಿಸಜಿರೇ
ನೌರಾಣಿ ಮೋಟಾರ ಚಮ ಕೀ ತಿಸಜಿರೇ
ಆಜ್ ಮರಿ ಸುಮನ್ ಸಸರಾಲ್ ಚಲೀ ರೇ
ಆಜ್ ಮರಿ ಸುಮನ್ ಸಸರಾಲ್ ಚಲೀ ರೇ ||ಪ||

ಮೋಮೇವ್ವ ಬಿ ರೋಜನ ಮಾಮಾ ಬಿ ರೋಜನ್
ಮೇಮ್ಮಾ ಮಾಮಾನು ಮನ್ ದುಃಖ ಚಲಿರೇ
ಮೇಮ್ಮಾ ಮಾಮಾನು ಮನ್ ದುಃಖ ಚಲಿರೇ
ಆಜ್ ಮೆರಿ ಸುಮನ್ ಸಸರಾಲ್ ಚಲಿ ರೇ
ಆಜ್ ಮೆರಿ ಸುಮನ್ ಸಸರಾಲ್ ಚಲಿ ರೇ

೩. ನೌರಾಣಿ ಮೋಟಾರ, ನೌರಾಣಿ ಮೋಟಾರ ದರವಾಜ್ ಉಮ್ ರೀ ರೇ,
ನೌರಾಣಿ ಮೋಟಾರ, ನೌರಾಣಿ ಮೋಟಾರ ದರವಾಜ್ ಉಮ್ ರೀ ರೇ,
ಆಚ್ ಮರಿ ಸುಮನ್ ಸಸರಾಲ್ ಚಲೀ ರೇ
ಆಚ್ ಮರಿ ಸುಮನ್ ಸಸರಾಲ್ ಚಲೀ ರೇ ||ಪ||

ಬೇನೋ ಬಿ ರೋಜನ್ ಮೇವ್ವ ನಾ ಬಿ ರೋಜನ್
ಬೇನೋ ಮೇವ್ವ ನೋ ಮನ್ ದುಃಖ ಚಲಿ ರೇ
ಬೇನೋ ಮೇವ್ವ ನೋ ಮನ್ ದುಃಖ ಚಲಿ ರೇ
ಆಜ್ ಮರಿ ಸುಮನ್ ಸಸರಾಲ್ ಚಲೀ ರೇ
ಆಜ್ ಮರಿ ಸುಮನ್ ಸಸರಾಲ್ ಚಲೀ ರೇ

೪. ನೌರಾಣಿ ಮೋಟಾರ, ನೌರಾಣಿ ಮೋಟಾರ ರೋಡ್ ಪರ್ ಉಮ್ ರೀ ರೇ
ನೌರಾಣಿ ಮೋಟಾರ, ನೌರಾಣಿ ಮೋಟಾರ ರೋಡ್ ಪರ್ ಉಮ್ ರೀ ರೇ
ಆಚ್ ಮರಿ ಸುಮನ್ ಸಸರಾಲ್ ಚಲೀ ರೇ
ಆಚ್ ಮರಿ ಸುಮನ್ ಸಸರಾಲ್ ಚಲೀ ರೇ ||ಪ||

ಬಾಯ ಬಿ ರೋಜನ್ ಬೋಜಾಯ್ ರೋಜನ್
ಬಾಯ್ ಬೋಜಾನು ಮನ್ ದುಃಖ ಚಲೀ ರೇ
ಬಾಯ್ ಬೋಜಾನು ಮನ್ ದುಃಖ ಚಲೀ ರೇ
ಆಜ್ ಮರಿ ಸುಮನ್ ಸಸರಾಲ್ ಚಲೀ ರೇ
ಆಜ್ ಮರಿ ಸುಮನ್ ಸಸರಾಲ್ ಚಲೀ ರೇ

ಹೊಸದಾಗಿ ಮದುವೆ ಮಾಡಿಕೊಂಡು ಗಂಡನ ಮನೆಗೆ ಹೋಗುವಾಗ ಮದುಮಗಳ ತಂದೆ ತಾಯಿ, ಬಂಧುಬಳಗದವರಿಗೆ ಆಗುವ ನೋವು ಈ ಹಾಡಿನಲ್ಲಿ ಪ್ರಕಟವಾಗಿದೆ. ನೌರಣೆ ಮೋಟಾರ ಲೈಟ್ ತೀಸಜೀ ರೇ ಎಂದರೆ ಮದುಮಗನ ಮೋಟಾರು ಲೈಟಿನಿಂದ ಚಳಪಳ ಮಿಂಚುತ್ತಿದೆ. ಈ ಮಿಂಚುವ ಮೋಟಾರಿನಲ್ಲಿ ಮದುಮಗಳನ್ನು ಇವತ್ತಿನ ದಿನ ಗಂಡನ ಮನೆಗೆ ಕಳಿಸಿಕೊಡುತ್ತೇವೆ ಎಂಬ ಪಲ್ಲವಿ ಮೂಲಕ ಆರಂಭವಾದ ಈ ಹಾಡು ೨ನೇ ಸಾಲಿನ ತಾಯಿ ಮತ್ತು ತಂದೆ ಇಬ್ಬರೂ ಆಳುತ್ತಾ ದುಃಖ ಪಡುತ್ತಿದ್ದಾರೆ ಎಂದು, ಹಾಗೆಯೇ ೩ನೇ ಸಾಲಿನಲ್ಲಿ ಸೋದರ ಮಾವ ಮತ್ತು ಸೋದರತ್ತೆ ಕೂಡಾ ಬಹಳ ದುಃಖಪಟ್ಟುಕೊಂಡು ಆಳುತ್ತಿದ್ದಾರೆ ಎಂದು ಮತ್ತು ೪ನೇ ನುಡಿಯ ಸಾಲಿನಲ್ಲಿ ಅಕ್ಕ ಅಕ್ಕನ ಗಂಡ ಭಾವನಿಗೆ ೫ನೆಯ ಸಾಲಿನಲ್ಲಿ ಅಣ್ಣ ಮತ್ತು ಅತ್ತಿಗೆ ಕೂಡಾ ಬಹಳ ದುಃಖ ಪಟ್ಟುಕೊಂಡು ಆಳುತ್ತಿದ್ದಾರೆ. ಇವರಿಬ್ಬರ ಮನಸ್ಸಿನಲ್ಲಿ ದುಃಖ ಉಮ್ಮಳಿಸಿ ಬರುತ್ತಿದೆ ಎಂದು ಹೇಳುತ್ತಾ ಮದುಮಗನ ಮೋಟಾರ್ ಮನೆಯ ಮುಂದೆ ನಿಂತಿದೆ. ಮದುಮಗನ ಗಾಡಿಯ ಬಾಗಿಲು ತೆರೆದು ಮದುಮಗಳನ್ನು ಸ್ವಾಗತಿಸುತ್ತಿದೆ ಎಂದು ವಿಶ್ಲೇಷಿಸುವ ಮೂಲಕ, ಈ ಹಾಡಿನಲ್ಲಿ ನೋವು ದುಃಖ ಸಂತೋಷದ ಬೀಳ್ಕೊಡುಗೆಯನ್ನು ಮದುಮಗಳಿಗೆ ನೀಡಲಾಗುತ್ತದೆ.

೬. ವ್ಯಕ್ತಿಗೆ ಪೋಲಿಸ್ ಹುದ್ದೆ ಸಿಕ್ಕಾಗ ಸಂತೋಷಪಡುವ ಪದ

ಭರತಿ ಹೋಯೋ ಗೋ ಪೋಲಿಸ್ ಮ್ಮಾ, ಬಾಯ್ ಮರ ನಾನಾ ಹುಂಬರ್ ಮ್ಮಾ
ಭರತಿ ಹೋಯೋ ಗೋ ಪೋಲಿಸ್ ಮ್ಮಾ, ಬಾಯ್ ಮರ ನಾನಾ ಹುಂಬರ್ ಮ್ಮಾ ||ಪ||

ಭಾರಿಕ್ ಭಾರಿಕ್ ಚ್ಹೋಕ್ಹೋನ್ಹು ಬಿರಿಯಾನಿ ಕರಿ
ಭಾರಿಕ್ ಭಾರಿಕ್ ಚ್ಹೋಕ್ಹೋನ್ಹು ಬಿರಿಯಾನಿ ಕರಿ
ಕಾಯೋನಾ ಈಗ ಗಡಬಡ ಮ್ಮಾ, ಬಾಯಿ ಮರ ನಾನಾ ಹುಂಬರ್ ಮ್ಮಾ
ಕಾಯೋನಾ ಈಗ ಗಡಬಡ ಮ್ಮಾ, ಬಾಯಿ ಮರ ನಾನಾ ಹುಂಬರ್ ಮ್ಮಾ ||ಭರತಿ||

ನಾನಾ ನಾ ಸುರಿಯೇನ್ಹು ಜಮುನಾ ಭರಾಯಿ
ನಾನಾ ನಾ ಸುರಿಯೇನ್ಹು ಜಮುನಾ ಭರಾಯಿ
ಘೀಯನ ಈಗ ಗಡಬಡ ಮ್ಮಾ, ಬಾಯಿ ಮರ ನಾನಾ ಹುಂಬರ ಮ್ಮಾ
ಘೀಯನ ಈಗ ಗಡಬಡ ಮ್ಮಾ, ಬಾಯಿ ಮರ ನಾನಾ ಹುಂಬರ ಮ್ಮಾ ||ಭರತಿ||

ಕೌಳಾ ಕೌಳಾ ಪಾನೌನೋ ಬೀಡಿಯಾ ಭರಾಯಿ
ಕೌಳಾ ಕೌಳಾ ಪಾನೌನೋ ಬೀಡಿಯಾ ಭರಾಯಿ
ಕಾಯೋನಾ ಈಗ ಗಡಬಡ ಮ್ಮಾ, ಬಾಯಿಮರ ನಾನಾ ಹುಂಬರ ಮ್ಮಾ
ಕಾಯೋನಾ ಈಗ ಗಡಬಡ ಮ್ಮಾ, ಬಾಯಿಮರ ನಾನಾ ಹುಂಬರ ಮ್ಮಾ ||ಭರತಿ||

ಈ ಮೇಲಿನ ಪದದ ಅರ್ಥವಿವರಣೆ ಹೀಗಿದೆ. ಹೊಸದಾಗಿ ಪೊಲೀಸ್ ನೌಕರಿಗೆ ಆಯ್ಕೆಯಾದ ಅಣ್ಣ ಸಂಭ್ರಮ ಸಂತೋಷದಿಂದ ಮನೆಯಲ್ಲಿ ಮಾಡಿದ ವಿವಿಧ ಪದಾರ್ಥಗಳನ್ನು ಊಟ ಮಾಡದೆ

ಹಾಗೆ ಗಡಬಡ ಮಾಡಿ ಹೊರಗಡೆ ಹೋದನಲ್ಲ ಎಂದು ತಂಗಿ ನೋಂದುಕೊಂಡು ಹಾಡುತ್ತಾಳೆ. ಮೊದಲನೆಯ ಸಾಲಿನಲ್ಲಿ ನಮ್ಮ ಅಣ್ಣ ಸಣ್ಣ ವಯಸ್ಸಿನಲ್ಲಿಯೇ ಪೊಲೀಸ್ ನೌಕರಿಯಲ್ಲಿ ಭರ್ತಿ ಹೊಂದಿದನು. ಈ ಒಂದು ಸಂತೋಷದ ಸುದ್ದಿ ತಿಳಿದು ತಂಗಿಯಾದ ನಾನು ವಿವಿಧ ಭಕ್ಷ್ಯ ಭೋಜನವನ್ನು ಮಾಡಿದೆ. ಅಣ್ಣ ಊಟ ಮಾಡದೆ ಗಡಬಡ ಮಾಡಿ ಹೊರಗಡೆ ಹೋದನಲ್ಲಾ ಎಂದು ನೊಂದುಕೊಳ್ಳುತ್ತಾಳೆ. ಎರಡನೆಯ ಸಾಲಿನಲ್ಲಿ ಸಣ್ಣ-ಅಕ್ಕಿ ತಂದು ಚಿತ್ರಾನ್ನ ಮಾಡಿದೆ ಆದರೆ, ಅಣ್ಣ ಗಡಬಡ ಮಾಡಿ ಸಂತೋಷದಲ್ಲಿ ಹೊರಗಡೆ ಹೊದನಲ್ಲಾ ಎನ್ನುತ್ತಾಳೆ. ಮೂರನೆಯ ಸಾಲಿನಲ್ಲಿ ಸಿಹಿ ನೀರು ತಂದು ತುಂಬಿ ಇಟ್ಟಿದ್ದೆ. ಆದರೆ, ಅಣ್ಣ ನೀರನ್ನು ಸಹ ಕುಡಿಯದೆ ಹಾಗೆ ಹೋದನಲ್ಲಾ ಎನ್ನುತ್ತಾಳೆ. ನಾಲ್ಕನೆಯ ಸಾಲಿನಲ್ಲಿ ಚಿಗುರು ವೀಳ್ಯದೆಲೇ ತಂದು ಪಾನನ್ನು ಕಟ್ಟಿ ಇಟ್ಟಿದ್ದೆ. ಆದರೆ ಅಣ್ಣ ಗಡಬಡ ಮಾಡಿ ಕಟ್ಟಿದ ಪಾನು ಇಲ್ಲಿಯೇ ಬಿಟ್ಟು ಹೋದನಲ್ಲಾ ಎಂದು ತಂಗಿ ಮನನೊಂದುಕೊಂಡು ಸಂತೋಷದಲ್ಲಿ ಹಾಡುತ್ತಾಳೆ. ಒಟ್ಟಿನಲ್ಲಿ ಇವರಿಗೆ ಸರ್ಕಾರಿ ನೌಕರಿ ಎಂದರೆ ಮನೆಯಲ್ಲಿ ಎಷ್ಟೊಂದು ಸಂಭ್ರಮ ಪಡುವುದು ಈ ಹಾಡಿನಲ್ಲಿ ವ್ಯಕ್ತವಾಗುತ್ತದೆ.

೨. ಗಾದೆಗಳು (ಅರ್ಥನೊ ವ್ಹಾತ್)

ಪ್ರಪಂಚದಲ್ಲಿ ಗಾದೆಯಿಲ್ಲದ ಭಾಷೆ ಇಲ್ಲ, ಗಾದೆ ಬಳಸದ ಕುಟುಂಬಗಳಿಲ್ಲ, ಗಾದೆ ತಿಳಿಯದ ವ್ಯಕ್ತಿಗಳಿಲ್ಲ ಎಂಬಂತೆ ಪ್ರತಿಯೊಂದು ಜನಾಂಗದ ಭಾಷೆಯಲ್ಲಿ ಗಾದೆಗಳಿಗೆ ಹೆಚ್ಚಿನ ಮಹತ್ವವಿದೆ. ಪರಸ್ಪರ ಮಾತಿನ ಮಧ್ಯದಲ್ಲಿ ಅನಿವಾರ್ಯವಾಗಿ ಗಾದೆಗಳು ತೂರಿಕೊಳ್ಳುತ್ತವೆ. ತೂಕ ತಪ್ಪದಂತೆ ಮಾತನ್ನು ಪರಿಣಾಮಕಾರಿಯಾಗಿ ಅಭಿವ್ಯಕ್ತಿಸಲು ಗಾದೆಗಳನ್ನು ಅನೇಕ ಸಮುದಾಯಗಳಲ್ಲಿ ಬಳಸಲಾಗುತ್ತದೆ.

ಈ ಗಾದೆಗಳನ್ನು ಭಾಗ್‌ರವರು ಜಾನಪದ ಭಾಷಿಕ ವರ್ಗದಲ್ಲಿ ಸೇರಿಸುತ್ತಾರೆ. ಆದರೆ ಇವುಗಳಲ್ಲಿ ಸಾಹಿತ್ಯಕ ಗುಣಧರ್ಮವೇ ಹೆಚ್ಚಾಗಿರುವುದರಿಂದ ಇವುಗಳನ್ನು ಸಾಹಿತ್ಯಕ ಬಗೆಯಲ್ಲಿ ಸೇರಿಸುವುದು ಸೂಕ್ತವೆನಿಸುತ್ತದೆ. ಈ ಗಾದೆ ಮಾತುಗಳನ್ನು ಜನಪದರು "ವೇದ ಸುಳ್ಳಾದರೂ ಗಾದೆ ಸುಳ್ಳಾಗುವುದಿಲ್ಲ" ಎಂದು ಭಾವಿಸುತ್ತಾರೆ. ಗಾದೆ ಮಾತಿನಲ್ಲಿ ಜೀವನಾನುಭವ ದರ್ಶನವುಳ್ಳ ಮಾಗಿದ ಪ್ರಜ್ಞೆ ಮತ್ತು ವ್ಯಕ್ತಿಯ ಬದುಕಿನಲ್ಲಿ ಕಂಡ ತೀವ್ರತರವಾದ ಅನುಭವಗಳಿಂದ ಈ ಗಾದೆ ಮಾತುಗಳು ರಚನೆಯಾಗಿವೆ. ಹಿರಿಯರ ಅನುಭವದಾಳದಿಂದ ಬಂದ ಈ ಗಾದೆ ಮಾತುಗಳು ಒಂದೇ ವಾಕ್ಯ ಇಲ್ಲವೇ, ಒಂದೇ ರೂಪಕ ಅಥವಾ ಸಾಮ್ಯತೆಯಲ್ಲಿ ಅಡಕವಾಗಿ ಅಭಿವ್ಯಕ್ತವಾಗುತ್ತವೆ. ಇದರಲ್ಲಿ ಪ್ರಾಸಬದ್ಧವಾದ ಸೂಕ್ತ ಸಾಲುಗಳಿದ್ದು, ಪುನರ್ ಬಳಕೆಯಾಗುತ್ತಿರುತ್ತವೆ. ಅಲ್ಲದೆ ಮುಂದಿನ ಪಿಳಿಗೆಗಳಿಗೆ ಈ ಗಾದೆ ಮಾತುಗಳು ತಾವಾಗಿಯೇ ನುಡಿಯಲ್ಲಿ ಹರಿದು ಬರುತ್ತಿರುತ್ತವೆ. ಇಂದಿನ ಸಾವಿರಾರು ಭಾಷೆಗಳಲ್ಲಿ ರಾಶಿ ರಾಶಿಯಾಗಿರುವ ಈ ಗಾದೆ ಮಾತುಗಳನ್ನು ಕ್ರೂಢಿಕರಿಸ ಲಾಗುತ್ತಿದೆ. ಈ ಗಾದೆ ಮಾತಿನ ನುಡಿಗಳ ರೂಪಕಗಳು ವ್ಯಾಪ್ತಿಯಲ್ಲಿ ಚಿಕ್ಕವಾಗಿದ್ದರೂ ಅರ್ಥ ವ್ಯಾಪ್ತಿಯಲ್ಲಿ ವಿಶಾಲವಾಗಿದೆ.

ಫಿಸಾಡಿ ಸಮುದಾಯದವರು ಗಾದೆ ಮಾತುಗಳನ್ನು ತಮ್ಮ ಬದುಕಿನ ವಿವಿಧ ಸಂದರ್ಭಗಳಲ್ಲಿ ಸಕಾಲಿಕವಾಗಿ ಬಳಸುತ್ತಾರೆ. ಇವರ ಜೀವನದ ಪ್ರತಿಯೊಂದು ಮುಖಗಳು ಇವುಗಳಲ್ಲಿ ಪ್ರತಿಬಿಂಬಿತವಾಗಿವೆ. ಅಲ್ಲದೆ ಅವರ ಸಾಂಸ್ಕೃತಿಕ ಜೀವನ ಮೌಲ್ಯಗಳನ್ನು ಅರ್ಥಪೂರ್ಣವಾಗಿ ಬಿಂಬಿಸುತ್ತವೆ. ಇವರು ಅನೇಕ ಗಾದೆ ಮಾತುಗಳನ್ನು ಬಳಸುವುದರ ಮೂಲಕ ತಮ್ಮ ಕುಟುಂಬ, ಬಂಧು ಬಳಗ, ಸಮುದಾಯದಲ್ಲಿ ಸಂದರ್ಭವನ್ನು ಸಾರವಾಗಿ ಬಳಸಿ ಸಮಾಜದಲ್ಲಿ ಘಟಿಸುವ ಘಟನೆಗಳಿಗನುಸಾರವಾಗಿ ನೀತಿ ಭೋದನೆ ಮಾಡುತ್ತಾರೆ. ಈ ಗಾದೆ ಮಾತಿನ ನುಡಿದೀಪ್ತಿಗಳನ್ನು ಇವರು ತಮ್ಮ ಬಾಳಬಟ್ಟೆಯ ಕೈದೀವಿಗೆಗಳಾಗಿ ಬಳಸುತ್ತಾರೆ. ಇವರಲ್ಲಿ ಜಾತಿ, ನೀತಿ, ಉದ್ಯೋಗ, ಕಸುಬು, ಕುಟುಂಬ, ವ್ಯವಸಾಯ, ಶೀಲ, ಸ್ವಭಾವ, ಮಳೆ, ಕಾಲ, ಬೆಳೆ ಇತ್ಯಾದಿಗಳಿಗೆ ಸಂಬಂಧಿಸಿದ ಸಾವಿರಾರು ಗಾದೆಗಳು ಬಳಕೆಯಾಗುತ್ತವೆ. ಅವುಗಳಲ್ಲಿ ಕೆಲವುಗಳನ್ನು ಇಲ್ಲಿ ರಚಿಸಲ್ಪಟ್ಟಿದೆ.

೧. ಘುರ್ ಮ್ನ ನಹೀ ಧಾನು, ಹೆನಿನ್ ಪೂಲ್ ಮಾಂಗಾ ಲೀಚ್

"ಹೊಟ್ಟೆಗೆ ಹಿಟ್ಟು ಇಲ್ಲದಿದ್ರು, ಜುಟ್ಟಿಗೆ ಮಲ್ಲಿಗೆ ಹೂ ಬೇಕು"

೨. ಸಾಪ ಬ್ಹೀ ಮರ್ನ್ನೂ, ಪನ್ ಲಾಕಡ್ ನ್ಹಹಿ ತೊಟ್ನು

"ಹಾವು ಸಾಯಬೇಕು; ಕೋಲು ಮುರಿಯಬಾರದು"

೩. ಹಾತ್ ಮೆ ನ್ಹಹಿ ಹಡಕಾ, ಬಜಾರ್ ನ್ನ ಚ್ಯಾಲಿ ಪಡಕಾ

"ಕೈಯಲ್ಲಿ ಕಾಸಿಲ್ಲ; ಸಂತೆಗೆ ಹೋಗುತ್ತಾನೆ"

೪. ಏನೋ ಕಸಾನ್ಹೋ ತೋ, ಲಾಗೇತೋ, ಬೊಡಕಿನ ಕೇಶೋನ್ಹೊ ವಾಗಿಚ್ಹ್

"ಯಾರಿಗೆ ಏನೋ ಚಿಂತೆ ಇದ್ದರೆ, ಅವಳಿಗೆ ಕೂದಲು ಚಿಂತೆ"

೫. ಮುಂಡಾಮ್ ರಾಮ್ ರಾಮ್ ಬಗಲ್ ಮೇ ಚೂರಿ

"ಬಾಯಿಯಲ್ಲಿ ರಾಮ ಮಂತ್ರ, ಬಗಲಲ್ಲಿ ಚಾಕು"

೬. ದಿವಸ್ ಮ ಸಾಧು ಚ್ಛ, ರಾತಮ ಚೋರ್ ಚ್ಛ

"ಹಗಲಿನಲ್ಲಿ ಸಾಧು ಸನ್ಯಾಸಿ, ರಾತ್ರಿಯಲ್ಲಿ ಕಳ್ಳ ಸುಳ್ಳಿ ಮಗ"

೭. ದೂದ್ ನ್ಹೂ ದೂದ್,ಪಾನಿನ್ಹೂ ಪಾನಿ

"ಹಾಲಿನದ್ದು ಹಾಲಿಗೆ, ನೀರಿನದ್ದು ನೀರಿಗೆ"

೮. ಹಾಂಗ್ ಪರ್ ಚ್ಛ ಶೇರವಾನಿ, ಮದ್ ಮಲೇನ ಚ್ಛ ಪರೇಶ್ಯಾನಿ

ಉಪರ್ ಶೇರವಾನಿ, ಅಂದರ್ ಪರಿಷಾನಿ

"ಹೊರಗಡೆ ಕೋಟು, ಒಳಗಡೆ ಪೀಕಲಾಟ"

೩. ಕಥೆಗಳು

ಘಿಸಾಡಿ ಜನಪದ ಸಾಹಿತ್ಯದಲ್ಲಿ ಕಥೆಗಳು ಒಂದು ಪ್ರಮುಖ ಸಾಹಿತ್ಯದ ಪ್ರಕಾರವಾಗಿದೆ. ಇವರ ಕಥೆಗಳನ್ನು ಸಂಗ್ರಹಿಸುವುದು ಬಹಳ ಕಷ್ಟದ ಕೆಲಸವಾಗಿದೆ. ಅಂತೆಯೇ ಇಲ್ಲಿಯವರೆಗೆ ಇವರ ಕಥೆಗಳನ್ನು ಕುರಿತ ಒಂದು ಸಂಗ್ರಹ ಕೂಡಾ ಪ್ರಕಟವಾಗಿಲ್ಲ. ಘಿಸಾಡಿ ಸಮುದಾಯದವರು ಜನಪದ ಕತೆಗಳನ್ನು ಹೆಚ್ಚಾಗಿ ಬಿಡುವಿನ ಸಮಯದಲ್ಲಿ, ಪ್ರಯಾಣದ ಸಮಯದಲ್ಲಿ, ಕಟ್ಟಿಗೆ ಕುಳ್ಳು ಆರಿಸುವಾಗ, ಅಜ್ಜ ಅಜ್ಜಿಯರು ಮೊಮ್ಮಕ್ಕಳನ್ನು ರಾತ್ರಿ ಮಲಗಿಸುವಾಗ, ಬೆಳದಿಂಗಳ ತಂಪು ಕಿರಣಗಳ ಅಡಿಯಲ್ಲಿ ಮದುವೆ ಸಂಭ್ರಮದಲ್ಲಿ, ಸಾಂಸ್ಕೃತಿಕ ಹಬ್ಬ ಹರಿದಿನಗಳಲ್ಲಿ ಕಥೆ ಹೇಳುವುದನ್ನು ರೂಢಿಸಿಕೊಂಡಿದ್ದಾರೆ. ಆದರೆ ಇತ್ತೀಚಿಗೆ ಇವರಲ್ಲಿ ಕಥೆ ಕೇಳುವ, ಹೇಳುವ ಕ್ರಮ ಕಡಿಮೆಯಾಗುತ್ತಿದೆ. ಇಂದು ರೇಡಿಯೋ, ಟಿ.ವಿ. ಸಿನಿಮಾ, ಮನೋರಂಜನೆಯ ಮಾಧ್ಯಮಗಳು ಇವರ ಜೀವನದಲ್ಲಿ ಪ್ರವೇಶಿಸಿದ್ದೇ ಇದಕ್ಕೆ ಕಾರಣವಾಗಿದೆ. ಹೀಗಾಗಿ ಘಿಸಾಡಿ ಸಮುದಾಯದ ಜನಪದ ಕಥೆಗಳು ಶ್ರಮವಹಿಸಿ ವಕ್ತೃಗಳಿಂದ ಸಂಗ್ರಹಿಸಲಾಗಿದೆ. ಇವರ ಕಥೆಗಳಲ್ಲಿ ಪ್ರಾಣಿ ಕಥೆಗಳು, ಸಾಮಾನ್ಯ ಕಥೆಗಳು, ತಮಾಷೆ ಹಾಗೂ ವಿನೋದ ವೃತ್ತಾಂತಗಳ ಕಥೆಗಳು, ನೀತಿ ಕಥೆಗಳು, ಮೂರ್ಖರ ಕಥೆಗಳು, ಮಕ್ಕಳ ಕಥೆಗಳು ಹೀಗೆ ಮುಂತಾದ ಪ್ರಕಾರಗಳಲ್ಲಿ ಲಭ್ಯವಾಗುತ್ತವೆ. ಉದಾಹರಣೆಗೆ

೧. ಆಸೆಯೇ ದುಃಖಕ್ಕೆ ಮೂಲ

ಬುಕ್ಕ್ಯಾ ಎಂಬ ಹರಿಣಿ ಶಿಕಾರಿ ಬೇಟೆಗಾರನು ವಿಂದ್ಯಾ ಎಂಬ ಗ್ರಾಮದಲ್ಲಿ ವಾಸಿಸುತ್ತಿದ್ದನು. ಒಂದು ದಿನ ಬೇಟೆಯಾಡಲು ಅರಣ್ಯಕ್ಕೆ ಹೋದನು. ಆಗ ಚಿನ್ನದಂತಹ ಚಿಗರೆ(ಹರಣಿ)ಯೊಂದು ಕಣ್ಣಿಗೆ ಬಿತ್ತು. ಬುಕ್ಕ್ಯಾನು ಬಾಣವನ್ನು ಹೂಡಿ ಅದನ್ನು ಕೊಂದನು. ನಂತರ ಆ ಜಿಂಕೆಯನ್ನು ಕೊಂದ ಸಂತೋಷದೊಡನೆ ಮನೆಯ ಕಡೆಗೆ ಹೊರಡುತ್ತಿರುವಾಗ ಭೀಕರವಾದ ಕಾಡು ಹಂದಿಯೊಂದು ಎದುರಾಯಿತು.

ಹರಿಣಿಯನ್ನು ಕೆಳಗಿಳಿಸಿದ ಬುಕ್ಕ್ಯಾ ಬಿಲ್ಲಿಗೆ ಬಾಣ ಹೂಡಿ ಅದಕ್ಕೆ ಹೊಡೆದನು. ಹಂದಿಯು ರೋಷಾವೇಶದಿಂದ ಸಿಡಿಲಿನಂತೆ ಅಬ್ಬರಿಸಿ ಕೋರೆ ಹಲ್ಲುಗಳಿಂದ ಬುಕ್ಕ್ಯಾ ಎಂಬ ಬೇಟೆಗಾರನನ್ನು ತಿವಿದು ಕೊಂದಿತ್ತು. ನಂತರ ತಾನು ಬಾಣದಿಂದ ಗಾಯವಾಗಿ ಒದ್ದಾಡಿ ಪ್ರಾಣ ಬಿಟ್ಟಿತು. ಬುಕ್ಕ್ಯಾನು ಮತ್ತು ಹಂದಿಯೂ ಇಬ್ಬರೂ ಕಾಡಿನಲ್ಲಿ ಹೋರಾಡುವಾಗ ನೆಲದ ಮೇಲೊಂದು ನಾಗರಹಾವು ಹರಿದು ಬರುತ್ತಿತ್ತು. ಬುಕ್ಕ್ಯಾನು ಅದರ ಮೇಲೆ ಬಿದ್ದ ಕಾರಣದಿಂದಾಗಿ ಅದು ಮರಣಹೊಂದಿತ್ತು.

ಆಗಲೇ ಕುಟಿಲ ಬುದ್ಧಿ ಎಂಬ ಹೆಸರಿನ ನರಿಯೊಂದು ಅತ್ತಕಡೆಗೆ ಬಂದಿತು. ಆ ದಿನ ಇಡೀ ಕಾಡು ಓಡಾಡಿದರೂ ಅದಕ್ಕೆ ಆಹಾರ ದೊರಕದೇ ಹಸಿವಿನಿಂದ ಕಂಗೆಟ್ಟು ಹೋಗಿತ್ತು. ಒಂದೇ ಸಲ ಜಿಂಕೆ, ಹಂದಿ, ಬೇಟೆಗಾರ ಮತ್ತು ಹಾವಿನ ಮೃತ ದೇಹಗಳನ್ನು ಕಂಡಾಗ ಅದರ

ಆನಂದಕ್ಕೆ ಪಾರವೇ ಇರಲಿಲ್ಲ. ಆಗು ಅದು ತನ್ನ ಮನಸ್ಸಿನಲ್ಲಿಯೇ ಹೀಗೆಂದುಕೊಂಡಿತು. "ಆಹಾ ನಾನೆಷ್ಟು ಪುಣ್ಯವಂತನು ಹಸಿವೆಯಿಂದ ಬಳಲುತ್ತಿರುವಾಗ, ಹೇರಳವಾದ ಆಹಾರವು ನನಗೆ ದೊರಕಿದೆ". ಪ್ರಾಣಿಗಳಿಗೆ ಸಂಕಷ್ಟವು ಹೇಗೆ ಆಕಸ್ಮಾತ್ತಾಗಿ ಬಂದು ಮೇಲೆ ಎರಗುವುದೋ ಹಾಗೆಯೇ ಸುಖವು ಸಹ ಆಕಸ್ಮಾತ್ತಾಗಿಯೇ ಬಂದು ಒದಗುವುದು. ಕೆಟ್ಟಕಾಲದಲ್ಲಿ ಕೆಡಕಾಗುವಂತೆ ಒಳ್ಳೆಯ ಕಾಲದಲ್ಲಿ ಒಳಿತಾಗುತ್ತದೆ ಸುಖ-ದುಃಖಗಳು ಚಕ್ರದಂತೆ ಸುತ್ತಿ ಬರುತ್ತವೆ ಯಾವುದು ಶಾಶ್ವತವಲ್ಲ.

ಈ ಕಳೇಬರಗಳ ಮಾಂಸವು ನನಗೆ ಬಹುದಿನಗಳವರೆಗೆ ಸಾಕಾಗುತ್ತದೆ. ಉಪಾಯದಿಂದ ಒಂದೊಂದನ್ನೇ ನನ್ನ ವಾಸದ ನೆಲೆಗೆ ಸಾಗಿಸುವೆನು. ಈಗಲೇ ಇವುಗಳನ್ನಿಲ್ಲಿ ನಾನು ತಿನ್ನುವುದಿಲ್ಲ. ಈ ಬಿಲ್ಲಿಗೆ ಕಟ್ಟಿರುವ ಒಣ ಕರುಳಿನ ಹುರಿಯನ್ನು ಮಾತ್ರ ಈಗ ತಿನ್ನುವೆನು. ಅದನ್ನಾದರೂ ಸುಮ್ಮನೆ ಏಕೆ ಬಿಡಬೇಕು ವಿಚಾರಮಾಡಿ ನೋಡಿದ ನಂತರ ಲೋಭಿಯಾದ ನರಿಯು ಬಿಲ್ಲಿನ ಹುರಿಯನ್ನು ಹಲ್ಲಿನಿಂದ ಕಡಿದು ಹರಿಯಿತು.

ಹುರಿಯು ತುಂಡಾದೊಡನೆಯೇ ಬಾಗಿದ ಬಿಲ್ಲು ಸಟ್ಟನ್ನೆ ನೆಟ್ಟಗಾಗಿ ನರಿಯ ಎದೆಗೆ ಬಡಿಯಲು ಅದು ತತ್‌ಕ್ಷಣವೇ ಸತ್ತು ಹೋಯಿತು. ಹೀಗೆ ಅತಿ ಆಸೆಯಿಂದ ಅದು ತನ್ನ ಪ್ರಾಣಕ್ಕೆ ಗಂಡಾಂತರ ತಂದುಕೊಂಡಿತು ಎಂಬ ಅಂಶಗಳನ್ನೊಳಗೊಂಡ "ಆಸೆಯೇ ದುಃಖಕ್ಕೆ ಮೂಲ" ಎಂಬ ಕಲ್ಪನೆ ಈ ಕಥೆಯ ಸಾರವಾಗಿದೆ. ಇಂತಹ ಅನೇಕ ಲಘು ಕಥೆಗಳು ಘಿಸಾಡಿ ಸಮುದಾಯದ ಜನರಲ್ಲಿ ಹುದುಗಿವೆ.

- ಸತ್ತೀಸ್ ಪವಾರ, ಗುಲ್ಬರ್ಗಾ, ಗಂಜ್

೨. ಇಬ್ಬರ ಜಗಳ ಮೂರನೆಯವನಿಗೆ ಲಾಭ

ಅದೊಂದು ಹಾಳು ಮನೆಯಲ್ಲಿ ಎರಡು ನಾಯಿಗಳು ವಾಸ ಮಾಡಿದ್ದವು. ಒಂದನ್ನೊಂದು ಸೇರುತ್ತಿರಲಿಲ್ಲ. ಒಂದು ಮೂಲೆಯಲ್ಲಿ ಒಂದು ನಾಯಿ ಮಲಗಿದರೆ ಮತ್ತೊಂದು ಮೂಲೆಯಲ್ಲಿ ಇನ್ನೊಂದು ನಾಯಿ ಮಲಗುತ್ತಿದ್ದವು. ಒಂದು ಸಂಜೆ ಎರಡೂ ಮುಂಜಾನೆಯಿಂದ ಹಸಿದಿದ್ದವು. ಮನೆ ಮನೆಗೆ ಹೋಗಿ ನಿಲ್ಲುತ್ತಿದ್ದವು. ಒಂದು ಮನೆಯ ಮುಂದೆ ಚಿಕ್ಕ ಮಗು ಕೈಯಲ್ಲಿ ಬ್ರೇಡ್ ಹಿಡಿದು ನಿಂತಿದ್ದಳು. ಮಗುವಿನ ಹತ್ತಿರ ಒಂದು ನಾಯಿ ವವ್ ವವ್ ಎಂದು ಒದರತೊಡಗಿತು. ಆ ಮಗು ಹೆದರಿ ಕೈಯಲ್ಲಿದ್ದ ಬ್ರೆಡ್ ಅಲ್ಲಿಯೇ ಚೆಲ್ಲಿ ಮನೆಯ ಬಾಗಿಲೊಳಗೆ ನಿಂತು ನೋಡತೊಡಗಿತು. ಒಂದು ನಾಯಿ ಆ ಬ್ರೆಡ್ನನ್ನು ಎತ್ತಿಕೊಂಡು ದೂರ ಓಡಿತು. ಇನ್ನೊಂದು ನಾಯಿ ಅದನ್ನು ಬೆನ್ನಟ್ಟಿತು ಎರಡು ನಾಯಿಗಳು ಕಾದಾಟಕ್ಕೆ ತೊಡಗಿದವು.

ಎರಡೂ ಕಾದಾಟದಲ್ಲಿ ತೊಡಗಿದಾಗ ಬ್ರೆಡ್ ಅಷ್ಟುದೂರ ದಿಕ್ಕಿಲ್ಲದೆ ಬಿದ್ದಿತ್ತು. ಆಗಲೇ ಇನ್ನೊಂದು ಚಾಣಾಕ್ಷ ನಾಯಿ ಅದನ್ನು ಎತ್ತಿಕೊಂಡು ಓಡಿ ಹೋಯಿತು. ಕಡಿದಾಟಕ್ಕೆ ನಿಂತ ನಾಯಿಗಳು ದಣಿದು ನಾಯಿಗಳೆರಡು ಬ್ರೆಡಿನತ್ತ ನೋಡಿದಾಗ ಅದು ಅಲ್ಲಿರಲಿಲ್ಲ. ಇದರಿಂದ ಆ

ನಾಯಿಗಳಿಗೆ ತಿಳಿದ ಸಂಗತಿ ನಮ್ಮೊಳಗಿನ ಇಬ್ಬರ ಜಗಳಗಳಲ್ಲಿ ಮೂರನೆಯವನಿಗೆ ಲಾಭವಾಯಿತೆಂದು ತಮ್ಮ ತಪ್ಪಿನ ಅರಿವಾಯಿತು.

ಈ ಕಥೆಯಲ್ಲಿ ಮನುಷ್ಯನ ದ್ವಂದ್ವ ಸ್ವಭಾವಗಳಲ್ಲಿ ಬದಲಾವಣೆ ಬರಬೇಕು, ಸೋಲು ಗೆಲುವುಗಳು ಸಾಮಾನ್ಯ, ನಾವು ನಮ್ಮವರು ಎಂಬ ತತ್ವಗಳೊಂದಿಗೆ ಉತ್ತಮವಾದ ಜೀವನ ನಡೆಸಿಕೊಂಡು ಹೋಗಬೇಕು ಎಂಬ ಅಂಶವು ಕಂಡುಬರುವುದು.

- ಅಶೋಕ, ಸುರ್ವೇಸಿ, ಯಾದಗಿರಿ

೩. ಆಲಸ್ಯ ಬೇಡ

ಒಬ್ಬ ರಾಜನಿದ್ದ. ಅವನೊಬ್ಬ ಮಹಾಬುದ್ಧಿವಂತ. ನಿಪುಣ ಆಡಳಿತಗಾರ, ಶೂರ-ಧೀರ, ಅನೇಕ ಯುದ್ಧ ಮಾಡಿ, ವಿಜಯಶಾಲಿಯಾಗಿದ್ದ. ಅದರಿಂದಾಗಿ ಅವನ ಮನದಲ್ಲಿ ತುಸು ಗರ್ವದ ಭಾವನೆ ಉಂಟಾಯಿತು. ಒಂದು ಬಾರಿ ಅವನು ಯುದ್ಧಕ್ಕೆ ಹೊರಟಿದ್ದ. ಅವನ ಕುದುರೆಯ ಕಾಲಿನ, ನಾಲಿನ ಒಂದು ಮೊಳೆ ಸಡಿಲಾಗಿ ಬಿದ್ದು ಹೋಗಿತ್ತು. ಆಗ ಘಿಸಾಡಿ ಕಮ್ಮಾರನು ಮಹಾರಾಜರೇ ಕುದುರೆಯ ನಾಲಿನ ಒಂದು ಮೊಳೆ ಬಿದ್ದುಹೋಗಿದೆ. ಬೇರೆ ಮೊಳೆಯನ್ನು ಹಾಕಿಸಬೇಕು. ಆ ನಾಲು ತೊಂದರೆ ಕೊಡುತ್ತದೆ ಎಂದು ಹೇಳಿದ. ಆಗ ಮಹಾರಾಜನು ಒಂದೇ ಒಂದು ಕ್ಷುತ್ರ ಮೊಳೆಗಾಗಿ ನಿನು ನನ್ನನ್ನು ತಡೆಯುತ್ತೀಯಾ, ಈಗ ನಾನು ನಿಲ್ಲುವುದಿಲ್ಲ. ಯುದ್ಧ ಮುಗಿಸಿಕೊಂಡು ಬಂದ ನಂತರ ಕುದುರೆಯ ನಾಲಿನ ಮೊಳೆ ಹೊಡೆಯುವಿಯಂತೆ ಎಂದು ಮಹಾರಾಜ ಗರ್ವ ಮತ್ತು ಸಿಟ್ಟಿನಿಂದ ಹೇಳಿದನು. ಆಗ ಘಿಸಾಡಿ ಕಮ್ಮಾರನು ಏನು ಹೇಳಲು ಸಾಧ್ಯವಿಲ್ಲದೆ ಮೌನಿಯಾದ.

ರಣರಂಗದಲ್ಲಿ ಭಯಾನಕ ಯುದ್ಧವಾಯಿತು. ಆಗ ರಾಜನು ವಿಜಯ ಮಾರ್ಗದಲ್ಲಿದ್ದನು. ಎದುರಾಳಿ ವೈರಿಗಳು ಸೋಲನ್ನೊಪ್ಪುವ ಸ್ಥಿತಿಯಲ್ಲಿದ್ದರು. ಆಗಲೆ ಅಕಸ್ಮಾತ್ ರಾಜನ ಕುದುರೆಯು ಒಮ್ಮೆಲೆ ಜೋಲಿತಪ್ಪಿ ಕೆಳಗೆ ಬಿದ್ದಿತು. ಏಕೆಂದರೆ ಕುದುರೆ ನಾಲಿನ ಒಂದು ಮೊಳೆ ಇಲ್ಲದ್ದರಿಂದ ಆ ನಾಲು ಸಡಿಲವಾಗಿ ಇಂತಹ ಭಯಾನಕ ಯುದ್ಧ ಎತ್ತ ಬಂದತ್ತ ತಿರುಗುವಾಗ ಆ ನಾಲು ಕಳಚಿ ಬಿದ್ದದರಿಂದ ಕುದರೆಯ ಕಾಲು ನೋವಾಗಿ ಕೆಳಗೆ ಬಿದ್ದಿತು.

ಆಗ ವೈರಿ ರಾಜನು ತಕ್ಷಣ ತನ್ನ ಖಡ್ಗದ ತುದಿಯಿಂದ ರಾಜನ ಎದೆಯನ್ನು ಹಿರಿದ. ರಾಜ ಅಸಹಾಯಕನಾದ. ಯುದ್ಧ ನಿಂತಿತು. ರಾಜನು ಅನಿವಾರ್ಯವಾಗಿ ಸೋಲನ್ನೊಪ್ಪಿದನು. ರಾಜನಿಗೆ ತನ್ನ ಒಂದು ಚಿಕ್ಕ ತಪ್ಪು ಎಂತಹ ಘೋರ ಸಂಕಷ್ಟಕ್ಕೆ ಈಡುಮಾಡಿತೆಂಬುದು ಅರಿವಾಯಿತು. ಇಲ್ಲಿ ಘಿಸಾಡಿ ಸಮುದಾಯದವರು ಸದಾ ದುಡಿಯುವವರಾಗಿರುವುದರಿಂದ ಮನುಷ್ಯನಲ್ಲಿ ಆಲಸ್ಯತನ ಇರಬಾರದು ಎಂಬ ದೃಷ್ಟಿಯಿಂದ ಇಂತಹ ಕಥೆಗಳನ್ನು ಮಕ್ಕಳಿಗೆ ಹೇಳುತ್ತಾರೆ.

- ಶ್ಯಾಮರಾವ್, ಪವಾರ, ಹಂದರಕಿ

೩. ಕಲೆ

೧. ಕೌದಿಯ ಕಲೆ

ಭಾರತೀಯ ಬಹುಸಂಖ್ಯಾತ ಸಮುದಾಯಗಳಲ್ಲಿ ಕೌದಿಯ ಕಲೆ ಕಂಡುಬರುತ್ತದೆ. ಹೊಲಿಗೆಯಿಂದ ನಿರ್ಮಾಣವಾಗುವ ಹಾಸಿಗೆಯ ಹೊದಿಕೆಯಂತಹ ಅಗತ್ಯ ವಸ್ತುಗಳಲ್ಲಿ ಈ ಕಲೆ ಮೂಡಿಬಂದಿರುತ್ತದೆ. ಅಲ್ಲದೇ ಈ ಕೌದಿ ಹೊಲಿಯುವ ಕಲೆ ಅನೇಕ ಬಡ ಕುಟುಂಬಗಳಲ್ಲಿಯೇ ಕಂಡುಬರುತ್ತದೆ. ಘಿಸಾಡಿ ಸಮುದಾಯದವರು ಈ ಕೌದಿಯ ಕಲೆಯಲ್ಲಿ ತಮ್ಮದೆಯಾದ ರಚನೆ, ವಿನ್ಯಾಸ, ಚಿತ್ರಗಳಿಂದ ಸೊಗಸಾಗಿ ಕೌದಿಯನ್ನು ಹೊಲಿದು ತಮ್ಮ ಮನೆಗಳಲ್ಲಿ ಬಳಸುತ್ತಾರೆ. ಏಕೆಂದರೆ, ದುಬಾರಿ ಬೆಲೆಯ ಆಧುನಿಕ ಸೌಲಭ್ಯದ ಹಾಸಿಗೆ, ಹೊದಿಕೆಗಳನ್ನು ಖರೀದಿ ಮಾಡಲು ಇವರಿಗೆ ಹಣದ ಕೊರತೆಯಾಗಿದೆ. ಆದುದರಿಂದ ಬಹಳ ಪ್ರಜ್ಞಾಪೂರ್ವಕವಾಗಿ ಕೌದಿಯನ್ನು ಹೊಲಿಯುವ ಕಲೆ ಕರಗತ ಮಾಡಿಕೊಂಡಿದ್ದಾರೆ.

ಈ ಕೌದಿ ಪದಕ್ಕೆ ಕನ್ನಡ ಶಬ್ದಕೋಶಗಳಲ್ಲಿ ಕಂತೆ, ಹಳೆಯ ಅರಿವೆಯ ಹೊಸ ಹೊದಿಕೆ, ತುಂಡುಬಟ್ಟೆಗಳನ್ನು ಜೋಡಿಸಿ ಹೊಲಿದ ಹಚ್ಚಡವೆಂಬ ಅರ್ಥಗಳಿವೆ. ಘಿಸಾಡಿ ಜನರು ಈ ಕೌದಿ ಎಂಬ ಪದಕ್ಕೆ ತಮ್ಮ ಘಿಸಾಡಿ ಭಾಷೆಯಲ್ಲಿ "ಗೊರಡಾ" ಎಂದು ಕರೆಯುತ್ತಾರೆ. ಇವರು ಕನ್ನಡ ಭಾಷೆ ಬಳಕೆಯಲ್ಲಿ ಕವುಂದಿ, ಕವುದಿ, ಕೌಂದಿ ಎಂದು ಕರೆಯುತ್ತಾರೆ. ಈ ಕೌದಿಯನ್ನು ಹೊಲಿದ ಮೊದಲ ದಿನಗಳಲ್ಲಿ ಇವರು ಹೊದಿಕೆಯಾಗಿ ಬಳಸಿಕೊಂಡು, ಅದು ಹಳೆಯದಾದಂತೆ ಅದನ್ನು ಹಾಸಿಗೆಯ ಸಾಧನವಾಗಿ ಉಪಯೋಗಿಸುತ್ತಾರೆ. ಹಾಸಿಗೆಯ ಈ ಕೌದಿಯನ್ನು ಹರಿದಾಗ ಅದರ ತುಕಡಿಗಳನ್ನು ತೊಟ್ಟಿಲಲ್ಲಿ ಮಲಗುವ ಚಿಕ್ಕ ಮಕ್ಕಳ ಕೆಳಬದಿಯ ಹಾಸಿಗೆಯಾಗಿ ಇದನ್ನು ಬಳಸುತ್ತಾರೆ. ಈ ಕೌದಿಯನ್ನು ಘಿಸಾಡಿ ಸಮುದಾಯದವರು ವರ್ಷ ಪೂರ್ತಿ ಎಲ್ಲ ಕಾಲಮಾನಗಳಲ್ಲಿ ಬಳಕೆ ಮಾಡಿಕೊಳ್ಳುತ್ತಾರೆ. ಇದು ಬೇಸಿಗೆಯಲ್ಲಿ ತಂಪಾಗಿ, ಚಳಿಗಾಲದಲ್ಲಿ ಬೆಚ್ಚನೆಯಾಗಿ, ಮಳೆಗಾಲದಲ್ಲಿ ಹಿತವಾಗಿ ನಿದ್ದೆ ಬರುತ್ತದೆ ಎಂದು ಹೇಳುತ್ತಾರೆ. ಇವರ ಈ ಹೇಳಿಕೆಯು ನಿಜವಾಗಿದೆ. ಅಲ್ಲದೆ ಇವರು ಅಲೆಮಾರಿಗಳಾಗಿರುವುದರಿಂದ ಒಂದು ಊರಿನಿಂದ ಮತ್ತೊಂದು ಊರಿಗೆ ಹೋಗುವಾಗ ಈ ಕೌದಿಯಲ್ಲಿ ಅನೇಕ ಸರಕು ಸಾಮಾನುಗಳನ್ನು ಮತ್ತು ದವಸಧಾನ್ಯಗಳನ್ನು ತಾತ್ಕಾಲಿಕವಾಗಿ ಹಾಕಿಕೊಳ್ಳಲು ಬಳಕೆ ಮಾಡುತ್ತಾರೆ. ಕೊನೆಯಲ್ಲಿ ಪೂರ್ತಿ ಚಿಂದಿಯಾದ ಕೌದಿಗಳನ್ನು ಸುಟ್ಟು, ಇದರ ಬೂದಿಯನ್ನು ಬಿದರಿನ ಬುಟ್ಟಿ, ಮರಗಳಿಗೆ ಎಣ್ಣೆ ಮಾಡಲು ಬಳಸುತ್ತಾರೆ. ಮಗಳ ಚೊಚ್ಚಿಲ ಬಾಣಂತನವಾಗಿದ್ದರೆ ಆ ಮಗುವಿಗೆ ಒಂದು ಚಿಕ್ಕ ಹೊಸ ಕೌದಿಯನ್ನು ಹೊಲಿಯುವ ಸಂಪ್ರದಾಯ ಇವರಲ್ಲಿದೆ.

ಕೌದಿ ಕಲೆಯ ರಚನಾ ವಿಧಾನ

ಈ ಕೌದಿ ತಯಾರಿಕೆಯ ಕಲೆಯು ಘಿಸಾಡಿ ಸಮುದಾಯದ ಮಹಿಳೆಯರ ಕಲೆಯಾಗಿದೆ. ಇವರಿಗೆ ಕಮ್ಮಾರಿಕೆ ಕೆಲಸಗಳು ಕಡಿಮೆ ಇದ್ದಾಗ, ಮಳೆಗಾಲ ಸಂದರ್ಭಗಳಲ್ಲಿ ಅಥವಾ ಮಹಿಳೆಯರು

ಬಿಡುವಿನ ವೇಳೆಯಲ್ಲಿ ಸಮಯವನ್ನು ವ್ಯರ್ಥ ಮಾಡದೇ ಕೌದಿಗಳನ್ನು ಹೊಲಿಯುತ್ತಾರೆ. ಇವರು ದೊಡ್ಡವರ ಕೌದಿಯನ್ನು ಏಳು ಮೊಳ ಉದ್ದ, ಐದು ಮೊಳ ಅಗಲದ್ದಾಗಿರುತ್ತದೆ. ಚಿಕ್ಕವರ ಕೌದಿಗಳು ಐದು ಮೊಳ ಉದ್ದ ನಾಲ್ಕು ಮೊಳ ಅಗಲವಾಗಿ ಹೊಲಿಯುವುದು ರೂಡಿಯಲ್ಲಿದೆ. ಇವರು ಕೌದಿಯನ್ನು ಎರಡು ಹಂತಗಳಲ್ಲಿ ಹೊಲಿಯುತ್ತಾರೆ. ಮೊದಲು ಕೌದಿ ಹೊಲಿಯುವಾಗ ಒಂದು ದೊಡ್ಡ ಸೀರೆಯನ್ನು ತೊಯಿಸಿ ನೆಲದ ಮೇಲೆ ಹಾಸಿ ನಂತರ ಮನೆಯಲ್ಲಿ ಹರಿದ ಮತ್ತು ಹೊಸ ಬಟ್ಟೆಗಳ ವಿವಿಧ ಬಣ್ಣಗಳ ತುಕಡಿಗಳನ್ನು ವಿವಿಧ ರೀತಿಯಲ್ಲಿ ಹೊಂದಿಸಿ, ಕಲಾತ್ಮಕವಾಗಿ ಕತ್ತರಿಸಿ, ನೆಲದಲ್ಲಿ ಹಾಸಿರುವ ಸೀರೆಗೆ ಒಂದರ ಮೇಲೊಂದು ತೇಪೆಗಳನ್ನು ಹಚ್ಚಿ ಎರಡು ಅಥವಾ ಮೂರು ಪದರು ದಪ್ಪ ಮಾಡಿ ಸುಮಾರು ಆರು ಅಥವಾ ಎಂಟು ಇಂಚುಗಳಿಗೆ ಒಂದರಂತೆ ಹೊಲಿಗೆ ಹಾಕುತ್ತಾರೆ. ಹೀಗೆ ಎಲ್ಲ ಕಡೆಗೂ ಸಮಾನವಾಗಿ ಹೆಚ್ಚು ಕಡಿಮೆಯಾಗದಂತೆ ಅರಿವೆಗಳನ್ನು ಹೊಂದಿಸಿಕೊಂಡು ನಾಲ್ಕೈದು ಮಹಿಳೆಯರು ಕೂಡಿ ಹೊಲಿಯುತ್ತಾರೆ. ಕೌದಿ ಹೊಲಿಯುವ ಈ ಪೂರ್ವಭಾವಿ ಸಿದ್ಧತೆಗೆ ಇವರು 'ಲ್ಯಾವಿ' ಎಂದು ಕರೆಯುತ್ತಾರೆ. ಇದು ಕೌದಿ ತಯಾರಿಕೆಯ ಮೊದಲ ಕಚ್ಚಾರೂಪದ ಹಂತವಾಗಿದೆ. ಈ ಲ್ಯಾವಿಯನ್ನು ನಂತರ ಚೆನ್ನಾಗಿ ಬಿಸಿಲಿನಲ್ಲಿ ಒಣಗಿಸಿ ಕೌದಿ ಹೊಲಿಯುತ್ತಾರೆ. ಈ ಲ್ಯಾವಿಯನ್ನು ತಯಾರಿಸುವಾಗ ಲ್ಯಾವಿ ಹೊಲಿಯಲು ಕುಳಿತ ಮಹಿಳೆಯರು ಚಾರಸ್ ಆಕರವಾಗಿ ಹೊಲಿಗೆ ಬೀಳುವ ತನಕ ಮೇಲೆ ಏಳುವಂತಿಲ್ಲ ಮತ್ತು ಹೊಲಿಯವ ಸಂದರ್ಭದಲ್ಲಿ ಬೆಕ್ಕು ಅಡ್ಡ ಬರಬಾರದು ಎಂಬ ನಿಯಮವನ್ನು ಇವರು ಪಾಲಿಸುತ್ತಾರೆ. ಒಂದು ವೇಳೆ ಇಂತಹ ಸಂದರ್ಭಗಳು ಬಂದರೆ, ಅರ್ಧ ಹೊಲಿದ ಲ್ಯಾವಿಯನ್ನು ಪೂರ್ತಿ ಬಿಚ್ಚಿ ಮತ್ತೇ ಪುನಃ ಹೊಲಿಯಬೇಕೆಂಬ ಸಂಪ್ರದಾಯವನ್ನು ಇವರು ಅನುಸರಿಸುತ್ತಾರೆ.

ಎರಡನೆಯ ಹಂತದಲ್ಲಿ ಕೌದಿ ತಯಾರಿಸುವಾಗ ಸಣ್ಣ ಪ್ರಮಾಣದ ಹೊಲಿಗೆಗಳನ್ನು ಹಾಕುತ್ತ ನಾಲ್ಕು ಮೂಲೆಗಳಿಗೂ ಸುತ್ತುವರೆಯುತ್ತಿರುತ್ತದೆ. ಕೌದಿಯ ಒಂದು ಮೈ ಸೀರೆಯಿಂದ ಕೂಡಿ ಒಂದೆ ಬಣ್ಣವಾಗಿದ್ದರೆ, ಇನ್ನೊಂದು ಒಳಮೈಗಳಲ್ಲಿ ವಿವಿಧ ರೀತಿಯ ಚಿತ್ರಗಳನ್ನು ಬಿಡಿಸುತ್ತಾರೆ. ಇಲ್ಲಿ ಎರಡು ರೀತಿಯಿಂದ ಚಿತ್ರಗಳನ್ನು ಬಿಡಿಸುತ್ತಾರೆ. ಮೊದಲನೆಯದು ದಾರದಿಂದ ರೇಖಾವಿನ್ಯಾಸಗಳಲ್ಲಿ ಒಂಟೆ ಕಾಲುಗಳು, ಕಾಗೆ, ಗುಬ್ಬಿ, ನರಿ, ಪಶು, ಪಕ್ಷಿಯ ಕಾಲುಗಳು ಹಾಗೂ ಎಲೆ, ಹೂವು, ಬಳ್ಳಿಗಳಂತಹ ವಿವಿಧ ಆಕಾರದ ಕಲಾತ್ಮಕ ರೇಖಾಚಿತ್ರಗಳನ್ನು ಸೊಗಸಾಗಿ ಚಿತ್ರಿಸಿರುವುದು ಕಂಡುಬರುತ್ತದೆ. ಎರಡನೆಯದಾಗಿ ವಿವಿಧ ಬಣ್ಣ ಆಕಾರದ ಅರಿವೆಯ ತುಂಡುಗಳನ್ನು ಸಂಯೋಜಿಸಿ ಹೊಲಿಗೆಯಿಂದ ಚೌಕಾಕೃತಿ, ತ್ರಿಕೋನಾಕೃತಿ, ಆಯತಾಕೃತಿ, ಚಂದ್ರಾಕೃತಿ, ಸೂರ್ಯಕೃತಿ, ಭೂಮಾತೆಯ ಕೃತಿಗಳಲ್ಲದೆ ಅನೇಕ ದೇವ ದೇವತೆಗಳ ಚಿತ್ರಗಳು, ಪವಿತ್ರ ಸ್ಥಳಗಳು, ಜಾತ್ರೆ ಉತ್ಸವಗಳು, ತೇರು ಪಲ್ಲಕ್ಕಿಗಳು, ವಾದ್ಯಗೋಷ್ಠಿಗಳು, ಚಕ್ರವ್ಯೂಹ, ಸುದರ್ಶನ ಚಕ್ರ, ಅಶೋಕ ಚಕ್ರ, ರಾಷ್ಟ್ರಧ್ವಜ ಹೀಗೆ ಅನೇಕ ಕಲ್ಪನೆಗಳ ಚಿತ್ರಗಳನ್ನು ಸಂಯೋಜನೆಗೊಳಿಸಿ ಅಂದವಾಗಿ ಕೌದಿಯನ್ನು ಹೊಲಿಯುವ ಕಲೆಯನ್ನು ಈ ಛಿಸಾಡಿ ಮಹಿಳೆಯರು ಕರಗತ ಮಾಡಿಕೊಂಡಿದ್ದಾರೆ.

ಕೊನೆಗೆ ಕೌದಿ ಪೂರ್ಣ ಮುಗಿಯುವ ಮೊದಲು ಅಂದರೆ, ಎರಡು ಇಂಚುಗಳಷ್ಟು ದಪ್ಪ ಮತ್ತು ಅಗಲವಿರುವಾಗ ಕೌದಿ ಹೊಲಿಯುವುದನ್ನು ನಿಲ್ಲಿಸಿ ಆ ಆಯತಾಕಾರದ ಚಿಕ್ಕ ಖಾಲಿ ಸ್ಥಳದಲ್ಲಿ ಯಾವುದಾದರೊಂದು ದವಸಧಾನ್ಯಗಳ ಐದು ಕಾಳುಗಳು ಅಥವಾ ರೊಟ್ಟಿಯ ಸಣ್ಣ ತುಂಡುಗಳನ್ನಿಟ್ಟು ಅದರ ಮೇಲೆ ಮತ್ತೊಂದು ಸಣ್ಣ ಬಟ್ಟೆಯನ್ನು ಹಾಕಿ ಆ ಜಾಗವನ್ನು ಮುಚ್ಚಿ ಹೊಲಿಯಬೇಕೆಂಬ ಸಂಪ್ರದಾಯವನ್ನು ಇವರು ಅನುಸರಿಸುತ್ತಾರೆ. ಇದಕ್ಕೆ ಇವರು ಕೌದಿಯ ಹೊಟ್ಟೆ ತುಂಬಿಸುವುದು ಎಂದು ಹೇಳುತ್ತಾರೆ. ಒಟ್ಟಿನಲ್ಲಿ ಇವರ ಜೀವನಕ್ಕೆ ಕೌದಿಯು ಅತ್ಯಮೂಲ್ಯವಾದ ಬಳಕೆಯ ಸಾಧನವಾಗಿದೆ. ಹೀಗಾಗಿ ಅಂದವಾದ ಮತ್ತು ಕಲಾತ್ಮಕವಾದ ಕೌದಿಗಳನ್ನು ಹೊಲಿಯುವುದರಲ್ಲಿ ಘಿಸಾಡಿ ಸ್ತ್ರೀಯರು ಬಹಳ ನಿಪುಣರಾಗಿದ್ದಾರೆ.

೨. ಕಸೂತಿ ಕಲೆ

ಕೌದಿಯ ಕಲೆಯ ತಳಹದಿಯ ಮೇಲೆ ಮುಂದುವರಿದ ರೂಪವೇ "ಕಸೂತಿ ಕಲೆ" ಎಂದು ಹೇಳಬಹುದು. ಕನ್ನಡ ರತ್ನಕೋಶದ ಕಸೂತಿ ಎಂದರೆ ಬಣ್ಣದ ದಾರಗಳಿಂದ ಬಟ್ಟೆಗಳಿಗೆ ಮಾಡುವ ಹೆಣಿಗೆಯ ಅಲಂಕಾರ ಎಂಬ ಅರ್ಥ ನೀಡಲಾಗಿದೆ. ಘಿಸಾಡಿ ಸಮುದಾಯಗಳಲ್ಲಿ ಸ್ತ್ರೀಯರು ಕೌದಿ ಕಲೆಗೆ ಮಹತ್ವ ಕೊಟ್ಟರೆ ತೀರಾ ಇತ್ತೀಚಿನ ದಿನಗಳಲ್ಲಿ ಕಿರಿಯ ಮಹಿಳೆಯರು ಮುಖ್ಯವಾಗಿ ಕಸೂತಿ ಕಲೆಗೆ ಹೆಚ್ಚಿನ ಮಹತ್ವ ನೀಡಿದ್ದಾರೆ. ಕಸೂತಿ ಹಾಕುವ ಆಸಕ್ತ ಮಹಿಳೆಯರು ಮೊದಲು ಮಾರುಕಟ್ಟೆಗೆ ಹೋಗಿ ಕಸೂತಿ ಬಟ್ಟೆ, ಕಸೂತಿ ಸೂಜಿ ಮತ್ತು ಹೆಣಿಗೆಯ ದಾರ, ರೇಷ್ಮೆ ಅಥವಾ ನಯವಾದ ಹತ್ತಿಯ ನೂಲಿನ ದಾರ ತೆಗೆದುಕೊಂಡು ವಿಶ್ರಾಂತಿಯ ಸಮಯದಲ್ಲಿ ಕಲಾತ್ಮಕತೆಯ ಅಭಿರುಚಿಗಾಗಿ, ವಿವಿಧ ರೀತಿಯ ಕಸೂತಿ ಕಲೆಯ ವಿನ್ಯಾಸಗಳನ್ನು ರಚಿಸುತ್ತಾರೆ. ಸಾಮಾನ್ಯವಾಗಿ ಇವರು ರಚಿಸುವ ಕಸೂತಿ ಕಲೆಗಳೆಂದರೆ, ಅಂಬಾಭವಾನಿ ಗದ್ದುಗೆಯ ಮೇಲೆ ಹಾಕುವ ಬಟ್ಟೆಯ ಕಸೂತಿ, ಹಬ್ಬ-ಹರಿದಿನಗಳಲ್ಲಿ ಬಾಗಿಲು ಹೊಸ್ತಿಲು ತೋರಣಗಳಿಗೆ ಹಾಕುವ ಪರದೆಗಳ ಕಸೂತಿ ಹಾಗೂ ದೇವರಿಗೆ ನೈವೇದ್ಯ, ಹಣ್ಣು-ಹಂಪಲುಗಳ ಮೇಲೆ ಮುಚ್ಚಿಕೊಂಡು ಹೋಗುವ ಬಟ್ಟೆಯ ಕಸೂತಿ, ಬಾಣಂತಿಯರು ಮತ್ತು ಮಧುಮಗಳು ಹೊಚ್ಚಿಕೊಂಡು ಹೋಗುವ ಬಟ್ಟೆಯ ಕಸೂತಿ, ಹುಟ್ಟಿದ ಮಗುವಿನ ಕುಲಾಯಿ ಅಥವಾ ಹುಟ್ಟಿದ ಮಗುವಿಗೆ ಹೊಸದಾಗಿ ಮೇಲೆ ಹೊಚ್ಚಿಕೊಂಡು ಹೋಗುವ ಬಟ್ಟೆಯ ಕಸೂತಿ, ಹೊಸ ತೊಟ್ಟಿಲುಗಳಿಗೆ ಸಿಂಗರಿಸುವ ಪರದೆ ಕಸೂತಿ, ಸೀರೆ ಅಂಚುಗಳಿಗೆ ಮತ್ತು ಕುಪ್ಪಸದ ತೋಳುಗಳಿಗೆ ಸಿಂಗರಿಸುವ ಕಸೂತಿ, ಕೈಚೀಲ, ಕುರ್ಚಿ, ಟೇಬಲ್‌ಗಳ ಮೇಲೆ ಹೊದಿಸುವ ಕಸೂತಿ ಕಲೆಗಳನ್ನು ರೂಢಿಸಿಕೊಂಡಿದ್ದಾರೆ. ಇವರು ಕಸೂತಿ ಹಾಕುವಾಗ ಕಸೂತಿ ದಾರವನ್ನು ಎಡಗೈನ ತೋರು ಬೆರಳುಗಳಿಗೆ ಸುತ್ತಿಕೊಂಡು ಅಲ್ಲಿಂದ ದಾರವನ್ನು ಎಡಗೈ ಹೆಬ್ಬೆರಳು ಮತ್ತು ನಡುವಿನ ಬೆರಳುಗಳ ಮೂಲಕ ಸ್ವಲ್ಪ ಸ್ವಲ್ಪ ದಾರವನ್ನು ಬಿಡುತ್ತಾ ಬಲಗೈಯಲ್ಲಿ ಹಿಡಿದು ಕೊಕ್ಕೆ ಕಸೂತಿ ಸೂಜಿಯಿಂದ ನಯವಾಗಿ ಹೆಣೆಯುತ್ತಾ

ಹೋಗುತ್ತಾರೆ. ಈ ಕಸೂತಿ ಕಲೆಯ ಜೊತೆಗೆ ಪ್ಲಾಸ್ಟಿಕ್ ವೈರುಗಳಿಂದ ಕೈಚೀಲ, ಹೂಧಾನಿ, ಅಲಂಕೃತವಾದ ಹೂವಿನ ಕುಂಡಗಳು, ಮುತ್ತು ಮಣಿಗಳನ್ನು ಬಳಸಿ ಅಂದ ಚೆಂದದ ವಸ್ತುಗಳನ್ನು ತಯಾರಿಸುವುದು, ಹಾಗೆಯೇ ಹಬ್ಬ ಹರಿದಿನಗಳ ವಿಶೇಷ ಸಂಭ್ರಮದ ದಿನಗಳಲ್ಲಿ ಮಾವಿನ ಎಲೆ, ತೆಂಗಿನ ನಾರಿನಿಂದ ತೋರಣಗಳನ್ನು ಸಮುದಾಯದ ಸ್ತ್ರೀ-ಪುರುಷರು ಸೇರಿ ಆಲಂಕಾರಿಕ ಕಸೂತಿಗಳನ್ನು ಮಾಡುವ ಕಲೆಯನ್ನು ಕರಗತ ಮಾಡಿಕೊಂಡು ಅದನ್ನು ಬೆಳೆಸಿಕೊಂಡು ಬಂದಿದ್ದಾರೆ.

೩. ಗೊಂದನಾ (ಹಚ್ಚೆ ಕಲೆ)

ಆದಿಮಾನವನ ಬೌದ್ಧಿಕ ಪರಿವರ್ತನೆಗಳ ಹಂತಗಳಲ್ಲಿ ಪ್ರಪಂಚದ ಬಹುತೇಕ ಜನಾಂಗಗಳಲ್ಲಿ ಈ ಹಚ್ಚೆ ಕಲೆ ಬೆಳೆದು ಬಂದಿದೆ. ಒಂದು ಕಾಲಕ್ಕೆ ಧಾರ್ಮಿಕ ಹಿನ್ನೆಲೆಯಿಂದ ಮತ್ತು ಕಾಡಿನ ಕ್ರೂರ ಮೃಗಗಳಿಂದ ರಕ್ಷಣೆ ಮಾಡಿಕೊಳ್ಳುವುದಕ್ಕಾಗಿ, ಗಂಡು-ಹೆಣ್ಣೆಂಬ ಭೇದ-ಭಾವವಿಲ್ಲದೆ ಬೆಳೆದು ಬಂದ ಈ ಕಲೆಯು, ಇತ್ತೀಚಿನ ದಿನಗಳಲ್ಲಿ ಪುರಾತನ ಸಂಸ್ಕೃತಿಯ ಚಹರೆಗಳನ್ನು ಹೊಂದಿರುವ ತೀರಾ ನಿರ್ಲಕ್ಷಿಸಲ್ಪಟ್ಟಂತಹ ಬುಡಕಟ್ಟು ಸಮುದಾಯಗಳಲ್ಲಿ ಹೆಚ್ಚಾಗಿ ಕಂಡುಬರುತ್ತದೆ.

ಕನ್ನಡ ಭಾಷೆಯ ಬಳಕೆಯಲ್ಲಿ ಈ ಹಚ್ಚೆ ಕಲೆಗೆ 'ಅಣಚಿ', 'ಅಣ್ಚಿ', 'ಅಂಚೆ', 'ಅಂಜಿ', 'ಅಚ್ಚೆ' ಎಂಬ ಪದಗಳ ಜೊತೆಗೆ 'ಬೊಟ್ಟು' ಎಂಬ ಪದವನ್ನು ಸೇರಿಸಿ ಒಟ್ಟಿಗೆ 'ಅಣಚಿ ಬೊಟ್ಟು' ಎಂಬ ಪೂರ್ಣ ಸಂಯುಕ್ತಪದವನ್ನು ಅನೇಕ ಜನರು ಬಳಸುತ್ತಾರೆ. 'ಅಣಚಿ' ಎಂಬ ಪದದಲ್ಲಿ ಅಣಿ 'ಅಣ್' ಎಂದರೆ ಲೇಪಿಸು ಅಥವಾ ಅಂಟು ಎಂಬ ಅರ್ಥವು ನಿಷ್ಪನ್ನಗೊಳುತ್ತದೆ. 'ಬೊಟ್ಟು' ಎಂಬ ಪದಕ್ಕೆ ಕನ್ನಡ ಶಬ್ದಕೋಶದಲ್ಲಿ ಬೆರಳಿನಿಂದ ದುಂಡಾದ ಆಕೃತಿ; ಹಣೆಗೆ ಇಟ್ಟುಕೊಳ್ಳುವ ತಿಲಕ; ಬೊಟ್ಟು ಎಂದಿದೆ. ಅಂದರೆ, ಇಲ್ಲಿ ಬೊಟ್ಟು ಎಂಬ ಪದವು ಹಾಕಿಸಿ ಕೊಳ್ಳುವ ಕ್ರಿಯೆ ಅಥವಾ ವಿಧಾನ ಎಂಬ ಅರ್ಥದಲ್ಲಿ ಬಳಸಲಾಗುತ್ತದೆ. ಅಣಚಿ ಎನ್ನುವ ಶಬ್ದಕ್ಕೆ ನಮ್ಮ ಸಂಸ್ಕೃತಿಯಲ್ಲಿ ಸುಮಂಗಲೆ, ಮುತ್ತೈದೆ, ಸೌಭಾಗ್ಯವತಿ, ಗರತಿ ಎನ್ನುವ ವಿಶಾಲವಾದ ಅರ್ಥಗಳೂ ಇವೆ. ಈ ಸೌಭಾಗ್ಯತನ, ಗರತಿತನದ ಸಂಕೇತವಾಗಿ ಹಚ್ಚೆಯನ್ನು ಹಾಕಿಸಿಕೊಳ್ಳುವ ಪದ್ಧತಿ ರೂಢಿಗೆ ಬಂದಿತ್ತು. ಅಂತೆಯೇ ಅನೇಕ ಜನಪದರ ಬಾಯಿಯಲ್ಲಿ "ಸತ್ತಾರೆ ನಮಕೂಟೆ ಮತ್ತೇನು ಬರಬಹುದು? ಹಚ್ಚೆಯ ಬೊಟ್ಟು ಸುಲಿ ಹುಲ್ಲು" ಎಂಬ ಜನಪದ ಉಕ್ತಿಯಿಂದ ಬದುಕಿದ್ದಾಗ ಹಾಗೂ ಸತ್ತ ನಂತರ ನಮ್ಮೊಂದಿಗೆ ಶಾಶ್ವತವಾಗಿ ಹಚ್ಚೆ ಗುರುತಗಳು ಮಾತ್ರ ಬರುತ್ತವೆ ಎಂಬ ದೃಢವಾದ ನಂಬಿಕೆ ಅನೇಕ ಜನರಲ್ಲಿದೆ. ಅಲ್ಲದೆ ಜೀವವಿರುವತನಕ ಹಚ್ಚೆ ತಮ್ಮೊಂದಿಗೆ ತಮ್ಮ ಸೌಂದರ್ಯವನ್ನು ಹೆಚ್ಚಿಸುತ್ತದೆ ಎಂಬ ಕಲ್ಪನೆ ಕೂಡಾ ಹಚ್ಚೆ ಪ್ರಿಯರಲ್ಲಿದೆ.

"ಈ ಹಚ್ಚೆ ಎಂಬ ಪದಕ್ಕೆ ಇಂಗ್ಲೀಷ್‌ನಲ್ಲಿ Tattoo ಎಂದು ಕರೆಯುತ್ತಾರೆ. ಈ ಪದ ಇಂಗ್ಲಿಶಿಗೆ ಪಾಲಿನೇಷನ್ ಭಾಷೆಯಿಂದ ಬಂದಿದೆ. 'ta' ಎಂದರೆ ಪಾಲಿನೇಷನ್ ಭಾಷೆಯಲ್ಲಿ

ಹೊಡೆ, ತಟ್ಟು ಎನ್ನುವ ಅರ್ಥವಿದೆ. ಈ ರೂಪವೆ ಹಚ್ಚೆ ಕ್ರಿಯೆಯ ಮೂಲಾರ್ಥವನ್ನು ಸೂಚಿಸುತ್ತದೆ"(ಗಿರಿಜನ ಸಂಸ್ಕೃತಿ:೨೦೦೧:೧೦೨).

ಫಿಸಾಡಿ ಸಮುದಾಯದಲ್ಲಿ ಹಚ್ಚೆ ಹಾಕಿಸಿಕೊಳ್ಳುವ ಸಂಪ್ರದಾಯವು ರೂಢಿಯಲ್ಲಿದ್ದು. ಇವರು ವಿಶೇಷವಾಗಿ ಹಬ್ಬ ಹರಿದಿನಗಳು ಬಂದಾಗ, ಇಲ್ಲವೆ ಜಾತ್ರೆ ಉತ್ಸವಗಳಂತಹ ಸಂದರ್ಭಗಳಲ್ಲಿ ಹಚ್ಚೆ ಹಾಕಿಸಿಕೊಳ್ಳುತ್ತಾರೆ. ಹಚ್ಚೆ ಹಾಕುವವರು ಕೂಡಾ ಇವರಂತೆಯೇ ಅಲೆಮಾರಿಗಳಾಗಿದ್ದು. ಹೆಚ್ಚು ಕಡಿಮೆ ಇವರ ಗೂಡಾರಗಳ ಪಕ್ಕದಲ್ಲಿಯೆ ಇವರು ವಾಸವಾಗಿದ್ದುಕೊಂಡು ಹೋಗುವ ಸಂದರ್ಭಗಳು ಅನೇಕ ಸಲ ಬಂದು ಹೋಗುತ್ತವೆ. ಫಿಸಾಡಿ ಸಮುದಾಯದ ಸ್ತ್ರೀಯರು ಇವರನ್ನು ಕರೆಯಿಸಿ ಅವರಲ್ಲಿರುವ ಪುಸ್ತಕದಲ್ಲಿನ ಹಚ್ಚೆಯ ವಿವಿಧ ಚಿತ್ರಗಳನ್ನು ನೋಡಿ ತಮಗೆ ಇಷ್ಟವಾಗುವ ಚಿತ್ರವನ್ನು ಆಯ್ದುಕೊಂಡು ಹಚ್ಚೆಯನ್ನು ಹಾಕಿಸಿಕೊಳ್ಳುತ್ತಾರೆ. ಹಚ್ಚೆ ಹಾಕುವ ಸಂದರ್ಭದಲ್ಲಿ ಹಾಕಿಸಿಕೊಳ್ಳುವರಿಗೆ ನೋವಾಗ ಬಾರದಂತೆ ಹಾಡುಗಳು, ಗಾದೆಗಳು, ಹಾಸ್ಯ, ನೀತಿ ಸಾರುವ ಕಥೆಗಳನ್ನು ಹೇಳುತ್ತ ಹಚ್ಚೆಯನ್ನು ಹಾಕುವರು. ಆಧುನಿಕ ದಿನಗಳಲ್ಲಿ ಜನರಿಗೆ ಹಚ್ಚೆ ಹಾಕಿಸಿಕೊಳ್ಳುವ ಉತ್ಸಾಹವು ಕಡಿಮೆಯಾಗಿದೆ ಎಂದು ಇವರು ಹೇಳುತ್ತಾರೆ.

ಹಚ್ಚೆಯನ್ನು ಹಾಕಿಸಿಕೊಂಡ ಬಳಿಕ ಹಚ್ಚೆಯನ್ನು ಹಾಕಿದವರಿಗೆ ಕುಪ್ಪಸ, ಕೊಬ್ಬರಿ, ದವಸಧಾನ್ಯಗಳು, ಅಕ್ಕಿ, ಅರಿಶಿಣ, ಕುಂಕುಮ, ಹಣವನ್ನು ನೀಡುವುದು ಸಂಪ್ರದಾಯ ಫಿಸಾಡಿ ಸಮುದಾಯದಲ್ಲಿದೆ. ಈ ರೀತಿ ಹಚ್ಚೆ ಹಾಕಿಸಿಕೊಳ್ಳುವ ಕಲಾಭಿರುಚಿಯನ್ನು ಹೊಂದಿರುವ ಫಿಸಾಡಿ ಸಮುದಾಯ ಸಂಸ್ಕೃತಿಯ ಕುರುಹುವಾಗಿದೆ. ಬದುಕಿನ ಸಾವಿನ ಆಚೆಗೂ ಮಾಸದೇ ಬರುವ ಜೀವಂತ ಕಲೆಯಾಗಿ ಬರುವುದಾಗಿ ನಂಬಿಕೆಯನ್ನು ಹೊಂದಿದ್ದಾರೆ. ದೇಹದ ಅಂಗೈ, ಮುಂಗೈ, ಹಿಂಗೈ, ಮೊಣಕೈ, ಕೆನ್ನೆ, ಹಣೆ, ಹುಬ್ಬು, ಕಣ್ಣಿನ ಅಂಚು, ಎದೆ, ಹೊಟ್ಟೆ, ತೊಡೆ, ಮೀನುಖಂಡ, ಬೆನ್ನು ಹೀಗೆ ವಿವಿಧ ಅಂಗಾಂಗಗಳ ಮೇಲೆ ಹಚ್ಚೆ ಹಾಕಿಸುತ್ತಾರೆ. ಸಾಮಾನ್ಯವಾಗಿ ಈ ಕೆಳಗಿನ ಅಂಗಗಳಲ್ಲಿ ಈ ಸಮುದಾಯದವರು ಹಾಕಿಸಿರುವ ಹಚ್ಚೆಯ ಚಿತ್ರಗಳು ಕಾಣಸಿಗುತ್ತವೆ.

೧. **ಹಣೆಯ ಮೇಲೆ :** ದೃಷ್ಟಿಬೊಟ್ಟು, ಹೂವು, ಚಂದ್ರ, ಸೂರ್ಯ, ನಕ್ಷತ್ರ, ಕಮಲ, ಒಂದು ಗೆರೆ, ಶಂಖ, ಮಲ್ಲಿಗೆ.

೨. **ಹುಬ್ಬಿನ ನಡುವೆ :** ದೃಷ್ಟಿಬೊಟ್ಟು

೩. **ಗಲ್ಲದ ಮೇಲೆ :** ಗಲ್ಲಹಚ್ಚೆ, ಸಣ್ಣಚುಕ್ಕೆ, ದೃಷ್ಟಿಬೊಟ್ಟು

೪. **ತೋಳು :** ಮುತ್ತಿನ ಬೊಟ್ಟು, ರಾಮನ ಬಾಣ, ಸೀತೆ ಸೆರಗು, ತೋಳು ಚಪ್ಪರ, ಮುತ್ತಿನ ಬಳ್ಳಿ, ಮುತ್ತಿನ ಮಲಕು, ಮುತ್ತಿನ ಸರ, ತೊಂಡೆ ಚಪ್ಪರ, ಮುತ್ತೈದೆ ಒಡವೆ ಚಿತ್ರಗಳು

೫. ಬಲಮೊಣಕೈ : ಬಾಳೆಗಿಡ, ಮುತ್ತಿನ ಹಾರ, ಜೋಗಿ ಜಡೆ, ಆಂಜನೇಯ, ಸೀತೆ ಸೆರಗು, ನಾಗರಹಾವು, ರಾಮನ ತೊಟ್ಟಿಲು.

೬. ಎಡ ಮೊಣಕೈ : ಗೌರಿಗದ್ದಿಗೆ, ಸೀರೆ ಚಿತ್ರ, ಜೋಗಿ ಜಡೆ, ತಾವರೆ ಹೂ, ಗಾಲಿತೇರು, ಶಿವನ ಬಾಸಿಂಗ, ಸ್ವಸ್ತಿಕ್

೭. ಮುಂಗೈ : ಬಾಳೆಗಿಡ, ಕಮಲ, ಸೇವಂತಿಗೆ ಹೂವು, ಹನುಮಂತರಾಯ, ಶಿವನ ಮುಡಿ, ಮುತ್ತಿನ ಹಾರ, ಮಾವಿನ ಎಲೆ, ವೀಳ್ಯದೆಲೆ ಇತ್ಯಾದಿ

೮. ಕಣ್ಣು : ಕಣ್ಣುಗಳ ಹತ್ತಿರ ಚುಕ್ಕೆ ಚಿತ್ರಗಳು

೯. ಎಡ ಮುಂಗೈ : ಅಷ್ಟಕೊಳ, ತಾವರೆ ಹೂವು, ನಿಂಬೆ ಹೂವು, ನಂದಿಕೋಲು, ಜಿರಲಿ

೧೦. ಬಲ ಮುಂಗೈ : ಗಂಡ ಅಥವಾ ಹೆಂಡತಿಯ ಹೆಸರು, ಗೆಳೆಯ ಗೆಳತಿಯರ ಹೆಸರು, ಅಜ್ಜ, ಅಜ್ಜಿ, ಅಪ್ಪ, ಅಮ್ಮ ಇತರರ ಪ್ರೀತಿಗೆ ಪಾತ್ರರಾದವರ ಹೆಸರುಗಳು.

೧೧. ಹೆಬ್ಬೆರಳು : ಹೆಬ್ಬೆರಳುಗಳ ಮೇಲೆ ಚೇಳು, ಜೇನುನೊಣ, ವಾಲಿಗುಪ್ಪಿ, ಹುಲಿ, ಉಗುರು, ಅಥವಾ ಹೆಜ್ಜೆಗಳು

೧೨. ಬೆನ್ನಿನ ಮೇಲೆ : ಸಣ್ಣ ಚುಕ್ಕೆಗಳು ಅಥವಾ ವಿವಿಧ ಚಿತ್ರಗಳು ಘಿಸಾಡಿ ಸಮುದಾಯ ದಲ್ಲಿ ದೇವ-ದೇವತೆಗಳ ಚಿತ್ರಗಳು, ರಾಮನಬಾಣ, ಆಂಜನೇಯ, ಸಿಂಹ, ಹುಲಿ, ಹಡಗು, ಸರ್ಪ ಹಾಗೂ ತಮಗೆ ಇಷ್ಟವಿರುವ ವ್ಯಕ್ತಿಯ ಹೆಸರುಗಳನ್ನು ಹಾಕಿಸಿಕೊಳ್ಳುವರು.

ರಂಗೋಲಿ ಕಲೆ

ಜನಪದ ಚಿತ್ರಕಲಾ ಪ್ರಕಾರಗಳಲ್ಲಿ ಕಂಡುಬರುವ ರಂಗೋಲಿ ಕಲೆಯು ಅನೇಕ ಸಮುದಾಯಗಳಲ್ಲಿ ಹೆಣ್ಣು ಮಕ್ಕಳ ಅತ್ಯಂತ ಮೆಚ್ಚುಗೆ ಕಲೆಯಾಗಿದೆ. ಘಿಸಾಡಿ ಸಮುದಾಯದಲ್ಲಿ ಈ ಕಲೆಗೆ ವಿಶಿಷ್ಟವಾದ ಸ್ಥಾನವಿದೆ. ಈ ಕಲೆಯನ್ನು 'ರಂಗೋಳಿ' ಎಂಬ ಹೆಸರಿನಿಂದ ಕರೆಯುವುದುಂಟು. ಈ ರಂಗೋಲಿ ಕಲೆಯು ಪುನಃ ಪುನಃ ರಚನೆಗೊಳ್ಳುವ ವಿಶಿಷ್ಟ ಕಲೆಯಾಗಿದ್ದು, ಹಳೆಯ ರಂಗೋಲಿಗಳು ಕಣ್ಮರೆಯಾಗುತ್ತಿವೆ. ಅದರೆ, ಆ ಸ್ಥಳವನ್ನು ಆಧುನಿಕ ಹೊಸ ರಂಗೋಲಿಗಳು ಆಕ್ರಮಿಸಿಕೊಳ್ಳುತ್ತಿವೆ. ಘಿಸಾಡಿ ಜನರು ತಮ್ಮ ಮನೆಯ ಅಂಗಳದಲ್ಲಿ, ಪೂಜೆ ಮಾಡುವ ಸ್ಥಳಗಳಲ್ಲಿ ಮನೆಯ ಗೋಡೆಗಳಿಗೆ, ಹೊಸ್ತಿಲು, ಬಾಗಿಲುಗಳಿಗೆ, ತುಳಸಿಕಟ್ಟೆ, ಮಡಿಕೆ, ಕುಡಿಕೆ, ಬುಟ್ಟಿ, ಮೊರಗಳು ಹೀಗೆ ಅನೇಕ ಗೃಹೋಪಯೋಗಿ ವಸ್ತುಗಳಿಂದ ಅನೇಕ ಬಗೆಯಲ್ಲಿ ರಂಗೋಲಿಯಿಂದ ಚಿತ್ತಾರವನ್ನು ಬಿಡಿಸುವ ಪದ್ಧತಿಯನ್ನು ಮೈಗೂಡಿಸಿಕೊಂಡಿದ್ದಾರೆ. ಇವರು ರಂಗೋಲಿ ರಚಿಸಲು ಎರಡು ಪ್ರಮುಖ ಮಾರ್ಗವನ್ನು ಅನುಸರಿಸುತ್ತಾರೆ.

೧. **ಚುಕ್ಕೆ ರಂಗೋಲಿ :** ಮೊದಲು ನಿರ್ದಿಷ್ಟವಾದ ರಂಗೋಲಿ ಹಾಕುವ ಸ್ಥಳವನ್ನು ಆಯ್ಕೆ ಮಾಡಿಕೊಂಡು ಆಯಾ ರಂಗೋಲಿ ಚಿತ್ರಗಳಿಗೆ ಬೇಕಾಗುವಷ್ಟು ಚುಕ್ಕಿ ಸಾಲುಗಳನ್ನಿಟ್ಟು ಚುಕ್ಕೆಗಳನ್ನು ಆಧಾರವಾಗಿಟ್ಟುಕೊಂಡು ನೇರ, ಅಡ್ಡ, ಉದ್ದ, ಸರಳ, ವಕ್ರ ರೇಖೆಗಳಿಂದ ಅವುಗಳನ್ನು ಸಂಯೋಜಿಸಿ ವಿವಿಧ ಚಿತ್ರದ ರಂಗೋಲಿಗಳನ್ನು ಹಾಕುವುದನ್ನು ರೂಢಿಸಿಕೊಂಡಿದ್ದಾರೆ. ಅಲ್ಲದೆ ಈ ವಿಧಾನವು ಸುಲಭ ಹಾಗೂ ಸರಳತೆಯಿಂದ ಕೂಡಿದೆ.

೨. **ರೇಖಾ ಆಧಾರಿತ ರಂಗೋಲಿ :** ಈ ರಂಗೋಲಿಯಲ್ಲಿ ನೇರವಾಗಿ ಉದ್ದ, ಓರೆ, ಅಡ್ಡಗೆರೆಗಳ ಮುಖಾಂತರ ಚಿತ್ರಗಳನ್ನು ಬಿಡಿಸುತ್ತಾರೆ. ಈ ವಿಧಾನವು ಸ್ವಲ್ಪ ಹೆಚ್ಚಿನ ಅನುಭವವಿರುವವರಿಗೆ ಸರಳವಾಗಿರುತ್ತದೆ. ಆದರೆ ಬಹುತೇಕ ಮಹಿಳೆಯರು ಚುಕ್ಕೆಸಾಲುಗಳ ಸಂಯೋಜನೆಯ ಪದ್ಧತಿಯ ರಂಗೋಲಿಯ ಚಿತ್ರಗಳನ್ನು ಬಿಡಿಸುವುದು ಕಂಡುಬರುತ್ತದೆ. ಕೆಲವು ಮಹಿಳೆಯರು ರಂಗೋಲಿ ಚಿತ್ರಗಳಿಗೆ ವಿವಿಧ ರೀತಿಯ ಬಣ್ಣ ತುಂಬಿ ರಂಗೋಲಿಯ ಸೌಂದರ್ಯವನ್ನು ಹೆಚ್ಚಿಸುತ್ತಾರೆ. ರಂಗೋಲಿ ಹಾಕುವಾಗ ಬಳಸುವ ವಸ್ತುಗಳೆಂದರೆ ಬಟ್ಟೆಯ ತುಂಡು, ಹಿಡಿಕಡ್ಡಿ. ತೆಂಗಿನ ನಾರು, ಹತ್ತಿ ತುಂಡು, ರಂಗೋಲಿ ಬಟ್ಟಲು, ವಿವಿಧ ರೀತಿಯ ಬಣ್ಣದ ಪುಡಿಗಳನ್ನು, ಸಗಣಿಯಿಂದ ಸಾರಿಸಿದ ನಿರ್ದಿಷ್ಟಪಡಿಸಿದ ನೆಲದಲ್ಲಿ ರಂಗೋಲಿ ಹಾಕುತ್ತಾರೆ. ಇವರಲ್ಲಿ ಪ್ರಮುಖವಾದ ರಂಗೋಲಿ ಚಿತ್ರಗಳು ಆರತಿ, ತುಳಸಿಕಟ್ಟೆ, ಕಣಜ, ಶಿಂಗಾರ ಎಲೆ, ನಾಗರಹಾವು, ಬಣವೆ, ಸೂರ್ಯ, ಚಂದ್ರ, ನಕ್ಷತ್ರ, ಮಂಟಪ, ರಥ, ಸೀತೆಮುಡಿ, ಗಣಪತಿ ಮಂಡಲ, ಈಶ್ವರನ ಜಡೆ, ಸ್ವಸ್ತಿಕ, ಪದ್ಮಬಾಸಿಂಗ, ಕಲ್ಪವೃಕ್ಷ, ಅಶ್ವತ್ಥ ವೃಕ್ಷ ಹೀಗೆ ವಿವಿಧ ಚಿತ್ರಗಳನ್ನು ಪ್ರಮುಖ ಹಬ್ಬಗಳಲ್ಲಿ, ವಿಶೇಷ ವಾರ ಮಾಸಗಳಲ್ಲಿ ಹೋಮ, ಹವನ, ವ್ರತ, ತಿಥಿ ಹಾಗೂ ಹುಟ್ಟು, ಜಾವಳ, ದೀಕ್ಷೆ, ಬಸುರಿ, ಬಾಣಂತಿ, ಮದುವೆ, ತೊಟ್ಟಿಲು ಕಾರ್ಯಗಳಿದ್ದಾಗ ರಂಗೋಲಿ ಚಿತ್ರಗಳನ್ನು ದೊಡ್ಡವರು ಮತ್ತು ಚಿಕ್ಕವರು ಸೇರಿ ಹಾಕುತ್ತಾರೆ.

ಈ ರಂಗೋಲಿ ಹಾಕುವ ಮುಖ್ಯ ಉದ್ದೇಶವೆಂದರೆ, ಶುಭ ಕಾರ್ಯಗಳಲ್ಲಿ ಮನೆಗೆ ಬರುವ ಅತಿಥಿಗಳಿಗೆ ಸ್ವಾಗತ ಕೋರುವುದು ಹಾಗೂ ಮನೆಯ ಸುತ್ತಮುತ್ತ ಯಾವುದೇ ರೀತಿಯ ದುಷ್ಟಶಕ್ತಿಗಳಾದ ದೆವ್ವ, ಭೂತ, ಪಿಶಾಚಿಗಳು ನುಸುಳಬಾರದು ಎಂಬ ಧಾರ್ಮಿಕ ನಂಬಿಕೆಯನ್ನು ಹೊಂದಿದೆ.

೪. ಕ್ರೀಡೆಗಳು

ಹುಟ್ಟಿದ ಮಗು ಮೊಟ್ಟಮೊದಲು ತೊಟ್ಟಿಲಿನಲ್ಲಿ ಕೈ ಕಾಲುಗಳನ್ನು ಅಲ್ಲಾಡಿಸುತ್ತಾ ಆಟ ಆಡುತ್ತ ನಗುವಿನಿಂದ ಪ್ರಾರಂಭಿಸುವ ಆಂಗಿಕ ಚಲನೆಯನ್ನು ನಾವು ಆಟವೆಂದು ಕರೆಯುತ್ತೇವೆ. ಇಂತಹ ಆಟಗಳು ಪ್ರಾಣಿ ಪಕ್ಷಿಗಳಲ್ಲಿಯೂ ಸಹ ಕಂಡುಬರುತ್ತದೆ. ಅದು ಹೇಗೆಂದರೆ ಕರು ಹಾಲುಕುಡಿದು ಹೊಟ್ಟೆ ತುಂಬಿದಾಗ ಪುಟಿಪುಟಿದು ಕುಣಿಯುತ್ತಾ ತನ್ನ ತಾಯಿ ಹತ್ತಿರ

ಆಟವಾಡುತ್ತದೆ. ಹಕ್ಕಿಗಳು ತಮ್ಮ ಗೂಡುಗಳಿಂದ ಹೊರಬಂದು ಮರಳಿನ ಕುಪ್ಪೆಗಳಲ್ಲಿ ಹಾರಾಡುತ್ತಾ, ರೆಕ್ಕೆ ಬಿಸಿ ಹಾರುತ್ತ, ಚಿಂವ್‌ಚಿಂವ್ ಎಂಬ ಧ್ವನಿಯನ್ನು ಮಾಡುತ್ತವೆ. ಹೀಗೆ ಮಗು ಮತ್ತು ಪ್ರಾಣಿ, ಪಕ್ಷಿಗಳು ಬೆಳೆಯುತ್ತಾ ತನ್ನ ತಾಯಿಯ ಜೊತೆಗೆ ಆಟವಾಡುವುದನ್ನು ಕಡಿಮೆಗೊಳಿಸುತ್ತಾ ತನ್ನ ಸಮವಯಸ್ಕರ ಜೊತೆಗೆ ಆಟವನ್ನು ಮುಂದುವರೆಸುತ್ತವೆ.

ಮಾನವ ಜೀವಿಯು ಬಹಳ ಬುದ್ಧಿವಂತ ಮತ್ತು ಪ್ರಜ್ಞಾವಂತನಾಗಿರುವುದರಿಂದ ಅವನ ಬಾಲ್ಯದಿಂದ ಮುಪ್ಪಿನವರೆಗೂ ಒಂದಿಲ್ಲ ಒಂದು ನಾನಾತರಹದ ಆಟಗಳನ್ನು ಆಡುತ್ತಾ ತನ್ನ ಬಿಡುವಿನ ವೇಳೆಯನ್ನು ಕ್ರೀಡೆಗಳಲ್ಲಿ ಕಳೆದು ಮನಸ್ಸಿಗೆ ಸಂತೋಷವನ್ನು ತಂದುಕೊಳ್ಳುತ್ತಾನೆ. ಕೆಲವೊಂದು ಸಂದರ್ಭಗಳಲ್ಲಿ ಬೇರೆಯವರು ಆಡುವ ಆಟಗಳನ್ನು ನೋಡಿಯೇ ಸಂತೋಷಪಡುತ್ತಾರೆ. ಆದುದರಿಂದ ಕ್ರೀಡೆಯು ಮಾನವನ ಬದುಕಿನೊಂದಿಗೆ ಹಾಸುಹೊಕ್ಕಾಗಿರುವ ಆಹಾರ, ನಿದ್ರೆ, ಪಾನೀಯಗಳಷ್ಟೇ ಅವಶ್ಯಕವಾಗಿದೆ. ಆಟವು ಅನುಕರಣೆಯಿಂದ ಬೆಳೆಯುತ್ತಾ ಪೀಳಿಗೆಯಿಂದ ಪೀಳಿಗೆಗೆ ಹರಿದುಬರುತ್ತವೆ. ಈ ಆಟಗಳಿಗೆ ಪ್ರಕೃತಿ ಪರಿಸರದಲ್ಲಿ ದೊರೆಯುವ ಅನೇಕ ವಸ್ತುಗಳಿಂದಲೇ ಆಟಿಕೆಯ ಸಾಮಾನುಗಳು ನಿರ್ಮಾಣವಾಗಿವೆ. ಪ್ರಪಂಚದ ಬಹುತೇಕ ಸಮುದಾಯಗಳಲ್ಲಿ ಮಕ್ಕಳ ಆಟಕ್ಕೆ ಬಹಳ ಪ್ರೋತ್ಸಾಹ ಇರುವುದರಿಂದ ಘಿಸಾಡಿ ಸಮುದಾಯದ ಮಕ್ಕಳ ಆಟಗಳನ್ನು ಇಲ್ಲಿ ಪರಿಚಯಿಸಲಾಗಿದೆ.

ಅಲೆಮಾರಿಗಳಾದ ಘಿಸಾಡಿ ಸಮುದಾಯದವರು ತಮ್ಮ ದೈನಂದಿನ ಬದುಕಿನ ನಿರ್ವಹಣೆಗಾಗಿ ಸದಾಕಾಲ ತಮ್ಮ ಕಮ್ಮಾರಿಕೆ ವೃತ್ತಿಯ ಕೆಲಸಗಳ ಹುಡುಕಾಟ ಮತ್ತು ಕೆಲಸಗಳಲ್ಲಿಯೇ ಮಗ್ನರಾಗಿರುತ್ತಾರೆ. ಹೀಗಾಗಿ ಕ್ರೀಡೆಗಳ ಬಗೆಗೆ ಇವರಲ್ಲಿ ಹೆಚ್ಚಿನ ಆಸಕ್ತಿ ಕಂಡುಬರುವುದಿಲ್ಲ. ಇವರಿಗೆ ಮುಖ್ಯವಾಗಿ ಕ್ರೀಡೆಗಳಿಗಿಂತ ಹೊಟ್ಟೆ ಬಟ್ಟೆಗಳ ಚಿಂತೆಯೇ ಪ್ರಮುಖವಾಗಿದೆ. ಆದುದರಿಂದ ಈ ಕ್ರೀಡೆ ವಿನೋದಗಳಿಗಾಗಿ ವ್ಯರ್ಥ ಸಮಯ ಹಾಳು ಮಾಡದಿದ್ದರೂ ಇವರು ಕ್ರೀಡಾಜಗತ್ತನ್ನು ಸಂಪೂರ್ಣವಾಗಿ ಕಡೆಗಣಿಸಿಲ್ಲ. ತಮ್ಮ ಬಿಡುವಿನ ವೇಳೆಯಲ್ಲಿ ಹಲವು ಆಟಗಳಾಡುವುದರ ಮೂಲಕ ತಮಗಾದ ಕಷ್ಟ ಬೇಸರವನ್ನು ಕಳೆದುಕೊಂಡು ಉತ್ತಮವಾದ ಮನೋರಂಜನೆಯನ್ನು ಪಡೆದುಕೊಳ್ಳುತ್ತಾರೆ. ಇವರು ಆಡುವ ಆಟಗಳನ್ನು ಸಾಮಾನ್ಯವಾಗಿ ಹೆಂಗಸರಾಟ, ಗಂಡಸರಾಟ, ಮಕ್ಕಳಾಟ ಮತ್ತು ಸಮ್ಮಿಶ್ರ ಆಟಗಳೆಂದು ವಿಂಗಡಿಸಬಹುದು.

ಹೆಂಗಸರಾಟ

ಘಿಸಾಡಿ ಮಹಿಳೆಯರು ಪುರುಷರಂತೆ ಕಮ್ಮಾರಿಕೆ ವೃತ್ತಿಯಲ್ಲಿ ಸದಾ ಸಹಾಯಾರ್ಥಕವಾಗಿ ಕೆಲಸದಲ್ಲಿ ತೊಡಗಿರುತ್ತಾರೆ. ಅಂದರೆ ತಿದಿ ಊದುವುದು, ಘನ್ ಹೊಡೆಯುವುದು ಮತ್ತು ಅಡುಗೆ ಕೆಲಸದಲ್ಲಿ ತೊಡಗಿರುತ್ತಾರೆ. ಹೀಗಾಗಿ ಇವರೂ ಸಹ ಪುರುಷರಂತೆ ಕೆಲಸದಲ್ಲಿ ನಿರತವಾಗಿ ರುವುದರಿಂದ ಆಟಗಳಲ್ಲಿ ತೊಡಗುವುದು ಬಹಳ ವಿರಳ. ಅವರು ಹಬ್ಬಗಳಲ್ಲಿ ಕೆಲಸವಿಲ್ಲದ

ಬಿಡುವಿನ ವೇಳೆಯಲ್ಲಿ ಹಗ್ಗಜಗ್ಗಾಟ, ಹಗ್ಗದಾಟ, ಕುಂಟೆಬಿಲ್ಲೆ, ಆಣೆಕಲ್ಲಾಟ, ಕಣ್ಣುಮುಚಾಲೆ, ಜೋಕಾಲಿ, ಚಕಾರಾಟಗಳನ್ನು ಆಡುತ್ತಾರೆ.

ಗಂಡಸರಾಟ

ಈ ಸಮುದಾಯದ ಪುರುಷರ ಪ್ರಮುಖ ಆಟಗಳೆಂದರೆ, ಕೋಳಿ ಕಾಳಗ. ಬಲಿಷ್ಠವಾದ ಎರಡು ಹುಂಜಗಳನ್ನು ಪರಸ್ಪರ ಕಾಳಗ ಮಾಡಿಸುವುದು. ಕೈ ಕುಸ್ತಿ, ಪರಸ್ಪರ ಕುಸ್ತಿಯಾಡುವುದು. ಉಸುಕಿನ ಚೀಲ, ಕಲ್ಲುಗುಂಡು ಎತ್ತುವ ಆಟ, ಕಬ್ಬಿಣ ಹಾರೆ ಮತ್ತು ದುಂಡನೆಯ ಭಾರವಾದ ಚಕ್ರವನ್ನು ದೂರ ಎಸೆಯುವುದು, ಚೆಂಡಾಟ, ಚಿಣ್ಣಿದಾಂಡು, ಲಗೋರಿ, ಹುಲಿಮನೆಯಾಟ, ಕೈಲಾಸಪಟ್ಟದ ಆಟ (ಹಾವು ಏಣಿ ಆಟ) ಆಡುತ್ತಾರೆ.

ಮಕ್ಕಳಾಟ

ಸಾಮಾನ್ಯವಾಗಿ ಮಕ್ಕಳಲ್ಲಿ ಗಂಡು ಮತ್ತು ಹೆಣ್ಣು ಎಂಬ ಬೇಧ ಭಾವಗಳಿರುವುದಿಲ್ಲ. ಆದುದರಿಂದ ಗಂಡು ಮಕ್ಕಳು ಹಾಗೂ ಹೆಣ್ಣು ಮಕ್ಕಳು ಸೇರಿ ಒಟ್ಟಿಗೆ ಆಡುವ ಆಟಗಳನ್ನು 'ಮಕ್ಕಳಾಟ' ಎಂದು ಕರೆಯುತ್ತಾರೆ. ಘಿಸಾಡಿ ಮಕ್ಕಳಲ್ಲಿ ಕಂಡುಬರುವ ಪ್ರಮುಖ ಆಟಗಳೆಂದರೆ, ಕುಂಟಾಟ, ಕಣ್ಣುಮುಚ್ಚಾಲೆ, ಹುಲಿ ಆಕಳು, ತೋಳ ತೊಟ್ಟಿಲಾಟ, ಕಪ್ಪೆ ಆಟ, ತೋಳ ಕುರಿ ಆಟ, ಕೆರೆದಡ ಆಟ, ಪುಣೆಚ್ಚಿಲ್ ಆಟ, ಮರಳಿನ ಕಪ್ಪೆ ಆಟ, ಚಿಣ್ಣಿದಾಂಡು, ಗಿಡದ ಆಟ, ಬಣ್ಣದ ಬುಗರಿಗಳಾಟ, ಗಾಲಿ ಆಟ, ಕುಟುಂಬದ ಆಟ, ಹೀಗೆ ಹತ್ತು ಹಲವಾರು ಆಟಗಳು ಮಕ್ಕಳ ಕೆಲವು ಆಟಗಳನ್ನು ಮುಂದೆ ಪರಿಚಯಿಸಲಾಗಿದೆ.

ಲಗೋರಿ ಆಟ

ಶಾಬಾದಿ ಬಂಡಿ ಕಲ್ಲುಗಳಿಂದ ವರ್ತುಲಾಕಾರದಲ್ಲಿ ಸುಮಾರು ೯ ಕಲ್ಲುಗಳನ್ನು ಒಂದರ ಮೇಲೊಂದು ಕೂಡುವಂತೆ ವರ್ತುಲಾಕಾರದಲ್ಲಿ ಒಂದೊಂದು ಕಲ್ಲಿನ ಪ್ರಮಾಣದಲ್ಲಿ ಕಡಿಮೆ ಮಾಡಿ ಕಟೆಯಲಾಗಿರುತ್ತದೆ. ಆಟವಾಡುವ ಮಕ್ಕಳನ್ನು ಎರಡು ತಂಡಗಳನ್ನಾಗಿ ವಿಂಗಡಿಸಿ, ಆಟದ ಮೊದಲಿಗೆ ಮೊದಲಾಟ ಯಾವ ಗುಂಪಿನವರು ಆಡಬೇಕೆಂದು ನಿರ್ಣಯಿಸಲು ಕಾಸನ್ನು ತೂರುವ ಮೂಲಕ ನಿರ್ಧರಿಸಲಾಗುತ್ತದೆ. ಒಂದು ತಂಡದವರು ಲಗೋರಿಯನ್ನು ಉರುಳಿಸಲು ಮತ್ತೊಂದು ತಂಡದವರು ಫೀಲ್ಡಿಂಗ್ ಮಾಡಬೇಕು. ಲಗೋರಿಯನ್ನು ಉರುಳಿಸುವ ಆಟದಲ್ಲಿ ಉರುಳಿಸಿದ ತಂಡದವರು ಪುನಃ ಅವುಗಳನ್ನು ಒಂದರ ಮೇಲೆ ಒಂದರಂತೆ ಪುನಃ ಅವುಗಳನ್ನು ಜೋಡಿಸಿಡ ಬೇಕಾಗುತ್ತದೆ. ಈ ಉರುಳಿಸಿದ ಕಲ್ಲುಗಳನ್ನು ಜೋಡಿಸಲು ಬರುವ ಗುಂಪಿನವರನ್ನು ಇನ್ನೊಂದು ಗುಂಪಿನವ ಚೆಂಡಿನಿಂದ ಬೆನ್ನಿಗೆ ಹೊಡೆಯುತ್ತಾರೆ. ಈ ಚೆಂಡಿನ ಹೊಡೆತವನ್ನು ತಪ್ಪಿಸಿಕೊಂಡು ಉರುಳಿಸಿದ ಕಲ್ಲುಗಳನ್ನು ಪುನಃ ಜೋಡಿಸಿದಾಗ ಅವರು ಜಯಶಾಲಿಗಳಾದಂತೆ. ಒಂದು ವೇಳೆ ಅವರು ಚೆಂಡಿನ ಹೊಡೆತಕ್ಕೆ ಸಿಕ್ಕಿಬಿದ್ದರೆ ಸೋತು ಹೋದಂತೆ.

ತೋಳು ತೊಟ್ಟಿಲಾಟ

ಬಲಿಷ್ಠನಾದ ಒಬ್ಬ ವ್ಯಕ್ತಿ ತನ್ನ ಕೈಗಳನ್ನು ಭುಜದ ಮೇಲಿಂದ ನೆತ್ತಿಯ ಮೇಲಿಟ್ಟುಕೊಂಡು ಇಬ್ಬರು ಸಮಭಾರವಾದ ಮಕ್ಕಳನ್ನು ಆತನ ಕೈ ತೋಳಿನಲ್ಲಿ ಜೋತು ಬೀಳಿಸಿಕೊಂಡು ಬಲಿಷ್ಠ ವ್ಯಕ್ತಿಯು ನಿಂತಲ್ಲಿ ಗರ ಗರ ತಿರುಗುತ್ತಾನೆ. ಜೋತುಬಿದ್ದ ಆ ಮಕ್ಕಳಿಬ್ಬರು ಗಿರಗಿರನೆ ಆತನಂತೆಯೇ ಸುತ್ತುತ್ತಾರೆ. ಇದು ತೊಟ್ಟಿಲು ತಿರುಗಿದಂತೆ ಕಾಣುತ್ತದೆ. ಈ ಆಟ ಏಕವ್ಯಕ್ತಿಯ ಶಕ್ತಿ ಮತ್ತು ಚಮತ್ಕಾರಗಳನ್ನು ಪ್ರದರ್ಶಿಸುತ್ತದೆ.

ಕಪ್ಪೆಯಾಟ

ಆಟಗಾರರು ಸಾಲಾಗಿ ನಿಲ್ಲುವುದು ಸುಮಾರು ೨೦ ಅಡಿ ದೂರದಲ್ಲಿ ಒಂದು ಗಡಿ ರೇಖೆಯನ್ನು ಎಳೆಯುವುದು. ಓಟಕ್ಕೆ ಸೂಚನೆ ನೀಡಿದ ತಕ್ಷಣ ಎಲ್ಲರೂ ಕಪ್ಪೆಯಂತೆ ಕುಪ್ಪಳಿಸಿ ಕೊಂಡು ಮುಂದೋಡಬೇಕು ಯಾರು ಮೊದಲು ಗಡಿ ರೇಖೆಯನ್ನು ತಲುಪುತ್ತಾರೆ ಅವರು ಪ್ರಥಮ ಸ್ಥಾನದಲ್ಲಿ ವಿಜಯಶಾಲಿಗಳಾಗುತ್ತಾರೆ.

ಹುಲಿ-ದನದ ಆಟ

ಈ ಆಟದಲ್ಲಿ ಒಬ್ಬ ವ್ಯಕ್ತಿ ಹುಲಿಯಾಗುತ್ತಾನೆ. ಇನ್ನೊಬ್ಬ ವ್ಯಕ್ತಿ ದನ ಆಗುತ್ತಾನೆ. ಉಳಿದವರೆಲ್ಲಾ ವೃತ್ತಾಕಾರದಲ್ಲಿ ಕೋಟೆ ಕಟ್ಟಿ ನಿಲ್ಲುತ್ತಾರೆ. ಮೊದಲು ದನ ಕೊಟೆಯೊಳಗೆ ನಿಲ್ಲುತ್ತದೆ. ಹುಲಿ ಕೋಟೆಯ ಹೊರಗಡೆ ನಿಲ್ಲುತ್ತದೆ. ಆಗ ಪ್ರತಿಯೊಬ್ಬರು ಇದು ಎಂತಹ ಕೋಟೆ ಎಂದು ಪ್ರಶ್ನಿಸಿಕೊಂಡು ಬರುತ್ತಾರೆ. ಆಗ ಎಲ್ಲರೂ ಒಕ್ಕೊರಲಿನಿಂದ ಇದು ಬೆಲ್ಲದ ಕೋಟೆ, ಚಿನ್ನದ ಕೋಟೆ, ಕಲ್ಲಿನ ಕೋಟೆ, ಬೆಳ್ಳಿಯ ಕೋಟೆ ಎಂದು ಹೇಳುತ್ತಿರುತ್ತಾರೆ. ಆಗ ಹುಲಿಯಾದವನು ದುರ್ಬಲರು ಇರುವ ಕಡೆಗೆ ಒಳನುಗ್ಗಲು ಪ್ರಯತ್ನಿಸಬೇಕು. ಹುಲಿಯನ್ನು ಕೋಟೆಯಾಗಿ ನಿಂತವರು ಒಳಹೊಕ್ಕದಂತೆ ಕಾಯಬೇಕು. ಒಂದು ವೇಳೆ ಒಳಗಡೆ ಬಂದರೆ ದನ ಆದವನಿಗೆ ಹೊರಗೆ ಬಿಡುತ್ತಾರೆ. ಒಟ್ಟಿನಲ್ಲಿ ದನವನ್ನು ಹೊರ ಮತ್ತು ಒಳಗಡೆ ಹೋಗಲು ಸರಳವಾಗಿ ಬಿಟ್ಟರೆ. ಹುಲ್ಲಿಗೆ ಒಳ ಹೋಗಲು ಮತ್ತು ಒಳಗೆ ಹೋದನಂತರ ಹೊರಬರಲು ಬಿಡುವುದಿಲ್ಲ. ಕೊನೆಗೆ ಹುಲಿಯಾದವನು ಯಶಸ್ವಿಯಾಗಿ ದನವನ್ನು ಹಿಡಿಯುತ್ತಾನೆ.

ತೋಳ - ಕುರಿ

ಆಟಗಾರರಲ್ಲಿ ಒಬ್ಬನು ತೋಳ ಆಗುತ್ತಾನೆ. ಉಳಿದವರೆಲ್ಲರು ಕುರಿಗಳಾಗುತ್ತಾರೆ. ತೋಳ ಮುಂದಿನಿಂದ ಹೋಗುತ್ತಾನೆ. ಕುರಿಗಳು ಅವನನ್ನು ಹಿಂಬಾಲಿಸುತ್ತವೆ. ಕುರಿಗಳು ತೋಳಣ್ಣಾ ತೋಳಣ್ಣಾ ಸಮಯ ಎಷ್ಟು ಎಂದು ಕೇಳುತ್ತವೆ. ಆಗ ತೋಳ ಏಳು ಗಂಟೆ, ಎಂಟು ಗಂಟೆ, ಎರಡು ಗಂಟೆ ಎನ್ನುತ್ತಾನೆ. ಒಮ್ಮೆಗೆ ಊಟದ ಸಮಯ ಎಂದು ತಿರುಗಿ ಕುರಿಗಳನ್ನು ಓಡಿಸಿ ಹಿಡಿಯುತ್ತಾನೆ. ಅವನ ಕೈಗೆ ಸಿಕ್ಕಿದವರು ಈ ಆಟದಿಂದ ಹೊರ ಹೋಗಬೇಕಾಗುತ್ತದೆ.

ಕೆರೆ - ದಡ

ಈ ಆಟದಲ್ಲಿ ಆಟಗಾರರನ್ನು ಸಾಲಾಗಿ ನಿಲ್ಲಿಸುವುದು. ಆಟ ಆಡಿಸುವವರು ಕೆರೆ ಎಂದಾಗ ಎರಡು ಕಾಲೆತ್ತಿ ಮುಂದಕ್ಕೆ ಹಾರಬೇಕು. ದಡ ಎಂದಾಗ ಕಾಲೆತ್ತಿ ಹಿಂದಕ್ಕೆ ಹಾರಬೇಕು. ಆಡಿಸುವವರು ಕ್ರಮವಾಗಿ ಕೆರೆ-ದಡ ಎನ್ನುತ್ತ ಹೋಗುತ್ತಾರೆ. ಆದರೆ ಇದರಲ್ಲಿ ಆಟಗಾರರು ಆಟವಾಡಿಸುವವನು ಹೇಳುವ ಹಾಗೆ ಆಟವನ್ನು ಆಡಬೇಕು. ಕೆಲವು ಸಮಯದಲ್ಲಿ ಮಧ್ಯೆ ಮಧ್ಯೆ ದಡ ದಡ ಅಥವಾ ಕೆರೆ ಕೆರೆ ಎಂದು ಹೇಳುವ ಆಟಗಾರನ ಗೊಂದಲದ ನುಡಿಗಳನ್ನು ಅಲಿಸಿ ಈ ಆಟವನ್ನು ಆಡಬೇಕು. ಹೀಗೆ ಮಧ್ಯೆ ಮಧ್ಯೆ ದಡ ದಡ ಅಥವಾ ಕೆರೆ ಕೆರೆ ಎಂದು ಹೇಳಿದಾಗ ಆಗ ಆಟಗಾರರು ನಿಂತಲ್ಲೆ ನಿಲ್ಲಬೇಕು. ಒಂದು ವೇಳೆ ಆಟಗಾರರು ಆಟವಾಡಿಸುವವನು ಹೇಳುವ ನುಡಿಗಳನ್ನು ಸರಿಯಾಗಿ ಕೇಳಿಸಿಕೊಳ್ಳದೆ ಹಾರಿದರೆ ಆಟದಿಂದ ಹೊರ ಹೋಗಬೇಕು.

ಪುಣೆಚ್ಚಿಲ್

ಒಂದು ಗೋಲಾಕಾರದ ವರ್ತುಲವನ್ನು ನೆಲದ ಮೇಲೆ ಹಾಕುತ್ತಾರೆ. ಆಟಗಾರರನ್ನು ಎರಡು ಪಂಗಡ ಮಾಡುತ್ತಾರೆ. ಒಂದು ಪಂಗಡದವರು ಒಳಗೆ, ಇನ್ನೊಂದು ಹೊರಗಿನವರು. ಒಳಗಿನವರನ್ನು ಹೊರಗೆ ಎಳೆಯಲು ಪ್ರಯತ್ನಿಸುತ್ತಾರೆ. ಆಗ ಒಳಗಿರುವವರು ಅವರನ್ನು ಥಳಿಸಲು ಪ್ರಯತ್ನಿಸುತ್ತಾರೆ. ಹೊಡೆತ ಸಹಿಸಿಕೊಂಡು ಹೊರಗಿನವರು ಒಳಗಿರುವವರನ್ನು ಎಳೆದು ಹೊರಗೆ ಹಾಕಿದಾಗ ಅವರು ಈ ಆಟದಿಂದ ಹೊರಹೋಗುತ್ತಾರೆ.

ಫಿಸಾಡಿ ಸಮುದಾಯದ ಮಕ್ಕಳು ಈ ಮೇಲಿನ ಆಟಗಳನ್ನು ತಮ್ಮ ಸಮುದಾಯದ ಹಾಗೂ ಸುತ್ತಮುತ್ತಲಿನ ವಿವಿಧ ಸಮುದಾಯದ ಮಕ್ಕಳೊಂದಿಗೆ ಈ ಆಟಗಳನ್ನು ಆಡುತ್ತಾರೆ.

ಆಧಾರಗಳು

೧. ಕಾಳೇಗೌಡ ನಾಗವಾರ ಪ್ರೊ. ಮತ್ತು ಹುಚ್ಚಪ್ಪ ಮಾಸ್ತರ್ ಎನ್. (ಸಂ), *ಗಿರಿಜನ ಸಂಸ್ಕೃತಿ*, ೨೦೦೧, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ. ಬೆಂಗಳೂರು.

2. Enthoven R.E., ***The Tribes and Castes of Bombay***, Publication Asion Educational Services, New Delhi, 1990

3. Grierson G.A., ***Linguistic Survey of India***, Vol-IX, Indo Aryan family Central group Rajasthani and Gujarat, 1968

4. Shepring M.A., ***Hindu Tribes and Caste***, Cosmo publications, New Delhi, 1974

5. Singh K.S., ***India is Communities***, A.G., Vol-IV, Oxford University press, New Delhi, 1998

6. Syed Siraj-Ul-Hasan., ***The Castes and Tribes of HEH the Nizam's Dominions***, Asian Educational Services, New Delhi, 1989

ಅಧ್ಯಾಯ - ೭

ಸಮುದಾಯದ ಸಮಸ್ಯೆಗಳು ಮತ್ತು ಪರಿಹಾರೋಪಾಯಗಳು

೧. ವಸತಿ

೨. ಶಿಕ್ಷಣ

೩. ಮೀಸಲಾತಿ

೪. ಸಂಘಟನೆ

೫. ರಾಜಕೀಯ ಪ್ರಾತಿನಿಧ್ಯ ಕೊರತೆ

೬. ಸಮುದಾಯದ ಅಭಿವೃದ್ಧಿಗೆ ಪರಿಹಾರೋಪಾಯಗಳು

ಸಮುದಾಯದ ಸಮಸ್ಯೆಗಳು ಮತ್ತು ಪರಿಹಾರೋಪಾಯಗಳು

ಸಮಾಜವು ನಿತ್ಯ ಪರಿವರ್ತನಶೀಲವಾದುದರ ಜೊತೆಗೆ ಅದು ಒಂದು ಜೀವಂತ ವ್ಯವಸ್ಥೆಯಾಗಿರುವುದಕ್ಕೆ ಮಾನವನ ಬುದ್ಧಿಶಕ್ತಿ, ರಚನಾತ್ಮಕ ಶಕ್ತಿ, ನೈಸರ್ಗಿಕ ಅಂಶಗಳು ಕಾರಣವಾಗಿವೆ. ಸಮಾಜದ ಒಂದು ಕ್ಷೇತ್ರದಲ್ಲಾದ ಬದಲಾವಣೆಗಳು ಇತರ ಕ್ಷೇತ್ರಗಳ ಮೇಲೂ ಪ್ರಭಾವ ಬೀರುತ್ತವೆ. ಬಹುದಿನಗಳ ಹಿಂದೆ ಸಾಮಾಜಿಕ ರಚನೆ ಹಾಗೂ ಸಮುದಾಯಗಳು ತೀರಾ ಸರಳವಾಗಿದ್ದು, ಆಗ ಬದಲಾವಣೆಗಳಿಗೆ ಅವಕಾಶಗಳು ಕಡಿಮೆ ಇದ್ದವು. ಕಾಲಾನುಕ್ರಮದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನಗಳ ಬೆಳವಣಿಗೆಳಾದವು. ಇಂದು ಜೀವನದ ಎಲ್ಲ ಕ್ಷೇತ್ರಗಳಲ್ಲಿ ಬದಲಾವಣೆಗಳಾಗುತ್ತಿವೆ. ಕಾಲಕಾಲಕ್ಕೆ ಎಲ್ಲೆಡೆ ನೂತನ ನಿಯಮಗಳು ಕಾಣಿಸಿಕೊಳ್ಳುತ್ತಿವೆ. ಹಳೆಯ ಆಚಾರ-ವಿಚಾರ ಮತ್ತು ಹೊಸ ಬದಲಾವಣೆಗಳ ನಡುವೆ ಸಂಘರ್ಷಗಳು ತಲೆದೋರಿವೆ. ಸಾಮಾಜಿಕ ಬದಲಾವಣೆಯ ವೇಗವು ಬಹಳ ತೀವ್ರವಾಗಿದ್ದು ಅದರ ಜೊತೆಯಲ್ಲಿ ಸೂಕ್ತವಾಗಿ ಸ್ಪಂದಿಸಲು ಬಹುತೇಕ ಜನರು ವಿಫಲರಾದರೆ ಸಾಮಾಜಿಕ ರಚನೆಯಲ್ಲಿ ಏರುಪೇರಾಗುತ್ತದೆ. ತನ್ಮೂಲಕ ಸಾಮಾಜಿಕ ವಿಘಟನೆಗಳು ಸಂಭವಿಸುತ್ತದೆ.

ಸಾಮಾಜಿಕ ವ್ಯವಸ್ಥೆಯಲ್ಲಿ ಪ್ರತಿಯೊಂದು ಜಾತಿ ಬುಡಕಟ್ಟುಗಳು ತನ್ನದೇ ಆದ ಸಂಸ್ಕೃತಿ ಸಂಪ್ರದಾಯ, ಲೋಕ ರೂಢಿ, ನೈತಿಕ ನಿಯಮ, ಧಾರ್ಮಿಕತೆ, ಕಲೆ, ಸಾಹಿತ್ಯ ಮೊದಲಾದ ಅಂಶಗಳು ಒಳಗೊಂಡಿರುತ್ತವೆ. ಸಂಸ್ಕೃತಿಯ ಈ ಎಲ್ಲ ಅಂಶಗಳೂ ಒಂದೇ ಪ್ರಮಾಣದ ವೇಗದಲ್ಲಿ ಬದಲಾವಣೆ ಹೊಂದುವುದಿಲ್ಲವಾದ್ದರಿಂದ ಅಂತೆಯೇ ಆರ್ಗ್‌ಬನ್‌ರವರು ಸಂಸ್ಕೃತಿಯನ್ನು ಎರಡು ಪ್ರಕಾರಗಳಲ್ಲಿ ವಿಭಾಗಿಸಿ ಕೂಲಂಕಷವಾಗಿ ಅಧ್ಯಯನ ಮಾಡಿ ಸಮಾಜಕ್ಕೆ ಸಾದರಪಡಿಸಿದ್ದಾರೆ. ಅವುಗಳೆಂದರೆ, ೧. ಭೌತಸಂಸ್ಕೃತಿ ೨. ಅಭೌತಸಂಸ್ಕೃತಿ.

ಭೌತಸಂಸ್ಕೃತಿಯು ನಾವು ಉಪಯೋಗಿಸುವ ಉಪಕರಣಗಳು, ಯಂತ್ರಗಳು, ಸಂಪರ್ಕ ಮತ್ತು ಸಮಾಚಾರ ಸಾಧನಗಳು ನಾವು ವಾಸಿಸುವ ಮನೆ, ವಸ್ತುಗಳ ಉತ್ಪಾದನೆ ಮೊದಲಾದವುಗಳನ್ನು ಒಳಗೊಂಡಿರುತ್ತದೆ. ಅಭೌತ ಸಂಸ್ಕೃತಿಯು ಆಚಾರ-ವಿಚಾರಗಳು, ರೀತಿ-ನೀತಿಗಳು, ಸಂಘ-ಸಂಸ್ಥೆಗಳು, ಧ್ಯೇಯ-ಧೋರಣೆಗಳು, ಜೀವನದ ಬಗೆಗಿನ ದೃಷ್ಟಿಕೋನಗಳು ಮೊದಲಾದವುಗಳನ್ನು ಒಳಗೊಂಡಿರುತ್ತದೆ.

ಭೌತಸಂಸ್ಕೃತಿಯಲ್ಲಿ ಬದಲಾವಣೆಯಾಗುವುದರಿಂದ ಅಭೌತಸಂಸ್ಕೃತಿಯಲ್ಲಿಯೂ ಅನೇಕ ಬದಲಾವಣೆಗಳಾಗುತ್ತವೆ. ಭೌತಸಂಸ್ಕೃತಿಯ ಬದಲಾವಣೆಯ ಪ್ರಮಾಣ ಹೆಚ್ಚಾದರೆ, ಅಭೌತ ಸಂಸ್ಕೃತಿಯ ಬದಲಾವಣೆಯ ಪ್ರಮಾಣ ಕಡಿಮೆ. ಇದರಿಂದಾಗಿ ಇವೆರಡರ ನಡುವೆ ಬಹಳ ಅಂತರ ಉಂಟಾಗಿ ಸಮುದಾಯಗಳಲ್ಲಿ ಕಾಲಮಾನಕ್ಕೆ ತಕ್ಕಂತೆ ತಮ್ಮ ಸಂಸ್ಕೃತಿಗಳಲ್ಲಿ ನಿಧಾನ ಪರಿವರ್ತನೆಗಳಾಗುತ್ತಿರುವುದು ಕಂಡುಬರುತ್ತವೆ. ಈ ಭೌತಸಂಸ್ಕೃತಿ ಹಾಗೂ ಅಭೌತಸಂಸ್ಕೃತಿಗಳ ನಡುವಿನ ವ್ಯತ್ಯಾಸಗಳೇ ಸಮಾಜದಲ್ಲಿನ ಸಮುದಾಯಗಳಲ್ಲಿ ಅನೇಕ ಸಮಸ್ಯೆಗಳು ಹುಟ್ಟಿಕೊಳ್ಳುತ್ತವೆ. ಅಲ್ಲದೆ ಇಂದಿನ ವಿಜ್ಞಾನ, ತಂತ್ರಜ್ಞಾನಗಳ ಅಗಾಧ ಬೆಳವಣಿಗೆಯು ಉತ್ಪಾದನೆಯ ಸಾಧನ ಸಲಕರಣೆಗಳಲ್ಲಿ, ವಿಧಾನಗಳಲ್ಲಿ, ಅನೇಕ ಮಾರ್ಪಾಡುಗಳನ್ನುಂಟುಮಾಡಿದೆ. ಇಂದು ಉತ್ಪಾದನೆಗಾಗಿ ಬೃಹತ್ ಯಂತ್ರಗಳನ್ನು ವಿಪರಿತವಾಗಿ ಬಳಸಲಾಗುತ್ತಿದೆ. ಯಂತ್ರಗಳ ಚಾಲನೆಗಾಗಿ ತೈಲಶಕ್ತಿ, ವಿದ್ಯುಚ್ಛಕ್ತಿ, ಅಣುಶಕ್ತಿ ಮೊದಲಾದ ವಿವಿಧ ಶಕ್ತಿಗಳನ್ನು ಉಪಯೋಗಿಸಲಾಗುತ್ತಿದೆ.

ಹೀಗಾಗಿ ಬೃಹತ್ ಯಂತ್ರಗಳನ್ನೊಳಗೊಂಡ ಹೆಚ್ಚು ಬಂಡವಾಳ ಹೂಡಿದ ದೊಡ್ಡ ಗಿರಣಿಗಳು, ಬೃಹತ್ ಕಾರ್ಖಾನೆಗಳು ಸ್ಥಾಪನೆಯಾಗುತ್ತಿವೆ. ದೊಡ್ಡ ಯಂತ್ರಗಳ ಬಿಡಿ ಭಾಗಗಳನ್ನು ತಯಾರಿಸುವ ಚಿಕ್ಕ ಪ್ರಮಾಣದ ಯಂತ್ರಾಗಾರಗಳೂ ಸ್ಥಾಪಿತವಾಗುತ್ತಿವೆ. ಆಧುನಿಕ ಉತ್ಪಾದನಾ ಕ್ರಮದಲ್ಲಿ ಸಹಸ್ರಾರು ಜನರ ದುಡಿಮೆಯಿಂದ ಮಾಡುವ ಕೆಲಸವನ್ನು ಕೇವಲ ಕೆಲವೇ ಗಂಟೆಗಳಲ್ಲಿ ಯಂತ್ರಗಳ ಸಹಾಯದಿಂದ ಮಾಡಿ ಮುಗಿಸಲಾಗುತ್ತಿದೆ. ಖನಿಜ ಸಂಪತ್ತು ಹೇರಳವಾಗಿ ದೊರೆಯುವ ಪ್ರದೇಶಗಳಲ್ಲಿ ಗಣಿಗಳು, ಕಾರ್ಖಾನೆಗಳು ಸ್ಥಾಪನೆಯಾಗುತ್ತಿವೆ. ಇವುಗಳಲ್ಲಿ ಕೆಲಸ ಮಾಡಲು ಅನೇಕ ಜನರು ಗ್ರಾಮೀಣ ಸಮುದಾಯಗಳಿಂದ ತಂಡೋಪತಂಡವಾಗಿ ನಗರಗಳಿಗೆ ವಲಸೆ ಬಂದು ಕೆಲಸಕ್ಕೆ ಸೇರುತ್ತಿದ್ದಾರೆ. ಇದರಿಂದಾಗಿ ಗ್ರಾಮಗಳಲ್ಲಿ ಒಕ್ಕಲುತನ ಹಿನ್ನಡೆಯಾಗಿ, ಗ್ರಾಮ ಮತ್ತು ನಗರಗಳಲ್ಲಿ ಹೊಸ ಹೊಸ ಸಮಸ್ಯೆಗಳು ಹುಟ್ಟಿಕೊಳ್ಳುತ್ತಿವೆ. ಗ್ರಾಮಗಳಲ್ಲಿನ ಅನೇಕ ಕುಲಕಸುಬು ಆಧಾರಿತ ಜೀವನ ನಡೆಸುವ ಕುಟುಂಬಗಳು ಇಂದು ಬೀದಿಪಾಲಾಗುತ್ತಿವೆ. ಅಲ್ಲದೆ ನಗರಗಳು ಪೂರ್ವ ಯೋಜನೆಯ ಆಧಾರದ ಮೇಲೆ ರೂಪಗೊಳ್ಳದೆ ಕೊಳಚೆ ಪ್ರದೇಶಗಳನ್ನು ಹೊಂದಿ ಸಾಧನ ಸಂಪತ್ತಿನ ಆಗರವಾಗಿರುವುದರ ಜೊತೆಗೆ ಹಲವಾರು ಸಾಮಾಜಿಕ ಸಮಸ್ಯೆಗಳ ಪ್ರಮುಖ ಮೂಲ ಕೇಂದ್ರಗಳಾಗುತ್ತಿವೆ. ಇವುಗಳಿಂದಾಗಿ ಅನೇಕ ಜಾತಿ ಬುಡಕಟ್ಟು ಸಮುದಾಯಗಳಲ್ಲಿ ದೈನಂದಿನ ಜೀವನ ನಿರ್ವಹಣೆಯಲ್ಲಿ ಅನೇಕ ಸಮಸ್ಯೆಗಳು ತಲೆದೋರುತ್ತಿವೆ.

ಇಂತಹ ಸಮಸ್ಯೆಗಳನ್ನು ಸಾಮಾನ್ಯವಾಗಿ ಹಲವು ವ್ಯಕ್ತಿಗಳಿಗೆ ಏಕಕಾಲದಲ್ಲಿ, ಏಕ ಪ್ರಕಾರವಾಗಿ ಕಂಡುಬಂದರೆ ಅವುಗಳನ್ನು ಸಾಮಾಜಿಕ ಸಮಸ್ಯೆಗಳೆಂದು ಕರೆಯಬಹುದು. ಅವು ಬಹಳಷ್ಟು ಜನರಿಗೆ ಕಂಡುಬರುತ್ತಿರುವ ಸಮಸ್ಯೆಗಳಾಗಿರುವುದರಿಂದ ಸಾಮಾಜಿಕ ಸಮಸ್ಯೆಗಳೆನಿಸುತ್ತವೆ. ಅಲ್ಲದೆ ಯಾವುದೋ ತೊಂದರೆಯು ನಿರಂತರವಾಗಿ ಕಾಡುತ್ತಿದ್ದು ಅದನ್ನು ಅನಿವಾರ್ಯವಾಗಿ ಅನುಭವಿಸುವಂತಹ

ವಾತಾವರಣ ನಿರ್ಮಾಣವಾದರೆ ಅದನ್ನು ಕೂಡಾ ಸಮಸ್ಯೆ ಎಂದು ಪರಿಗಣಿಸಲಾಗುತ್ತದೆ. ಸಮಸ್ಯೆಗಳನ್ನು ಬಹುಮಟ್ಟಿಗೆ ಕೆಲವನ್ನು ಕಣ್ಣಿನಿಂದ ನೋಡಬಹುದು. ಆದರೆ ಕೈಯಿಂದ ಹಿಡಿಯುವುದು ಸಾಧ್ಯವಾಗುವುದಿಲ್ಲ. ಆದರೆ ಅದರ ಇರುವಿಕೆಯನ್ನು ಸಾಮಾನ್ಯವಾಗಿ ಎರಡು ಮಾರ್ಗಗಳಿಂದ ಗುರುತಿಸಬಹುದು.

ಮೊದಲನೆಯದಾಗಿ ಆ ಸಮಸ್ಯೆಯನ್ನು ನೇರವಾಗಿ ಅನುಭವಿಸುವವರೇ ಸ್ವತಃ ಅದರ ಬಗ್ಗೆ ತಿಳಿಯಪಡಿಸಿದಾಗ ಹಾಗೂ ಎರಡನೆಯದಾಗಿ ತಜ್ಞರು ಅಥವಾ ಅಧ್ಯಯನಕಾರರು (ಸಂಶೋಧಕರು) ಆ ಸಮಸ್ಯೆಯ ಹಲವಾರು ಲಕ್ಷಣಗಳ ವಿವಿಧ ಮುಖಗಳು ಹಾಗೂ ಪರಿಣಾಮಗಳ ಆಧಾರದ ಹಿನ್ನೆಲೆಯ ಪರಿಸ್ಥಿತಿಗಳನ್ನು ತಿಳಿದುಕೊಂಡು ವಿವರಿಸಿದಾಗ, ಇಲ್ಲಿ ಅಧ್ಯಯನಕಾರರು ಸಮಸ್ಯೆಗಳನ್ನು ಅರಿತುಕೊಳ್ಳಲು ಅವುಗಳನ್ನು ಅನುಭವಿಸುವುದರೊಂದಿಗೆ ನಿಕಟವಾದ ಸಂಪರ್ಕಗಳು ಹೊಂದಿರಬೇಕಾದದ್ದು ತುಂಬಾ ಅಗತ್ಯವಾಗಿರುತ್ತದೆ.

ಪ್ರಸ್ತುತ ಘಿಸಾಡಿ ಸಮುದಾಯವು ಕೂಡಾ ಇಂದಿನ ಆಧುನಿಕ ಜಗತ್ತಿನಲ್ಲಿ ಕೊಳಗೇರಿ ನಿವಾಸಿಗಳಾಗಿ, ಅಲೆಮಾರಿಗಳಾಗಿ ಮತ್ತು ಆಧುನಿಕ ತಂತ್ರಜ್ಞಾನದಿಂದ ಇವರ ಪಾರಂಪರಿಕ ಕಂಬಾರಿಕೆ ವೃತ್ತಿ ಮೂಲೆಗುಂಪಾಗಿ ಇವರು ಇಂದು ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿರುವುದು ಅಧ್ಯಯನದ ಕ್ಷೇತ್ರಕಾರ್ಯದಿಂದ ತಿಳಿದುಬರುತ್ತದೆ.

ಮಾನವನಿಗೆ ಮೂಲಭೂತ ಅವಶ್ಯಕತೆಗಳಾದ ಆಹಾರ, ವಸತಿ, ಬಟ್ಟೆ, ಗಾಳಿ, ಬೆಳಕು ಇವು ಮುಖ್ಯವಾಗಿರುತ್ತವೆ. ಇಂತಹ ಮೂಲಭೂತ ಅವಶ್ಯಕತೆಗಳನ್ನು ಪೂರೈಸಿಕೊಳ್ಳಲು ಇಂದು ಘಿಸಾಡಿ ಸಮುದಾಯದವರು ಪರಿತಪಿಸುತ್ತಿರುವುದು ಕಂಡುಬರುತ್ತದೆ. ಅವುಗಳಲ್ಲಿ ಇವರ ಕೆಲವು ಪ್ರಮುಖವಾದ ಸಮಸ್ಯೆಗಳನ್ನು ಮಾತ್ರ ಇಲ್ಲಿ ಚರ್ಚಿಸಿ ವಿವರಿಸಲಾಗಿದೆ.

೧. ವಸತಿ ಸಮಸ್ಯೆ

ಮೂಲತಃ ಅಲೆಮಾರಿಗಳಾದ ಘಿಸಾಡಿ ಸಮುದಾಯದವರು ನೆಲೆ ನಿಂತುಕೊಳ್ಳುತ್ತಿರುವ ಈ ಸಂದರ್ಭಗಳಲ್ಲಿ ಇವರಲ್ಲಿನ ಅನೇಕ ಕುಟುಂಬಗಳಿಗೆ ವಾಸಿಸಲು ವಾಸದ ಮನೆಗಳಿಲ್ಲದೆ ವಸತಿ ವಂಚಿತರಾಗಿದ್ದು, ಇಂದು ಸಹ ಗುಡಾರ-ಗುಡಿಸಲುಗಳಲ್ಲಿಯೇ ವಾಸಿಸುತ್ತಿದ್ದಾರೆ. ನೂರಕ್ಕೆ ಒಬ್ಬರು ಎಂಬಂತೆ ಈ ಸಮುದಾಯದ ಕೆಲವೊಂದು ಕುಟುಂಬಗಳು ಇಂದು ಗ್ರಾಮೀಣ ಪ್ರದೇಶಗಳಲ್ಲಿನ ಅನೇಕ ಹಳ್ಳಿಗಳಲ್ಲಿ ಸ್ವಂತ ಖಾಲಿ ನಿವೇಶನ ಮತ್ತು ಚಿಕ್ಕ ಪುಟ್ಟ ಒಂದು ಅಥವಾ ಎರಡು ಕೋಣೆಗಳಿಂದ ಕೂಡಿದ ಇಕ್ಕಟ್ಟಾದ ಮನೆಗಳನ್ನು ಹೊಂದುತ್ತಿರುವುದು ಕಂಡುಬರುತ್ತಿದೆ. ಅವುಗಳಿಗೆ ಒಳ್ಳೆಯ ಗಾಳಿ, ಬೆಳಕು ಇಲ್ಲದೆ ಕತ್ತಲೆಯಿಂದ ಕೂಡಿದ ಇಕ್ಕಟ್ಟಾದ ಮನೆಗಳಾಗಿವೆ. ಅಲ್ಲದೆ ಆ ಒಂದು ಅಥವಾ ಎರಡು ಕೋಣೆಗಳಿರುವ ಕುಟುಂಬದಲ್ಲಿಯೇ ಇಡೀ ಕುಟುಂಬದ ಎಲ್ಲಾ ಸದಸ್ಯರು ವಾಸವಾಗಿದ್ದು ಅವು ಕಿಕ್ಕಿರಿದ ಜನಸಂದಣಿಯಿಂದ ಕೂಡಿದ ವಸತಿ ನೆಲೆಗಳೆನಿಸುತ್ತವೆ. ಕೆಲವರು

ಅಕ್ಕಪಕ್ಕದ ಖಾಲಿ ಸ್ಥಳಗಳಲ್ಲಿ ಗುಡಾರಗಳು ಹಾಕುತ್ತಾರೆ. ಆದ್ದರಿಂದ ಇವರಿಗೆ ವಾಸಕ್ಕೆ ಉತ್ತಮವಾದ ಮನೆಯನ್ನು ಕಟ್ಟಿಕೊಳ್ಳುವುದು, "ಕನಸಾಗಬಹುದೇ ಹೊರತು, ನನಸಾಗುವುದು ಬಹುದಿನದ ಮಾತಾಗಿದೆ". ಇನ್ನು ಕೆಲವರು ಇತ್ತೀಚಿನ ದಿನಗಳಲ್ಲಿ ಅತ್ಯಂತ ಕನಿಷ್ಠ ದರಗಳ ಬಾಡಿಗೆ ಮನೆಗಳಲ್ಲಿ ವಾಸಿಸುತ್ತಿದ್ದಾರೆ. ಆ ಮನೆಗಳಿಗೆ ಬಚ್ಚಲು ಮತ್ತು ಹತ್ತಿರದಲ್ಲಿ ಸಾರ್ವಜನಿಕ ನಲ್ಲಿಗಳೂ ಕೂಡಾ ಇರುವುದಿಲ್ಲ. ಇವರ ಅನೇಕ ಕುಟುಂಬಗಳು ತಾವು ವಾಸಿಸುವ ಮನೆಯ ಹಿತ್ತಲಿನಲ್ಲಿ ಇಲ್ಲವೇ ಅಂಗಳದಲ್ಲಿ ತಡಿಕೆ ಅಥವಾ ಗೋಣಿತಟ್ಟುಗಳಿಂದ ಮಾಡಿದ ಬಚ್ಚಲಿನಲ್ಲಿ ಸ್ನಾನ ಮಾಡುತ್ತಾರೆ. ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಒಬ್ಬ ಅಜ್ಜಿಯು ಸ್ನಾನ ಮಾಡುವಾಗ, ಅದರ ಒಂದು ಪೋಟೋ ತೆಗೆಯಲು ಕೇಳಿಕೊಂಡೆ, ಅಜ್ಜಿಯ ಮೊಮ್ಮಗ ಈ ಪೋಟೊ ತೆಗೆಯಬಾರದು ಸರ್! ಎಂದ. ಆದರೆ ಅಜ್ಜಿ ಪೋಟೋ ತೆಗೆದರೇನೇ ನಮಗೆ ಸ್ನಾನದ ಮನೆ ಇಲ್ಲದಿರುವುದು ಸರ್ಕಾರದ ದೊರೆಗೆ ಗೊತ್ತಾಗುತ್ತದೆ ಎಂದು ಹೇಳಿದಳು. ಸ್ತ್ರೀಯರು ಮನೆ ಬಳಕೆ ನೀರಿಗಾಗಿ ಬಾವಿ, ಹಳ್ಳ, ಸಾರ್ವಜನಿಕ ನಲ್ಲಿಗಳಿಗೆ ಹೋಗಿ ನೀರು ತುಂಬಿಕೊಂಡು ಬರುತ್ತಾರೆ. ಇವರು ಶೌಚಾಲಯಕ್ಕೆ ಸಾರ್ವಜನಿಕ ಶೌಚಾಲಯಗಳಿಗೆ ಅಥವಾ ಹೊರಗಿನ ಬಯಲು ಪ್ರದೇಶಕ್ಕೆ ಹೋಗುತ್ತಾರೆ.

ಇನ್ನು ಕೆಲವು ನಗರ ಅಥವಾ ಪಟ್ಟಣ ಪ್ರದೇಶದ ಕೇಂದ್ರದಲ್ಲಿ ವಾಸಿಸುವ ಘಿಸಾಡಿ ಸಮುದಾಯದವರಿಗೆ ಕೊಳಚೆ ಪ್ರದೇಶಗಳು ಮತ್ತು ಸಾರ್ವಜನಿಕ ರಸ್ತೆಗಳೇ ಗತಿಯಾಗಿವೆ. ಈ ಕೊಳಚೆ ಪ್ರದೇಶಗಳಲ್ಲಿ ಸರಿಯಾದ ರಸ್ತೆಗಳಿರುವುದಿಲ್ಲ, ಒಳಚರಂಡಿ ವ್ಯವಸ್ಥೆಗಳಿರುವುದಿಲ್ಲ, ಬೀದಿ ದೀಪಗಳಿರುವುದಿಲ್ಲ, ಸರಿಯಾದ ಸಾರ್ವಜನಿಕ ಶೌಚಗೃಹಗಳಿರುವುದಿಲ್ಲ, ಇವರ ಗುಡಿಸಲು ಗುಡಾರಗಳೇ ತುಂಬಿರುತ್ತವೆ. ಅಲ್ಲದೆ ಅಕ್ಕಪಕ್ಕದಲ್ಲಿ ಇನ್ನುಳಿದ ಅನೇಕ ಅಲೆಮಾರಿ ಸಮುದಾಯಗಳ ಗುಡಾರ ಗುಡಿಸಲುಗಳಿರುತ್ತವೆ. ಇನ್ನು ಕೆಲವರು ಸಾರ್ವಜನಿಕ ರಸ್ತೆಯ ಬದಿಯಲ್ಲಿ ಗುಡಾರ ಹಾಕಿಕೊಂಡು ವಾಸಿಸುವವರಾಗಿದ್ದಾರೆ. ಇವರಿಗೆ ನಗರಸಭೆ, ಪುರಸಭೆಯವರ ಮತ್ತು ಪೋಲೀಸರ ಕಿರಿಕಿರಿ ಜೊತೆಗೆ ಸೊಳ್ಳೆ, ಹಂದಿ, ನಾಯಿಗಳ ಕಾಟವಂತು ಹೇಳತಿರದು. ಇವರಿಗೆ ಅಂಗಳವೇ ಅಡುಗೆ ಮನೆ. ಕೆಲವೊಂದು ಸಲ ಗಾಳಿ, ಧೂಳು, ಮಳೆ ಬಂದಾಗ ಉಪವಾಸವೇ ಗತಿಯಾಗಿದ್ದು, ಒಪ್ಪತ್ತು ಊಟ ಮಾಡಲು ಪರಿತಪಿಸುವಂತಹ ಪ್ರಸಂಗಗಳು ಇವರಿಗೆ ಬಂದೊದಗುತ್ತವೆ. ಇಡೀ ಕುಟುಂಬದಲ್ಲಿ ಇವರ ವಯಸ್ಸಾದ ಅಜ್ಜ-ಅಜ್ಜಿ, ತಂದೆ-ತಾಯಿ, ಮಕ್ಕಳು, ಯುವಕ-ಯುವತಿಯರು, ಹೊಸದಾಗಿ ಮದುವೆ ಮಾಡಿಕೊಂಡು ಸಂಸಾರ ಮಾಡುವವರು ಒಂದೇ ಗುಡಾರ ಅಥವಾ ಗುಡಿಸಲಿನಲ್ಲಿಯೇ ಮಲಗಬೇಕಾಗುತ್ತದೆ. ಪ್ರತ್ಯೇಕತೆಗೆ ಅವಕಾಶವಿರುವುದಿಲ್ಲ. ಹೀಗಾಗಿ ಇವರ ವಾಸದ ಮನೆಗಳ ಮಾಹಿತಿ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಕಂಡುಕೊಂಡ ಅಂಕಿ-ಅಂಶಗಳನ್ನು ಇಲ್ಲಿ ನೋಡಬಹುದು.

ಜನಗಣತಿಯ ಪ್ರಕಾರ ವಾಸದ ಮನೆ ಎಂದರೆ, "ಪೂರ್ತಿಯಾಗಿ ಅಥವಾ ಭಾಗಶಃ ಒಂದು ಅಥವಾ ಒಂದಕ್ಕಿಂತ ಹೆಚ್ಚು ಕುಟುಂಬಗಳು ವಾಸಿಸುವ ಕಟ್ಟಡ" ಎಂದರ್ಥ. ಕುಟುಂಬವೆಂದರೆ

ಸಮಾಜಶಾಸ್ತ್ರಜ್ಞರ ಪ್ರಕಾರ "ಒಬ್ಬರು ಅಥವಾ ಒಬ್ಬರಿಗಿಂತ ಹೆಚ್ಚು ಜನರು ಒಟ್ಟಿಗೆ ವಾಸಿಸುತ್ತಿದ್ದು, ಒಂದೇ ಅಡಿಗೆ ಮನೆಯಲ್ಲಿ ತಯಾರಿಸಿದ ಅಡಿಗೆಯನ್ನು ಊಟ ಮಾಡುವ ಜನರ ಸಮೂಹ" ಎಂದರ್ಥ. ಘಿಸಾಡಿ ಸಮುದಾಯದ ಕುಟುಂಬಗಳಿಗೆ ಸ್ವತಃ ವಾಸದ ಮನೆಗಳೇ ಇರುವುದಿಲ್ಲ ಎಂಬುದು ಕ್ಷೇತ್ರಕಾರ್ಯದಿಂದ ಈ ಕೆಳಗಿನ ಕೋಷ್ಟಕದಲ್ಲಿ ಅಂಕಿ-ಅಂಶಗಳಿಂದ ತಿಳಿದುಬರುತ್ತದೆ.

ಕೋಷ್ಟಕ ೧. ಘಿಸಾಡಿ ಸಮುದಾಯದ ತಾಲೂಕುವಾರು ಮನೆಗಳ ಮಾದರಿ

ಸಂಖ್ಯೆ	ತಾಲೂಕುಗಳು	ಕುಟುಂಬ	ಗುಡಾರ	ಗುಡಿಸಲು	ಟಿನ್	ಮಾಳಿಗೆ	ಆರ್.ಸಿ.ಸಿ.	ಜನತಾ	ಬಾಡಿಗೆ
೧	ಅಫಜಲ್‌ಪುರ	೨೮	--	೧	೩	೧೨	೨	--	೧೦
೨	ಆಳಂದ	೧೬	೧	೪	೭	೩	--	೧	--
೩	ಚಿತ್ತಾಪುರ	೯೧	೧	೫	೧	೩೬	--	೨	೪೬
೪	ಚಿಂಚೋಳಿ	೪೮	--	೯	--	೨೭	೧	೩	೮
೫	ಗುಲ್ಬರ್ಗಾ	೬೦	೯	೨	೬	--	೯	೧	೩೩
೬	ಜೇವರ್ಗಿ	೨೧	೧	೧೦	೩	೫	೧	--	೧
೭	ಶಹಾಪುರ	೧೯	೧೮	೧	--	--	--	--	--
೮	ಸೇಡಂ	೩೭	೪	೨	೨	೧೪	--	--	೧೫
೯	ಯಾದಗಿರಿ	೧೫	೮	--	--	೨	--	--	೫
	ಒಟ್ಟು	೩೩೫	೪೨	೩೪	೨೨	೯೯	೧೩	೭	೧೧೮

ಮೇಲ್ಕಾಣಿಸಿದ ಕೋಷ್ಟಕದಲ್ಲಿನ ಘಿಸಾಡಿ ಸಮುದಾಯದ ಮನೆಗಳ ಮಾದರಿಗಳನ್ನು ಗಮನಿಸಿದಾಗ ಗುಲ್ಬರ್ಗಾ ಜಿಲ್ಲೆಯ ಹತ್ತು ತಾಲ್ಲೂಕುಗಳಲ್ಲಿ ಸುರಪುರ ತಾಲ್ಲೂಕನ್ನು ಹೊರತುಪಡಿಸಿ ಉಳಿದ ಒಂಬತ್ತು ಕೇಂದ್ರಗಳು ಮತ್ತು ಗ್ರಾಮೀಣ ಪರಿಸರಗಳನ್ನೊಳಗೊಂಡಂತೆ ಒಟ್ಟು ೩೩೫ ಕುಟುಂಬಗಳು ನೆಲೆಸಿದ್ದು, ಬಹುತೇಕ ಜನರಿಗೆ ವಾಸಿಸಲು ವಾಸದ ಮನೆಗಳಿಲ್ಲ. ಇವರಲ್ಲಿ ೪೨ ಕುಟುಂಬಗಳು ರಸ್ತೆಯ ಬದಿಯಲ್ಲಿ ಗುಡಾರಗಳಲ್ಲಿ ನೆಲೆಸಿದ್ದು ಕಾಣಸಿಗುತ್ತದೆ. ಇವರಲ್ಲಿ ಕೆಲವರು ಸಂಚಾರಿಗಳಾಗಿದ್ದಾರೆ. ೩೪ ಕುಟುಂಬಗಳು ಗುಡಿಸಲು(ಹುಲ್ಲಿನ ಚಾವಣಿಯಂತಹ ಜೋಪಡಿ)ಗಳಲ್ಲಿ ವಾಸಿಸುವವರಾಗಿದ್ದು ಇವರು ಕೂಡಾ ಸಂಚಾರಿಗಳಾಗಿದ್ದಾರೆ. ೨೨ ಕುಟುಂಬಗಳು ಟಿನ್ ಮನೆಗಳಲ್ಲಿ ವಾಸವಾಗಿದ್ದಾರೆ. ಇವುಗಳಲ್ಲಿ ಕೆಲವೇ ಕೆಲವರು ಸರ್ಕಾರಿ ಟಿನ್ ಮನೆಗಳನ್ನು ಪಡೆದುಕೊಂಡಿದ್ದಾರೆ. ೯೯ ಕುಟುಂಬಗಳು ಬಹುದಿನಗಳಿಂದ ಒಂದು ಗ್ರಾಮ ಇಲ್ಲವೇ ಪಟ್ಟಣಗಳಲ್ಲಿ ನೆಲೆಯೂರಿಕೊಂಡು ಒಂದು ಅಥವಾ ಎರಡು ಚಿಕ್ಕ ಕೋಣೆಗಳನ್ನು ಹೊಂದಿರುವಂತಹ ತುಂಬಾ ಇಕ್ಕಟ್ಟಾಗಿರುವ ಮಾಳಿಗೆ ಮನೆಗಳನ್ನು ಹೊಂದಿದ್ದಾರೆ. ಇಡೀ ೩೩೫ ಕುಟುಂಬಗಳಲ್ಲಿ ಕೇವಲ ೭ ಕುಟುಂಬಗಳು ಮಾತ್ರ ಸರ್ಕಾರಿ ಜನತಾ ಆಶ್ರಯದಲ್ಲಿ ಮನೆ ಪಡೆದಿರುವುದು ಕಂಡುಬರುತ್ತದೆ. ಉಳಿದ ೧೧೮ ಕುಟುಂಬಗಳು ಯಾವುದೇ ಮನೆಯನ್ನು ಹೊಂದಿರದೆ ಕೇವಲ ೧೫೦ರಿಂದ ೨೦೦ ರೂ.ವರೆಗಿನ ಬಾಡಿಗೆ ಮನೆಗಳಲ್ಲಿ ವಾಸವಾಗಿರುವುದು ಮೇಲೆ ತೋರಿಸುವ ಕೊಷ್ಟಕದ ಕ್ಷೇತ್ರಕಾರ್ಯದಿಂದ

ತಿಳಿದುಬರುತ್ತದೆ. ಈ ೧೧೮ ಕುಟುಂಬಗಳು ರಸ್ತೆಯ ಬದಿಯಲ್ಲಿಯೇ ಜೀವಿಸುತ್ತಿದ್ದಾರೆ ಎಂದು ಪರಿಗಣಿಸಬೇಕಾಗುತ್ತದೆ. ಹೀಗಾಗಿ ಇವರಿಗೆ ನೆಲೆಸಲು ಒಂದು ಸೂರಿನ ಅವಶ್ಯಕತೆ ತೀವ್ರವಾಗಿದೆ.

೨. ಶೈಕ್ಷಣಿಕ ಸಮಸ್ಯೆ

ಜಗತ್ತಿನ ಜೀವರಾಶಿಗಳಲ್ಲಿ ಅಕ್ಷರಸ್ಥನಾಗಲು ಸಾಮರ್ಥ್ಯಗಳನ್ನು ಹೊಂದಿರುವ ಏಕೈಕ ಜೀವಿ ಮಾನವ ಎನ್ನಬಹುದು. "ವಿದ್ಯಾವಿಹೀನ ಪಶು" ಅಂದರೆ, ವಿದ್ಯೆ ಇಲ್ಲದವನು ಪಶುವಿಗೆ ಸಮಾನ, ಅಲ್ಲದೆ "ನಹೀ ಜ್ಞಾನೇನ ಸದೃಶಂ" ಎಂದರೆ ಜ್ಞಾನಕ್ಕೆ ಸಮಾನವಾದುದು ಯಾವುದು ಇಲ್ಲ ಎಂಬ ಸಂಸ್ಕೃತ ಉಕ್ತಿಗಳು ತುಂಬಾ ಅರ್ಥಪೂರ್ಣವಾದವುಗಳಾಗಿವೆ.

ಅನಕ್ಷರತೆಯು ಓದಲು ಹಾಗೂ ಬರೆಯಲು ಬಾರದಿರುವುದನ್ನು ಸೂಚಿಸುತ್ತದೆ. ಸಾಮಾನ್ಯವಾಗಿ ಕೈ ಬರಹದ ಅಥವಾ ಮುದ್ರಿತವಾದಂತಹ ವಿಷಯಗಳನ್ನು ಓದಲು ಹಾಗೂ ಬರೆಯಲು ಬಾರದಿರುವುದನ್ನು ಅನಕ್ಷರತೆ ಎಂದು ಕರೆಯಲಾಗುತ್ತದೆ. ಇಂತಹ ಅನಕ್ಷರತೆಯ ಪ್ರಮಾಣವು ಘಿಸಾಡಿ ಸಮುದಾಯದಲ್ಲಿ ಹೆಚ್ಚಾಗಿರುವುದು ಕ್ಷೇತ್ರಕಾರ್ಯದಿಂದ ತಿಳಿದುಬರುತ್ತದೆ. ಅಲ್ಲದೆ ಇವರು ಮೂಲತಃ ಅಲೆಮಾರಿಗಳಾಗಿರುವುದರಿಂದ ಶಿಕ್ಷಣದಿಂದ ವಂಚಿತರಾಗಿದ್ದಾರೆ ಎಂದು ಹೇಳಬಹುದು. ಇವರಲ್ಲಿ ವಿದ್ಯಾವಂತರ ಸಂಖ್ಯೆ ತೀರಾ ಕಡಿಮೆಯಾಗಿರುವುದರಿಂದ ಶೈಕ್ಷಣಿಕ ಪ್ರಗತಿಗೆ ನಿರಾಶಾದಾಯಕ ಮನೋಭಾವನೆಯ ಉತ್ತರ ಬರುತ್ತದೆ.

ಈ ಸಮುದಾಯದವರು ದಿನನಿತ್ಯದ ಹೊಟ್ಟೆಪಾಡಿಗಾಗಿ ಮುಖ್ಯವಾಗಿ ಮಕ್ಕಳ ದುಡಿಮೆಯ ಮೇಲೆಯೂ ಸಹ ಅವಲಂಬಿತರಾಗಿರುವುದರಿಂದ, ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸಲು ಉತ್ಸಾಹ ತೋರಿಸುವುದಿಲ್ಲ. ಅಲ್ಲದೇ ಈ ಸಮುದಾಯದ ಮಕ್ಕಳ ಶೈಕ್ಷಣಿಕ ಅಭಿವೃದ್ಧಿಗೆ ಸರ್ಕಾರವು ಯಾವುದೇ ರೀತಿಯ ನೆರವು ಮತ್ತು ಅವಕಾಶಗಳನ್ನು ಕಲ್ಪಿಸಿಲ್ಲ. ಓದುವ, ಬರೆಯುವ ಹಂಬಲ ಮಕ್ಕಳಲ್ಲಿರಬಹುದು, ಆದರೆ ಕಲಿಸುವ ಸಾಮರ್ಥ್ಯ ಪಾಲಕರಲ್ಲಿರುವುದಿಲ್ಲ. ಏಕೆಂದರೆ ಪ್ರಾಥಮಿಕ ಶಿಕ್ಷಣ ಹೇಗಾದರೂ ಮಾಡಿ ಕಲಿಸಬಹುದು. ಸಾರ್! ಆದರೆ ಮುಂದಿನ ಹೆಚ್ಚಿನ ವಿದ್ಯಾಭ್ಯಾಸಕ್ಕೆ ಶಾಲೆಯ ಫೀಜು, ಬಟ್ಟೆ, ಊಟದ ವ್ಯವಸ್ಥೆಗಳನ್ನು ಮಾಡುವುದು ನಮ್ಮಿಂದ ಸಾಧ್ಯವಾಗದ ಮಾತು ಎನ್ನುವ ನಿರುತ್ಸಾಹದ ಉತ್ತರ ಘಿಸಾಡಿ ಸಮುದಾಯದ ಪಾಲಕರಿಂದ ಬರುತ್ತದೆ. "ನಮ್ಮ ಪಾಡಿಗೆ ನಾವು ನಮ್ಮ ಮಕ್ಕಳಿಗೆ ನಮ್ಮ ಕಮ್ಮಾರಿಕೆ ವೃತ್ತಿ ಕಲಿಸಿಕೊಟ್ಟರೆ ಅವರ ಜೀವನ ನಿರ್ವಹಣೆ ಮಾಡಲು ಅಲ್ಪಸ್ವಲ್ಪ ಅನುಕೂಲವಾಗುತ್ತದೆ" ಎಂದು ಸಮುದಾಯದ ಪಾಲಕರು ಹೇಳುತ್ತಾರೆ.

ಹೀಗಾಗಿ ಸದಾ ಜಂಜಾಟದ ಬದುಕು, ನಿರಕ್ಷರತೆ, ವೃತ್ತಿಯಲ್ಲಿ ಸ್ಥಿರತೆ ಇಲ್ಲದಿರುವುದು, ಕಿತ್ತು ತಿನ್ನುತ್ತಿರುವ ಬಡತನ ಈ ಸಮುದಾಯಕ್ಕೆ ಯಾವುದೇ ರಾಜಕೀಯ ಅಧಿಕಾರಿಗಳಿಲ್ಲದಿರುವುದು ಇವರ ಶಿಕ್ಷಣಕ್ಕೆ ಪ್ರೋತ್ಸಾಹ ದೊರೆಯುತ್ತಿಲ್ಲ ಎಂದು ಹೇಳಬಹುದು.

ಕೋಷ್ಟಕ ೨. ಫಿಸಾಡಿ ಸಮುದಾಯದ ತಾಲೂಕುವಾರು ಲಿಂಗವಾರು ಶೈಕ್ಷಣಿಕ ಮಟ್ಟ

ಸಂಖ್ಯೆ	ತಾಲೂಕುಗಳು	ಪ್ರಾಥಮಿಕ		ಮಾಧ್ಯಮಿಕ		ಪ್ರೌಢಶಾಲೆ		ಪದವಿಪೂರ್ವ		ಪದವಿಯೇತರ	
		ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು
1	ಅಫಜಲ್‌ಪುರ	೧೪	೮	೧೧	೯	೪	೧	೧	--	--	--
2	ಆಳಂದ	೧	೨	--	೫	೩	--	--	--	--	--
3	ಚಿತ್ತಾಪುರ	೨೫	೨೪	೪೧	೨೫	೩೩	೬	೪	೨	--	--
4	ಚಿಂಚೋಳಿ	೨೦	೧೬	೨೫	೧೪	೧೪	೨	೨	--	--	--
5	ಗುಲ್ಬರ್ಗಾ	೨೧	೨೧	೨೪	೧೬	೧೧	೮	೭	--	೪	--
6	ಜೇವರ್ಗಿ	೪	೫	೮	೪	೫	೧	--	--	೧	--
7	ಶಹಾಪುರ	೧	೨	೨	--	--	--	--	--	--	--
8	ಸೇಡಂ	೧೦	೯	೧೫	೬	೮	೨	--	೨	೧	--
9	ಯಾದಗಿರಿ	೫	೪	೬	೨	೨	೧	--	--	--	--
	ಒಟ್ಟು	೧೦೧	೯೧	೧೩೨	೮೧	೮೦	೨೧	೧೪	೪	೬	--

ಈ ಮೇಲಿನ ಕೋಷ್ಟಕದಿಂದ ಫಿಸಾಡಿ ಸಮುದಾಯದ ಒಟ್ಟು ಲಿಂಗವಾರು ಸಾಕ್ಷರತೆಯನ್ನು ಗಮನಿಸಿದಾಗ ಗುಲ್ಬರ್ಗಾ ಜಿಲ್ಲೆಯ ಹತ್ತು ತಾಲ್ಲೂಕುಗಳಲ್ಲಿ ಸುರಪುರ ತಾಲ್ಲೂಕನ್ನು ಹೊರತುಪಡಿಸಿ ಉಳಿದ ಒಂಬತ್ತು ಕೇಂದ್ರಗಳು ಮತ್ತು ಗ್ರಾಮೀಣ ಪರಿಸರಗಳನ್ನೊಳಗೊಂಡಂತೆ ಒಟ್ಟು ಇವರಲ್ಲಿರುವ ೧೪೫೦ ಸಾಕ್ಷರರ್ಹರಲ್ಲಿ ಪುರುಷರು ೭೨೨ ಮತ್ತು ಸ್ತ್ರೀ ೭೨೮ ರಷ್ಟು ಕಂಡುಬರುತ್ತದೆ. ಆದರೆ ಸಾಕ್ಷರತೆಯಲ್ಲಿ ಕೇವಲ ೫೩೦ ಒಟ್ಟು ಸಾಕ್ಷರತೆಯ ಪ್ರಮಾಣವಾಗಿದ್ದು. ಪುರುಷರು ೩೩೩ ಮತ್ತು ೧೯೭ ಸ್ತ್ರೀಯರು ಕಂಡು ಬಂದರೆ, ಉಳಿದ ಒಟ್ಟಾರೆ ೯೨೦ ಅನಕ್ಷರತೆಯ ಪ್ರಮಾಣದಲ್ಲಿ ಗಂಡು ೩೮೯ ಹಾಗೂ ಹೆಣ್ಣು ೫೩೧ ಗರಿಷ್ಠ ಪ್ರಮಾಣದಲ್ಲಿರುವುದನ್ನು ನಾವು ಕಾಣಬಹುದು.

ಕೋಷ್ಟಕ ೩. ಸಾಕ್ಷರರ್ಹರು, ಸಾಕ್ಷರಸ್ಥರು ಹಾಗೂ ಅನಕ್ಷರಸ್ಥರ ಪ್ರಮಾಣ

ಸಾಕ್ಷರರ್ಹರು			ಸಾಕ್ಷರಸ್ಥರು			ಅನಕ್ಷರಸ್ಥರು		
ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
೬೨	೫೪	೧೧೬	೩೦	೧೮	೪೮	೩೨	೩೬	೬೮
೩೩	೩೮	೭೧	೪	೭	೧೧	೨೯	೩೧	೬೦
೨೦೫	೨೦೦	೪೦೫	೧೦೩	೫೭	೧೬೦	೧೦೨	೧೪೩	೨೪೫
೧೦೮	೧೦೮	೨೧೬	೬೧	೩೨	೯೩	೪೭	೭೬	೧೨೩
೧೩೬	೧೨೨	೨೫೮	೬೭	೪೫	೧೧೨	೬೯	೭೭	೧೪೬
೪೫	೫೬	೧೦೧	೧೮	೧೦	೨೮	೨೭	೪೬	೭೩
೩೫	೪೫	೮೦	೩	೨	೫	೩೨	೪೩	೭೫
೭೩	೮೧	೧೫೪	೩೪	೧೯	೫೩	೩೯	೬೨	೧೦೧
೨೫	೨೪	೪೯	೧೩	೭	೨೦	೧೨	೧೭	೨೯
೭೨೨	೭೨೮	೧೪೫೦	೩೩೩	೧೯೭	೫೩೦	೩೮೯	೫೩೧	೯೨೦

ಕೋಷ್ಟಕ ೩ರಲ್ಲಿ ಕಂಡುಬರುವಂತೆ ಗುಲ್ಬರ್ಗಾ ಜಿಲ್ಲೆಯ ಘಿಸಾಡಿ ಸಮುದಾಯದಲ್ಲಿ ಬಹುಸಂಖ್ಯಾತರು ನಿರಕ್ಷರಿಗಳು. ಇವರ ಒಟ್ಟಾರೆ ೧೪೫೦ ಸಾಕ್ಷರರ್ಹರಲ್ಲಿ ಕೇವಲ ಶೇ. ೩೭ರಷ್ಟು ಸಾಕ್ಷರಸ್ಥರಾಗಿದ್ದು ಉಳಿದ ಶೇ. ೬೩ರಷ್ಟು ಅನಕ್ಷರಸ್ಥರ ಪ್ರಮಾಣದಲ್ಲಿರುವುದು ಹಿಂದಿನ ಕೋಷ್ಟಕದಿಂದ ಕಂಡುಬರುವುದು. ಪ್ರಸ್ತುತ ಕ್ಷೇತ್ರಕಾರ್ಯದಿಂದ ಈ ಮೇಲ್ಕಾಣಿಸಿದ ಕೋಷ್ಟಕದಿಂದ ಒಟ್ಟಾರೆ ಶಿಕ್ಷಣ ಮಟ್ಟವನ್ನು ಗಮನಿಸಿದಾಗ ಈ ಸಮುದಾಯದಲ್ಲಿ ಶೇ. ೩೭ರಷ್ಟು ಪ್ರಾಥಮಿಕ ಹಂತದಲ್ಲಿ ಕಂಡುಬಂದರೆ ಶೇ. ೪೧ರಷ್ಟು ಮಾಧ್ಯಮಿಕ ಹಾಗೂ ಶೇ. ೧೯ರಷ್ಟು ಪ್ರೌಢ ಶಿಕ್ಷಣದಲ್ಲಿ ಕಾಣಸಿಗುತ್ತಾರೆ. ಆದರೆ ಇವರ ಪ್ರಾಥಮಿಕ ಹಾಗೂ ಮಾಧ್ಯಮಿಕ ಶಿಕ್ಷಣದ ಹಂತವೇ ಕೊನೆಯ ಹಂತವಾಗಿ ನಿರ್ಧರಿತವಾಗಿದ್ದು, ಮುಂದಿನ ಹೆಚ್ಚಿನ ವಿದ್ಯಾಭ್ಯಾಸಕ್ಕೆ ಇವರ ಪ್ರೋತ್ಸಾಹ ಹಾಗೂ ಶಿಕ್ಷಣದ ಜವಾಬ್ದಾರಿಗಳ ಬಗ್ಗೆ ಗಮನ ನೀಡದಿರುವುದು ಕಾಣಸಿಗುತ್ತದೆ. ಶೇ. ೩ರಷ್ಟು ಮಾತ್ರ ಪದವಿ ಪೂರ್ವ ಶಿಕ್ಷಣ ಪಡೆದಿರುವುದು ನಿಜಕ್ಕೂ ಇವರು ಶಿಕ್ಷಣದ ಬಗ್ಗೆ ಹೊಂದಿರುವ ಅನಕ್ಷರತೆ ಹಾಗೂ ಆರ್ಥಿಕತೆಯ ಕುಂಠಿತವನ್ನು ಸೂಚಿಸುತ್ತದೆ. ಪದವಿಯೇತರ ಹಾಗೂ ಇತರೆ ಶಿಕ್ಷಣದಲ್ಲಿ ಇವರು ಶೈಕ್ಷಣಿಕ ಮಟ್ಟದಲ್ಲಿ ಶೂನ್ಯ ಸ್ಥಾನದಲ್ಲಿರುವುದು ಅಂಕಿ-ಅಂಶಗಳಿಂದ ತಿಳಿದುಬರುತ್ತದೆ.

ಶೈಕ್ಷಣಿಕ ಕೊರತೆಗೆ ಕಾರಣಗಳು

೧. ಸಮುದಾಯದ ಬಡತನ

೨. ಅಲೆಮಾರಿ ಜೀವನ

೩. ಸಮುದಾಯ ನೆಲೆಸಿರುವ ಪರಿಸರಗಳು ಮತ್ತು ವಾತಾವರಣ

೪. ಪ್ರೋತ್ಸಾಹಗಳಿಲ್ಲದಿರುವುದು

೫. ಸರ್ಕಾರಿ ಸೌಲಭ್ಯಗಳ ಕೊರತೆ

೬. ಮಕ್ಕಳಿಗೆ ಮನೆ ಪಾಠಶಾಲೆಯ ಕೊರತೆ

೭. ಮೀಸಲಾತಿ ಕೊರತೆ

೮. ಶಾಲೆಗಳ ಕೊರತೆ

೩. ಮೀಸಲಾತಿ ಸಮಸ್ಯೆ

ಘಿಸಾಡಿ ಸಮುದಾಯವು ಮೂಲತಃ ಅಲೆಮಾರಿ ಜೀವನ ಪದ್ಧತಿಯನ್ನು ನಿರ್ವಹಿಸುತ್ತಿರುವುದರಿಂದ ಆಯಾ ಪ್ರದೇಶದ ಜನರು ಇವರನ್ನು ವಿವಿಧ ಹೆಸರುಗಳಿಂದ ಗುರುತಿಸಿದ್ದಾರೆ. ಕೆಲವೊಂದು ಪ್ರದೇಶ ಮತ್ತು ಪರಿಸರದಲ್ಲಿ ಇವರನ್ನು ಬಯಲು ಕಮ್ಮಾರರು, ಬೈಲ್ ಕಮ್ಮಾರರು, ಅಲೆಮಾರಿ ಕಮ್ಮಾರರು, ಘಿಸಾಡಿ ಕಮ್ಮಾರರು, ಬೈಲ್‌ಕಂಬಾರರು, ಘಿಸಾಡಿಗಳು, ರಜಪೂತ್ ಕಂಬಾರರು, ಗಾಡಿ ಲೋಹಾರ, ಗೌಡಾಲಿಯಾ ಲೋಹಾರ್(ಹಿಂದಿ) ಬೈಟೀ ಕಮ್ಮಾರರು

(ತೆಲುಗು)ಗಳೆಂದು ಘಿಸಾಡಿ ಸಮುದಾಯ ಗುರುತಿಸಿದ್ದರೆ, ನೀವು ಯಾವ ಜಾತಿಯವರು ಎಂದು ಪ್ರಶ್ನೆ ಮಾಡಿದರೆ "ನಾವು ಘಿಸಾಡಿ ಸಮುದಾಯದವರು ನಮ್ಮ ಇಡೀ ಜಾತಿಬಾಂಧವರಿಗೆ ಘಿಸಾಡಿ ಜಾತಿ ಕರೆದುಕೊಳ್ಳುತ್ತೇವೆ" ಎಂದು ಹೇಳುತ್ತಾರೆ. ಹಾಗೆ "ನಮ್ಮ ಕುಲಕಸುಬು ಕಮ್ಮಾರಿಕೆ ವೃತ್ತಿಯಾಗಿದ್ದು ಇಡೀ ಕುಲಸ್ಥರೆಲ್ಲರು ಅದೇ ವೃತ್ತಿಯಲ್ಲಿ ಜೀವನ ನಿರ್ವಹಿಸುತ್ತ ಬಂದವರಾಗಿದ್ದೇವೆ" ಎಂದು ಹೇಳುತ್ತಾರೆ.

ಪ್ರಖ್ಯಾತ ಸಮಾಜಶಾಸ್ತ್ರಜ್ಞರಾದ ಡಾ. ಡಿ.ಎನ್. ಮಜುಂದಾರ್ ಅವರು "ಒಂದೇ ಹೆಸರನ್ನು ಹೊಂದಿರುವ ಒಂದೇ ಭೂ ಪ್ರದೇಶದಲ್ಲಿ ವಾಸಿಸುವ, ಒಂದೇ ಭಾಷೆಯನ್ನಾಡುವ ಒಳಬಾಂಧವ್ಯದ ವಿವಾಹ ಹೊಂದಿರುವ, ವಿಶಿಷ್ಟ ಸಾಮಾಜಿಕ ಹಾಗೂ ಸಾಂಸ್ಕೃತಿಕ ಅಂಶಗಳನ್ನು ಕಾಪಾಡಿಕೊಂಡು ಬಂದಿರುವ ಕುಟುಂಬಗಳ ಸಮೂಹಗಳನ್ನು ಆದಿವಾಸಿ ಸಮೂಹಗಳು" ಎಂದು ಕರೆದಿದ್ದಾರೆ. (ಭೈರಪ್ಪ ಕೆ.:೧೯೯೪:೩೯೮) ಈ ವ್ಯಾಖ್ಯೆಗೆ ಪೂರಕವಾಗುವ ಮಾದರಿಯಲ್ಲಿಯೇ ಅನೇಕ ಸಮಾಜಶಾಸ್ತ್ರಜ್ಞರು ಮತ್ತು ಮಾನವಶಾಸ್ತ್ರಜ್ಞರು ವ್ಯಾಖ್ಯಾನಗಳನ್ನು ನೀಡಿದ್ದಾರೆ.

ಈ ಮೇಲಿನ ವ್ಯಾಖ್ಯಾನ ಅರ್ಥ ವ್ಯಾಪ್ತಿಯ ಹಿನ್ನೆಲೆಯ ಲಕ್ಷಣಗಳನ್ನು ಹೊಂದಿರುವ ಈ ಸಮುದಾಯವು 'ಪರಿಶಿಷ್ಟ ಪಂಗಡ'ದ ಸೌಲಭ್ಯಗಳ ಮೀಸಲಾತಿಯಿಂದ ವಂಚಿತರಾಗಿರುವುದು ಗೋಚರಿಸುತ್ತದೆ. ಅಲ್ಲದೇ ಪ್ರಸ್ತುತ ಸಂದರ್ಭದಲ್ಲಿ ಘಿಸಾಡಿ ಸಮುದಾಯವು ಜಾತಿ ಮತ್ತು ಆದಾಯ ಪ್ರಮಾಣಪತ್ರ ಹಾಗೂ ಮೀಸಲಾತಿ ಸೌಲಭ್ಯಗಳನ್ನು ಪಡೆದುಕೊಳ್ಳುವುದರಲ್ಲಿ ಅನೇಕ ಸಮಸ್ಯೆಗಳನ್ನು ಎದುರಿಸುತ್ತಿರುವುದು ಅಧ್ಯಯನದ ಕ್ಷೇತ್ರಕಾರ್ಯದಿಂದ ತಿಳಿದುಬರುತ್ತದೆ. ಈ ಸಮುದಾಯವು ಕರ್ನಾಟಕ ಜಾತಿ ಮತ್ತು ಮೀಸಲಾತಿ ಗೆಜೇಟ್‌ನಲ್ಲಿ ಪ್ರವರ್ಗ-I ಕ್ರಮಸಂಖ್ಯೆ 13 (a) Ghisade (b) Ghisadi ಎಂದು ನಮೂದಿಸಲಾಗಿದೆ. ಈ ನಿಯಮದಡಿಯಲ್ಲಿ ಇವರು ಪ್ರವರ್ಗ-Iರಲ್ಲಿ ಜಾತಿ ಮತ್ತು ಆದಾಯ ಪ್ರಮಾಣಪತ್ರ ಹಾಗೂ ಮೀಸಲಾತಿಯನ್ನು ತಹಸೀಲ್ದಾರರಿಂದ ಪಡೆಯುವುದರಲ್ಲಿ ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಏಕೆಂದರೆ, ನೀವು ಮಾಡುವ ವೃತ್ತಿ ಕಮ್ಮಾರಿಕೆ ಕೆಲಸ, ಹೀಗಾಗಿ ಕಮ್ಮಾರರು ಅಥವಾ "ಬೈಲುಕಮ್ಮಾರರು" ಎಂದು ಇವರನ್ನು ಅಧಿಕಾರಿಗಳು ಬೆದರಿಸುತ್ತಾರೆ. ಆದರೆ ಕಮ್ಮಾರರು ಅಥವಾ ಬೈಲುಕಮ್ಮಾರರು ಎಂಬುದು ಪ್ರವರ್ಗ-II (A) ದಲ್ಲಿ ಕ್ರಮ ಸಂಖ್ಯೆ 9 (i) Bailu Kammara (Q) Kammara ಎಂದು ಗೆಜೇಟಿಯರ್‌ನಲ್ಲಿ ನಮೂದಿಸಲಾಗಿದೆ.

ಒಂದೇ ಸಮುದಾಯಕ್ಕೆ ಈ ಮೇಲಿನ ಎರಡು ರೀತಿಯ ಗೆಜೇಟಿಯರ್ ನೊಂದಣಿಯಿಂದ ಘಿಸಾಡಿ ಸಮುದಾಯ ಜಾತಿ ಮತ್ತು ಆದಾಯ ಪ್ರಮಾಣ ಪತ್ರ, ಮೀಸಲಾತಿ ಸೌಲಭ್ಯ ಪಡೆಯುವುದರಲ್ಲಿ ಅನೇಕ ತೊಂದರೆಗಳನ್ನು ಎದುರಿಸುತ್ತಿದ್ದಾರೆ. ಒಟ್ಟಾರೆಯಾಗಿ ಈ ಸಮುದಾಯವು ತೀರಾ ಹಿಂದುಳಿದ ಬುಡಕಟ್ಟು ಸಮುದಾಯವಾಗಿರುವುದರಿಂದ 'ಪರಿಶಿಷ್ಟ ಪಂಗಡ'ಕ್ಕೆ ಸೇರಬೇಕು.

ಇಲ್ಲವೇ ಕರ್ನಾಟಕದ ಎಲ್ಲ ಅಲೆಮಾರಿ ಸಮುದಾಯಗಳ ಸ್ಪಷ್ಟ ಅಂಕಿ-ಅಂಶಗಳನ್ನು ಕಲೆಹಾಕಿ ಅಲೆಮಾರಿ ಸಮುದಾಯಕ್ಕೆ ಸೇರಿದ ಈ ಘಿಸಾಡಿ ಸಮುದಾಯಕ್ಕೆ ಹಾಗೂ ಇಂತಹ ಸಮುದಾಯಗಳ ಒಟ್ಟಾರೆ ಪುನರ್ ಸಮೀಕ್ಷೆ ಮಾಡಿ ವಿಶೇಷ ಮೀಸಲಾತಿ ಸೌಲಭ್ಯಗಳನ್ನು ಕಲ್ಪಿಸಿಕೊಡಬೇಕಾದುದು ತುಂಬಾ ಅಗತ್ಯವಾಗಿದೆ. ಕರ್ನಾಟಕದಲ್ಲಿನ ಎಸ್.ಸಿ., ಎಸ್.ಟಿ., ಅಲೆಮಾರಿ, ಅರೆ ಅಲೆಮಾರಿ ಸಮುದಾಯಗಳ ಪುನರ್ ಸಮೀಕ್ಷೆ ಮಾಡಿ ಸ್ಪಷ್ಟತೆಗೆ ತರಬೇಕಾದದ್ದು ಸರ್ಕಾರದ ಜವಾಬ್ದಾರಿಯುತ ಕೆಲಸವಾಗಿದೆ.

ಇಂದಿನ ಆಧುನಿಕ ಕೈಗಾರೀಕರಣದಿಂದ ತಯಾರಾದ ಅನೇಕ ರೀತಿಯ ಸಿದ್ಧ ಉಪಕರಣಗಳು, ಆಧುನಿಕ ಟ್ರಾಕ್ಟರ್‌ಗಳು, ಆಧುನಿಕ ಬೇಸಾಯ ಪದ್ಧತಿಗಳಿಂದ ಇವರು ಮಾಡುವ ಕಮ್ಮಾರಿಕೆ ಕೆಲಸದ ಉಪಕರಣಗಳಿಗೆ ಬೇಡಿಕೆ ಕಡಿಮೆಯಾಗುತ್ತಿದೆ. ಹೀಗೆ ಇವರು ದಿನವಿಡೀ ಶ್ರಮವಹಿಸಿ ತಯಾರಿಸಿದ ಅನೇಕ ಕೃಷಿ ಉಪಕರಣಗಳನ್ನು ಇಂದು ಯಾರೂ ಕೊಂಡುಕೊಳ್ಳದೆ ಹಾಗೂ ರಿಪೇರಿ ಕೆಲಸಗಳು ಸಹ ಕಡಿಮೆಯಾಗಿದೆ. ಇದರಿಂದ ಈ ಸಮುದಾಯದಲ್ಲಿ ನಿರುದ್ಯೋಗದ ಸಮಸ್ಯೆಗಳು ತಲೆದೋರುತ್ತಿವೆ. ಇದಕ್ಕಾಗಿ ಸರ್ಕಾರವು ಈ ಸಮುದಾಯಗಳಿಗೆ ವಿಶೇಷ ಮೀಸಲಾತಿಯ ಅವಕಾಶಗಳನ್ನು ಕಲ್ಪಿಸಿ ಕೊಡುವುದು ಅನಿವಾರ್ಯವಾಗಿದೆ.

ಇಂದು ಇಂತಹ ಅನೇಕ ಅಲೆಮಾರಿ ಬುಡಕಟ್ಟುಗಳು ಪೂರ್ಣ ಪ್ರಮಾಣದಲ್ಲಿ ಬೆಳಕಿಗೆ ಬಾರದೆ, ಸಮಾಜದ ಪರಿಚಯವನ್ನು ಪಡೆಯದೆ ಉಳಿದುಕೊಂಡು ಬಿಟ್ಟಿರುವುದರಿಂದ ಸರ್ಕಾರದ ಮಾರ್ಗದರ್ಶನದಲ್ಲಿ ಅಧಿಕಾರಿಗಳು, ಸಂಶೋಧಕರು, ಅಧ್ಯಯನಕಾರರು, ಸಂಘ-ಸಂಸ್ಥೆಗಳು, ಈ ದಿಸೆಯಲ್ಲಿ ನಿಖರತೆಯನ್ನು ವ್ಯಕ್ತಪಡಿಸುವುದು ಅಗತ್ಯವಾಗಿದೆ.

ಒಂದು ವೇಳೆ ಸರ್ಕಾರವು ಇಂತಹ ಸಮುದಾಯಗಳಿಗೆ ವಿಶೇಷ ಮೀಸಲಾತಿಯ ಅವಕಾಶಗಳನ್ನು ಕಲ್ಪಿಸದಿದ್ದರೆ, ಇಂತಹ ಸಮುದಾಯಗಳು ಮುಂದಿನ ದಿನಗಳಲ್ಲಿ "Criminal Tribes" ಗಳಾಗುವುದಕ್ಕೆ ಸರ್ಕಾರವೇ ಪ್ರಚೋದಿಸಿದಂತಾಗುತ್ತದೆ. ಈ ಹಿನ್ನೆಲೆಯಲ್ಲಿ ಇಂತಹ ಸಮುದಾಯಗಳು ಇನ್ನಷ್ಟು ಅಧೋಗತಿಗೆ ಹೋಗುವುದಕ್ಕಿಂತ ಮೊದಲು ಸರ್ಕಾರವು ಇಂತಹ ಸಮುದಾಯಗಳ ಅಭಿವೃದ್ಧಿ ಮತ್ತು ಮೀಸಲಾತಿಗೆ ಅವಕಾಶ ಮಾಡಿ ಕೊಡಬೇಕಾಗಿರುವುದು ಬಹಳ ಅಗತ್ಯವಾಗಿದೆ.

೪. ಸಂಘಟನೆಗಳ ಕೊರತೆ

ಗುಲ್ಬರ್ಗಾ ಜಿಲ್ಲೆಯನ್ನೊಳಗೊಂಡಂತೆ ಎಲ್ಲ ಹತ್ತು ತಾಲ್ಲೂಕು ಕೇಂದ್ರಗಳಿಗೆ ಹಾಗೂ ಇವರು ನೆಲೆಸಿರುವ ಗ್ರಾಮಗಳಿಗೆ ಅಧ್ಯಯನ ಸಂದರ್ಭದಲ್ಲಿ ಕ್ಷೇತ್ರಕಾರ್ಯ ಕೈಗೊಂಡಾಗ ಇವರು ತಮ್ಮ ಸಮುದಾಯದ ಇತ್ತೀಚಿನ ತೀವ್ರತರಹದ ಸಮಸ್ಯೆಗಳು ಹಾಗೂ ಕೊರತೆಗಳ ಬಗ್ಗೆ ಸಾಮೂಹಿಕವಾಗಿ ಚರ್ಚಿಸಲು ಸಂಘಟನೆಗಳನ್ನು ರಚನೆ ಮಾಡಿಕೊಂಡಿಲ್ಲದಿರುವುದು ಕಂಡುಬರುತ್ತದೆ.

ಆದರೆ ಇತ್ತೀಚಿನ ಕೆಲವು ದಿನಗಳ ಹಿಂದೆ ಮಾತ್ರ ಗುಲ್ಬರ್ಗಾ ನಗರದ ಘಿಸಾಡಿ

ಸಮುದಾಯದ ಕೆಲವು ಜನ ಹಿರಿಯರು ಮತ್ತು ಕಿರಿಯ ಉತ್ಸಾಹಿ ಯುವಕರು ಸೇರಿ ಸಮುದಾಯದ ಒಂದು ಸಂಘವನ್ನು ಮಾತ್ರ ರಚಿಸಿಕೊಂಡು ಹೆಸರು ನೋಂದಾಯಿಸಿದ್ದಾರೆ.

ಇವರ ಈ ಸಂಘಟನೆಯಲ್ಲಿ ಕೇವಲ ಗುಲ್ಬರ್ಗಾ ನಗರದ ಘಿಸಾಡಿ ಸಮುದಾಯವನ್ನು ಮಾತ್ರ ಪ್ರತಿನಿಧಿಸುತ್ತದೆ. ಅಲ್ಲಿಯ ಜನರ ಸಮಸ್ಯೆಗಳಿಗೆ ಮಾತ್ರ ಸೀಮಿತವಾಗಿದೆ. ಆದರೆ ಒಟ್ಟಾರೆ ಇಡೀ ಗುಲ್ಬರ್ಗಾ ಜಿಲ್ಲೆಯ ಸಮುದಾಯದ ಸದಸ್ಯರುಗಳನ್ನು ಪ್ರತಿನಿಧಿಸಿ ಚರ್ಚೆ ಮಾಡಲು ಹಾಗೂ ಜಿಲ್ಲೆಯ ಇವರ ಸಮುದಾಯಗಳನ್ನು ಒಟ್ಟುಗೂಡಿಸಿ ಸಲಹೆ ಸೂಚನೆಗಳನ್ನು ನೀಡುವುದರಲ್ಲಿ ಹೆಚ್ಚಿನ ಕೊರತೆಗಳು ಕಂಡುಬರುತ್ತವೆ.

೫. ರಾಜಕೀಯ ಪ್ರಾತಿನಿಧ್ಯ ಕೊರತೆ

ಭಾರತದಲ್ಲಿನ ಪ್ರತಿಯೊಂದು ಸಮುದಾಯದವರು ತಮ್ಮ ಸಮುದಾಯದ ರೀತಿ ನೀತಿಗಳು, ಸಂಪ್ರದಾಯಗಳನ್ನು ಕಾಪಾಡಿಕೊಂಡು ಬರಲು ತಮ್ಮ ಸಮುದಾಯದಲ್ಲಿಯೇ ಒಬ್ಬ ನಾಯಕನನ್ನು ಗೊತ್ತುಪಡಿಸಿಕೊಂಡು ಆತನ ಆಡಳಿತದ ನಿರ್ದೇಶನದಲ್ಲಿ ಸಮುದಾಯದ ಹಿತಾಸಕ್ತಿಗಳನ್ನು ಕಾಪಾಡಿಕೊಂಡು ಬಂದಿದ್ದಾರೆ. ಹಾಗೇ ಪ್ರತಿಯೊಂದು ಗ್ರಾಮದ ಇಲ್ಲವೇ ಗುಂಪಿನ ಆಡಳಿತ ನೋಡಿಕೊಳ್ಳಲು ಗ್ರಾಮಪಂಚಾಯಿತಿಗಳನ್ನು ಪುರಾತನ ಕಾಲದಿಂದ ಸ್ಥಾಪಿಸಿಕೊಂಡು ಬಂದಿದ್ದು ಇಡೀ ರಾಜ್ಯದ ಅಥವಾ ಆಯಾ ದೇಶದ ಜನರ ಸ್ವಾತಂತ್ರ್ಯ ಸಮಾನತೆ ಆರ್ಥಿಕ ಸ್ಥಿರತೆಗಳನ್ನು ಕಾಪಾಡಿಕೊಂಡು ಬರಲು ಸರ್ಕಾರ ಕಾನೂನುಗಳೆಂಬ ಚೌಕಟ್ಟುಗಳ ಅಡಿಯಲ್ಲಿ ಇಡೀ ಜನರ ಹಿತಾಸಕ್ತಿಗಳನ್ನು ಕಾಪಾಡುವುದು ಒಳಗೊಂಡಿವೆ. ಇಂತಹ ರಾಜಕೀಯ ಹಿತಾಸಕ್ತಿಗಳಿಗೆ "ಅಧಿಕಾರ" ಎಂದು ಕರೆಯುತ್ತಾರೆ.

ಘಿಸಾಡಿ ಸಮುದಾಯವು ಒಂದು ಅಲೆಮಾರಿ ಸಮುದಾಯವಾಗಿದ್ದು. ಯಾವುದೇ ರಾಜಕೀಯ ಅಧಿಕಾರದ ಒಂದು ಸದಸ್ಯತ್ವದ ಸ್ಥಾನ .ಪಡೆದುಕೊಂಡಿಲ್ಲ ಎಂಬುದು ಅಧ್ಯಯನದ ಕ್ಷೇತ್ರ ಕಾರ್ಯದಿಂದ ತಿಳಿದುಬರುತ್ತದೆ. ಅಲ್ಲದೇ ಈ ಸಮುದಾಯದಂತಹ ಇನ್ನು ಅನೇಕ ಸಮುದಾಯಗಳು ಭಾರತ ದೇಶದ ರಾಜಕೀಯ ಅಧಿಕಾರದಿಂದ ಬಹುದೂರ ಉಳಿದುಕೊಂಡಿವೆ ಎಂಬುದು ಕ್ಷೇತ್ರಕಾರ್ಯದಲ್ಲಿ ಒಳಹೊಕ್ಕು ನೋಡಿದಾಗ ತಿಳಿದುಬರುತ್ತದೆ. ಪ್ರಸ್ತುತ ಸಂದರ್ಭದಲ್ಲಿನ ಗುಲ್ಬರ್ಗಾ ಜಿಲ್ಲೆಯೊಳಗೊಂಡಂತೆ ಒಟ್ಟು ೩೩೭ ಗ್ರಾಮಪಂಚಾಯಿತಿಗಳು, ಒಂದು ಮಹಾನಗರ ಪಾಲಿಕೆ, ೬ ಪುರಸಭೆಗಳು, ಸುಮಾರು ೧೦ ಪಟ್ಟಣ ಪಂಚಾಯಿತಿಗಳು ಇದ್ದು ಈ ಘಿಸಾಡಿ ಸಮುದಾಯದ ಒಬ್ಬ ವ್ಯಕ್ತಿ ಕೂಡಾ ಒಂದು ಸಾಮಾನ್ಯ ಗ್ರಾಮಪಂಚಾಯತಿ ಸದಸ್ಯರು ಸಹ ಇಲ್ಲದಿರುವುದು ಇಂದಿನ ಆಧುನಿಕ ಕಾಲದ ರಾಜಕೀಯ ಅಧಿಕಾರದ ದುರಂತವೇ ಎಂದು ಹೇಳಬಹುದು. ಹಾಗೆಯೇ ಜಿಲ್ಲಾಪಂಚಾಯಿತಿಗಳು ಮತ್ತು ತಾಲ್ಲೂಕು ಪಂಚಾಯಿತಿಗಳು ಸಹ ಒಳಗೊಂಡಿವೆ.

೬. ಸಮುದಾಯದ ಅಭಿವೃದ್ಧಿಗೆ ಪರಿಹಾರೋಪಾಯಗಳು

ಅ. ವಸತಿ ಸೌಲಭ್ಯಗಳು

ಘಿಸಾಡಿ ಸಮುದಾಯದವರು ಅಲೆಮಾರಿಗಳಾಗಿ ವಸತಿ ವಂಚಿತರಾಗಿ, ನೆಲೆ ನಿಂತುಕೊಳ್ಳುತ್ತಿರುವ ಈ ಸಂದರ್ಭದಲ್ಲಿ ಗುಡಿಸಲು, ಗುಡಾರ ನಿವಾಸಿಗಳಾಗಿರುವುದರಿಂದ ಇವರಿಗೆ

೧. ಉಚಿತ ನಿವೇಶನಗಳು ಹಂಚಿಕೆಯಾಗಬೇಕು

೨. ಜನತಾ ಮನೆಗಳನ್ನು ಕಟ್ಟಿಸಿಕೊಡುವ ಯೋಜನೆ

೩. ಮನೆ ಕಟ್ಟಿಸಿಕೊಳ್ಳಲು ಖರೀದಿ ಮಾಡಲು ಹಾಗೂ ಮನೆಗಳ ರೀಪೇರಿ ಕೆಲಸಕ್ಕೆ ರಿಯಾಯ್ತಿ ದರದಲ್ಲಿ ಸಾಲ ಹಾಗೂ ಸಹಾಯ ಧನವನ್ನು ನೀಡುವ ಯೋಜನೆಗಳು ಜಾರಿಗೊಳ್ಳಬೇಕು.

೪. ಮನೆಗಳಿಗೆ ಉಚಿತವಾಗಿ ವಿದ್ಯುತ್, ನೀರಿನ ಕೊಳವೆಗಳು ಹಾಗೂ ಬಿ.ಪಿ.ಎಲ್. ಪಡಿತರ ಚೀಟಿ ವ್ಯವಸ್ಥೆಗಳು ಕಲ್ಪಿಸಬೇಕು.

೫. ಕೊಳಚೆ ಪ್ರದೇಶದಿಂದ ವಿಮುಕ್ತಿಗೊಳಿಸಬೇಕು.

ಆ. ಶೈಕ್ಷಣಿಕ ಸೌಲಭ್ಯಗಳು

೧. ವಿದ್ಯಾರ್ಥಿಗಳಿಗೆ ಉಚಿತ ಪಠ್ಯಪುಸ್ತಕಗಳು, ವಿದ್ಯಾರ್ಥಿನಿಲಯಗಳಲ್ಲಿ ಅವಕಾಶ, ವಿದ್ಯಾರ್ಥಿ ವೇತನ, ಅಂಗವಿಕಲ ವಿದ್ಯಾರ್ಥಿವೇತನಗಳಂತಹ ಸೌಲಭ್ಯಗಳನ್ನು ನೀಡಬೇಕು ಹಾಗೂ ಇವುಗಳನ್ನು ಪಡೆದುಕೊಳ್ಳುವುದರಲ್ಲಿ ಸರಳತೆ ಇರಬೇಕು.

೨. ಆಶ್ರಯ ಮಾದರಿಯ ಶಾಲೆಗಳಲ್ಲಿ ಅವಕಾಶ ಕೊಡಬೇಕು.

೩. ಟೆಂಟ್ ಶಾಲೆಗಳು ತೆರೆಯಬೇಕು.

೪. ಮಹಿಳಾ ಶಿಕ್ಷಣದ ಕೊರತೆಗೆ ಸೂಕ್ತ ಸಲಹೆಗಳನ್ನು ನೀಡಬೇಕು.

೫. ತಾಂತ್ರಿಕ ಉನ್ನತ ಶಿಕ್ಷಣಗಳಿಗೆ ಹೆಚ್ಚಿನ ಪ್ರೋತ್ಸಾಹ ನೀಡಬೇಕು.

೬. ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ವಿಶೇಷ ತರಬೇತಿ ಮತ್ತು ಸೌಲಭ್ಯಗಳನ್ನು ನೀಡಬೇಕು.

ಇ. ಆರ್ಥಿಕ ಸೌಲಭ್ಯಗಳು

ಘಿಸಾಡಿ ಸಮುದಾಯದ ಆರ್ಥಿಕ ಸ್ಥಿತಿಯು ತೀರಾ ಚಿಂತಾಜನಕವಾಗಿರುವುದರಿಂದ ಇವರ ಆರ್ಥಿಕ ಅಭಿವೃದ್ಧಿಗೆ ಸರ್ಕಾರವು ಹಲವಾರು ಯೋಜನೆಗಳನ್ನು ರೂಪಿಸಬೇಕು.

೧. ಇವರ ಕುಲಕಸುಬಿನ ವೃತ್ತಿ ಸಲಕರಣೆಗಳ ಖರೀದಿಗೆ ಸಾಲ ಸೌಲಭ್ಯ ಹಾಗೂ ಪ್ರೋತ್ಸಾಹಗಳನ್ನು ನೀಡಬೇಕು.

೨. ಸ್ಥಳೀಯ ಪ್ರಮುಖ ರಸ್ತೆಗಳಲ್ಲಿ ಇವರ ಕುಲಕಸುಬಿನ ಸಾಲು ವ್ಯಾಪಾರಿ ಮಳಿಗೆಗಳನ್ನು ನಿರ್ಮಿಸಿ ಕೊಡುವುದು.

೩. ಇವರು ಅಲೆಮಾರಿಗಳಾಗಿರುವುದರಿಂದ ತಮ್ಮ ವ್ಯಾಪಾರದ ದೃಷ್ಟಿಯಿಂದ ವಿವಿಧ ಪ್ರದೇಶಗಳಿಗೆ ಹೋಗಿ ಬರಲು ರೈಲ್ವೇ, ಬಸ್‌ಗಳಲ್ಲಿ ಸಂಚರಿಸಲು ನಿರ್ದಿಷ್ಟ ರಿಯಾಯ್ತಿ ಪಾಸ್‌ಗಳನ್ನು ನೀಡುವುದು.

೪. ಪೋಲೀಸರ ಕಿರಿಕಿರಿಯಿಂದ ಮುಕ್ತಗೊಳಿಸಲು ಗುರುತಿನ ಚೀಟಿ ನೀಡುವ ವ್ಯವಸ್ಥೆ ಜಾರಿಗೊಳಿಸಬೇಕು.

ಈ. ಮೀಸಲಾತಿ ಸೌಲಭ್ಯಗಳು

ಈ ಸಮುದಾಯವು ಒಂದು ಅಲೆಮಾರಿ ಸಮುದಾಯವಾಗಿರುವುದರಿಂದ ಇದನ್ನು "ಪರಿಶಿಷ್ಟ ಪಂಗಡ" ಎಂದು ಘೋಷಿಸಬೇಕು. ಇಲ್ಲವೆ ಎಲ್ಲ ಅಲೆಮಾರಿಗಳಿಗೆ ನಿರ್ದಿಷ್ಟವಾದ "ಅಲೆಮಾರಿ ಪರಿಶಿಷ್ಟ ಪಂಗಡ"ಗಳೆಂದು ಗುರುತಿಸಿ ವಿಶೇಷ ಸೌಲಭ್ಯಗಳನ್ನು ತೀವ್ರಗೊಳಿಸಬೇಕು.

೧. ಶೈಕ್ಷಣಿಕ ವಿಶೇಷ ಮೀಸಲಾತಿ ನೀಡುವುದು.

೨. ರಾಜಕೀಯ ಕ್ಷೇತ್ರದಲ್ಲಿ ಮೀಸಲಾತಿ ನೀಡುವುದು.

೩. ಉದ್ಯೋಗದಲ್ಲಿ ಮೀಸಲಾತಿ ನೀಡುವುದು.

ಆಧಾರಗಳು

೧. ಭೈರಪ್ಪ ಕೆ., *ಭಾರತೀಯ ಸಮಾಜದ ಅಧ್ಯಯನ*, ೧೯೯೪, ಪ್ರಕಾಶ ಸಾಹಿತ್ಯ, ಬೆಂಗಳೂರು

ಅಧ್ಯಾಯ - ೮

ಸಮಾರೋಪ

ಸಮಾರೋಪ

ಸಮಾಜವೆಂಬ ಒಟ್ಟಾರೆ ಚೌಕಟ್ಟನ್ನು ಸಮಾಜಶಾಸ್ತ್ರವು ತನ್ನ ಒಡಲಿನಲ್ಲಿರಿಸಿಕೊಂಡಿದ್ದು, ಈ ಸಮಾಜಶಾಸ್ತ್ರೀಯ ಅಧ್ಯಯನಗಳಿಗೆ ಇಡೀ ಪ್ರಪಂಚವೇ ಪ್ರಯೋಗಶಾಲೆ ಇದ್ದಂತೆ ಎಂಬುದು ಅನೇಕ ಸಮಾಜಶಾಸ್ತ್ರಜ್ಞರ ಅಭಿಪ್ರಾಯವಾಗಿದೆ. ಅಲ್ಲದೆ ಸಮಾಜವೆಂಬುದು ಅದು ನಿಂತ ನೀರಲ್ಲ, ಅದು ಸದಾಕಾಲ ನಿತ್ಯ ಪರಿವರ್ತನಶೀಲತೆ ಹೊಂದಿರುವುದರಿಂದ ಸಮಾಜಶಾಸ್ತ್ರವು ಇಂದು ದಿನದಿಂದ ದಿನಕ್ಕೆ ತನ್ನ ವ್ಯಾಪ್ತಿಯನ್ನು ಹೆಚ್ಚಿಸಿಕೊಳ್ಳುತ್ತಾ ಬಂದಿದೆ. ಇಂದು ಇದರ ಆಳ ಅಗಲ ವಿಸ್ತಾರ ಗೊಂಡಿರುವುದರಿಂದ, ಅಷ್ಟು ಸುಲಭವಾಗಿ ಹಿಡಿತಕ್ಕೆ ಸಿಕ್ಕುವಂತದಲ್ಲ. ಆದುದರಿಂದ ಸಮಾಜವೆಂಬ ಒಟ್ಟು ಘಟಕವನ್ನು ಅನೇಕ ಭಾಗ ವಿಭಾಗಗಳನ್ನಾಗಿ ವಿಂಗಡಿಸಿಕೊಂಡು, ಅದರ ವಿವಿಧ ಮುಖಗಳಿಗೆ ಸಂಬಂಧಿಸಿದಂತೆ ಅವ್ಯಾಹತವಾಗಿ ಅಧ್ಯಯನಗಳು ನಡೆಯುತ್ತಲೇ ಬಂದಿವೆ. ಮುಖ್ಯವಾಗಿ ಅಧ್ಯಯನದ ನಿಖರತೆಗೆ ಸೂಕ್ತವಾದ ಸಮಯದ ಹಿನ್ನೆಲೆಯಲ್ಲಿ, ಸೀಮಿತವಾದ ಚೌಕಟ್ಟನ್ನು ನಿರ್ಮಿಸಿಕೊಂಡು ಸಮಾಜಶಾಸ್ತ್ರವು ಇಂದು ಯಶಸ್ವಿ ಅಧ್ಯಯನಗಳ ಫಲಿತಗಳನ್ನು ಈ ಸಮಾಜಕ್ಕೆ ಸಾದರಪಡಿಸುತ್ತಿದೆ.

ಪ್ರಸ್ತುತ ಗುಲ್ಬರ್ಗಾ ಜಿಲ್ಲೆಯ ಘಿಸಾಡಿ ಸಮುದಾಯದ ಸಾಮಾಜಿಕ ಅಧ್ಯಯನವನ್ನು ಸಮಾಜ ಶಾಸ್ತ್ರೀಯವಾಗಿ ಮಾಡಲಾಗಿದ್ದು. ಈ ಸಮುದಾಯದ ಅಧ್ಯಯನ ನಿಖರವಾದ ಫಲಿತಗಳನ್ನು ಕಂಡುಕೊಳ್ಳಲು ಈ ಸಮುದಾಯ ನೆಲೆಸಿರುವ ಎಲ್ಲ ಗ್ರಾಮಗಳು ಮತ್ತು ತಾಲೂಕು ಕೇಂದ್ರಗಳನ್ನು ಒಳಗೊಂಡಂತೆ ಇಡೀ ಗುಲ್ಬರ್ಗಾ ಜಿಲ್ಲೆಯನ್ನು ಕ್ಷೇತ್ರಕಾರ್ಯದ ಅಧ್ಯಯನದ ವ್ಯಾಪ್ತಿಗೆ ಒಳಪಡಿಸಿ ಕೊಂಡು ಈ ಪ್ರಬಂಧವನ್ನು ಸಿದ್ಧಪಡಿಸಲಾಗಿದೆ.

ಈ ಸಮುದಾಯವು ಒಂದು ಅಲೆಮಾರಿ ಸಮುದಾಯವಾಗಿದ್ದು, ಮೂಲತಃ ರಾಜಸ್ಥಾನದ ಚಿತ್ತೋರಿಘಡ್ ಪ್ರದೇಶದಿಂದ ಸಂಚರಿಸುತ್ತಾ ಅಲೆಮಾರಿಗಳಾಗಿ ಇಂದು ದೇಶದ ಉದ್ದಗಲಕ್ಕೂ ಈ ಸಮುದಾಯದವರು ನೆಲೆಸಿದ್ದಾರೆ. ಹೀಗೆ ಸಂಚರಿಸುತ್ತಾ ಅಲೆಮಾರಿಗಳಾದ ಇವರು ಇಂದು ಗುಲ್ಬರ್ಗಾ ಜಿಲ್ಲೆಯ ಪರಿಸರದಲ್ಲಿ ಬಹುದಿನಗಳಿಂದಲೂ ನೆಲೆಸಿ ಈ ಜಿಲ್ಲೆಯ ಖಾಯಂ ನಿವಾಸಿಗಳಾಗಿದ್ದಾರೆ. ಮತ್ತೇ ಕೆಲವರು ಇಲ್ಲಿಯ ಪರಿಸರದಲ್ಲಿಯೇ ಅರೆ ಅಲೆಮಾರಿಗಳಾಗಿ ಜೀವನ ಸಾಗಿಸುತ್ತಿದ್ದಾರೆ. ಈ ಸಮುದಾಯವು ಅಲೆಮಾರಿ ಸಂಸ್ಕೃತಿಯ ಚಹರೆಗಳನ್ನು ಹೊಂದಿದ್ದು, ತನ್ನ

ಅಂತರಾಳದಲ್ಲಿ ತನ್ನದೆಯಾದಂತಹ ಭಿನ್ನ ಸಂಸ್ಕೃತಿಗಳನ್ನು ಮೈಗೂಡಿಸಿಕೊಂಡಿರುವ ವಿಶಿಷ್ಟ ಸಮುದಾಯವಾಗಿದೆ. ಇಂತಹ ವಿಶಿಷ್ಟ ಪರಂಪರೆಯ ಸಮುದಾಯವೊಂದರ ಒಳಪದರುಗಳನ್ನೇ ಈ ಪ್ರಬಂಧದಲ್ಲಿ ವಿವರಿಸಲಾಗಿದೆ. ಇಲ್ಲಿ ಅಧ್ಯಯನಕ್ಕೆ ಅನುಕೂಲವಾಗುವಂತೆ ಒಟ್ಟು ಎಂಟು ಅಧ್ಯಾಯ ಗಳನ್ನು ರೂಪಿಸಿಕೊಂಡಿದ್ದು, ಪ್ರತಿಯೊಂದು ಅಧ್ಯಾಯದಲ್ಲಿ ವಿಷಯಕ್ಕೆ ಸಂಬಂಧಿಸಿದಂತೆ ವಿಶ್ಲೇಷಣೆ, ವಿವರಣೆಗಳನ್ನು ಈ ಕೆಳಗಿನಂತೆ ವಿವರಿಸಲಾಗಿದೆ.

ಈ ಪ್ರಬಂಧದ ಪ್ರಥಮ ಅಧ್ಯಾಯವನ್ನು ಪ್ರವೇಶ ಎಂಬ ಪೀಠಿಕಾ ಭಾಗದಿಂದ ಪ್ರಾರಂಭಿಸ ಲಾಗಿದೆ. ಈ ಅಧ್ಯಾಯದಲ್ಲಿ ಗುಲ್ಬರ್ಗಾ ಜಿಲ್ಲೆಯ ಘಿಸಾಡಿ ಸಮುದಾಯದ ಸ್ವರೂಪ, ಮಹತ್ವ, ವ್ಯಾಪ್ತಿ, ವಿಧಾನಗಳು ಮತ್ತು ಇದುವರೆಗಿನ ವೃತ್ತಿ ಸಮುದಾಯಗಳ ಕುರಿತು ನಡೆದ ಅಧ್ಯಯನಗಳ ಅವಲೋಕನ ಮತ್ತು ಕ್ಷೇತ್ರಕಾರ್ಯದ ಅನುಭವಗಳನ್ನು ಕುರಿತು ವಿಶ್ಲೇಷಿಸಲಾಗಿದೆ.

ಎರಡನೆಯ ಅಧ್ಯಾಯವು ಗುಲ್ಬರ್ಗಾ ಜಿಲ್ಲೆಯ ಸಂಕ್ಷಿಪ್ತ ಪರಿಚಯ ಎಂಬ ಶೀರ್ಷಿಕೆಯನ್ನು ಹೊಂದಿದೆ. ಸಂಶೋಧನಾ ಅಧ್ಯಯನದ ಕಾರ್ಯವ್ಯಾಪ್ತಿ ಗುಲ್ಬರ್ಗಾ ಜಿಲ್ಲೆಗೆ ಸೀಮಿತವಾಗಿ ರುವುದರಿಂದ ಈ ಜಿಲ್ಲೆಯ ಸಂಕ್ಷಿಪ್ತ ಪರಿಚಯ, ಇದರ ಐತಿಹಾಸಿಕ ಹಿನ್ನೆಲೆ, ಭೌಗೋಳಿಕ ಹಿನ್ನೆಲೆ ಮತ್ತು ಪ್ರಮುಖ ಸಾಂಸ್ಕೃತಿಕ ಹಾಗೂ ಧಾರ್ಮಿಕ ಕೇಂದ್ರಗಳ ವಿವರಣೆ, ಇಲ್ಲಿನ ಪ್ರಮುಖ ಧರ್ಮಗಳು, ಮಠಮಾನ್ಯಗಳ ಪರಿಚಯ, ಇಲ್ಲಿಯ ಪರಿಸರದಲ್ಲಿ ಮಳೆ ಪ್ರಮಾಣ, ಜನಸಂಖ್ಯೆಯ ಅಂಕಿಅಂಶಗಳ ವಿಶ್ಲೇಷಣೆಯ ಮಾಹಿತಿಗಳನ್ನು ಕುರಿತು ಈ ಅಧ್ಯಾಯದಲ್ಲಿ ವಿವರಿಸಲಾಗಿದೆ.

ಸಮುದಾಯದ ಮೂಲ ಮತ್ತು ಪ್ರಸಾರ ಎಂಬ ಮೂರನೆಯ ಅಧ್ಯಾಯದಲ್ಲಿ ಸಮುದಾಯದ ಮೂಲಸ್ಥಾನ, ಉಗಮ, ಭಾರತದೇಶದಲ್ಲಿನ ವಿವಿಧ ಭೌಗೋಳಿಕ ಪರಿಸರದಲ್ಲಿ ಈ ಸಮುದಾಯದ ಪ್ರಸಾರ, ಕರ್ನಾಟಕ ಪರಿಸರದಲ್ಲಿ ಹಾಗೂ ಮುಖ್ಯವಾಗಿ ಗುಲ್ಬರ್ಗಾ ಜಿಲ್ಲೆಯಲ್ಲಿ ಈ ಸಮುದಾಯದ ಪ್ರಸಾರ, ವಸತಿ ನೆಲೆಗಳು, ಜನಸಂಖ್ಯೆ ಸಮುದಾಯಕ್ಕೆ ಗುರುತಿಸುವ ವಿವಿಧ ಹೆಸರುಗಳು ಹಾಗೂ ಹೆಸರಿನ ಪದನಿಷ್ಪತ್ತಿ, ಅರ್ಥ ವಿವರಣೆಗಳನ್ನೊಳಗೊಂಡ ಸಂಕ್ಷಿಪ್ತ ವಿಶ್ಲೇಷಣೆ ಇದೆ.

ನಾಲ್ಕನೆಯ ಅಧ್ಯಾಯವು ಸಾಮಾಜಿಕ ಮತ್ತು ಆರ್ಥಿಕ ಜೀವನ ಎಂಬ ಶೀರ್ಷಿಕೆಯನ್ನು ಹೊಂದಿದ್ದು, ಸಮುದಾಯದ ಕೌಟುಂಬಿಕ ರಚನೆ, ಬಳಿಗಳು, ಗೋತ್ರ, ಆಹಾರ ಪದ್ಧತಿ, ಉಡುಗೆ ತೊಡುಗೆ, ವೈದ್ಯವಿಧಾನ, ವಸತಿ ವ್ಯವಸ್ಥೆ, ಕುಲ ಪಂಚಾಯ್ತಿಯ ರಚನೆ, ಬಹಿಷ್ಕಾರ ಸಂದರ್ಭ ಗಳಂತಹ ಸಾಮಾಜಿಕ ಅಂಶಗಳು ಹಾಗೂ ಸಮುದಾಯದ ಆರ್ಥಿಕತೆಗೆ ಸಂಬಂಧಿಸಿದಂತೆ ಇವರ ಬೇಟೆ, ಬೇಟೆಯ ತಂತ್ರಗಳು, ಪಶುಪಾಲನೆ, ಕೃಷಿ ಚಟುವಟಿಕೆಗಳ ಜೊತೆಗೆ ಮುಖ್ಯವಾಗಿ ಇವರ ಕುಲಕಸುಬು, ಕುಲಕಸುಬಿನ ಸಂಪನ್ಮೂಲವಾದ ಕಬ್ಬಿಣದ ಉಗಮ, ಇವರು ತಯಾರಿಸುವ ಕಬ್ಬಿಣದ ಪರಿಕರಗಳ ವಿಶ್ಲೇಷಣೆ ಮತ್ತು ಆಧುನಿಕ ಸಂದರ್ಭದಲ್ಲಿ ಅವಲಂಬಿತ ವೃತ್ತಿಗಳು ಹಾಗೂ ವೃತ್ತಿಯಿಂದ ಬರುವ ಆದಾಯಗಳನ್ನು ಕುರಿತು ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

ಐದನೆಯ ಅಧ್ಯಾಯವು ಸಾಂಸ್ಕೃತಿಕ ಮತ್ತು ಧಾರ್ಮಿಕ ಬದುಕು ಎಂಬ ಶೀರ್ಷಿಕೆಯನ್ನು ಹೊಂದಿದೆ. ಸಮುದಾಯ ಅನುಸರಿಸುವ ಹುಟ್ಟು, ಮುಟ್ಟು, ನಿಶ್ಚಿತಾರ್ಥ, ಮದುವೆ, ಉಡುಕಿ ಮದುವೆ, ಮರಣ ಸಂಸ್ಕಾರಗಳನ್ನು ಕುರಿತು ಹಾಗೂ ಧಾರ್ಮಿಕ ಚಟುವಟಿಕೆಗಳಲ್ಲಿ ಬರುವ ಹಬ್ಬಗಳು, ಆಚರಣೆಗಳು, ಜಾತ್ರೆ ಉತ್ಸವಗಳು, ದೈವತ್ವ ಕಲ್ಪನೆ, ಧಾರ್ಮಿಕ ಕೇಂದ್ರಗಳ ಕುರಿತು ವಿಶ್ಲೇಷಿಸಿ ಇವುಗಳ ಮೇಲೆ ಬೆಳಕು ಚೆಲ್ಲುವ ಪ್ರಯತ್ನ ಮಾಡಲಾಗಿದೆ.

ಆರನೆಯ ಅಧ್ಯಾಯವು ಭಾಷೆ, ಸಾಹಿತ್ಯ ಹಾಗೂ ಕಲೆ ಎಂಬ ಶೀರ್ಷಿಕೆಯಾಗಿದ್ದು, ಸಮುದಾಯದ ಮಾತೃಭಾಷೆ, ಮಾತೃಭಾಷೆಯ ಜೊತೆಗೆ ವಿವಿಧ ಪ್ರಾದೇಶಿಕ ಭಾಷೆಗಳ ಬಳಕೆ, ಅವರು ತಮ್ಮ ಒಡಲಿನಲ್ಲಿರಿಸಿಕೊಂಡಿರುವ ಸಾಹಿತ್ಯ ಪ್ರಕಾರಗಳಲ್ಲಿನ ಸಾಂಪ್ರದಾಯಿಕ ಹಾಡುಗಳು, ಕಥೆಗಳು, ಗಾದೆ ಮಾತುಗಳು ಹಾಗೂ ಇವರು ಹೊಂದಿರುವ ಕಲೆ, ಕ್ರೀಡೆಗಳನ್ನು ಕುರಿತು ಈ ಅಧ್ಯಾಯದಲ್ಲಿ ವಿವರಿಸಲಾಗಿದೆ.

ಏಳನೆಯ ಅಧ್ಯಾಯವು ಸಮಸ್ಯೆಗಳು ಮತ್ತು ಪರಿಹಾರೋಪಾಯಗಳು ಎಂಬ ಶೀರ್ಷಿಕೆಯನ್ನು ಹೊಂದಿದೆ. ಆಧುನಿಕ ಜಗತ್ತಿನ ತಾಂತ್ರೀಕರಣ ಯುಗದಲ್ಲಿ ಸಮುದಾಯ ಎದುರಿಸುವ ವಿವಿಧ ಸಮಸ್ಯೆಗಳು ಅಂದರೆ, ಶಿಕ್ಷಣ, ವಸತಿ, ರಾಜಕೀಯ, ಸಂಘಟನೆ, ಸರ್ಕಾರಿ ಸೌಲಭ್ಯಗಳ ಕೊರತೆ, ಮೀಸಲಾತಿ ಸಮಸ್ಯೆಗಳು ಕುರಿತು ವಿಶ್ಲೇಷಿಸಲಾಗಿದೆ. ಸಮುದಾಯದ ಪ್ರಗತಿಗೆ ಪರಿಹಾರೋಪಾಯ ಗಳನ್ನು ನೀಡಲಾಗಿದೆ.

ಎಂಟನೆಯ ಅಧ್ಯಾಯವು ಸಮಾರೋಪವಾಗಿದ್ದು, ಇದರಲ್ಲಿ ಎಲ್ಲಾ ಅಧ್ಯಾಯಗಳ ಸಂಕ್ಷಿಪ್ತ ಸಾರಾಂಶ ಹಾಗೂ ಅವುಗಳಲ್ಲಿಯ ಸಂಶೋಧಿತ ವಿಷಯಗಳನ್ನು ಸೂಕ್ತವಾದ ಕೋಷ್ಟಕಗಳ ಮುಖಾಂತರ ವಿವರಿಸಲಾದ ವಿಷಯಗಳನ್ನೊಳಗೊಂಡಿದೆ. ಅಂದರೆ ಸಮುದಾಯದ ಅಧ್ಯಯನದ ಉದ್ದೇಶ, ವ್ಯಾಪ್ತಿ, ಮಹತ್ವಗಳಿಂದ ಹಿಡಿದು ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ, ಧಾರ್ಮಿಕ ಮತ್ತು ಭಾಷೆ, ಸಾಹಿತ್ಯ, ಕಲೆ, ಸಮಸ್ಯೆಗಳನ್ನು ಹಾಗೂ ಪರಿಹಾರೋಪಾಯಗಳ ಮಾರ್ಗಗಳಂತಹ ವಿಷಯಗಳ ಮೇಲೆ ಬೆಳಕು ಚೆಲ್ಲುವುದರ ಮೂಲಕ ವಿಶ್ಲೇಷಿಸುವ ಅಂಶಗಳ ತಿರುಗಳನ್ನು ಈ ಅಧ್ಯಾಯದಲ್ಲಿ ಸಂಕ್ಷಿಪ್ತವಾಗಿ ತಿಳಿಸಲಾಗಿದೆ. ಸಮಾರೋಪದ ನಂತರ ಅನುಬಂಧದಲ್ಲಿ ಸಮುದಾಯದ ವೃತ್ತಿ ಪರಿಕರಗಳ ಮಾಹಿತಿ, ಅಂಕಿ-ಅಂಶಗಳು, ವಕ್ತೃ ವಿವರಣೆ ಹಾಗೂ ಗ್ರಂಥಋಣಗಳನ್ನು ನೀಡಲಾಗಿದೆ.

ಉಪಸಂಹಾರ

ಗುಲ್ಬರ್ಗಾ ಜಿಲ್ಲೆಯ ಘಿಸಾಡಿ ಸಮುದಾಯದ ಸಾಮಾಜಿಕ ಅಧ್ಯಯನವು ಕ್ಷೇತ್ರಕಾರ್ಯ ಆಧಾರಿತವಾಗಿ ರಚನೆಗೊಂಡಿದ್ದು, ಈ ಸಮುದಾಯ ಕುರಿತ ಮಾಹಿತಿಗಳ ತೀವ್ರ ಕೊರತೆ ಇರುವುದರಿಂದ ಅಧ್ಯಯನ ಪೂರ್ಣಗೊಳ್ಳುವವರೆಗೂ ಸದಾಕಾಲ ಕ್ಷೇತ್ರದ ಮಾಹಿತಿದಾರರ

ಸಂಪರ್ಕದಲ್ಲಿದ್ದುಕೊಂಡು ಈ ಅಧ್ಯಯನವನ್ನು ಪೂರ್ಣಗೊಳಿಸಲಾಗಿದೆ. ಈ ಅಧ್ಯಯನಕ್ಕೆ ಇಲ್ಲಿಯವರೆಗೆ ನಡೆದ ವಿವಿಧ ಸಮುದಾಯಗಳ ಅಧ್ಯಯನ ಮಾದರಿಗಳನ್ನು ಪರಿಶೀಲಿಸಿ, ಹೊಸ ವಿಧಾನಗಳು ಮತ್ತು ಮಾದರಿಗಳನ್ನು ಬಳಸಿಕೊಳ್ಳಲಾಗಿದೆ.

ಘಿಸಾಡಿ ಸಮುದಾಯದ ಪ್ರತಿಯೊಂದು ಕುಟುಂಬಗಳ ಅಂಕಿ ಸಂಖ್ಯೆಗಳ ಮಾಹಿತಿ, ಅವರು ಹೊಂದಿರುವ ಮನೆ, ಗುಡಾರ, ಆಸ್ತಿ-ಪಾಸ್ತಿಗಳ ವಿವರಣೆ ಮತ್ತು ದೈನಂದಿನ ಖರ್ಚು-ವೆಚ್ಚಗಳ ಮಾಹಿತಿಗಳು ಮತ್ತು ಮುಖ್ಯವಾಗಿ ಇತ್ತೀಚಿನ ದಿನಗಳಲ್ಲಿ ಇವರ ಕುಲಕಸುಬುಗಳ ಅವನತಿ ಹಾಗೂ ಅವಲಂಬಿತ ವೃತ್ತಿಗಳ ಮಾಹಿತಿಗಳನ್ನು ವಿಶ್ಲೇಷಿಸಲಾಗಿದೆ. ಹಾಗೆಯೇ ಶೈಕ್ಷಣಿಕ, ರಾಜಕೀಯ ಅಧಿಕಾರದ ಕೊರತೆ ಮತ್ತು ಜಾತಿ ಪ್ರಮಾಣ ಪತ್ರ ಪಡೆದುಕೊಳ್ಳುವುದರಲ್ಲಿ ಎದುರಿಸುವ ಸಮಸ್ಯೆಗಳನ್ನು ಗುರುತಿಸಲಾಗಿದ್ದು. ಈ ಸಮುದಾಯ ಎದುರಿಸುತ್ತಿರುವ ಸಮಸ್ಯೆ ಸವಾಲುಗಳಿಗೆ ಪರಿಹಾರೋಪಾಯ ಮಾರ್ಗಗಳನ್ನು ಮಾತ್ರ ಪ್ರಸ್ತಾಪಿಸಲಾಗಿದೆ. ಒಬ್ಬ ಸಂಶೋಧಕನಾಗಿ ಸಲಹೆ ಸೂಚನೆಗಳನ್ನು ನೀಡುವ ಪ್ರಯತ್ನವಷ್ಟೇ ಆಗಿದೆ. ಕೊನೆಯದಾಗಿ ಈ ಅಧ್ಯಯನಕ್ಕೆ ನಿಲುಕದ ವಿಷಯಗಳನ್ನು ಮುಂದಿನ ಅಧ್ಯಯನಕಾರರಿಗೆ ಬಿಡಲಾಗಿದೆ.

ಅನುಬಂಧಗಳು

೧. ಅಂಕಿ ಅಂಶಗಳು

೨. ಪರಮಾರ್ಶನ ಗ್ರಂಥಗಳು

೩. ಪ್ರಮುಖ ಮಾಹಿತಿದಾರರು

೪. ಪ್ರಶ್ನಾವಳಿ

೫. ಛಾಯಾಚಿತ್ರಗಳು

ಅಂಕಿ ಅಂಶಗಳು ೧. ಗುಲ್ಬರ್ಗಾ ಜಿಲ್ಲೆಯ ಘಿಸಾಡಿ ಸಮುದಾಯದ ತಾಲ್ಲೂಕುವಾರು ಲಿಂಗವಾರು ಮತ್ತು ವಯೋಗುಂಪುವಾರು ಜನಸಂಖ್ಯೆ

			ಜನಸಂಖ್ಯೆ				ವಯೋಗುಂಪು															
ಜಿಲ್ಲೆಗಳು	ತಾಲೂಕುಗಳು	ಗ್ರಾಮಗಳು	ಕುಟುಂಬ	ಗಂಡು	ಹೆಣ್ಣು	ಒಟ್ಟು	೦ - ೪ ಗಂ	ಹೆಣ್ಣು	ಒಟ್ಟು	೫ - ೧೭ ಗಂ	ಹೆಣ್ಣು	ಒಟ್ಟು	೧೮-೪೦ ಗಂ	ಹೆಣ್ಣು	ಒಟ್ಟು	೪೧-೬೦ ಗಂ	ಹೆಣ್ಣು	ಒಟ್ಟು	೬೧ಮೇಲ್ಪಟ್ಟು ಗಂ	ಹೆಣ್ಣು	ಒಟ್ಟು
ಗುಲ್ಬರ್ಗಾ	ಅಫಜಲಪುರ	ಅಫಜಲಪುರ	11	28	22	50	3	1	4	8	7	15	12	10	22	4	4	8	1		1
		ಅತನೂರು	2	6	6	12	1	1	2	2	2	4	2	2	4				1	1	2
		ಚೌಡಪೂರ	4	10	10	20	2		2	3		7	4	6	10	1		1			
		ದೇವಲ ಗಾಣಗಾಪುರ	7	15	15	30	2	2	4	2	5	7	7	6	13	1	1	2	3	1	4
		ಹಿರೇಗೊಬ್ಬೂರು	1	3	2	5	1	1	2	1		1	1	1	2						
		ಸ್ಟೇಷನ್ ಗಾಣಗಾಪುರ	3	9	4	13				5		5	2	2	4	1	2	3	1		1
		ಒಟ್ಟು	**28**	**71**	**59**	**130**	**9**	**5**	**14**	**21**	**14**	**39**	**28**	**27**	**55**	**7**	**7**	**14**	**6**	**2**	**8**
	ಆಳಂದ	ಆಳಂದ	9	17	27	44	2	4	6	3	6	9	10	12	22	4	3	7			
		ಜವಳಗಿ ಬಿ.	1	2	1	3							1		1		1	1	1		1
		ಜಿಡಗಾ	1	1	2	3										1	2	3			
		ಕಡಗಂಚಿ	1	4	4	8				1		1	2	2	4	1	2	3			
		ನಿಂಬರ್ಗಿ	2	5	3	8				2	1	3	3	2	5						
		ತಡಕಲ್	1	3	3	6				1	1	2	2	2	4						
		ತೀರ್ಥ	1	4	2	6	1		1	2	1	3	1	1	2						
		ಒಟ್ಟು	**16**	**36**	**42**	**78**	**3**	**4**	**7**	**9**	**9**	**18**	**19**	**19**	**38**	**6**	**8**	**14**	**1**		**1**

ಅಂಕಿ ಅಂಶಗಳು ೨. ಗುಲ್ಬರ್ಗಾ ಜಿಲ್ಲೆಯ ಛಿಸಾಡಿ ಸಮುದಾಯದ ತಾಲ್ಲೂಕುವಾರು ಲಿಂಗವಾರು ವೈವಾಹಿಕ ಸ್ಥಾನಮಾನಗಳು

				ವೈವಾಹಿಕ ಸ್ಥಾನಮಾನ								
				ಅವಿವಾಹಿತ			ಮದುವೆಯಾದ			ವಿಧುರ ಮತ್ತು ವಿಧವೆಯರು		
ಜಿಲ್ಲೆಗಳು	ತಾಲೂಕುಗಳು	ಗ್ರಾಮಗಳು	ಕುಟುಂಬ	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
ಗುಲ್ಬರ್ಗಾ	ಅಫಜಲಪುರ	ಅಫಜಲಪುರ	11	15	9	24	13	13	26			
		ಅತನೂರು	2	3	3	6	3	3	6			
		ಚೌಡಪೂರ	4	6	6	12	4	4	8			
		ದೇವಲ ಗಾಣಗಾಪುರ	7	6	7	13	8	8	16	1		1
		ಹಿರೇಗೊಬ್ಬೂರು	1	2	1	3	1	1	2			
		ಸ್ಟೇಷನ್ ಗಾಣಗಾಪುರ	3	5		5	4	4	8			
		ಒಟ್ಟು	**28**	**37**	**26**	**63**	**33**	**33**	**66**	**1**		**1**
	ಆಳಂದ	ಆಳಂದ	9	8	10	18	10	11	21		5	5
		ಜವಳಗಿ ಬಿ.	1	1		1	1	1	2			
		ಜಿಡಗಾ	1				1	2	3			
		ಕಡಗಂಚಿ	1	1		1	3	4	7			
		ನಿಂಬರ್ಗಿ	2	3	1	4	2	2	4			
		ತಡಕಲ್	1	1	1	2	2	2	4			
		ತೀರ್ಥ	1	3	1	4	1	1	2			
		ಒಟ್ಟು	**16**	**17**	**13**	**30**	**20**	**23**	**43**		**5**	**5**

ಅಂಕಿ ಅಂಶಗಳು ೩. ಗುಲ್ಬರ್ಗಾ ಜಿಲ್ಲೆಯ ಛಿಸಾಡಿ ಸಮುದಾಯದ ತಾಲ್ಲೂಕುವಾರು ಲಿಂಗವಾರು ಶೈಕ್ಷಣಿಕ ಸ್ಥಾನಮಾನಗಳು

			ಶೈಕ್ಷಣಿಕ ಮಟ್ಟ														
			ಪ್ರಾಥಮಿಕ			ಮಾಧ್ಯಮಿಕ			ಪ್ರೌಢಶಾಲೆ			ಪದವಿಪೂರ್ವ			ಪದವಿಯೇತರ		
ಜಿಲ್ಲೆಗಳು	ತಾಲೂಕುಗಳು	ಗ್ರಾಮಗಳು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
ಗುಲ್ಬರ್ಗಾ	ಅಫಜಲಪುರ	ಅಫಜಲಪುರ	6	2	8	5	4	9	2	1	3						
		ಅತನೂರು	1	2	3	1		1									
		ಚೌಡಪೂರ	2	2	4	2	2	4				1		1			
		ದೇವಲ ಗಾಣಗಾಪುರ	1	2	3	2	2	4									
		ಹಿರೇಗೊಬ್ಬೂರು	2		2												
		ಸ್ಟೇಷನ್ ಗಾಣಗಾಪುರ	2		2	1	1	2	2		2						
		ಒಟ್ಟು	**14**	**8**	**22**	**11**	**9**	**20**	**4**	**1**	**5**	**1**		**1**			
	ಆಳಂದ	ಆಳಂದ		2	2		3	3	1		1						
		ಜವಳಗಿ ಬಿ.							1		1						
		ಜಿಡಗಾ															
		ಕಡಗಂಚಿ															
		ನಿಂಬರ್ಗಿ					1	1	1		1						
		ತಡಕಲ್															
		ತೀರ್ಥ	1		1		1	1									
		ಒಟ್ಟು	**1**	**2**	**3**		**5**	**5**	**3**		**3**						

ಅಂಕಿ ಅಂಶಗಳು ೪. ಗುಲ್ಬರ್ಗಾ ಜಿಲ್ಲೆಯ ಛಿಸಾಡಿ ಸಮುದಾಯದ ತಾಲ್ಲೂಕುವಾರು ಲಿಂಗವಾರು ಕಸುಬುಗಳ ಸ್ಥಾನಮಾನಗಳು

				ಕಸುಬು														
				ಕೃಷಿ			ಕೃಷಿಕೂಲಿ			ಕಮ್ಮಾರಿಕೆ			ಕೂಲಿ ಕಾರ್ಮಿಕ			ಇತರ		
ಜಿಲ್ಲೆಗಳು	ತಾಲೂಕುಗಳು	ಗ್ರಾಮಗಳು	ಕುಟುಂಬ	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
ಗುಲ್ಬರ್ಗಾ	ಅಫಜಲಪುರ	ಅಫಜಲಪುರ	11							9	13	22	6		6	2		2
		ಅತನೂರು	2							3	3	6						
		ಚೌಡಪೂರ	4							3	4	7	1		1	1		1
		ದೇವಲ ಗಾಣಗಾಪುರ	7	2	1	3				4	3	7	1	2	3	3		3
		ಹಿರೇಗೊಬ್ಬೂರು	1							1		1		1	1			
		ಸ್ಟೇಷನ್ ಗಾಣಗಾಪುರ	3							3	1	4	2	2	4			
		ಒಟ್ಟು	**28**	**2**	**1**	**3**				**23**	**24**	**47**	**10**	**5**	**15**	**6**		**6**
	ಆಳಂದ	ಆಳಂದ	9							10	12	22	4	2	6			
		ಜವಳಗಿ ಬಿ.	1				1		1	1	1	2						
		ಜಿಡಗಾ	1							1	2	3						
		ಕಡಗಂಚಿ	1							1	4	5	2		2			
		ನಿಂಬರ್ಗಿ	2							2	2	4	1		1	1		1
		ತಡಕಲ್	1							1	2	3	1		1			
		ತೀರ್ಥ	1							1	1	2						
		ಒಟ್ಟು	**16**				**1**		**1**	**17**	**24**	**41**	**8**	**2**	**10**	**1**		**1**

ಅಂಕಿ ಅಂಶಗಳು ೫. ಗುಲ್ಬರ್ಗಾ ಜಿಲ್ಲೆಯ ಛಿಸಾಡಿ ಸಮುದಾಯದ ತಾಲ್ಲೂಕುವಾರು ಭೂ ಹಿಡುವಳಿ, ಪಶುಸಂಪತ್ತು ಹಾಗೂ ಮನೆಗಳ ಮಾದರಿ ಮತ್ತು ಇತರೆ ಸೌಲಭ್ಯಗಳು

				ಭೂ ಹಿಡುವಳಿ ಎಕರೆಗಳಲ್ಲಿ			ಪಶುಸಂಪತ್ತು						ಮನೆಗಳ ಮಾದರಿ								ಸೌಲಭ್ಯಗಳು	
ಜಿಲ್ಲೆಗಳು	ತಾಲೂಕುಗಳು	ಗ್ರಾಮಗಳು	ಕುಟುಂಬ	ಒಣ	ನೀರಾವರಿ	ಒಟ್ಟು	ಎತ್ತು	ಎಮ್ಮೆ	ಆಕಳು	ಕುರಿ	ಮೇಕೆ	ಕೋಳಿ	ಗುಡಾರ	ಗುಡಿಸಲು	ಟಿನ್	ಮಾಳಿಗೆ	ಆರ್.ಸಿ.ಸಿ.	ಹಂಚಿನ	ಜನತಾ	ಬಾಡಿಗೆ	ಪಡಿತರ ಚೀಟಿ	ವಿದ್ಯುತ್
ಗುಲ್ಬರ್ಗಾ	ಅಫಜಲಪುರ	ಅಫಜಲಪುರ	11	8		8		1				12			1	1	2			7	5	4
		ಅತನೂರು	2											1	1						1	1
		ಚೌಡಪುರ	4	3		3						4				3				1	3	3
		ದೇವಲ ಗಾಣಗಾಪುರ	7	44		44		2				4				7					7	7
		ಹಿರೇಗೊಬ್ಬೂರು	1									4			1						1	1
		ಸ್ಟೇಷನ್ ಗಾಣಗಾಪುರ	3	6		6					3	4				1				2	3	1
		ಒಟ್ಟು	28	61		61		3			3	28		1	3	12	2			10	20	17
	ಆಳಂದ	ಆಳಂದ	9	7.5		7.5							1	3	5						5	2
		ಜವಳಗಿ ಬಿ.	1	4		4										1					1	1
		ಜಿಡಗಾ	1					2				4			1							1
		ಕಡಗಂಚಿ	1									4							1		1	
		ನಿಂಬರ್ಗಿ	2													2						2
		ತಡಕಲ್	1									3		1							1	
		ತೀರ್ಥ	1	2		2									1						1	1
		ಒಟ್ಟು	16	13.5		13.5		2				11	1	4	7	3			1		9	7

ಅಂಕಿ ಅಂಶಗಳು ೧. ಗುಲ್ಬರ್ಗಾ ಜಿಲ್ಲೆಯ ಛಿಸಾಡಿ ಸಮುದಾಯದ ತಾಲ್ಲೂಕುವಾರು ಲಿಂಗವಾರು ಮತ್ತು ವಯೋಗುಂಪುವಾರು ಜನಸಂಖ್ಯೆ

			ಜನಸಂಖ್ಯೆ				ವಯೋಗುಂಪು														
ಜಿಲ್ಲೆಗಳು	ತಾಲೂಕುಗಳು	ಗ್ರಾಮಗಳು	ಕುಟುಂಬ	ಗಂಡು	ಹೆಣ್ಣು	ಒಟ್ಟು	೦ - ೪ ಗಂ	ಹೆಣ್ಣು	ಒಟ್ಟು	೫ - ೧೭ ಗಂ	ಹೆಣ್ಣು	ಒಟ್ಟು	೧೮-೪೦ ಗಂ	ಹೆಣ್ಣು	ಒಟ್ಟು	೪೧-೬೦ ಗಂ	ಹೆಣ್ಣು	ಒಟ್ಟು	೬೧ಮೇಲ್ಪಟ್ಟು ಗಂ	ಹೆಣ್ಣು	ಒಟ್ಟು
ಗುಲ್ಬರ್ಗಾ	ಚಿತ್ತಾಪುರ	ಬಂಕೂರ, ಚಿತ್ತಾಪುರ	20	49	41	90	5	1	6	16	12	28	22	18	40	6	9	15		1	1
		ಬಳ್ಳೊಳ್ಳಿ	1	5	3	8	2	1	3	1		1	1	2	3	1		1			
		ಭಾಗೋಡಿ	2	3	3	6				1	1	2	1	1	2	1	1	2			
		ದಂಡೋತಿ	6	18	9	27	1	1	2	8	2	10	5	3	8	2	3	5	1		1
		ದಿಗ್ಗಾಂವ್	2	5	4	9	1		1	1	2	3	2	2	4				1		1
		ನಂಗಳಗಿ	1	2	2	4		1	1	1		1	1	1	2						
		ಗುಂಡಗುರ್ತಿ	1	2	6	8				1	4	5	1	1	2					1	1
		ಜೆ.ಜೆ. ತಾಂಡ	1	2	5	7		1	1	1	2	3	1	1	2					1	1
		ಹಲಕಟ್ಟಿ	1	2	2	4				1		1		2	2	1		1			
		ಕಾಳಗಿ	1	2	2	4	2		2				1	1	2						
		ಕೊಲ್ಲೂರು	1	2	2	4							2	1	3					1	1
		ಕೊಡದೂರ	4	7	9	16				2	3	5	4	3	7	1	2	3		1	1
		ಮಲಘಾಣ	1	2	2	4				1	1	2				1	1	2			
		ಮಾಲಗತ್ತಿ	1	2	3	5					1	1	1	2	3	1		1			
		ಸನ್ನತಿ	1	1	3	4								1	1		2	2	1		1
		ಸಾಲಹಳ್ಳಿ	1	4	3	7				2	2	4	1		1	1	1	2			
		ಶಾಹಾಬಾದ	36	94	97	191	13	13	26	30	32	62	35	35	70	14	12	26	2	5	7
		ತರ್ಕಸ್‌ಪೇಟೆ	2	5	7	12		1	1	2	1	3	2	3	5				1	2	3
		ಟೆಂಗಳಿ	2	5	6	11	1	1	2				2	4	6	1		1	1	1	2
		ವಾಡಿ	5	18	10	28	2	1	3	8	3	11	6	2	8	2	4	6			
		ಯರಗಲ್	1	2	2	4				1		1	2	1	3						
		ಒಟ್ಟು	91	232	221	453	27	21	48	77	66	143	90	84	174	32	35	67	7	13	20

ಅಂಕಿ ಅಂಶಗಳು ೨. ಗುಲ್ಬರ್ಗಾ ಜಿಲ್ಲೆಯ ಫಿಸಾಡಿ ಸಮುದಾಯದ ತಾಲ್ಲೂಕುವಾರು ಲಿಂಗವಾರು ವೈವಾಹಿಕ ಸ್ಥಾನಮಾನಗಳು

				ವೈವಾಹಿಕ ಸ್ಥಾನಮಾನ								
				ಅವಿವಾಹಿತ			ಮದುವೆಯಾದ			ವಿಧುರ ಮತ್ತು ವಿಧವೆಯರು		
ಜಿಲ್ಲೆಗಳು	ತಾಲೂಕುಗಳು	ಗ್ರಾಮಗಳು	ಕುಟುಂಬ	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
ಗುಲ್ಬರ್ಗಾ	ಚಿತ್ತಾಪುರ	ಬಂಕೂರ, ಚಿತ್ತಾಪುರ	20	30	17	47	18	18	36		7	7
		ಬಳ್ವೋಡ್ಗಿ	1	3	1	4	2	2	4			
		ಭಾಗೋಡಿ	2	1	1	2	2	2	4			
		ದಂಡೋತಿ	6	12	2	14	4	4	8	2	2	4
		ದಿಗ್ಗಾಂವ್	2	2	2	4	2	2	4	1		1
		ಇಂಗಳಗಿ	1	1	1	2	1	1	2			
		ಗಂಡಗುರ್ತಿ	1	1	4	5	1	1	2		1	1
		ಜೆ.ಜೆ. ತಾಂಡ	1	1	3	4	1	1	2		1	1
		ಹಲಕಟ್ಟೆ	1	1		1	1	2	3			
		ಕಾಳಗಿ	1	2		2	1	1	2			
		ಕೊಲ್ಲೂರು	1	2	1	3					1	1
		ಕೊಡದೂರ	4	3	3	6	4	4	8		2	2
		ಮಲಘಾಣ	1	1	1	2	1	1	2			
		ಮಾಲಗತ್ತಿ	1	1	1	2	1	2	3			
		ಸನ್ನತಿ	1		1	1	1	2	3			
		ಸಾಲಹಳ್ಳಿ	1	3	2	5	1	1	2			
		ಶಾಹಾಬಾದ	36	59	52	111	35	35	70		10	10
		ತರ್ಕಸ್‌ಪೇಟೆ	2	2	3	5	3	3	6		1	1
		ಟೆಂಗಳಿ	2	1	2	3	4	4	8			
		ವಾಡಿ	5	14	4	18	4	4	8		2	2
		ಯರಗಲ್	1	2		2	1	1	2			
		ಒಟ್ಟು	91	142	101	243	88	91	179	3	27	30

ಅಂಕಿ ಅಂಶಗಳು ೩. ಗುಲ್ಬರ್ಗಾ ಜಿಲ್ಲೆಯ ಫಿಸಾಡಿ ಸಮುದಾಯದ ತಾಲ್ಲೂಕುವಾರು ಲಿಂಗವಾರು ಶೈಕ್ಷಣಿಕ ಸ್ಥಾನಮಾನಗಳು

			ಶೈಕ್ಷಣಿಕ ಮಟ್ಟ														
			ಪ್ರಾಥಮಿಕ			ಮಾಧ್ಯಮಿಕ			ಪ್ರೌಢಶಾಲೆ			ಪದವಿಪೂರ್ವ			ಪದವಿಯೇತರ		
ಜಿಲ್ಲೆಗಳು	ತಾಲೂಕುಗಳು	ಗ್ರಾಮಗಳು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
ಗುಲ್ಬರ್ಗಾ	ಚಿತ್ತಾಪುರ	ಬಂಕೂರ, ಚಿತ್ತಾಪುರ	4	6	10	9	5	14	9	4	13	2		2			
		ಬಳ್ಳೋಡ್ಗಿ				1		1	2	1	3						
		ಭಾಗೋಡಿ				3	1	4									
		ದಂಡೋತಿ				1		1	1		1						
		ದಿಗ್ಗಾಂವ್	1	1	2	1	1	2									
		ಇಂಗಳಗಿ							1		1						
		ಗುಂಡಗುರ್ತಿ		3	3	2		2									
		ಜೆ.ಜೆ. ತಾಂಡ															
		ಹಲಕಟ್ಟಿ				1		1									
		ಕಾಳಗಿ							1		1						
		ಕೊಲ್ಲೂರು	1		1		1	1	1		1						
		ಕೊಡದೂರ							1		1						
		ಮಲಘಾಣ															
		ಮಾಲಗತ್ತಿ					1	1	1		1						
		ಸನ್ನತಿ															
		ಸಾಲಹಳ್ಳಿ				2		2	1		1						
		ಶಾಹಾಬಾದ	14	11	25	17	15	32	14	1	15	2	2	4			
		ತರ್ಕಸ್‌ಪೇಟೆ					1	1	1		1						
		ಟೆಂಗಳಿ															
		ವಾಡಿ	5	3	8	2		2									
		ಯರಗಲ್				2		2									
		ಒಟ್ಟು	25	24	49	41	25	66	33	6	39	4	2	6			

ಅಂಕಿ ಅಂಶಗಳು ೪. ಗುಲ್ಬರ್ಗಾ ಜಿಲ್ಲೆಯ ಘಿಸಾಡಿ ಸಮುದಾಯದ ತಾಲ್ಲೂಕುವಾರು ಲಿಂಗವಾರು ಕಸುಬುಗಳ ಸ್ಥಾನಮಾನಗಳು

			ಕಸುಬು															
				ಕೃಷಿ			ಕೃಷಿಕೂಲಿ			ಕಮ್ಮಾರಿಕೆ			ಕೂಲಿ ಕಾರ್ಮಿಕ			ಇತರ		
ಜಿಲ್ಲೆಗಳು	ತಾಲೂಕುಗಳು	ಗ್ರಾಮಗಳು	ಕುಟುಂಬ	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
ಗುಲ್ಬರ್ಗಾ	ಚಿತ್ತಾಪುರ	ಬಂಕೂರ, ಚಿತ್ತಾಪುರ	20							20	16	36	5	8	13	1		1
		ಬಳ್ಯೋಡ್ಗಿ	1							2	1	3		1	1			
		ಭಾಗೋಡಿ	2							2	1	3						
		ದಂಡೋತಿ	6							7	5	12	2		2	1		1
		ದಿಗ್ಗಾಂವ್	2							2	2	4				1		1
		ಇಂಗಳಗಿ	1							1		1		1	1			
		ಗಂಡಗುರ್ತಿ	1							1	1	2						
		ಜೆ.ಜೆ. ತಾಂಡ	1							1	1	2						
		ಹಲಕಟ್ಟ	1							1	2	3						
		ಕಾಳಗಿ	1							1	1	2						
		ಕೊಲ್ಲೂರು	1													1		1
		ಕೊಡದೂರ	4							4	5	9				2		
		ಮಲಘಾಣ	1							1	1	2						
		ಮಾಲಗತ್ತಿ	1							1	2	3						
		ಸನ್ನತಿ	1							1	2	3						
		ಸಾಲಹಳ್ಳಿ	1							1	1	2						
		ಶಾಹಾಬಾದ	36							30	25	55	8	7	15	10	3	13
		ತರ್ಕಸ್‌ಪೇಟೆ	2							3	5	8	1		1			
		ಟೆಂಗಳಿ	2							4	5	9						
		ವಾಡಿ	5							6	4	10	2		2	1		1
		ಯರಗಲ್	1							1	1	2						
		ಒಟ್ಟು	91							90	81	171	18	17	35	17	3	18

ಅಂಕಿ ಅಂಶಗಳು ೫. ಗುಲ್ಬರ್ಗಾ ಜಿಲ್ಲೆಯ ಘಿಸಾಡಿ ಸಮುದಾಯದ ತಾಲ್ಲೂಕುವಾರು ಭೂ ಹಿಡುವಳಿ, ಪಶುಸಂಪತ್ತು ಹಾಗೂ ಮನೆಗಳ ಮಾದರಿ ಮತ್ತು ಇತರೆ ಸೌಲಭ್ಯಗಳು

				ಭೂ ಹಿಡುವಳಿ ಎಕರೆಗಳಲ್ಲಿ			ಪಶುಸಂಪತ್ತು						ಮನೆಗಳ ಮಾದರಿ								ಸೌಲಭ್ಯಗಳು	
ಜಿಲ್ಲೆಗಳು	ತಾಲೂಕುಗಳು	ಗ್ರಾಮಗಳು	ಕುಟುಂಬ	ಒಣ	ನೀರಾವರಿ	ಒಟ್ಟು	ಎತ್ತು	ಎಮ್ಮೆ	ಆಕಳು	ಕುರಿ	ಮೇಕೆ	ಕೋಳಿ	ಗುಡಾರ	ಗುಡಿಸಲು	ಟಿನ್	ಮಾಳಿಗೆ	ಆರ್.ಸಿ.ಸಿ.	ಹೆಂಚಿನ	ಜನತಾ	ಬಾಡಿಗೆ	ಪಡಿತರ ಚೀಟಿ	ವಿದ್ಯುತ್
ಗುಲ್ಬರ್ಗಾ	ಚಿತ್ತಾಪುರ	ಬಂಕೂರ, ಚಿತ್ತಾಪುರ	20													6				14	7	4
		ಬಳ್ಳೋಡ್ಗಿ	1	3		3										1					1	1
		ಭಾಗೋಡಿ	2																	2	1	
		ದಂಡೋತಿ	6	10		10			1				1	1		3				1	3	2
		ದಿಗ್ಗಾಂವ್	2	4		4								2							1	1
		ಇಂಗಳಗಿ	1									4				1					1	
		ಗಂಡಗುರ್ತಿ	1													1					1	1
		ಜಿ.ಜಿ. ತಾಂಡ	1																	1	1	1
		ಹಲಕಟ್ಟಿ	1																	1		
		ಕಾಳಗಿ	1																	1		
		ಕೊಲ್ಲೂರು	1													1					1	1
		ಕೊಡದೂರ	4	10		10			2					1		3					2	
		ಮಲಘಾಣ	1													1					1	1
		ಮಾಲಗತ್ತಿ	1									4				1					1	1
		ಸನ್ನತಿ	1									10			1						1	
		ಸಾಲಹಳ್ಳಿ	1													1					1	1
		ಶಹಾಬಾದ	36				2		1			24				14			1	21	19	13
		ತರ್ಕಸ್‌ಪೇಟೆ	2											1		1					2	
		ಟೆಂಗಳಿ	2									2				1				1	1	1
		ವಾಡಿ	5													1				4	1	1
		ಯರಗಲ್	1									4							1		1	
		ಒಟ್ಟು	91	27		27	2		4			48	1	5	1	36			2	46	47	29

ಅಂಕಿ ಅಂಶಗಳು ೧. ಗುಲ್ಬರ್ಗಾ ಜಿಲ್ಲೆಯ ಛಿಸಾಡಿ ಸಮುದಾಯದ ತಾಲ್ಲೂಕುವಾರು ಲಿಂಗವಾರು ಮತ್ತು ವಯೋಗುಂಪುವಾರು ಜನಸಂಖ್ಯೆ

			ಜನಸಂಖ್ಯೆ				ವಯೋಗುಂಪು															
ಜಿಲ್ಲೆಗಳು	ತಾಲೂಕುಗಳು	ಗ್ರಾಮಗಳು	ಕುಟುಂಬ	ಗಂಡು	ಹೆಣ್ಣು	ಒಟ್ಟು	೦ - ೪ ಗಂ	ಹೆಣ್ಣು	ಒಟ್ಟು	೫ - ೧೭ ಗಂ	ಹೆಣ್ಣು	ಒಟ್ಟು	೧೮-೪೦ ಗಂ	ಹೆಣ್ಣು	ಒಟ್ಟು	೪೧-೬೦ ಗಂ	ಹೆಣ್ಣು	ಒಟ್ಟು	೬೧ಮೇಲ್ಪಟ್ಟು ಗಂ	ಹೆಣ್ಣು	ಒಟ್ಟು
ಗುಲ್ಬರ್ಗಾ	ಚಿಂಚೋಳಿ	ಬೂರಗಪಲ್ಲಿ	1	3	2	5				2	1	3				1	1	2			
		ಬೆನಕನಹಳ್ಳಿ	1	1	1	2								1	1	1		1			
		ಭೈರಂಪಳ್ಳಿ	1	2	1	3							1		1	1	1	2			
		ಚಂದ್ರಂಪಳ್ಳಿ	1	3	2	5	1	1	2	1		1	1	1	2						
		ಚಿಂಚೋಳಿ	2	7	4	11		1	1	4	1	5	1	2	3	1	1	2			
		ಚಿಕ್ಕಲಿಂಗದಳ್ಳಿ	2	5	5	10	1	1	2	1	1	2	2	2	4	1	1	2			
		ಕರ್ಚಖೇಡ	1	5	3	8				2	1	3	2	1	3				1	1	2
		ಕಿಷ್ಟಾಪುರ	2	3	4	7	1		1				2	2	4	1	1	2			
		ಕುಂಚಾವರಂ	1	4	3	7		1	1	2	1	3	1	1	2				1		1
		ಜಿಲ್ವರ ಸೇ	2	8	3	11	3		3	3		3	2	2	4		1	1			
		ಕಲ್ಲೂರ	3	9	8	17	1		1	5	3	8	3	4	7		1	1			
		ಕೆರೋಳಿ	3	3	4	7							3	3	6		1	1			
		ಕೋಡ್ಲಿ ಕ್ರಾಸ್	2	5	5	10		1	1	2	1	3	2	2	4	1	1	2			
		ಕೊಂಡಪಳ್ಳಿ	1	2	4	6					2	2	1	1	2		1	1	1		1
		ಕೊಳ್ಳುರು	1	4	2	6				2		2	1	1	2	1	1	2			
		ಹಾಲಕೂಡ	1	4	4	8		1	1	1		1	2	2	4	1	1	2			
		ಹೂವಿನಬಾವಿ	1	2	4	6				1	3	4	1	1	2						
		ಜಟ್ಟೂರು	5	11	10	21	1		1	5	3	8	5	5	10		1	1	1		1
		ಮೀರಿಯಾಣ	2	2	6	8					1	1	2	4	6		1	1			
		ನಾವದಗಿ	1	3	3	6	1	1	2	1		1	1	1	2					1	1
		ನಿಡಗುಂದಾ	7	16	20	36		2	2	6	9	15	7	8	15	1		1	2	1	3
		ಫುತೇಪುರ	1	4	1	5	1		1	2		2	1	1	2						
		ರುಸ್ತುಂಪುರ	1	1	4	5		1	1		1	1	1	1	2		1	1			
		ಸಿರೋಳಿ	2	7	5	12				5	1	6	1	1	2	2	1	3		1	1
		ಸೋಮಲಿಂಗದಳ್ಳಿ	2	5	9	14	2	2	4	1	5	6	1	2	3	1		1			
		ಶ್ಯಾದಿಪೂರ	1	1	3	4				1	2	3		1	1						
		ಒಟ್ಟು	48	120	120	240	12	12	24	47	36	83	44	50	94	13	16	29	6	4	10

ಅಂಕಿ ಅಂಶಗಳು ೨. ಗುಲ್ಬರ್ಗಾ ಜಿಲ್ಲೆಯ ಫಿಸಾಡಿ ಸಮುದಾಯದ ತಾಲ್ಲೂಕುವಾರು ಲಿಂಗವಾರು ವೈವಾಹಿಕ ಸ್ಥಾನಮಾನಗಳು

				ವೈವಾಹಿಕ ಸ್ಥಾನಮಾನ								
				ಅವಿವಾಹಿತ			ಮದುವೆಯಾದ			ವಿಧುರ ಮತ್ತು ವಿಧವೆಯರು		
ಜಿಲ್ಲೆಗಳು	ತಾಲೂಕುಗಳು	ಗ್ರಾಮಗಳು	ಕುಟುಂಬ	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
ಗುಲ್ಬರ್ಗಾ	ಚಿಂಚೋಳಿ	ಬೂರಗಪಲ್ಲಿ	1	2	1	3	1	1	2			
		ಚೆನಕನಹಳ್ಳಿ	1				1	1	2			
		ಭೈರಂಪಳ್ಳಿ	1	1		1	1	1	2			
		ಚಂದ್ರಂಪಳ್ಳಿ	1	2	1	3	1	1	2			
		ಚಿಂಚೋಳಿ	2	4	2	6	2	2	4		1	1
		ಚಿಕ್ಕಲಿಂಗದಳ್ಳಿ	2	2	2	4	3	3	6			
		ಕರ್ಚಖೇಡ	1	3	1	4	2	2	4			
		ಕಿಷ್ಟಾಪುರ	2	1		1	2	2	4	1	1	2
		ಕುಂಚಾವರಂ	1	2	2	4	1	1	2	1		1
		ಜಿಲ್‌ವರ ಸೇ	2	6		6	2	2	4		1	1
		ಕಲ್ಲೂರ	3	6	3	9	3	4	7		1	1
		ಕೆರೋಳಿ	3				3	3	6		1	1
		ಕೋಡ್ಲಿಕ್ರಾಸ್	2	2	2	4	3	3	6			
		ಕೊಂಡಪಳ್ಳಿ	1		2	2	2	2	4			
		ಕೊಳ್ಳುರು	1	3		3	1	1	2		1	1
		ಹಾಲಕೂಡ	1	1	1	2	3	3	6			
		ಹೂವಿನಬಾವಿ	1	1	3	4	1	1	2			
		ಜಟ್ಟೂರು	5	6	3	9	6	6	12			
		ಮೀರಿಯಾಣ	2		1	1	2	3	5		2	2
		ನಾವದಗಿ	1	2	1	3	1	1	2		1	1
		ನಿಡಗುಂದಾ	7	8	11	19	8	8	16	1		1
		ಪೊತೇಪುರ	1	3		3	1	1	2			
		ರುಸ್ತಂಪುರ	1		2	2	1	1	2		1	1
		ಸಿರೋಳಿ	2	6	1	7	2	2	4		1	1
		ಸೋಮಲಿಂಗದಳ್ಳಿ	2	3	7	10	2	2	4			
		ಶ್ಯಾದಿಪೂರ	1	1	2	4					1	1
		ಒಟ್ಟು	**48**	**65**	**48**	**114**	**55**	**57**	**112**	**3**	**12**	**15**

ಅಂಕಿ ಅಂಶಗಳು ೩. ಗುಲ್ಬರ್ಗಾ ಜಿಲ್ಲೆಯ ಘಿಸಾಡಿ ಸಮುದಾಯದ ತಾಲ್ಲೂಕುವಾರು ಲಿಂಗವಾರು ಶೈಕ್ಷಣಿಕ ಸ್ಥಾನಮಾನಗಳು

			ಶೈಕ್ಷಣಿಕ ಮಟ್ಟ														
			ಪ್ರಾಥಮಿಕ			ಮಾಧ್ಯಮಿಕ			ಪ್ರೌಢಶಾಲೆ			ಪದವಿಪೂರ್ವ			ಪದವಿಯೇತರ		
ಜಿಲ್ಲೆಗಳು	ತಾಲ್ಲೂಕುಗಳು	ಗ್ರಾಮಗಳು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
ಗುಲ್ಬರ್ಗಾ	ಚಿಂಚೋಳಿ	ಬೂರಗಪಲ್ಲಿ	2		2												
		ಬೆನಕನಹಳ್ಳಿ				1		1									
		ಭೈರಂಪಳ್ಳಿ															
		ಚಂದ್ರಂಪಳ್ಳಿ	1		1												
		ಚಿಂಚೋಳಿ	1		1	3		3									
		ಚಿಕ್ಕಲಿಂಗದಳ್ಳಿ	1	1	2	1		1									
		ಕರ್ಚಖೇಡ	1		1	1	1	2	2		2						
		ಕಿಷ್ಟಾಪುರ															
		ಕುಂಚಾವರಂ	2	1	3	1	1	2									
		ಜಿಲ್‌ವರ ಸೇ	2		2	1		1	1		1						
		ಕಲ್ಲೂರ	1	3	4												
		ಕೆರೋಳಿ				1		1									
		ಕೋಡ್ಲಿಕ್ರಾಸ್	1		1	3	1	4	1		1						
		ಕೊಂಡಪಳ್ಳಿ		2	2	1		1									
		ಕೊಳ್ಳುರು				3		3									
		ಹಾಲಕೂಡ															
		ಹೂವಿನಬಾವಿ	1	1	2	1	2	3									
		ಜಟ್ಟೂರು		2	2	2		2									
		ಮೀರಿಯಾಣ															
		ನಾವದಗಿ				1		1									
		ನಿಡಗುಂದಾ	3	3	6	1	7	8	7	2	9	2		2			
		ಪೊತೇಪುರ	1		1												
		ರುಸ್ತುಂಪುರ				1		1									
		ಸಿರೋಳಿ	2	1	3	3		3	2		2						
		ಸೋಮಲಿಂಗದಳ್ಳಿ	1	1	2		1	1									
		ಶ್ಯಾದಿಪೂರ		1	1		1	1	1		1						
		ಒಟ್ಟು	20	16	36	25	14	39	14	2	16	2		2			

ಅಂಕಿ ಅಂಶಗಳು ೪. ಗುಲ್ಬರ್ಗಾ ಜಿಲ್ಲೆಯ ಘಿಸಾಡಿ ಸಮುದಾಯದ ತಾಲ್ಲೂಕುವಾರು ಲಿಂಗವಾರು ಕಸುಬುಗಳ ಸ್ಥಾನಮಾನಗಳು

				ಕಸುಬು														
				ಕೃಷಿ			ಕೃಷಿಕೂಲಿ			ಕಮ್ಮಾರಿಕೆ			ಕೂಲಿ ಕಾರ್ಮಿಕ			ಇತರೆ		
ಜಿಲ್ಲೆಗಳು	ತಾಲೂಕುಗಳು	ಗ್ರಾಮಗಳು	ಕುಟುಂಬ	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
ಗುಲ್ಬರ್ಗಾ	ಚಿಂಚೋಳಿ	ಬೂರಗಪಲ್ಲಿ	1							1	1	2						
		ಬೆನಕನಹಳ್ಳಿ	1							1	1	2						
		ಭೈರಂಪಳ್ಳಿ	1							1	1	2	1		1			
		ಚಂದ್ರಂಪಳ್ಳಿ	1							1	1	2						
		ಚಿಂಚೋಳಿ	2							2	2	4	2		2			
		ಚಿಕ್ಕಲಿಂಗದಳ್ಳಿ	2							2	3	5	1		1			
		ಕರ್ಚಖೇಡ	1							1	2	3	2		2			
		ಕಿಷ್ಟಾಪುರ	2							2	3	5	1		1			
		ಕುಂಚಾವರಂ	1							2	1	3						
		ಜಿಲ್‌ವರ ಸೇ	2				1	2	3	1	1	2						
		ಕಲ್ಲೂರ	3							3	3	6	3	2	5			
		ಕೆರೋಳಿ	3							2	3	5	1	1	2			
		ಕೋಡ್ಲಿಕ್ರಾಸ್	2							2	3	5	1		1			
		ಕೊಂಡಪಳ್ಳಿ	1							1		1		1	1			
		ಕೊಳ್ಳುರು	1							2	1	3						
		ಹಾಲಕೂಡ	1							2	2	4	1		1			
		ಹೂವಿನಬಾವಿ	1							1	1	2						
		ಜಟ್ಟೂರು	5							5	5	10	1		1			
		ಮೀರಿಯಾಣ	2							2	5	7						
		ನಾವದಗಿ	1							1		1		1	1			
		ನಿಡಗುಂದಾ	7							6	4	10	1	3	4	1		1
		ಪೊತೇಪುರ	1							1	1	2						
		ರುಸ್ತುಂಪುರ	1							1		1						
		ಸಿರೋಳಿ	2							2	2	4	4		4			
		ಸೋಮಲಿಂಗದಳ್ಳಿ	2							1	2	3	1		1		2	2
		ಶ್ಯಾದಿಪೂರ	1								2	2	1		1			
		ಒಟ್ಟು	**48**				**1**	**2**	**3**	**46**	**50**	**96**	**21**	**8**	**29**	**1**	**2**	**3**

ಅಂಕಿ ಅಂಶಗಳು ೫. ಗುಲ್ಬರ್ಗಾ ಜಿಲ್ಲೆಯ ಘಿಸಾಡಿ ಸಮುದಾಯದ ತಾಲ್ಲೂಕುವಾರು ಭೂ ಹಿಡುವಳಿ, ಪಶುಸಂಪತ್ತು ಹಾಗೂ ಮನೆಗಳ ಮಾದರಿ ಮತ್ತು ಇತರೆ ಸೌಲಭ್ಯಗಳು

				ಭೂ ಹಿಡುವಳಿ ಎಕರೆಗಳಲ್ಲಿ			ಪಶುಸಂಪತ್ತು						ಮನೆಗಳ ಮಾದರಿ								ಸೌಲಭ್ಯಗಳು	
ಜಿಲ್ಲೆಗಳು	ತಾಲೂಕುಗಳು	ಗ್ರಾಮಗಳು	ಕುಟುಂಬ	ಒಣ	ನೀರಾವರಿ	ಒಟ್ಟು	ಎತ್ತು	ಎಮ್ಮೆ	ಆಕಳು	ಕುರಿ	ಮೇಕೆ	ಕೋಳಿ	ಗುಡಾರ	ಗುಡಿಸಲು	ಟಿನ್	ಮಾಳಿಗೆ	ಆರ್.ಸಿ.ಸಿ.	ಹಂಚಿನ	ಜನತಾ	ಬಾಡಿಗೆ	ಪಡಿತರ ಚೀಟಿ	ವಿದ್ಯುತ್
ಗುಲ್ಬರ್ಗಾ	ಚಿಂಚೋಳಿ	ಬೂರಗಪಲ್ಲಿ	1	3		3					2					1					1	1
		ಬೆನಕನಹಳ್ಳಿ	1													1					1	
		ಭೈರಂಪಳ್ಳಿ	1											1								
		ಚಂದ್ರಂಪಳ್ಳಿ	1									2				1					1	1
		ಚಿಂಚೋಳಿ	2																	2	1	
		ಚಿಕ್ಕಲಿಂಗದಳ್ಳಿ	2						4			2				2					1	1
		ಕರ್ಚಖೇಡ	1	8		8										1					1	1
		ಕಿಷ್ಟಾಪುರ	2											1					1			
		ಕುಂಚಾವರಂ	1													1					1	1
		ಜಿಲ್‌ವರ ಸೇ	2	3		3	2		1							2					2	1
		ಕಲ್ಲೂರ	3	12		12	2		2							3					3	3
		ಕೆರೋಳಿ	3											2		1					1	1
		ಕೋಡ್ಲಿಕ್ರಾಸ್	2													1				1	2	
		ಕೊಂಡಪಳ್ಳಿ	1													1					1	1
		ಕೊಳ್ಳೂರು	1						1							1					1	1
		ಹಾಲಕೂಡ	1													1					1	1
		ಹೂವಿನಬಾವಿ	1																1		1	1
		ಜಟ್ಟೂರು	5	3		3								3		1				1	2	1
		ಮೀರಿಯಾಣ	2	6		6								1					1		1	1
		ನಾವದಗಿ	1																	1	1	
		ನಿಡಗುಂದಾ	7									4				3	1			3	7	4
		ಪೋತೇಪುರ	1								3	4		1								
		ರುಸ್ತಂಪುರ	1													1					1	1
		ಸಿರೋಳಿ	2													2					2	2
		ಸೋಮಲಿಂಗದಳ್ಳಿ	2	2		2										2					2	
		ಶ್ಯಾದಿಪೂರ	1													1					1	1
		ಒಟ್ಟು	48	37		37	4		8		5	12		9		27	1		3	8	36	24

ಅಂಕಿ ಅಂಶಗಳು ೧. ಗುಲ್ಬರ್ಗಾ ಜಿಲ್ಲೆಯ ಛಿಸಾಡಿ ಸಮುದಾಯದ ತಾಲ್ಲೂಕುವಾರು ಲಿಂಗವಾರು ಮತ್ತು ವಯೋಗುಂಪುವಾರು ಜನಸಂಖ್ಯೆ

			ಜನಸಂಖ್ಯೆ				ವಯೋಗುಂಪು															
ಜಿಲ್ಲೆಗಳು	ತಾಲೂಕುಗಳು	ಗ್ರಾಮಗಳು	ಕುಟುಂಬ	ಗಂಡು	ಹೆಣ್ಣು	ಒಟ್ಟು	೦ - ೪ ಗಂ	ಹೆಣ್ಣು	ಒಟ್ಟು	೫ - ೧೭ ಗಂ	ಹೆಣ್ಣು	ಒಟ್ಟು	೧೮-೪೦ ಗಂ	ಹೆಣ್ಣು	ಒಟ್ಟು	೪೧-೬೦ ಗಂ	ಹೆಣ್ಣು	ಒಟ್ಟು	೬೧ಮೇಲ್ಪಟ್ಟು ಗಂ	ಹೆಣ್ಣು	ಒಟ್ಟು
ಗುಲ್ಬರ್ಗಾ	ಗುಲ್ಬರ್ಗಾ	ಗುಲ್ಬರ್ಗಾ ನಗರ	51	128	115	243	13	15	28	44	33	77	52	46	98	15	14	29	4	7	11
		ಕಪ್ಪನೂರ	2	1	7	8		2	2		3	3	1	2	3						
		ಖಣದಾಳ	1	2	4	6		1	1	1	2	3	1	1	2						
		ಹಾಗರಗುಂಡಗಿ	1	2	3	5				1	2	3	1	1	2						
		ಹೊನ್ನಕಿರಣಗಿ	1	2	1	3				1		1	1		1		1	1			
		ಒರಾದ್ ಬಿ.	3	9	10	19		1	1	7	5	12	1	4	5	1		1			
		ಫರತಾಬಾದ್	1	5	1	6				1		1	3	1	4	1		1			
		ಒಟ್ಟು	**60**	**149**	**141**	**290**	**13**	**19**	**32**	**55**	**45**	**100**	**60**	**55**	**115**	**17**	**15**	**32**	**4**	**7**	**11**
	ಜೇವರ್ಗಿ	ಅಂದೋಲಾ	2	7	4	11				3	1	4	1	1	2	2	2	4	1		1
		ಬಿರಾಳ ಬಿ.	1	2	5	7		1	1	1	3	4		1	1	1		1			
		ಇಜೇರಿ	1	1	6	7					5	5				1	1	2			
		ಗಾಂವ್ಹಾರ	5	11	10	21	3		3	4	2	6	5	5	10		2	2			
		ಜೇವರ್ಗಿ	7	18	23	41	3	2	5	6	10	16	7	9	16	2	1	3		1	1
		ನರಬೋಳಿ	4	11	13	24		3	3	5	2	7	4	4	8	1	4	5	1		1
			1	1	1	2							1	1	2						
		ಒಟ್ಟು	**21**	**51**	**62**	**113**	**6**	**6**	**12**	**19**	**23**	**42**	**18**	**21**	**39**	**7**	**10**	**17**	**2**	**1**	**3**

ಅಂಕಿ ಅಂಶಗಳು ೨. ಗುಲ್ಬರ್ಗಾ ಜಿಲ್ಲೆಯ ಫಿಸಾಡಿ ಸಮುದಾಯದ ತಾಲ್ಲೂಕುವಾರು ಲಿಂಗವಾರು ವೈವಾಹಿಕ ಸ್ಥಾನಮಾನಗಳು

				ವೈವಾಹಿಕ ಸ್ಥಾನಮಾನ								
				ಅವಿವಾಹಿತ			ಮದುವೆಯಾದ			ವಿಧುರ ಮತ್ತು ವಿಧವೆಯರು		
ಜಿಲ್ಲೆಗಳು	ತಾಲೂಕುಗಳು	ಗ್ರಾಮಗಳು	ಕುಟುಂಬ	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
ಗುಲ್ಬರ್ಗಾ	ಗುಲ್ಬರ್ಗಾ	ಗುಲ್ಬರ್ಗಾ ನಗರ	51	76	53	129	51	52	103		10	10
		ಕಪ್ನೂರ	2		5	5	1	1	2		1	1
		ಖಣದಾಳ	1	1	3	4	1	1	2			
		ಹಾಗರಗುಂಡಿಗಿ	1	1	2	3	1	1	2			
		ಹೊನ್ನಕಿರಣಗಿ	1	2		2					1	1
		ಔರಾದ್ ಬಿ.	3	7	7	14	2	2	4		1	1
		ಫರತಾಬಾದ್	1	4		4	1	1	2			
		ಒಟ್ಟು	60	91	70	161	57	58	115		13	13
	ಜೇವರ್ಗಿ	ಅಂದೋಲಾ	2	4	1	5	2	2	4	1	1	2
		ಬಿರಾಳ ಬಿ.	1	1	4	5	1	1	2			
		ಇಜೇರಿ	1		5	5	1	1	2			
		ಗಾಂವ್ಹಾರ	5	7	2	9	5	5	10		2	2
		ಜೇವರ್ಗಿ	7	9	13	22	9	9	18		1	1
		ನರಬೋಳಿ	4	5	5	10	6	7	13		1	1
			1				1	1	2			
		ಒಟ್ಟು	21	26	30	56	25	26	51	1	5	6

ಅಂಕಿ ಅಂಶಗಳು ೩. ಗುಲ್ಬರ್ಗಾ ಜಿಲ್ಲೆಯ ಘಿಸಾಡಿ ಸಮುದಾಯದ ತಾಲ್ಲೂಕುವಾರು ಲಿಂಗವಾರು ಶೈಕ್ಷಣಿಕ ಸ್ಥಾನಮಾನಗಳು

			ಶೈಕ್ಷಣಿಕ ಮಟ್ಟ														
			ಪ್ರಾಥಮಿಕ			ಮಾಧ್ಯಮಿಕ			ಪ್ರೌಢಶಾಲೆ			ಪದವಿಪೂರ್ವ			ಪದವಿಯೋತ್ತರ		
ಜಿಲ್ಲೆಗಳು	ತಾಲೂಕುಗಳು	ಗ್ರಾಮಗಳು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
ಗುಲ್ಬರ್ಗಾ	ಗುಲ್ಬರ್ಗಾ	ಗುಲ್ಬರ್ಗಾ ನಗರ	17	13	30	23	15	38	10	7	17	7		7	4		4
		ಕಪ್ಪನೂರ		2	2												
		ಖಣದಾಳ	1	1	2	1		1									
		ಹಾಗರಗುಂಡಗಿ	1	1	2		1	1		1	1						
		ಹೊನ್ನಕಿರಣಗಿ															
		ಔರಾದ್ ಬಿ.	2	4	6				1		1						
		ಫರತಾಬಾದ್															
		ಒಟ್ಟು	21	21	42	24	16	40	11	8	19	7		7	4		4
	ಜೇವರ್ಗಿ	ಅಂದೋಲಾ							1		1						
		ಬಿರಾಳ ಬಿ.		1	1	1	1	2	1		1						
		ಇಜೇರಿ				1		1									
		ಗಾಂವ್ಹಾರ															
		ಜೇವರ್ಗಿ	4	3	7	3	3	6	3		3				1		1
		ನರಬೋಳಿ		1	1	2		2		1	1						
						1		1									
		ಒಟ್ಟು	4	5	9	8	4	12	5	1	6				1		1

ಅಂಕಿ ಅಂಶಗಳು ೪. ಗುಲ್ಬರ್ಗಾ ಜಿಲ್ಲೆಯ ಛಿಸಾಡಿ ಸಮುದಾಯದ ತಾಲ್ಲೂಕುವಾರು ಲಿಂಗವಾರು ಕಸುಬುಗಳ ಸ್ಥಾನಮಾನಗಳು

				ಕಸುಬು														
				ಕೃಷಿ			ಕೃಷಿಕೂಲಿ			ಕಮ್ಮಾರಿಕೆ			ಕೂಲಿ ಕಾರ್ಮಿಕ			ಇತರೆ		
ಜಿಲ್ಲೆಗಳು	ತಾಲೂಕುಗಳು	ಗ್ರಾಮಗಳು	ಕುಟುಂಬ	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
ಗುಲ್ಬರ್ಗಾ	ಗುಲ್ಬರ್ಗಾ	ಗುಲ್ಬರ್ಗಾ ನಗರ	51							38	39	77	16	4	20	12	1	13
		ಕಪ್ಪನೂರ	2							1		1					2	2
		ಖಣದಾಳ	1							1	1	2						
		ಹಾಗರಗುಂಡಿಗಿ	1							1		1						
		ಹೊನ್ನಕಿರಣಗಿ	1							2		2		1	1			
		ಶಿರಾದ್ ಬಿ.	3							2	3	5	1		1			
		ಫರತಾಬಾದ್	1							1		1	4	1	5			
		ಒಟ್ಟು	60							46	43	89	21	6	27	12	3	15
	ಜೇವರ್ಗಿ	ಅಂದೋಲಾ	2							3	3	6	1	2	3			
		ಬಿರಾಳ ಬಿ.	1							1		1		1	1			
		ಇಜೇರಿ	1							1		1						
		ಗಾಂವ್ಹಾರ	5							4	5	9	2		2			
		ಜೇವರ್ಗಿ	7							7	5	12				2		2
		ನರಬೋಳಿ	4							6	6	12		2	2			
			1							1	1	2						
		ಒಟ್ಟು	21							23	20	43	3	5	8	2		2

ಅಂಕಿ ಅಂಶಗಳು ೫. ಗುಲ್ಬರ್ಗಾ ಜಿಲ್ಲೆಯ ಘಿಸಾಡಿ ಸಮುದಾಯದ ತಾಲ್ಲೂಕುವಾರು ಭೂ ಹಿಡುವಳಿ, ಪಶುಸಂಪತ್ತು ಹಾಗೂ ಮನೆಗಳ ಮಾದರಿ ಮತ್ತು ಇತರೆ ಸೌಲಭ್ಯಗಳು

				ಭೂ ಹಿಡುವಳಿ ಎಕರೆಗಳಲ್ಲಿ			ಪಶುಸಂಪತ್ತು						ಮನೆಗಳ ಮಾದರಿ								ಸೌಲಭ್ಯಗಳು	
ಜಿಲ್ಲೆಗಳು	ತಾಲೂಕುಗಳು	ಗ್ರಾಮಗಳು	ಕುಟುಂಬ	ಒಣ	ನೀರಾವರಿ	ಒಟ್ಟು	ಎತ್ತು	ಎಮ್ಮೆ	ಆಕಳು	ಕುರಿ	ಮೇಕೆ	ಕೋಳಿ	ಗುಡಾರ	ಗುಡಿಸಲು	ಟಿನ್	ಮಾಳಿಗೆ	ಆರ್.ಸಿ.ಸಿ.	ಹೆಂಚಿನ	ಜನತಾ	ಬಾಡಿಗೆ	ಪಡಿತರ ಚೀಟಿ	ವಿದ್ಯುತ್
ಗುಲ್ಬರ್ಗಾ	ಗುಲ್ಬರ್ಗಾ	ಗುಲ್ಬರ್ಗಾ ನಗರ	51	8		8	1			1		41	9		3		9			30	35	14
		ಕಪ್ಪನೂರ	2											1						1	2	
		ಖಣದಾಳ	1																	1	1	
		ಹಾಗರಗುಂಡಿಗಿ	1											1							1	
		ಹೊನ್ನಕಿರಣಗಿ	1																1		1	
		ಔರಾದ್ ಬಿ.	3	4		4									3						1	1
		ಫರತಾಬಾದ್	1																	1	1	
		ಒಟ್ಟು	60	12		12	1			1		41	9	2	6		9		1	33	42	15
	ಜೇವರ್ಗಿ	ಅಂದೋಲಾ	2	4		4								1		1					1	
		ಬಿರಾಳ ಬಿ.	1											1								
		ಇಜೇರಿ	1												1						1	1
		ಗಾಂವ್ಹಾರ	5	3		3								3	1	1					5	2
		ಜೇವರ್ಗಿ	7										1	3	1		1			1	4	1
		ನರಬೋಳಿ	4											1		3					4	3
			1									3		1								
		ಒಟ್ಟು	21	7		7						3	1	10	3	5	1			1	15	7

ಅಂಕಿ ಅಂಶಗಳು ೧. ಗುಲ್ಬರ್ಗಾ ಜಿಲ್ಲೆಯ ಛಿಸಾಡಿ ಸಮುದಾಯದ ತಾಲ್ಲೂಕುವಾರು ಲಿಂಗವಾರು ಮತ್ತು ವಯೋಗುಂಪುವಾರು ಜನಸಂಖ್ಯೆ

			ಜನಸಂಖ್ಯೆ				ವಯೋಗುಂಪು														
ಜಿಲ್ಲೆಗಳು	ತಾಲೂಕುಗಳು	ಗ್ರಾಮಗಳು	ಕುಟುಂಬ	ಗಂಡು	ಹೆಣ್ಣು	ಒಟ್ಟು	೦ - ೪ ಗಂ	ಹೆಣ್ಣು	ಒಟ್ಟು	೫ - ೧೭ ಗಂ	ಹೆಣ್ಣು	ಒಟ್ಟು	೧೮-೪೦ ಗಂ	ಹೆಣ್ಣು	ಒಟ್ಟು	೪೧-೬೦ ಗಂ	ಹೆಣ್ಣು	ಒಟ್ಟು	೬೧ಮೇಲ್ಪಟ್ಟು ಗಂ	ಹೆಣ್ಣು	ಒಟ್ಟು
ಗುಲ್ಬರ್ಗಾ	ಶಹಾಪುರ	ಶಿರವಾಳ	1	3	7	10				1	5	6	1		1	1	2	3			
		ಶಹಾಪುರ	18	40	45	85	8	7	15	9	21	30	15	14	29	4	6	10	1		1
		ಒಟ್ಟು	**19**	**43**	**52**	**95**	**8**	**7**	**15**	**10**	**26**	**36**	**16**	**14**	**30**	**5**	**8**	**13**	**1**		**1**
	ಸೇಡಂ	ಸೇಡಂ	11	28	33	61	3	2	5	7	12	19	12	12	24	3	2	5	2	3	5
		ಭೂತಪೂರ	1	2	1	3							1		1	1	1	2			
		ಚಿಟ್ಟಗಂಪಳ್ಳಿ	1	2	3	5				1	2	3	1	1	2						
		ಹನಮನಹಳ್ಳಿ	1	1	2	3							1	2	3						
		ಹಂದರಕಿ	1	2	3	5				1	1	2				1	2	3			
		ಉಡಾ ಬಿ.	1	2	4	6		2	2				1	1	2	1	1	2			
		ಹೇಡ್ಗಿ	1	1	2	3		1	1				1	1	2						
		ಕಲಕಂಬಾ	1	3	3	6	2		2		1	1		1	1	1		1		1	1
		ಕುಕ್ಕುಂದಾ	1	3	1	4				1		1	1		1	1	1	2			
		ಕೋಡ್ಲಾ	2	5	4	9	1		1	2	1	3	2	3	5						
		ಮಳಖೇಡ	6	14	10	24	3	1	4	3	2	5	7	5	12	1	1	2		1	1
		ಮೀನಹಾಬಾಳ	1	4	2	6				2	1	3	2	1	3						
		ಮೂಗನೂರು	1	3	3	6				1	2	3	2	1	3						
		ಮುಧೋಳ	7	15	16	31	4	1	5	5	4	9	5		12	1	2	3		2	2
		ರಂಜೋಳ	1	2	1	3	1		1				1	1	2						
		ಒಟ್ಟು	**37**	**87**	**88**	**175**	**14**	**7**	**21**	**23**	**26**	**49**	**37**	**29**	**73**	**10**	**10**	**20**	**2**	**7**	**9**
	ಯಾದಗಿರಿ	ಮೈಲಾಪುರ	3	6	5	11	2		2	1	2	3	2	2	4	1	1	2			
		ಯಾದಗಿರಿ	12	26	23	49	5	4	9	8	6	14	11	10	21	1	3	4	1		1
		ಒಟ್ಟು	**15**	**32**	**28**	**60**	**7**	**4**	**11**	**9**	**8**	**17**	**13**	**12**	**25**	**2**	**4**	**6**	**1**		**1**

ಅಂಕಿ ಅಂಶಗಳು ೨. ಗುಲ್ಬರ್ಗಾ ಜಿಲ್ಲೆಯ ಛಿಸಾಡಿ ಸಮುದಾಯದ ತಾಲ್ಲೂಕುವಾರು ಲಿಂಗವಾರು ವೈವಾಹಿಕ ಸ್ಥಾನಮಾನಗಳು

				ವೈವಾಹಿಕ ಸ್ಥಾನಮಾನ								
				ಅವಿವಾಹಿತ			ಮದುವೆಯಾದ			ವಿಧುರ ಮತ್ತು ವಿಧವೆಯರು		
ಜಿಲ್ಲೆಗಳು	ತಾಲೂಕುಗಳು	ಗ್ರಾಮಗಳು	ಕುಟುಂಬ	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
ಗುಲ್ಬರ್ಗಾ	ಶಹಾಪುರ	ಶಿರವಾಳ	1	2	5	7	1	1	2		1	1
		ಶಹಾಪುರ	18	20	25	45	19	19	38		2	2
		ಒಟ್ಟು	**19**	**22**	**30**	**52**	**20**	**20**	**40**		**3**	**3**
	ಸೇಡಂ	ಸೇಡಂ	11	15	15	30	13	13	26		2	2
		ಭೂತಪೂರ	1	1		1	1	1	2			
		ಚಿಟ್ಟಗಂಪಳ್ಳಿ	1	1	2	3	1	1	2			
		ಹನಮನಹಳ್ಳಿ	1				1	2	3			
		ಹಂದರಕಿ	1	1	1	2	1	2	3			
		ಉಡಾ ಬಿ.	1		2	2	2	2	4			
		ಹೇಡ್ಡಿ	1		1	1	1	1	2			
		ಕಲಕಂಬಾ	1	2	1	3	1	1	2		1	1
		ಕುಕ್ಕುಂದಾ	1	2		2	1	1	2			
		ಕೋಡ್ಲಾ	2	3	1	4	2	3	5			
		ಮಳಖೇಡ	6	9	3	12	5	5	10		2	2
		ಮೀನಹಾಬಾಳ	1	3	2	5	1	1	2			
		ಮೂಗನೂರು	1	2	2	4	1	1	2			
		ಮುಧೋಳ	7	9	6	16	6	6	12		4	4
		ರಂಜೋಳ	1	1		1	1	1	2			
		ಒಟ್ಟು	**37**	**49**	**36**	**86**	**38**	**41**	**79**		**9**	**9**
	ಯಾದಗಿರಿ	ಮೈಲಾಪುರ	3	3	2	5	3	3	6			
		ಯಾದಗಿರಿ	12	15	11	26	11	11	22		1	1
		ಒಟ್ಟು	**15**	**18**	**13**	**31**	**14**	**14**	**28**		**1**	**1**

ಅಂಕಿ ಅಂಶಗಳು ೩. ಗುಲ್ಬರ್ಗಾ ಜಿಲ್ಲೆಯ ಛಿಸಾಡಿ ಸಮುದಾಯದ ತಾಲ್ಲೂಕುವಾರು ಲಿಂಗವಾರು ಶೈಕ್ಷಣಿಕ ಸ್ಥಾನಮಾನಗಳು

			ಶೈಕ್ಷಣಿಕ ಮಟ್ಟ														
			ಪ್ರಾಥಮಿಕ			ಮಾಧ್ಯಮಿಕ			ಪ್ರೌಢಶಾಲೆ			ಪದವಿಪೂರ್ವ			ಪದವಿಯೇತರ		
ಜಿಲ್ಲೆಗಳು	ತಾಲೂಕುಗಳು	ಗ್ರಾಮಗಳು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
ಗುಲ್ಬರ್ಗಾ	ಶಹಾಪುರ	ಶಿರವಾಳ				1		1									
		ಶಹಾಪುರ	1	2	3	1		1									
		ಒಟ್ಟು	1	2	3	2		2									
	ಸೇಡಂ	ಸೇಡಂ	3	5	8	7	3	10	4	1	5		1	1	1		1
		ಭೂತಪೂರ	1		1												
		ಚಿಟ್ಟಗಂಪಳ್ಳಿ															
		ಹನಮನಹಳ್ಳಿ															
		ಹಂದರಕಿ				1		1									
		ಉಡಾ ಬಿ.															
		ಹೇಡ್ಗಿ				1		1									
		ಕಲಕಂಬಾ															
		ಕುಕ್ಕುಂದಾ	1		1												
		ಕೋಡ್ಲಾ	2		2	1		1									
		ಮಳಖೇಡ	2	2	4	1		1	1		1						
		ಮೀನಹಾಬಾಳ															
		ಮೂಗನೂರು															
		ಮುಧೋಳ	1	2	3	4	3	7	3	1	4		1	1			
		ರಂಜೋಳ															
		ಒಟ್ಟು	10	9	19	15	6	21	8	2	10		2	2	1		1
	ಯಾದಗಿರಿ	ಮೈಲಾಪುರ	1	1	2	2	1	3	1	1	2						
		ಯಾದಗಿರಿ	4	3	7	4	1	5	1		1						
		ಒಟ್ಟು	5	4	9	6	2	8	2	1	3						

ಅಂಕಿ ಅಂಶಗಳು ೪. ಗುಲ್ಬರ್ಗಾ ಜಿಲ್ಲೆಯ ಘಿಸಾಡಿ ಸಮುದಾಯದ ತಾಲ್ಲೂಕುವಾರು ಲಿಂಗವಾರು ಕಸುಬುಗಳ ಸ್ಥಾನಮಾನಗಳು

				ಕಸುಬು														
				ಕೃಷಿ			ಕೃಷಿಕೂಲಿ			ಕಮ್ಮಾರಿಕೆ			ಕೂಲಿ ಕಾರ್ಮಿಕ			ಇತರೆ		
ಜಿಲ್ಲೆಗಳು	ತಾಲೂಕುಗಳು	ಗ್ರಾಮಗಳು	ಕುಟುಂಬ	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
ಗುಲ್ಬರ್ಗಾ	ಶಹಾಪುರ	ಶಿರವಾಳ	1							1	5	1			5			
		ಶಹಾಪುರ	18							17	22	17	5		27			
		ಒಟ್ಟು	**19**							**18**	**27**	**18**	**5**		**32**			
	ಸೇಡಂ	ಸೇಡಂ	11							11	7	12	4	1	11	2	1	3
		ಭೂತಪೂರ	1							1		1						
		ಚಿಟ್ಟಗಂಪಳ್ಳಿ	1							1	1	1			1			
		ಹನಮನಹಳ್ಳಿ	1							1		2		1				
		ಹಂದರಕಿ	1							2		2						
		ಉಡಾ ಬಿ.	1							1		1				1		1
		ಹೇಡ್ಗಿ	1							1	1	1			1			
		ಕಲಕಂಬಾ	1							1	2	1			2			
		ಕುಕ್ಕುಂದಾ	1							2		2				1		1
		ಕೋಡ್ಲಾ	2							2	1	2			1			
		ಮಳಖೇಡ	6							6	2	6			2			
		ಮೀನಹಾಬಾಳ	1							1	1	1			1			
		ಮೂಗನೂರು	1							1	2	1	1		3			
		ಮುಧೋಳ	7							4	5	4			5	2	1	3
		ರಂಜೋಳ	1							1		2		1				
		ಒಟ್ಟು	**37**							**36**	**22**	**39**	**5**	**3**	**27**	**6**	**2**	**8**
	ಯಾದಗಿರಿ	ಮೈಲಾಪುರ	3							3	1	4		1	1	1		1
		ಯಾದಗಿರಿ	12							12	3	17	1	5	4	2	2	4
		ಒಟ್ಟು	**15**							**15**	**4**	**21**	**1**	**6**	**5**	**3**	**2**	**5**

ಅಂಕಿ ಅಂಶಗಳು ೫. ಗುಲ್ಬರ್ಗಾ ಜಿಲ್ಲೆಯ ಛಿಸಾಡಿ ಸಮುದಾಯದ ತಾಲ್ಲೂಕುವಾರು ಭೂ ಹಿಡುವಳಿ, ಪಶುಸಂಪತ್ತು ಹಾಗೂ ಮನೆಗಳ ಮಾದರಿ ಮತ್ತು ಇತರೆ ಸೌಲಭ್ಯಗಳು

				ಭೂ ಹಿಡುವಳಿ ಎಕರೆಗಳಲ್ಲಿ			ಪಶುಸಂಪತ್ತು						ಮನೆಗಳ ಮಾದರಿ							ಸೌಲಭ್ಯಗಳು		
ಜಿಲ್ಲೆಗಳು	ತಾಲೂಕುಗಳು	ಗ್ರಾಮಗಳು	ಕುಟುಂಬ	ಒಣ	ನೀರಾವರಿ	ಒಟ್ಟು	ಎತ್ತು	ಎಮ್ಮೆ	ಆಕಳು	ಕುರಿ	ಮೇಕೆ	ಕೋಳಿ	ಗುಡಾರ	ಗುಡಿಸಲು	ಟಿನ್	ಮಾಳಿಗೆ	ಆರ್.ಸಿ.ಸಿ.	ಹೆಂಚಿನ	ಜನತಾ	ಬಾಡಿಗೆ	ಪಡಿತರ ಚೀಟಿ	ವಿದ್ಯುತ್
ಗುಲ್ಬರ್ಗಾ	ಶಹಾಪುರ	ಶಿರವಾಳ	1											1							1	
		ಶಹಾಪುರ	18									6	18								2	1
		ಒಟ್ಟು	19									6	18	1							3	1
	ಸೇಡಂ	ಸೇಡಂ	11									2	3		1	1				6	5	1
		ಭೂತಪೂರ	1					1				10				1					1	1
		ಚಿಟ್ಟಗಂಪಳ್ಳಿ	1																	1	1	
		ಹನಮನಹಳ್ಳಿ	1									12				1					1	1
		ಹಂದರಕಿ	1						2			4				1					1	
		ಉಡಾ ಬಿ.	1																	1	1	1
		ಹೇಡ್ಗಿ	1																	1	1	
		ಕಲಕಂಬಾ	1													1						
		ಕುಕ್ಕುಂದಾ	1						1			4				1					1	1
		ಕೋಡ್ಲಾ	2											1		1					1	1
		ಮಳಖೇಡ	6									4	1		1	1				3	5	1
		ಮೀನಹಾಬಾಳ	1	2		2			1			4				1					1	
		ಮೂಗನೂರು	1											1							1	
		ಮುಧೋಳ	7													5				2	5	4
		ರಂಜೋಳ	1																	1		
		ಒಟ್ಟು	37	2		2		1	4			40	4	2	2	14				15	25	11
	ಯಾದಗಿರಿ	ಮೈಲಾಪುರ	3							4						1				2	1	1
		ಯಾದಗಿರಿ	12									10	8			1				3	2	1
		ಒಟ್ಟು	15							4		10	8			2				5	3	2

ಗ್ರಂಥಋಣ

ಅರ್ಜುನ್ ಗೊಳಸಂಗಿ., *ದಲಿತರ ಬದುಕು ಮತ್ತು ಸಂಸ್ಕೃತಿ*, ೨೦೦೦, ವಿಮೋಚನಾ ಪ್ರಕಾಶನ, ಅಥಣಿ.

ಕಪಾಡಿಯಾ ಕೆ.ಎಂ., (ಮೂಲ) *ಭಾರತದಲ್ಲಿ ವಿವಾಹ ಮತ್ತು ಕುಟುಂಬ*, ಮಹೇಶ್ವರ (ಅನು), ಕನ್ನಡ ಅಧ್ಯಯನ ಕೇಂದ್ರ ಮೈಸೂರು ವಿಶ್ವವಿದ್ಯಾಲಯ, ಮೈಸೂರು.

ಕರೀಗೌಡ ಬೀಚನಹಳ್ಳಿ., (ಸಂ), *ಕರಕುಶಲ ಕಲೆಗಳು*, ೨೦೦೨, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

ಕರಿಶೆಟ್ಟಿರುದ್ರಪ್ಪ., *ಮ್ಯಾಸನಾಯಕರ : ಒಂದು ಜನಾಂಗಿಕ ಅಧ್ಯಯನ*, ೧೯೯೫, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

ಕಾಳೇಗೌಡ ನಾಗವಾರ ಪ್ರೋ. ಮತ್ತು ಹುಚ್ಚಪ್ಪ ಮಾಸ್ತರ್ ಎನ್. (ಸಂ), *ಗಿರಿಜನ ಸಂಸ್ಕೃತಿ*, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ. ಬೆಂಗಳೂರು.

ಕುಮಾರ್ ಆರ್.ಬಿ., ಕರ್ನಾಟಕದ ಮುದ್ದೆ ಕಂಬಾರರು, ೨೦೦೦, ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ ಕನ್ನಡ ವಿಶ್ವವಿದ್ಯಾಲಯ, ಹಂಪಿ

ಕೃಷ್ಣ ಬಿ.ಆರ್., *ಕೈಗಾರಿಕಾ ಸಮಾಜಶಾಸ್ತ್ರ*, ೧೯೯೨ ಚೇತನ ಬುಕ್‌ಹೌಸ್, ಮೈಸೂರು.

ಕೃಷ್ಣ ಕುಮಾರ ಸಿ.ಪಿ., (ಅನು) ರಾಜಸ್ಥಾನದ ಜಾನಪದ, ೧೯೮೦, ನ್ಯಾಷನಲ್ ಬುಕ್‌ಟ್ರಸ್ಟ್ ಇಂಡಿಯಾ.

ಕೇಶವನ್ ಪ್ರಸಾದ್ ಕೆ., *ಕಪ್ಪ ಹೊಳೆಯ ಸಂಸ್ಕೃತಿ*, ೧೯೯೩, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

ಖಂಡೋಬಾ ಪಿ.ಕೆ., *ಕರ್ನಾಟಕ ಲಂಬಾಣಿಗಳು ಒಂದು ಸಾಂಸ್ಕೃತಿಕ ಅಧ್ಯಯನ*, ೧೯೯೧, ಪ್ರಕಟಿತ ಪಿಎಚ್.ಡಿ. ಪ್ರಬಂಧ ತೇಜ್‌ಸಿಂಗ್ ರಾಠೋಡ, ಮೆಮೊರಿಯಲ್ ಟ್ರಸ್ಟ್, ಗುಲ್ಬರ್ಗಾ.

ಖಂಡೋಬಾ ಪಿ.ಕೆ., *ಸುಡಾಗಡು ಸಿದ್ಧರ ಸಂಸ್ಕೃತಿ*, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

ಗಂಗಾಧರ ದೈವಜ್ಞ., *ಬುಡಕಟ್ಟು ಸಮಾಜ* (ಹುಟ್ಟು-ಸಾವಿನ ನಡುವೆ), ೨೦೦೦, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ. ವಿದ್ಯಾರಣ್ಯ.

ಗಂಗಾಧರ ದೈವಜ್ಞ., *ಶಿರಸಂಗಿ ಕಾಳಮ್ಮಾ*, ೨೦೦೨, ಶ್ವೇತಾ ಭಾಗೀರಥಿ ಪ್ರಕಾಶನ, ಹಂಪಿ ಪವರ್ ಕ್ಯಾಂಪ್.

ಗೀತಾನಾಗಭೂಷಣ., *ದುರುಗಿಮುರಗಿಯರ ಸಂಸ್ಕೃತಿ*, ೧೯೯೩, ಕರ್ನಾಟಕ ಸಾಹಿತ್ಯ ಆಕಾಡೆಮಿ, ಬೆಂಗಳೂರು.

ಗುರುರಾಜ್ ಅ. ಮುಗಳಿ., ಎಲೆರಾಜೋಳದ ಮುರುಘೇಂದ್ರ ಸ್ವಾಮಿ; ಬದುಕು-ಬರಹ, ೨೦೦೪, ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಅಪ್ರಕಟಿತ ಎಂ.ಫಿಲ್ ಪ್ರಬಂಧ.

ಚಂದ್ರಶೇಖರ ಟಿ.ಆರ್., *ಮಹಿಳೆ ಆರ್ಥಿಕತೆ ಮತ್ತು ಅಭಿವೃದ್ಧಿ*, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ. ವಿದ್ಯಾರಣ್ಯ.

ಚಿದಾನಂದ ಮೂರ್ತಿ ಎಂ., *ಗ್ರಾಮೀಣ*, ೧೯೭೭, ಬಾಪ್ಕೋಲ್ಡ ಪ್ರಕಾಶನ, ಬೆಂಗಳೂರು.

ಚೆನ್ನಣ್ಣವಾಲೀಕಾರ., *ಸಮಗ್ರ ಜಾನಪದ ಸಂಪ್ರಬಂಧ ಸಂಪುಟ*, ದಲಿತ ಬಂಡಾಯ, ಸಾಹಿತ್ಯ ಪ್ರಕಾಶನ, ಸೇಡಂ.

ಚೆಲುವರಾಜು., *ದಕ್ಕಲಿಗರ ಸಂಸ್ಕೃತಿ* ೧೯೯೩, ಕರ್ನಾಟಕ ಸಾಹಿತ್ಯ ಆಕಾಡೆಮಿ, ಬೆಂಗಳೂರು.

ಜೋಗನ್ ಶಂಕರ., *ಗ್ರಾಮಸಮಾಜ*, ೧೯೯೧, ಜೀವ ಪ್ರಕಾಶನ, ಮೈಸೂರು.

ದೇವೆಂದ್ರಕುಮಾರ ಸಿ. ಹಕಾರಿ., *ಡೊಂಬರ ಸಂಸ್ಕೃತಿ*, ೧೯೯೦, ಕರ್ನಾಟಕ ಸಾಹಿತ್ಯ ಆಕಾಡೆಮಿ, ಬೆಂಗಳೂರು.

ದೊಡ್ಡಮನಿ ಲೋಕರಾಜ ಎ.ಕೆ., ಕರ್ನಾಟಕ ಸಿಂಧೋಳ್ಳು ಸಮುದಾಯದ ಸಮಾಜಶಾಸ್ತ್ರೀಯ ಅಧ್ಯಯನ, ೨೦೦೫, ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ.

ನಂಜಮ್ಮಣಿ ಎಂ., *ಭಾರತೀಯ ಸಾಮಾಜಿಕ ಸಂಸ್ಥೆಗಳು*, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

ನಾಗೇಗೌಡ ಎಚ್.ಎಲ್., ವೆರಿಯರ್ ಎಲ್ವಿನ್ ಗಿರಿಜನ ಪ್ರಪಂಚ, ೧೯೭೮, ಸಾಹಿತ್ಯ ಸಾಧನ ಪ್ರಕಾಶನ, ಬೆಂಗಳೂರು.

ನಾಯಕ ಡಿ.ಬಿ., *ಲಂಬಾಣಿ ಜನಪದ ಸಾಹಿತ್ಯ*, ೨೦೦೧, ಬಂಜಾರಾ ಪ್ರಕಾಶನ, ಗುಲ್ಬರ್ಗಾ.

ನಾರಾಯಣ ಎಂ., *ಗ್ರಾಮೀಣ ಮತ್ತು ನಗರ ಸಮಾಜಶಾಸ್ತ್ರ*, ೧೯೯೩, ಚೇತನ ಬುಕ್‌ಹೌಸ್, ಮೈಸೂರು.

ನಾರಾಯಣ ಕೆ.ವಿ., ಭಾಷೆ ಕನ್ನಡ ವಿಶ್ವವಿದ್ಯಾಲಯ ವಿಶ್ವಕೋಶ-೧, ೨೦೦೦, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

ಪವ್ಹಾರ ಬಿ.ಎನ್., ಬುಡಬುಡಕೆಯವರು : ಒಂದು ಅಧ್ಯಯನ, ೧೯೯೪, ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಒಪ್ಪಿಸಿದ ಪಿಎಚ್.ಡಿ. ಮಹಾಪ್ರಬಂಧ.

ಪ್ರಭಾಕರ್ ಎ.ಎಸ್., *ಬುಡಕಟ್ಟು ಬದುಕಿನ ಸ್ಥಿತ್ಯಂತರಗಳು*, ೨೦೦೦, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

ಪ್ರಹ್ಲಾದ ಬೆಟಗೇರಿ., *ಅಡವಿ ಚೆಂಚರ ಸಂಸ್ಕೃತಿ* ೧೯೯೩, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

ಪುರುಷೋತ್ತಮ ಬಿಳಿಮಲೆ., *ಕುಡುಕಟ್ಟು*, ೧೯೯೭, ಆನಂದಕಂದ ಗ್ರಂಥಮಾಲೆ, ಮಲ್ಲಾಡಿಹಳ್ಳಿ.

ಬಸವರಾಜ ಎಸ್. ಹಿರೇಮಠ., ಗುಲ್ಬರ್ಗಾ ಜಿಲ್ಲೆಯ ಬೈಲುಪತ್ತಾರರ ಸಮಾಜಶಾಸ್ತ್ರೀಯ ಅಧ್ಯಯನ, ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಅಪ್ರಕಟಿತ ಎಂ.ಫಿಲ್ ಪ್ರಬಂಧ, ೨೦೦೩.

ಬರಗೂರು ರಾಮಚಂದ್ರಪ್ಪ., *ಸಂಸ್ಕೃತಿ ಮತ್ತು ಸೃಜನಶೀಲತೆ* ೧೯೯೧, ಜನಸಿಂಹ ಪ್ರಕಾಶನ, ಬೆಂಗಳೂರು.

ಬೈರಪ್ಪ ಕೆ., *ಸಮಾಜಶಾಸ್ತ್ರದ ಮೂಲತತ್ವಗಳು*, ೧೯೯೧, ಸುರೇಶ ಪಬ್ಲಿಕೇಷನ್, ಗದಗ

ಭೆರಪ್ಪ ಕೆ., *ಭಾರತದಲ್ಲಿ ಸಾಮಾಜಿಕ ಸಮಸ್ಯೆಗಳು*, ೧೯೯೧, ಸುರೇಶ ಪಬ್ಲಿಕೇಷನ್ಸ್, ಗದಗ.

ಭೆರಪ್ಪ ಕೆ., *ಭಾರತದಲ್ಲಿ ಸಾಮಾಜಿಕ ಸಮಸ್ಯೆಗಳು*, ೧೯೯೨, ಸುರೇಶ ಪಬ್ಲಿಕೇಷನ್ಸ್, ಗುಲ್ಬರ್ಗಾ.

ಬೋರಲಿಂಗಯ್ಯ ಹಿ.ಚಿ., *ಬುಡಕಟ್ಟು ದೈವಾರಾಧನೆ*, ೨೦೦೦, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ. ವಿದ್ಯಾರಣ್ಯ.

ಬೋರಲಿಂಗಯ್ಯ ಹಿ.ಚಿ., *ಕಾಡುಕಾಂಕ್ರೀಟ್ ಮತ್ತು ಜನಪದ*, ೧೯೯೫, ಅಕ್ಷರ ಪ್ರಕಾಶನ, ಬೆಂಗಳೂರು.

ಬೋರಲಿಂಗಯ್ಯ ಹಿ.ಚಿ., (ಸಂ) *ಕರ್ನಾಟಕ ಜನಪದ ಕಲೆಗಳ ಕೋಶ*, ೧೯೯೬, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ. ವಿದ್ಯಾರಣ್ಯ.

ಭಾಸ್ಕರ್ ಟಿ.ಎಂ., ಸುಡುಗಾಡು ಸಿದ್ಧರು: ಒಂದು ಸಾಂಸ್ಕೃತಿಕ ಅಧ್ಯಯನ, ೨೦೦೦, ಮರುಗ ಪ್ರಕಾಶನ, ಗುಲ್ಬರ್ಗಾ.

ಮಂಜುನಾಥ ಬೇವಿನ ಕಟ್ಟಿ, *ಹುಲಿಗೆಮ್ಮ*, ೧೯೯೪, ತೇಜಸ್ವಿ ಪ್ರಕಾಶನ, ಹೂವಿನಹಡಗಲಿ, ಬಳ್ಳಾರಿ

ಮಲ್ಲಿನಾಥಯ್ಯ ಡಿ.ಎಚ್., ಸಾಂಸ್ಕೃತಿಕ ಮಾನವಶಾಸ್ತ್ರ, ೧೯೭೪, ಕನ್ನಡ ಅಧ್ಯಯನ ಸಂಸ್ಥೆ ಮೈಸೂರು ವಿಶ್ವವಿದ್ಯಾಲಯ, ಮೈಸೂರು.

ಮೈತ್ರಿ ಕೆ.ಎಂ., *ಬುಡಕಟ್ಟು ಕುಲಕಸುಬುಗಳು*, ೨೦೦೨, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

ಮೈತ್ರಿ ಕೆ.ಎಂ., ಬೀದರ ಜಿಲ್ಲೆಯ ಗೊಂಡ ಆದಿವಾಸಿ ಸಮುದಾಯ: ಒಂದು ಸಮಾಜಶಾಸ್ತ್ರೀಯ ಅಧ್ಯಯನ, ೧೯೯೪, ಮೈಸೂರು ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಅಪ್ರಕಟಿತ ಪಿಎಚ್.ಡಿ. ಪ್ರಬಂಧ.

ಮೈಲಾರಪ್ಪ ಬಿ.ಸಿ., ಗ್ರಾಮೀಣ ಬದುಕು ಮತ್ತು ಸಾಮಾಜಿಕ ಚಳುವಳಿ, ೧೯೯೮, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

ರಾಜಶೇಖರ ಎಸ್., *ಸಾಮಾಜಿಕ ಸಂಶೋಧನೆ*, ೧೯೯೮, ಭ್ರಮರ ಪ್ರಕಾಶನ, ಶಿವಮೊಗ್ಗ.

ರೇಣುಕಾಚಾರ್ಯ ಸಿ.ಕೆ., *ಸಾಮಾಜಿಕ ಸಂಖ್ಯಾಶಾಸ್ತ್ರ*, ಚೇತನ ಬುಕ್‌ಹೌಸ್, ಮೈಸೂರು.

ಲಕ್ಕಪ್ಪಗೌಡ ಎಚ್.ಜೆ., (ಪ್ರ.ಸಂ). *ಕರ್ನಾಟಕ ಬುಡಕಟ್ಟುಗಳು ಸಂಪುಟ ೧-೨,* ೨೦೦೦, ಕರ್ನಾಟಕ ಜಾನಪದ ಯಕ್ಷಗಾನ ಅಕಾಡೆಮಿ, ಬೆಂಗಳೂರು

ಲಕ್ಷ್ಮಣ್ ತೆಲಗಾವಿ., *ಹಿಂದುಳಿದ ವರ್ಗಗಳು* ಮತ್ತು *ದಲಿತರ ಚಳುವಳಿಗಳು* ಸಂಪುಟ-೫, ೧೯೯೯, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

ಲೀಬಾನ್ ಎಚ್.ಜಿ. (ಮೂಲ) ಡಿ.ಎಸ್. ಜಯಪ್ಪಗೌಡ (ಅನು) ಮಾನವ ಭೂಗೋಳಶಾಸ್ತ್ರ, ೧೯೭೭, ಮೈಸೂರು ಕನ್ನಡ ಅಧ್ಯಯನ ಸಂಸ್ಥೆ ಮೈಸೂರು ವಿಶ್ವವಿದ್ಯಾಲಯ, ಮೈಸೂರು.

ವೀವೇಕ ರೈ ಬಿ.ಎ., *ಕರ್ನಾಟಕ ಜನಪದ ನಂಬಿಕೆಗಳು,* ೧೯೮೧, ಪ್ರಸಾರಾಂಗ ಬೆಂಗಳೂರು ವಿಶ್ವವಿದ್ಯಾಲಯ. ಬೆಂಗಳೂರು.

ಶಂಕರನಾರಾಯಣ ತೀ.ನಂ. *ಕಾಡುಗೊಲ್ಲರ ಸಂಪ್ರದಾಯಗಳು* ಮತ್ತು *ನಂಬಿಕೆಗಳು,* ೧೯೮೨, ಪ್ರಸಾರಾಂಗ ಮೈಸೂರು ವಿಶ್ವವಿದ್ಯಾಲಯ, ಮೈಸೂರು.

ಶಂಕರರಾವ್ ಚ.ನ., *ಭಾರತೀಯ ಸಮಾಜ,* ೧೯೯೧, ಜೈಭಾರತ ಪ್ರಕಾಶನ, ಮಂಗಳೂರು.

ಶಂಕರರಾವ್ ಚ.ನ., *ಸಾಮಾಜಿಕ ಸಂಶೋಧನೆಯ ಕೈಪಿಡಿ,* ೧೯೯೭, ಜೈ ಭಾರತ ಪ್ರಕಾಶನ, ಬೆಂಗಳೂರು.

ಷೇಮಾಲಿಂಗ ರಾನೂರ್., *ಯೋಜನೆ* ಮತ್ತು *ಬಡತನ ನಿವಾರಣೆ,* ೧೯೯೯, ಪ್ರಸಾರಾಂಗ ಗುಲ್ಬರ್ಗಾ ವಿಶ್ವವಿದ್ಯಾಲಯ, ಗುಲ್ಬರ್ಗಾ.

ಸಣ್ಣರಾಮ., ಲಂಬಾಣಿ ಸಂಸ್ಕೃತಿ, ೧೯೯೯, ಕನ್ನಡ ಭಾರತಿ ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.

ಸರಗಣಾಚಾರಿ ಎಸ್.ಎಸ್., ಭಾರತೀಯ ಸಮಾಜದ ಅಧ್ಯಯನ, ೧೯೯೯, ಜಯಶ್ರೀ ಪ್ರಕಾಶನ, ಬಾಗಲಕೋಟೆ.

ಸಿದ್ಧಲಿಂಗಯ್ಯ ಟಿ., *ಗ್ರಾಮದೇವತೆಗಳು,* ೧೯೯೭, ಮೂಲಭಾರತಿ ಪ್ರಕಾಶನ, ಬೆಂಗಳೂರು.

ಹಿರೇಮಠ ಎಸ್.ಎಸ್., *ಜಾತ್ರೆಗಳು,* ೧೯೯೩, ಸಮತಾ ಪ್ರಕಾಶನ, ಹೊಸಪೇಟೆ.

ಹಿರೇಮಠ ಎಸ್.ಎಸ್., ದಲಿತ ಸಂಸ್ಕೃತಿ, ೨೦೦೧, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

ನಿಘಂಟು ಮತ್ತು ಗ್ಯಾಸೆಟಿಯರ್

ಕರ್ನಾಟಕ ರಾಜ್ಯ ಗ್ಯಾಸೆಟಿಯರ್, ಭಾಗ-೧, ೧೯೮೫, ಕರ್ನಾಟಕ ರಾಜ್ಯ ಸರ್ಕಾರ ಪ್ರಕಟಣೆ

ಕರ್ನಾಟಕ ರಾಜ್ಯ ಗ್ಯಾಸೆಟಿಯರ್, ಭಾಗ-೨, ೧೯೮೬.

ಕರ್ನಾಟಕ ರಾಜ್ಯ ಗ್ಯಾಸೆಟಿಯರ್, ಭಾಗ-೩, ೧೯೮೬.

ಭಾರತ ಗ್ಯಾಸೆಟಿಯರ್, ಕರ್ನಾಟಕ ರಾಜ್ಯ ಗ್ಯಾಸೆಟಿಯರ್ ಭಾಗ-೨, ೧೯೯೮.

ಕನ್ನಡ ಜಾನಪದ ವಿಶ್ವಕೋಶ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ

ಗುಲ್ಬರ್ಗಾ ಜಿಲ್ಲಾ ಗ್ಯೆಸೆಟಿಯರ್, ಸಂ ಎಂ.ಬಿ. ಪಾಟೀಲ್

ಕನ್ನಡ ಕನ್ನಡ ನಿಘಂಟು ಸಂಪುಟ ೩, ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು.

ಮರಾಠಿ ಕನ್ನಡ ಶಬ್ದಕೋಶ, ಸಂ. ಗುರುನಾಯ ದಿವಾಕರ್, ಮಹಾರಾಷ್ಟ್ರ ರಾಜ್ಯ ಸಂಸ್ಕೃತಿ ಮಂಡಳಿ, ೧೯೭೩

ಅಚ್ಚಗನ್ನಡ ನುಡಿಕೋಶ, ಪುಸ್ತಕ ಪ್ರಕಾಶನ ಮೈಸೂರು, ೧೯೯೩.

ಗೇಸೆಟಿಯರ್ ಮುಂಬಯಿ ಇಲಾಖೆಗೆ ಸೇರಿದ ಕರ್ನಾಟಕ ಭಾಗದ್ದು ವೆಂಕಟರಂಗಿ ಕಟ್ಟೆ ಸಂ. ಧಾರವಾಡ, ಬೆಳಗಾಂ, ವಿಜಾಪುರ, ಕಾನಾಡಾ, ೧೯೮೪.

Reference

Ananthakrishana Iyer L.K., *The Mysore Tribes Castes*, 1930, Mysore University, Mysore Vol.I, P.380

Crook W., The Tribes and Castes of the North Western India, Vol-16, 1987, Cosmo Publications, Delhi.

Dipakan Gupta., Social Stratification, 1992, Oxford University Pres, Bombay

Elwin Verrier., *The Religion of an Indian Tribes*, 1981, Oxford University press Bombay.

Enthoven R.E., *The Tribes and Castes of Bombay,* Vol-II, 1992, Asain Educational services, New Delhi.

Ghurye G.S., Karnataka Backward Classess commission Report, 1976, Govt. Press, Bangalore.

Hawanur L.G., *Karnataka Backward Classes Commission Report*, 1975, Government Press, Bangalore.

Jan Brouwer., The Maker's of the World, 1995, Oxford University Press, Delhi.

Madan G.R., Indian Social Problems, Vol-I, Allied Publishars, Bangalore.

Misra P.K., Malotra K.C., Nomadas in India, 1982, Anthropological Survey of India, Calcutta.

Nirmalkumar Bose., *Tribal Life in India*, 1971, National Book Trust, New Delhi

Singh K.S., *India's Communities*, 1998, A.G. Vol-IV, Oxford University Press, New Delhi.

Sherring M.A., The Tribals and Castes of Rajasthan, 1987, Cosmo Publication, Delhi.

Srinivas M.N., *Social Change In Modern India*, 1966, Allied Publications, Bombay.

Thurston., Caste and Tribes of Southern India, 1909, Asian Educational services, New Delhi.

Thurstan and Rangachar K., *Caste and Tribes of Southern*, Vol. IV, Asian Education Services, New Delhi.

Willam J., *The Family Foundation of Modern Sociology*, 1965, Series Prentice hall of India Pvt. Ltd, New Delhi.

ಪ್ರಮುಖ ಮಾಹಿತಿದಾರರು

ಕ್ರ.ಸಂ.	ಹೆಸರು	ವಯಸ್ಸು	ವೃತ್ತಿ	ಊರು / ನೆಲೆ	ಸಂದರ್ಶನ ದಿನಾಂಕ
೧	ಸದಾಶಿವ ತಂದೆ ರಾಮಜೀ	೬೦	ಕಮ್ಮಾರಿಕೆ	ಮುಸ್ಲಿಂಗಲ್ಲಿ, ಅಫಜಲ್‌ಪುರ	೨೭.೭.೨೦೦೪
೨	ಮೋಹನ್ ತಂದೆ ತುಳಸಿರಾಂ	೩೦	ವೆಲ್ಡಿಂಗ್ ವರ್ಕ್	ಬಸವೇಶ್ವರ ಚೌಕ, ಗುಲ್ಬರ್ಗಾ ರಸ್ತೆ	೨೭.೭.೨೦೦೪
೩	ಶಾಂತಾಬಾಯಿ ಗಂಡ ಗೋವಿಂದರಾವ್	೭೦	ಗೃಹಿಣಿ	ಹನುಮನ ಮಂದಿರದ ಎದುರಿಗೆ, ಅಥನೂರು	೧೬.೭.೨೦೦೪
೪	ಶಿವರಾಮ ತಂದೆ ಭೀಮಶಾ	೩೬	ವೆಲ್ಡಿಂಗ್ ವರ್ಕ್	ಚೌಡಪೂರ,	೧೮.೭.೨೦೦೪
೫	ಗೋದಾಬಾಯಿ ಗಂಡ ಚಂದ್ರಕಾಂತ	೩೦	ಕೃಷಿಕೂಲಿ	ದೇವಾಲಗಾಣಗಪೂರ, ಸಂಗಮ ರಸ್ತೆ	೧೮.೭.೨೦೦೪
೬	ಸುನಿಲ್ ತಂದೆ ಅಂಬಾಜಿ	೧೩	ವಿದ್ಯಾರ್ಥಿ	ಸ್ಟೇಷನ್ ಗಾಣಗಪೂರ	೧೯.೭.೨೦೦೪
೭	ದಾಧರಾವ್ ತಂದೆ ಕೃಷ್ಣಪ್ಪ	೬೦	ಪೂಜಾರಿ	ಅಂಬಾಭಾವಾನಿ ಮಂದಿರ, ಆಳಂದ	೨೮.೭.೨೦೦೪
೮	ಕವಿತಾ ತಂದೆ ಆಶೋಕ	೧೦	ವಿದ್ಯಾರ್ಥಿನಿ	ಅಂಭಾ ಮಂದಿರ ಹತ್ತಿರ, ಬಸ್‌ನಿಲ್ದಾಣ ರಸ್ತೆ	೨೮.೭.೨೦೦೪
೯	ಕಸ್ತೂರಿಬಾಯಿ ಗಂಡ ದಿಗಂಬರ್	೪೦	ಕೃಷಿ ಕೂಲಿ	ಅಂಭಾ ಮಂದಿರ ಹತ್ತಿರ, ಬಸ್‌ನಿಲ್ದಾಣ ರಸ್ತೆ	೨೮.೭.೨೦೦೪
೧೦	ಕಲಾವತಿ ಗಂಡ ಅಂಬಾಜಿ	೫೫	ಕೃಷಿ ಕೂಲಿ	ಅಂಭಾ ಮಂದಿರ ಹತ್ತಿರ, ಬಸ್‌ನಿಲ್ದಾಣ ರಸ್ತೆ	೨೮.೭.೨೦೦೪
೧೧	ಶಂಕರ ತಂದೆ ಅರ್ಜುನ	೩೬	ಕಮ್ಮಾರಿಕೆ	ನಿಂಬರ್ಗಾ	೧೯.೭.೨೦೦೪
೧೨	ಪಾರುಬಾಯಿ ಗಂಡ ದೇವಾ	೨೪	ಕೂಲಿ	ತಡಕಲ	೨೯.೭.೨೦೦೪
೧೩	ರಾಮಚಂದ್ರ ತಂದೆ ಅಂಬಾಜಿ	೬೦	ಕಮ್ಮಾರಿಕೆ	ಭೋವಿಗಲಿ, ನಾಗಾವಿ ಚೌಕ್, ಚಿತ್ತಾಪೂರ	೧೫.೭.೨೦೦೪
೧೪	ಆಶೋಕ ತಂದೆ ಶಿವಾಜಿ	೪೦	ಕಮ್ಮಾರಿಕೆ	ಜಾಫರ್‌ಗಂಜಾ, ಚಿತ್ತಾಪುರ	೧೫.೭.೨೦೦೪

ಕ್ರ.ಸಂ.	ಹೆಸರು	ವಯಸ್ಸು	ವೃತ್ತಿ	ಊರು / ನೆಲೆ	ಸಂದರ್ಶನ ದಿನಾಂಕ
೧೫	ಪರಶುರಾಮ ತಂದೆ ಮಧುರಾವ್	೧೮	ವಿದ್ಯಾರ್ಥಿ	ಆಸರ್‌ಗಲ್ಲಿ, ಒಂಟಿಕಮಾನ್ ರಸ್ತೆ	೧೫.೭.೨೦೦೪
೧೬	ವಿಶ್ವನಾಥ ತಂದೆ ನಾಮದೇವ್	೫೩	ಕಮ್ಮಾರಿಕೆ	ಬಂಕಾಪೂರ ಗ್ರಾಮ	೧೪.೭.೨೦೦೪
೧೭	ಕಲಾವತಿ ಗಂಡ ಪಂಢರಿ	೪೦	ಕೂಲಿ	ಬಾಳ್ಗೋಡಿ ಗ್ರಾಮ	೧೪.೭.೨೦೦೪
೧೮	ಮೋಹನ್ ತಂದೆ ಗಂಗಾರಾಮ್	೨೮	ಡ್ರೈವರ್	ದಿಗ್ಗಾಂವ್ ಗ್ರಾಮ	೧೫.೭.೨೦೦೪
೧೯	ಸುಶ್ಮಾ ಗಂಡ ಮನೋಹರ	೩೮	ಗೃಹಿಣಿ	ದಂಡೋತಿ ಗ್ರಾಮ, ಚಿತ್ತಾಪೂರ	೨೬.೧೦.೨೦೦೬
೨೦	ಮಾರುತಿ ತಂದೆ ಬಿಕೋಜಿ	೪೦	ಕಮ್ಮಾರಿಕೆ	ಗುಂಡಗಾತ್ರಿ	೨೭.೧೦.೨೦೦೬
೨೧	ಸೋನಾಬಾಯಿ ಗಂಡ ಅಂಬಾಜೀ	೭೦	ಗೃಹಿಣಿ	ಜೆ.ಜೆ. ತಾಂಡ	೧೬.೮.೨೦೦೫
೨೨	ಹಿರಾಲಾಲ್ ತಂದೆ ಶಂಕರರಾವ್	೨೬	ಕಮ್ಮಾರಿಕೆ	ಕಾಳಗಿ, ಬಸ್‌ನಿಲ್ದಾಣದ ಹತ್ತಿರ	೧೫.೮.೨೦೦೫
೨೩	ಭೀಮರಾವ್ ತಂದೆ ಶಂಕರರಾವ್	೬೦	ಕಮ್ಮಾರಿಕೆ	ಕೊಡದೂರ್, ಮಹಿಬೂಬ್‌ಸುಭಾನಿದರ್ಗಾ ಹತ್ತಿರ,	೧೫.೮.೨೦೦೫
೨೪	ಜನಕಾಬಾಯಿ ಗಂಡ ಭೀಮಶೆನರಾವ್	೫೦	ಕೂಲಿ	ಮಲಘಾಣ್	೧೬.೮.೨೦೦೫
೨೫	ಭಾರತ ತಂದೆ ಮಾರುತಿ	೨೦	ವಿದ್ಯಾರ್ಥಿ	ಮಾಲಗತ್ತಿ	೧೬.೮.೨೦೦೫
೨೬	ಗೋವಿಂದ ತಂದೆ ಲಕ್ಷ್ಮಣ	೬೦	ಕೃಷಿ ಸಲಕರಣೆ ಮಾರಾಟ	ಶಾಹಾಬಾದ್	೨೭.೭.೨೦೦೬
೨೭	ದೇವದಾಸ್ ತಂದೆ ಸಂಪತ್	೪೩	ಕಮ್ಮಾರಿಕೆ	ಶಾಹಾಬಾದ್, ಘಿಸಾಡಿ ಗಲ್ಲಿ	೨೭.೭.೨೦೦೬
೨೮	ಸರೋಜಾಬಾಯಿ ಗಂಡ ದತ್ತು	೪೦	ಕೂಲಿ	ಘಾಸಾಡಿ ಗಲ್ಲಿ, ಶಾಸ್ತ್ರೀಚೌಕ್,	೨೭.೭.೨೦೦೬
೨೯	ರೇಣುಕಾ ತಂದೆ ರಮೇಶ್	೧೮	ಕೂಲಿ	ತರ್ಕಸ್‌ಪೇಟೆ	೧೫.೭.೨೦೦೪
೩೦	ರಾಣಾಜೀ ತಂದೆ ಗಂಗರಾಮ್	೭೦	ಕಮ್ಮಾರಿಕೆ	ತೆಂಗಳಿ	೧೦.೭.೨೦೦೪

ಕ್ರ.ಸಂ.	ಹೆಸರು	ವಯಸ್ಸು	ವೃತ್ತಿ	ಊರು / ನೆಲೆ	ಸಂದರ್ಶನ ದಿನಾಂಕ
೩೧	ರತ್ನಬಾಯಿ ಗಂಡ ಬಾಬು	೬೦	ಕೂಲಿ	ಕಮಲಿಬಾಬಾ ದರ್ಗಾ ಹತ್ತಿರ, ವಾಡಿ	೧೨.೭.೨೦೦೪
೩೨	ದೇವಪ್ಪ ತಂದೆ ರಂಗಪ್ಪ	೫೨	ಕಮ್ಮಾರಿಕೆ	ಬೂರಗಪಲ್ಲಿ, ಚಿಂಚೋಳಿ ತಾ.	೨೨.೭.೨೦೦೪
೩೩	ರಮೇಶ ತಂದೆ ಕಾಶ್ಯಪ್ಪಾ	೩೨	ಕಮ್ಮಾರಿಕೆ	ಚಂದ್ರಂಪಳ್ಳಿ	೨೧.೭.೨೦೦೪
೩೪	ಅಂಬೋಜಿ ತಂದೆ ರಾಮುಲು	೪೦	ಕಮ್ಮಾರಿಕೆ	ಕೊಂಚವಾರಂ	೨೨.೭.೨೦೦೪
೩೫	ಶಾರದಾಬಾಯಿ ಗಂಡ ಮೋಗಲಪ್ಪಾ	೩೨	ಕೂಲಿ	ಸುಲೇಪೇಟೆ	೨೧.೭.೨೦೦೪
೩೬	ರತನ್‌ಜೀ ತಂದೆ ಮೋಗಲಾಜೀ	೬೫	ಕಮ್ಮಾರಿಕೆ	ಜಟ್ಟೂರು	೨೧.೭.೨೦೦೪
೩೭	ಸಿದ್ದೋಜೀ ತಂದೆ ರಾಮಚಂದ್ರ	೪೫	ಕಮ್ಮಾರಿಕೆ	ನಿಡಗುಂದಾ	೨೧.೭.೨೦೦೪
೩೮	ಶಂಕರ ತಂದೆ ದಶರಥ	೧೬	ಕಮ್ಮಾರಿಕೆ	ಶ್ಯಾದಿಪೂರ	೨೨.೭.೨೦೦೪
೩೯	ಕ್ರಿಷ್ಣಪ್ಪಾ ತಂದೆ ತುಳಸಿರಾಮ್	೪೩	ಸಮಾಜಸೇವೆ	ತುಳಸಿರಾಂ ವೆಲ್ಡಿಂಗ್‌ವರ್ಕ್, ಗಂಜರೋಡ, ಗುಲ್ಬರ್ಗಾ	೧೧.೧೧.೨೦೦೬
೪೦	ನಾರಾಯಣರಾವ್ ತಂದೆ ಶಿವರಾಮ	೫೦	ಸಮಾಜ ಸೇವೆ	ಗಾಂಜರೋಡ್, ಗುಲ್ಬರ್ಗಾ	೧೧.೧೧.೨೦೦೬
೪೧	ದಶರಥ ತಂದೆ ರಾಮಚಂದ್ರ	೫೫	ಕಮ್ಮಾರಿಕೆ	ಗಾಜಿಪೂರ, ಗುಲ್ಬರ್ಗಾ	೧೧.೧೧.೨೦೦೬
೪೨	ಬಾಬುರಾವ್ ತಂದೆ ನಾಗುರಾವ್	೬೦	ಕಮ್ಮಾರಿಕೆ	ಜೋಪಡ್‌ಪಟ್ಟಿಗಳು, ಎಚ್.ಪಿ.ಓ. ಕಛೇರಿ	೧೨.೧೧.೨೦೦೬
೪೩	ಚತ್ತುರಾಬಾಯಿ	೪೫	ಕಮ್ಮಾರಿಕೆ	ಜೋಪಡ್‌ಪಟ್ಟಿಗಳು, ಎಚ್.ಪಿ.ಓ. ಕಛೇರಿ	೧೨.೧೧.೨೦೦೬
೪೪	ಸಂಗೀತಾ ಗಂಡ ಮಧು	೨೨	ಗೃಹಿಣಿ	ರಾಜಾಪೂರ ಕಾಲೋನಿ, ಗುಲ್ಬರ್ಗಾ	೧೨.೧೧.೨೦೦೬
೪೫	ಸುಶೀಲಾ ಬಾಯಿ ಗಂಡ ಅಂಬಾಜೀ	೫೦	ಕೂಲಿ	ಹೊನ್ನಕಿರಣಗಿ	೧೩.೧೧.೨೦೦೬
೪೬	ನೀಲಾವತಿ ಗಂಡ ಗೋಪಾಲ	೩೦	ಕೂಲಿ	ಔರಾದ್ ಬಿ.	೧೩.೧೧.೨೦೦೬

ಕ್ರ.ಸಂ.	ಹೆಸರು	ವಯಸ್ಸು	ವೃತ್ತಿ	ಊರು / ನೆಲೆ	ಸಂದರ್ಶನ ದಿನಾಂಕ
೪೭	ಭಾರತಿ ಗಂಡ ಲಕ್ಷ್ಮಣರಾವ್	೪೦	ಅಂಗಡಿ	ನೇತಾಜಿ ನಗರ, ಗಂಜಾರೋಡ್, ಗುಲ್ಬರ್ಗಾ	೧೪.೧೧.೨೦೦೬
೪೮	ರಮೇಶ ತಂದೆ ತುಳಸಿರಾಂ	೪೦	ಸರ್ಕಾರಿ ನೌಕರ	ಅಗ್ನಿಶಾಮಕಠಾಣೆ, ಜೇವರ್ಗಿ	೩೦.೩.೨೦೦೫
೪೯	ಶ್ರೀಮಂತ ತಂದೆ ಧರ್ಮಣ್ಣಾ	೩೦	ಕಮ್ಮಾರಿಕೆ	ಕೆ.ಇ.ಬಿ. ಕಛೇರಿ ಹತ್ತಿರ, ಜೇವರ್ಗಿ	೩೦.೩.೨೦೦೫
೫೦	ಲಕ್ಷ್ಮೀಬಾಯಿ ಗಂಡ ದ್ಯಾವಪ್ಪಾ	೬೫	ಗೃಹಿಣಿ	ಜೋಪಡಿಪಟ್ಟಿ, ಜೇವರ್ಗಿ	೩೦.೩.೨೦೦೫
೫೧	ಅನುರಾಧ ತಂದೆ ಅರ್ಜುನ	೧೬	ಗೃಹಿಣಿ	ಆಂದೋಲಾ	೦೨.೧೧.೨೦೦೫
೫೨	ಬಾಲಕೃಷ್ಣ ತಂದೆ ಮಲ್ಲಪ್ಪಾ	೫೦	ಕಮ್ಮಾರಿಕೆ	ಇಜೇರಿ	೦೨.೧೧.೨೦೦೫
೫೩	ಗಂಗಾರಾಮ್ ತಂದೆ ಅರ್ಜುನ.	೪೦	ಕಮ್ಮಾರಿಕೆ	ಗಂವ್ಹಾರ್	೦೨.೧೧.೨೦೦೫
೫೪	ಅಂಬೋಜಿ ತಂದೆ ಕಾಶಿನಾಥ	೬೫	ಕಮ್ಮಾರಿಕೆ	ನರಬೋಳ್	೦೨.೧೧.೨೦೦೫
೫೫	ಅಂಕುಶ ತಂದೆ ಭೀಮರಾವ್	೬೫	ಕಮ್ಮಾರಿಕೆ	ತರಕಾರಿ ಮಾರ್ಕೆಟ್ ಹತ್ತಿರ, ಶಾಹಪೂರ	೦೨.೦೨.೨೦೦೭
೫೬	ಬಹಿನಾಬಾಯಿ ಗಂಡ ಬಾಬುರಾವ್	೩೬	ಕೂಲಿ	ತರಕಾರಿ ಮಾರ್ಕೆಟ್ ಹತ್ತಿರ, ಶಾಹಪೂರ	೦೨.೦೨.೨೦೦೭
೫೭	ಮುರಳಿ ತಂದೆ ಮಾಧವ್	೩೬	ಕಮ್ಮಾರಿಕೆ	ಕ್ಷೇತ್ರಸಂಪನ್ಮೂಲ ಕಛೇರಿ ಹತ್ತಿರ, ಶಾಹಾಪೂರ	೦೨.೦೨.೨೦೦೭
೫೮	ರಮೇಶ ತಂದೆ ಉತ್ತಮ್	೪೦	ಕಮ್ಮಾರಿಕೆ	ಕ್ಷೇತ್ರಸಂಪನ್ಮೂಲ ಕಛೇರಿ ಹತ್ತಿರ, ಶಾಹಾಪೂರ	೦೨.೦೨.೨೦೦೭
೫೯	ಗಜಾಬಾಯಿ ಗಂಡ ಮಾರುತಿ	೩೨	ಕಮ್ಮಾರಿಕೆ	ಕ್ಷೇತ್ರಸಂಪನ್ಮೂಲ ಕಛೇರಿ ಹತ್ತಿರ, ಶಾಹಾಪೂರ	೦೨.೦೨.೨೦೦೭
೬೦	ಸುಂದರಬಾಯಿ ಗಂಡ ರಾಮಲಾಲ್	೬೦	ಗೃಹಿಣಿ	ಸಿರವಾಳ ಗ್ರಾಮ, ಶಾಹಾಪೂರ ತಾ.	೦೩.೦೨.೨೦೦೭
೬೧	ಮಲ್ಹಾರಿ ತಂದೆ ದಿಗಂಬರ್	೪೫	ಕಮ್ಮಾರಿಕೆ	ಕೆ.ಇ.ಬಿ. ಓಣಿ, ಸೇಡಂ	೦೯.೦೭.೨೦೦೭
೬೨	ಶ್ರೀನಾಥ ತಂದೆ ಜಗನ್ನಾಥರಾವ್	೨೫	ಆಟೋಚಾಲಕ	ಬಸವಚಿತ್ರಮಂದಿರ ಹತ್ತಿರ, ಸೇಡಂ	೦೯.೦೭.೨೦೦೪

ಕ್ರ.ಸಂ.	ಹೆಸರು	ವಯಸ್ಸು	ವೃತ್ತಿ	ಊರು / ನೆಲೆ	ಸಂದರ್ಶನ ದಿನಾಂಕ
೬೩	ಶಾರದಾಬಾಯಿ ಗಂಡ ಅಂಬೋಜಿ	೪೦	ಕೂಲಿ	ಬಾಲಾಜಿ ಚಿತ್ರಮಂದಿರ ಹತ್ತಿರ, ಸೇಡಂ	೦೯.೦೭.೨೦೦೪
೬೪	ದ್ರೌಪದಿ ಗಂಡ ವಸಂತ	೪೫	ಗೃಹಿಣಿ	ಹನುಮನಹಳ್ಳಿ, ಸೇಡಂ ತಾ.	೧೧.೦೭.೨೦೦೪
೬೫	ಶ್ಯಾಮರಾವ್ ತಂದೆ ಶಿವಪ್ಪ	೫೫	ಕಮ್ಮಾರಿಕೆ	ಹಂದರಕಿ ಗ್ರಾಮ ಸೇಡಂ ತಾ.	೧೧.೦೭.೨೦೦೪
೬೬	ಸದಾಶಿವ ತಂದೆ ದತ್ತು	೪೫	ಕಮ್ಮಾರಿಕೆ	ಕಲಿಕಂಬಾ ಗ್ರಾಮ	೧೧.೦೭.೨೦೦೪
೬೭	ಲಕ್ಷ್ಮಣ ತಂದೆ ರಾಜಾರಾಮ	೩೦	ಕಮ್ಮಾರಿಕೆ	ಮಳಖೇಡ್	೧೧.೦೭.೨೦೦೪
೬೮	ಪುಷ್ಪಲತಾ ಗಂಡ ನಾಗೇಂದ್ರ	೩೬	ಅಂಗನವಾಡಿ ಕಾರ್ಯಕರ್ತೆ	ಮುಧೋಳು	೨೦.೭.೨೦೦೪
೬೯	ಸುಭಾಷ್ ತಂದೆ ಕಾಶಿನಾಥ	೨೪	ಕಮ್ಮಾರಿಕ	ರಂಜೇನಾಳ	೨೦.೦೭.೨೦೦೪
೭೦	ಸಂತೋಷ್ ತಂದೆ ಸಂಗ್ರಾಮ	೪೦	ಕಮ್ಮಾರಿಕೆ	ಗಂಜ್ ಫಸ್ಟ್‌ಗೇಟ್, ಯಾದಗಿರಿ	೦೫.೦೭.೨೦೦೪
೭೧	ಅಶೋಕ ತಂದೆ ರಾಮಣ್ಣ	೪೦	ಕಮ್ಮಾರಿಕೆ	ಗಂಜ್‌ರಸ್ತೆ, ಯಾದಗಿರಿ	೦೫.೦೭.೨೦೦೪
೭೨	ಶಾಂತಬಾಯಿ ಗಂಡ ಅಂಬಾದಾಸ್	೪೨	ಗೃಹಿಣಿ	ಮೈಲಾಪೂರ ಗ್ರಾಮ	೦೬.೦೭.೨೦೦೪

ವಿದ್ಯಾರಣ್ಯ - 583 276.

ಪ್ರಶ್ನಾವಳಿ

ಸಮಾಜಿಕ ಅಧ್ಯಯನ

I. ಸಾಮಾನ್ಯ ಮಾಹಿತಿ

ಎ) ಸಮೀಕ್ಷೆ ದಿನಾಂಕ :
ಬಿ) ಬುಡಕಟ್ಟು :
ಸಿ) ಮಾತೃ ಭಾಷೆ :
ಡಿ) ಮನೆದೇವರು :
ಇ) ಗೋತ್ರ/ಬೆಡಗು/ಬಳಿ :
ಎಫ್) ಕುಲಚಿಹ್ನೆ :

ಜಿ) ಮನೆತನದ ಹೆಸರು :
ಎಚ್) ಮನೆ ಸಂಖ್ಯೆ :
ಐ) ವಾಸಸ್ಥಾನ :
ಜೆ) ವಾರ್ಡ್ :
ಕೆ) ಪಂಚಾಯತಿ :
ಎಲ್) ತಾಲೂಕು :
ಎಂ) ಜಿಲ್ಲೆ :

ಎನ್) ಭೂಹಿಡುವಳಿ (ಎಕರೆಗಳಲ್ಲಿ)
1) ಒಣ :
2) ನೀರಾವರಿ :
ಒ) ನಿವೇಶನ ಮತ್ತು ಮನೆ ಇಲ್ಲ
ಪಿ) ನಿವೇಶನ ಇದೆ, ಮನೆ ಇಲ್ಲ

II. ವೈಯುಕ್ತಿಕ ಮಾಹಿತಿ

ಕ್ರ.ಸಂ	ಕುಟುಂಬದ ಸದಸ್ಯರ ಹೆಸರುಗಳು	ಸಂಬಂಧ	ಲಿಂಗ	ವಯಸ್ಸು	ಶಿಕ್ಷಣ	ವೈವಾಹಿಕ ಸ್ಥಾನಮಾನ	ಕಸುಬು	ಕುಟುಂಬ ಯೋಜನೆ	ಸರಕಾರಿ ಸೌಲಭ್ಯಗಳು (✓) ಓಟಿನ ಕಾರ್ಡ್	ವಿಧವಾ	ಅಂಗವಿಕಲ	ವೃದ್ಧಾಪ	ಶಿಷ್ಯವೇತನ
i	ii	iii	iv	v	vi	vii	viii	ix	x	xi	xii	xiii	xiv
		ಮುಖ್ಯಸ್ಥ / ಸ್ಥೆ											

೨. ಆಕಳು, ಕರು :
೩. ಎಮ್ಮೆ, ಕೋಣ :
೪. ಕುರಿ :
೫. ಮೇಕೆ :
೬. ಕೋಳಿ :
೭.

ಆರ್) ಮನೆ ವಿವರ (✓)
೧. ಗುಡಾರ
೨. ಗುಡಿಸಲು
೩. ಟಿನ್ ಮನೆ
೪. ಧಾಬಾ/ಮಾಳಿಗೆ
೫. ಆರ್ ಸಿ ಸಿ ಮನೆ
೬. ಹಂಚಿನ ಮನೆ
೭. ಆಶ್ರಯ ಮನೆ
೮. ಬಾಡಿಗೆ ಮನೆ
೯.

೧೦. ನಿವೇಶನ (✓)
ಅ. ಸ್ವಂತದ್ದು
ಆ. ಸರಕಾರದ್ದು

೧೧. ಮನೆ (✓)
ಅ. ಸ್ವಂತದ್ದು
ಆ. ಸರಕಾರದ್ದು

೧೨. ವಿದ್ಯುತ್ (✓)
ಅ. ಶುಲ್ಕ ರಹಿತ
ಆ. ಶುಲ್ಕ ಸಹಿತ

ಎಸ್) ಇತರೆ ಸೌಲಭ್ಯಗಳು (✓)
೧. ಪಡಿತರ ಚೀಟಿ
೨. ಗ್ಯಾಸ್
೩. ನಲ್ಲಿ
೪. ಶೌಚಾಲಯ
೫. ಸ್ನಾನಗೃಹ
೬. ಸೈಕಲ್
೭. ರೇಡಿಯೋ
೮. ಟೇಪ್ ರಿಕಾರ್ಡರ್
೯. ಟೀವಿ
೧೦. ದೂರವಾಣಿ ಸಂಖ್ಯೆ
೧೧. ಮೊಬೈಲ್ ಸಂಖ್ಯೆ
೧೨.

ಡಾ ಕೆ ಎಂ ಮೇತ್ರಿ
ಪ್ರಾಧ್ಯಾಪಕರು ಹಾಗೂ ಮಾರ್ಗದರ್ಶಕರು
ಬುಡಕಟ್ಟು ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ – ೫೮೩೨೭೬
Ph : 08394 - 241820 (R), Fax : 241334, Cell : 9448632685, e mail : metrkykm@yahoo.com

ಸಂಶೋಧಕರು
ಬಸವರಾಜ ಎಸ್ ಹಿರೇಮಠ

ಛಾಯಾಚಿತ್ರಗಳು

ಗುಲ್ಬರ್ಗಾ ಜಿಲ್ಲೆಯ ಘಿಸಾಡಿ ಸಮುದಾಯದ ಸಾಮಾಜಿಕ ಅಧ್ಯಯನ



ಶ್ರೀ ಅಂಬಾ ಭವಾನಿ ಘಿಸಾಡಿ ಸಮುದಾಯದ ಆರಾಧ್ಯ-ದೈವ

ಘಿಸಾಡಿ ಸಮುದಾಯದ ಛಾಯಾ ಚಿತ್ರಗಳು



೪.೧ ಪಾರಂಪರಿಕ ವೃತ್ತಿಯಲ್ಲಿ ಘಿಸಾಡಿ
ಅವಿಭಕ್ತ ಕುಟುಂಬ [ಶಹಪುರ ತಾಲೂಕು]



೪.೪ ಮೊಮ್ಮಕ್ಕಳೊಂದಿಗೆ ಊಟಮಾಡುತ್ತಿರುವ
ವಯೋವೃದ್ಧ ದಂಪತಿಗಳು [ಗುಲ್ಬರ್ಗ ನಗರ]



೪.೨ ಘಿಸಾಡಿ ಸಮುದಾಯದ ವಿಭಕ್ತ ಕುಟುಂಬ
[ಯಾದಗಿರಿ ತಾಲೂಕು]



೪.೩ ಪಾತ್ರೆಗಳನ್ನು ಸ್ವಚ್ಛಗೊಳಿಸಿಕೊಳ್ಳುವ ಘಿಸಾಡಿ ಮಹಿಳೆ
[ಶಹಪುರ ತಾಲೂಕು]



. ಹಬ್ಬದ ಹೋಳಿಗೆ ಊಟಕ್ಕೆ ಹೂರಣ
ತಯಾರಿಸುತ್ತಿರುವುದು ದಂಪತಿಗಳು [ಗುಲ್ಬರ್ಗ ನಗರ]



೪.೬ ಘಿಸಾಡಿ ಸಮುದಾಯದ ಯುವಕ
[ಶಹಪುರ ತಾಲೂಕು]

ಘಿಸಾಡಿ ಸಮುದಾಯದ ಛಾಯಾ ಚಿತ್ರಗಳು



೪.೭ ಘಿಸಾಡಿ ಸಮುದಾಯದ ಗೃಹಿಣಿ
[ಗಂವ್ಹಾರ ಗ್ರಾಮ, ಶಹಪುರ ತಾಲೂಕು]



೪.೧೦ ಘಿಸಾಡಿ ವಿಧವೆ
[ಜೇವರ್ಗಿ ತಾಲೂಕ]



೪.೮ ಮದ್ಯ ವಯಸ್ಸಿನ ಘಿಸಾಡಿ ಮಹಿಳೆ
[ಶಹಪುರ ತಾಲೂಕು]



೪.೧೧ ಮಗುವಿನೊಂದಿಗೆ
ಕುಳಿತಿರುವ ತಾಯಿ
[ಶಹಪುರ ತಾಲೂಕು]



೪.೯ ಘಿಸಾಡಿ ಸಮುದಾಯದ ಹಿರಿಯ ಮುತ್ತೈದೆ

ಘಿಸಾಡಿ ಸಮುದಾಂಯದ ಛಾಂಯಾ ಚಿತ್ರಗಳು



ಳ.೧೨ ರಸ್ತೆಬದಿಯಲ್ಲಿನ ಘಿಸಾಡಿ ಸಮುದಾಯದ ಸಾಲು ಗುಡಾರಗಳು [ಶಹಪುರ ತಾಲೂಕು]



ಳ.೧೩ ರಸ್ತೆಬದಿಯಲ್ಲಿನ ಘಿಸಾಡಿ ಸಮುದಾಯದ ಗುಡಾರ [ಗುಲ್ಬರ್ಗ ನಗರ]



ಳ.೧೪ ಗುಡಾರದಲ್ಲಿನ ದೇವರ ಜಗುಲಿ ಮುಂದೆ ಕುಳಿತಿರುವ ಬಾಲಕಿ [ಶಹಪುರ ತಾಲೂಕು]



ಳ.೧೫ ಅಡುಗೆ ಪದಾರ್ಥಗಳನ್ನು ನೆಲುವುಗಳಲ್ಲಿಟ್ಟಿರುವುದು [ಶಹಪುರ ತಾಲೂಕು]



೪.೧೬ ಪಾರಂಪರಿಕ ವೃತ್ತಿಯಲ್ಲಿನಿರತರಾದ ಘಿಸಾಡಿ ಯುವಕರು [ಶಹಪುರ ತಾಲೂಕು]



೪.೧೭ಬ್ಲೋವರ್ ಕುಲುಮೆ ಊದುತ್ತಿರುವ ಘಿಸಾಡಿ ಮಹಿಳೆ [ಶಹಪುರ ತಾಲೂಕು]



ಪಾರಂಪರಿಕ ವೃತ್ತಿಯಲ್ಲಿನಿರತರಾದ ಘಿಸಾಡಿ ಮಹಿಳೆಯರು [ಶಹಪುರ ತಾಲೂಕು]

ಘಿಸಾಡಿ ಸಮುದಾಯದ ಛಾಯಾ ಚಿತ್ರಗಳು



೪.೧೯ ಪರಿಕರಗಳನ್ನು ಮಾರಾಟ ಮಾಡುತ್ತಿರುವ ಘಿಸಾಡಿ ಮಹಿಳೆ [ಯಾದಗಿರಿ ತಾಲೂಕು]



೪.೨೦ ಬೇಟೆಗೆ ಹೊರಟಿರುವ ಘಿಸಾಡಿ ಯುವಕ [ಸೇಡಂ ತಾಲೂಕು]



೪.೨೧ ಮೀನು ಬೇಟೆಗೆ ಬಂದಿರುವ ಘಿಸಾಡಿ ಯುವಕರು [ಸೋಮಲಿಂಗದಳ್ಳಿ,ಚಿಂಚೋಳಿ ತಾಲೂಕು]

ಘಿಸಾಡಿ ಸಮುದಾಯದ ಛಾಯಾ ಚಿತ್ರಗಳು



೪.೨೨ ಇದ್ದಿಲುಗಾಗಿ ಮರದ ಕೊರಡು ಕತ್ತರಿಸುತ್ತಿರುವ ಯುವಕರು



೪.೨೩ ಹರಿದ ಗುಡಾರದ ಹೊದಿಕೆಯನ್ನು ಹೊಲಿಯುತ್ತಿರುವ ಘಿಸಾಡಿ ವೃದ್ಧೆ [ಶಹಪುರ ತಾಲೂಕು]



೪.೨೪ ಸ್ಕ್ರೀನ್ ಪ್ರಿಂಟಿಂಗ್ ಕಲಿಯುತ್ತಿರುವ ಯುವಕ [ಗುಲ್ಬರ್ಗ]



೪.೨೫ ಹೊಲಿಗೆ ಕಲಿಯುತ್ತಿರುವ ಯುವತಿ [ಗುಲ್ಬರ್ಗ]

ಫಿಸಾಡಿ ಸಮುದಾಯದ ಛಾಯಾ ಚಿತ್ರಗಳು



೫.೧ ನಿಶ್ಚಿತಾರ್ಥದ ಹಸಿರು ಬಳೆಗಳು ತೊಟ್ಟುಕೊಳ್ಳುತ್ತಿರುವ ಫಿಸಾಡಿ ಕನ್ಯ [ಶಹಬಾದ್,ಚಿತ್ತಾಪುರ ತಾ||]



೨ ಮನೆಯಂಗಳದಲ್ಲಿ ಮದುವೆ ಚಪ್ಪರ [ಕೊತ್ತಪಲ್ಲಿ,ಸೇಡಂ ತಾಲೂಕು]



೫.೩ ಮದುವೆ ಚಪ್ಪರದಲ್ಲಿ ಹಸಿರು ಆಲದ ಕೊಂಬೆ [ಕೊತ್ತಪಲ್ಲಿ,ಸೇಡಂ ತಾಲೂಕು]



ಬೀಗರನು ಎದುರುಗೊಳ್ಳುತ್ತಿರುವ ಬೀಗತಿಯರು [ಕೊತ್ತಪಲ್ಲಿ,ಸೇಡಂ ತಾಲೂಕು]

... ಸಮುದಾಯದ ಛಾಯಾ ಚಿತ್ರಗಳು



೫.೫ ಮದುವೆ ಮಂಗಲ ಕಾರ್ಯದಲ್ಲಿ ಐರಾಣಿ ತರುತ್ತಿರುವುದು [ಕೊತ್ತಪಲ್ಲಿ,ಸೇಡಂ ತಾಲೂಕು]



...ಮಕ್ಕಳಿಗೆ ಬಿಳಿಬಟ್ಟೆಮೇಲೆ ಹರಶಿಣ ಹಚ್ಚುತ್ತಿರುವುದು



೫.೭ ಮದುವೆ ಖುಷಿಯಲ್ಲಿ ಮದುಮಕ್ಕಳು[ಕೊತ್ತಪಲ್ಲಿ]



...ಕುಣಿಯುತ್ತಿರುವುದು[ಕೊತ್ತಪಲ್ಲಿ,ಸೇಡಂ ತಾಲೂಕು]

[illegible] ಸಮುದಾಯದ ಛಾಯಾ ಚಿತ್ರಗಳು



೫.೯ ಮರಣ ಹೊಂದಿದ ತಂದೆಯ ಹನ್ನೊಂದನೇ ದಿನದ ಪಿಂಡ ಶಾಂತಿ [ಚತ್ತಾಪುರ ತಾಲೂಕು]



೫.೧೦ ಮರಣ ಹೊಂದಿದ ಗಂಡನ ಹನ್ನೊಂದನೇ ದಿನದ ಪಿಂಡ ಶಾಂತಿ [ಚತ್ತಾಪುರ ತಾಲೂಕು]




೫.೧೧ ಹನ್ನೊಂದನೇ ದಿನದ ಪಿಂಡ ಶಾಂತಿ ಊಟ [ಚತ್ತಾಪುರ ತಾಲೂಕು]

ಘಿಸಾದಿ ಸಮುದಾಯದ ಛಾಯಾ ಚಿತ್ರಗಳು



ಚಿ.೧೩ ಮಹಾನವಮಿಯಂದು ಪರಿಕರಗಳಿಗೆ ಪೂಜಿಸಿರುವುದು



...೨ ಯುಗಾದಿ ಹಬ್ಬದ ದಿನ
ಶಿವ-ಪಾರ್ವತಿ ಕೋಲು
ಕಟ್ಟಿರುವುದು [ಗುಲ್ಬರ್ಗ ನಗರ]



ಚಿ.೧೪ ಗುಡಾರದಲ್ಲಿನ ದೈವದ ಎದುರು ಕುರಿ ಬಲಿ[ಯಾದಗಿರಿ ತಾಲೂಕು]



...೧೫ ಅಂಬಾ ಭವಾನಿ ಘಟ ಸ್ಥಾಪನೆ ಮತ್ತು ಕುರಿ ಬಲಿ[ಯಾದಗಿರಿ ತಾಲೂಕು]

ಘಿಸಾಡಿ ಸಮುದಾಯದ ಛಾಯಾ ಚಿತ್ರಗಳು



ಚಿ.೧೬ ಗರ್ಭ ಗುಡಿಯಲ್ಲಿರುವ ಅಂಬಾ ಭವಾನಿ ವಿಗ್ರಹ [ಸುಲ್ತಾನ್‌ಪುರರಸ್ತೆ,ಗುಲ್ಬರ್ಗನಗರ]



ಚಿ.೧೭ ಅಂಬಾ ಭವಾನಿ ಮಂದಿರಕ್ಕೆ ಉರುಳಮ್ಮ ತಾಯಿ ದಾನ ನೀಡಿದ ಭೂಮಿ[ಸುಲ್ತಾನ್‌ಪುರರಸ್ತೆ,ಗುಲ್ಬರ್ಗನಗರ]



ಚಿ.೧೮ ಘಿಸಾಡಿ ಸಮುದಾಯವು ನಿರ್ಮಿಸಿಕೊಂಡ ಅಂಬಾ ಭವಾನಿ ಮಂದಿರ [ಸುಲ್ತಾನ್‌ಪುರರಸ್ತೆ,ಗುಲ್ಬರ್ಗನಗರ]

ಖಿಸಾಡಿ ಸಮುದಾಯದ ಛಾಯಾ ಚಿತ್ರಗಳು



೭.೧ ಮುರಿದ ಪ್ಲಾಸ್ಟಿಕ್ ಕೊಡದಲ್ಲಿ ತನ್ನ ಮಗುವಿಗೆ ಸ್ನಾನ ಮಾಡಿಸುತ್ತಿರುವುದು [ಶಹಪೂರ ತಾಲೂಕು]



೭.೨ ತನ್ನ ಮಗುವನ್ನು ಹಗ್ಗದ ತೊಟ್ಟಿಲಲ್ಲಿ ತೂಗುತ್ತಿರುವುದು [ಶಹಪೂರ ತಾಲೂಕು]



೭.೩ ನಲಿಯಲ್ಲಿ ನೀರು ಹಿಡಿಯುತ್ತಿರುವ ಖಿಸಾಡಿ ಮಹಿಳೆಯರು [ಶಹಪೂರ ತಾಲೂಕು]

ಛಿಸಾಡಿ ಸಮುದಾಯದ ಛಾಯಾ ಚಿತ್ರಗಳು



೨.೪ ದೇವಿಯನ್ನು ಪೂಜಿಸುತ್ತಿರು ದೇವದಾಸಿ ಮಹಿಳೆ
[ಸುಲ್ತಾನಪುರ, ಗುಲ್ಬರ್ಗ ತಾಲೂಕು]



೨.೫ ನೀರು ತರುವ ಮಹಿಳೆ [ಯಾದಗಿರಿ ತಾಲೂಕು]



೨.೬ ಬಯಲಿನಲ್ಲಿ ಸ್ನಾನ ಮಾಡುವ ಛಿಸಾಡಿ ಮಹಿಳೆ [ಗುಲ್ಬರ್ಗ ನಗರ]

ಘಿಸಾಡಿ ಸಮುದಾಯದ ಛಾಯಾ ಚಿತ್ರಗಳು



೭.೭ ಘಿಸಾಡಿ ಸಮುದಾಯದೊಂದಿಗೆ ಪಿಹೆಚ್.ಡಿ,ಸಂಶೋಧಕರು[ಯಾದಗಿರಿ ತಾಲೂಕು]



ಭಾಸ್ಕರ್ ದಾಸ್ ಎಕ್ಕಾರ್ ಕರ್ನಾಟಕ ರಾಜ್ಯಅಲೆಮಾರಿಅರೆ-ಅಲೆಮಾರಿ ಸಮುದಾಯಗಳ ಒಕ್ಕೂಟದ ಅದ್ಯಕ್ಷರು